ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಕೈಪಿಡಿ

(ಸದಸ್ಯರುಗಳಿಗೆ ಮಾತ್ರ)

ಶಾಸನ ರಚನಾ ಶಾಖೆ
ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು
2026

ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಕೈಪಿಡಿ

ಪ್ರಸ್ತಾವನೆ

ಸದನದ ಮುಂದೆ ಬರುವ ಶಾಸನಾತ್ಮಕ ಮತ್ತು ಇತರ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ಸದನದಲ್ಲಿನ ಕಾರ್ಯವಿಧಾನ ಮತ್ತು ನಡವಳಿಕೆಗಳು ಹಾಗೂ ಸೂಚನಾ ಅವಧಿಯ ಬಗ್ಗೆ ಹಾಗೂ ಮಾನ್ಯ ಸದಸ್ಯರಿಗೆ ಲಭ್ಯವಾಗಬಹುದಾದ ಹಲವಾರು ಸೌಲಭ್ಯಗಳ ಕುರಿತಂತೆ ಅವರಿಗೆ ಪರಿಚಯ ಮಾಡಿಕೊಡುವ ಆಶಯದಿಂದ ಈ ಕೈಪಿಡಿಯನ್ನು ಆಂಗ್ಲ ಭಾಷೆಯಲ್ಲಿ 2011ರಲ್ಲಿ ಹೊರತರಲಾಯಿತು. ನಂತರ 2016ರಲ್ಲಿ ಮತ್ತು 2018ರಲ್ಲಿ ಕನ್ನಡ ಭಾಷೆಯಲ್ಲಿ, 2018 ಮತ್ತು 2023ರಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಕಟಿಸಲಾಗಿರುತ್ತದೆ.

Iನೆಯ ಭಾಗವು ಪ್ರಶ್ನೆಗಳು, ಸೂಚನೆಗಳು, ಪ್ರಸ್ತಾವಗಳು, ಮುಂತಾದವುಗಳನ್ನು ನೀಡುವುದಕ್ಕೆ ಸಂಬಂಧಿಸಿದ ಸೂಚನೆಗಳನ್ನು ಒಳಗೊಂಡಿರುತ್ತದೆ.

IIನೆಯ ಭಾಗವು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯರುಗಳಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

IIIನೆಯ ಭಾಗವು ಸದಸ್ಯರಿಗೆ ವಿಶೇಷ ಆಸಕ್ತಿಯಿರುವಂಥ ಅಧಿನಿಯಮ ಮತ್ತು ನಿಯಮಗಳನ್ನು ಒಳಗೊಂಡಿರುತ್ತದೆ.

ಈ ಕೈಪಿಡಿಯು ಮಾನ್ಯ ಸದಸ್ಯರಿಗೆ ಉಪಯುಕ್ತವಾಗುವುದೆಂದು ಆಶಿಸಲಾಗಿದೆ. ಈ ಸಂಬಂಧದಲ್ಲಿ ಸದಸ್ಯರಿಗೆ ಇನ್ನೂ ಹೆಚ್ಚಿನ ಮತ್ತು ವಿವರವಾದ ಮಾಹಿತಿ ಅಗತ್ಯವಾದಲ್ಲಿ, ಈ ಕೈಪಿಡಿಯಲ್ಲಿ ಸೂಚಿಸಿರುವ **'ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು'** ಮತ್ತು **'ಭಾರತ ಸಂವಿಧಾನ'**ದ ಸಂಬಂಧಪಟ್ಟ ಅನುಚ್ಛೇದಗಳನ್ನು ಸದಸ್ಯರು ಅವಲೋಕಿಸಬಹುದು.

ಈ ಕೈಪಿಡಿಯ ಸುಧಾರಣೆಗಾಗಿ ತಾವು ನೀಡುವ ಯಾವುವೇ ಸಲಹೆಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸುತ್ತೇವೆ.

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಬೆಂಗಳೂರು,
ದಿನಾಂಕ: 2026.

ಭಾಗ–I: ಶಾಸನಾತ್ಮಕ ಕಾರ್ಯಕಲಾಪಗಳು

1.	ವಿಧಾನ ಪರಿಷತ್ತಿನ ಸಂರಚನೆ	1–2
2.	ವಿಧಾನ ಪರಿಷತ್ತಿನ ಕಾಲಾವಧಿ	2–3
3.	ವಿಧಾನ ಪರಿಷತ್ತಿನ ಅಧಿವೇಶನಗಳು	2–3
4.	ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಿಧಿ ಸ್ವೀಕಾರ	3–4
5.	ರಾಜ್ಯಪಾಲರ ಭಾಷಣ	5–7
6.	ಸಭಾಪತಿ ಮತ್ತು ಉಪ–ಸಭಾಪತಿಯವರ ಚುನಾವಣೆ	8–9
7.	ಪಕ್ಷಗಳಿಗೆ ಅಥವಾ ತಂಡಗಳಿಗೆ ಮಾನ್ಯತೆ ನೀಡುವುದು	9
8.	ಸದಸ್ಯರಿಗೆ ಆಸನ ವ್ಯವಸ್ಥೆ	10
9.	ಉಪವೇಶನಗಳ ಅವಧಿ ಮತ್ತು ಸಮಯ	10
10.	ಸರ್ಕಾರದ ಕಾರ್ಯಕಲಾಪಗಳು	10
11.	ಖಾಸಗಿ ಸದಸ್ಯರ ಕಾರ್ಯಕಲಾಪಗಳು	11
12.	ಗಣಪೂರ್ತಿ (Quorum)	11–12
13.	ಸಾರ್ವಜನಿಕ ಮಹತ್ವದ ತುರ್ತು ವಿಷಯದ ಮೇಲೆ ನಿಲುವಳಿ ಸೂಚನೆಗಳು	12–13
14.	ಸಾರ್ವಜನಿಕ ಮಹತ್ವದ ತುರ್ತು ವಿಷಯಗಳ ಮೇಲೆ ಅಲ್ಪಾವಧಿ ಚರ್ಚೆ	14
15.	ಶಾಸನ ರಚನೆ	15–18
16.	ತಿದ್ದುಪಡಿಗಳು	19
17.	ಅಧ್ಯಾದೇಶಗಳು	19–20
18.	ಅಧೀನ ಶಾಸನ ರಚನೆ	20–21
19.	ಅರ್ಜಿಗಳು	21–22
20.	ಅರ್ಜಿಯನ್ನು ಸಲ್ಲಿಸುವುದು	23
21.	ನಿರ್ಣಯಗಳು	23
22.	ಪ್ರಸ್ತಾವಗಳು	24–26
23.	ಕಾಲಾವಧಿಯನ್ನು ಗೊತ್ತು ಮಾಡುವುದು ಮತ್ತು ಪ್ರಸ್ತಾವಗಳನ್ನು ಚರ್ಚಿಸುವುದು	26
24.	ಸಭಾಪತಿಯವರನ್ನು/ ಉಪ–ಸಭಾಪತಿಯವರನ್ನು ಹುದ್ದೆಗಳಿಂದ ಪದಚ್ಯುತಿಗೊಳಿಸುವ ನಿರ್ಣಯ	26
25.	ವಿತ್ತೀಯ ಕಾರ್ಯಕಲಾಪಗಳು	27
26.	ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು)	28–33
27.	ಸಮಿತಿಗಳು	34–36
28.	ಸಂಸದೀಯ ಶಿಷ್ಟಾಚಾರಗಳು (ಸಂಪ್ರದಾಯಗಳು) ಮತ್ತು ಚರ್ಚಾ ನಿಯಮಗಳು	36–41
29.	ಅಸಂಸದೀಯ (ಸಭಾ ಮರ್ಯಾದೆಗೆ ಸಲ್ಲದ) ಭಾಷೆ	42
30.	ಸಭಾಪತಿಯವರ ಗಮನವನ್ನು ಸೆಳೆಯುವುದು	43
31.	ಕ್ರಿಯಾಲೋಪಗಳು	44
32.	ವೈಯಕ್ತಿಕ ವಿವರಣೆಗಳು	44–45
33.	ಮತಗಳನ್ನು ಎಣಿಸುವ ವಿಧಾನ	45

34.	ವಿಧಾನ ಪರಿಷತ್ತಿನ ಸ್ಥಾನಗಳಿಗೆ ಸದಸ್ಯರು ರಾಜೀನಾಮೆ ನೀಡುವುದು ಮತ್ತು ಸ್ಥಾನಗಳು ಖಾಲಿಯಾಗುವುದು	46
35.	ಪ್ರಶ್ನೆಗಳು	47
36.	ಚುಕ್ಕೆ ಗುರುತಿನ ಪ್ರಶ್ನೆಗಳು	47
37.	ಚುಕ್ಕೆ ಗುರುತಿಲ್ಲದ ಪ್ರಶ್ನೆ	48
38.	ಅಲ್ಪಾವಧಿ ಪ್ರಶ್ನೆ	48–50
39.	ಪ್ರಶ್ನೆಗಳು (ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ)	51
40.	ಅರ್ಧಗಂಟೆ ಚರ್ಚೆ	52
41.	ಗಮನ ಸೆಳೆಯುವ ಸೂಚನೆ	52–53
42.	ನಿಯಮ 330ರ ಅಡಿಯಲ್ಲಿನ ಪ್ರಸ್ತಾವಗಳು	54
43.	ವಿಶೇಷ ಪ್ರಸ್ತಾವಗಳು	54
44.	ಶೂನ್ಯವೇಳೆ ಪ್ರಸ್ತಾವಗಳು	54
45.	ಖಾಸಗಿ ಸದಸ್ಯರ ಕಾರ್ಯಕಲಾಪಗಳು	55
46.	ಪ್ರಶ್ನೆಗಳ ಆಯ್ಕೆ	56–57

ಭಾಗ – II - ಸಾಮಾನ್ಯ

1.	ಸದಸ್ಯರುಗಳಿಗೆ ಸೌಕರ್ಯಗಳು	58–82

ಭಾಗ III – ಅಧಿನಿಯಮಗಳು ಮತ್ತು ನಿಯಮಗಳು

'ಎ'

1.	ಕರ್ನಾಟಕ ವಿಧಾನಮಂಡಲದವರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956	83–109
2.	ಕರ್ನಾಟಕ ವಿಧಾನಮಂಡಲ (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956	110–111
3.	ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) ಅಧಿನಿಯಮ, 1956	112–114
4.	ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984	115–135
5.	ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985	136–142
6.	ಜನತಾ ಪ್ರಾತಿನಿಧ್ಯ ಅಧಿನಿಯಮ, 1951	143–242

'ಬಿ'

1.	(ಎ) ಕರ್ನಾಟಕ ಶಾಸಕರ ನಿವೃತ್ತಿ ವೇತನ ನಿಯಮಗಳು, 1979 (ಬಿ) ಕರ್ನಾಟಕದಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಶಾಸಕರ ನಿವೃತ್ತಿವೇತನಗಳ ಸಂದಾಯ	243–276
2.	ಕರ್ನಾಟಕ ವಿಧಾನಮಂಡಲ (ಪಿಂಚಣಿದಾರರ ವೈದ್ಯೋಪಚಾರ) ನಿಯಮಗಳು, 2007	277–282
3.	ಕರ್ನಾಟಕ ಲೋಕಾಯುಕ್ತ ನಿಯಮಗಳು, 1985	283–299
4.	ಕರ್ನಾಟಕ ವಿಧಾನ ಪರಿಷತ್ತಿನ (ಪಕ್ಷಾಂತರದ ಕಾರಣದ ಮೇಲೆ ಸದಸ್ಯರ ಅನರ್ಹತೆ) ನಿಯಮಗಳು, 1986	300–310
5.	ಕರ್ನಾಟಕ ವಿಧಾನಮಂಡಲದ (ಸದಸ್ಯರ ಪ್ರಯಾಣ ಭತ್ಯೆ) ನಿಯಮಗಳು, 1957	311–325
6.	ಕರ್ನಾಟಕ ವಿಧಾನಮಂಡಲದ (ಸದಸ್ಯರ ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1968	326–341

7.	ಕರ್ನಾಟಕ ವಿಧಾನಮಂಡಲ (ಅಧ್ಯಕ್ಷಾಧಿಕಾರಿಗಳ) ವೈದ್ಯೋಪಚಾರ ನಿಯಮಗಳು, 1959	342–360
8.	ಕರ್ನಾಟಕ ವಿಧಾನಮಂಡಲದ (ಸದಸ್ಯರ ದೂರವಾಣಿ) ನಿಯಮಗಳು, 1979	361–362
9.	ಸದಸ್ಯರುಗಳಿಗೆ ಮೋಟಾರು ವಾಹನ ಖರೀದಿ ಮುಂಗಡ ನಿಯಮಗಳು, 1985	363–376
10.	ಕರ್ನಾಟಕ ರಾಜ್ಯದಲ್ಲಿನ ಆದ್ಯತಾ ಪಟ್ಟಿ	377–394
11.	ಸರ್ಕಾರಿ ಕಾರ್ಯಕ್ರಮಗಳಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಬಗ್ಗೆ ಮಾರ್ಗಸೂಚಿಗಳು.	395–403
12.	ಶಾಸಕರ ಭವನದ ವಾಹನಗಳ ನಿರೀಕ್ಷಣಾ ಶುಲ್ಕವನ್ನು ಪರಿಷ್ಕರಿಸಿರುವ ಸಂಬಂಧ ಮತ್ತು ಮಾನ್ಯ ಶಾಸಕರುಗಳಿಗೆ ಹಾಗೂ ಪೀಠಾಸೀನಾಧಿಕಾರಿಗಳಿಗೆ ಶಾಸಕರ ಭವನದಲ್ಲಿ ಒದಗಿಸಲಾಗುವ ಕೊಠಡಿಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ಆದೇಶಗಳು	404–412
13.	ಮಾನ್ಯ ಶಾಸಕರಿಗೆ ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಕಚೇರಿ ವ್ಯವಸ್ಥೆಯನ್ನು ಒದಗಿಸುವ ಬಗ್ಗೆ	413
14.	ಮಾನ್ಯ ಶಾಸಕರುಗಳ ಆಪ್ತ ಸಹಾಯಕರ ನೇಮಕಾತಿ ಬಗ್ಗೆ	414–419
15.	ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ/ಸಮಾರಂಭಗಳಿಗೆ ವಿಧಾನಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ತಾಲ್ಲೂಕು ಸಮಿತಿಯ ಸಹ ಅಧ್ಯಕ್ಷರಾಗಿರುವ ಕುರಿತು.	420–421
16.	ವಿಧಾನಮಂಡಲದ ಸದಸ್ಯರು ಸಮಿತಿ ಪ್ರವಾಸ ಕೈಗೊಳ್ಳುವ ಬಗ್ಗೆ	422–433
17.	ಮಾನ್ಯ ಪೀಠಾಸೀನಾಧಿಕಾರಿಗಳು, ಮಾನ್ಯ ಸಂಸದೀಯ ಪದಾಧಿಕಾರಿಗಳು ಹಾಗೂ ಮಾನ್ಯ ಸದಸ್ಯರಿಗೆ ಗಣಕಯಂತ್ರ ಖರೀದಿಗೆ ಮುಂಗಡ ಹಣ ನೀಡುವ ಬಗ್ಗೆ	434–435
18.	ಬಂಧನ ವಾರೆಂಟ್‌ಗಳ ಜಾರಿ ಬಗ್ಗೆ	436–438

ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತನ್ನು, ಕಾನೂನುಗಳು ಹಾಗೂ ವಿನಿಯಮನಗಳನ್ನು ರೂಪಿಸಲು ಸರ್ಕಾರಕ್ಕೆ ನೆರವು ನೀಡುವುದಕ್ಕಾಗಿ ಸ್ಥಳೀಯ ಸ್ಥಿತಿಗತಿಗಳ ಮತ್ತು ಅಗತ್ಯತೆಗಳ ಬಗ್ಗೆ ನೈಜ ಹಾಗೂ ಪ್ರಾಯೋಗಿಕ ಅನುಭವ ಹಾಗೂ ವಿಸ್ತೃತ ತಿಳಿವಳಿಕೆ ಹೊಂದಿರುವ ನಿರ್ದಿಷ್ಟ ಸಂಖ್ಯೆಯ ಕೆಲವು ಅಧಿಕಾರೇತರ ಸದಸ್ಯರನ್ನು ಸರ್ಕಾರದಲ್ಲಿ ಭಾಗಿಯಾಗುವಂತೆ ಮಾಡುವ ಉದ್ದೇಶದೊಂದಿಗೆ 1907ರಲ್ಲಿ ಸ್ಥಾಪಿಸಲಾಯಿತು. ಪದನಿಮಿತ್ತ ಸದಸ್ಯರಾಗಿದ್ದ ದಿವಾನರು, ಅಧ್ಯಕ್ಷರು ಮತ್ತು ಪರಿಷತ್ತಿನ ಸದಸ್ಯರ ಜೊತೆಗೆ ಸರ್ಕಾರವು ನಾಮನಿರ್ದೇಶನ ಮಾಡಬಹುದಾದ ಕನಿಷ್ಠ 10 ಹಾಗೂ ಗರಿಷ್ಠ 15 ಮಂದಿ ಹೆಚ್ಚುವರಿ ಸದಸ್ಯರನ್ನು ಒಳಗೊಂಡಿರಬೇಕಾಗಿತ್ತು. ಈ ಸಂಖ್ಯೆಯಲ್ಲಿ 2/5ರಷ್ಟು ಸದಸ್ಯರು ಅಧಿಕಾರೇತರ ಸದಸ್ಯರಾಗಿರುವುದು ಅಗತ್ಯವಾಗಿತ್ತು. ಕಾಲಕ್ರಮೇಣ ಸದಸ್ಯರ ಕನಿಷ್ಠ ಹಾಗೂ ಗರಿಷ್ಠ ಸಂಖ್ಯೆಯಲ್ಲಿ ಏರಿಕೆಯುಂಟಾಯಿತು. 1923ರಲ್ಲಿ ಪರಿಷತ್ತಿನ ಸದಸ್ಯರ ಸಂಖ್ಯಾಬಲವನ್ನು 50ಕ್ಕೆ ನಿಗದಿಪಡಿಸಲಾಯಿತು. ನಿರ್ಣಾಯಕ ಅಧಿಕಾರೇತರ ಸದಸ್ಯರ ಬಹುಮತವಿರುವಂತೆ ನೋಡಿಕೊಳ್ಳುವ ಸಲುವಾಗಿ ಈ ಸದಸ್ಯರ ಸಂಖ್ಯೆಯನ್ನು ಶೇ. 60ಕ್ಕಿಂತ ಕಡಿಮೆ ಇಲ್ಲದಂತೆ ನಿಗದಿಪಡಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯ, ವಾಣಿಜ್ಯ ಮತ್ತು ವ್ಯಾಪಾರ (ಕಾಮರ್ಸ್ ಅಂಡ್ ಇಂಡಸ್ಟ್ರೀಸ್), ಪ್ಲಾಂಟರ್ಸ್ ಅಂಡ್ ಲೇಬರ್‌ನಂತಹ ವಿಶೇಷ ಸಂಸ್ಥೆಗಳಿಗೆ ಪ್ರಾತಿನಿಧ್ಯವನ್ನು ನೀಡಲಾಯಿತು. ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ನಿಮ್ನ ವರ್ಗಗಳಿಗಾಗಿ ಸ್ಥಾನಗಳನ್ನು ಮೀಸಲಿರಿಸಲಾಯಿತು ಹಾಗೂ ಅವರು ಚುನಾಯಿತರಾಗದಿದ್ದಾಗ ಅವರನ್ನು ಸರ್ಕಾರ ನಾಮನಿರ್ದೇಶನ ಮಾಡುತ್ತಿತ್ತು. ಹೀಗೆ 1940ರ ವೇಳೆಗೆ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲಾಯಿತು.

ವಿಧಾನ ಪರಿಷತ್ತನ್ನು ಮೂಲತಃ ಕಾನೂನುಗಳನ್ನು ರೂಪಿಸುವ ಸಲುವಾಗಿ ಸ್ಥಾಪಿಸಲಾಯಿತಾದರೂ, ಕಾಲಾನಂತರ ಅದಕ್ಕೆ ಇತರ ಪ್ರಕಾರ್ಯಗಳನ್ನು ವಹಿಸಲಾಯಿತು. ದಿವಾನರ ಪೂರ್ವಾನುಮತಿಯನ್ನು ಲಿಖಿತದಲ್ಲಿ ಪಡೆಯದೆ ಮತ್ತು ಸದನದ ಅನುಮತಿಯನ್ನು ಪಡೆಯದೆ ಯಾವುದೇ ಕ್ರಮವನ್ನು ಜಾರಿಗೊಳಿಸಲಾಗುತ್ತಿರಲಿಲ್ಲ. ಕೆಲವು ವಿಷಯಗಳನ್ನು ಪರಿಷತ್ತಿನ ವ್ಯಾಪ್ತಿಯಿಂದ ಹೊರಗಿಡಲಾಯಿತು ಹಾಗೂ ಅಂಥ ವಿಷಯಗಳ ಬಗ್ಗೆ ಸರ್ಕಾರವೇ ಕಾನೂನನ್ನು ರೂಪಿಸಬಹುದಾಗಿತ್ತು. ತುರ್ತು ಸಂದರ್ಭಗಳಲ್ಲಿ ಮಾತ್ರ ಸ್ವತಃ ಸರ್ಕಾರವೇ ಕಾನೂನುಗಳನ್ನು ಅಧಿನಿಯಮಿತಗೊಳಿಸುತ್ತಿತ್ತು ಮತ್ತು ಅಂಥ ಕಾನೂನುಗಳು ಆರು ತಿಂಗಳವರೆಗೆ ಮಾತ್ರ ಜಾರಿಯಲ್ಲಿರುತ್ತಿದ್ದವು.

1914ರಿಂದೀಚೆಗೆ ಪರಿಷತ್ತಿನಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಮತಿ ನೀಡಲಾಯಿತು. 1915ರಲ್ಲಿ ಸದಸ್ಯರು ಪೂರಕ ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಮತಿ ನೀಡಲಾಯಿತು.

1914ರಲ್ಲಿ, ಬಜೆಟ್‌ನ (ಆಯವ್ಯಯದ) ಬಗ್ಗೆ ಚರ್ಚೆ ನಡೆಸುವುದಕ್ಕೆ ಪರಿಷತ್ತಿಗೆ ಅಧಿಕಾರ ನೀಡಲಾಯಿತು ಹಾಗೂ 1923ರಲ್ಲಿ ಅನುದಾನಗಳ ಬೇಡಿಕೆಗಳ ಮೇಲೆ ಮತ ಚಲಾಯಿಸುವ ಅಧಿಕಾರ ನೀಡಲಾಯಿತು. ಸದಸ್ಯರು ಖೋತಾ ಪ್ರಸ್ತಾವನೆಗಳನ್ನು ಮಂಡಿಸಬಹುದಾಗಿತ್ತು. ಬ್ರಿಟಿಷ್ ಭಾರತದಲ್ಲಿ ಮತಕ್ಕೆ ಹಾಕಲು ಅನರ್ಹವಾದಂತಹ ಕೆಲವು ವೆಚ್ಚದ ಬಾಬುಗಳನ್ನು ಸಂಸ್ಥಾನದಲ್ಲಿ ಮತಕ್ಕೆ ಹಾಕಬಹುದಾದ ಬಾಬುಗಳನ್ನಾಗಿ ಪರಿವರ್ತನೆ

ಮಾಡಲಾಯಿತೆಂಬುದು ಗಮನಾರ್ಹ ಸಂಗತಿಯಾಗಿದೆ. 1919ರಿಂದೀಚೆಗೆ ಪರಿಷತ್ತಿನಲ್ಲಿ ನಿರ್ಣಯಗಳ ಬಗ್ಗೆ ಚರ್ಚೆ ನಡೆಸಲು ಪ್ರಾರಂಭಿಸಲಾಯಿತು.

1923ರಲ್ಲಿ ಪ್ರಜಾಪ್ರತಿನಿಧಿ ಸಭೆಯ ವಿನಿಯಮನ ಹಾಗೂ ವಿಧಾನ ಪರಿಷತ್ತಿನ ವಿನಿಯಮನಗಳನ್ನು ತಿದ್ದುಪಡಿ ಮಾಡುವ ಅಧಿಕಾರ ಪರಿಷತ್ತಿಗೆ ಇರುವುದಿಲ್ಲವೆಂದು ಅಧಿನಿಯಮಿತಗೊಳಿಸಲಾಯಿತು. ವಿಧಾನ ಪರಿಷತ್ತಿನ ಸದಸ್ಯರ ಪದಾವಧಿಯನ್ನು 1917ರಲ್ಲಿ ಮೂರು ವರ್ಷಗಳೆಂದು ಹಾಗೂ 1940ರಲ್ಲಿ ನಾಲ್ಕು ವರ್ಷಗಳೆಂದು ತಿದ್ದುಪಡಿ ಮಾಡಲಾಯಿತು.

1940ರ ಮೈಸೂರು ಸರ್ಕಾರದ ಅಧಿನಿಯಮವು ಸದಸ್ಯರಿಗೆ ಕೆಲವು ವಿಶೇಷಾಧಿಕಾರಗಳನ್ನು ನೀಡಿತು. ಪ್ರಜಾಪ್ರತಿನಿಧಿ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಸದಸ್ಯರಿಗೆ ವಾಕ್ ಸ್ವಾತಂತ್ರ್ಯವನ್ನು ನೀಡಲಾಯಿತು. ಈ ಉಪಬಂಧವು ಭಾರತ ಸರ್ಕಾರದ ಅಧಿನಿಯಮ, 1935ರಲ್ಲಿನ ಉಪಬಂಧಗಳಿಗೆ ಸಮನಾಗಿತ್ತು.

ವಿಧಾನ (ಪ್ರತಿನಿಧಿ) ಸಭೆಯ ಸ್ಥಾಪನೆಯನ್ನು 'ಇದು ಒಂದು ನಿಜವಾದ ಪ್ರಗತಿಶೀಲ ಹಾಗೂ ಪ್ರಯೋಜನಕಾರಿ ಕ್ರಮ' ಎಂದು ಭಾರತದಾದ್ಯಂತ ಸ್ವಾಗತಿಸಲಾಯಿತು. ಪ್ರತಿನಿಧಿ ಸಭೆ ಸ್ಥಾಪನೆಯಾದ ಹನ್ನೊಂದು ವರ್ಷಗಳ ತರುವಾಯ "ದ ಮರಾಠ" ಎಂಬ ರಾಷ್ಟ್ರೀಯ ಸಾಪ್ತಾಹಿಕ ಪತ್ರಿಕೆಯು ತನ್ನ ಒಂದು ಲೇಖನದಲ್ಲಿ 'ಬ್ರಿಟೀಷ್ ಸರ್ಕಾರವು ಪ್ರಾಜ್ಞರಾದ ಮೈಸೂರು ಮಹಾರಾಜರವರಿಂದ ಪಾಠವನ್ನು ಕಲಿತಿದ್ದರೆ ಒಳ್ಳೆಯದಾಗುತ್ತಿತ್ತು' ಎಂದು ಬರೆದಿತ್ತು. ಹೀಗಿದ್ದರೂ ಕೆಲವರು ಈ ಸಭೆಯು ಇನ್ನೂ ಪ್ರಬುದ್ಧವಾದುದಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಶ್ರೀ ಕೆ.ಶೇಷಾದ್ರಿ ಅಯ್ಯರ್‌ರವರು "ಸಾರ್ವಜನಿಕ ವ್ಯವಹಾರಗಳಲ್ಲಿ ಸದಸ್ಯರು ನಿರಂತರವಾಗಿ ಆಸಕ್ತಿ ತೋರಿಸುತ್ತಿದ್ದುದು ಹಾಗೂ ಚರ್ಚೆಗಳಲ್ಲಿ ವ್ಯಕ್ತವಾಗುತ್ತಿದ್ದ ವಾಸ್ತವಿಕ ಪ್ರಜ್ಞೆ ಈ ಸಂಸ್ಥೆಯು ಕಾಲ ಪಕ್ವವಾಗುವುದಕ್ಕೆ ಮೊದಲೇ ಸ್ಥಾಪನೆಯಾಗಿತ್ತೆಂಬ ಭಾವನೆಯನ್ನು ಅಲ್ಲಗಳೆದಿದೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

ಸ್ವಾತಂತ್ರ್ಯಾನಂತರ, ಘನತೆವೆತ್ತ ಮೈಸೂರು ಮಹಾರಾಜರು 29ನೇ ಅಕ್ಟೋಬರ್ 1947ರಲ್ಲಿ ಹೊರಡಿಸಿದ ಒಂದು ಘೋಷಣೆಯ ಮೂಲಕ ಮೈಸೂರು ರಾಜ್ಯಕ್ಕೆ ಒಂದು ಸಂವಿಧಾನವನ್ನು ರಚಿಸಲು ಸಂವಿಧಾನ ರಚನಾ ಸಭೆಯನ್ನು ರಚಿಸಿದರು. ಸಂವಿಧಾನ ರಚನಾ ಸಭೆ, ಸಭೆ ಸೇರಿದಾಗ, ಕೆಲವು ಮಂದಿ ಮೈಸೂರು ರಾಜ್ಯಕ್ಕೆ ಪ್ರತ್ಯೇಕ ಸಂವಿಧಾನವಿರಬೇಕೆಂದು ಪ್ರಬಲವಾಗಿ ದನಿ ಎತ್ತಿದರೂ ಸಹ, ಬಹುತೇಕ ಸದಸ್ಯರು, ಭಾರತದ ಸಂವಿಧಾನ ರಚನಾಸಭೆಯು ರೂಪಿಸುವ ಸಂವಿಧಾನದ ಮೂಲಕ ರಾಜ್ಯದ ಆಡಳಿತವನ್ನು ನಡೆಸಬೇಕೆಂದು ವಾದಿಸಿದರು. ಅಂತಿಮವಾಗಿ, ಬಹುಸಂಖ್ಯಾತರ ಅಭಿಪ್ರಾಯಕ್ಕೆ ಮನ್ನಣೆ ದೊರೆಯಿತು ಹಾಗೂ ಭಾರತ ಸಂವಿಧಾನ ರಚನಾಸಭೆಯು ರಚಿಸಿದ ಸಂವಿಧಾನವನ್ನೇ ಮೈಸೂರು ರಾಜ್ಯಕ್ಕೂ ಅನ್ವಯವಾಗುವಂತೆ ಮಾಡಬೇಕು ಎಂಬ ಬಗ್ಗೆ ಠರಾವನ್ನು ಅಂಗೀಕರಿಸಲಾಯಿತು. ಘನತೆವೆತ್ತ ಮೈಸೂರು ಮಹಾರಾಜರು ದಿನಾಂಕ: 25.11.1949ರಂದು ಈ ಬಗ್ಗೆ ಘೋಷಣೆಯನ್ನು ಹೊರಡಿಸಿದರು. ತತ್ಪರಿಣಾಮವಾಗಿ, ದಿನಾಂಕ: 16.12.1949ರಂದು ಪ್ರತಿನಿಧಿ ಸಭೆ ಹಾಗೂ ವಿಧಾನ ಪರಿಷತ್ತುಗಳೆರಡನ್ನೂ ವಿಸರ್ಜಿಸಲಾಯಿತು ಹಾಗೂ ಸಂವಿಧಾನದ ಮೇರೆಗೆ ಚುನಾವಣೆಯನ್ನು ನಡೆಸುವವರೆಗೆ 1947ರಲ್ಲಿ ರಚಿಸಲಾಗಿದ್ದಂತಹ ಸಂವಿಧಾನ ಸಭೆಯನ್ನು ಮೈಸೂರಿನ ಹಂಗಾಮಿ ಸಭೆಯನ್ನಾಗಿ ಮಾಡಲಾಯಿತು.

ಸಂವಿಧಾನದ ಮೇರೆಗೆ ಪ್ರಥಮ ವಿಧಾನಸಭೆಯನ್ನು 1952ರಲ್ಲಿ ರಚಿಸಲಾಯಿತು. ಇದು 99 ಮಂದಿ ಚುನಾಯಿತ ಸದಸ್ಯರನ್ನು ಹಾಗೂ ಒಬ್ಬ ನಾಮನಿರ್ದೇಶಿತ ಸದಸ್ಯರನ್ನು ಒಳಗೊಂಡಿತ್ತು. 1953ರಲ್ಲಿ ಆಂಧ್ರಪ್ರದೇಶ ರಚನೆಯಾದಾಗ ಮದ್ರಾಸ್ ರಾಜ್ಯದ ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡಿರುವ ಪ್ರದೇಶಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. ಆಗ ಸಭೆಗೆ ಮತ್ತೆ ಐವರು ಸದಸ್ಯರು ಸೇರ್ಪಡೆಯಾಗುವ ಮೂಲಕ ಸಭೆಯ ಸಂಖ್ಯಾಬಲ ಹೆಚ್ಚಾಯಿತು.

1956ರಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಲಾಯಿತು. ತತ್ಪರಿಣಾಮವಾಗಿ, ಹಿಂದಿನ ಮುಂಬೈ ಪ್ರಾಂತ್ಯದಿಂದ ನಾಲ್ಕು ಜಿಲ್ಲೆಗಳು, ಹೈದರಾಬಾದ್ ಪ್ರಾಂತ್ಯದಿಂದ ಮೂರು ಜಿಲ್ಲೆಗಳು, ಹಳೆ ಮದ್ರಾಸ್ ಪ್ರಾಂತ್ಯದಿಂದ ಒಂದು ಜಿಲ್ಲೆ ಹಾಗೂ ಒಂದು ತಾಲೂಕು ಮತ್ತು ಕೊಡಗು ಪ್ರಾಂತ್ಯ ಸೇರಿ ಮೈಸೂರು ಸಂಸ್ಥಾನವನ್ನು ಒಳಗೊಂಡ ನೂತನ ಮೈಸೂರು ರಾಜ್ಯವು 1ನೇ ನವೆಂಬರ್, 1956ರಂದು ಅಸ್ತಿತ್ವಕ್ಕೆ ಬಂದಿತು. 1973ರಲ್ಲಿ ರಾಜ್ಯಕ್ಕೆ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು.

ಕರ್ನಾಟಕ ವಿಧಾನಮಂಡಲವು ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಎಂಬ ಎರಡು ಸದನಗಳನ್ನು ಒಳಗೊಂಡಿರುತ್ತದೆ. ಹೊಸದಾಗಿ ಅಸ್ತಿತ್ವಕ್ಕೆ ಬಂದ ವಿಧಾನಸಭೆಯ ಮೊದಲ ಉಪವೇಶನವನ್ನು ನೂತನವಾಗಿ ನಿರ್ಮಿಸಲಾಗಿದ್ದ ವಿಧಾನಸೌಧದಲ್ಲಿ 19ನೇ ಡಿಸೆಂಬರ್ 1956ರಂದು ನಡೆಸಲಾಯಿತು. 1957ರಲ್ಲಿ 208ರಷ್ಟು ಸಂಖ್ಯಾಬಲ ಹೊಂದಿದ್ದ ವಿಧಾನಸಭೆಯು 1967ರಲ್ಲಿ 216ಕ್ಕೆ ಹಾಗೂ 1978ರಲ್ಲಿ 224ಕ್ಕೆ ಏರಿಕೆಯಾಯಿತು. ವಿಧಾನಸಭೆಯು ಪ್ರಸ್ತುತ 224 ಚುನಾಯಿತ ಸದಸ್ಯರನ್ನು ಹಾಗೂ ಒಬ್ಬ ನಾಮನಿರ್ದೇಶಿತ ಸದಸ್ಯರನ್ನು ಒಳಗೊಂಡಿದೆ.

1957ರಲ್ಲಿ 63ರಷ್ಟಿದ್ದ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯಾಬಲವು, 1987ರಲ್ಲಿ 75ಕ್ಕೆ ಏರಿಕೆಯಾಯಿತು. ಪ್ರಸ್ತುತ ವಿಧಾನ ಪರಿಷತ್ತು 75 ಸದಸ್ಯರನ್ನು ಒಳಗೊಂಡಿದ್ದು, ಅದರಲ್ಲಿ ವಿಧಾನಸಭೆಯಿಂದ ಆಯ್ಕೆಯಾದ 25 ಸದಸ್ಯರು, ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದ 25 ಸದಸ್ಯರು, ಪದವೀಧರರ ಕ್ಷೇತ್ರದಿಂದ ಹಾಗೂ ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದ ತಲಾ 7 ಸದಸ್ಯರು ಇರುತ್ತಾರೆ ಹಾಗೂ ಕರ್ನಾಟಕದ ರಾಜ್ಯಪಾಲರು 11 ಸದಸ್ಯರನ್ನು ನಾಮನಿರ್ದೇಶನ ಮಾಡುತ್ತಾರೆ.

ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಿಧಿ ಸ್ವೀಕಾರ
(188ನೇ ಅನುಚ್ಛೇದ)

ಪ್ರತಿಯೊಬ್ಬ ಸದಸ್ಯರು, ಸದನದಲ್ಲಿ ಆಸನಾರೂಢರಾಗುವುದಕ್ಕೆ ಮೊದಲು ರಾಜ್ಯಪಾಲರ ಸಮಕ್ಷಮದಲ್ಲಿ ಅಥವಾ ರಾಜ್ಯಪಾಲರು ಆ ಬಗ್ಗೆ ನೇಮಿಸಿದ ಇತರ ವ್ಯಕ್ತಿಗಳ ಸಮ್ಮುಖದಲ್ಲಿ ಈ ಮುಂದೆ ನೀಡಲಾಗಿರುವ ನಮೂನೆಗೆ ಅನುಸಾರವಾಗಿ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿ ಅದಕ್ಕೆ ತಮ್ಮ ಸಹಿ ಹಾಕತಕ್ಕದ್ದು:

"ವಿಧಾನ ಪರಿಷತ್ತಿನ ಸದಸ್ಯನಾಗಿ ಚುನಾಯಿತನಾಗಿರುವ (ಅಥವಾ ನಾಮನಿರ್ದೇಶಿತನಾಗಿರುವ) ------ ಎಂಬ ಹೆಸರಿನ ನಾನು, ಕಾನೂನಿನ ಮೂಲಕ ಸ್ಥಾಪಿತವಾದ ಭಾರತ ಸಂವಿಧಾನದ ವಿಷಯದಲ್ಲಿ ನಿಜವಾದ

ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದೂ ಹಾಗೂ ಭಾರತದ ಸಾರ್ವಭೌಮತ್ವವನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದೂ ಮತ್ತು ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ".

ಭಾರತ ಸಂವಿಧಾನದ 188ನೇ ಅನುಚ್ಛೇದಕ್ಕನುಸಾರವಾಗಿ, ಪರಿಷತ್ತಿಗೆ ಚುನಾಯಿತರಾದ/ ನಾಮನಿರ್ದೇಶಿತರಾದ ಸದಸ್ಯರು ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಿಧಿಯನ್ನು ಈಗಾಗಲೇ ಸ್ವೀಕರಿಸದಿದ್ದಲ್ಲಿ ಮತ್ತು ಅದಕ್ಕೆ ಸಹಿ ಹಾಕದಿದ್ದಲ್ಲಿ, ಅವರು ಸಭಾಪತಿಯವರು ನಿರ್ದೇಶಿಸಬಹುದಾದಂತೆ ಉಪವೇಶನದ ಪ್ರಾರಂಭದಲ್ಲಿ ಹಾಗೆ ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿಯನ್ನು ಸ್ವೀಕರಿಸಿ ಸಹಿ ಹಾಕತಕ್ಕದ್ದು.

ಯಾರೇ ಸದಸ್ಯರು ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿ ಸ್ವೀಕರಿಸುವುದಕ್ಕೆ ಮುಂಚೆ ಸದಸ್ಯರ ಸ್ಥಾನದಲ್ಲಿ ಕುಳಿತರೆ ಅಥವಾ ಮತ ಚಲಾಯಿಸಿದರೆ, ಅವರು ಕುಳಿತ ಅಥವಾ ಮತ ಚಲಾಯಿಸಿದ ಪ್ರತಿಯೊಂದು ದಿನಕ್ಕೂ 500 ರೂಪಾಯಿಗಳ ದಂಡ ಕೊಡಲು ಬದ್ಧರಾಗಿರತಕ್ಕದ್ದು (ಅನುಚ್ಛೇದ 193).

ಕಾರ್ಯದರ್ಶಿಯವರು ಸದಸ್ಯರ ಹೆಸರನ್ನು ಕರೆಯುವರು. ಅವರ ಹೆಸರನ್ನು ಕರೆದ ನಂತರ, ಸದಸ್ಯರು ಕಾರ್ಯದರ್ಶಿಯವರ ಮೇಜಿನ ಬಳಿ ಹೋಗಿ, ತಮ್ಮ ಚುನಾವಣಾ ಫಲಿತಾಂಶವನ್ನು ಪ್ರಕಟಿಸಿದ ನಂತರ ಚುನಾವಣಾಧಿಕಾರಿಯವರು (ರಿಟರ್ನಿಂಗ್ ಆಫೀಸರ್) ನೀಡಿರುವ ಚುನಾವಣಾ ಪ್ರಮಾಣಪತ್ರವನ್ನು ಕಾರ್ಯದರ್ಶಿಯವರಿಗೆ ನೀಡಬೇಕು. ಸದಸ್ಯರು ಈಗಾಗಲೇ ತಮಗೆ ನೀಡಿದ ಪ್ರಮಾಣವಚನದ ನಮೂನೆಯನ್ನು ಓದಬೇಕು. ಅವರು ನಮೂನೆಯಲ್ಲಿರುವ ಪದಗಳನ್ನೇ ಯಥಾವತ್ತಾಗಿ ಓದಬೇಕು. ನಂತರ ನಮೂನೆಗೆ ಮತ್ತು ಸದರಿ ಉದ್ದೇಶಕ್ಕಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ಸಹಿಯನ್ನು ಮಾಡಬೇಕು.

ಪ್ರತಿಯೊಬ್ಬ ಸದಸ್ಯರು ಮೊದಲನೇ ಸಲ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಮುಂಚಿತವಾಗಿ ಕಾರ್ಯದರ್ಶಿಯವರ ಸಮಕ್ಷಮದಲ್ಲಿ ಸದರಿ ಪಟ್ಟಿಯಲ್ಲಿ ಸಹಿ ಹಾಕಬೇಕು (6ನೇ ನಿಯಮ).

ಪ್ರಮಾಣವಚನ ಅಥವಾ ಪ್ರತಿಜ್ಞಾವಿಧಿಯನ್ನು ಮಾಡದ ಅಥವಾ ಅದಕ್ಕೆ ರುಜು ಮಾಡದ ಸದಸ್ಯರು, ಈ ಸಂಬಂಧದಲ್ಲಿ ಕಾರ್ಯದರ್ಶಿಯವರಿಗೆ ಲಿಖಿತ ಸೂಚನೆಯನ್ನು ಕೊಟ್ಟ ತರುವಾಯ, ಪರಿಷತ್ತಿನ ಅಧಿವೇಶನ ಪ್ರಾರಂಭವಾದಾಗ ಅಥವಾ ಪರಿಷತ್ತಿನ ಉಪವೇಶನವು ನಡೆಯುವ ಯಾವುದೇ ದಿನದಲ್ಲಿ ಸಭಾಪತಿಯವರು ನಿರ್ದೇಶಿಸಬಹುದಾದಂಥ ಇತರ ಯಾವುದೇ ಸಮಯದಲ್ಲಿ ಹಾಗೆ ಪ್ರಮಾಣವಚನವನ್ನು ಅಥವಾ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸಿಕೊಂಡು ಅದಕ್ಕೆ ತಮ್ಮ ರುಜುವನ್ನು ಹಾಕಬಹುದು.

ರಾಜ್ಯಪಾಲರ ಭಾಷಣ

(ವಿ.ಪ. ನಿಯಮಗಳು 18–24)

ಇಂಗ್ಲೆಂಡ್‌ನಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದ ಸಂಸತ್ತಿನ ಅಧಿವೇಶನವು, ಬ್ರಿಟನ್‌ನ ರಾಜ ಅಥವಾ ರಾಣಿಯ ಭಾಷಣದೊಂದಿಗೆ ಪ್ರಾರಂಭಿಸಲಾಗುತ್ತದೆ. ರಾಜ ಅಥವಾ ರಾಣಿಯವರು ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ನ ಸಭೆಯ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತಾರೆ. ಸಂಸತ್ತಿನ ಕಾರ್ಯಕಲಾಪಗಳನ್ನು ಪ್ರಾರಂಭಿಸುವ ಈ ಪದ್ಧತಿಯನ್ನು 1950ರಿಂದ ನಮ್ಮ ವಿಧಾನಮಂಡಲದಲ್ಲಿಯೂ ಅನುಸರಿಸಲಾಗುತ್ತಿದೆ.

ಸಂವಿಧಾನದ 176ನೇ ಅನುಚ್ಛೇದದ ಮೇರೆಗೆ, ವಿಧಾನಸಭೆಗೆ ನಡೆಯುವ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಯ ನಂತರ ಪ್ರಾರಂಭವಾಗುವ ಮೊದಲನೇ ಅಧಿವೇಶನದಲ್ಲಿಯೂ ಹಾಗೂ ಪ್ರತಿವರ್ಷದ ಮೊದಲನೇ ಅಧಿವೇಶನದ ಆರಂಭದಲ್ಲಿಯೂ, ರಾಜ್ಯಪಾಲರು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡಿ ಅಧಿವೇಶನವನ್ನು ಕರೆದಿರುವ ಉದ್ದೇಶಗಳನ್ನು ವಿಧಾನಮಂಡಲಕ್ಕೆ ತಿಳಿಸುವರು. 175ನೇ ಅನುಚ್ಛೇದದ ಮೇರೆಗೆ, ರಾಜ್ಯಪಾಲರು ಅಪೇಕ್ಷಿಸಿದಲ್ಲಿ, ಯಾವುದೇ ಇತರ ಸಮಯದಲ್ಲಿ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಅಥವಾ ವಿಧಾನಮಂಡಲದ ಯಾವುದೇ ಒಂದು ಸದನದ ಸದಸ್ಯರನ್ನುದ್ದೇಶಿಸಿ ಪ್ರತ್ಯೇಕವಾಗಿ ಭಾಷಣ ಮಾಡುವ ಅಧಿಕಾರವನ್ನು ಸಹ ಹೊಂದಿರುತ್ತಾರೆ.

ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ಸಾಮಾನ್ಯವಾಗಿ ವಿಧಾನಸಭೆಯ ಸಭಾಂಗಣದಲ್ಲಿ ಒಟ್ಟಿಗೆ ಸೇರುತ್ತಾರೆ.

ರಾಜ್ಯಪಾಲರ ಭಾಷಣವೆಂದರೆ, ಅದು ಅವರ ವೈಯಕ್ತಿಕ ಭಾಷಣ ಎಂದು ಅರ್ಥವಲ್ಲ. ಭಾಷಣದ ರಚನೆಯಲ್ಲಿ ರಾಜ್ಯಪಾಲರ ಪಾತ್ರ ಗೌಣವಾಗಿರುತ್ತದೆ. ವಾಸ್ತವವಾಗಿ ಇದು ಮಂತ್ರಿಮಂಡಲದ ಭಾಷಣ. ಭಾಷಣವು ಕಳೆದ ಸಾಲಿನಲ್ಲಿ ಸರ್ಕಾರವು ಕೈಗೊಂಡ ಕಾರ್ಯಚಟುವಟಿಕೆಗಳು ಹಾಗೂ ಮಾಡಿದ ಸಾಧನೆಗಳ ಪುನರಾವಲೋಕನವಾಗಿದ್ದು, ಆಯಾ ಅಧಿವೇಶನದಲ್ಲಿ ಕೈಗೊಳ್ಳಲಾಗುವ ಕಾರ್ಯಕ್ರಮಗಳ ಸ್ಥೂಲ ವಿವರಣೆಯನ್ನು ಒಳಗೊಂಡಿರುತ್ತದೆ.

ರಾಜ್ಯಪಾಲರ ಭಾಷಣವು ವೈಭವಪೂರ್ಣವಾದ ಸನ್ನಿವೇಶವನ್ನೊಳಗೊಂಡ ಸಂದರ್ಭವಾಗಿರುತ್ತದೆ. ರಾಜ್ಯಪಾಲರು ವಿಧಾನಸೌಧದ ದ್ವಾರ ಮಂಟಪಕ್ಕೆ ಆಗಮಿಸುತ್ತಿದ್ದಂತೆ ಸಭಾಧ್ಯಕ್ಷರು, ಸಭಾಪತಿಯವರು ಮತ್ತು ಕಾರ್ಯದರ್ಶಿಗಳು ಅವರನ್ನು ಸ್ವಾಗತಿಸುವರು. ಆಗ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು:–

ಕಾರ್ಯದರ್ಶಿಯವರು, ಕವಿಸ	ಕಾರ್ಯದರ್ಶಿಯವರು, ಕವಿಪ
ಸಭಾಧ್ಯಕ್ಷರು	ಸಭಾಪತಿಗಳು

ರಾಜ್ಯಪಾಲರು

ಮೆರವಣಿಗೆಯು ಮೊಗಸಾಲೆಯ (ಲಾಬಿ) ಮೂಲಕ ವಿಧಾನಸಭೆಯ ಅಧ್ಯಕ್ಷರ ಪೀಠದ ಎದುರಿಗಿರುವ ದ್ವಾರದಿಂದ ಪ್ರವೇಶಿಸುವುದು. ರಾಜ್ಯಪಾಲರ ಆಗಮನವನ್ನು ಸಾರಲಾಗುವುದು.

ಆಗ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. ಮೆರವಣಿಗೆಯು ಸದನವನ್ನು ಪ್ರವೇಶಿಸುತ್ತಿದ್ದಂತೆ ಸದಸ್ಯರು ಎದ್ದು ನಿಲ್ಲಬೇಕು ಮತ್ತು ರಾಜ್ಯಪಾಲರು ಆಸೀನರಾದ ನಂತರವೇ ಅವರು ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು. ಆನಂತರ ಮೆರವಣಿಗೆಯು ವೇದಿಕೆಯ ಕಡೆಗೆ ಮುಂದುವರೆಯುತ್ತದೆ. ವೇದಿಕೆಯ ಬಳಿ ಮೆರವಣಿಗೆ ಇಬ್ಭಾಗವಾಗುತ್ತದೆ. ಸಭಾಧ್ಯಕ್ಷರು ಹಾಗೂ ರಾಜ್ಯಪಾಲರು ಬಲಭಾಗದಿಂದಲೂ, ಸಭಾಪತಿಯವರು ಎಡಭಾಗದಿಂದ ಹತ್ತುವರು. ರಾಜ್ಯಪಾಲರು ಸಭಾಧ್ಯಕ್ಷರವರ ಪೀಠದಲ್ಲಿ ಕುಳಿತುಕೊಳ್ಳುವರು. ಸಭಾಧ್ಯಕ್ಷರು ರಾಜ್ಯಪಾಲರ ಬಲಭಾಗಕ್ಕೂ, ಸಭಾಪತಿಯವರು ರಾಜ್ಯಪಾಲರ ಎಡಭಾಗಕ್ಕೂ ಕುಳಿತುಕೊಳ್ಳುವರು. ಕಾರ್ಯದರ್ಶಿಗಳು ವೇದಿಕೆಯ ಮುಂಭಾಗದಲ್ಲಿರುವ ಆಸನಗಳಲ್ಲಿ ಕುಳಿತುಕೊಳ್ಳುವರು.

ಆನಂತರ, ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವರು. ಭಾಷಣದ ಪ್ರತಿಗಳನ್ನು ಸದನದಲ್ಲಿನ ಸದಸ್ಯರಿಗೆ ಹಂಚಲಾಗುವುದು.

ಭಾಷಣ ಮುಕ್ತಾಯಗೊಂಡ ತರುವಾಯ, ರಾಜ್ಯಪಾಲರು ಮೆರವಣಿಗೆಯಲ್ಲಿ ಸಭಾಭವನವನ್ನು ಪ್ರವೇಶಿಸಿದ ರೀತಿಯಲ್ಲಿಯೇ ಸದನದಿಂದ ನಿರ್ಗಮಿಸುವರು. ಮೆರವಣಿಗೆಯು ಸದನವನ್ನು ಬಿಡುವವರೆಗೂ ಸದಸ್ಯರು ನಿಂತಿರಬೇಕು.

ರಾಜ್ಯಪಾಲರು ಭಾಷಣ ಪ್ರಾರಂಭಿಸುವುದಕ್ಕೆ ಮೊದಲು ಅಥವಾ ಭಾಷಣ ಮುಗಿದ ತರುವಾಯ ಅಥವಾ ಭಾಷಣದ ಅವಧಿಯಲ್ಲಿ ಸದಸ್ಯರು ಭಾಷಣ ಮಾಡುವುದರ ಕ್ರಿಯಾಲೋಪ ಸೂಚಿಸುವುದು ಅಥವಾ ಸಭಾತ್ಯಾಗದಂತಹ ಕೃತ್ಯಗಳ ಮೂಲಕ ಅಥವಾ ಬೇರಾವುದೇ ರೀತಿಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯುಂಟು ಮಾಡಬಾರದೆಂಬುದು ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಅಂಥ ಅಡ್ಡಿ ಅಥವಾ ಅಡಚಣೆಯನ್ನು ಸದನದ ಆದೇಶದ ಒಟ್ಟಾರೆ ಉಲ್ಲಂಘನೆಯೆಂದು ಪರಿಗಣಿಸತಕ್ಕದ್ದು ಮತ್ತು ಸಭಾಧ್ಯಕ್ಷರು ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ಕ್ರಮವನ್ನು ಕೈಗೊಳ್ಳತಕ್ಕದ್ದು.

ರಾಜ್ಯಪಾಲರ ಭಾಷಣದ ನಂತರದ ವಿಧಾನ ಪರಿಷತ್ತಿನ ಮೊದಲನೆಯ ಉಪವೇಶನದಲ್ಲಿ, ಕಾರ್ಯದರ್ಶಿಯವರು, ರಾಜ್ಯಪಾಲರು ವಿಧಾನಮಂಡಲವನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆಂದು ಸದನಕ್ಕೆ ವರದಿಯನ್ನು ಮಾಡಿ, ಅದರ ಒಂದು ಪ್ರತಿಯನ್ನು ಸದನದ ಮುಂದೆ ಮಂಡಿಸುವರು (**ವಿಧಾನ ಪರಿಷತ್ತಿನ ನಿಯಮ 18**).

ಆಡಳಿತ ಪಕ್ಷದ ಹಿರಿಯ ಸದಸ್ಯರೊಬ್ಬರು ರಾಜ್ಯಪಾಲರಿಗೆ ವಂದನೆಗಳನ್ನರ್ಪಿಸುವ ಪ್ರಸ್ತಾವವನ್ನು ಮಂಡಿಸುವರು ಮತ್ತು ಅದೇ ಪಕ್ಷದ ಮತ್ತೊಬ್ಬ ಸದಸ್ಯರು ಅದನ್ನು ಅನುಮೋದಿಸುವರು.

ಭಾರತ ಸಂವಿಧಾನದ 176ನೇ ಅನುಚ್ಛೇದದ ಮೇರೆಗೆ, ಸಭಾಪತಿಯವರು ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಚರ್ಚೆ

ನಡೆಸುವುದಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರೂ ಸೇರಿದಂತೆ ಸಭಾನಾಯಕರೊಂದಿಗೆ ಸಮಾಲೋಚನೆ ನಡೆಸಿ, ಕಾಲಾವಧಿಯನ್ನು ಗೊತ್ತುಪಡಿಸತಕ್ಕದ್ದು.

ಭಾಷಣದಲ್ಲಿ ಅಡಕವಾದ ವಿಷಯಗಳ ಬಗ್ಗೆ ಸದನದಲ್ಲಿ ಚರ್ಚೆ ನಡೆಯುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಘೋಷಿಸಲಾದಂತಹ ಸರ್ಕಾರದ ಕಾರ್ಯನೀತಿಗಳ ಬಗ್ಗೆ ಸಾಮಾನ್ಯ ಚರ್ಚೆ ನಡೆಸುವುದಕ್ಕೆ ಚರ್ಚೆಯಲ್ಲಿ ಅವಕಾಶ ಕಲ್ಪಿಸಲಾಗುತ್ತದೆ. ಸದಸ್ಯರು ತಾವು ಅಪೇಕ್ಷಿಸುವ ಯಾವುದೇ ಕಾರ್ಯನೀತಿಯ ಬಗ್ಗೆ ಭಾಷಣದಲ್ಲಿ ಏನೂ ಇರದಿದ್ದಲ್ಲಿ ತಮ್ಮ ವಿಷಾದವನ್ನು ವ್ಯಕ್ತಪಡಿಸಿ ವಂದನಾರ್ಪಣಾ ಪ್ರಸ್ತಾವಕ್ಕೆ ತಿದ್ದುಪಡಿಗಳನ್ನು ಸಹ ಸೂಚಿಸಬಹುದು.

ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಸರ್ಕಾರ ವಿಫಲವಾಗಿರುವುದನ್ನೂ ಸಹ ತಿದ್ದುಪಡಿಗಳ ರೂಪದಲ್ಲಿ ಸೂಚಿಸಬಹುದಾಗಿದೆ.

ಮುಖ್ಯಮಂತ್ರಿಯವರು ಅಥವಾ ಅವರಿಂದ ಅಧಿಕೃತರಾದ ಯಾರೇ ಇತರ ಸಚಿವರು ವಂದನಾ ಪ್ರಸ್ತಾವ ಮತ್ತು ತಿದ್ದುಪಡಿಗಳ ಮೇಲಿನ ಚರ್ಚೆಗೆ ಉತ್ತರ ನೀಡುವರು. ಸದಸ್ಯರು ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳದಿದ್ದಲ್ಲಿ, ಅವುಗಳನ್ನು ಸದನದಲ್ಲಿ ಮತಕ್ಕೆ ಹಾಕಲಾಗುವುದು. ನಂತರ ವಂದನಾ ಪ್ರಸ್ತಾವವನ್ನು ಸದನದಲ್ಲಿ ಮತಕ್ಕೆ ಹಾಕಲಾಗುವುದು. ವಂದನಾ ಪ್ರಸ್ತಾವವು ವಿಫಲವಾದಲ್ಲಿ ಅಥವಾ ಕಾರ್ಯನೀತಿಗೆ ಸಂಬಂಧಿಸಿದ ತಿದ್ದುಪಡಿಗಳು ಅಂಗೀಕೃತವಾದಲ್ಲಿ, ಅದು ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿದುದಕ್ಕೆ ಸೂಚಕವಾಗುತ್ತವೆ.

ವಿಧಾನ ಪರಿಷತ್ತಿನಲ್ಲಿ ಅಂಗೀಕೃತವಾದ ವಂದನಾ ಪ್ರಸ್ತಾವಗಳನ್ನು ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ.

ವಂದನಾ ಪ್ರಸ್ತಾವನೆಯ ಮೇಲೆ ಚರ್ಚೆ ನಡೆಸುವುದಕ್ಕೆ ಗೊತ್ತುಪಡಿಸಲಾದ ದಿನದಂದೇ ವಿಧೇಯಕಗಳನ್ನು ಮಂಡಿಸಲು ಅವಕಾಶ ಕೋರುವ ಪ್ರಸ್ತಾವದಂತಹ ಇತರ ಕಾರ್ಯಕಲಾಪಗಳನ್ನು ಹಾಗೂ ಅಂಥ ಇತರೆ ಔಪಚಾರಿಕ ಕಾರ್ಯಕಲಾಪಗಳನ್ನು ನಡೆಸಬಹುದು. ಭಾಷಣದ ಮೇಲಿನ ಚರ್ಚೆಯನ್ನು ಮುಂದೂಡುವ ಮೂಲಕ ಆ ಅವಧಿಯಲ್ಲಿ ಯಾವುವೇ ಇತರ ಸರ್ಕಾರಿ ಕಾರ್ಯಕಲಾಪಗಳನ್ನೂ ಸಹ ನಡೆಸಬಹುದು. ಆದರೆ ಆ ಮಟ್ಟಿಗೆ ಒಂದು ಪ್ರಸ್ತಾವವನ್ನು ಅನುಮೋದಿಸಬೇಕಾಗುತ್ತದೆ.

ಸಭಾಪತಿ ಮತ್ತು ಉಪ–ಸಭಾಪತಿಯವರ ಚುನಾವಣೆ

(ವಿ.ಪ. ನಿಯಮಗಳು 7 ಮತ್ತು 8)

ಸಭಾಪತಿಯವರ ಚುನಾವಣೆ:– **(1)** ಸಭಾಪತಿಯವರ ಚುನಾವಣೆಯನ್ನು ರಾಜ್ಯಪಾಲರು ನಿಗದಿಪಡಿಸಬಹುದಾದಂಥ ದಿನಾಂಕದಂದು ಕೂಡಲೇ ನಡೆಸಲಾಗುವುದು ಮತ್ತು ಹಾಗೆ ದಿನಾಂಕವನ್ನು ಗೊತ್ತು ಮಾಡಿದ ತರುವಾಯ ಕಾರ್ಯದರ್ಶಿಯವರು ರಾಜ್ಯಪಾಲರು ನಿಗದಿಪಡಿಸಿದ ದಿನಾಂಕವನ್ನು ಪ್ರತಿಯೊಬ್ಬ ಸದಸ್ಯರಿಗೂ ತಿಳಿಸುವರು.

(2) ಹಾಗೆ ನಿಗದಿಪಡಿಸಿದ ದಿನಾಂಕದ ಹಿಂದಿನ ದಿನ ಮಧ್ಯಾಹ್ನಕ್ಕೆ ಮೊದಲೇ ಯಾರೇ ಸದಸ್ಯರು ಮತ್ತೊಬ್ಬ ಸದಸ್ಯರನ್ನು ಸಭಾಪತಿಯನ್ನಾಗಿ ಆರಿಸಬೇಕೆಂಬ ಬಗೆಗಿನ ಪ್ರಸ್ತಾವವನ್ನು ಕಾರ್ಯದರ್ಶಿಯವರಿಗೆ ನೀಡಬಹುದು ಮತ್ತು ಆ ಸೂಚನೆಯನ್ನು ಮೂರನೆಯ ಸದಸ್ಯರೊಬ್ಬರು ಅನುಮೋದಿಸಿರಬೇಕು ಹಾಗೂ ಆ ಸದಸ್ಯರು ತಾವು ಸಭಾಪತಿಯಾಗಿ ಚುನಾಯಿತರಾದಲ್ಲಿ, ಆ ಸ್ಥಾನದಲ್ಲಿ ಕೆಲಸ ಮಾಡಲು ಇಚ್ಛಿಸಿದ್ದಾರೆಂದು ತಿಳಿಸುವ ಒಂದು ಹೇಳಿಕೆಯನ್ನು ಆ ಸೂಚನೆಗೆ ಲಗತ್ತಿಸತಕ್ಕದ್ದು. ಆದರೆ, ಯಾರೇ ಸದಸ್ಯರು ತಮ್ಮ ಹೆಸರನ್ನು ತಾವೇ ಸೂಚಿಸತಕ್ಕದ್ದಲ್ಲ ಅಥವಾ ತಮ್ಮ ಹೆಸರನ್ನು ಸೂಚಿಸುವ ಯಾವುದೇ ಪ್ರಸ್ತಾವವನ್ನು ಅನುಮೋದಿಸತಕ್ಕದ್ದಲ್ಲ ಅಥವಾ ಒಂದಕ್ಕಿಂತ ಹೆಚ್ಚಿನ ಪ್ರಸ್ತಾವನೆಗಳನ್ನು ಸೂಚಿಸತಕ್ಕದ್ದಲ್ಲ ಹಾಗೂ ಅನುಮೋದಿಸತಕ್ಕದ್ದಲ್ಲ.

(3) ಅಂಥ ಸೂಚನೆಯನ್ನು ಅಭ್ಯರ್ಥಿ, ಸೂಚಕರು ಅಥವಾ ಅನುಮೋದಕರು ಖುದ್ದಾಗಿ ಕಾರ್ಯದರ್ಶಿಯವರಿಗೆ ಒಪ್ಪಿಸತಕ್ಕದ್ದು ಮತ್ತು ಹಾಗೆ ಖುದ್ದಾಗಿ ಒಪ್ಪಿಸದೇ ಇರುವ ಸೂಚನೆಯು ಅನೂರ್ಜಿತವಾಗತಕ್ಕದ್ದು.

(4) ಕಾರ್ಯಕಲಾಪಗಳ ಪಟ್ಟಿಯಲ್ಲಿ ಯಾವ ಸದಸ್ಯರ ಹೆಸರಿನಲ್ಲಿ ಪ್ರಸ್ತಾವವಿದೆಯೋ ಆ ಸದಸ್ಯರು, ತಮ್ಮ ಹೆಸರನ್ನು ಕರೆದಾಗ ಪ್ರಸ್ತಾವವನ್ನು ಮಂಡಿಸಬಹುದು ಅಥವಾ ಹಿಂತೆಗೆದುಕೊಳ್ಳಬಹುದು. ಅಂಥ ಸಂದರ್ಭದಲ್ಲಿ ಅವರು ಆ ಬಗ್ಗೆ ಕೇವಲ ಹೇಳಿಕೆಯನ್ನು ಮಾತ್ರ ಕೊಡತಕ್ಕದ್ದು.

(5) ಮಂಡಿಸಲಾದ ಮತ್ತು ಯುಕ್ತವಾಗಿ ಅನುಮೋದಿಸಲಾದ ಪ್ರಸ್ತಾವಗಳನ್ನು ಅವುಗಳನ್ನು ಮಂಡಿಸಿದ ಕ್ರಮದಲ್ಲಿಯೇ ಅನುಕ್ರಮವಾಗಿ ಒಂದರ ನಂತರ ಒಂದರಂತೆ ಮಂಡಿಸತಕ್ಕದ್ದು ಮತ್ತು ಅವಶ್ಯವೆನಿಸಿದರೆ, ಅಭಿಮತದ ಮೂಲಕ ನಿರ್ಧರಿಸತಕ್ಕದ್ದು. ಯಾವುದೇ ಪ್ರಸ್ತಾವವು ಅಂಗೀಕಾರವಾದಲ್ಲಿ, ಸಭಾಪತಿಯವರು ಇತರ ಪ್ರಸ್ತಾವಗಳನ್ನು ಮತಕ್ಕೆ ಹಾಕಬೇಕಾಗಿಲ್ಲ. ಅಂಗೀಕೃತವಾದ ಪ್ರಸ್ತಾವದಲ್ಲಿ ಸೂಚಿತರಾದ ಸದಸ್ಯರು ಸಭಾಪತಿಯಾಗಿ ಆಯ್ಕೆಯಾಗಿರುವುದಾಗಿ ಘೋಷಿಸತಕ್ಕದ್ದು.

(6) ವಿಧಾನ ಪರಿಷತ್ತಿನ ಸಭಾಪತಿಯವರ ಹುದ್ದೆಯು ತೆರವಾದಾಗ, ಅವರ ಆಯ್ಕೆಯ ಸಲುವಾಗಿ ನಿಗದಿಪಡಿಸಲಾದ ದಿನಾಂಕವು "ನಿಕಟೋತ್ತರ ಅಧಿವೇಶನದ ತರುವಾಯದ ದಿನಾಂಕಕ್ಕಿಂತ ಕಡಿಮೆಯಿರತಕ್ಕದ್ದಲ್ಲ."

ಉಪ–ಸಭಾಪತಿಯವರ ಚುನಾವಣೆ:– (1) ಉಪ–ಸಭಾಪತಿಯವರ ಚುನಾವಣೆಯನ್ನು ಸಭಾಪತಿಯವರು ಗೊತ್ತುಪಡಿಸಿದ ದಿನಾಂಕದಂದು ಕೂಡಲೇ ನಡೆಸುವರು ಮತ್ತು ಆನಂತರ ಕಾರ್ಯದರ್ಶಿಯವರು ಗೊತ್ತುಪಡಿಸಿದ ದಿನಾಂಕವನ್ನು ಪ್ರತಿಯೊಬ್ಬ ಸದಸ್ಯರಿಗೂ ತಿಳಿಸುವರು.

(2) ಕಳೆದ ಹಿಂದಿನ ನಿಯಮವನ್ನು ಒಳಗೊಂಡು 7ನೇ ನಿಯಮದ (2)ರಿಂದ (6)ರವರೆಗಿನ ಉಪ–ನಿಯಮಗಳ ಉಪಬಂಧಗಳನ್ನು ಉಪ–ಸಭಾಪತಿಯವರ ಚುನಾವಣೆಗೂ ಅನ್ವಯಿಸಲಾಗುವುದು.

*(3) ಉಪ–ಸಭಾಪತಿಯವರ ಹುದ್ದೆಯು ತೆರವಾದ ಪಕ್ಷದಲ್ಲಿ, ಇದರಲ್ಲಿ ಈ ಹಿಂದೆ ಪ್ರಸ್ತಾಪಿಸಲಾದ ಸಭಾಪತಿಯವರ ಚುನಾವಣೆಯ ಸಂಬಂಧದಲ್ಲಿ ಅನುಸರಿಸಲಾದ ಕಾರ್ಯವಿಧಾನಗಳಿಗೆ ಅನುಸಾರವಾಗಿ ಹೊಸದಾಗಿ ಚುನಾವಣೆಯನ್ನು ನಡೆಸತಕ್ಕದ್ದು.

(4) ಉಪ–ಸಭಾಪತಿಯವರ ಚುನಾವಣೆಗಾಗಿ ನಿಗದಿಪಡಿಸಿದ ದಿನಾಂಕವು ನಿಕಟೋತ್ತರ ಅಧಿವೇಶನದ ತರುವಾಯದ ದಿನಾಂಕವಾಗಿರತಕ್ಕದ್ದಲ್ಲ.

ಪಕ್ಷಗಳಿಗೆ ಅಥವಾ ತಂಡಗಳಿಗೆ ಮಾನ್ಯತೆ ನೀಡುವುದು

ಸಭಾಪತಿಯವರು ಸದನದ ಕಾರ್ಯಕಲಾಪಗಳನ್ನು ನಡೆಸುವ ಉದ್ದೇಶಕ್ಕಾಗಿ ಸದಸ್ಯರ ತಂಡವನ್ನು ಸಾಂಸದಿಕ ಪಕ್ಷ ಅಥವಾ ತಂಡವಾಗಿ (ಗುಂಪಾಗಿ) ಮಾನ್ಯತೆ ಮಾಡಬಹುದು ಮತ್ತು ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

ವಿಧಾನಮಂಡಲ ಸಮೂಹ:– ವಿಧಾನಮಂಡಲ ಸಮೂಹವೆಂದರೆ, 1/4ರಷ್ಟು ಕೋರಂ ಎಂದರ್ಥ; ಎಂದರೆ ಶಾಸಕಾಂಗ ಪಕ್ಷಕ್ಕೆ ಸೇರಿದ ಮೂವರು ಸದಸ್ಯರ ತಂಡವು ಒಂದು ವಿಧಾನಮಂಡಲ ಸಮೂಹವಾಗತಕ್ಕದ್ದು ಮತ್ತು ಅದಕ್ಕೆ **"ಶಾಸಕಾಂಗ (ವಿಧಾನಮಂಡಲ) ಪಕ್ಷವೆಂದು"** ಮಾನ್ಯತೆ ನೀಡತಕ್ಕದ್ದು.

***ಪ್ರತಿಪಕ್ಷ ನಾಯಕರು:–** **"ಪ್ರತಿಪಕ್ಷ ನಾಯಕರು"** ಎಂದರೆ, ಸರ್ಕಾರವನ್ನು ರಚಿಸಿರುವ ಪಕ್ಷ/ಪಕ್ಷಗಳನ್ನು ಹೊರತುಪಡಿಸಿದ ಮತ್ತು ವಿಧಾನ ಪರಿಷತ್ತಿನಲ್ಲಿನ ಒಟ್ಟು ಸದಸ್ಯರಲ್ಲಿ 1/10ಕ್ಕೆ (ಕೋರಂ) ಸಮನಾದ ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯಾಬಲವನ್ನು ಹೊಂದಿರುವ ಮತ್ತು ಸಭಾಪತಿಯವರಿಂದ ಪ್ರತಿಪಕ್ಷ ನಾಯಕನೆಂದು ಮಾನ್ಯತೆ ಪಡೆದ ಒಂದು ಶಾಸಕಾಂಗ ಪಕ್ಷದ ನಾಯಕ.

ಆದರೆ, ಒಟ್ಟು ಸಂಖ್ಯಾಬಲದಲ್ಲಿ 1/10ಕ್ಕಿಂತ ಕಡಿಮೆ ಸಂಖ್ಯೆಯ ಸದಸ್ಯರಿದ್ದರೆ, ಇತರ ಪ್ರತಿಪಕ್ಷ/ಪಕ್ಷಗಳ ಬೆಂಬಲವನ್ನು ಪಡೆದಂತಹ ಪಕ್ಷದ ನಾಯಕ:

ಅಲ್ಲದೆ, ಸಮಾನ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಪಕ್ಷಗಳು ಮಾನ್ಯತೆಗಾಗಿ ಕೋರಿಕೆ ಸಲ್ಲಿಸಿದರೆ, ಆಗ ಪ್ರತಿಪಕ್ಷ ನಾಯಕರ ಸ್ಥಾನವನ್ನು ಪರ್ಯಾಯವಾಗಿ ಒಬ್ಬರ ನಂತರ ಮತ್ತೊಬ್ಬರಂತೆ ಧಾರಣ ಮಾಡತಕ್ಕದ್ದು ಮತ್ತು ಅವರು ಆ ಸ್ಥಾನವನ್ನು ಸ್ವೀಕರಿಸುವ ಕ್ರಮವನ್ನು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು.

ಸದಸ್ಯರಿಗೆ ಆಸನ ವ್ಯವಸ್ಥೆ
(ವಿ.ಪ. ನಿಯಮ 4)

ಸದಸ್ಯರು, ಸಭಾಪತಿಯವರು ಗೊತ್ತುಪಡಿಸಬಹುದಾದಂಥ ಕ್ರಮದಲ್ಲಿ ಮತ್ತು ಸ್ಥಾನಗಳಲ್ಲಿ ಕುಳಿತುಕೊಳ್ಳತಕ್ಕದ್ದು. ಪಕ್ಷ ಅಥವಾ ತಂಡದ ಸದಸ್ಯರ ಬಲಕ್ಕನುಗುಣವಾಗಿ ಆಸನಗಳ ವಿಭಾಗಗಳನ್ನು ಮಾನ್ಯತೆ ಪಡೆದ ಎಲ್ಲಾ ಪಕ್ಷಗಳು ಅಥವಾ ತಂಡಗಳಿಗೆ ಹಂಚಿಕೆ ಮಾಡಲಾಗುತ್ತದೆ. ಆಸನಗಳ ವಿಭಾಗದೊಳಗಿನ ವ್ಯಕ್ತಿಗತ ಆಸನಗಳ ಹಂಚಿಕೆಯನ್ನು ಪಕ್ಷ ಅಥವಾ ತಂಡವೇ ಸ್ವತಃ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು. ಆಡಳಿತ ಪಕ್ಷದ ಸದಸ್ಯರು ಬಲ ಭಾಗದಲ್ಲಿ ಮತ್ತು ವಿರೋಧ ಪಕ್ಷದ ಸದಸ್ಯರು ಎಡ ಭಾಗದಲ್ಲಿ ಕುಳಿತುಕೊಳ್ಳತಕ್ಕದ್ದು. ಆದರೆ, ಎಡ ಭಾಗದ ಮೊದಲ ಸಾಲಿನಲ್ಲಿನ ಮೊದಲ ಆಸನವನ್ನು ಯಾವಾಗಲೂ ಉಪ–ಸಭಾಪತಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದಸ್ಯರು ತಮಗೆ ವ್ಯವಸ್ಥೆ ಮಾಡಲಾದ ಆಸನಗಳಿಂದಲೇ ಮಾತನಾಡುವುದು ಅಗತ್ಯ. ಇದರಿಂದ ಸಭಾಪತಿಗಳಿಗೆ ಸದಸ್ಯರನ್ನು ಗುರುತಿಸಲು ಅನುಕೂಲವಾಗುತ್ತದೆ. ರಾಜಕೀಯ ಪಕ್ಷಗಳ ಮುಖಂಡರಿಗೆ ಮತ್ತು ಸದನಕ್ಕೆ ತಾವು ನೀಡಿದ ಕೊಡುಗೆಗಾಗಿ ವಿಶೇಷ ಗೌರವಕ್ಕೆ ಪಾತ್ರರಾದ ಸದನದ ಹಿರಿಯ ಸದಸ್ಯರಿಗೆ, ಸದನದಲ್ಲಿ ಅವರ ಪಕ್ಷಕ್ಕೆ ಮಾನ್ಯತೆ ನೀಡಲಾಗಿದೆಯೇ ಅಥವಾ ಅವರು ಅಂಥ ಪಕ್ಷಕ್ಕೆ ಸೇರಿದ ಸದಸ್ಯರೇ ಎಂಬ ಸಂಗತಿಯನ್ನು ಪರಿಗಣನೆಗೆ ತೆಗೆದುಕೊಳ್ಳದೆ ವಿರೋಧ ಪಕ್ಷದ ಸದಸ್ಯರು ಕುಳಿತುಕೊಳ್ಳುವ ಕಡೆ ಮೊದಲ ಸಾಲಿನಲ್ಲಿ ಆಸನಗಳನ್ನು ಹಂಚಿಕೆ ಮಾಡತಕ್ಕದ್ದು.

ಉಪವೇಶನಗಳ ಅವಧಿ ಮತ್ತು ಸಮಯ
(ವಿ.ಪ. ನಿಯಮ 12)

(1) ವಿಧಾನ ಪರಿಷತ್ತಿನ ಉಪವೇಶನಗಳನ್ನು ಸಾಮಾನ್ಯವಾಗಿ ಬೆಳಿಗ್ಗೆ 10.30 ಗಂಟೆಯಿಂದ 2 ಗಂಟೆಯವರೆಗೆ ಮತ್ತು 3 ಗಂಟೆಯಿಂದ ಸಾಯಂಕಾಲ 06.00 ಗಂಟೆಯವರೆಗೆ ನಡೆಸತಕ್ಕದ್ದು.

(2) ಭೋಜನದ ಉದ್ದೇಶಕ್ಕಾಗಿ ಸದನವನ್ನು ಮುಂದೂಡಿದಾಗ ಮತ್ತು ಸಭಾಪತಿಯವರು ಸದನದ ಪುನರ್‌ಸಮಾವೇಶಕ್ಕೆ ಯಾವುದೇ ಸಮಯವನ್ನು ನಿಗದಿಪಡಿಸದಿದ್ದಾಗ, ಸದನವು ಒಂದು ಗಂಟೆಯ ತರುವಾಯ ಸೇರುತ್ತದೆಂದು ಭಾವಿಸಬೇಕು. ಹಾಗೆಯೇ, ಸದನದಲ್ಲಿ ದಿನದ ಪ್ರಾರಂಭದಲ್ಲಿಯೇ ಗದ್ದಲವುಂಟಾದಾಗ ಮತ್ತು ಸಭಾಪತಿಯವರು ಸದನವು ಮತ್ತೆ ಸಮಾವೇಶಗೊಳ್ಳುವುದಕ್ಕೆ ಯಾವುದೇ ಸಮಯವನ್ನು ನಿಗದಿಪಡಿಸದಿದ್ದರೆ, ಆಗ ವಿಧಾನ ಪರಿಷತ್ತಿನ ಉಪವೇಶನವು ಮುಂದಿನ ಕೆಲಸದ ದಿನದಂದು ಬೆಳಿಗ್ಗೆ 10.30 ಗಂಟೆಗೆ ಸೇರುತ್ತದೆಂದು ಭಾವಿಸಬೇಕು.

ಸರ್ಕಾರದ ಕಾರ್ಯಕಲಾಪಗಳು
(ವಿ.ಪ. ನಿಯಮ 28)

ಪ್ರತಿಯೊಂದು ಅಧಿವೇಶನ ಪ್ರಾರಂಭವಾಗುವುದಕ್ಕೆ ಮೊದಲು, ಆ ಅಧಿವೇಶನದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾದ ಸರ್ಕಾರಿ, ಶಾಸನಾತ್ಮಕ (ವಿಧಾಯೀ) ಮತ್ತು ಇತರ ಕಾರ್ಯಕಲಾಪಗಳನ್ನು ತೋರಿಸುವ ಒಂದು ವಿವರಣಾ ಪಟ್ಟಿಯನ್ನು ಸದಸ್ಯರ ಮಾಹಿತಿಗಾಗಿ ಲಘು ಪ್ರಕಟಣೆ (ಬುಲೆಟಿನ್) ಭಾಗ–IIರಲ್ಲಿ ಪ್ರಕಟಿಸತಕ್ಕದ್ದು.

ಖಾಸಗಿ ಸದಸ್ಯರ ಕಾರ್ಯಕಲಾಪಗಳು
(ವಿ.ಪ. ನಿಯಮ 29)

ಸಭಾಪತಿಯವರು ಅನ್ಯಥಾ ನಿರ್ದೇಶಿಸಿದ ಹೊರತು, ಶುಕ್ರವಾರದ ಉಪವೇಶನದ ಎರಡೂವರೆ ಗಂಟೆಗಳ ಸಮಯವನ್ನು ಖಾಸಗಿ ಸದಸ್ಯರ ಕಾರ್ಯಕಲಾಪಗಳ ವ್ಯವಹರಣೆಗಾಗಿ ಎಂದರೆ ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಪಟ್ಟ ಕಾರ್ಯಕಲಾಪಗಳನ್ನು ನಡೆಸಲು ನಿಗದಿಮಾಡತಕ್ಕದ್ದು.

ಆದರೂ, ಸಭಾಪತಿಯವರು, ಸದನದ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ, ಖಾಸಗಿ ಸದಸ್ಯರ ಕಾರ್ಯಕಲಾಪಗಳನ್ನು ನಡೆಸುವ ಸಲುವಾಗಿ ಶುಕ್ರವಾರವಲ್ಲದೆ ಬೇರೆ ಯಾವುದೇ ದಿನವನ್ನು ನಿಗದಿ ಮಾಡಬಹುದು.

ಶುಕ್ರವಾರದಂದು ವಿಧಾನ ಪರಿಷತ್ತಿನ ಉಪವೇಶನವಿಲ್ಲದಿದ್ದರೆ, ಖಾಸಗಿ ಸದಸ್ಯರ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ವಾರದಲ್ಲಿ ಇತರ ಯಾವುದೇ ದಿನದಂದು ಎರಡೂವರೆ ಗಂಟೆಗಳಷ್ಟು ಸಮಯವನ್ನು ಹಂಚಿಕೆ ಮಾಡಬಹುದೆಂದು ಸಭಾಪತಿಯವರು ನಿರ್ದೇಶಿಸಬಹುದು.

ಗಣಪೂರ್ತಿ (Quorum)
(ಅನುಚ್ಛೇದ 189)

ಸಂವಿಧಾನದ 189(2)ನೇ ಅನುಚ್ಛೇದದ ಮೇರೆಗೆ ಯಾವುದೇ ಸದಸ್ಯರ ಸ್ಥಾನವು ಖಾಲಿಯಾಗಿದ್ದರೂ, ವಿಧಾನ ಪರಿಷತ್ತು ತನ್ನ ಕಾರ್ಯವನ್ನು ನೆರವೇರಿಸಲು ಅಧಿಕಾರ ಹೊಂದಿರುತ್ತದೆ. ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಮುನ್ನ ಸಭೆಯಲ್ಲಿ ನಿರ್ದಿಷ್ಟ ಸಂಖ್ಯೆಯ ಸದಸ್ಯರುಗಳು ಹಾಜರಿರಲೇಬೇಕು. ಸಭೆಯನ್ನು ನಡೆಸಲು ಬೇಕಾದ ಸದಸ್ಯರ ಸಂಖ್ಯೆಯ ಬಗ್ಗೆ ನಿಯಮವನ್ನು ರಚಿಸಲು ವಿಧಾನಮಂಡಲಕ್ಕೆ ಅಧಿಕಾರವಿರುತ್ತದೆ. ಅಲ್ಲಿಯವರೆಗೆ ವಿಧಾನ ಪರಿಷತ್ತಿನ ಸಭೆಯನ್ನು ನಡೆಸಲು ಅವಶ್ಯಕವಾಗಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ [189(3)ನೇ ಅನುಚ್ಛೇದದ ಮೇರೆಗೆ] ಹತ್ತು ಮಂದಿ ಸದಸ್ಯರು ಅಥವಾ ಆಯಾ ಸದನದ ಒಟ್ಟು ಸದಸ್ಯರ 1/10ರಷ್ಟು ಭಾಗದ ಸದಸ್ಯರು ಇವೆರಡರಲ್ಲಿ ಯಾವುದು ಅಧಿಕವಾಗಿರುವುದೋ ಅಷ್ಟು ಸಂಖ್ಯೆಯ ಸದಸ್ಯರು ಹಾಜರಿರಬೇಕು. ವಿಧಾನ ಪರಿಷತ್ತನ್ನು ನಡೆಸಲು ಅವಶ್ಯಕವಾಗಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆಯನ್ನು ಕರ್ನಾಟಕ ವಿಧಾನಮಂಡಲವು ಶಾಸನದ ಮೂಲಕ ಗೊತ್ತುಮಾಡಿರುವುದಿಲ್ಲ. ಆದ್ದರಿಂದ ಸಭೆಯಲ್ಲಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆಯು ಸದನದ ಒಟ್ಟು ಸಂಖ್ಯಾಬಲ 1/10 ಭಾಗದಷ್ಟು ಸದಸ್ಯರು ಅಥವಾ ಹತ್ತು ಮಂದಿ ಸದಸ್ಯರು ಇವೆರಡರಲ್ಲಿ ಯಾವುದು ಅಧಿಕವಾಗಿರುವುದೋ ಆ ಸಂಖ್ಯೆಯಾಗಿರುತ್ತದೆ. ವಿಧಾನ ಪರಿಷತ್ತಿನ ಬಗ್ಗೆ ಹೇಳುವುದಾದರೆ ಅದರ ಒಟ್ಟು ಸಂಖ್ಯಾಬಲ ನಾಮನಿರ್ದೇಶಿತ ಸದಸ್ಯರೂ ಸೇರಿದಂತೆ 75 ಮಂದಿ ಸದಸ್ಯರಿರುತ್ತಾರೆ. ಈ ಸಂಖ್ಯೆಯಲ್ಲಿ ವಿಧಾನ ಪರಿಷತ್ತನ್ನು ನಡೆಸಲು ಅವಶ್ಯಕವಾಗಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ 1/10ರಷ್ಟು ಎಂದರೆ 7 ಮಂದಿ ಸದಸ್ಯರು. ಪರಿಷತ್ತನ್ನು

ನಡೆಸಲು ಅವಶ್ಯಕವಾಗಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ 10. ಸಭಾಪತಿಯವರು ಅಥವಾ ಸಭಾಧ್ಯಕ್ಷತೆಯನ್ನು ವಹಿಸಿರುವವರೂ ಈ ಸಂಖ್ಯೆಯಲ್ಲಿ ಸೇರಿರುತ್ತಾರೆ.

ವಿಧಾನ ಪರಿಷತ್ತಿನ ಉಪವೇಶನದ ಪ್ರಾರಂಭದಲ್ಲಿ ಅಗತ್ಯ ಸಂಖ್ಯೆಯ ಸದಸ್ಯರು ಹಾಜರಾಗುವವರೆಗೆ ಸಭಾಪತಿಯವರು ತಮ್ಮ ಪೀಠವನ್ನು ಅಲಂಕರಿಸುವುದಿಲ್ಲ. ಉಪವೇಶನ ನಡೆಯುತ್ತಿದ್ದಾಗ, ಸಭೆಯನ್ನು ನಡೆಸಲು ಬೇಕಾದ ಕನಿಷ್ಠ ಸಂಖ್ಯೆಯ ಸದಸ್ಯರು ಹಾಜರಿರದಿರುವುದು ಸಭಾಪತಿಯವರ ಗಮನಕ್ಕೆ ಬಂದಾಗ, ವಿಭಜನಾ ಗಂಟೆಯನ್ನು ಬಾರಿಸುವಂತೆ ಆದೇಶಿಸುವರು. ಆದಾಗ್ಯೂ, ಸಭೆಯನ್ನು ನಡೆಸಲು ಅವಶ್ಯಕವಾದ ಕನಿಷ್ಠ ಸಂಖ್ಯೆಯ ಸದಸ್ಯರು ಸಭೆಯಲ್ಲಿ ಹಾಜರಾಗದಿದ್ದಲ್ಲಿ, (189(4)ನೇ ಅನುಚ್ಛೇದದ ಮೇರೆಗೆ) ಸಭಾಪತಿಯವರು ಸಭೆಯನ್ನು ಮಾರನೆಯ ದಿನಕ್ಕೆ ಅಥವಾ ಸಭೆಯನ್ನು ನಡೆಸಲು ಕನಿಷ್ಠ ಸಂಖ್ಯೆಯ ಸದಸ್ಯರು ಹಾಜರಾಗುವವರೆಗೂ ಸಭೆಯನ್ನು ಮುಂದೂಡುವರು.

ಸಾರ್ವಜನಿಕ ಮಹತ್ವದ ತುರ್ತು ವಿಷಯದ ಮೇಲೆ ನಿಲುವಳಿ ಸೂಚನೆಗಳು
(ವಿ.ಪ. ನಿಯಮಗಳು 59–67)

ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೂಚಿಸಿರುವಂತೆ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದು ಸದನದ ಸಾಮಾನ್ಯ ಪದ್ಧತಿಯಾಗಿದೆ. ಕೆಲವು ವೇಳೆ, ಕೆಲವೊಂದು ತುರ್ತು ಪರಿಸ್ಥಿತಿ ಅಥವಾ ಸಾರ್ವಜನಿಕ ಮಹತ್ವದ ತುರ್ತು ಘಟನೆಗಳು ಸಂಭವಿಸಿದಾಗ, ಸದಸ್ಯರು ಆ ವಿಷಯವನ್ನು ಸ್ವಾಭಾವಿಕವಾಗಿ ಸಭೆಯ ಮುಂದೆ ತರಲು ಕಾತುರರಾಗಿರುತ್ತಾರೆ. ಸಭೆಯ ನಿಯಮಿತ ಕಾರ್ಯಕಲಾಪಗಳನ್ನು ಬದಿಗಿರಿಸಿ, ನಿಲುವಳಿ ಸೂಚನೆಯ ಮೂಲಕ, ಅಂತಹ ಸಾರ್ವಜನಿಕ ದೃಷ್ಟಿಯಿಂದ ಮುಖ್ಯವಾದ ಮತ್ತು ಜರೂರಾದ ವಿಷಯವನ್ನು ಚರ್ಚಿಸಬಹುದು. ಸಾರ್ವಜನಿಕ ದೃಷ್ಟಿಯಿಂದ ಮುಖ್ಯವಾದ ಮತ್ತು ಜರೂರಾದ ವಿಷಯವನ್ನು ಚರ್ಚಿಸುವ ಉದ್ದೇಶದಿಂದ, ಸಭಾಪತಿಯವರ ಅನುಮತಿಯ ಮೇರೆಗೆ "ನಿಲುವಳಿ ಸೂಚನೆ"ಯನ್ನು ತರಬಹುದು. ನಿಲುವಳಿ ಸೂಚನೆಗೆ ಸಭಾಪತಿಯವರ ಅನುಮತಿಯನ್ನು ಪಡೆಯಲು ಈ ಕೆಳಕಂಡ ಷರತ್ತುಗಳನ್ನು ಪೂರೈಸಬೇಕಾಗಿದೆ.

ನಿಲುವಳಿ ಸೂಚನೆಯ ಮೂಲಕ ತರಬಹುದಾದ ವಿಷಯವು ನಿರ್ದಿಷ್ಟವಾಗಿರಬೇಕು. ವ್ಯಾಪಕವಾದ ಮತ್ತು ಸಾಮಾನ್ಯವಾದ ವಿಷಯಗಳ ಬಗ್ಗೆ ಸೂಚನೆಯನ್ನು ತರಬಾರದು. ಉದಾಹರಣೆಗಾಗಿ, ರಾಜ್ಯದಲ್ಲಿನ ಆಹಾರ ಪರಿಸ್ಥಿತಿ ಅಥವಾ ರಾಜ್ಯದಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಚರ್ಚೆ ನಡೆಸಲು ನಿಲುವಳಿ ಸೂಚನೆಯನ್ನು ಅಂಗೀಕರಿಸಲಾಗುವುದಿಲ್ಲ.

ಎರಡನೆಯದಾಗಿ, ನಿಲುವಳಿ ಸೂಚನೆಯ ಮೂಲಕ ತರಬಹುದಾದ ವಿಷಯವು ಬಹಳ ತುರ್ತು ಸ್ವರೂಪದ್ದಾಗಿರಬೇಕು. ಹೀಗೆ ತರಬಹುದಾದಂತಹ ವಿಷಯವು ತುರ್ತು ಪರಿಸ್ಥಿತಿಯಿಂದಾಗಿ ಉದ್ಭವಿಸಿರಬೇಕು.

ನಿಲುವಳಿ ಸೂಚನೆಯಲ್ಲಿ ತರಲು ಉದ್ದೇಶಿಸಲಾದ ವಿಷಯವು ಅನಿರೀಕ್ಷಿತವಾಗಿ ಉದ್ಭವವಾಗಿದ್ದು ಮತ್ತು ಅದರಿಂದ ತುರ್ತು ಸನ್ನಿವೇಶ ಉದ್ಭವವಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದಲ್ಲಿ ಸದನವು ಇತರ ಎಲ್ಲಾ

ಕಾರ್ಯಕಲಾಪಗಳನ್ನು ಬದಿಗಿಟ್ಟು, ತುರ್ತು ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ವಿಷಯವು ಅತ್ಯಂತ ಜರೂರು ಪರಿಸ್ಥಿತಿಯಾಗಿದ್ದು, ಯಾವ ರೀತಿಯಲ್ಲೂ ವಿಳಂಬವಾಗದಂತಿರಬೇಕು.

ನಿಲುವಳಿ ಸೂಚನೆಯನ್ನು ಅಂಗೀಕರಿಸುವುದಕ್ಕೆ ಅಗತ್ಯವಾದ ಮೂರನೇ ಅಂಶವೆಂದರೆ, ನಿಲುವಳಿ ಸೂಚನೆಯ ವಿಷಯವು ಸಾರ್ವಜನಿಕ ಮಹತ್ವದ್ದಾಗಿರಬೇಕು. ವೈಯಕ್ತಿಕ ಪ್ರಕರಣಗಳನ್ನು ನಿಲುವಳಿ ಸೂಚನೆಯ ರೂಪದಲ್ಲಿ ತರುವಂತಿಲ್ಲ. ನಿಲುವಳಿ ಸೂಚನೆಯ ವಿಷಯವು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸರ್ಕಾರದ ವರ್ತನೆ ಅಥವಾ ಲೋಪದೋಷಗಳಿಗೆ ಸಂಬಂಧಿಸಿರಬೇಕು ಮತ್ತು ಅದು, ಸರ್ಕಾರವು ಮಾಡಿರುವ ಯಾವುದೇ ಕೆಲಸದ ಬಗೆಗಾಗಲೀ ಅಥವಾ ಆ ಕ್ಷಣದಲ್ಲಿ ತುರ್ತಾಗಿ ಮಾಡಬೇಕಾಗಿದ್ದ ಯಾವುದೋ ಕೆಲಸವನ್ನು ಮಾಡದೆ ಲೋಪವೆಸಗಿರುವುದರ ಕುರಿತಾಗಲೀ ಸರ್ಕಾರವನ್ನು ಟೀಕಿಸುವ ಸ್ವರೂಪದಲ್ಲಿರಬೇಕು. ಸೂಚನೆಯನ್ನು ಸಾಧ್ಯವಾದಷ್ಟು ತ್ವರಿತವಾಗಿ ಸಭೆಯಲ್ಲಿ ಎತ್ತಬೇಕು. ನ್ಯಾಯಾಲಯದ ವಿಚಾರಣೆಯಲ್ಲಿರುವ ವಿಷಯವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಎತ್ತಬಾರದು. ಸದನದಲ್ಲಿ ವಿಷಯವನ್ನು ಎತ್ತುವುದಕ್ಕೆ ಸದಸ್ಯರಿಗೆ ಈ ಮೊದಲೇ ಅವಕಾಶ ಲಭ್ಯವಾಗಿದ್ದಲ್ಲಿ, ಸಭಾಪತಿಯವರು ನಿಲುವಳಿ ಸೂಚನೆಯನ್ನು ನಿರಾಕರಿಸಬಹುದು.

ನಿಲುವಳಿ ಸೂಚನೆಯನ್ನು ತರಲು ಉದ್ದೇಶಿಸಿರುವ ದಿನದಂದು ಉಪವೇಶನ ಪ್ರಾರಂಭವಾಗುವುದಕ್ಕೆ ಒಂದು ಗಂಟೆಗೆ ಮೊದಲು ಕಾರ್ಯದರ್ಶಿಯವರಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಸಭಾಪತಿಗಳು, ಸದನದ ನಾಯಕ, ಸಂಬಂಧಪಟ್ಟ ಸಚಿವರು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ನೀಡತಕ್ಕದ್ದು. ಸಭಾಪತಿಯವರು ತಮ್ಮ ಸಮ್ಮತಿ ನೀಡಿದರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯಪಟ್ಟರೆ, ಅವರು ನಿಲುವಳಿಯನ್ನು ಮಂಡಿಸಲು ಸದನದ ಅನುಮತಿಯನ್ನು ಕೋರುವಂತೆ ಸದಸ್ಯರಿಗೆ ಹೇಳುತ್ತಾರೆ. ನಿಲುವಳಿ ಸೂಚನೆಗೆ ಆಕ್ಷೇಪಣೆಗಳು ಬಂದಲ್ಲಿ, ಸಭಾಪತಿಯವರು ಆ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ನಡೆಸುವುದಕ್ಕೆ ಬಯಸುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ. ತದನುಸಾರವಾಗಿ, ವಿಧಾನ ಪರಿಷತ್ತಿನ ಸಂಬಂಧದಲ್ಲಿ 10 ಕ್ಕಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಎದ್ದು ನಿಂತರೆ, ಸಭಾಪತಿಯವರು ನಿಲುವಳಿ ಸೂಚನೆಗೆ ಸದನದ ಅನುಮತಿ ಸಿಕ್ಕಿದೆಯೆಂದು ತಿಳಿಸಬೇಕು. ಅಗತ್ಯಕ್ಕಿಂತ ಎಂದರೆ ಹತ್ತು ಸದಸ್ಯರಿಗಿಂತ ಕಡಿಮೆ ಸಂಖ್ಯೆಯ ಸದಸ್ಯರು ಎದ್ದು ನಿಂತರೆ, ಸಭಾಪತಿಯವರು ನಿಲುವಳಿ ಸೂಚನೆಗೆ ಅನುಮತಿ ದೊರೆತಿಲ್ಲ ಎಂಬುದಾಗಿ ನಿಲುವಳಿ ಸೂಚನೆಯನ್ನು ತಂದ ಸದಸ್ಯರಿಗೆ ತಿಳಿಸತಕ್ಕದ್ದು. ಸದನವು ಅನುಮತಿ ನೀಡಿದರೆ, ಆ ದಿನದ ಕಾರ್ಯಕಲಾಪಗಳು ಮುಕ್ತಾಯವಾಗುವುದಕ್ಕೆ ನಿಗದಿಪಡಿಸಲಾದ ಅವಧಿಗಿಂತ ಒಂದು ಗಂಟೆ ಮುಂಚಿತವಾಗಿ ನಿಲುವಳಿ ಪ್ರಸ್ತಾವವನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಗುವುದು. ಸಭಾಪತಿಯವರು, ಸಭಾನಾಯಕರೊಂದಿಗೆ ಸಮಾಲೋಚನೆ ನಡೆಸಿ ಹಾಗೆ ನಿರ್ದೇಶಿಸಿದರೆ, ಆ ಪ್ರಸ್ತಾಪವನ್ನು ಮುಂಚಿತವಾಗಿಯೇ ಚರ್ಚೆಗೆ ತೆಗೆದುಕೊಳ್ಳಬಹುದು. ಚರ್ಚೆಯು ಎರಡು ಗಂಟೆಗಳಿಗಿಂತ ಕಡಿಮೆ ಇರಬಾರದು. **"ಸಭೆಯ ಕಾರ್ಯಕಲಾಪಗಳನ್ನು ಈಗ ಮುಂದೂಡಲಾಗುವುದು"** ಎಂಬ ವಿಷಯವನ್ನು ಮತಕ್ಕೆ ಹಾಕಲಾಗುವುದು. ಸಭಾಪತಿಯವರು ಚರ್ಚೆಗೆ ಹೆಚ್ಚಿನ ಸಮಯವನ್ನು ನೀಡಿದ ಹೊರತು, ಪ್ರತಿ ಸದಸ್ಯರಿಗೆ ಚರ್ಚೆಗೆ 15 ನಿಮಿಷಗಳು ಮಾತ್ರ ಪರಿಮಿತವಾಗಿರುತ್ತದೆ.

ಸಾರ್ವಜನಿಕ ಮಹತ್ವದ ತುರ್ತು ವಿಷಯಗಳ ಮೇಲೆ ಅಲ್ಪಾವಧಿ ಚರ್ಚೆ

(ವಿ.ಪ. ನಿಯಮಗಳು 68–71)

ಸಾರ್ವಜನಿಕ ಮಹತ್ವದ ತುರ್ತು ವಿಷಯಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಅವಕಾಶ ಮಾಡಿಕೊಡುವ ಸಲುವಾಗಿ ಕಾರ್ಯವಿಧಾನ ನಿಯಮಗಳಲ್ಲಿ 'ಅಲ್ಪಾವಧಿಯ ಚರ್ಚೆ'ಗೆ ಸಂಬಂಧಿಸಿದಂತೆ ಅವಕಾಶವನ್ನು ಕಲ್ಪಿಸಲಾಗಿದೆ. ಸಾಮಾನ್ಯವಾಗಿ ಮತ ಚಲಾಯಿಸದ ಅಥವಾ ಸಭೆಯ ತೀರ್ಮಾನವಿಲ್ಲದೆ ಚರ್ಚೆಯನ್ನು ನಡೆಸಲು ಇದೊಂದು ಸಂಸದೀಯ ಸಾಧನವಾಗಿದೆ.

ಒಬ್ಬ ಸದಸ್ಯರು ಸಾರ್ವಜನಿಕ ಮಹತ್ವದ ತುರ್ತು ವಿಷಯಗಳ ಬಗ್ಗೆ ಚರ್ಚೆಯನ್ನು ಎತ್ತುವುದಕ್ಕೆ ಸೂಚನೆಯನ್ನು ನೀಡಬಹುದು. ಆ ಸೂಚನಾಪತ್ರವು ಅಂತಹ ವಿಷಯದ ಸಂಬಂಧದಲ್ಲಿ ಚರ್ಚೆ ನಡೆಸಲು ಇರುವ ಕಾರಣಗಳನ್ನು ನಮೂದಿಸಿರುವ ವಿವರಣಾ ರೂಪದ ಟಿಪ್ಪಣಿಗಳನ್ನೊಳಗೊಂಡಿರಬೇಕು. ವಿಧಾನ ಪರಿಷತ್ತಿನ ಸಂಬಂಧದಲ್ಲಿ ಆ ಸೂಚನೆಗೆ ಕನಿಷ್ಠ ಇಬ್ಬರು ಇತರ ಸದಸ್ಯರು ಸಹಿ ಹಾಕುವ ಮೂಲಕ ಸಮರ್ಥಿಸಬೇಕು.

ಸಭಾಪತಿಯವರು, ತಮಗೆ ಅವಶ್ಯಕವೆಂದು ಕಂಡುಬರಬಹುದಾದಂಥ ವಿವರಗಳನ್ನು ಒದಗಿಸಬೇಕೆಂದು ಸೂಚನೆಯನ್ನು ನೀಡಿರುವ ಸದಸ್ಯರಿಂದ ಮತ್ತು ಮಂತ್ರಿಗಳಿಂದ ವಿವರಗಳನ್ನು ತರಿಸಿಕೊಂಡ ನಂತರ, ಸದರಿ ವಿಷಯವು ಪರಿಷತ್ತಿನಲ್ಲಿ ಶೀಘ್ರದಲ್ಲಿಯೇ ಸಭೆಯಲ್ಲಿ ಚರ್ಚೆ ನಡೆಸುವಷ್ಟು ತುರ್ತು ಸ್ವರೂಪದ್ದಾಗಿದೆ ಮತ್ತು ಸಾಕಷ್ಟು ಮುಖ್ಯವಾದ ವಿಚಾರವಾಗಿದೆಯೆಂದು ಅವರಿಗೆ ಮನವರಿಕೆಯಾದರೆ, ಅವರು ಆ ಸೂಚನೆಯನ್ನು ಅಂಗೀಕರಿಸಬಹುದು. ಚರ್ಚೆಯು ಒಂದು ಗಂಟೆಗಿಂತ ಹೆಚ್ಚಿನ ಅವಧಿಯನ್ನು ಮೀರಬಾರದು. ಪರಿಷತ್ತಿನಲ್ಲಿ ಈ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಬೇಕಿಲ್ಲ ಅಥವಾ ಮತಕ್ಕೆ ಹಾಕಬೇಕಿಲ್ಲ. ಸೂಚನೆಯನ್ನು ನೀಡಿದ ಸದಸ್ಯರು ಸಂಕ್ಷಿಪ್ತವಾಗಿ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಸಹ ಸಂಕ್ಷಿಪ್ತವಾಗಿ ಉತ್ತರ ನೀಡಬಹುದು. ಸಭಾಪತಿಯವರು, ಇತರ ಸದಸ್ಯರೂ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವನ್ನು ನೀಡಬಹುದು. ಚರ್ಚೆಯನ್ನು ಎತ್ತಿದ ಸದಸ್ಯರಿಗೆ ಉತ್ತರ ನೀಡುವ ಅಧಿಕಾರ ಇರುವುದಿಲ್ಲ. ಈ ನಿಯಮದ ಮೇರೆಗೆ ತರಬಹುದಾದ ಸೂಚನೆಯ ವಸ್ತು ವಿಷಯವು ಜರೂರಿನ ಅಂಶವನ್ನು ಒಳಗೊಂಡಿರಬೇಕು. ಸೂಚನೆಯು ಸಭೆಯ ಅಭಿಪ್ರಾಯವನ್ನು ಸೂಚಿಸುವಂತೆ ಕೋರಿ ಸದನವನ್ನು ಆಗ್ರಹಿಸುವ ಠರಾವಿನ ರೂಪದಲ್ಲಿ ಇರಬಾರದು. ಸದಸ್ಯರು ಆಯವ್ಯಯ ಮತ್ತು ಧನವಿನಿಯೋಗ ವಿಧೇಯಕಗಳ ಬಗ್ಗೆ ಚರ್ಚೆ ನಡೆಸುವಾಗ ಇಂಥ ಜರೂರು ಅಂಶಗಳಿಗೆ ಸಂಬಂಧಿಸಿದಂತೆ ಚರ್ಚೆಯನ್ನು ನಡೆಸಬಹುದಾಗಿರುವುದರಿಂದ ಆಯವ್ಯಯ ಅಧಿವೇಶನದಲ್ಲಿ ಸಾಮಾನ್ಯವಾಗಿ ಅಂಥ ಸದಸ್ಯರ ಸೂಚನೆಗಳನ್ನು ಅಂಗೀಕರಿಸಲಾಗುವುದಿಲ್ಲ.

ಶಾಸನ ರಚನೆ

(ವಿ.ಪ. ನಿಯಮಗಳು 73–122)

ಶಾಸನ ರಚನೆಯು ವಿಧಾನಮಂಡಲದ ಪ್ರಮುಖ ಮತ್ತು ಮಹತ್ವದ ಕರ್ತವ್ಯವಾಗಿದೆ. ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪಕ್ಷಗಳ ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ಜನತೆಯ ಮುಂದಿಡಬೇಕಾಗುತ್ತದೆ. ಸರ್ಕಾರ ರಚನೆಯಾದ ನಂತರ, ಆಡಳಿತ ಪಕ್ಷವು ತನ್ನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತದೆ.

ಯಾವುದೇ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಶಾಸನವನ್ನು ಮಂಡಿಸುವ ಮತ್ತು ಅದರಲ್ಲಿ ಇರಬೇಕಾದ ವಿವರಗಳ ಕುರಿತ ನಿರ್ಣಯವನ್ನು ಮಂತ್ರಿಮಂಡಲದ ಮಟ್ಟದಲ್ಲಿ ತೆಗೆದುಕೊಳ್ಳಲಾಗುತ್ತದೆ. ವಿಧೇಯಕವೆಂದು ಕರೆಯಲಾಗುವ ಶಾಸನ ರಚನೆಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ವಿಧೇಯಕದ ರೂಪದಲ್ಲಿ ವಿಧಾನಸಭೆ/ಪರಿಷತ್ತಿನಲ್ಲಿ ಮಂಡಿಸಲಾಗುತ್ತದೆ.

ಭಾರತದಲ್ಲಿ ಶಾಸನಾಧಿಕಾರವನ್ನು ಕೇಂದ್ರ ಮತ್ತು ರಾಜ್ಯ ವಿಧಾನಮಂಡಲಗಳ ನಡುವೆ ಹಂಚಿಕೆ ಮಾಡಲಾಗಿದೆ. ರಾಜ್ಯ ವಿಧಾನಮಂಡಲಗಳು ಯಾವ ವಿಷಯಗಳ ಮೇಲೆ ಶಾಸನ ರಚಿಸಬಹುದೆಂಬ ಬಗ್ಗೆ ಸಂವಿಧಾನದಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಶಾಸನ ರಚನಾ ಪ್ರಕ್ರಿಯೆಯಲ್ಲಿ ಎರಡು ಹಂತಗಳಿವೆ. ವಿಧೇಯಕದ ಕರಡು ಪ್ರತಿಯನ್ನು ತಯಾರಿಸುವುದು ಮೊದಲನೇ ಹಂತವಾಗಿದ್ದು, ಎರಡನೇ ಹಂತವು ವಿಧಾನಮಂಡಲದಲ್ಲಿ ಅದನ್ನು ಅಂಗೀಕರಿಸುವುದಾಗಿದೆ. ವಿಧೇಯಕವು ಪ್ರಸಕ್ತ ಶಾಸನಕ್ಕೆ ಬದಲಾವಣೆಯನ್ನು ಸೂಚಿಸಬಹುದು ಅಥವಾ ಹೊಸ ವಿಷಯವನ್ನು ತರಬಹುದು. ವಿಧೇಯಕವು ಹಾಲಿ ಇರುವ ಶಾಸನಕ್ಕೆ ಬದಲಾವಣೆಯನ್ನು ತರಲು ಉದ್ದೇಶಿಸಿದ್ದರೆ, ಅದನ್ನು ತಿದ್ದುಪಡಿ ವಿಧೇಯಕವೆಂದು ಕರೆಯಲಾಗುವುದು. ಹೊಸ ವಿಷಯದ ಬಗ್ಗೆ ವಿಧೇಯಕವನ್ನು ಮಂಡಿಸಿದಲ್ಲಿ, ಅದನ್ನು ಮೂಲ ವಿಧೇಯಕವೆಂದು ಕರೆಯಲಾಗುವುದು.

ವಿಧೇಯಕಗಳನ್ನು ಸಚಿವರು ಅಥವಾ ಇತರ ಸದಸ್ಯರು ಮಂಡಿಸಬಹುದು. ಸಚಿವರು ಮಂಡಿಸುವ ವಿಧೇಯಕಗಳನ್ನು ಸರ್ಕಾರಿ ವಿಧೇಯಕಗಳೆಂದು ಹಾಗೂ ಇತರ ಸದಸ್ಯರು ಮಂಡಿಸುವ ವಿಧೇಯಕಗಳನ್ನು ಖಾಸಗಿ ಸದಸ್ಯರ ವಿಧೇಯಕಗಳೆಂದು ಕರೆಯಲಾಗುತ್ತದೆ.

ಸರ್ಕಾರಿ ವಿಧೇಯಕಗಳ ಸಂಬಂಧದಲ್ಲಿ, ವಿಧೇಯಕಗಳ ಕರಡು ರಚನೆಯನ್ನು ರಾಜ್ಯ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯವರು ಮಾಡುತ್ತಾರೆ ಮತ್ತು ಖಾಸಗಿ ಸದಸ್ಯರ ವಿಧೇಯಕವನ್ನು ಸದಸ್ಯರುಗಳೇ ಸ್ವತಃ ವಿಧೇಯಕಗಳ ಕರಡನ್ನು ರಚಿಸುವರು.

ಹಣಕಾಸು ವಿಧೇಯಕವನ್ನು ಹೊರತುಪಡಿಸಿ ಯಾವುದೇ ವಿಧೇಯಕಗಳನ್ನು ವಿಧಾನಮಂಡಲದ ಉಭಯ ಸದನಗಳಲ್ಲಿಯೂ ಮಂಡಿಸಬಹುದು. ಹಣಕಾಸು ವಿಧೇಯಕವನ್ನು ಮಾತ್ರ ವಿಧಾನಸಭೆಯಲ್ಲಿ ಮಂಡಿಸಬೇಕಾಗುತ್ತದೆ.

ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರಿರುವ ಪ್ರಸ್ತಾವವನ್ನು ಸದನವು ಅಂಗೀಕರಿಸಿದ ನಂತರ ವಿಧೇಯಕಗಳನ್ನು ಮಂಡಿಸಬಹುದು. ಆದರೆ, ಸಭಾಧ್ಯಕ್ಷರು/ಸಭಾಪತಿಯವರು ವಿಧೇಯಕಗಳನ್ನು ರಾಜ್ಯಪತ್ರದಲ್ಲಿ ಮೊದಲೇ ಪ್ರಕಟಿಸಲು ಆದೇಶ ನೀಡಿದಲ್ಲಿ, ಅಂಥ ಸಂದರ್ಭದಲ್ಲಿ ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿಯನ್ನು ಪಡೆಯುವ ಅವಶ್ಯಕತೆ ಇಲ್ಲ ಮತ್ತು ಅಂಥ ವಿಧೇಯಕಗಳನ್ನು ಸಂಬಂಧಪಟ್ಟ ಸದಸ್ಯರೇ ನೇರವಾಗಿ ಮಂಡಿಸಬಹುದು. ಸದನದಲ್ಲಿ ಸಭಾಧ್ಯಕ್ಷರ ಆದೇಶದ ಮೇರೆಗೆ ವಿಧೇಯಕವನ್ನು ಮಂಡಿಸುವುದಕ್ಕೆ ಮೊದಲು, ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸದಿದ್ದರೆ ಸದರಿ ವಿಧೇಯಕವನ್ನು ಸದನದಲ್ಲಿ ಮಂಡಿಸಿದ ನಂತರ, ಅದನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವುದು. ಖಾಸಗಿ ಸದಸ್ಯರ ವಿಧೇಯಕಗಳ ಸಂಬಂಧದಲ್ಲಿ, ಸದಸ್ಯರು ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುವುದಕ್ಕೆ ಸಂಬಂಧಿಸಿದಂತೆ ತನ್ನ ಪ್ರಸ್ತಾವದ ಬಗ್ಗೆ 15 ದಿನಗಳಿಗೂ ಮೊದಲೇ ಸೂಚನೆ ನೀಡಬೇಕಾಗುತ್ತದೆ. ಸಭಾಪತಿಗಳು ನೋಟೀಸಿನ ಅವಧಿಯನ್ನು ಬಿಟ್ಟುಕೊಟ್ಟ ಹೊರತು, ಸದಸ್ಯರಿಂದ ಸೂಚನಾ ಪತ್ರವನ್ನು ಸ್ವೀಕರಿಸಿದ 15 ದಿನಗಳೊಳಗೆ ಆ ಪ್ರಸ್ತಾವವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಗುವುದಿಲ್ಲ. ಸಂವಿಧಾನದ 207(1)ನೇ ಅನುಚ್ಛೇದದ ಮೇರೆಗೆ ಹಣಕಾಸು ವಿಧೇಯಕವನ್ನು ಮಂಡಿಸುವುದಕ್ಕೆ ರಾಜ್ಯಪಾಲರ ಶಿಫಾರಸು ಅವಶ್ಯಕ. ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ನಿರ್ಬಂಧಗಳನ್ನು ವಿಧಿಸುವ ವಿಧೇಯಕಗಳು ಸಂವಿಧಾನದ 304(ಬಿ) ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯವರ ಅಗತ್ಯ ಮಂಜೂರಾತಿಯನ್ನು ಒಳಗೊಂಡಿರದಿದ್ದ ಹೊರತು ಅವುಗಳನ್ನು ಸಭೆಯಲ್ಲಿ ಮಂಡಿಸಲಾಗುವುದಿಲ್ಲ.

ಸಾಮಾನ್ಯವಾಗಿ ವಿಧೇಯಕಗಳನ್ನು ಮಂಡಿಸುವ ಹಂತದಲ್ಲಿ, ಸದನದಲ್ಲಿ ಚರ್ಚೆ ನಡೆಯುವುದಿಲ್ಲ. ವಿಧೇಯಕವನ್ನು ಮಂಡಿಸುವುದಕ್ಕೆ ಅನುಮತಿಯನ್ನು ಕೋರುವ ಪ್ರಸ್ತಾವಕ್ಕೆ ವಿರೋಧ ವ್ಯಕ್ತವಾದ ಸಂದರ್ಭದಲ್ಲಿ, ಸಭಾಪತಿಗಳು, ಅದನ್ನು ವಿರೋಧಿಸುವ ಸದಸ್ಯರು ಮತ್ತು ವಿಧೇಯಕವನ್ನು ಮಂಡಿಸುವ ಸದಸ್ಯರು ತಮ್ಮ ಸಂಕ್ಷಿಪ್ತ ಹೇಳಿಕೆಯನ್ನು ನೀಡುವುದಕ್ಕೆ ಅನುಮತಿ ನೀಡುವರು.

ವಿಧೇಯಕವು, ಸದನದ ಶಾಸನ ಸಾಮರ್ಥ್ಯವನ್ನು ಮೀರಿ ಶಾಸನವನ್ನು ರಚಿಸಲುದ್ದೇಶಿಸಿದೆ ಎಂಬ ಕಾರಣದ ಮೇಲೆ ಪ್ರಸ್ತಾವವನ್ನು ವಿರೋಧಿಸಿದಲ್ಲಿ, ಈ ಸಂಬಂಧದಲ್ಲಿ ಆದ್ಯಂತ ಚರ್ಚೆಗೆ ಅನುಮತಿ ನೀಡಲಾಗುತ್ತದೆ.

ವಿಧೇಯಕವನ್ನು ಮಂಡಿಸಿದ ನಂತರದ ಹಂತವೆಂದರೆ, ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದು. ವಿಧೇಯಕವನ್ನು ಮಂಡಿಸಿದ ಸದಸ್ಯರು, ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಅಥವಾ ವಿಧೇಯಕದ ಮೇಲೆ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಅದನ್ನು ಕಳುಹಿಸಿಕೊಡಬೇಕೆಂದು ಸೂಚಿಸಬಹುದು. ಸಭಾಪತಿಗಳು ಸೂಚನಾ ಅವಧಿಯನ್ನು ಕೈಬಿಡದಿದ್ದಲ್ಲಿ, ವಿಧೇಯಕವನ್ನು ಮಂಡಿಸಿದ ದಿನದಿಂದ ಏಳು ದಿನಗಳ ಒಳಗಾಗಿ ಅದನ್ನು ಪರಿಶೀಲನೆಗೆ

ತೆಗೆದುಕೊಳ್ಳಲಾಗುವುದಿಲ್ಲ. ಧನವಿನಿಯೋಗ ವಿಧೇಯಕದ ಸಂಬಂಧದಲ್ಲಿ ಈ ಪರಿಮಿತಿಯನ್ನು ವಿಧಿಸಲಾಗುವುದಿಲ್ಲ.

ರಾಜ್ಯ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದಕ್ಕೆ ಸಂಬಂಧಿಸಿದ ವಿಧೇಯಕವು ವೆಚ್ಚದ ವಿವರಗಳನ್ನು ಒಳಗೊಂಡ ವಿತ್ತೀಯ ವಿವರಣಾ ಪಟ್ಟಿಯನ್ನು ಒಳಗೊಂಡಿರಬೇಕಾಗುತ್ತದೆ. ಸಂವಿಧಾನದ 207(3)ನೇ ಅನುಚ್ಛೇದದ ಮೇರೆಗೆ ಅಂಥ ವಿಧೇಯಕಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲು ರಾಜ್ಯಪಾಲರ ಶಿಫಾರಸ್ಸು ಸಹ ಅಗತ್ಯವಾಗಿದೆ. ಅಧೀನ ಶಾಸನ ರಚನೆಗೆ ಸಂಬಂಧಿಸಿದ ಪ್ರಸ್ತಾಪಗಳನ್ನು ಒಳಗೊಂಡ ವಿಧೇಯಕವು, ಅವುಗಳಿಗೆ ಸಂಬಂಧಿಸಿದ ವಿವರಣಾ ಪಟ್ಟಿಯನ್ನು ಒಳಗೊಂಡಿರುವುದು ಅಗತ್ಯ.

ವಿಧೇಯಕವನ್ನು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ಸಭೆಯು ಅಂಗೀಕರಿಸಿದ ನಂತರ ವಿಧೇಯಕವನ್ನು ಖಂಡ–ಖಂಡವಾಗಿ ಪರಿಶೀಲಿಸಬಹುದು ಅಥವಾ ಅದನ್ನು ಆಯ್ಕೆ ಅಥವಾ ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಬಹುದು. ಹಣಕಾಸು ವಿಧೇಯಕಗಳನ್ನು ಜಂಟಿ ಆಯ್ಕೆ ಸಮಿತಿಗೆ ಕಳುಹಿಸಲು ಸಾಧ್ಯವಿಲ್ಲ. ವಿಧೇಯಕವನ್ನು ಭಾಗಶ:ವಾಗಿ ಪರ್ಯಾಲೋಚನೆಗೆ ಕೈಗೆತ್ತಿಕೊಳ್ಳುವ ಹಂತದಲ್ಲಿ ಸದಸ್ಯರು ತಿದ್ದುಪಡಿಗಳನ್ನು ಮಂಡಿಸಬಹುದು. ಯಾವ ದಿನದಂದು ವಿಧೇಯಕವನ್ನು ಪರಿಶೀಲನೆಗೆ ಕೈಗೆತ್ತಿಕೊಳ್ಳಲಾಗುತ್ತದೆಯೋ ಅದಕ್ಕಿಂತ ಒಂದು ದಿನ ಮುಂಚಿತವಾಗಿ ತಿದ್ದುಪಡಿ ಸೂಚನೆಯನ್ನು ನೀಡಬೇಕಾಗುತ್ತದೆ. ಒಂದು ಸದನವು ವಿಧೇಯಕವನ್ನು ಅಂಗೀಕರಿಸಿದ ನಂತರ ಅದನ್ನು ಪರಿಶೀಲನೆಗಾಗಿ ಮತ್ತೊಂದು ಸದನಕ್ಕೆ ಕಳುಹಿಸಲಾಗುವುದು.

ವಿಧೇಯಕವನ್ನು ಆಯ್ಕೆ ಅಥವಾ ಜಂಟಿ ಆಯ್ಕೆ ಸಮಿತಿಗೆ ಒಪ್ಪಿಸಿದರೆ, ಸಮಿತಿಯು, ಸದನ ಅಥವಾ ಸದನಗಳಿಗೆ ವರದಿಯನ್ನು ಸಲ್ಲಿಸಬೇಕು. ಸದನವು ಸಮಿತಿಯ ವರದಿಯನ್ನು ಪರಿಶೀಲಿಸಿದ ನಂತರ ವಿಧೇಯಕವನ್ನು ಪರಿಶೀಲನೆಗೆ ತೆಗೆದುಕೊಂಡು ಮುಂದಿನ ಹಂತಗಳನ್ನು ಅನುಸರಿಸುತ್ತದೆ. ವಿಧೇಯಕಗಳ ಬಗ್ಗೆ ಅಭಿಪ್ರಾಯಗಳನ್ನು ಪಡೆಯುವುದಕ್ಕಾಗಿ ವಿಧೇಯಕವನ್ನು ಒಪ್ಪಿಸಿದರೆ, ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ, ಸದನದ ಮುಂದೆ ಮಂಡಿಸಲಾಗುತ್ತದೆ. ಅದನ್ನು ಪರಿಶೀಲಿಸಿದ ತರುವಾಯ, ಸದನವು, ಸಭಾಪತಿಗಳು ಅನ್ಯಥಾ ನಿರ್ದೇಶಿಸದಿದ್ದಲ್ಲಿ ವಿಧೇಯಕವನ್ನು ಆಯ್ಕೆ ಸಮಿತಿಗೆ ಕಳುಹಿಸಲಾಗುವುದು.

ವಿಧೇಯಕವನ್ನು ಪರಿಶೀಲಿಸಬೇಕೆಂಬ ಪ್ರಸ್ತಾವವನ್ನು ಮಂಡಿಸಿದಾಗ ವಿಧೇಯಕದ ಸಾಮಾನ್ಯ ತತ್ವಗಳನ್ನು ಮಾತ್ರ ಚರ್ಚಿಸಲಾಗುವುದು. ವಿಧೇಯಕವನ್ನು ಖಂಡ–ಖಂಡವಾಗಿ ಪರಿಶೀಲನೆಗೆ ಕೈಗೆತ್ತಿಕೊಳ್ಳುವ ಹಂತದಲ್ಲಿ ಮಾತ್ರ ಅದರ ವಿವರಗಳನ್ನು ಚರ್ಚಿಸಲಾಗುತ್ತದೆ.

ಆಯ್ಕೆ ಅಥವಾ ಜಂಟಿ ಆಯ್ಕೆ ಸಮಿತಿಗಳು ವರದಿ ಮಾಡಿದಂತಹ ವಿಧೇಯಕದ ಸಂಬಂಧದಲ್ಲಿ, ಚರ್ಚೆ ನಡೆಯುತ್ತಿರುವಾಗ ವರದಿಯಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳನ್ನು ಮಾತ್ರ ಪರಿಶೀಲಿಸಲಾಗುವುದು.

ವಿಧೇಯಕವನ್ನು ಅಂಗೀಕರಿಸಬೇಕೆಂಬ ಪ್ರಸ್ತಾವ ಸಭೆಯ ಮುಂದಿದ್ದಾಗ, ವಿಧೇಯಕಕ್ಕೆ ಪರವಾಗಿ ಅಥವಾ ವಿರೋಧವಾಗಿ ಮಾತ್ರ ಚರ್ಚೆಗಳನ್ನು ಮಂಡಿಸಬಹುದಾಗಿದೆ. ಈ ಸಮಯದಲ್ಲಿ ವಿಧೇಯಕದ ವಿವರಗಳನ್ನು ಚರ್ಚಿಸಲಾಗುವುದಿಲ್ಲ.

ವಿಧಾನಸಭೆ/ವಿಧಾನ ಪರಿಷತ್ತಿನಲ್ಲಿ ವಿಧೇಯಕವನ್ನು ಅಂಗೀಕರಿಸಿದ ನಂತರ, ಅದನ್ನು ವಿಧಾನ ಪರಿಷತ್ತಿನ/ವಿಧಾನಸಭೆಯ ಸಹಮತಿಗಾಗಿ ಕಳುಹಿಸಿಕೊಡಲಾಗುವುದು.

ವಿಧಾನಸಭೆಯಿಂದ ಅಂಗೀಕೃತವಾದ (ಹಣಕಾಸು ವಿಧೇಯಕವನ್ನು ಹೊರತುಪಡಿಸಿ) ವಿಧೇಯಕವನ್ನು ವಿಧಾನ ಪರಿಷತ್ತು ತಿರಸ್ಕರಿಸಿದಲ್ಲಿ, ವಿಧಾನಸಭೆಯು ಒಪ್ಪಿಗೆ ನೀಡದ ತಿದ್ದುಪಡಿಯನ್ನು ಪರಿಷತ್ತು ಸೂಚಿಸಿದರೆ ಅಥವಾ ವಿಧಾನಸಭೆ ಮೂರು ತಿಂಗಳವರೆಗೆ ಸದರಿ ವಿಧೇಯಕದ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದಿದ್ದಲ್ಲಿ, ಆಗ ವಿಧಾನಸಭೆಯು ಮತ್ತೆ ವಿಧೇಯಕವನ್ನು ಅಂಗೀಕರಿಸಿ ಅದನ್ನು ಪರಿಷತ್ತಿಗೆ ಕಳುಹಿಸಿಕೊಡಬಹುದು. ಪರಿಷತ್ತು ಮತ್ತೆ ಸದರಿ ವಿಧೇಯಕವನ್ನು ತಿರಸ್ಕರಿಸಿದರೆ ಅಥವಾ ಒಂದು ತಿಂಗಳವರೆಗೆ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ ಅಥವಾ ವಿಧಾನಸಭೆಯು ಒಪ್ಪದ ರೀತಿಯಲ್ಲಿ ತಿದ್ದುಪಡಿ ಸೂಚಿಸಿದರೆ, ಆಗ ಅಂಥ ವಿಧೇಯಕವನ್ನು ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿಯೇ ಉಭಯ ಸದನಗಳೂ ಅಂಗೀಕರಿಸಿವೆ ಎಂಬುದಾಗಿ ಪರಿಗಣಿಸಲಾಗುತ್ತದೆ. ವಿಧಾನ ಪರಿಷತ್ತು ಅಂಗೀಕರಿಸಿ, ವಿಧಾನಸಭೆಗೆ ಕಳುಹಿಸಿದ ವಿಧೇಯಕವನ್ನು ವಿಧಾನಸಭೆ ತಿರಸ್ಕರಿಸಿದರೆ, ಆ ಬಗ್ಗೆ ಯಾವುದೇ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ.

ಹಣಕಾಸು ವಿಧೇಯಕದ ಸಂಬಂಧದಲ್ಲಿ, ವಿಧಾನ ಪರಿಷತ್ತು ಶಿಫಾರಸ್ಸುಗಳನ್ನು ಮಾಡುವ ಅಧಿಕಾರವನ್ನು ಮಾತ್ರ ಹೊಂದಿರುತ್ತದೆ ಮತ್ತು ವಿಧಾನಸಭೆಯು, ವಿಧಾನ ಪರಿಷತ್ತಿನ ಯಾವುದೇ ಶಿಫಾರಸ್ಸುಗಳನ್ನು ಒಪ್ಪಿಕೊಳ್ಳದಿದ್ದರೆ, ಆಗ ವಿಧಾನ ಪರಿಷತ್ತು ಮಾಡಿದ ಯಾವುದೇ ತಿದ್ದುಪಡಿಗಳನ್ನು ಅಳವಡಿಸಿಕೊಳ್ಳದೆ, ವಿಧಾನಸಭೆಯು ವಿಧೇಯಕವನ್ನು ಅಂಗೀಕರಿಸಿದೆಯೆಂದು ಪರಿಗಣಿಸಲಾಗುವುದು. ವಿಧಾನ ಪರಿಷತ್ತು ವಿಧೇಯಕವನ್ನು ಸ್ವೀಕರಿಸಿದ 14 ದಿನಗಳೊಳಗೆ ಅದನ್ನು ವಿಧಾನಸಭೆಗೆ ಹಿಂತಿರುಗಿಸಬೇಕಾಗುತ್ತದೆ. ವಿಧಾನ ಪರಿಷತ್ತು 14 ದಿನಗಳೊಳಗೆ ವಿಧೇಯಕವನ್ನು ಹಿಂತಿರುಗಿಸದಿದ್ದರೆ, ಸದರಿ ಅವಧಿ ಮುಕ್ತಾಯಗೊಂಡ ನಂತರ, ವಿಧೇಯಕವು ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟಿದೆ ಎಂಬುದಾಗಿ ಪರಿಗಣಿಸಲಾಗುತ್ತದೆ.

ವಿಧಾನಮಂಡಲದ ಉಭಯ ಸದನಗಳಿಂದ ಅಂಗೀಕೃತವಾದ ವಿಧೇಯಕವನ್ನು ಅನುಮೋದನೆಗಾಗಿ ರಾಜ್ಯಪಾಲರಿಗೆ ಅಥವಾ ಸಂದರ್ಭಾನುಸಾರ ರಾಷ್ಟ್ರಪತಿಗಳಿಗೆ ಸಲ್ಲಿಸಲಾಗುವುದು. ರಾಜ್ಯಪಾಲರು ಅಥವಾ ರಾಷ್ಟ್ರಪತಿಯು ವಿಧೇಯಕಕ್ಕೆ ಅನುಮತಿ ನೀಡಬಹುದು ಅಥವಾ ಅನುಮತಿಯನ್ನು ತಡೆಹಿಡಿಯಬಹುದು ಸಭೆ ಅಥವಾ ಸದನಗಳು ಆ ವಿಧೇಯಕವನ್ನು ಪುನರ್ ಪರಿಶೀಲಿಸಬೇಕೆಂಬ ಸಂದೇಶದೊಂದಿಗೆ ಅದನ್ನು ಹಿಂದಿರುಗಿಸಬಹುದು. ರಾಜ್ಯಪಾಲರು ಅಥವಾ ರಾಷ್ಟ್ರಪತಿಯು ಉಲ್ಲೇಖಿಸಿದ ಅಂಶಗಳನ್ನು, ವಿಧಾನಸಭೆ ಅಥವಾ ವಿಧಾನ ಪರಿಷತ್ತು ವಿಧೇಯಕಕ್ಕೆ ಸಂಬಂಧಿಸಿದ ತಿದ್ದುಪಡಿಗಳೆಂಬುದಾಗಿ ಪರಿಶೀಲಿಸಬಹುದು, ಮತ್ತೆ ಅಂಗೀಕರಿಸಲಾದಂತಹ ವಿಧೇಯಕವನ್ನು ರಾಜ್ಯಪಾಲರು ಅಥವಾ ರಾಷ್ಟ್ರಪತಿಗೆ ಸಲ್ಲಿಸಲಾಗುವುದು. ಅವರು ಅನುಮತಿ ನೀಡಿದ ನಂತರ, ವಿಧೇಯಕವು ಶಾಸನವಾಗುತ್ತದೆ.

ತಿದ್ದುಪಡಿಗಳು

(ವಿ.ಪ. ನಿಯಮಗಳು 299–302)

ತಿದ್ದುಪಡಿಗಳ ವ್ಯಾಪ್ತಿ:– (1) ತಿದ್ದುಪಡಿ ಉದ್ದೇಶಿತ ಪ್ರಸ್ತಾವಕ್ಕೆ ಸುಸಂಗತವಾಗಿ ಮತ್ತು ಅದರ ವ್ಯಾಪ್ತಿಯೊಳಗಿರತಕ್ಕದ್ದು.

(2) ನಿರಾಕರಿಸುವ ಅಭಿಪ್ರಾಯ ಬರುವಂತಹ ತಿದ್ದುಪಡಿಯನ್ನು ಮಂಡಿಸತಕ್ಕದ್ದಲ್ಲ.

(3) ಒಂದು ಪ್ರಶ್ನೆಯ ಮೇಲಿನ ತಿದ್ದುಪಡಿಯು ಅದೇ ಪ್ರಶ್ನೆಯ ಮೇಲೆ ತೆಗೆದುಕೊಂಡಿರುವ ಹಿಂದಿನ ಯಾವುದೇ ನಿರ್ಣಯಕ್ಕೆ ಅಸಂಗತವಾಗಿರತಕ್ಕದ್ದಲ್ಲ.

ತಿದ್ದುಪಡಿಗಳ ಸೂಚನೆ:– ಒಂದು ಪ್ರಸ್ತಾವದ ತಿದ್ದುಪಡಿಯ ಸೂಚನೆಯನ್ನು, ಸಭಾಪತಿಯವರು, ಅಂತ ಸೂಚನೆಯಿಲ್ಲದೆ ತಿದ್ದುಪಡಿಯನ್ನು ಪ್ರಸ್ತಾವಿಸಲು ಅನುಮತಿಸದ ಹೊರತು, ಪ್ರಸ್ತಾವವನ್ನು ಪರಿಶೀಲಿಸುವ ದಿನಾಂಕಕ್ಕೆ ಒಂದು ದಿನ ಮುಂಚಿತವಾಗಿ ನೀಡತಕ್ಕದ್ದು.

ತಿದ್ದುಪಡಿಗಳ ಆಯ್ಕೆ:– ಸಭಾಪತಿಯವರು, ಯಾವುದೇ ಪ್ರಸ್ತಾವದ ಸಂಬಂಧದಲ್ಲಿ ಪ್ರಸ್ತಾವಿಸಲಾಗುವ ತಿದ್ದುಪಡಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಸಭಾಪತಿಯವರು ಸೂಕ್ತವೆಂದು ಭಾವಿಸಿದರೆ, ಅಂಥ ಸೂಚನೆಯ ಮೇಲೆ ತೀರ್ಮ ತೆಗೆದುಕೊಳ್ಳಲು ತಮಗೆ ಶಕ್ಯವಾಗುವಂತೆ ಅಂಥ ತಿದ್ದುಪಡಿಯ ಸೂಚನೆಯನ್ನು ನೀಡಿರುವ ಯಾರೇ ಸದಸ್ಯನನ್ನು ತಿದ್ದುಪಡಿಯ ಉದ್ದೇಶದ ಬಗ್ಗೆ ವಿವರಣೆ ನೀಡಲು ಕರೆಸಬಹುದು.

ತಿದ್ದುಪಡಿಗಳನ್ನು ಮಂಡಿಸುವುದು:– ಸಭಾಪತಿಯವರು, ತಾವು ಸೂಕ್ತವೆಂದು ಭಾವಿಸಬಹುದಾದ ಕ್ರಮದಲ್ಲಿ ತಿದ್ದುಪಡಿಗಳನ್ನು ಮತಕ್ಕೆ ಹಾಕಬಹುದು.

ಆದರೆ, ಅವರಿಗೆ ತಿದ್ದುಪಡಿಯು ಮಹತ್ವಪೂರ್ಣವಾಗಿಲ್ಲವೆಂದು ಕಂಡುಬಂದರೆ, ಅವರು ತಿದ್ದುಪಡಿಯನ್ನು ಮತಕ್ಕೆ ಹಾಕಲು ನಿರಾಕರಿಸಬಹುದು.

ಅಧ್ಯಾದೇಶಗಳು

(ಅನುಚ್ಛೇದ 213)

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಅಧಿವೇಶನ ನಡೆಯದಿರುವಾಗ ಶಾಸನವನ್ನು ರಚಿಸಬೇಕಾದ ತುರ್ತು ಅವಶ್ಯಕತೆ ಕಂಡುಬಂದರೆ, ರಾಜ್ಯಪಾಲರು ಅಧ್ಯಾದೇಶವನ್ನು ಹೊರಡಿಸುವ ಮೂಲಕ ಶಾಸನ ರಚಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಈ ಅಧ್ಯಾದೇಶವು ವಿಧಾನಮಂಡಲವು ರಚಿಸುವ ಯಾವುದೇ ಒಂದು ಅಧಿನಿಯಮದಂತೆಯೇ ಪರಿಣಾಮಕಾರಿಯಾಗಿರುತ್ತದೆ. ಅಂಥ ಪ್ರತಿಯೊಂದು ಅಧ್ಯಾದೇಶವನ್ನು,

ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಬೇಕಾಗುತ್ತದೆ. ವಿಧಾನಮಂಡಲವು ಮತ್ತೆ ಸಭೆ ಸೇರಿದ ನಂತರದ ಆರು ವಾರಗಳವರೆಗೂ ಅಧ್ಯಾದೇಶವು ಜಾರಿಯಲ್ಲಿರುತ್ತದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತನ್ನು ಬೇರೆ ಬೇರೆ ದಿನಾಂಕಗಳಂದು ಸಮಾವೇಶಗೊಳ್ಳುವಂತೆ ಕರೆಯಲಾಗಿದ್ದರೆ, ಆ ದಿನಾಂಕಗಳಲ್ಲಿ ಯಾವುದು ನಂತರದ್ದೋ ಆ ದಿನಾಂಕದಿಂದ ಆರು ವಾರಗಳ ಅವಧಿಯನ್ನು ಲೆಕ್ಕಹಾಕಬಹುದು. ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳು ಅಧ್ಯಾದೇಶದ ಉಪಬಂಧಗಳನ್ನು ಒಳಗೊಂಡಿರುವ ವಿಧೇಯಕವನ್ನು ಆರು ತಿಂಗಳ ಅವಧಿಯು ಮುಕ್ತಾಯವಾಗುವುದರೊಳಗೆ ಅಂಗೀಕರಿಸಬಹುದು. ಹೀಗೆ ಗೊತ್ತುಪಡಿಸಿದ ಅವಧಿಯೊಳಗೆ ವಿಧೇಯಕವನ್ನು ಅಂಗೀಕರಿಸದಿದ್ದಲ್ಲಿ, ಅಧ್ಯಾದೇಶವು ತಂತಾನೇ ಕೊನೆಗೊಳ್ಳುತ್ತದೆ. ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆಯೇ ವಿಧೇಯಕವನ್ನು ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಮಂಡಿಸಿದಾಗಲೆಲ್ಲಾ, ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಅನಿವಾರ್ಯವಾದಂತಹ ತುರ್ತು ಪರಿಸ್ಥಿತಿಗಳನ್ನು ವಿವರಿಸುವ ವಿವರಣೆಯನ್ನು ವಿಧೇಯಕದ ಜೊತೆಗೆ ವಿಧಾನ ಪರಿಷತ್ತಿನ ಮುಂದೆ ಮಂಡಿಸುವುದು ಅಗತ್ಯ. ಅಧ್ಯಾದೇಶವು ವಿಧಾನಸಭೆಯ ಮುಂದೆ ಈಗಾಗಲೇ ಮಂಡಿಸಲಾಗಿರುವ ವಿಧೇಯಕದ ಉಪಬಂಧಗಳನ್ನು ಒಳಗೊಂಡಿದ್ದರೆ, ಆ ಅಧ್ಯಾದೇಶವನ್ನು ಹೊರಡಿಸಿದ ನಂತರ ನಡೆಯುವ ಮೊದಲನೇ ಅಧಿವೇಶನದಲ್ಲಿ ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಅನಿವಾರ್ಯವಾದಂತಹ ತುರ್ತು ಸಂದರ್ಭಗಳನ್ನು ವಿವರಿಸುವ ವಿವರಣೆಯನ್ನು ವಿಧಾನ ಪರಿಷತ್ತಿನ ಮುಂದೆ ಮಂಡಿಸುವುದು ಅಗತ್ಯ.

ರಾಜ್ಯಪಾಲರು ಹೊರಡಿಸಿದ ಅಧ್ಯಾದೇಶವನ್ನು ಅನುಮೋದಿಸದಿರುವ ಅಧಿಕಾರ ಸಹ ವಿಧಾನಮಂಡಲಕ್ಕಿದೆ. ಅಧ್ಯಾದೇಶವನ್ನು ಅನುಮೋದಿಸದಿರುವುದಕ್ಕೆ ಸಂಬಂಧಿಸಿದ ಪ್ರಸ್ತಾಪವು ಬಂದಲ್ಲಿ ಅದನ್ನು ವಿಧೇಯಕದೊಡನೆಯೇ ಚರ್ಚಿಸಲಾಗುವುದು. ಚರ್ಚೆಯ ಕೊನೆಯಲ್ಲಿ ಅಧ್ಯಾದೇಶವನ್ನು ಅನುಮೋದಿಸದಿರುವುದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಮೊದಲು ಸದನದ ಮತಕ್ಕೆ ಹಾಕಲಾಗುವುದು. ಪ್ರಸ್ತಾವಕ್ಕೆ ಸೋಲುಂಟಾದರೆ, ಆಗ ವಿಧೇಯಕವನ್ನು ಪರಿಶೀಲಿಸಬೇಕೆಂಬ ಪ್ರಸ್ತಾವದ ಬಗ್ಗೆ ಸಭೆಯ ಮತವನ್ನು ಪಡೆಯಲಾಗುವುದು. ಆದರೂ, ಅಸಮ್ಮತಿ ಸೂಚಿಸುವ ಪ್ರಸ್ತಾವವನ್ನು ಅಂಗೀಕರಿಸಿದರೆ, ವಿಧೇಯಕವು ತಾನಾಗಿಯೇ ಬಿದ್ದು ಹೋಗುತ್ತದೆ.

ರಾಜ್ಯ ವಿಧಾನಮಂಡಲದ ಅನುಮತಿಯಿಲ್ಲದೆ ಸರ್ಕಾರಕ್ಕೆ ಅಗತ್ಯವಾದ ಹಣವನ್ನು ಬಳಸಬಾರದೆಂಬ ನೀತಿಗೆ ಅನುಗುಣವಾಗಿ ರಾಜ್ಯ ಸಂಚಿತ ನಿಧಿಯಿಂದ ಹಣವನ್ನು ವಿನಿಯೋಗಿಸುವುದಕ್ಕೆ ಸಂಬಂಧಿಸಿದ ಅಧ್ಯಾದೇಶಗಳನ್ನು ಹೊರಡಿಸಲಾಗುವುದಿಲ್ಲ.

ಅಧೀನ ಶಾಸನ ರಚನೆ

(ವಿ.ಪ. ನಿಯಮಗಳು 126 – 131)

ಸಂವಿಧಾನದ ಮೇರೆಗೆ ಅಥವಾ ವಿಧಾನಮಂಡಲ ಅಥವಾ ಸಂಸತ್ತಿನ ಯಾವುದೇ ಒಂದು ಅಧಿನಿಯಮದ ಮೂಲಕ ಪ್ರದತ್ತವಾದ ಪ್ರತ್ಯಾಯೋಜಿತ ಅಧಿಕಾರಗಳಿಗೆ ಅನುಸಾರವಾಗಿ ಕಾರ್ಯಾಂಗವು ರಚಿಸಿದ ಅಥವಾ ಜಾರಿಗೊಳಿಸಿದ ನಿಯಮ, ನಿಬಂಧನೆ, ಉಪ ನಿಯಮಗಳನ್ನು ಅಧೀನ ಶಾಸನ ರಚನೆಯೆಂದು ಕರೆಯಲಾಗಿದೆ. ಈ ನಿಯಮ ಮುಂತಾದವುಗಳನ್ನು ರೂಪಿಸಲು ಅವಕಾಶ ಕಲ್ಪಿಸಿರುವ ಅಧಿನಿಯಮಗಳು, ಆ

ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವುದಕ್ಕೆ ಅವಕಾಶ ಕಲ್ಪಿಸುತ್ತವೆ. ಈ ರೀತಿ ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸುವ ಈ ಪದ್ಧತಿಯು ಕಾರ್ಯಾಂಗದ ಈ ರೀತಿ ಅಧಿಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳಲು ವಿಧಾನಮಂಡಲಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ನಿಯಮಗಳನ್ನು ನಿರ್ದಿಷ್ಟ ಅವಧಿಯವರೆಗೆ ವಿಧಾನಮಂಡಲದಲ್ಲಿರಿಸಬೇಕೆಂದು ಅಧಿನಿಯಮದಲ್ಲಿ ಹೇಳಲಾಗಿದೆ. ಅಲ್ಲದೆ, ಸದರಿ ನಿಯಮಗಳಿಗೆ ತಿದ್ದುಪಡಿ ಸೂಚಿಸಲೂ ಸಹ ವಿಧಾನಮಂಡಲಕ್ಕೆ ಅಧಿಕಾರವಿರುತ್ತದೆ.

ನಿಯಮಗಳನ್ನು ಮಂಡಿಸಿದ ನಂತರ, ಸದಸ್ಯರು ಅವುಗಳಿಗೆ ತಿದ್ದುಪಡಿಗಳನ್ನು ಸೂಚಿಸಬಹುದು. ಸಭಾಪತಿಯವರು ಸಭಾನಾಯಕರೊಂದಿಗೆ ಸಮಾಲೋಚನೆ ನಡೆಸಿ, ತಿದ್ದುಪಡಿಗಳ ಪರಿಶೀಲನೆ ಮತ್ತು ಅನುಮೋದನೆಗೆ ಸಮಯವನ್ನು ಗೊತ್ತುಪಡಿಸಬಹುದು. ಒಂದು ಸದನವು ತಿದ್ದುಪಡಿಗಳನ್ನು ಅನುಮೋದಿಸಿದ ನಂತರ ಮತ್ತೊಂದು ಸದನಕ್ಕೆ ಅದನ್ನು ಕಳುಹಿಸಲಾಗುತ್ತದೆ. ಮತ್ತೊಂದು ಸದನವೂ ಸಹ ತಿದ್ದುಪಡಿಗಳನ್ನು ಅನುಮೋದಿಸಿದರೆ, ಅವುಗಳನ್ನು ಅಗತ್ಯ ಕ್ರಮಕ್ಕಾಗಿ ಸಂಬಂಧಪಟ್ಟ ಸಚಿವರಿಗೆ ಕಳುಹಿಸಿಕೊಡಲಾಗುವುದು. ಒಂದು ಸದನದಲ್ಲಿ ಅಂಗೀಕೃತವಾದ ತಿದ್ದುಪಡಿಗಳನ್ನು ಮತ್ತೊಂದು ಸದನವು ತಿರಸ್ಕರಿಸಿದಲ್ಲಿ, ಆಗ ವಿಧಾನಮಂಡಲವು ತಿದ್ದುಪಡಿಗಳನ್ನು ತಿರಸ್ಕರಿಸಿದೆಯೆಂದು ಪರಿಗಣಿಸಲಾಗುವುದು.

ಅರ್ಜಿಗಳು

(ವಿ.ಪ. ನಿಯಮಗಳು 133–142)

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚಿಸುವ ಮತ್ತು ಸಾರ್ವಜನಿಕ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಕುಂದುಕೊರತೆಗಳನ್ನು ಪ್ರಕಟಪಡಿಸಿ ಆ ಬಗ್ಗೆ ರಚನಾತ್ಮಕ ಸಲಹೆ–ಸೂಚನೆಗಳನ್ನು ನೀಡುವ ದೃಷ್ಟಿಯಿಂದ ವಿಧಾನಮಂಡಲಕ್ಕೆ ಅರ್ಜಿಗಳನ್ನು ಸಲ್ಲಿಸುವ ಅಧಿಕಾರ ಪ್ರತಿಯೊಬ್ಬ ನಾಗರಿಕನಿಗೂ ಇರುತ್ತದೆ. ಸಭಾಪತಿಯವರ ಸಮ್ಮತಿಯೊಂದಿಗೆ ಈ ಮುಂದಿನ ಯಾವುದೇ ವಿಷಯಗಳ ಬಗ್ಗೆ ಸದನಕ್ಕೆ ಅರ್ಜಿಗಳನ್ನು ಸಲ್ಲಿಸಬಹುದು.

i. ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಲಾಗಿರುವ ಅಥವಾ ಸದನದಲ್ಲಿ ಮಂಡಿಸಲಾದ ಒಂದು ವಿಧೇಯಕಕ್ಕೆ ಸಂಬಂಧಿಸಿದಂತೆ;

ii. ಸದನದ ಮುಂದೆ ಇತ್ಯರ್ಥವಾಗದೆ ಉಳಿದಿರುವ ಕಾರ್ಯಕಲಾಪಗಳಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ; ಮತ್ತು

iii. ಕೆಳಕಂಡ ವಿಷಯಗಳ ಹೊರತು ಸಾರ್ವಜನಿಕ ದೃಷ್ಟಿಯಿಂದ ಮಹತ್ವವಾದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ;

(ಎ) ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಅಥವಾ ವಿಚಾರಣಾ ನ್ಯಾಯಾಲಯದ ಅಥವಾ ಕಾನೂನುಬದ್ಧ ನ್ಯಾಯಾಧೀಕರಣದ ಅಥವಾ ಪ್ರಾಧಿಕಾರ ಅಥವಾ ಅರೆ ನ್ಯಾಯಿಕ ಸಂಸ್ಥೆ ಅಥವಾ ಆಯೋಗದ ಗಮನಕ್ಕೆ ಬರುವ ವಿಷಯಕ್ಕೆ ಸಂಬಂಧಿಸಿದಂತೆ;

(ಬಿ) ಪ್ರಮುಖ ಪ್ರಸ್ತಾವ ಅಥವಾ ನಿರ್ಣಯದ ಮೂಲಕ ಚರ್ಚಿಸಬಹುದಾದ ವಿಷಯಕ್ಕೆ ಸಂಬಂಧಿಸಿದಂತೆ; ಅಥವಾ

(ಸಿ) ರಾಜ್ಯ ಸರ್ಕಾರ ರಚಿಸಿರುವ ನಿಯಮಗಳು, ನಿಬಂಧನೆಗಳು ಉಪ ನಿಯಮಗಳು ಅಥವಾ ಅಂಥ ನಿಯಮಗಳು, ನಿಬಂಧನೆಗಳು ಮುಂತಾದವುಗಳನ್ನು ರಚಿಸುವುದಕ್ಕೆ ಅಧಿಕಾರವನ್ನು ಪಡೆದಿರುವಂಥ ಪ್ರಾಧಿಕಾರಗಳು ರೂಪಿಸಿದ ನಿಯಮಗಳು, ನಿಬಂಧನೆಗಳು, ಉಪ ನಿಯಮಗಳು ಸೇರಿದಂತೆ ಕಾನೂನಿನ ಮೇರೆಗೆ ಪರಿಹಾರ ದೊರೆಯುವ ವಿಷಯಗಳು.

–ಪ್ರತಿಯೊಂದು ಅರ್ಜಿಯು ಗೌರವಯುತ ಹಾಗೂ ಸಭ್ಯ ಭಾಷೆಯಲ್ಲಿರಬೇಕು.

ಅರ್ಜಿಯು ಆಂಗ್ಲ ಅಥವಾ ಕನ್ನಡ ಭಾಷೆಯಲ್ಲಿ ಇರಬೇಕು. ಅರ್ಜಿಯು ಇತರ ಭಾಷೆಯಲ್ಲಿದ್ದಲ್ಲಿ, ಅದರ ಆಂಗ್ಲ ಅಥವಾ ಕನ್ನಡ ಭಾಷಾಂತರದ ಪ್ರತಿಯನ್ನು ಅದು ಒಳಗೊಂಡಿರಬೇಕು. ಅರ್ಜಿಗೆ ಅರ್ಜಿದಾರರು ಸಹಿ ಹಾಕಿರಬೇಕು. ಅರ್ಜಿಯನ್ನು ಕಳುಹಿಸುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪೂರ್ಣ ಹೆಸರು ಹಾಗೂ ವಿಳಾಸವನ್ನು ಅರ್ಜಿಯಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ವಿಧಾನಸಭೆ/ವಿಧಾನ ಪರಿಷತ್ತಿನ ಪರಿಶೀಲನಾ ವ್ಯಾಪ್ತಿಗೊಳಪಟ್ಟಿರುವ ವಿಷಯಕ್ಕೆ ಸಂಬಂಧಿಸಿರಬೇಕು. ಪ್ರತಿಯೊಂದು ಅರ್ಜಿಯನ್ನು ಸದನದ ಹೆಸರಿಗೆ ಬರೆದಿರತಕ್ಕದ್ದು ಮತ್ತು ಪ್ರತಿಯೊಂದು ಅರ್ಜಿಯು ಯಾವ ವಿಷಯಕ್ಕೆ ಸಂಬಂಧಪಟ್ಟಿದೆ ಎಂಬುದನ್ನೂ, ಅರ್ಜಿದಾರನ ನಿರ್ದಿಷ್ಟ ಉದ್ದೇಶವನ್ನೂ ವ್ಯಕ್ತಪಡಿಸುವ ಕೋರಿಕೆಯೊಂದಿಗೆ ಮುಕ್ತಾಯವಾಗಿರತಕ್ಕದ್ದು. ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ. ಅರ್ಜಿಯನ್ನು ಸಲ್ಲಿಸುವ ಸದಸ್ಯರು, ಯಾವ ಪಕ್ಷಕಾರರಿಂದ ಅರ್ಜಿ ಬಂದಿದೆಯೋ ಅಂಥ ಪಕ್ಷಕಾರರ ಹೇಳಿಕೆಗೆ ಮತ್ತು ಅರ್ಜಿಯ ವಸ್ತು ವಿಷಯಕ್ಕೆ ನೇರವಾಗಿ ಜವಾಬ್ದಾರರಾಗುತ್ತಾರೆ. ಸದನಕ್ಕೆ ಸಲ್ಲಿಕೆಯಾದ ಎಲ್ಲಾ ಅರ್ಜಿಗಳನ್ನು ಅರ್ಜಿಗಳ ಸಮಿತಿಯು ಪರಿಶೀಲಿಸುತ್ತದೆ.

ಸಮಿತಿಯು ಹಲವಾರು ವ್ಯಕ್ತಿಗಳು, ವಿವಿಧ ಸಂಘ ಸಂಸ್ಥೆಗಳು, ಶಾಸಕರು ಮತ್ತು ಸಭಾಪತಿಗಳು ಬರೆದ ಮತ್ತು ಸಭಾಪತಿಯವರು ಉಲ್ಲೇಖಿಸಿದಂತಹ, ಅರ್ಜಿಗಳಿಗೆ ಸಂಬಂಧಿಸಿದ ನಿಯಮಗಳ ವ್ಯಾಪ್ತಿಯಲ್ಲಿ ಬರೆದ ಮನವಿಗಳು, ಪತ್ರಗಳು ಮತ್ತು ತಂತಿಗಳನ್ನು ಪರಿಶೀಲಿಸುವ ಸಲುವಾಗಿ ಅಗತ್ಯವಾದಷ್ಟು ಸಾರಿ ಆಗಾಗೆ ಸಭೆಗಳನ್ನು ಸೇರಿ ಅವುಗಳ ವಿಲೆಗಾಗಿ ನಿರ್ದೇಶನಗಳನ್ನು ನೀಡತಕ್ಕದ್ದು.

ಆದರೆ ಈ ಮುಂದಿನ ಪ್ರವರ್ಗಗಳಲ್ಲಿ ಬರುವ ಮನವಿಗಳನ್ನು ಸಮಿತಿಯು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ, ಆದರೆ ಅವುಗಳನ್ನು ಸಚಿವಾಲಯದಲ್ಲಿ ದಾಖಲು ಮಾಡಿಕೊಳ್ಳತಕ್ಕದ್ದು:–

i. ಅನಾಮಧೇಯ ಪತ್ರಗಳು ಅಥವಾ ರವಾನೆದಾರರ ಹೆಸರು ಮತ್ತು ವಿಳಾಸವನ್ನು ನೀಡದಿರುವ ಅಥವಾ ಅಸ್ಪಷ್ಟವಾಗಿರುವ ಪತ್ರಗಳು; ಮತ್ತು

ii. ಕುಂದುಕೊರತೆಗಳ ನಿವಾರಣೆಗೆ ಕೋರಿರುವಂಥ ಪ್ರತಿಯ ಮೇಲೆ ನಿರ್ದಿಷ್ಟ ಮನವಿ ಮಾಡಿಕೊಂಡಿದ್ದ ಹೊರತು ಸಭಾಪತಿ ಅಥವಾ ಸದನವನ್ನು ಹೊರತುಪಡಿಸಿ ಇತರೆ ಪ್ರಾಧಿಕಾರಿಗಳ ವಿಳಾಸಕ್ಕೆ ಸಲ್ಲಿಸಿದ ಪತ್ರಗಳ ಹಿಂಬರಹ ಪ್ರತಿಗಳು.

ಅರ್ಜಿಯನ್ನು ಸಲ್ಲಿಸುವುದು

ಸದಸ್ಯರು ತಾವೇ ಅರ್ಜಿಯನ್ನು ಸಲ್ಲಿಸಬಹುದು ಅಥವಾ ಕಾರ್ಯದರ್ಶಿಯವರಿಗೆ ಸಲ್ಲಿಸಬಹುದು. ಕಾರ್ಯದರ್ಶಿಯವರು ಅದನ್ನು ಸದನಕ್ಕೆ ವರದಿ ಮಾಡುವರು. ಅನುಸೂಚಿಯಲ್ಲಿ ನೀಡಲಾದ ನಮೂನೆಯಲ್ಲಿ ವರದಿಯನ್ನು ಮಾಡತಕ್ಕದ್ದು. ಅಂಥ ಮನವಿಯ ಮೇಲೆ ಅಥವಾ ವರದಿಯ ಸಲ್ಲಿಕೆಯ ಮೇಲೆ ಯಾವ ಚರ್ಚೆ ನಡೆಯುವುದಕ್ಕೂ ಅವಕಾಶವಿರುವುದಿಲ್ಲ. ಅರ್ಜಿಯಲ್ಲಿ ನಮೂದಿಸಿರುವ ವಿಷಯಕ್ಕೆ ಮತ್ತು ಅದರ ಸತ್ಯಾಸತ್ಯತೆಗೆ ಸದಸ್ಯರು ನೇರವಾಗಿ ಜವಾಬ್ದಾರರಾಗಿರುತ್ತಾರೆ.

ಅರ್ಜಿ ನಮೂನೆ

ಸದನದಲ್ಲಿ ಅರ್ಜಿಯನ್ನು ಸಲ್ಲಿಸುವ ಸದಸ್ಯರು ಈ ಮುಂದಿನ ನಮೂನೆಯಲ್ಲಿ ಮಾತ್ರ ವಿವರಣೆಯನ್ನು ನೀಡಬೇಕು:–

"ಮಾನ್ಯರೇ, ನಾನು, _____ ವಿಷಯದ ಸಂಬಂಧದಲ್ಲಿ ಅರ್ಜಿದಾರರಾದ _____ ಅವರು ಸಹಿ ಮಾಡಿರುವ ಅರ್ಜಿಯನ್ನು ಒಪ್ಪಿಸುತ್ತೇನೆ.

ಸಮಿತಿಗೆ ಒಪ್ಪಿಸುವುದು

ಸದಸ್ಯರು ಅರ್ಜಿಯನ್ನು ಸಲ್ಲಿಸಿದ ನಂತರ ಅಥವಾ ಸಂದರ್ಭಾನುಸಾರ ಕಾರ್ಯದರ್ಶಿಯವರು ವರದಿ ಮಾಡಿದ ನಂತರ ಪ್ರತಿಯೊಂದು ಅರ್ಜಿಯನ್ನು ಅರ್ಜಿಗಳ ಸಮಿತಿಗೆ ಉಲ್ಲೇಖಿಸತಕ್ಕದ್ದು.

ನಿರ್ಣಯಗಳು

(ವಿ.ಪ. ನಿಯಮಗಳು 143–155)

ಸದನದ ಮುಂದೆ ಅಭಿಪ್ರಾಯವನ್ನು ವ್ಯಕ್ತಪಡಿಸಲು, ಶಿಫಾರಸ್ಸು ಮಂಡಿಸಲು, ಒಂದು ಅಧಿನಿಯಮ ಅಥವಾ ಸರ್ಕಾರದ ಕಾರ್ಯನೀತಿಯ ಅನುಮೋದನೆ ಪಡೆದು ಅಥವಾ ಅನುಮೋದನೆ ಪಡೆಯದೆ ಇರುವ ಬಗ್ಗೆ ದಾಖಲೆ ಇಡಲು, ಸಂದೇಶವನ್ನು ತಿಳಿಸಲು ಅಥವಾ ಆದೇಶಿಸಲು ಅಥವಾ ಕ್ರಮವೊಂದನ್ನು ಕೈಗೊಳ್ಳುವಂತೆ ಒತ್ತಾಯಿಸಲು ಅಥವಾ ವಿನಂತಿಸಲು ಮಂಡಿಸುವ ಪ್ರಸ್ತಾವದ ಮತ್ತೊಂದು ರೂಪವೇ ನಿರ್ಣಯ. ಚರ್ಚೆಯ ತರುವಾಯ, ಸದಸ್ಯರು ನಿರ್ಣಯವನ್ನು ಹಿಂತೆಗೆದುಕೊಳ್ಳಬಹುದು ಅಥವಾ ವಿಧಾನ ಪರಿಷತ್ತಿನ ಕಾರ್ಯವಿಧಾನ ನಿಯಮಗಳಿಗನುಗುಣವಾಗಿ ಸದನದ ಮತಕ್ಕೆ ಮತ್ತು ಸದನದ ನಿರ್ಣಯಕ್ಕಾಗಿ ಮಂಡಿಸಬಹುದು. ನಿರ್ಣಯವೊಂದರ ಸೂಚನೆಯನ್ನು ಅದು ಆಯ್ಕೆ ಮಾಡುವ ದಿನಾಂಕಕ್ಕಿಂತ ಕನಿಷ್ಠ 7 ದಿನಗಳಿಗೆ ಮುಂಚಿತವಾಗಿಯಾದರೂ ಸಲ್ಲಿಸಬೇಕು. ಕಾರ್ಯವಿಧಾನ ನಿಯಮಗಳ ಮೂಲಕ ನಿರ್ಣಯವನ್ನು ಅಂಗೀಕರಿಸುವುದಕ್ಕಾಗಿ ಕೆಲವು ಷರತ್ತುಗಳನ್ನು ವಿಧಿಸಲಾಗಿದೆ ಮತ್ತು ಅದಕ್ಕನುಸಾರವಾಗಿ ಒಂದು ನಿರ್ಣಯವು ಖಚಿತವಾಗಿ ಒಂದೇ ಒಂದು ವಿಷಯದ ಬಗ್ಗೆ ಸ್ಪಷ್ಟವಾಗಿ ತಿಳಿಸುವಂತಿರಬೇಕು ಮತ್ತು ವಾದಗಳು, ನಿರ್ಣಯಗಳು, ವ್ಯಂಗ್ಯವಾದ ಅಭಿವ್ಯಕ್ತಿಗಳು, ಆರೋಪಗಳು ಅಥವಾ ಮಾನನಷ್ಟಕರ ಹೇಳಿಕೆಗಳ ವಿಷಯ ಇರತಕ್ಕದ್ದಲ್ಲ. ಯಾವುದೇ ವ್ಯಕ್ತಿಯ ಪದೀಯ ಅಥವಾ ಸರ್ಕಾರಿ ಸಾಮರ್ಥ್ಯಕ್ಕೆ ಸಂಬಂಧಪಡದೇ ಇರುವ ಆತನ ಶೀಲ ಅಥವಾ ಚಾರಿತ್ರ್ಯದ ಬಗ್ಗೆ ಉಲ್ಲೇಖಿಸತಕ್ಕದ್ದಲ್ಲ. ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗಿರುವ ವಿಷಯಕ್ಕೆ ಸಂಬಂಧಪಟ್ಟಿರತಕ್ಕದ್ದಲ್ಲ.

ಸರ್ಕಾರೇತರ ಸದಸ್ಯರಿಂದ ಬಂದ ನಿರ್ಣಯ ಸೂಚನೆಗಳ ಚರ್ಚೆಗಳಿಗಾಗಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ಪ್ರತಿ 14 ದಿನಗಳಲ್ಲಿ ಕನಿಷ್ಠ ಎರಡು ದಿನಗಳನ್ನು ವಿಧಾನ ಪರಿಷತ್ತಿನ ಕಾರ್ಯವಿಧಾನ ನಿಯಮಗಳಲ್ಲಿ ವಿಧಿಸಲಾಗಿದೆ. ಅಂದರೆ ಸ್ಥೂಲವಾಗಿ ವಾರದಲ್ಲಿ ಒಂದು ದಿನವನ್ನು ಸರ್ಕಾರೇತರ ಕಾರ್ಯಕಲಾಪಗಳಿಗಾಗಿ ಅನುವು ಮಾಡಿಕೊಟ್ಟಂತಾಗುತ್ತದೆ. ಪ್ರತಿ ಶುಕ್ರವಾರದಂದು ಕೊನೆಯ ಎರಡೂವರೆ ಗಂಟೆಯನ್ನು ಸರ್ಕಾರೇತರ ಕಾರ್ಯಕಲಾಪಗಳ ಚರ್ಚೆಗಾಗಿ ಮೀಸಲಾಗಿಡಬೇಕೆಂದು ವಿಧಾನ ಪರಿಷತ್ತಿನ ಕಾರ್ಯವಿಧಾನ ನಿಯಮಗಳಲ್ಲಿ ವಿಧಿಸಲಾಗಿದೆ. ವಿಧಾನ ಪರಿಷತ್ತಿಗೆ ಸಂಬಂಧಿಸಿದಂತೆ ಅಧಿವೇಶನದ ಕಾರ್ಯಕಲಾಪಗಳ ತಾತ್ಕಾಲಿಕ ಕಾರ್ಯಕ್ರಮವನ್ನು ಹೊರಡಿಸುವಾಗ, ಅದರಲ್ಲಿ ಸರ್ಕಾರೇತರ ಕಾರ್ಯಕಲಾಪಗಳಿಗೆ ಮೀಸಲಿರಿಸಿರುವ ದಿನಗಳನ್ನು ಸೂಚಿಸಿರಲಾಗುತ್ತದೆ. ಸರ್ಕಾರೇತರ ಕಾರ್ಯಕಲಾಪಗಳಿಗೆ ಮೀಸಲಾಗಿರಿಸಿದ ಪ್ರತಿಯೊಂದು ದಿನಕ್ಕೆ ಸಂಬಂಧಪಟ್ಟ ನಿರ್ಣಯ ಸೂಚನೆಗಳನ್ನು ಸದಸ್ಯರು 7 ದಿನಗಳಿಗೆ ಮುಂಚಿತವಾಗಿಯೇ ಸಲ್ಲಿಸತಕ್ಕದ್ದು. ನಿರ್ಣಯಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು ಸೂಚಿಸುವ ಪ್ರಕಟಣೆಯನ್ನು ವಿಧಾನ ಪರಿಷತ್ತಿನ ಪ್ರಶ್ನೆಗಳ ಶಾಖೆಯಿಂದ ಹೊರಡಿಸಲಾಗುತ್ತದೆ. ಸದಸ್ಯರು ಒಂದು ನಿರ್ದಿಷ್ಟ ದಿನಕ್ಕೆ ಒಂದು ನಿರ್ಣಯ ಸೂಚನೆಯನ್ನು ಸಲ್ಲಿಸಬಹುದು. ಸದಸ್ಯರು ಕಳುಹಿಸಿದ ನಿರ್ಣಯ ಸೂಚನೆಗಳನ್ನು ಸಭಾಪತಿಯವರು ಅಂಗೀಕರಿಸಿದ ತರುವಾಯ ನಿರ್ಣಯಗಳನ್ನು ಚರ್ಚೆಗೆ ಆಯ್ದುಕೊಳ್ಳಬೇಕಾದ ಅನುಕ್ರಮವನ್ನು ನಿರ್ಧರಿಸಲು ಆಯ್ಕೆಯ ಕಾರ್ಯ ನಡೆಯುತ್ತದೆ. ಸದಸ್ಯರುಗಳು ಪ್ರಧಾನ ನಿರ್ಣಯದ ವ್ಯಾಪ್ತಿಯಲ್ಲಿರುವಂತೆಯೇ ನಿರ್ಣಯಗಳಿಗೆ ತಿದ್ದುಪಡಿ ಸೂಚನೆಯನ್ನು ನೀಡಬಹುದು. ಸದಸ್ಯನು ತನ್ನ ನಿರ್ಣಯವನ್ನು ಮಂಡಿಸುವ ಸಲುವಾಗಿ ಉಪಸ್ಥಿತನಿರಲು ಸಾಧ್ಯವಾಗದೇ ಹೋದರೆ, ತನ್ನ ನಿರ್ಣಯವನ್ನು ಮಂಡಿಸಲು ಬೇರೊಬ್ಬ ಸದಸ್ಯನಿಗೆ ಅವಕಾಶವನ್ನು ನೀಡಬಹುದು. ನಿರ್ಣಯಗಳ ಚರ್ಚೆಗಾಗಿ ನಿಯಮಗಳು ಕಾಲಮಿತಿಯನ್ನು ಸಹ ನಿಯಮಿಸಿವೆ. ಅದಕ್ಕನುಸಾರವಾಗಿ ನಿರ್ಣಯವನ್ನು ಮಂಡಿಸುವವನು ತನ್ನ ನಿರ್ಣಯವನ್ನು ಮಂಡಿಸಲು 30 ನಿಮಿಷವನ್ನು ತೆಗೆದುಕೊಳ್ಳಬಹುದು. ನಿರ್ಣಯದ ಬಗ್ಗೆ ಇತರರಿಗೆ 15 ನಿಮಿಷಗಳ ಕಾಲ ಮಾತನಾಡಲು ಅನುಮತಿ ನೀಡಲಾಗಿದೆ. ಚರ್ಚೆಯು ವಿಧಾನ ಪರಿಷತ್ತಿನಲ್ಲಿ ಸಚಿವರ ಉತ್ತರವೂ ಸೇರಿದಂತೆ 5 ಗಂಟೆಗಳಿಗಿಂತ ಹೆಚ್ಚಾಗಿರಕೂಡದು. ನಿರ್ಣಯ ಕುರಿತು ಚರ್ಚೆ ಮತ್ತು ಸಂಬಂಧಪಟ್ಟ ಸಚಿವರ ಉತ್ತರದ ನಂತರ ನಿರ್ಣಯವನ್ನು ಹಿಂತೆಗೆದುಕೊಳ್ಳುವುದಾಗಲಿ ಅಥವಾ ಸದನದಲ್ಲಿ ಮತಕ್ಕಾಗಿ ಒತ್ತಾಯಿಸುವುದಾಗಲಿ ಸದಸ್ಯರಿಗೆ ಸೇರಿದ್ದು, ಸದನದ ನಿರ್ಣಯವನ್ನು ಅಂಗೀಕರಿಸಿದರೆ, ಅಗತ್ಯ ಕ್ರಮವನ್ನು ಕೈಗೊಳ್ಳುವ ಸಲುವಾಗಿ ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸಲಾಗುತ್ತದೆ.

ಪ್ರಸ್ತಾವಗಳು

(ವಿ.ಪ.ನಿಯಮಗಳು 156–163)

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿ 'ಪ್ರಸ್ತಾವ' ಎಂಬ ಪದಕ್ಕೆ ವಿವರಣೆಯನ್ನು ನೀಡಿಲ್ಲ. ಆದರೂ, ಸದನದ ತೀರ್ಮಾನವನ್ನು ಪಡೆಯುವ ಸಲುವಾಗಿ ಸದನಕ್ಕೆ ಸಲ್ಲಿಸಿದ ಯಾವುದಾದರೊಂದು ಸಲಹೆ ಎಂಬ ಅರ್ಥ ಇದಕ್ಕೆ ಸಲ್ಲುತ್ತದೆ. ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳಲ್ಲಿ ಉಪಬಂಧಿಸಿದ ಕೆಲವು ವಿಷಯಗಳ ಹೊರತು, ಸದನದಲ್ಲಿನ ಚರ್ಚೆಯು ಯಾವಾಗಲೂ ಒಂದು ನಿರ್ದಿಷ್ಟ ಪ್ರಸ್ತಾವದ ಮೇಲೆ ಪ್ರಾರಂಭವಾಗುತ್ತದೆ. ಗಮನ ಸೆಳೆಯುವ ಸೂಚನೆಗಳು, ಅಲ್ಪಾವಧಿಯ ಚರ್ಚೆ, ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ ಇವು ಸಾಮಾನ್ಯ ನಿಯಮಗಳಿಗೆ ಒಳಪಟ್ಟಿರುವುದಿಲ್ಲ.

ಒಬ್ಬ ಸದಸ್ಯ ಒಂದು ಪ್ರಸ್ತಾವವನ್ನು ಸೂಚಿಸಬಯಸಿದರೆ, ಅವರು ಆ ಬಗ್ಗೆ ಸೂಚನೆಯನ್ನು ಕಾರ್ಯದರ್ಶಿಯವರಿಗೆ ನೀಡಬೇಕಾಗುತ್ತದೆ. ಸೂಚನೆಯು ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರಬೇಕು:–

i) ಅದು ಪ್ರಮುಖವಾದ ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿರಬೇಕು;

ii) ಅದು ಚರ್ಚಾಸ್ಪದವಾದ ಊಹಾಪೋಹವಾದ ವ್ಯಂಗ್ಯದ ಮಾತುಗಳನ್ನು, ಆಪಾದನೆಗಳನ್ನು ಅಥವಾ ಮಾನನಷ್ಟದ ಹೇಳಿಕೆಗಳನ್ನು ಒಳಗೊಂಡಿರಬಾರದು;

iii) ಅದು ವ್ಯಕ್ತಿಗಳ ಸಾರ್ವಜನಿಕ ಕೆಲಸ ಕಾರ್ಯಗಳನ್ನುಳಿದು ಅವರ ನಡತೆಯ ವಿಚಾರವಾಗಿಯಾಗಲಿ ಅಥವಾ ಅವರ ಚಾರಿತ್ರ್ಯದ ವಿಚಾರವಾಗಿಯಾಗಲಿ ಪ್ರಸ್ತಾಪಿಸಬಾರದು;

iv) ಅದು ಇತ್ತೀಚೆಗೆ ಸಂಭವಿಸಿದ ಘಟನೆಗೆ ಮಾತ್ರವೇ ಸಂಬಂಧಿಸಿರಬೇಕು;

v) ಅದು ಹಕ್ಕುಬಾಧ್ಯತೆಗೆ ಸಂಬಂಧಿಸಿದ ವಿಷಯವನ್ನು ಪ್ರಸ್ತಾಪಿಸಬಾರದು.

vi) ಅದು ಪ್ರಸಕ್ತ ಅಧಿವೇಶನದಲ್ಲಿ ಚರ್ಚಿಸುವ ವಿಷಯವನ್ನು ಪುನಃ ಚರ್ಚಿಸುವಂತಿರಬಾರದು;

vii) ಅದು ಪ್ರಸಕ್ತ ಅಧಿವೇಶನದಲ್ಲಿ ಚರ್ಚಿಸುವ ಸಾಧ್ಯತೆಯಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯನ್ನು ನಿರೀಕ್ಷಿಸಬಾರದು.

viii) ಭಾರತದ ಯಾವುದೇ ಭಾಗದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ವಿಚಾರಣೆ ನಡೆಯುತ್ತಿರುವ ಯಾವುದೇ ತೀರ್ಪಿನ ವಿಷಯಕ್ಕೆ ಸಂಬಂಧಪಟ್ಟಿರಬಾರದು.

ಸಭಾಪತಿಯವರು ಪ್ರಸ್ತಾವವನ್ನು ಅಂಗೀಕರಿಸಿದರೆ, ಸದನದ ನಾಯಕರೊಂದಿಗೆ ಸಮಾಲೋಚನೆ ನಡೆಸಿ ಪ್ರಸ್ತಾವವನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಸಮಯವನ್ನು ಗೊತ್ತುಮಾಡಲಾಗುತ್ತದೆ.

ಪ್ರಸ್ತಾವಗಳಲ್ಲಿ ಸಾಮಾನ್ಯವಾಗಿ ಎರಡು ಪ್ರಕಾರಗಳಿವೆ.

01. ಪ್ರಮುಖ ಪ್ರಸ್ತಾವ
02. ಪ್ರತಿ ಪ್ರಸ್ತಾವ

ಪ್ರಮುಖ ಪ್ರಸ್ತಾವವು ಹೆಸರೇ ಸೂಚಿಸುವಂತೆ ಸದನದ ಅನುಮೋದನೆಗಾಗಿ ಸಲ್ಲಿಸಿದ ಸ್ವತಂತ್ರ್ಯ ಪ್ರಸ್ತಾವನೆಯಾಗಿದೆ. ಅದು ಸದನದ ನಿರ್ದಿಷ್ಟ ನಿರ್ಣಯವನ್ನು ಸೂಚಿಸುತ್ತದೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವ, ಸಭಾಪತಿ/ ಉಪ–ಸಭಾಪತಿಯ ಚುನಾವಣಾ ಪ್ರಸ್ತಾವ ಅಥವಾ ನಿರ್ಣಯಗಳು– ಇವು ಈ ರೀತಿಯ ಪ್ರಸ್ತಾವದ ಕೆಲವು ಉದಾಹರಣೆಗಳಾಗಿವೆ.

ಯಾವುದೇ ಕಾರ್ಯನೀತಿ ಅಥವಾ ಸನ್ನಿವೇಶವನ್ನು ಪರಿಶೀಲಿಸುವುದಕ್ಕೆ ಅಥವಾ ಹೇಳಿಕೆಗೆ ಅಥವಾ ಯಾವುದೇ ಇತರ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಒಂದು ಪ್ರಸ್ತಾವದ ಬದಲಿಗೆ ಮಂಡಿಸಿದ ಪ್ರಸ್ತಾವಗಳನ್ನು ಬದಲಿ ಪ್ರತಿ ಪ್ರಸ್ತಾವಗಳೆಂದು ಕರೆಯಲಾಗುತ್ತದೆ.

ಕಾರ್ಯನೀತಿ ಅಥವಾ ಪರಿಸ್ಥಿತಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂಬ ಮೂಲ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಿದ ನಂತರ ಪ್ರಸ್ತಾವವನ್ನು ಸೂಚಿಸಿದ ಸದಸ್ಯರ ಭಾಷಣ ಮುಕ್ತಾಯವಾದೊಡನೆಯೇ, ಸದನದಲ್ಲಿ ವಿಷಯದ ಬಗ್ಗೆ ಚರ್ಚೆಯನ್ನು ನಡೆಸಲಾಗುತ್ತದೆ. ಅಂಥ ಸಂದರ್ಭದಲ್ಲಿ,

ಚರ್ಚೆಯ ಕೊನೆಯಲ್ಲಿ, ಸಭಾಪತಿಯವರು ಅದರ ಬಗ್ಗೆ ಸಭೆಯ ಮತ ಪಡೆದುಕೊಳ್ಳುವುದಿಲ್ಲ. ಆದರೂ, ಮೂಲ ಪ್ರಸ್ತಾವದ ವಿಷಯಕ್ಕೆ ಸಂಬಂಧಿಸಿದಂತೆ ಸದನದ ನಿರ್ದಿಷ್ಟ ಅಭಿಪ್ರಾಯ ಸೂಚಿಸುವಂತೆ ಕೋರಿ ಪ್ರತಿ ಪ್ರಸ್ತಾವವನ್ನು ಮಂಡಿಸಬಹುದು. ಮೂಲ ಪ್ರಸ್ತಾವ ಮತ್ತು ಬದಲಿ ಪ್ರಸ್ತಾವಗಳ ಬಗ್ಗೆ ಏಕಕಾಲದಲ್ಲಿ ಚರ್ಚೆ ನಡೆಯುತ್ತದೆ.

ಚರ್ಚೆಯ ಕೊನೆಯಲ್ಲಿ ಬದಲಿ ಪ್ರಸ್ತಾವದ ಬಗ್ಗೆ ಸದನದ ಮತವನ್ನು ಪಡೆಯಲಾಗುತ್ತದೆ.

ಕಾಲಾವಧಿಯನ್ನು ಗೊತ್ತುಮಾಡುವುದು ಮತ್ತು ಪ್ರಸ್ತಾವಗಳನ್ನು ಚರ್ಚಿಸುವುದು

ಸಭಾಪತಿಯವರು, ಸದನದಲ್ಲಿನ ಕಾರ್ಯಕಲಾಪಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದ ತರುವಾಯ ಮತ್ತು ಸದನದ ನಾಯಕರೊಂದಿಗೆ ಸಮಾಲೋಚಿಸಿದ ನಂತರ (ಅಥವಾ ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸಿನ ಮೇಲೆ) ಅಂತಹ ಯಾವುದೇ ಪ್ರಸ್ತಾವದ ಚರ್ಚೆಗಾಗಿ ಒಂದು ದಿನ ಅಥವಾ ದಿನಗಳನ್ನು ಅಥವಾ ದಿನದ ಒಂದು ಭಾಗವನ್ನು ಗೊತ್ತುಪಡಿಸಬಹುದು.

ಸಭಾಪತಿಯವರನ್ನು/ಉಪ–ಸಭಾಪತಿಯವರನ್ನು ಹುದ್ದೆಗಳಿಂದ ಪದಚ್ಯುತಿಗೊಳಿಸುವ ನಿರ್ಣಯ
(ವಿ.ಪ. ನಿಯಮಗಳು 165–168)

ಸಭಾಪತಿಯವರನ್ನು/ಉಪ ಸಭಾಪತಿಯವರನ್ನು ವಿಧಾನ ಪರಿಷತ್ತಿನ ಬಹುಸಂಖ್ಯಾತ ಸದಸ್ಯರು ಅಂಗೀಕರಿಸಿದ ನಿರ್ಣಯದೊಂದಿಗೆ ಅವರ ಹುದ್ದೆಯಿಂದ ಪದಚ್ಯುತಿಗೊಳಿಸಬಹುದು. ಅಂಥ ನಿರ್ಣಯಕ್ಕೆ ಸಂಬಂಧಿಸಿದ ಸೂಚನೆಯನ್ನು ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ನೀಡಬೇಕಾಗುತ್ತದೆ. ಸೂಚನೆಯನ್ನು ಸ್ವೀಕರಿಸಿದ ಹದಿನಾಲ್ಕು ದಿನಗಳ ನಂತರ ಅದನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಬಹುದು. ಸೂಚನೆಯನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿದ ದಿನದಂದು ಅದನ್ನು ಸೂಚಿಸಿದ ಸದಸ್ಯರ ನಿರ್ಣಯವನ್ನು ಮಂಡಿಸುವಂತೆ ಕೋರಲಾಗುತ್ತದೆ. ಸಭಾಧ್ಯಕ್ಷತೆಯನ್ನು ವಹಿಸಿದವರು ಸದರಿ ನಿರ್ಣಯವನ್ನು ಸದನದ ಮುಂದೆ ಮಂಡಿಸುತ್ತಾರೆ. ಹತ್ತು ಮಂದಿ ಸದಸ್ಯರಿಗಿಂತ ಕಡಿಮೆಯಿಲ್ಲದಷ್ಟು ಸದಸ್ಯರು ಎದ್ದು ನಿಂತಲ್ಲಿ, ಸದರಿ ನಿರ್ಣಯಕ್ಕೆ ಸದನವು ಅನುಮೋದನೆ ನೀಡಿದೆಯೆಂದು ಸಭಾಪತಿ ಅಥವಾ ಉಪ ಸಭಾಪತಿ ಅಥವಾ ಸಂದರ್ಭಾನುಸಾರ ಅಧ್ಯಕ್ಷತೆ ವಹಿಸಿರುವವರು ಘೋಷಿಸಬಹುದು ಮತ್ತು ಅನುಮತಿಯನ್ನು ಕೋರಲಾಗಿರುವ ದಿನಾಂಕದಿಂದ ಐದು ದಿನಗಳಿಗೆ ಮೀರದಿರುವ ಕಾಲಾವಧಿಯೊಳಗೆ, ಸಭಾಪತಿಯವರು ಗೊತ್ತುಮಾಡಬಹುದಾದಂತಹ ದಿನದಂದು ಸದರಿ ನಿರ್ಣಯವನ್ನು ಚರ್ಚಿಸಲಾಗುತ್ತದೆ. ಹತ್ತು ಮಂದಿ ಸದಸ್ಯರಿಗಿಂತ ಕಡಿಮೆ ಸಂಖ್ಯೆಯ ಸದಸ್ಯರು ಎದ್ದು ನಿಂತಲ್ಲಿ, ಸಭಾಪತಿಯವರು ಅಥವಾ ಉಪಸಭಾಪತಿಯವರು ಅಥವಾ ಅಧ್ಯಕ್ಷತೆ ವಹಿಸುವವರು ಸದರಿ ನಿರ್ಣಯಕ್ಕೆ ಸದನವು ಅನುಮತಿಯನ್ನು ನಿರಾಕರಿಸಿದೆಯೆಂದು ಸದಸ್ಯರಿಗೆ ತಿಳಿಸತಕ್ಕದ್ದು.

ಸಭಾಪತಿ/ಉಪ ಸಭಾಪತಿಯವರು ಸದನದಲ್ಲಿ ಅಧ್ಯಕ್ಷರಾಗಿದ್ದರೂ ಅವರ ವಿರುದ್ಧ ಹಕ್ಕುಚ್ಯುತಿಯನ್ನು ಮಂಡಿಸಲು ಗೊತ್ತುಪಡಿಸಿದ ದಿನದಂದು ಅವರು ಅಧ್ಯಕ್ಷತೆಯನ್ನು ವಹಿಸುವಂತಿಲ್ಲ. ಅವರಿಗೆ ಸದರಿ ನಿರ್ಣಯದ ಬಗ್ಗೆ ಮಾತನಾಡಲು ಹಾಗೂ ಚರ್ಚೆಯಲ್ಲಿ ಭಾಗವಹಿಸಲು ಅಧಿಕಾರವಿರುತ್ತದೆ ಮತ್ತು ಅವರು ತಮ್ಮ ಮತವನ್ನು ಚಲಾವಣೆ ಮಾಡಬಹುದು.

ವಿತ್ತೀಯ ಕಾರ್ಯಕಲಾಪಗಳು
(ವಿ.ಪ. ನಿಯಮಗಳು 169–173)

ವಿಧಾನಮಂಡಲದ ಅನುಮೋದನೆಯಿಲ್ಲದೆ ಸರ್ಕಾರವು ಯಾವುದೇ ವೆಚ್ಚವನ್ನು ಭರಿಸುವಂತಿಲ್ಲ ಹಾಗೂ ಯಾವುದೇ ತೆರಿಗೆಗಳನ್ನು ವಿಧಿಸುವಂತಿಲ್ಲ. ಸಂವಿಧಾನದ 202ನೇ ಅನುಚ್ಛೇದವು, ಸರ್ಕಾರವು ವಾರ್ಷಿಕ ಹಣಕಾಸು ವಿವರಣೆ ಪತ್ರ ಅಥವಾ ಆಯವ್ಯಯ (ಬಜೆಟ್) ಎಂದು ಕರೆಯಲಾಗುವ ಪ್ರತಿ ವರ್ಷದ ರಾಜ್ಯದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚದ ಒಂದು ವಿವರಣ ಪತ್ರವನ್ನು ವಿಧಾನಮಂಡಲದ ಮುಂದೆ ಮಂಡಿಸುವುದು ಅಗತ್ಯವೆಂದು ಹೇಳುತ್ತದೆ. ರಾಜ್ಯ ಹಣಕಾಸು ಸಚಿವರು ತಮ್ಮ ಬಜೆಟ್ ಭಾಷಣದ ಮೂಲಕ ವಿಧಾನಮಂಡಲದ ಮುಂದೆ ಬಜೆಟ್ ಮಂಡನೆಯನ್ನು ಮಾಡುತ್ತಾರೆ. ಹಣಕಾಸು ಸಚಿವರು, ತಮ್ಮ ಭಾಷಣದಲ್ಲಿ, ಮುಂಬರುವ ವರ್ಷದ ಅವಧಿಯಲ್ಲಿ ಸರ್ಕಾರವು ಅನುಷ್ಠಾನಗೊಳಿಸಲು ಉದ್ದೇಶಿಸಿದ ಕಾರ್ಯನೀತಿಗಳನ್ನು ಹಾಗೂ ಕಾರ್ಯಕ್ರಮಗಳನ್ನು ವಿವರಿಸುತ್ತಾರೆ ಹಾಗೂ ಕಳೆದ ವರ್ಷದಲ್ಲಿ ಸರ್ಕಾರ ಮಾಡಿದ ಸಾಧನೆಗಳನ್ನು ಪುನರವಲೋಕನ ಮಾಡುತ್ತಾರೆ. ರಾಜ್ಯಪಾಲರು ಗೊತ್ತುಪಡಿಸಿದ ದಿನಾಂಕದಂದು ವಿಧಾನಮಂಡಲದ ಮುಂದೆ ಬಜೆಟನ್ನು ಮಂಡಿಸಲಾಗುತ್ತದೆ. ಸಾಮಾನ್ಯವಾಗಿ ಬಜೆಟನ್ನು ಫೆಬ್ರವರಿ ತಿಂಗಳ ಕೊನೆಯ ವಾರ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಮಂಡಿಸಲಾಗುತ್ತದೆ. ವಿಧಾನಮಂಡಲದ ಮುಂದೆ ಮಂಡಿಸಿದ ಬಜೆಟ್‌ಗೆ ವಿಧಾನಸಭೆಯು ಅನುಮೋದನೆ ನೀಡಬೇಕಾಗುತ್ತದೆ. ಬಜೆಟನ್ನು ವಿಧಾನಸಭೆಯು ಎರಡು ಹಂತಗಳಲ್ಲಿ ಪರಿಶೀಲಿಸುತ್ತದೆ. ಮೊದಲು ಆಯವ್ಯಯದ ಬಗ್ಗೆ ಸಾಮಾನ್ಯ ಚರ್ಚೆ ನಡೆಸಿ ನಂತರ ಬೇಡಿಕೆಗಳನ್ನು ಮತಕ್ಕೆ ಹಾಕುವ ಮೂಲಕ ಪರಿಶೀಲಿಸಲಾಗುತ್ತದೆ. ವಿಧಾನ ಪರಿಷತ್ತಿನಲ್ಲಿ ಆಯವ್ಯಯದ ಮುಂಗಡ ಪತ್ರದ ಬಗ್ಗೆ ಸಾಮಾನ್ಯ ಚರ್ಚೆ ಮಾತ್ರ ನಡೆಯುತ್ತದೆ. ಸಾಮಾನ್ಯ ಚರ್ಚೆಯು ಸಭಾಪತಿಗಳು ನಿಗದಿಪಡಿಸಿದಂತಹ ದಿನಗಳಂದು ನಡೆಯುತ್ತದೆ. ಸಾಮಾನ್ಯವಾಗಿ ಈ ಉದ್ದೇಶಕ್ಕಾಗಿ ನಾಲ್ಕರಿಂದ ಐದು ದಿನಗಳನ್ನು ನಿಗದಿಪಡಿಸಲಾಗುತ್ತದೆ. ಸಾಮಾನ್ಯ ಚರ್ಚೆಯ ಬಗ್ಗೆ ಯಾವ ಪ್ರಸ್ತಾವವನ್ನೂ ಮಂಡಿಸುವಂತಿಲ್ಲ. ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭಿಸುವುದು ಸಂಪ್ರದಾಯವಾಗಿದೆ. ಸಾಮಾನ್ಯ ಚರ್ಚೆಯ ವ್ಯಾಪ್ತಿ ಹೆಚ್ಚು ವಿಸ್ತೃತವಾಗಿರುತ್ತದೆ. ಸಮಗ್ರ ಬಜೆಟ್‌ನ ಮೇಲೆ ಅಥವಾ ವಿತ್ತೀಯ ಕಾರ್ಯನೀತಿಗಳ ಮೇಲೆ ಚರ್ಚೆ ನಡೆಯುತ್ತದೆ. ಸರ್ಕಾರದ ಕಾರ್ಯನಿರ್ವಹಣಾ ವ್ಯವಸ್ಥೆಯನ್ನೂ ಸಹ ಟೀಕೆಗೆ ಗುರಿಪಡಿಸಲಾಗುತ್ತದೆ. ಬಜೆಟ್‌ನಲ್ಲಿ ಅಥವಾ ಹಣಕಾಸು ಸಚಿವರ ಭಾಷಣದಲ್ಲಿ ವ್ಯಕ್ತವಾದಂತೆ ಆಯಾ ವಿಷಯ ಅಥವಾ ಸೇವೆ, ತೆರಿಗೆ ನೀತಿ ಇವುಗಳ ಪ್ರಾಮುಖ್ಯತೆಗನುಸಾರವಾಗಿ ವೆಚ್ಚವನ್ನು ಸೂಕ್ತ ರೀತಿಯಲ್ಲಿ ವಿತರಣೆ ಮಾಡಲಾಗಿದೆಯೇ ಎಂಬ ಬಗ್ಗೆ ಸಹ ಚರ್ಚೆ ನಡೆಸಬಹುದಾಗಿದೆ. ಆದಾಯದಲ್ಲಿನ ಹೆಚ್ಚುವರಿ ಅಥವಾ ಖೋತಾ ಆದಾಯ ಮತ್ತು ವೆಚ್ಚಗಳಿಗೆ ಸಂಬಂಧಿಸಿದ ಲೆಕ್ಕ ಮತ್ತು ಒಟ್ಟಾರೆ ಹೆಚ್ಚುವರಿ ಅಥವಾ ಖೋತಾ ಸದಸ್ಯರು ಬಜೆಟ್‌ನ ಸಾಮಾನ್ಯ ಸ್ವರೂಪ ಮತ್ತು ರಚನೆಯ ಬಗ್ಗೆ ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬಹುದು. ಸದಸ್ಯರು ಅಂದಾಜನ್ನು ರೂಪಿಸಿರುವ ವಿಧಾನಗಳನ್ನು ಟೀಕಿಸಬಹುದು. ಆದರೆ, ಅವರು ನಿರ್ದಿಷ್ಟ ಯೋಜನೆಗಳಿಗೆ ಸಂಬಂಧಿಸಿದ ವಿವರಗಳನ್ನು ಟೀಕಿಸಬಾರದು. ಈ ಸಮಯದಲ್ಲಿ ಸದನದ ಮುಂದೆ ಯಾವುದೇ ಪ್ರಸ್ತಾವ ಬರುವುದಿಲ್ಲವಾದ್ದರಿಂದ, ಯಾವುದೇ ತಿದ್ದುಪಡಿಗಳಿಗೆ ಮತ್ತು ಮತ ಚಲಾವಣೆಗೆ ಅವಕಾಶವಿರುವುದಿಲ್ಲ. ಚರ್ಚೆ ಮುಕ್ತಾಯಗೊಂಡ ನಂತರ ಹಣಕಾಸು ಸಚಿವರು ಉತ್ತರವನ್ನು ನೀಡುತ್ತಾರೆ.

ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು)

(ವಿ.ಪ. ನಿಯಮಗಳು 174–180)

ಹಕ್ಕುಬಾಧ್ಯತೆಗಳು ವಿಧಾನ ಪರಿಷತ್ತು ಮತ್ತು ಅದರ ಸದಸ್ಯರಿಗಿರುವ ವಿಶೇಷ ಹಕ್ಕುಗಳು. ಹಕ್ಕುಬಾಧ್ಯತೆಯನ್ನು ಅಸಾಧಾರಣ ಅಧಿಕಾರ ಅಥವಾ ವಿನಾಯಿತಿಯನ್ನು ಪಡೆದುಕೊಳ್ಳುವ ಅಧಿಕಾರವೆಂದು ಪರಿಭಾಷಿಸಲಾಗಿದೆ. ಇತರರು ಪಾಲಿಸಲೇಬೇಕಾದ ಕೆಲವು ಕರ್ತವ್ಯಗಳು, ಜವಾಬ್ದಾರಿ, ಹಾಜರಾತಿ ಅಥವಾ ಹೊಣೆಗಾರಿಕೆಗಳಿಂದ ಸದಸ್ಯರಿಗೆ ವಿನಾಯಿತಿಯನ್ನು ನೀಡಲಾಗಿದೆ. ಈ ಪದವು ವಿಧಾನಮಂಡಲದ ಉಭಯ ಸದನಗಳು ಸಾಮೂಹಿಕವಾಗಿಯೂ ಅಥವಾ ಸದನದ ಸದಸ್ಯರು ವೈಯಕ್ತಿಕವಾಗಿ ಪಡೆದ ಕೆಲವು ಅಧಿಕಾರಗಳಿಗೂ ಮತ್ತು ವಿಶೇಷ ವಿನಾಯಿತಿಗಳಿಗೆ ಅನ್ವಯವಾಗುತ್ತದೆ. ಈ ಅಧಿಕಾರಗಳು ಮತ್ತು ವಿಶೇಷ ವಿನಾಯಿತಿಗಳಿಲ್ಲದಿದ್ದಲ್ಲಿ ಸದಸ್ಯರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲಾಗುವುದಿಲ್ಲ.

ಸಂವಿಧಾನದ 194ನೇ ಅನುಚ್ಛೇದವು ರಾಜ್ಯ ವಿಧಾನಮಂಡಲದ ಸದನಗಳಿಗೆ ಮತ್ತು ಅದರ ಸದಸ್ಯರಿಗೆ ಹಾಗೂ ಸಮಿತಿಗಳಿಗೆ ವಿಶೇಷಾಧಿಕಾರಗಳನ್ನು (ಹಕ್ಕುಬಾಧ್ಯತೆ) ಮತ್ತು ವಿನಾಯಿತಿಗಳನ್ನು ಕಲ್ಪಿಸಿದೆ. ಸದರಿ ಅನುಚ್ಛೇದದ (1)ನೇ ಖಂಡವು ಸದನದಲ್ಲಿ ವಾಕ್ ಸ್ವಾತಂತ್ರ್ಯವಿರಬೇಕೆಂದು ಉಪಬಂಧಿಸುತ್ತದೆ. ಆದರೆ ಈ ವಾಕ್ ಸ್ವಾತಂತ್ರ್ಯವು ಸಂವಿಧಾನದ ಉಪಬಂಧಗಳಿಗೆ, ವಿಧಾನ ಪರಿಷತ್ತಿನ ನಿಯಮಗಳಿಗೆ ಹಾಗೂ ಸದನದ ಪ್ರಕ್ರಿಯೆಯನ್ನು ವಿನಿಯಮಗೊಳಿಸುವ ಸ್ಥಾಯೀ ಆದೇಶಗಳಿಗೆ ಒಳಪಟ್ಟಿರುತ್ತದೆ. ಸಂವಿಧಾನದ 211ನೇ ಅನುಚ್ಛೇದವು ಸದನದಲ್ಲಿನ ಭಾಷಣಗಳಿಗೆ ಕೆಲವು ನಿರ್ಬಂಧಗಳನ್ನು ವಿಧಿಸುತ್ತದೆ. ಅದರಲ್ಲಿ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಯಾರೇ ನ್ಯಾಯಾಧೀಶರ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸಿದ ವರ್ತನೆಗೆ ಸಂಬಂಧಿಸಿದಂತೆ ಸದನದಲ್ಲಿ ಯಾವುದೇ ಚರ್ಚೆ ನಡೆಯತಕ್ಕದ್ದಲ್ಲವೆಂದು ಹೇಳಲಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು, ಸದಸ್ಯರು ಮಾತನಾಡುವಾಗ ಕೆಲವು ನಿರ್ಬಂಧಗಳನ್ನು ಉಪಬಂಧಿಸುತ್ತದೆ.

ಸಂವಿಧಾನದ 194ನೇ ಅನುಚ್ಛೇದದ (2)ನೇ ಖಂಡವು, ವಿಧಾನಮಂಡಲದ ಯಾರೇ ಸದಸ್ಯರು ಆ ವಿಧಾನಮಂಡಲದಲ್ಲಿ ಅಥವಾ ಅದರ ಯಾವುದೇ ಸಮಿತಿಯಲ್ಲಿ ನೀಡಿದ ಯಾವುದೇ ಹೇಳಿಕೆ ಅಥವಾ ತಾವು ಚಲಾಯಿಸಿದ ಮತಗಳಿಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದ ವ್ಯವಹರಣೆಗಳಿಗೆ ಅವರನ್ನು ಗುರಿಪಡಿಸಬಾರದೆಂದು ವಿಧಿಸುತ್ತದೆ. ನ್ಯಾಯಾಲಯ, ಸದಸ್ಯರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೂ, ಸದಸ್ಯರು ಸದನದ ಶಿಸ್ತಿಗೆ ಬದ್ಧರಾಗಿರಬೇಕು. ಸದಸ್ಯರು ಮಾತನಾಡುವಾಗ ಸಂವಿಧಾನ, ಉಪಬಂಧಗಳನ್ನು ಹಾಗೂ ನಿಯಮಗಳನ್ನು ಉಲ್ಲಂಘಿಸುವ ಸದಸ್ಯರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲು ನಿಯಮಗಳಲ್ಲಿ ಸಭಾಪತಿಯವರಿಗೆ ಅಧಿಕಾರಗಳನ್ನು ಕಲ್ಪಿಸಲಾಗಿದೆ.

ಅಲ್ಲದೆ, ಸದನದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಯಾವುದೇ ವರದಿ, ಪತ್ರ, ಮತಗಳು ಅಥವಾ ಸದನದ ನಡವಳಿಕೆಗಳನ್ನು ಪ್ರಕಟಿಸುವ ವ್ಯಕ್ತಿಗೆ ರಕ್ಷಣೆ ಸಹ ನೀಡಲಾಗುತ್ತದೆ. ಆದರೆ, ಯಾರೇ ವ್ಯಕ್ತಿ ಕಾರ್ಯಕಲಾಪಗಳ ವರದಿಯನ್ನು ಸ್ವಂತ ಜವಾಬ್ದಾರಿಯಿಂದ ಪ್ರಕಟಿಸಿದರೆ ಇದು ಅನ್ವಯವಾಗುವುದಿಲ್ಲ. ಆದಾಗ್ಯೂ, ಅಂಥ ಪ್ರಕಟಣೆಯು ದ್ವೇಷಪೂರಿತವಾಗಿದೆಯೆಂದು ಸಿದ್ಧವಾಗದಿದ್ದಲ್ಲಿ ಅಂಥ ವ್ಯಕ್ತಿಯ ವಿರುದ್ಧ ಕ್ರಮ ಜರುಗಿಸುವಂತಿಲ್ಲ. ಕರ್ನಾಟಕ ರಾಜ್ಯ ವಿಧಾನಮಂಡಲದ ನಡವಳಿಕೆಗಳ (ಪ್ರಕಟಣೆ ರಕ್ಷಣೆ) ಅಧಿನಿಯಮ, 1968ರ ಮೇರೆಗೆ ಸದನದ ಕಾರ್ಯಕಲಾಪಗಳನ್ನು ಪ್ರಕಟಿಸುವ ವೃತ್ತಪತ್ರಿಕೆಗಳಿಗೆ ರಕ್ಷಣೆಯನ್ನು ನೀಡುತ್ತದೆ. ಆದರೆ

ಅಂಥ ವರದಿಯು ಬಹುಮಟ್ಟಿಗೆ ಕಾರ್ಯಕಲಾಪಗಳ ವಾಸ್ತವಿಕ ವರದಿಯಾಗಿರಬೇಕು. ಕರ್ನಾಟಕ ವಿಧಾನ ಪರಿಷತ್ತಿನ ನಿಯಮಗಳಲ್ಲಿ (i) ಸದನದಲ್ಲಿ ಪ್ರಶ್ನೋತ್ತರಗಳು ನಡೆಯುವ ಮೊದಲೇ ಪ್ರಶ್ನೆಗಳಿಗೆ ಸಂಬಂಧಿಸಿದ ಉತ್ತರಗಳನ್ನು (ii) ಸದನವು ಅನುಮತಿಸಿದ ಹೊರತು ಸದನದ ರಹಸ್ಯ ಅಧಿವೇಶನಗಳ ನಡವಳಿಕೆಗಳನ್ನು (iii) ಸಾಕ್ಷ್ಯ, ವರದಿ, ಸಮಿತಿಯ ನಡವಳಿಕೆಗಳನ್ನು ಸದನದ ಮುಂದೆ ಮಂಡಿಸುವ ಮೊದಲೇ ಅವುಗಳನ್ನು ಪ್ರಕಟಿಸುವುದನ್ನು ಮತ್ತು (iv) ಸಭಾಪತಿಯವರು ಅಂಗೀಕರಿಸುವುದಕ್ಕೆ ಮೊದಲೇ ಪ್ರಶ್ನೆಗಳನ್ನು ಮತ್ತು ನಿರ್ಣಯಗಳನ್ನು ಪ್ರಕಟಿಸುವುದನ್ನು ನಿರ್ಬಂಧಿಸಲಾಗಿದೆ.

ಸಂವಿಧಾನದ 194ನೇ ಅನುಚ್ಛೇದ (3)ನೇ ಖಂಡವು ಸದನದ ಸದಸ್ಯರ ಅಧಿಕಾರಗಳು, ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು) ಮತ್ತು ವಿನಾಯಿತಿಗಳನ್ನು ಶಾಸನದ ಮೂಲಕ ನಿರ್ಧರಿಸುವುದಕ್ಕೆ ವಿಧಾನಮಂಡಲಕ್ಕೆ ಅಧಿಕಾರವನ್ನು ನೀಡುತ್ತದೆ ಮತ್ತು ಹಾಗೆ ಅವುಗಳನ್ನು ನಿರ್ಧರಿಸುವವರೆಗೆ ಸಂವಿಧಾನ ಜಾರಿಗೆ ಬಂದ ದಿನಾಂಕದಂದು ಇದ್ದ ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ನ ಸದಸ್ಯರಿಗೆ ಇದ್ದಂತಹ ಅಧಿಕಾರಗಳು, ಹಕ್ಕುಬಾಧ್ಯತೆಗಳು ಮತ್ತು ವಿನಾಯಿತಿಗಳಂತೆಯೇ ಇರುತ್ತವೆ. ಕರ್ನಾಟಕ ವಿಧಾನಮಂಡಲವು ಅದರ ಅಧಿಕಾರಗಳು, ಹಕ್ಕುಬಾಧ್ಯತೆಗಳು ಮತ್ತು ವಿನಾಯಿತಿಗಳನ್ನು ಇನ್ನೂ ನಿರ್ಧರಿಸಿಲ್ಲದಿರುವುದರಿಂದ ಕರ್ನಾಟಕ ವಿಧಾನಮಂಡಲದ ಹಕ್ಕುಬಾಧ್ಯತೆಗಳು ಸಂವಿಧಾನ ಜಾರಿಗೆ ಬಂದ ದಿನಾಂಕದಂದು ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ನಲ್ಲಿ ಇದ್ದಂತಹುವೇ ಆಗಿರುತ್ತವೆ.

ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ನ ಸದಸ್ಯರು ಮತ್ತು ಅದರ ಸಮಿತಿಗಳಿಗೆ 26ನೇ ಜನವರಿ 1950 ರಂದು ಇದ್ದಂತಹ ಅಧಿಕಾರಗಳು, ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು) ಮತ್ತು ವಿನಾಯಿತಿಗಳು ಈ ಮುಂದಿನಂತಿವೆ :–

ಸದಸ್ಯರ ವೈಯಕ್ತಿಕ ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು)

01. ವಾಕ್ ಸ್ವಾತಂತ್ರ್ಯ
02. ಬಂಧಿಸುವುದರಿಂದ ವಿಮುಕ್ತಿ
03. ಜ್ಯೂರಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವುದರಿಂದ ವಿನಾಯಿತಿ
04. ಸಾಕ್ಷಿದಾರರಾಗಿ ನ್ಯಾಯಾಲಯದಲ್ಲಿ ಹಾಜರಾಗುವುದಕ್ಕೆ ವಿನಾಯಿತಿ

ವಾಕ್ ಸ್ವಾತಂತ್ರ್ಯ

ಇದು ಅತ್ಯಾವಶ್ಯಕ ಹಕ್ಕುಬಾಧ್ಯತೆಯಾಗಿದೆ/ವಿಶೇಷಾಧಿಕಾರವಾಗಿದೆ. ದೀರ್ಘಕಾಲದ ಹೋರಾಟದ ನಂತರ, ವಿಶೇಷ ಹಕ್ಕುಗಳ ಅಧಿನಿಯಮದ ಮೂಲಕ (ಬಿಲ್ ಆಫ್ ರೈಟ್ಸ್) 1688ರಲ್ಲಿ ಈ ವಿಶೇಷಾಧಿಕಾರಗಳನ್ನು ಖಾಯಂ ಆಗಿ ಸ್ಥಿರಪಡಿಸಲಾಯಿತು. ಬ್ರಿಟನ್‌ನಲ್ಲಿ ವಿಶೇಷ ಹಕ್ಕುಗಳ ಅಧಿನಿಯಮದ 9ನೇ ಅನುಚ್ಛೇದವು, ಸಂಸತ್ತಿನಲ್ಲಿನ ವಾಕ್ ಮತ್ತು ಚರ್ಚಾ ಸ್ವಾತಂತ್ರ್ಯದ ಬಗ್ಗೆ ಅಥವಾ ಅದರ ನಡವಳಿಕೆಗಳ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಸಂಸತ್ತಿನ ಹೊರಗೆ ಖಂಡಿಸಬಾರದು ಅಥವಾ ಪ್ರಶ್ನಿಸಬಾರದೆಂದು ಹೇಳುತ್ತದೆ.

"ಸಂಸತ್ತಿನಲ್ಲಿನ ನಡವಳಿಗಳು" ಎಂಬ ಪದವು ಸಂಸದೀಯ ಪ್ರಶ್ನೆಗಳನ್ನು ಕೇಳುವುದನ್ನು ಮತ್ತು ಅಂಥ ಪ್ರಶ್ನೆಗಳಿಗೆ ಸೂಚನಾ ಪತ್ರವನ್ನು ನೀಡುವುದನ್ನು ಹಾಗೂ ಸಂಸದೀಯ ನಡವಳಿಕೆಗಳ ವ್ಯವಹರಣೆಯಲ್ಲಿ ಒಂದು ಸಮಿತಿಯ ಅಥವಾ ಸದನದ ಸದಸ್ಯರಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಸದಸ್ಯರು ಹೇಳಿದ ವಿಷಯಗಳು ಅಥವಾ ಕೈಗೊಂಡ ಕಾರ್ಯಗಳನ್ನು ಒಳಗೊಂಡಿರುತ್ತದೆ.

ಕರ್ನಾಟಕ ವಿಧಾನಮಂಡಲದ ಸದಸ್ಯರಿಗೆ ಸದನ ಅಥವಾ ಸಮಿತಿಯಲ್ಲಿ ಅವರು ಮಾಡಿದ ಭಾಷಣಗಳಿಗೆ ಸಂಬಂಧಿಸಿದಂತೆ ಪ್ರಶ್ನೆ ಹಾಗೂ ನಿರ್ಣಯ ಮುಂತಾದವುಗಳ ಬಗ್ಗೆ ಸೂಚನೆಗಳನ್ನು ಕೊಡುವಂತಹ ಸಂಬಂಧದಲ್ಲಿಯೂ ವಿನಾಯಿತಿ ಇರುತ್ತದೆ.

ಬಂಧಿಸುವುದರಿಂದ ವಿಮುಕ್ತಿ

ಸದಸ್ಯರು ಸಂಸತ್ತಿಗೆ ಹಾಜರಾಗುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅವರನ್ನು ದಸ್ತಗಿರಿ ಮಾಡುವ ಮೂಲಕ ಅವರು ಸಂಸತ್ತಿಗೆ ಬರುವುದನ್ನು ತಪ್ಪಿಸಬಾರದು. ಆದರೆ, ಈ ಹಕ್ಕುಬಾಧ್ಯತೆಯು ಸಿವಿಲ್ ವ್ಯವಹರಣೆಗಳ ಅಡಿ ಮಾಡಿದ ದಸ್ತಗಿರಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಯಾವುದೇ ಕ್ರಿಮಿನಲ್ ಆಪಾದನೆಯ ಮೇಲೆ ಮಾಡಿದ ದಸ್ತಗಿರಿಗೆ ಅನ್ವಯವಾಗುವುದಿಲ್ಲ. ಅಲ್ಲದೆ, ಈ ಹಕ್ಕುಬಾಧ್ಯತೆಯನ್ನು ದೇಶದ್ರೋಹ, ಘೋರಾಪರಾಧ ಮತ್ತು ಶಾಂತಿಭಂಗಕ್ಕಾಗಿ ಮಾಡಿದ ದಸ್ತಗಿರಿಗಳಿಗೆ ಸಂಬಂಧಿಸಿದಂತೆ ಕ್ಲೇಮು ಮಾಡುವಂತಿಲ್ಲ. ತುರ್ತು ಉಪಬಂಧಗಳ ಅಡಿಯಲ್ಲಿ ಮಾಡಿದ ಬಂಧನವೂ ಸಹ ಹಕ್ಕುಬಾಧ್ಯತೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಸಿವಿಲ್ ವ್ಯವಹರಣೆಗಳ ಅಡಿಯಲ್ಲಿ ದಸ್ತಗಿರಿ ಮಾಡುವುದಕ್ಕೆ ಸಂಬಂಧಿಸಿದ ವಿನಾಯಿತಿಯನ್ನು ಸಂಸತ್ತು ಅಧಿವೇಶನದಲ್ಲಿರುವಾಗ ಮತ್ತು ಅಧಿವೇಶನ ಪ್ರಾರಂಭವಾಗುವುದಕ್ಕೆ 40 ದಿನಗಳ ಮೊದಲು ಮತ್ತು ಅಧಿವೇಶನ ಮುಕ್ತಾಯವಾದ ನಂತರ ನಲವತ್ತು ದಿನಗಳವರೆಗೆ ನೀಡಲಾಗುತ್ತದೆ.

ಭಾರತದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 135ನೇ ಪ್ರಕರಣವು, ಸಿವಿಲ್ ಪ್ರಕರಣಗಳ ಸಂಬಂಧದಲ್ಲಿ ಅಧಿವೇಶನ ಪ್ರಾರಂಭವಾಗುವುದಕ್ಕೆ ಹದಿನಾಲ್ಕು ದಿನಗಳ ಮೊದಲು ಮತ್ತು ಮುಕ್ತಾಯವಾದ ನಂತರ ಹದಿನಾಲ್ಕು ದಿನಗಳವರೆಗೆ ಸದಸ್ಯರನ್ನು ಬಂಧಿಸಬಾರದೆಂದು ಹೇಳುತ್ತದೆ. ಹೌಸ್ ಆಫ್ ಕಾಮನ್ಸ್‌ನ ಸದಸ್ಯರಿಗಿರುವ ಹಕ್ಕುಬಾಧ್ಯತೆಗಳೇ ಭಾರತೀಯ ಸಂಸತ್ ಸದಸ್ಯರಿಗೆ ಮತ್ತು ರಾಜ್ಯಗಳ ವಿಧಾನಮಂಡಲದ ಸದಸ್ಯರಿಗೆ ಲಭ್ಯವಾಗುವುದರಿಂದ, ಅವರಿಗೆ ಅಧಿವೇಶನದ ಅವಧಿಯಲ್ಲಿ ಮತ್ತು ಅಧಿವೇಶನಕ್ಕೆ 40 ದಿನಗಳ ಮೊದಲು ಮತ್ತು ನಂತರದ ನಲವತ್ತು ದಿನಗಳವರೆಗೆ ಸಿವಿಲ್ ವ್ಯವಹರಣೆಗಳಡಿಯಲ್ಲಿ ಮಾಡುವ ಬಂಧನಗಳಿಂದ ವಿನಾಯಿತಿ ನೀಡಲಾಗಿದೆ. ಸದಸ್ಯರನ್ನು ಬಂಧಿಸಬೇಕಾದ ಅಥವಾ ಶಿಕ್ಷೆಗೆ ಗುರಿಪಡಿಸಬೇಕಾದ ಸನ್ನಿವೇಶಗಳಲ್ಲಿ ಹಾಗೆ ಬಂಧಿಸುವ ಅಥವಾ ಶಿಕ್ಷೆಗೆ ಗುರಿಪಡಿಸುವ ಅಧಿಕಾರಿಗಳು ಈ ಸಂಗತಿಯನ್ನು ಸಭಾಪತಿಯವರಿಗೆ ತಿಳಿಸುವುದು ಅವರ ಕರ್ತವ್ಯವಾಗಿದೆ. ಹಾಗೆ ತಿಳಿಸದಿದ್ದಲ್ಲಿ, ಅದು ಸಭೆಯ ಹಕ್ಕುಚ್ಯುತಿಗೆ ಕಾರಣವಾಗುತ್ತದೆ.

ಜ್ಯೂರಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವುದರಿಂದ ಮತ್ತು ಸಾಕ್ಷಿದಾರರಾಗಿ ಹಾಜರಾಗುವುದರಿಂದ ವಿನಾಯಿತಿ

ಈ ಹಕ್ಕುಬಾಧ್ಯತೆಗಳು (ವಿಶೇಷಾಧಿಕಾರಗಳು) ಸದನದ ಸದಸ್ಯರ ಹಾಜರಾತಿ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಸದನದ ಪರಮಾಧಿಕಾರವಾಗಿರುವುದು ಕಂಡುಬರುತ್ತದೆ.

ಜ್ಯೂರಿ ಸದಸ್ಯರ ಅಧಿನಿಯಮ, 1870ರ ಮೂಲಕ ಹೌಸ್ ಆಫ್ ಕಾಮನ್ಸ್‌ನ ಸದಸ್ಯರು, ತಮ್ಮ ಸದಸ್ಯತ್ವದ ಕಾಲಾವಧಿಯಲ್ಲಿ ಜ್ಯೂರಿ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವುದರಿಂದ ವಿನಾಯಿತಿ ನೀಡಲಾಗಿದೆ.

ನ್ಯಾಯನಿರ್ವಹಣೆಯಲ್ಲಿ ವಿಳಂಬವಾಗಬಾರದೆಂಬ ದೃಷ್ಟಿಯಿಂದ ಸಾಕ್ಷಿದಾರರಾಗಿ ಹಾಜರಾಗುವುದಕ್ಕೆ ಇರುವ ವಿನಾಯಿತಿಯನ್ನು ಸದನವು ಸಾಮಾನ್ಯವಾಗಿ ಕೈಬಿಡುತ್ತದೆ.

ಭಾರತದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 320ನೇ ಪ್ರಕರಣವು ಸದಸ್ಯರು ಜ್ಯೂರಿಗಳಾಗಿ ಸೇವೆ ಸಲ್ಲಿಸುವುದಕ್ಕೆ ವಿನಾಯಿತಿ ನೀಡುತ್ತದೆ. ಅಲ್ಲದೆ ವಿಧಾನಮಂಡಲವು ಸದಸ್ಯರು ಸಾಕ್ಷಿಗಳಾಗಿ ಹಾಜರಾಗುವುದಕ್ಕೆ ಅನುಮತಿ ನೀಡುತ್ತದೆ. ಸದಸ್ಯರು ಸದನದ ನಡವಳಿಕೆಗಳ ಬಗ್ಗೆ ಸಾಕ್ಷ್ಯವನ್ನು ನೀಡಬಯಸಿದರೆ, ಅವರು ಸದನದ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ.

ಹೌಸ್ ಆಫ್ ಕಾಮನ್ಸ್‌ನ ಹಕ್ಕುಬಾಧ್ಯತೆಗಳು ಈ ಮುಂದಿನಂತಿವೆ :–

(1) ಈ ಕೆಳಕಂಡ ಅಂಶಗಳನ್ನು ಒಳಗೊಂಡು ಹೌಸ್ ಆಫ್ ಕಾಮನ್ಸ್‌ನ ರಚನೆಗೆ ಸಂಬಂಧಿಸಿದ ಹಕ್ಕುಬಾಧ್ಯತೆ ಸದನಕ್ಕಿದೆ.

(ಎ) ಸದಸ್ಯರ ಮರಣ ಅಥವಾ ಅನ್ಯಥಾ ಇತರ ಕಾರಣಗಳಿಗಾಗಿ ತೆರವಾಗುವ ಆಕಸ್ಮಿಕ ಸ್ಥಾನಗಳನ್ನು ತುಂಬುವುದು;

(ಬಿ) ವಿವಾದಿತ ಚುನಾವಣೆಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದು;

(ಸಿ) ನ್ಯಾಯಿಕ ಅನರ್ಹತೆಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನವು ನಿರ್ದಿಷ್ಟವಾಗಿ ಗೊತ್ತುಪಡಿಸಿರುವುದರಿಂದ, ಈ ಹಕ್ಕುಬಾಧ್ಯತೆಗಳು ಭಾರತೀಯ ವಿಧಾನಮಂಡಲಗಳಿಗೆ ಅನ್ವಯವಾಗುವುದಿಲ್ಲ.

(2) ತನ್ನ ಸ್ವಂತ ಆಂತರಿಕ ವ್ಯವಹಾರಗಳು ಮತ್ತು ಕಾರ್ಯವಿಧಾನಗಳನ್ನು ನಿಯಂತ್ರಿಸುವ ಹಕ್ಕು.

ಈ ಹಕ್ಕು ಈ ಕೆಳಕಂಡ ಅಧಿಕಾರಗಳನ್ನೊಳಗೊಂಡಿದೆ:–

(ಎ) ಅಸಭ್ಯವಾಗಿ ವರ್ತಿಸಿದ ಸದಸ್ಯರನ್ನು ಸದನದ ಸೇವೆಯಿಂದ ಅಮಾನತು ಮಾಡುವ ಮೂಲಕ, ಅವರನ್ನು ವಿಚಾರಣೆಗೊಳಪಡಿಸುವ ಮೂಲಕ ಅಥವಾ ಅವರನ್ನು ಉಚ್ಚಾಟನೆ ಮಾಡುವ ಮೂಲಕ ಅವರನ್ನು ಶಿಕ್ಷಿಸುವ ಹಕ್ಕು.

(ಬಿ) ರಹಸ್ಯವಾಗಿ ಚರ್ಚೆ ನಡೆಸುವ ಅಧಿಕಾರ; ಮತ್ತು

(ಸಿ) ಸದನದೊಳಗೆ ನಡೆಯುವ ಅದರದೇ ಆದ ನಡವಳಿಗಳಿಗೆ ಸಂಬಂಧಿಸಿದಂತೆ ಯಾವುದೇ ಶಾಸನವನ್ನು ಸರಿಯಾಗಿ ವ್ಯಾಖ್ಯಾನಿಸುವಂತಹ ತನ್ನದೇ ಆದ ಪ್ರತ್ಯೇಕ ಅಧಿಕಾರಗಳನ್ನು ಒಳಗೊಂಡಿರುತ್ತದೆ. ಈ ವ್ಯಾಖ್ಯಾನವು ತಪ್ಪಾಗಿದ್ದರೂ ಸಹ, ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ನ್ಯಾಯಾಲಯಗಳು ಮಧ್ಯ ಪ್ರವೇಶಿಸುವ ಅಧಿಕಾರವನ್ನು ಹೊಂದಿರುವುದಿಲ್ಲ.

ಭಾರತೀಯ ವಿಧಾನಮಂಡಲಗಳೂ ಇದೇ ರೀತಿಯ ಅಧಿಕಾರಗಳನ್ನು ಹೊಂದಿರುತ್ತವೆ. ಅಂಥ ಅಧಿಕಾರವನ್ನು ಚಲಾಯಿಸಿ, ಸದಸ್ಯರ ಅನುಚಿತ ವರ್ತನೆಗಾಗಿ ಅವರನ್ನು ಅಮಾನತುಗೊಳಿಸಬಹುದು ಮತ್ತು ಉಚ್ಚಾಟಿಸಲೂಬಹುದು. ಅಂಥ ಸಂದರ್ಭಗಳಲ್ಲಿ ಅಪರಿಚಿತರನ್ನು (ಸಂಬಂಧಪಟ್ಟಿಲ್ಲದವರನ್ನು) ಹೊರ ಹೋಗುವಂತೆ ಆದೇಶಿಸಿ ಸದನದಲ್ಲಿ ರಹಸ್ಯವಾಗಿ ಚರ್ಚಿಸಲಾಗುವುದು. ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಗಳ ವ್ಯಾಖ್ಯಾನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಲಯಗಳು ಮಧ್ಯ ಪ್ರವೇಶಿಸುವುದಕ್ಕೆ ನಿರಾಕರಿಸಿವೆ.

(3) ವ್ಯಕ್ತಿ ನಿಂದನೆಗಳನ್ನು ಒಳಗೊಂಡ ವಿಷಯಗಳನ್ನು ಪತ್ರಿಕೆಗಳನ್ನು ಪ್ರಕಟಿಸುವ ಅಧಿಕಾರವನ್ನು ಸಂಸದೀಯ ಪತ್ರಿಕೆಗಳ ಅಧಿನಿಯಮ, 1840ರ ಮೂಲಕ ನಿರ್ಧರಿಸಲಾಗಿದೆ.

ಭಾರತದಲ್ಲಿ, ಭಾರತ ಸಂವಿಧಾನದ 194ನೇ ಅನುಚ್ಛೇದದ (2)ನೇ ಖಂಡದಲ್ಲಿ ಈ ಬಗ್ಗೆ ಒಂದು ನಿರ್ದಿಷ್ಟ ಉಪಬಂಧವಿದೆ. ಸದನವು ಅಥವಾ ಅದರ ಅನುಮತಿ ಪಡೆದ ಯಾರೇ ವ್ಯಕ್ತಿ ಯಾವುದೇ ಪತ್ರಿಕೆಯನ್ನು ಪ್ರಕಟಿಸಿದಲ್ಲಿ, ಅದರಲ್ಲಿ ವ್ಯಕ್ತಿ ನಿಂದನೆ ಇದ್ದಾಗ್ಯೂ ಅವರನ್ನು ಯಾವುದೇ ನ್ಯಾಯಾಲಯದ ವ್ಯವಹಾರಗಳಿಗೆ ಗುರಿಪಡಿಸಲಾಗುವುದಿಲ್ಲ.

(4) ಸದಸ್ಯರಾಗಿರಲಿ ಅಥವಾ ಅಲ್ಲದಿರಲಿ ಅಂಥ ವ್ಯಕ್ತಿಗಳನ್ನು ಹಕ್ಕುಚ್ಯುತಿಯುಂಟು ಮಾಡಿದ ಅಥವಾ ನಿಂದನೆ ಮಾಡಿದುದಕ್ಕಾಗಿ ಶಿಕ್ಷೆಗೆ ಗುರಿಪಡಿಸುವ ಅಧಿಕಾರ.

ಹೌಸ್ ಆಫ್ ಕಾಮನ್ಸ್‌ಗೆ ಅದರ ಹಕ್ಕುಬಾಧ್ಯತೆಗಳನ್ನು ಜಾರಿಗೊಳಿಸುವ ಮತ್ತು ಅವುಗಳನ್ನು ಉಲ್ಲಂಘಿಸುವವರು ಸದಸ್ಯರೇ ಆಗಿರಲಿ ಅಥವಾ ಅಪರಿಚಿತರಾಗಿರಲಿ ಅವರನ್ನು ಶಿಕ್ಷಿಸುವ ಅಧಿಕಾರ ಇರುತ್ತದೆ. ನಿಂದನೆಗಾಗಿ ಸದಸ್ಯರನ್ನು ಅಥವಾ ಅಪರಿಚಿತರನ್ನು ಶಿಕ್ಷಿಸುವ ಅಧಿಕಾರ ಸಹ ಇರುತ್ತದೆ. ಸದನದ ಅಥವಾ ಅದರ ಸದಸ್ಯರ ಬಗ್ಗೆ ಅವಮಾನಕರ ಅಥವಾ ನಿಂದನಾತ್ಮಕ ಲೇಖನಗಳು ಅಥವಾ ಹೇಳಿಕೆಗಳಂತಹವುಗಳು ಹಾಗೆಯೇ ಸಭೆಯ ಆದೇಶಗಳನ್ನು ಪಾಲಿಸದಿರುವುದು ಅಥವಾ ಸದನದ ಕಾರ್ಯಕಲಾಪಗಳಿಗೆ ಅಥವಾ ಅಧಿಕಾರಿಗಳಿಗೆ ಅಡ್ಡಿಯುಂಟು ಮಾಡುವುದು–ಇವು ಸಭಾ ನಿಂದನೆ ಮಾಡುವಂತಹ ಅಪರಾಧಗಳಾಗಿವೆ.

ಭಾರತೀಯ ವಿಧಾನಮಂಡಲಗಳೂ ಸಹ ಹಕ್ಕುಬಾಧ್ಯತೆಗಳ ಉಲ್ಲಂಘನೆ ಅಥವಾ ಸಭಾ ನಿಂದನೆ ಮಾಡುವವರನ್ನು ಶಿಕ್ಷಿಸುವಂತಹ ಅಧಿಕಾರವನ್ನು ಹೊಂದಿವೆ. ಗ್ಯಾಲರಿಯಲ್ಲಿನ ಪ್ರೇಕ್ಷಕರು ಸದನದ ಕಾರ್ಯಕಲಾಪಗಳಿಗೆ ಅಡ್ಡಿಯುಂಟು ಮಾಡಿದಾಗ, ಭಾರತದ ಹಲವಾರು ರಾಜ್ಯಗಳ ವಿಧಾನಮಂಡಲಗಳು ಅಂಥವರನ್ನು ಜೈಲಿಗಟ್ಟಿದ ಉದಾಹರಣೆಗಳಿವೆ.

ಸದನಕ್ಕೆ ಅಥವಾ ಸದನದ ಸಮಿತಿಗಳಿಗೆ ಹಾಜರಾಗುವಂತೆ ಆಹ್ವಾನಿಸಿದ ವ್ಯಕ್ತಿಗಳು ಅವರು ಸದನ ಅಥವಾ ಸಮಿತಿಗೆ ಹಾಜರಾಗಲು ಬರುವಾಗ ಅಥವಾ ಹಾಜರಾದ ನಂತರ ಹಿಂದಿರುಗುವಾಗ ಸಿವಿಲ್ ವ್ಯವಹರಣೆಗಳ ಅಡಿಯಲ್ಲಿ ಬಂಧನದಿಂದ ವಿನಾಯಿತಿ ಪಡೆದಿರುತ್ತಾರೆ.

ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ ವಿಷಯವನ್ನು ಸಭೆಯಲ್ಲಿ ಸೂಚಿಸುವ ವಿಧಾನ

ವಿಧಾನ ಪರಿಷತ್ತು ಅಥವಾ ಸಮಿತಿಯ ಸದಸ್ಯರು ತಮ್ಮ ಹಕ್ಕುಚ್ಯುತಿಯಾಗಿರುವ ಬಗ್ಗೆ ಸೂಚನೆಯನ್ನು ಕೊಡಬಹುದು. ಸೂಚನೆಯನ್ನು ಉಪವೇಶನ ಪ್ರಾರಂಭವಾಗುವುದಕ್ಕೆ ಮೊದಲು ನೀಡಬೇಕಾಗುತ್ತದೆ. ಸದರಿ ಹಕ್ಕುಬಾಧ್ಯತೆ ಉಲ್ಲಂಘನೆಗೆ ಸಂಬಂಧಿಸಿದ ವಿಷಯವು ಇತ್ತೀಚಿನ ಘಟನೆಯಾಗಿದ್ದು ನಿರ್ದಿಷ್ಟ ವಿಷಯಕ್ಕೆ ಮಾತ್ರ ಸೀಮಿತವಾಗಿರಬೇಕು. ಚರ್ಚಿಸಬೇಕಾಗಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಸಭಾಪತಿಯವರು ಪರಿಗಣಿಸಿದರೆ, ಅದನ್ನು ಸಭೆಯಲ್ಲಿ ಸೂಚಿಸಲು ತಮ್ಮ ಅನುಮತಿಯನ್ನು ನೀಡಬಹುದು. ಅಂಥ ವಿಷಯವನ್ನು ಪ್ರಶ್ನೋತ್ತರಗಳ ತರುವಾಯ ಮತ್ತು ಆ ದಿನದ ಕಾರ್ಯಕಲಾಪಗಳು ಪ್ರಾರಂಭವಾಗುವುದಕ್ಕೆ ಮುಂಚೆ ಸೂಚಿಸಬಹುದು. ಆ ವಿಷಯದಲ್ಲಿ ಆಕ್ಷೇಪಗಳನ್ನು ಎತ್ತಿದರೆ, ಸಭಾಪತಿಗಳು ನೀಡಿರುವ ಅನುಮತಿಯ ಪರವಾಗಿರುವ ಸದಸ್ಯರು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲುವಂತೆ ಕೋರುತ್ತಾರೆ. ಅದಕ್ಕನುಸಾರವಾಗಿ ಹತ್ತಕ್ಕಿಂತ ಹೆಚ್ಚು ಮಂದಿ ಸದಸ್ಯರು ಎದ್ದು ನಿಂತರೆ, ಅನುಮತಿ ನೀಡಲಾಗಿದೆ ಎಂದು ಸಭಾಪತಿಯವರು ಹೇಳತಕ್ಕದ್ದು. ಸಭೆಯ ಅನುಮತಿ ದೊರೆತ ನಂತರ ಪರಿಷತ್ತು ವಿಷಯಗಳನ್ನು ಪರಿಶೀಲಿಸಿ, ಒಂದು ನಿರ್ಣಯಕ್ಕೆ ಬರಬಹುದು ಅಥವಾ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಬಹುದು. ವಿಧಾನಸಭೆಯು ಸಹ ಯಾವುದೇ ಹಕ್ಕುಚ್ಯುತಿಗೆ ಸಂಬಂಧಿಸಿದ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬಹುದು.

ಸಮಿತಿಯು ಸದನಕ್ಕೆ ವರದಿಯನ್ನು ಸಲ್ಲಿಸಿದ ತರುವಾಯ, ಸದನವು ಅದನ್ನು ಪರಿಶೀಲಿಸಿ ಅಂಗೀಕರಿಸಬಹುದು. ಸಾಮಾನ್ಯವಾಗಿ ಸಮಿತಿಯು ಯಾವುದೇ ಕ್ರಮವನ್ನು ತೆಗೆದುಕೊಳ್ಳುವಂತೆ ಶಿಫಾರಸು ಮಾಡಿದರೆ, ಸದನವು ಸದರಿ ವರದಿಯನ್ನು ಪರಿಶೀಲಿಸುತ್ತದೆ.

ಸಮಿತಿಗಳು

(ವಿ.ಪ.ನಿಯಮಗಳು 190–273, 349 ಮತ್ತು 350)

ಸಮಿತಿಗಳು ಶಾಸಕಾಂಗ ಸಂಸ್ಥೆಗಳ ಅವಿಭಾಜ್ಯ ಅಂಗಗಳಾಗಿವೆ. ವಿಧಾನಮಂಡಲದ ಪ್ರಮುಖ ವ್ಯವಹಾರಗಳನ್ನು ನಿರ್ವಹಿಸಲು ಅನುಕೂಲವಾಗುವಂತೆ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಸಂಸತ್ತು ಮತ್ತು ವಿಧಾನಮಂಡಲಗಳಿಗೆ ಸಮಯಾವಕಾಶವಿಲ್ಲದಿರುವುದರಿಂದ ಮತ್ತು ಅನೇಕ ವಿಷಯಗಳನ್ನು ವಿವರವಾಗಿ ಅಭ್ಯಸಿಸಿ ಪರಿಣತಿಯನ್ನು ಪಡೆದುಕೊಳ್ಳುವ ದೃಷ್ಟಿಯಿಂದ ಅನೇಕ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ಮಹತ್ವದ ವಿಷಯಗಳನ್ನು ಚರ್ಚಿಸುವುದಕ್ಕೆ ಗಮನ ನೀಡುವುದರಿಂದ ವಿಧಾನಮಂಡಲದ ಸಮಯ ಅನವಶ್ಯಕವಾಗಿ ವ್ಯರ್ಥವಾಗುವುದನ್ನು ತಡೆಯುತ್ತದೆ. ಸಮಿತಿ ಪದ್ಧತಿಯ ಮತ್ತೊಂದು ಅನುಕೂಲಕರ ಲಕ್ಷಣವೆಂದರೆ, ಸಮಿತಿಯಲ್ಲಿ ಸದನದಲ್ಲಿರುವುದಕ್ಕಿಂತ ಭಿನ್ನವಾದ ವಾತಾವರಣವಿರುತ್ತದೆ. ಸದನದಲ್ಲಿ ಪಕ್ಷ ಮನೋಭಾವವಿರುತ್ತದೆ. ಸಮಿತಿಯ ವಾತಾವರಣ ಹಾಗೆ ಇರುವುದಿಲ್ಲ. ಸಮಿತಿಯ ಪ್ರಕಾರ್ಯಗಳು ಪಕ್ಷಾಂತರವಾಗಿರುತ್ತವೆ. ಆದ್ದರಿಂದ ಸಮಿತಿಗಳ ವಾತಾವರಣ ಉತ್ತಮ ಕಾರ್ಯನಿರ್ವಹಣೆಗೆ ಅನುಕೂಲವಾಗಿರುತ್ತವೆ.

ಸಮಿತಿಗಳನ್ನು ಈ ಮುಂದಿನ ಪ್ರವರ್ಗಗಳಾಗಿ ವರ್ಗೀಕರಿಸಬಹುದು.

1) ವಿಚಾರಣಾ ಸಮಿತಿಗಳು (ಉದಾ: ಅರ್ಜಿಗಳ ಸಮಿತಿ ಮತ್ತು ಹಕ್ಕುಬಾಧ್ಯತಾ ಸಮಿತಿ)
2) ಪರಿಶೀಲನಾ ಸಮಿತಿಗಳು (ಉದಾ:ಭರವಸೆಗಳ ಸಮಿತಿ ಮತ್ತು ಅಧೀನ ಶಾಸನ ರಚನಾ ಸಮಿತಿ)
3) ನಿಯಂತ್ರಣ ಸಮಿತಿಗಳು (ಉದಾ: ಅಂದಾಜುಗಳ ಸಮಿತಿ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಸಾರ್ವಜನಿಕ ಉದ್ಯಮಗಳ ಸಮಿತಿ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ಮತ್ತು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿ)
4) ಸಲಹಾ ಸಮಿತಿಗಳು (ಉದಾ: ಕಾರ್ಯಕಲಾಪಗಳ ಸಲಹಾ ಸಮಿತಿ, ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ, ಸದನ ಸಮಿತಿ ಮತ್ತು ಗ್ರಂಥಾಲಯ ಸಮಿತಿ).
5) ತಾತ್ಪೂರ್ತಿಕ ಸಮಿತಿಗಳು (ನಿಯಮಗಳಿಗೆ ಸಂಬಂಧಿಸಿದ ಸಮಿತಿ, ಆಯ್ಕೆ ಮತ್ತು ಜಂಟಿ ಆಯ್ಕೆ ಸಮಿತಿಗಳು)

ಈ ಕೆಳಕಂಡ ಯಾವುದೇ ಒಂದು ವಿಧಾನದ ಮೂಲಕ ಸದಸ್ಯರನ್ನು ಸಮಿತಿಗೆ ನೇಮಕ ಮಾಡಬಹುದು:–

1) ಸದನದಲ್ಲಿ ಪ್ರಸ್ತಾವವನ್ನು ಅಂಗೀಕರಿಸುವ ಮೂಲಕ
2) ಸಭೆ ಚುನಾಯಿಸುವ ಮೂಲಕ

– ವಿಧಾನಸಭೆಯಿಂದ ನಾಮನಿರ್ದೇಶಿತವಾದುದು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿ ಯಾವ ಸಮಿತಿಗಳನ್ನು ವಿಧಾನ ಪರಿಷತ್ತಿನ ಚುನಾವಣೆಯ ಮೂಲಕ ಅಥವಾ ನಾಮನಿರ್ದೇಶನದ ಮೂಲಕ ರಚಿಸಬೇಕು ಎಂಬುದನ್ನು ಉಪಬಂಧಿಸುತ್ತವೆ.

ಸದನ ಅಥವಾ ಸದನಗಳ ಸಮಿತಿಗಳಿಗೆ ನಡೆಯುವ ಚುನಾವಣೆಗಳು, ಪರಿಷತ್ತು ಈ ಸಂಬಂಧದಲ್ಲಿ ರೂಪಿಸಿದ ವಿನಿಯಮಗಳಿಗನುಸಾರವಾಗಿ ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯದ ನಿಯಮಗಳಿಗನುಸಾರವಾಗಿ ನಡೆಯುತ್ತವೆ. ಸಮಿತಿಗೆ ಸದಸ್ಯರನ್ನು ಚುನಾವಣೆ ಮಾಡುವುದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಸದನದ ನಾಯಕರು ಮಂಡಿಸುತ್ತಾರೆ. ಸದರಿ ಪ್ರಸ್ತಾವವನ್ನು ಮಂಡಿಸಿ, ಸಭೆಯು ಅಂಗೀಕರಿಸಿದ ತರುವಾಯ, ಸಭಾಪತಿಯವರು ಎಂದರೆ ನಾಮಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕ, ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ, ಅಭ್ಯರ್ಥಿ ತನ್ನ ಉಮೇದುವಾರಿಕೆಯನ್ನು ಹಿಂಪಡೆಯುವ ದಿನಾಂಕ ಮತ್ತು ಚುನಾವಣೆ ಅನಿವಾರ್ಯವಾದರೆ ಚುನಾವಣೆಯನ್ನು ನಡೆಸುವ ದಿನಾಂಕ ಮುಂತಾದವುಗಳನ್ನು ಒಳಗೊಂಡು ಚುನಾವಣಾ ಕಾರ್ಯಕ್ರಮದ ಪಟ್ಟಿಯನ್ನು ನಿಗದಿಪಡಿಸುತ್ತಾರೆ. ಪ್ರತಿ ಚುನಾವಣೆಗೆ ಸಂಬಂಧಿಸಿದ ನಾಮಪತ್ರಗಳನ್ನು ಸೂಚನಾಪತ್ರ ಶಾಖೆಯಿಂದ ಪಡೆದುಕೊಳ್ಳಬಹುದು.

ವಿಧೇಯಕಗಳ ಜಂಟಿ ಆಯ್ಕೆ ಸಮಿತಿಯ ಹೊರತಾಗಿ ಇತರ ಎಲ್ಲಾ ಸಮಿತಿಗಳ ಅಧ್ಯಕ್ಷರನ್ನು ವಿಧಾನಸಭೆಯ ಅಧ್ಯಕ್ಷರು/ವಿಧಾನ ಪರಿಷತ್ತಿನ ಸಭಾಪತಿಯವರು ನೇಮಕ ಮಾಡುತ್ತಾರೆ. ಆದರೆ, ಉಪ–ಸಭಾಪತಿಯವರು ನಿರ್ದಿಷ್ಟ ಸಮಿತಿಯ ಸದಸ್ಯರಾಗಿದ್ದರೆ, ಅವರನ್ನು ಸದರಿ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ. ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿ ಉಪ–ಸಭಾಪತಿಯವರು ಅನುಕ್ರಮವಾಗಿ ಸದನ ಸಮಿತಿ ಮತ್ತು ಅರ್ಜಿಗಳ ಸಮಿತಿಯ ಸದಸ್ಯರಾಗಲು ಅವಕಾಶ ಕಲ್ಪಿಸಲಾಗಿದೆ. ಸಮಿತಿಯ ಅಧ್ಯಕ್ಷರಿಗೆ ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದಲ್ಲಿ, ಅಧ್ಯಕ್ಷರು ಆ ಸಮಿತಿಗೆ ಮತ್ತೊಬ್ಬ ಅಧ್ಯಕ್ಷರನ್ನು ನೇಮಕ ಮಾಡಬಹುದು, ಸಮಿತಿಯ ಅಧ್ಯಕ್ಷರು ಯಾವುದೇ ಸಭೆಗೆ ಗೈರುಹಾಜರಾದರೆ, ಸಮಿತಿಯು ಅಂಥ ಸಭೆಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ಮತ್ತೊಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು.

ನಿಯಮಗಳಲ್ಲಿ ವಿಶೇಷವಾಗಿ ನಮೂದಿಸಿದ ಸಂದರ್ಭಗಳ ಹೊರತು, ಒಂದು ಸಮಿತಿಯ ಸಭೆಗೆ ಸಮಿತಿಯ ಸದಸ್ಯರುಗಳ ಪೈಕಿ 1/4 (ನಾಲ್ಕನೇ ಒಂದರಷ್ಟು) ರಷ್ಟು ಕೋರಂ ಇರಬೇಕು.

ಸಮಿತಿಗಳು ಎರಡು ವರ್ಷಗಳನ್ನು ಮೀರದ ಅವಧಿಯವರೆಗೆ ಅಧಿಕಾರದಲ್ಲಿ ಇರುತ್ತವೆ.

ಸಂವಿಧಾನ ಜಾರಿಗೆ ಬಂದ ದಿನದಂದು ಪ್ರಾರಂಭದಲ್ಲಿ ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ನ ಸಮಿತಿಗಳು ಹೊಂದಿದ್ದಂತಹ ಅಧಿಕಾರಗಳನ್ನು ವಿಧಾನಮಂಡಲ ಸಮಿತಿಗಳು ಹೊಂದಿರುತ್ತವೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಲ್ಲಿಯೂ ಸಹ ಸಮಿತಿಗಳ ಅಧಿಕಾರಗಳನ್ನು ವಿವರಿಸಲಾಗಿದೆ. ಯಾವ ವ್ಯಕ್ತಿಯನ್ನಾಗಲಿ ಹಾಜರಾಗುವಂತೆ ಕರೆಸಲು, ಕಾಗದ ಪತ್ರಗಳನ್ನು ಮತ್ತು ದಾಖಲೆಗಳನ್ನು ತರಿಸಿಕೊಳ್ಳಲು ಸಮಿತಿಗೆ ಅಧಿಕಾರವಿರುತ್ತದೆ. ಆದರೆ ಯಾರೇ ವ್ಯಕ್ತಿಯ ಸಾಕ್ಷ್ಯವನ್ನು ಪಡೆದುಕೊಳ್ಳುವುದು ಅಥವಾ ದಾಸ್ತಾವೇಜುಗಳನ್ನು ಹಾಜರುಪಡಿಸುವುದು ಸಮಿತಿಯ ಉದ್ದೇಶಗಳಿಗೆ

ಸಂಬಂಧಪಟ್ಟಿದೆಯೇ ಎಂಬ ಪ್ರಶ್ನೆ ಉದ್ಭವಿಸಿದರೆ, ಆ ಪ್ರಶ್ನೆಯನ್ನು ಪರಿಷತ್ತಿನ ಪರಿಶೀಲನೆಗೆ ಬಿಡಲಾಗುತ್ತದೆ ಮತ್ತು ಅವರ ತೀರ್ಮಾನವು ಅಂತಿಮವಾಗಿರುತ್ತದೆ. ಅಲ್ಲದೆ ಯಾವುದೇ ಒಂದು ನಿರ್ದಿಷ್ಟ ದಸ್ತಾವೇಜನ್ನು ಬಹಿರಂಗಪಡಿಸುವುದರಿಂದ ಅದು ರಾಜ್ಯದ ಸುಭದ್ರತೆ ಹಾಗೂ ಹಿತದೃಷ್ಟಿಗೆ ಮಾರಕವಾಗುತ್ತದೆಂಬ ಕಾರಣದಿಂದ ಸರ್ಕಾರವು ಆ ದಸ್ತಾವೇಜನ್ನು ಹಾಜರುಪಡಿಸಲು ನಿರಾಕರಿಸಬಹುದು.

ಕಾರ್ಯದರ್ಶಿಯವರು ಸಹಿ ಮಾಡಿದ ಆದೇಶದ ಮೂಲಕ ಸಾಕ್ಷಿದಾರನನ್ನು ಕರೆಸಬಹುದು. ಸಮಿತಿಯು ವಿಚಾರಣೆ ಪ್ರಾರಂಭಿಸುವುದಕ್ಕೆ ಮೊದಲು ಸಾಕ್ಷಿದಾರನಿಂದ ಪ್ರಮಾಣ ವಚನ ಅಥವಾ ಸತ್ಯ ವಚನವನ್ನು ತೆಗೆದುಕೊಳ್ಳಬಹುದು. ಸಾಕ್ಷಿದಾರನು ಸಮಿತಿಯ ಮುಂದೆ ಹಾಜರಾದಾಗ, ಮೊದಲು ಸಮಿತಿಯ ಅಧ್ಯಕ್ಷರು ಪರಿಶೀಲನೆಗೆ ಬಂದಿರುವ ವಿಷಯದ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು ಪ್ರಶ್ನೆಗಳನ್ನು ಕೇಳುತ್ತಾರೆ. ಆನಂತರ ಇತರ ಸದಸ್ಯರು ಒಬ್ಬೊಬ್ಬರಾಗಿ ಪ್ರಶ್ನೆಗಳನ್ನು ಕೇಳಬಹುದು. ಸಾಕ್ಷ್ಯವನ್ನು ನೀಡುವುದಕ್ಕೆ ಸಾಕ್ಷಿಯನ್ನು ಕರೆಸಿದಾಗ, ಸಮಿತಿಯ ವ್ಯವಹರಣೆಗಳ ಪದಶಃ ವಿವರಗಳನ್ನು ಬರೆದಿಡಲಾಗುವುದು. ಸಮಿತಿಯು ಪರಿಶೀಲಿಸಿದ ನಂತರ ವಿಧಾನ ಪರಿಷತ್ತಿಗೆ ವರದಿಯನ್ನು ಸಲ್ಲಿಸಲಾಗುವುದು.

ಸಮಿತಿಯು ಸಾಮಾನ್ಯವಾಗಿ ಸದನದ ಆವರಣದೊಳಗೆ ತನ್ನ ಸಭೆಗಳನ್ನು ನಡೆಸುತ್ತದೆ. ಯಾವುದೇ ಕಾರಣಗಳಿಗಾಗಿ ಸದನದ ಆವರಣದಿಂದ ಹೊರಗೆ ಸಮಿತಿಯ ಸಭೆಗಳನ್ನು ನಡೆಸುವುದು ಅನಿವಾರ್ಯವಾದರೆ, ಸದರಿ ವಿಷಯವನ್ನು ಪರಿಷತ್ತಿನ ಅಧ್ಯಕ್ಷರಿಗೆ ಒಪ್ಪಿಸತಕ್ಕದ್ದು ಮತ್ತು ಅವರ ನಿರ್ಣಯವೇ ಅಂತಿಮವಾಗಿರುತ್ತದೆ. ಸಮಿತಿಯ ಸಭೆಗಳನ್ನು ರಹಸ್ಯವಾಗಿ ನಡೆಸಬೇಕೇ ಹೊರತು ಸಾರ್ವಜನಿಕವಾಗಿ ನಡೆಸುವಂತಿಲ್ಲ. ಯಾರೇ ಹೊರಗಿನ ವ್ಯಕ್ತಿಗಳು ಅಥವಾ ಪತ್ರಿಕಾ ಪ್ರತಿನಿಧಿಗಳಿಗೆ ಸಭೆಗೆ ಅನುಮತಿ ನೀಡುವಂತಿಲ್ಲ. ಒಂದು ಸಮಿತಿಯ ನಡವಳಿಕೆಗಳು ರಹಸ್ಯವೆಂದು ಪರಿಗಣಿಸಬೇಕು ಮತ್ತು ನಡವಳಿಗಳಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಥವಾ ಮಾಧ್ಯಮಗಳಿಗಾಗಲೀ ಅಥವಾ ಯಾರೇ ವ್ಯಕ್ತಿಗಳಿಗಾಗಲಿ ತಿಳಿಸಬಾರದು.

ಆಡಳಿತಾತ್ಮಕ ಸುಧಾರಣೆಗಳು

ಸಂಸದೀಯ ಶಿಷ್ಟಾಚಾರಗಳು (ಸಂಪ್ರದಾಯಗಳು) ಮತ್ತು ಚರ್ಚಾ ನಿಯಮಗಳು
(ವಿ.ಪ.ನಿಯಮಗಳು 303–311)

ಆಲೋಚನಾಪೂರ್ಣವಾದ ಚರ್ಚೆ ಮತ್ತು ವಿಚಾರ ವಿನಿಮಯಗಳು ಸಾಂಸದಿಕ ಪ್ರಜಾಪ್ರಭುತ್ವದ ಸಾರಸತ್ವವಾಗಿದೆ. ಚರ್ಚಿಸಿ ಮನವೊಲಿಸುವ ಮೂಲಕ ಆಡಳಿತ ನಡೆಸುವುದು ಪ್ರಜಾಪ್ರಭುತ್ವ ಪದ್ಧತಿಯ ಸರ್ಕಾರದ ಲಕ್ಷಣವಾಗಿದೆ. ಚರ್ಚೆಯು ಯಾವುದೇ ವೈಮನಸ್ಯಗಳಿಗೆ ಅವಕಾಶ ನೀಡದೆ ಅಭಿಪ್ರಾಯಗಳ ಮುಕ್ತ ಅಭಿವ್ಯಕ್ತಿಗೆ ಅನುಕೂಲಕರವಾದ ವಾತಾವರಣದಲ್ಲಿ ನಡೆಯುವಂತೆ ಮತ್ತು ವಿರೋಧಾಭಿಪ್ರಾಯಗಳನ್ನು ಪೂರ್ಣವಾಗಿ ಗಮನಿಸಿ ಸೌಜನ್ಯ ಮತ್ತು ಸಹನೆಯನ್ನು ತೋರಿಸುವಂತೆ ನೋಡಿಕೊಳ್ಳುವುದು ಅತ್ಯಂತ ಮುಖ್ಯ. ಚರ್ಚಾ ನಿಯಮಗಳನ್ನು ಪ್ರಮುಖವಾಗಿ ಈ ಮುಂದಿನ ಅಂಶಗಳನ್ನವಲಂಬಿಸಿ ರಚಿಸಲಾಗಿದೆ.

ವಿಧಾನ ಪರಿಷತ್ತಿನ ಉಪವೇಶನಗಳು ನಡೆಯುತ್ತಿರುವಾಗ ಸದನದಲ್ಲಿ ಸದಸ್ಯರು ಅನುಸರಿಸಬೇಕಾದ ನಿಯಮಗಳು

ಸದನದ ಕಾರ್ಯಕಲಾಪಗಳಿಗೆ ಸಂಬಂಧಿಸಿದ ವಿಷಯವನ್ನು ಹೊರತುಪಡಿಸಿ, ಯಾವುದೇ ಪುಸ್ತಕ, ವೃತ್ತ ಪತ್ರಿಕೆ ಅಥವಾ ಕಾಗದ ಪತ್ರಗಳನ್ನು ಓದಬಾರದು;

ಸದಸ್ಯರು ಸದನವನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ನಿರ್ಗಮಿಸುವಾಗ ಮತ್ತು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವಾಗ ಅಥವಾ ಜಾಗವನ್ನು ಬಿಡುವಾಗ ಸಭಾಪತಿಯವರ ಪೀಠಕ್ಕೆ ವಂದಿಸತಕ್ಕದ್ದು;

ಸಭಾಪತಿಯವರ ಮತ್ತು ಮಾತನಾಡುತ್ತಿರುವ ಸದಸ್ಯರ ಮಧ್ಯೆ ಹಾದು ಹೋಗಬಾರದು;

ಸಭಾಪತಿಯವರು ಸಭೆಯನ್ನುದ್ದೇಶಿಸಿ ಭಾಷಣ ಮಾಡುವಾಗ ತನ್ನ ಸ್ಥಾನದಲ್ಲಿರಬೇಕು;

ಪರಿಷತ್ತಿನಲ್ಲಿ ಸದಸ್ಯರು ತಾವು ಭಾಷಣ ಮಾಡದೇ ಇರುವಾಗ ನಿಶ್ಯಬ್ಧವಾಗಿರಬೇಕು;

ಪರಿಷತ್ತಿನಲ್ಲಿ ಭಾಷಣ ಮಾಡುತ್ತಿರುವಾಗ ಒಂದೇ ಸಮನೆ ಟೀಕೆ ಮಾಡಬಾರದು.

ಯಾರೇ ಹೊಸಬರು ಪ್ರೇಕ್ಷಕರ ಗ್ಯಾಲರಿಯನ್ನು ಪ್ರವೇಶಿಸಿದಾಗ ಹರ್ಷಧ್ವನಿ ಮಾಡಬಾರದು.

ಸದನದಲ್ಲಿ ಘೋಷಣೆಗಳನ್ನು ಕೂಗಬಾರದು;

ಪೀಠಕ್ಕೆ ಬೆನ್ನು ತೋರಿಸುವಂತೆ ಕುಳಿತುಕೊಳ್ಳಬಾರದು ಅಥವಾ ನಿಲ್ಲಬಾರದು;

ಸದನದಲ್ಲಿ ಸಭಾಪತಿಯವರ ಪೀಠದ ಬಳಿ ಖುದ್ದಾಗಿ ಹೋಗುವಂತಿಲ್ಲ, ಅವಶ್ಯವೆನಿಸಿದರೆ ಸದಸ್ಯರು ಸದನದ ಅಧಿಕಾರಿಗಳ ಮೂಲಕ ಚೀಟಿ ಕಳುಹಿಸಬಹುದು;

ಸದನದಲ್ಲಿ ಯಾವುದೇ ಬ್ಯಾಡ್ಜುಗಳು ಅಥವಾ ವಸ್ತುಗಳನ್ನು ಧರಿಸುವಂತಿಲ್ಲ ಅಥವಾ ಪ್ರದರ್ಶಿಸುವಂತಿಲ್ಲ;

ಸದನದಲ್ಲಿ ಶಸ್ತ್ರಗಳನ್ನು ತರಬಾರದು ಅಥವಾ ಪ್ರದರ್ಶಿಸಬಾರದು;

ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸಬಾರದು;

ತಮ್ಮ ಭಾಷಣವಾದ ತರುವಾಯ, ಕೂಡಲೆ ಸದನವನ್ನು ಬಿಟ್ಟು ಹೊರ ಹೋಗಬಾರದು;

ಸದನದ ವ್ಯವಹಾರಗಳಿಗೆ ಸಂಬಂಧಪಡದ ಯಾವುದೇ ಬರವಣಿಗೆ, ಪ್ರಶ್ನಾವಳಿ, ಕರಪತ್ರಗಳು, ಪತ್ರಿಕಾ ಹೇಳಿಕೆಗಳು, ಕಾಗದದ ಹಾಳೆಗಳು ಮೊದಲಾದವುಗಳನ್ನು ಸದನದ ಆವರಣದೊಳಗೆ ಹಂಚುವಂತಿಲ್ಲ;

ಸದನದಲ್ಲಿ ಡೆಸ್ಕ್ ಮೇಲೆ ತಮ್ಮ ಟೋಪಿಗಳನ್ನು ಇಡಬಾರದು. ಕಡತಗಳನ್ನು ಇಡಲು ಅಥವಾ ಬರೆಯುವ ಉದ್ದೇಶಕ್ಕಾಗಿ ರಟ್ಟನ್ನು ತರುವಂತಿಲ್ಲ, ಧೂಮಪಾನ ಮಾಡುವಂತಿಲ್ಲ ಅಥವಾ ಕೋಟನ್ನು ಕೈಯಲ್ಲಿ ಹಿಡಿದು ಸದನವನ್ನು ಪ್ರವೇಶಿಸಬಾರದು;

ಸಭಾಪತಿಯವರು ಆರೋಗ್ಯದ ಕಾರಣಗಳಿಗಾಗಿ ಅನುಮತಿ ನೀಡಿದ ಹೊರತು ಸದನದೊಳಗೆ ಊರುಗೋಲನ್ನು ತರುವಂತಿಲ್ಲ;

ಪ್ರತಿಭಟನಾರ್ಥವಾಗಿ ಸದನದಲ್ಲಿ ಯಾವುದೇ ದಾಖಲೆಗಳನ್ನು ಹರಿಯಬಾರದು;

ಸದನದಲ್ಲಿ ಕ್ಯಾಸೆಟ್ ಅಥವಾ ಟೇಪ್ ರೆಕಾರ್ಡರ್‌ಗಳನ್ನು ತರುವಂತಿಲ್ಲ ಮತ್ತು ಹಾಕುವಂತಿಲ್ಲ;

ಸದನಕ್ಕೆ ಜೋರಾಗಿ ಕೇಳಿಸುವಂತೆ ಮೊಗಸಾಲೆಯಲ್ಲಿ ಜೋರಾಗಿ ಮಾತನಾಡುವುದಾಗಲೀ ಅಥವಾ ನಗುವುದಾಗಲೀ ಮಾಡುವಂತಿಲ್ಲ;

ಸದನದಲ್ಲಿ ಭಾಷಣ ಮಾಡುವಾಗ ಸದಸ್ಯರು ಅನುಸರಿಸಬೇಕಾದ ನಿಯಮಗಳು

ಭಾಷಣ ಮಾಡುವುದಕ್ಕೆ ಅಥವಾ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅಪೇಕ್ಷಿಸುವ ಯಾರೇ ಸದಸ್ಯರು ತಮ್ಮ ಸ್ಥಾನಗಳಲ್ಲಿ ಎದ್ದು ನಿಂತು ಅಧ್ಯಕ್ಷರು (ಸಭಾಪತಿಗಳು) ಕರೆದಾಗ, ತಮ್ಮ ಪ್ರತಿಕ್ರಿಯೆಯನ್ನು ನೀಡಬೇಕು. ಸದಸ್ಯರು, ಸಭಾಪತಿಯವರು ಗೊತ್ತುಪಡಿಸಿದ ಸ್ಥಾನಗಳಲ್ಲಿಯೇ ಕುಳಿತುಕೊಳ್ಳುವುದು ಅಗತ್ಯ. ತಮಗೆ ಹಂಚಿಕೆ ಮಾಡಲಾದ ಆಸನಗಳಿಂದಲೇ ಅವರು ಮಾತನಾಡಬೇಕು. ಸದಸ್ಯರು ಮಾತನಾಡುವಾಗ ಎದ್ದು ನಿಂತುಕೊಳ್ಳಬೇಕು. ಸದಸ್ಯರು ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಅಥವಾ ಯಾವುದೇ ಕಾರಣದಿಂದಾಗಿ ನಿಂತುಕೊಳ್ಳುವುದು ಸಾಧ್ಯವಾಗದಿದ್ದಲ್ಲಿ, ಸಭಾಪತಿಯವರು, ಅವರು ಕುಳಿತುಕೊಂಡು ಮಾತನಾಡಲು ಅನುಮತಿ ನೀಡಬಹುದು.

ಚರ್ಚೆಯು ಸ್ವಾರಸ್ಯಕರವಾಗಿ ಮತ್ತು ಲವಲವಿಕೆಯಿಂದ ಕೂಡಿರಲಿ ಎಂಬ ಉದ್ದೇಶದಿಂದ ಸದಸ್ಯರು ಲಿಖಿತ ಸಿದ್ಧ ಭಾಷಣವನ್ನು ಓದದೆ, ಹಾಗೆಯೇ ಭಾಷಣ ಮಾಡಬೇಕು. ಆದರೂ ಸದಸ್ಯರು ತಾವು ಸಿದ್ಧಪಡಿಸಿಕೊಂಡಿರುವ ಟಿಪ್ಪಣಿಗಳನ್ನು ನೋಡಬಹುದು. ಪ್ರಸ್ತಾವವನ್ನು ಮಂಡಿಸಿದಾಗ ಚರ್ಚೆ ಪ್ರಾರಂಭವಾಗುತ್ತದೆ. ಸಭಾಪತಿಯವರು ಅದನ್ನು ಸಭೆಗೆ ಸೂಚಿಸುತ್ತಾರೆ. ಅದನ್ನು ಅಂತಿಮವಾಗಿ ಸದನದ ಮತಕ್ಕೆ ಹಾಕಲಾಗುತ್ತದೆ. ಸಭಾಪತಿಯವರು ಸಭೆಯ ಮತವನ್ನು ಪಡೆದುಕೊಂಡ ನಂತರ ಸದಸ್ಯರು ಮಾತನಾಡುವಂತಿಲ್ಲ. ಸದಸ್ಯರು ಮಾತನಾಡುವಾಗ, ಅವರು ಅವಕಾಶ ನೀಡದ ಹೊರತು ಮತ್ತೊಬ್ಬ ಸದಸ್ಯರು ಅವರಿಗೆ ಅಡ್ಡಿಪಡಿಸಬಾರದು. ವೈಯಕ್ತಿಕ ವಿವರಣೆ ನೀಡುವಂತಹ ಸಂದರ್ಭಗಳ ಹೊರತು ಯಾವ ಸದಸ್ಯರೇ ಆಗಲಿ ಮಧ್ಯ ಪ್ರವೇಶಿಸುವುದು ಸರಿಯಾದ ಕ್ರಮವಲ್ಲ. ಸದಸ್ಯರು ಒಂದು ಪ್ರಶ್ನೆಯ ಬಗ್ಗೆ ಒಮ್ಮೆ ಮಾತ್ರ ಮಾತನಾಡಬಹುದು. ನಿಯಮಗಳಲ್ಲಿ ಉಪಬಂಧಿಸಿರುವುದರ ಮೇರೆಗೆ ಉತ್ತರ ನೀಡುವ ಅಧಿಕಾರದ ರೂಪದಲ್ಲಿ ಸದಸ್ಯರು ಎರಡನೇ ಸಾರಿ ಮಾತನಾಡಬಹುದು. ಪ್ರಸ್ತಾವನೆಯನ್ನು ಮಂಡಿಸಿದ ಸದಸ್ಯರಿಗೆ ಮಾತ್ರ ಉತ್ತರಿಸುವ ಅಧಿಕಾರವಿರುತ್ತದೆ. ತಿದ್ದುಪಡಿ ಸೂಚಿಸಿದ ಸದಸ್ಯರಿಗೆ ಉತ್ತರಿಸುವ ಅಧಿಕಾರವಿರುವುದಿಲ್ಲ. ಪ್ರಸ್ತಾವ ಸೂಚಿಸಿರುವ ಸದಸ್ಯರು ಉತ್ತರ ನೀಡಿದ ನಂತರ ಪೀಠದ ಅನುಮತಿಯೊಂದಿಗೆ ಸಚಿವರು ಉತ್ತರಿಸಬಹುದು.

ಒಂದು ವಿಷಯದ ಮೇಲೆ ಚರ್ಚೆ ನಡೆಯುವಾಗ ಆ ವಿಷಯಕ್ಕೆ ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿರಬೇಕೆಂಬುದು ಸಾಂಸದಿಕ ಸಂಪ್ರದಾಯ. ಅಲ್ಲದೆ ಸದಸ್ಯರು, ಸಚಿವರು ನೀಡುವ ಉತ್ತರವನ್ನು ಕೇಳಿಸಿಕೊಳ್ಳದೆ ಮಾತನಾಡುವುದು ಮತ್ತು ಮಧ್ಯದಲ್ಲಿಯೇ ಹೊರಗೆ ಹೋಗುವುದು ಸಮುಚಿತ ಕ್ರಮವಲ್ಲ.

ಸದಸ್ಯರು ಮಾತನಾಡುವಾಗ ಯಾವಾಗಲು ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡಬೇಕೇ ಹೊರತು ವೈಯಕ್ತಿಕವಾಗಿ ಯಾರೇ ಸದಸ್ಯರನ್ನುದ್ದೇಶಿಸಿ ಮಾತನಾಡಬಾರದು. ಇತರ ಸದಸ್ಯರನ್ನುದ್ದೇಶಿಸಿ ಮಾತನಾಡುವ ಸಂದರ್ಭ ಬಂದಾಗ, ಸದಸ್ಯರು, ಅಂಥ ಸದಸ್ಯರ ಚುನಾವಣಾ ಕ್ಷೇತ್ರವನ್ನು ಉಲ್ಲೇಖಿಸಿ ಮಾತನಾಡಬೇಕೇ ಹೊರತು ಅವರ ಹೆಸರುಗಳನ್ನು ಉಲ್ಲೇಖಿಸಬಾರದು.

ಸದಸ್ಯರ ಭಾಷಣಗಳು ಸದನದಲ್ಲಿ ಚರ್ಚಿಸಲಾಗುವ ವಿಷಯಗಳಿಗೆ ಸಂಬಂಧಿಸಿರಬೇಕು. ಸದಸ್ಯರು ಇತರ ಸದಸ್ಯರು ಹೇಳಿದ ವಿಷಯಗಳನ್ನೇ ಪುನರುಚ್ಚರಿಸಬಾರದು. ಸದನದಲ್ಲಿ ಸದಸ್ಯರಿಗೆ ಮಾತನಾಡುವ ಸ್ವಾತಂತ್ರ್ಯವಿದ್ದರೂ, ಸದನದಲ್ಲಿ ಮಾತನಾಡುವಾಗ ತುಂಬಾ ಎಚ್ಚರಿಕೆಯಿಂದಿರಬೇಕು. ಸದಸ್ಯರು ಸದನದಲ್ಲಿ ತಾವು ನೀಡುವ ಹೇಳಿಕೆಗೆ ಜವಾಬ್ದಾರರಾಗಿರುತ್ತಾರೆ. ತಮ್ಮನ್ನು ಸಭೆಯಲ್ಲಿ ಸಮರ್ಥಿಸಿಕೊಳ್ಳಲಾಗದ, ಹಾಜರಿರದ ವ್ಯಕ್ತಿಗಳ ವಿರುದ್ಧ ಆಪಾದನೆಗಳನ್ನು ಮಾಡಬಾರದೆಂಬ ನಿಯಮಕ್ಕೆ ಸದಸ್ಯರು ಬದ್ಧರಾಗಿರುತ್ತಾರೆ. ಸಾಮಾನ್ಯವಾಗಿ, ಹೆಸರನ್ನು ಸೂಚಿಸುವುದು ತುಂಬಾ ಅವಶ್ಯಕವೆನಿಸಿದ ಹೊರತು, ಯಾರೇ ವ್ಯಕ್ತಿಗಳ ಹೆಸರನ್ನು ಚರ್ಚೆಯಲ್ಲಿ ತರಬಾರದು. ಸದಸ್ಯರು ನ್ಯಾಯಾಲಯದಲ್ಲಿ ವಿಚಾರಣೆಯನ್ನು ಸುಸೂತ್ರವಾಗಿ ನಡೆಸುವ ದೃಷ್ಟಿಯಿಂದ ನ್ಯಾಯಾಲಯದ ಮುಂದಿರುವ ವಿಷಯಗಳನ್ನು ಪ್ರಸ್ತಾಪಿಸಬಾರದು.

ಸದಸ್ಯರು ಉನ್ನತ ಅಧಿಕಾರದಲ್ಲಿರುವ ವ್ಯಕ್ತಿಗಳ ನಡತೆಯನ್ನು ಟೀಕಿಸಬಾರದು. ಸದಸ್ಯರು ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವ ಉದ್ದೇಶಕ್ಕಾಗಿ ತಮ್ಮ ವಾಕ್‌ಸ್ವಾತಂತ್ರ್ಯವನ್ನು ಉಪಯೋಗಿಸತಕ್ಕದ್ದಲ್ಲ. ಇತರ ಸದಸ್ಯರ ವಿರುದ್ಧ ವೈಯಕ್ತಿಕ ಆರೋಪವನ್ನು ಮಾಡಬಾರದು.

ಸಂಸತ್ ಅಥವಾ ಯಾವುದೇ ರಾಜ್ಯ ವಿಧಾನಮಂಡಲದ ನಡವಳಿಕೆ ಅಥವಾ ವ್ಯವಹರಣೆಗಳ ಬಗ್ಗೆ ಅಪಮಾನಕಾರಿಯಾದ ಪದಗಳನ್ನು ಬಳಸಬಾರದು. ಸದಸ್ಯರು ವಿಧಾನಸಭೆಯ ಯಾವುದೇ ಒಂದು ಪ್ರಸ್ತಾವವನ್ನು ಹಿಂತೆಗೆದುಕೊಳ್ಳುವುದಕ್ಕೆ ಮನವಿ ಸಲ್ಲಿಸಿದ ಸಂದರ್ಭದ ಹೊರತು, ವಿಧಾನಸಭೆಯ ಯಾವುವೇ ನಿರ್ಧಾರಗಳ ಬಗ್ಗೆ ಟೀಕೆ ವ್ಯಕ್ತಪಡಿಸಬಾರದು. ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶದಿಂದ ಸದಸ್ಯರು ರಾಜ್ಯಪಾಲರ ಹೆಸರನ್ನು ಬಳಸಬಾರದು. ಅವರು ರಾಜದ್ರೋಹ, ದೇಶದ್ರೋಹ ಅಥವಾ ಮಾನಹಾನಿಕರವಾದ ಪದಗಳನ್ನು ಬಳಸಬಾರದು. ಒಂದು ಸದನದ ಸದಸ್ಯರು, ಮತ್ತೊಂದು ಸದನದಲ್ಲಿ ಮಾಡಿದ ಭಾಷಣವನ್ನು, ಅದು ಒಂದು ಕಾರ್ಯನೀತಿಯ ಬಗ್ಗೆ ಸ್ಪಷ್ಟ ಹೇಳಿಕೆಯಾಗಿದ್ದ ಹೊರತು ಉದ್ಧರಿಸಬಾರದು.

ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು:–

ಸದಸ್ಯರು ಮಾತನಾಡುವಾಗ–

i) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕದ್ದಲ್ಲ;

ii) ಸದಸ್ಯರೊಬ್ಬರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕದಲ್ಲ;

iii) ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನಮಂಡಲದ [ವ್ಯವಹರಣೆಗಳು ಮತ್ತು] ನಡವಳಿಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕದಲ್ಲ;

iv) ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪ ಮಾಡತಕ್ಕದಲ್ಲ;

v) ಸರಿಯಾದ ವಾಕ್ಯಗಳಲ್ಲಿ ರಚಿಸಲಾದ ಆಧಾರ ಸಹಿತ ಪ್ರಸ್ತಾವದ ಮೇಲೆ ಚರ್ಚೆ ನಡೆಸಿದ್ದ ಹೊರತು ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳ ನಡವಳಿಕೆ ಕುರಿತು ಆರೋಪಿಸತಕ್ಕದಲ್ಲ;

ವಿವರಣೆ.– 'ಉನ್ನತಾಧಿಕಾರದಲ್ಲಿರುವ' ವ್ಯಕ್ತಿಗಳು ಎಂದರೆ ಭಾರತ ಸಂವಿಧಾನದ ಮೇರೆಗೆ ಯಾವ ನಡವಳಿಕೆಯನ್ನು ಸರಿಯಾದ ವಾಕ್ಯಗಳಲ್ಲಿ ರಚಿಸಿದ ಆಧಾರ ಸಹಿತ ಪ್ರಸ್ತಾವಗಳ ಮೇಲೆ ಮಾತ್ರವೇ ಚರ್ಚೆ ನಡೆಸಬಹುದೋ ಆ ವ್ಯಕ್ತಿಗಳು ಅಥವಾ ಯಾರ ನಡವಳಿಕೆಯನ್ನು ತಾವು ಒಪ್ಪುವಂಥ ವಾಕ್ಯಗಳಲ್ಲಿ ರಚಿಸಲಾದ ಆಧಾರ ಸಹಿತ ಪ್ರಸ್ತಾವದ ಮೇಲೆ ಮಾತ್ರವೇ ಚರ್ಚಿಸತಕ್ಕದು ಎಂದು ಸಭಾಪತಿಯವರು ಅಭಿಪ್ರಾಯಪಡುತ್ತಾರೋ ಆ ವ್ಯಕ್ತಿಗಳು.

vi) ಚರ್ಚೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸತಕ್ಕದ್ದಲ್ಲ.

vii) ರಾಷ್ಟ್ರದ್ರೋಹ, ರಾಷ್ಟ್ರವಿರೋಧಿ ಅಥವಾ ಅಪಮಾನಕರವಾದ ಮಾತುಗಳನ್ನು ಆಡತಕ್ಕದಲ್ಲ.

viii) ಪರಿಷತ್ತಿನ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವುದಕ್ಕಾಗಿ ತಮ್ಮ ವಾಕ್‌ಸ್ವಾತಂತ್ರ್ಯವನ್ನು ಬಳಸಬಾರದು;

ix) ಸಭಾಪತಿಯವರ ಕಚೇರಿ ಅಥವಾ ವಿಧಾನಮಂಡಲ ಸಚಿವಾಲಯದ ಯಾವುದೇ ಉದ್ದೇಶವನ್ನು ಕುರಿತು ಆರೋಪಿಸತಕ್ಕದಲ್ಲ;

x) ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದಲ್ಲ;

xi) ಯಾವುದೇ ಗ್ಯಾಲರಿಯಲ್ಲಿರುವ ಅಪರಿಚಿತರ ಬಗ್ಗೆ ಯಾವುದೇ ಉಲ್ಲೇಖ ಮಾಡತಕ್ಕದಲ್ಲ;

xii) ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದ್ದಲ್ಲ, ಮತ್ತು

xiii) ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕದಲ್ಲ.

ಆದೇಶವನ್ನು ಜಾರಿಗೊಳಿಸಲು ಸಭಾಪತಿಯವರಿಗಿರುವ ಅಧಿಕಾರಗಳು

ಸದನದಲ್ಲಿನ ಕಾರ್ಯವಿಧಾನ ಹಾಗೂ ನಡವಳಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಭಾಪತಿಯವರ ತೀರ್ಪುಗಳು ಅಥವಾ ನಿರ್ಣಯಗಳು ಅಂತಿಮ ಹಾಗೂ ನಿರ್ಣಾಯಕವಾಗಿರುತ್ತದೆ. ಅವರು ಸದನದಲ್ಲಿ ಶಿಸ್ತುಪಾಲನಾ ಅಧಿಕಾರವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಅಲ್ಲದೆ, ಚರ್ಚೆಯ ಸುಗಮ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮ ಮುಂತಾದವುಗಳಿಗೆ ವಿವರಣೆ ನೀಡುತ್ತಾರೆ. ತಮ್ಮ ನಿರ್ಣಯಗಳನ್ನು ಜಾರಿಗೊಳಿಸುವುದಕ್ಕಾಗಿ ಸಭಾಪತಿಯವರಿಗೆ ಅಗತ್ಯವಾದ ಎಲ್ಲಾ ಅಧಿಕಾರಗಳನ್ನು ನೀಡಲಾಗಿದೆ. ಯಾರೇ ಸದಸ್ಯರು ತಮ್ಮ ಸ್ವಂತ ಚರ್ಚೆಗಳ ಮೇಲಾಗಲೀ ಅಥವಾ ಇತರೆ ಸದಸ್ಯರ ಚರ್ಚೆಗಳ ಮೇಲಾಗಲೀ ಅಸಂಗತ

ಅಥವಾ ಬೇಸರ ಮೂಡಿಸುವ ರೀತಿಯಲ್ಲಿ ಪುನರುಚ್ಚರಿಸುತ್ತ ಪಟ್ಟು ಹಿಡಿದರೆ, ಸಭಾಪತಿಯವರು ಅವರ ಭಾಷಣವನ್ನು ಮೊಟಕುಗೊಳಿಸುವಂತೆ ನಿರ್ದೇಶಿಸಬಹುದು.

ಸಭಾಪತಿಯವರ ಅಭಿಪ್ರಾಯದಲ್ಲಿ ಸದಸ್ಯರ ನಡತೆಯು ಅಸಭ್ಯವೆಂದು ಪರಿಗಣಿಸಿದಲ್ಲಿ, ಸದರಿ ಸದಸ್ಯರನ್ನು ಅವರು ಸದನದಿಂದ ಹೊರಗೆ ಹೋಗುವಂತೆ ಆದೇಶ ನೀಡಬಹುದು. ಆ ರೀತಿ ಆದೇಶ ನೀಡಲಾದ ಸದಸ್ಯರು ಕೂಡಲೇ ಪರಿಷತ್ತಿನಿಂದ ಹೊರಗೆ ಹೋಗಬೇಕಾಗಿದ್ದು, ಸದನದ ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಸದನಕ್ಕೆ ಹಾಜರಾಗಬಾರದು. ಸದನದ ನಡವಳಿಗಳಿಗೆ ಆಗಿಂದಾಗ್ಗೆ ಅಡ್ಡಿಪಡಿಸುವ ಮೂಲಕ ಉದ್ದೇಶಪೂರ್ವಕವಾಗಿ ಹಾಗೂ ಆಗಿಂದಾಗ್ಗೆ ಸಭಾಪತಿಯವರ ಆಜ್ಞೆಯನ್ನು ಉಲ್ಲಂಘಿಸಿದ ಅಥವಾ ಸದನದ ನಿಯಮಗಳನ್ನು ದುರುಪಯೋಗಪಡಿಸಿಕೊಂಡ ಸದಸ್ಯರನ್ನು ಸಭಾಪತಿಯವರು ಅವಿಧೇಯ ಸದಸ್ಯನೆಂದೂ ಹೆಸರಿಸಬಹುದು. ಈ ರೀತಿ ಸಭಾಪತಿಯವರು ಹೆಸರಿಸಿದ ಸದಸ್ಯರನ್ನು ಸದನದಲ್ಲಿ ಭಾಗವಹಿಸದಂತೆ ನಿರ್ದಿಷ್ಟ ಅವಧಿಯವರೆಗೆ ತಾತ್ಕಾಲಿಕವಾಗಿ ಸದನದಿಂದ ಹೊರಗೆ ಹಾಕಬೇಕೆಂಬುದಾಗಿ ಯಾವ ಸದಸ್ಯರಾಗಲಿ, ಸಭಾನಾಯಕರಾಗಲೀ ಸೂಚಿಸಬಹುದು. ಸದರಿ ಪ್ರಸ್ತಾವವನ್ನು ಸದನದಲ್ಲಿ ಅಂಗೀಕರಿಸಿದಲ್ಲಿ ಸದರಿ ಪ್ರಸ್ತಾವದಲ್ಲಿ ನಮೂದಿಸಿದ ಅವಧಿಯವರೆಗೆ ಸದರಿ ಸದಸ್ಯರು ಸದನದಲ್ಲಿ ಭಾಗವಹಿಸುವುದನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗುವುದು. ಸದನದಲ್ಲಿ ತೀವ್ರ ಗಲಭೆಯುಂಟಾದಲ್ಲಿ ಸಭಾಪತಿಯವರು ಸದನವನ್ನು ಮುಂದೂಡಬಹುದು.

ಸಭಾಪತಿಯವರು ಎದ್ದು ನಿಂತಾಗಲೆಲ್ಲಾ ಅವರ ಮಾತನ್ನು ಶಾಂತ ರೀತಿಯಲ್ಲಿ ಆಲಿಸುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿದೆ. ಆ ಸಮಯದಲ್ಲಿ ಮಾತನಾಡುತ್ತಿರುವ ಅಥವಾ ಮಾತನಾಡಲು ಅಪೇಕ್ಷಿಸುವ ಸದಸ್ಯರು ಕೂಡಲೇ ಕುಳಿತುಕೊಳ್ಳಬೇಕು.

ವಿಧೇಯಕಕ್ಕೆ ಅಥವಾ ಯಾವುದೇ ಇತರ ಪ್ರಸ್ತಾವನೆಗೆ ಸಂಬಂಧಿಸಿದ ಚರ್ಚೆಯನ್ನು ಅನವಶ್ಯಕವಾಗಿ ಮುಂದುವರೆಸುತ್ತಿದ್ದರೆ, ಸಭಾಪತಿಯವರು ಸದನದ ಸಮ್ಮತಿಯನ್ನು ಪಡೆದು ಚರ್ಚೆಯನ್ನು ಮುಕ್ತಾಯಗೊಳಿಸುವುದಕ್ಕೆ ಸಮಯದ ಮಿತಿಯನ್ನು ನಿಗದಿಪಡಿಸಬಹುದು.

ಸದನದಲ್ಲಿ ಬಳಸಬೇಕಾದ ಭಾಷೆ

ಭಾರತ ಸಂವಿಧಾನದ 210ನೇ ಅನುಚ್ಛೇದವು ಒಂದು ರಾಜ್ಯದ ವಿಧಾನಮಂಡಲದ ಕಾರ್ಯಕಲಾಪವನ್ನು ಆಯಾ ರಾಜ್ಯದ ಅಧಿಕೃತ ಭಾಷೆ ಅಥವಾ ಭಾಷೆಗಳಲ್ಲಿ ಅಥವಾ ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ನಡೆಸಬೇಕೆಂದು ಹೇಳುತ್ತದೆ. ಕರ್ನಾಟಕ ವಿಧಾನಮಂಡಲವು 1964ರಲ್ಲಿ ಅಂಗೀಕರಿಸಿದ ಕರ್ನಾಟಕ ಅಧಿಕೃತ ರಾಜ್ಯಭಾಷಾ ಅಧಿನಿಯಮದಲ್ಲಿ ಕನ್ನಡ ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯೆಂಬುದಾಗಿ ಘೋಷಿಸಲಾಗಿದೆ. ಸದರಿ ಅಧಿನಿಯಮದ ಅಡಿಯಲ್ಲಿ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ಅಧಿಕೃತ ಉದ್ದೇಶದ ಸಂಬಂಧದಲ್ಲಿ ಮೇಲ್ಕಂಡ ಅಧಿಸೂಚನೆಯಲ್ಲಿ ನಮೂದಿಸಿದ ಭಾಷೆಯನ್ನು ಬಳಸಬೇಕೆಂದು ಅನ್ಯಥಾ ನಿರ್ದೇಶಿಸುವವರೆಗೆ ಅಧಿಕೃತ ಉದ್ದೇಶಕ್ಕಾಗಿ ಇಂಗ್ಲಿಷ್ ಭಾಷೆಯನ್ನು ಸಹ ಬಳಸಬಹುದೆಂದು ಹೇಳುತ್ತದೆ. ಅಲ್ಲದೆ, ವಿಧಾನಮಂಡಲದಲ್ಲಿ ಕನ್ನಡ ಅಥವಾ ಹಿಂದಿ ಭಾಷೆಯ ಜೊತೆಗೆ ಇಂಗ್ಲಿಷ್ ಭಾಷೆಯನ್ನು ಬಳಸಬಹುದೆಂದು ಸಹ ಅಧಿನಿಯಮದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸದಸ್ಯರಿಗೆ ಕನ್ನಡ, ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ಮಾತನಾಡಲು ಸಾಧ್ಯವಾಗದಿದ್ದರೆ, ಅವರು ತಮ್ಮ ಮಾತೃ ಭಾಷೆಯಲ್ಲಿ ಮಾತನಾಡುವುದಕ್ಕೆ ಸಭಾಪತಿಯವರು ಅನುಮತಿ ನೀಡಬಹುದು.

ಅಸಂಸದೀಯ (ಸಭಾ ಮರ್ಯಾದೆಗೆ ಸಲ್ಲದ) ಭಾಷೆ
(ವಿ.ಪ.ನಿಯಮ 333)

ವಿಧಾನಮಂಡಲದಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ಮಾತನಾಡುವ ಸ್ವಾತಂತ್ರ್ಯವಿದ್ದರೂ ಸದಸ್ಯರು ಅಡ್ಡಿ ಆತಂಕಗಳಿಲ್ಲದೆ, ತಮಗಿಷ್ಟ ಬಂದಂತೆ ಏನನ್ನಾದರೂ ಮಾತನಾಡಬಹುದೆಂದು ಭಾವಿಸಬಾರದು. ಸದಸ್ಯರು ಸಭಾ ಮರ್ಯಾದೆಗೆ ಸಲ್ಲುವ ಭಾಷೆಯನ್ನೇ ಬಳಸಬೇಕು. ಶಾಸನ ಸಭೆಗಳಲ್ಲಿ ಬಳಸುವ ಭಾಷೆಯು ಅದು ಹಿತಮಿತವಾಗಿ, ವಿನಯ, ಸಭ್ಯತೆ ಮತ್ತು ಗಾಂಭೀರ್ಯದಿಂದ ಕೂಡಿರಬೇಕು. ಒಬ್ಬ ಸದಸ್ಯ ಮತ್ತೊಬ್ಬ ಸದಸ್ಯರ ಅಭಿಪ್ರಾಯಗಳನ್ನು ಮತ್ತು ನಡತೆಗಳನ್ನು ವಿಮರ್ಶಿಸುವಾಗ ಸದಸ್ಯರು ಗಂಭೀರವಾದ ಭಾಷೆಯನ್ನು ಬಳಸಬೇಕು. ಅವರು ಅಸಭ್ಯ ಅಥವಾ ಅವಮಾನಕಾರಿಯಾದ ಭಾಷೆಯನ್ನು ಬಳಸಬಾರದು. ಅವರು ಸತ್ಯಕ್ಕೆ ದೂರವಾದ ಅಥವಾ ದುರುದ್ದೇಶಪೂರಿತವಾದ ಆರೋಪಗಳನ್ನು ಹೊರಿಸಬಾರದು. ಸದಸ್ಯರ ನಡತೆಯ ಬಗ್ಗೆ ವ್ಯಂಗ್ಯೋಕ್ತಿಯನ್ನು ಬಳಸುವುದನ್ನು ಅನುಚಿತವೆಂದು ಪರಿಗಣಿಸಲಾಗುತ್ತದೆ. ಮತ್ತೊಬ್ಬರ ಮಾತುಗಳಿಗೆ ಅನರ್ಥ ಕಲ್ಪಿಸುವುದು ಮತ್ತು ತಮ್ಮ ಮಾತುಗಳಿಗೆ ಅನರ್ಥ ಕಲ್ಪಿಸಿದ್ದಾರೆಂದು ಆರೋಪಿಸುವುದು ಸಭಾ ಮರ್ಯಾದೆಗೆ ತಕ್ಕದ್ದಲ್ಲ. ಬೇರೊಬ್ಬರು ಹೇಳಿದರೆಂದು ತಿಳಿಸುವ ಮೂಲಕ ಸಭಾ ಮರ್ಯಾದೆಗೆ ಸಲ್ಲದ ಭಾಷೆಯನ್ನು ಸದಸ್ಯರು ಬಳಸಬಾರದು. ಸದಸ್ಯರಾಗಲೀ, ಸಚಿವರಾಗಲೀ ಸುಳ್ಳು ಹೇಳುತ್ತಿದ್ದಾರೆ ಅಥವಾ ನಿಜವನ್ನು ಹೇಳುತ್ತಿಲ್ಲ ಎಂದು ಆರೋಪಿಸಲು ಅವಕಾಶವಿಲ್ಲ. ವಿಧಿ ಸಂಗತಿಗಳನ್ನು ಸಂಪೂರ್ಣವಾಗಿ ತಿರುಚಿ ಹೇಳುವಂತಹ ಸುತ್ತುಬಳಸು ಮಾತುಗಳು ಆಕ್ಷೇಪಾರ್ಹವಾಗಿವೆ. ಸದನದಲ್ಲಿ ಬಳಸಿದ ಒಂದು ಪದ ಸಂಸದೀಯವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸಲು ಯಾವುದೇ ಕರಾರುವಾಕ್ಕಾದ ನಿಯಮವನ್ನು ರಚಿಸುವುದು ತುಂಬಾ ಕಷ್ಟ. ಅಪಮಾನಕಾರಿ ಭಾಷೆಯ ಬಳಕೆಗೆ ಯಾವ ಮಟ್ಟಿಗೆ ಉದಾರ ಭಾವನೆಯನ್ನು ತೋರಬಹುದೆಂಬುದು ಸಂಪೂರ್ಣವಾಗಿ ಸಭಾಧ್ಯಕ್ಷರನ್ನು (ಪೀಠಾಧ್ಯಕ್ಷರನ್ನು) ಹಾಗೂ ಸದಸ್ಯರ ಸದಭಿರುಚಿಯನ್ನು (ಸದ್ಭಾವನೆಯನ್ನು) ಅವಲಂಬಿಸಿರುತ್ತದೆ. ಸದಸ್ಯರು ದೈಹಿಕ ಬಲ ಪ್ರಯೋಗಗಳಿಗೆ ಕಾರಣವಾಗಬಹುದಾದ ಪ್ರಚೋದನಕಾರಿಯಾದ ಮಾತುಗಳನ್ನು ಅಥವಾ ಪದಗಳನ್ನು ಬಳಸಬಾರದು. ಅಸಂಸದೀಯವೆಂದು ಅಭಿಪ್ರಾಯಪಡಲಾದ ಮಾತು ಅಥವಾ ಪದಗಳು ಸಂಸದೀಯ ಕಾರ್ಯವಿಧಾನ ಪುಸ್ತಕಗಳಲ್ಲಿದ್ದರೂ ಆ ಪಟ್ಟಿಯು ಅಪೂರ್ಣವಾಗಿದೆ. ಆದರೆ ಅಂಥ ಪದಗಳನ್ನು ಅವರು ಯಾವ ಸಂದರ್ಭದಲ್ಲಿ ಬಳಸಲಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಅಸಂಸದೀಯ ಪದಗಳನ್ನು ಬಳಸಿದಾಗ, ಅಂಥ ಪದಗಳನ್ನು ಹಿಂದಕ್ಕೆ ಪಡೆಯುವಂತೆ ಸಂಬಂಧಪಟ್ಟ ಸದಸ್ಯರಿಗೆ ಸೂಚಿಸಲಾಗುವುದು. ಚರ್ಚೆಯಲ್ಲಿ ಬಳಸಿದ ಪದ ಅಥವಾ ಪದಗಳು ನಿಂದಾತ್ಮಕವಾಗಿವೆ, ಅನುಚಿತವಾಗಿವೆ ಅಥವಾ ಅಸಂಸದೀಯವಾಗಿವೆ ಅಥವಾ ಗಂಭೀರವಲ್ಲದ ಭಾಷೆಯಲ್ಲಿವೆಯೆಂದು ಸಭಾಪತಿಯವರು ಅಭಿಪ್ರಾಯಪಟ್ಟಲ್ಲಿ, ಸದನದ ಕಾರ್ಯಕಲಾಪಗಳ ವರದಿಯಿಂದ ಅಂಥ ಪದಗಳನ್ನು ತೆಗೆದುಹಾಕಬೇಕೆಂದು ಆದೇಶ ನೀಡುವ ಅಧಿಕಾರ ಸಭಾಪತಿಯವರಿಗಿದೆ. ಕಾರ್ಯಕಲಾಪಗಳ ವರದಿಯಿಂದ ಹಾಗೆ ತೆಗೆದುಹಾಕಿದ ಭಾಗಗಳನ್ನು ಚುಕ್ಕೆ ಗುರುತಿನಿಂದ ಗುರುತಿಸತಕ್ಕದ್ದು ಮತ್ತು **"ಸಭಾಪತಿಯವರ ಆಜ್ಞಾನುಸಾರ ತೆಗೆದು ಹಾಕಲಾಗಿದೆ"** ಎಂದು ವಿವರಣೆಯನ್ನು ನೀಡಬೇಕು.

ಸಭಾಪತಿಯವರ ಗಮನವನ್ನು ಸೆಳೆಯುವುದು
(ವಿ.ಪ. ನಿಯಮ 305)

ಸದನದಲ್ಲಿ ಚರ್ಚೆ ಅಥವಾ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲಿಚ್ಛಿಸುವ ಸದಸ್ಯರು ತಮ್ಮ ಸ್ಥಾನದಿಂದ (ಆಸನದಿಂದ) ಎದ್ದು ನಿಂತುಕೊಳ್ಳಬೇಕು ಮತ್ತು ಸಭಾಪತಿಯವರು ಅವರ ಹೆಸರನ್ನು ಕರೆದಾಗ ತಮ್ಮ ಅಭಿಪ್ರಾಯಗಳನ್ನು ತಿಳಿಸಬೇಕು. ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಸದಸ್ಯರು ಎದ್ದು ನಿಂತಾಗ, ಸಭಾಪತಿಯವರು ಯಾರ ಹೆಸರನ್ನು ಸೂಚಿಸುತ್ತಾರೋ ಅವರು ಮಾತನಾಡಬೇಕು. ಆದ್ದರಿಂದ ಪ್ರತಿಯೊಬ್ಬ ಸದಸ್ಯರು ಯಾವುವೇ ಅಭಿಪ್ರಾಯಗಳನ್ನು ತಿಳಿಸುವುದಕ್ಕೆ ಮೊದಲು ಸಭಾಪತಿಯವರ ಗಮನವನ್ನು ಸೆಳೆಯಬೇಕಾಗುತ್ತದೆ. ಸಭಾಪತಿಯವರ ಗಮನವನ್ನು ಸೆಳೆಯುವುದು ವಿಶ್ವದಲ್ಲಿಯೇ ಅತ್ಯಂತ ಕಷ್ಟಕರವಾದ ಕೆಲಸವಾಗಿರುವುದರಿಂದ ಸುಲಭದ ಕಾರ್ಯವಲ್ಲ. ಕೆಲವು ಸಂಸತ್ತುಗಳಲ್ಲಿ, ಕೆಲವು ಸದಸ್ಯರು ಸಭಾಪತಿಯವರ ಗಮನವನ್ನು ಸೆಳೆಯಲು ದಿನಗಟ್ಟಲೆ ಕಾದಿರುವ ಉದಾಹರಣೆಗಳಿವೆ. ಆದರೆ ವಾಸ್ತವಿಕವಾಗಿ ಸದನದ ಅಪೇಕ್ಷೆ ಮತ್ತು ಎಲ್ಲಾ ವರ್ಗದವರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇರುವ ಹಕ್ಕನ್ನು ಪರಿಗಣಿಸಿ, ಸಭಾಪತಿಯವರು ತಮ್ಮ ವಿವೇಚನಾನುಸಾರ ತಾವು ಯಾರನ್ನು ಕರೆಯಬೇಕೆಂಬುದನ್ನು ನಿರ್ಧರಿಸುವರು. ವಿವಿಧ ಪಕ್ಷ ಅಥವಾ ಗುಂಪುಗಳ (ಪಂಗಡಗಳ) ಸಚೇತಕರು ಚರ್ಚೆಯಲ್ಲಿ ಭಾಗವಹಿಸಲಿಚ್ಛಿಸುವ ಸದಸ್ಯರ ಹೆಸರುಗಳ ಪಟ್ಟಿಯನ್ನು ಸಭಾಪತಿಯವರಿಗೆ ಕಳುಹಿಸುತ್ತಾರೆ. ಕೆಲವೊಮ್ಮೆ ಸದಸ್ಯರೇ ಸ್ವತಃ ತಮಗೆ ಮಾತನಾಡಲು ಒಂದು ಅವಕಾಶವನ್ನು ನೀಡುವಂತೆ ಕೋರಿ ತಮ್ಮ ಹೆಸರುಗಳನ್ನು ಬರೆದು ಕಳುಹಿಸುತ್ತಾರೆ. ಈ ರೀತಿ ಮಾತನಾಡಲಿಚ್ಛಿಸುವ ಸದಸ್ಯರ ಹೆಸರುಗಳ ಪಟ್ಟಿಯನ್ನು ಸಭಾಪತಿಯವರಿಗೆ ಸಲ್ಲಿಸುವುದರಿಂದ, ಸಭಾಪತಿಯವರ ವಿವೇಚನಾಧಿಕಾರಗಳಿಗೆ ಅಡ್ಡಿಯುಂಟಾಗದೇ ಸದಸ್ಯರಿಗೆ ಸಭಾಪತಿಯವರ ಗಮನವನ್ನು ಸೆಳೆಯಲು ಉತ್ತಮ ಅವಕಾಶ ಕಲ್ಪಿಸುವುದಲ್ಲದೆ, ಸದಸ್ಯರು ವಿವಿಧಾಭಿಪ್ರಾಯಗಳನ್ನು ಪ್ರಕಟಿಸಲು ಸಾಧ್ಯವಾಗುವಂತೆ ಆದಷ್ಟು ಮಟ್ಟಿಗೆ ಸಭೆಯ ಉಳಿದ ಸಮಯವನ್ನು ನಿಷ್ಪಕ್ಷಪಾತವಾಗಿ ಹಂಚಲು ಸಭಾಪತಿಯವರಿಗೆ ಅನುಕೂಲ ಕಲ್ಪಿಸಿದಂತಾಗುತ್ತದೆ.

ಸದಸ್ಯರು ಯಾವ ಕ್ರಮದಲ್ಲಿ ಮಾತನಾಡಬೇಕೆಂಬುದನ್ನು ನಿರ್ಧರಿಸುವ ಅಧಿಕಾರ ಸಭಾಪತಿಯವರಿಗಿರುತ್ತದೆ. ಸದನದಲ್ಲಿ ಈಗಾಗಲೇ ಮಾತನಾಡಿರುವ ಸದಸ್ಯರಿಗಿಂತ ಮೊದಲ ಬಾರಿಗೆ ಸಭೆಯಲ್ಲಿ ಮಾತನಾಡುವ ಸದಸ್ಯರಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಚರ್ಚಿತವಾಗುತ್ತಿರುವ ಒಂದು ವಿಷಯದ ಬಗ್ಗೆ ವಿಶೇಷ ತಿಳುವಳಿಕೆಯನ್ನು ಹೊಂದಿರುವ ಸದಸ್ಯರಿಗೆ ಇತರರಿಗಿಂತ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗುತ್ತದೆ.

ಸಭಾಪತಿಯವರು ನಿರ್ದಿಷ್ಟವಾಗಿ ಇಂತಹ ಸದಸ್ಯರಿಗೇ ಆದ್ಯತೆ ನೀಡಬೇಕೆಂದು ಯಾವುದೇ ನಿಯಮಗಳಲ್ಲಿ ಹೇಳಲಾಗದಿದ್ದರೂ, ಈ ಸಂಬಂಧದಲ್ಲಿ ಕೆಲವೊಂದು ನಿಯಮಗಳನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ಅದರಂತೆ ಸದಸ್ಯರನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಕರೆಯಲಾಗುತ್ತದೆ. ಒಂದು ಪ್ರಸ್ತಾವವನ್ನು ಮಂಡಿಸಿರುವ ಸದಸ್ಯರಿಗೆ ಮೊದಲು ಮಾತನಾಡಲು ಅವಕಾಶ ನೀಡಲಾಗುತ್ತದೆ. ಆಯವ್ಯಯಗಳಂತಹ ಪ್ರಮುಖ ವಿಷಯಗಳ ಮೇಲೆ ಚರ್ಚೆಗಳನ್ನು ನಡೆಸುವ ಸಂದರ್ಭಗಳಲ್ಲಿ ವಿರೋಧ ಪಕ್ಷದ ನಾಯಕರಿಗೆ ಚರ್ಚೆಯನ್ನು ಮೊದಲು ಪ್ರಾರಂಭಿಸುವಂತೆ ಕೋರಲಾಗುತ್ತದೆ.

ಚರ್ಚೆಗೆ ಲಭ್ಯವಿರುವ ಸಮಯವನ್ನು ಆಡಳಿತ ಪಕ್ಷ ಹಾಗೂ ವಿವಿಧ ವಿರೋಧ ಪಕ್ಷಗಳ ಸದಸ್ಯರ ಸಂಖ್ಯಾ ಬಲಕ್ಕನುಗುಣವಾಗಿ ಹಂಚಲಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಭಾಪತಿಯವರು ಸದನದಲ್ಲಿ ಮಾತನಾಡಲು ಸದಸ್ಯರನ್ನು ಕರೆಯುತ್ತಾರೆ.

ಕ್ರಿಯಾಲೋಪಗಳು
(ವಿ.ಪ. ನಿಯಮ 329)

ಸಭಾಪತಿಯವರ ನಿರ್ಣಯಕ್ಕಾಗಿ ಯಾರೇ ಸದಸ್ಯರು ಕ್ರಿಯಾಲೋಪವನ್ನು ಎತ್ತಬಹುದು. ಒಂದು ಕ್ರಿಯಾಲೋಪವು ಸದನದ ಕಾರ್ಯಕಲಾಪಗಳನ್ನು ಕ್ರಮಗೊಳಿಸುವಂತಹ ಕಾರ್ಯವಿಧಾನ ಅಥವಾ ನಡವಳಿಕೆಯ ನಿಯಮಗಳ ಅಥವಾ ಈ ಸಂವಿಧಾನದ ಅನುಚ್ಛೇದಗಳ ಬಗ್ಗೆ ವಿವರಣೆ ಪಡೆಯುವಂತೆ ಅಥವಾ ಅವುಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಿರಬೇಕು. ಕ್ರಿಯಾಲೋಪವನ್ನು ಯಾವುದೇ ಸಮಯದಲ್ಲಿ ಎತ್ತಬಹುದಾದರೂ, ಕಾರ್ಯಕಲಾಪಗಳ ನಡುವೆ ಒಂದು ವಿಷಯ ಮುಗಿದು ಮತ್ತೊಂದು ವಿಷಯ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯಂತರ ಕಾಲಾವಧಿಯಲ್ಲಿ ಅದನ್ನು ಎತ್ತಬೇಕಾದಲ್ಲಿ, ಅದು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲೀ ಅಥವಾ ಸದನದ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲೀ ಸಂಬಂಧಿಸಿರಬೇಕು. ಒಬ್ಬ ಸದಸ್ಯರು ಕ್ರಿಯಾಲೋಪವನ್ನೆತ್ತಿದಾಗ ಮಾತನಾಡುತ್ತಿರುವ ಸದಸ್ಯರು ತಮ್ಮ ಮಾತನ್ನು ಅಲ್ಲಿಗೇ ನಿಲ್ಲಿಸಿ ಕ್ರಿಯಾಲೋಪದ ವಿಷಯಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ ಸಭಾಪತಿಯವರು ಅಥವಾ ಯಾರೇ ಇತರ ಪೀಠಾಸೀನಾಧಿಕಾರಿಗಳು ಮಾತನಾಡುತ್ತಿರುವಾಗ ಯಾವ ಕ್ರಿಯಾಲೋಪವನ್ನೂ ಎತ್ತುವಂತಿಲ್ಲ. ಕ್ರಿಯಾಲೋಪದ ಮೇಲೆ ಯಾವ ಚರ್ಚೆಗೂ ಅವಕಾಶವಿರುವುದಿಲ್ಲ. ಆದರೆ, ಸಭಾಪತಿಯವರು ತಮಗೆ ಯುಕ್ತವೆಂದು ಕಂಡುಬಂದರೆ, ತಮ್ಮ ನಿರ್ಣಯವನ್ನು ಕೊಡುವುದಕ್ಕಿಂತ ಮುಂಚಿತವಾಗಿ ಸದಸ್ಯರ ಅಭಿಪ್ರಾಯಗಳನ್ನು ಕೇಳಬಹುದು. ಕ್ರಿಯಾಲೋಪದಲ್ಲಿ ಹಕ್ಕುಬಾಧ್ಯತೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಬಾರದು. ಸದಸ್ಯರು, ಸಮಾಚಾರವನ್ನು ತಿಳಿಯುವುದಕ್ಕಾಗಿ ಅಥವಾ ತಮ್ಮ ಅಭಿಪ್ರಾಯವನ್ನು ವಿವರಿಸುವುದಕ್ಕಾಗಿ ಅಥವಾ ಮತಗಳ ಎಣಿಕೆಯಾಗುವುದೆಂದು ಸೂಚಿಸುವ ಗಂಟೆಗಳ ಶಬ್ದವಾಗಲಿಲ್ಲವೆಂದು ಕ್ರಿಯಾಲೋಪಗಳನ್ನೆತ್ತುವುದಕ್ಕಾಗುವುದಿಲ್ಲ. ಯಾವುದೇ ಒಂದು ಪ್ರಶ್ನೆ ಅಥವಾ ಸೂಚನೆಯ ಮೇಲೆ ಅಭಿಮತ ಕೇಳುತ್ತಿರುವಾಗ ಕ್ರಿಯಾಲೋಪವನ್ನೆತ್ತುವುದಕ್ಕಾಗುವುದಿಲ್ಲ. ಕೇವಲ ಊಹೆಗೆ ಸಂಬಂಧಿಸಿದ ವಿಷಯಗಳ ಮೇಲೆ ಕ್ರಿಯಾಲೋಪವನ್ನೆತ್ತುವುದಕ್ಕಾಗುವುದಿಲ್ಲ.

ವೈಯಕ್ತಿಕ ವಿವರಣೆಗಳು
(ವಿ.ಪ. ನಿಯಮ 311)

ಚರ್ಚೆ ನಡೆಯುವಾಗ, ಒಬ್ಬ ಸದಸ್ಯರ ಭಾಷಣವನ್ನು ಮತ್ತೊಬ್ಬ ಸದಸ್ಯರು ಅಪಾರ್ಥ ಮಾಡಿಕೊಂಡಿದ್ದಾಗ ಅಥವಾ ಅವರ ನಡತೆ ಅಥವಾ ವರ್ತನೆಗೆ ವಿರುದ್ಧ ಯಾವುದೇ ಬದಲಾವಣೆಗಳನ್ನು ಮಾಡಿದಾಗ, ಸಂಬಂಧಪಟ್ಟ ಸದಸ್ಯರು, ತಮ್ಮ ವರ್ತನೆಯನ್ನು ವಿವರಿಸಿ, ಸಮರ್ಥಿಸಿಕೊಂಡು ಅಥವಾ ಕ್ಷಮೆ ಕೇಳಿ ವೈಯಕ್ತಿಕ ವಿವರಣೆಯನ್ನು ನೀಡಬಹುದು. ಆರೋಪಗಳನ್ನು ಮಾಡಿದ ಕೂಡಲೇ ವೈಯಕ್ತಿಕ ವಿವರಣೆಗಳನ್ನು ನೀಡಬೇಕು. ಆದರೆ ಮಾತನಾಡುತ್ತಿರುವ ಸದಸ್ಯರು ಅವಕಾಶ ನೀಡದಿದ್ದರೆ, ಅವರ ಭಾಷಣದ ಕೊನೆಯಲ್ಲಿ ವಿವರಣೆಯನ್ನು ನೀಡಬಹುದು. ಆರೋಪಗಳನ್ನು ಮಾಡುವಾಗ ಸಂಬಂಧಪಟ್ಟ ಸದಸ್ಯರು ಇಲ್ಲದಿದ್ದರೆ, ಅವರು ವಿವರಣೆಯನ್ನು ನೀಡುವುದಕ್ಕೆ ಮೊದಲೇ ಅವಕಾಶವನ್ನು ತೆಗೆದುಕೊಳ್ಳಬೇಕು.

ಆರೋಪಗಳನ್ನು ಮಾಡುವಾಗ ಸಂಬಂಧಪಟ್ಟ ಸದಸ್ಯರು ಸದನದಲ್ಲಿ ಉಪಸ್ಥಿತರಿಲ್ಲದಿದ್ದರೆ ಮತ್ತು ವೈಯಕ್ತಿಕ ವಿವರಣೆಯನ್ನು ನೀಡುವ ಅವಕಾಶವನ್ನು ಪಡೆಯಲು ಬಯಸಿದರೆ, ಅವರು ಮಾಡಬಯಸಲು

ಉದ್ದೇಶಿಸಿರುವ ವೈಯಕ್ತಿಕ ವಿವರಣೆಯ ಹೇಳಿಕೆಯ ಪ್ರತಿಯನ್ನು ಲಗತ್ತಿಸಿ ಸಭಾಪತಿಯವರಿಗೆ ಒಂದು ಲಿಖಿತ ಮನವಿಯನ್ನು ಸಲ್ಲಿಸಬೇಕು. ತರುವಾಯ ಸಭಾಪತಿಯವರು ವಿವರಣೆಯನ್ನು ನೀಡುವುದಕ್ಕೆ ಅವಕಾಶ ನೀಡುವರು. ಸಭಾಪತಿಯವರು ಅನುಮತಿ ನೀಡಿದ ಮೇಲೆ ಸದಸ್ಯರು, ಪ್ರಶ್ನೋತ್ತರ ಸಮಯದ ನಂತರ ಮತ್ತು ಆ ದಿನದ ಕಾರ್ಯಕಲಾಪ ಪ್ರಾರಂಭವಾಗುವುದಕ್ಕೆ ಮೊದಲು ಕೂಡಲೇ ವಿವರಣೆಯನ್ನು ನೀಡಬೇಕು.

ವೈಯಕ್ತಿಕ ವಿವರಣೆ ನೀಡಿದ ನಂತರ ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ.

ಮತಗಳನ್ನು ಎಣಿಸುವ ವಿಧಾನ
(ಅಭಿಮತ)
(ವಿ.ಪ. ನಿಯಮ 325)

ವಿಧಾನ ಪರಿಷತ್ತಿನಲ್ಲಿ ತೀರ್ಮಾನವಾಗಬೇಕಾಗಿರುವ ಯಾವುದೇ ವಿಷಯವನ್ನು ಪ್ರಸ್ತಾವದ ರೂಪದಲ್ಲಿ ಸದಸ್ಯರ ಮೂಲಕ ಸದನದ ಮುಂದೆ ತರಲಾಗುತ್ತದೆ. ಸಭಾಪತಿಯವರು ಚರ್ಚೆಯ ವಿಷಯವನ್ನು ಸೂಚಿಸಿದ ನಂತರ, ಆ ಬಗ್ಗೆ ಚರ್ಚೆ ನಡೆಯುವುದು. ಚರ್ಚೆಯು ಮುಕ್ತಾಯವಾದ ನಂತರ, ಸಭಾಪತಿಯವರು ಸದರಿ ವಿಷಯವನ್ನು ಸದನದ ತೀರ್ಮಾನಕ್ಕಾಗಿ ಮತವನ್ನು ಪಡೆಯುವರು. ಈ ಸೂಚನೆಯನ್ನು ಅನುಮೋದಿಸಲಿಚ್ಛಿಸುವವರು 'ಹೌದು' ಎಂದು ಹೇಳುವಂತೆ ಸದಸ್ಯರನ್ನು ಸಭಾಪತಿಯವರು ಕೋರುವರು. ಸೂಚನೆಗೆ ಅನುಮೋದಿಸಲಿಚ್ಛಿಸುವ ಸದಸ್ಯರು 'ಹೌದು' ಎಂದು ಜೋರಾಗಿ ಹೇಳಬೇಕು. ನಂತರ ಸೂಚನೆಗೆ ವಿರೋಧ ಸೂಚಿಸಲಿಚ್ಛಿಸುವ ಸದಸ್ಯರು 'ಇಲ್ಲ' ಎಂದು ಹೇಳುವಂತೆ ಕೋರುವರು. ಸದಸ್ಯರು ಸೂಚನೆಗೆ ವಿರೋಧ ವ್ಯಕ್ತಪಡಿಸುವವರು 'ಇಲ್ಲ' ಎಂದು ಜೋರಾಗಿ ಹೇಳಬೇಕು. ಧ್ವನಿಗಳ ಪ್ರಮಾಣದ ಆಧಾರದ ಮೇಲೆ ಸಭಾಪತಿಯವರು ಸಭೆಯ ತೀರ್ಮಾನವು 'ಹೌದು' ಅಥವಾ 'ಇಲ್ಲ' ಎಂಬುದರ ಪರವಾಗಿದೆಯೆಂಬುದನ್ನು ನಿರ್ಧರಿಸುವರು. ತೀರ್ಮಾನವು 'ಹೌದು' (ಅಥವಾ ಸಂದರ್ಭಾನುಸಾರವಾಗಿ 'ಇಲ್ಲ') ಎಂಬುದರ ಪರವಾಗಿದೆಯೆಂದು ನನ್ನ ಅಭಿಪ್ರಾಯವಾಗಿದೆ ಎಂದು ಹೇಳುವರು. ಸಭಾಪತಿಯವರ ಅಭಿಪ್ರಾಯವನ್ನು ಯಾರಾದರೂ ವಿರೋಧಿಸದಿದ್ದಲ್ಲಿ, ಅವರು ಸಭೆಯ ತೀರ್ಮಾನವು ಸಂದರ್ಭಾನುಸಾರ 'ಹೌದು' ಅಥವಾ 'ಇಲ್ಲ' ಎಂಬುವವರ ಪರವಾಗಿದೆ ಎಂದು ಎರಡು ಸಲ ಹೇಳುವರು ಮತ್ತು ಈ ರೀತಿ ಸದನದ ತೀರ್ಮಾನವನ್ನು ನಿರ್ಧರಿಸುವರು. ಈ ತೀರ್ಮಾನಕ್ಕೆ ಸಂಬಂಧಿಸಿದಂತೆ ಸಭಾಪತಿಯವರ ಅಭಿಪ್ರಾಯವನ್ನು ಪ್ರಶ್ನಿಸಿದ್ದಲ್ಲಿ, ಮತ ನಿರ್ಧಾರದ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸಲಾಗುವುದು. ತದನಂತರ ಸದನದ ಎಲ್ಲಾ ಬಾಗಿಲುಗಳನ್ನು ಮುಚ್ಚಲಾಗುವುದು ಮತ್ತು ಈ ಸಮಯದಲ್ಲಿ ಯಾವ ಸದಸ್ಯರನ್ನೂ ಸದನದ ಒಳಗೆ ಬಿಡಲಾಗುವುದಿಲ್ಲ. ನಂತರ ಸಭಾಪತಿಯವರು ಪುನ: ಪ್ರಸ್ತಾವವನ್ನು ಸದನದ ಮತಕ್ಕೆ ಹಾಕಿ ಧ್ವನಿ ಪ್ರಮಾಣದ ಆಧಾರದ ಮೇಲೆ ಫಲಿತಾಂಶವನ್ನು ನಿರ್ಧರಿಸುತ್ತಾರೆ. ಸಭಾಪತಿಯವರ ಅಭಿಪ್ರಾಯವನ್ನು ಪುನ: ಪ್ರಶ್ನಿಸಿದ್ದಲ್ಲಿ, ಪರವಾಗಿರುವವರು ಮತ್ತು ವಿರೋಧವಾಗಿರುವವರು ಅನುಕ್ರಮವಾಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಎದ್ದು ನಿಲ್ಲಬೇಕೆಂದು ಸಭಾಪತಿಯವರು ಕೋರುವರು. ಮತಗಳ ಎಣಿಕೆ ನಡೆಸಿದ ನಂತರ ಪರಿಷತ್ತಿನ ತೀರ್ಮಾನವನ್ನು ಪ್ರಕಟಿಸಲಾಗುವುದು. ಇಂಥ ಸಂದರ್ಭಗಳಲ್ಲಿ, ಮತ ನೀಡಿದವರ ಹೆಸರುಗಳನ್ನು ಬರೆದುಕೊಳ್ಳಲಾಗುವುದಿಲ್ಲ. ಸಭಾಪತಿಯವರು ಈ ಪದ್ಧತಿಯನ್ನು ಅನುಸರಿಸದಿದ್ದಲ್ಲಿ, ಅವರು ತೀರ್ಮಾನಿಸಬಹುದಾದ ಬೇರೆ ಯಾವುದಾದರೂ ಪದ್ಧತಿಯನ್ನು ಅನುಸರಿಸಬಹುದು.

ಚರ್ಚಾ ವಿಷಯದಲ್ಲಿ 'ಪರ' ಹಾಗೂ 'ವಿರೋಧ' ಮತಗಳು ಸಮನಾಗಿದ್ದ ಸಂದರ್ಭದಲ್ಲಿ ಸಭಾಪತಿಯವರು ತಮ್ಮ ನಿರ್ಣಾಯಕ ಮತವನ್ನು ಚಲಾಯಿಸಬಹುದು. ಸಾಮಾನ್ಯವಾಗಿ ಅವರು ವಿಷಯವನ್ನು ಪರಿಶೀಲಿಸಲು ಸದನಕ್ಕೆ ಇನ್ನೊಂದು ಅವಕಾಶ ದೊರೆಯುವ ರೀತಿಯಲ್ಲಿ ತಮ್ಮ ಮತವನ್ನು ಚಲಾಯಿಸಬಹುದು.

ವಿಧಾನ ಪರಿಷತ್ತಿನ ಸ್ಥಾನಗಳಿಗೆ ಸದಸ್ಯರು ರಾಜೀನಾಮೆ ನೀಡುವುದು ಮತ್ತು ಸ್ಥಾನಗಳು ಖಾಲಿಯಾಗುವುದು

(ವಿ.ಪ.ನಿಯಮಗಳು 185–187)

ಪರಿಷತ್ತಿನ ಸದಸ್ಯ ಸ್ಥಾನಗಳಿಗೆ ರಾಜೀನಾಮೆ ನೀಡಲುದ್ದೇಶಿಸುವ ಸದಸ್ಯರು ರಾಜೀನಾಮೆಯನ್ನು ಕೆಳಕಂಡ ನಮೂನೆಯಲ್ಲಿ ಸಭಾಪತಿಯವರನ್ನು ಉದ್ದೇಶಿಸಿ ತಮ್ಮ ಹಸ್ತಾಕ್ಷರದೊಂದಿಗೆ ಕಳುಹಿಸಬಹುದು.

ಗೆ:

ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು,
ಬೆಂಗಳೂರು.

ಮಾನ್ಯರೆ,

ನಾನು ---------- ದಿನಾಂಕದಿಂದ ಜಾರಿಗೆ ಬರುವಂತೆ ಪರಿಷತ್ತಿನ ನನ್ನ ಸದಸ್ಯ ಸ್ಥಾನಕ್ಕೆ ರಾಜೀನಾಮೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

ಸ್ಥಳ: ತಮ್ಮ ವಿಶ್ವಾಸಿ
ದಿನಾಂಕ: ವಿಧಾನ ಪರಿಷತ್ ಸದಸ್ಯರು

ಸದಸ್ಯರು ರಾಜೀನಾಮೆ ನೀಡಲು ಕಾರಣಗಳೇನೆಂಬುದನ್ನು ತಮ್ಮ ರಾಜೀನಾಮೆ ಪತ್ರದಲ್ಲಿ ನಮೂದಿಸಬೇಕಾಗಿಲ್ಲ. ಸಭಾಪತಿಯವರು ರಾಜೀನಾಮೆಯನ್ನು ಅಂಗೀಕರಿಸಿದ ನಂತರವೇ ರಾಜೀನಾಮೆ ಜಾರಿಗೆ ಬರುತ್ತದೆ. ಸದಸ್ಯರು ರಾಜೀನಾಮೆ ಪತ್ರದಲ್ಲಿ ನಮೂದಿಸಿದ ದಿನಾಂಕದಿಂದ ಅದು ಜಾರಿಗೆ ಬರುತ್ತದೆ. ರಾಜೀನಾಮೆ ಪತ್ರದಲ್ಲಿ ಯಾವ ದಿನಾಂಕದಿಂದ ರಾಜೀನಾಮೆ ಜಾರಿಗೆ ಬರುತ್ತದೆ ಎಂಬುದನ್ನು ಸದಸ್ಯರು ನಿರ್ದಿಷ್ಟವಾಗಿ ನಮೂದಿಸದಿದ್ದಲ್ಲಿ, ಸಭಾಪತಿಯವರು ಅದನ್ನು ಸ್ವೀಕರಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

ಸಂವಿಧಾನದ ಅನುಚ್ಛೇದ 190ರ ಮೇರೆಗೆ, ವಿಧಾನಮಂಡಲದ ಸದನದ ಯಾರೇ ಸದಸ್ಯ ಅರವತ್ತು ದಿನಗಳ ಅವಧಿಗೆ ಸದನದ ಅನುಮತಿಯಿಲ್ಲದೆ ಅದರ ಎಲ್ಲಾ ಸಭೆಗಳಿಗೆ ಗೈರು ಹಾಜರಾಗಿದ್ದರೆ, ಸದನವು ಅವರ ಸ್ಥಾನವನ್ನು ಖಾಲಿ ಎಂದು ಘೋಷಿಸಬಹುದು. ಸದನದ ಉಪವೇಶನಗಳಿಗೆ ಗೈರು ಹಾಜರಾಗಲುದ್ದೇಶಿಸುವ ಸದಸ್ಯರು ಎಷ್ಟು ಅವಧಿಗೆ ಅನುಮತಿಯು ಅವಶ್ಯಕವಿದೆ ಎಂಬುದನ್ನು ನಿರ್ದಿಷ್ಟಪಡಿಸಿ, ಅನುಮತಿಯನ್ನು ಕೋರುವುದಕ್ಕೆ ಕಾರಣಗಳನ್ನು ತಿಳಿಸುತ್ತಾ ಸಭಾಪತಿಯವರಿಗೆ ಒಂದು ಅರ್ಜಿಯನ್ನು ಸಲ್ಲಿಸಬೇಕು. ಸಭಾಪತಿಯವರು ಅರ್ಜಿಯನ್ನು ಅಂಗೀಕರಿಸಿದ ನಂತರ, ಅವರು ವಿಷಯವನ್ನು ಸದನದ ಮುಂದೆ ಇಡುವರು ಮತ್ತು ಗೈರುಹಾಜರಿಯ ರಜೆಯನ್ನು ಮಂಜೂರು ಮಾಡಿದ ನಂತರ ಅದನ್ನು ಸಂಬಂಧಿಸಿದ ಸದಸ್ಯರಿಗೆ ತಿಳಿಸಲಾಗುವುದು. ಈ ಬಗ್ಗೆ ಚರ್ಚೆಗೆ ಅವಕಾಶವಿರುವುದಿಲ್ಲ.

ಪ್ರಶ್ನೆಗಳು

(ವಿ.ಪ. ನಿಯಮಗಳು 34–57)

ಸರ್ಕಾರದ ಕಾರ್ಯಕಲಾಪಗಳನ್ನು ವಿಮರ್ಶಿಸುವುದು ಹಾಗೂ ನಿಯಂತ್ರಿಸುವುದು ವಿಧಾನಮಂಡಲದ ಪ್ರಕಾರ್ಯಗಳಲ್ಲಿ ಒಂದು. ಸರ್ಕಾರದ ಆಡಳಿತದ ಬಗ್ಗೆ ಸಚಿವರುಗಳಿಗೆ ಪ್ರಶ್ನೆಗಳನ್ನು ಕೇಳುವುದು ಮತ್ತು ಅವರಿಂದ ಉತ್ತರಗಳನ್ನು ಪಡೆಯುವುದು ಅಂಥ ಪ್ರಕಾರ್ಯದ ಒಂದು ಭಾಗವಾಗಿದೆ. ಈ ಉದ್ದೇಶಕ್ಕಾಗಿ, ವಿಧಾನಮಂಡಲದ ಸದನದ ಪ್ರತಿಯೊಂದು ಸಭೆಯ ಮೊದಲ ಒಂದು ಗಂಟೆಯನ್ನು ಸದಸ್ಯರುಗಳು ಪ್ರಶ್ನೆಗಳನ್ನು ಕೇಳುವುದಕ್ಕೆ ಮತ್ತು ಆ ಪ್ರಶ್ನೆಗಳಿಗೆ ಸಚಿವರುಗಳಿಂದ ಉತ್ತರಗಳನ್ನು ಪಡೆಯುವುದಕ್ಕೆ ಮೀಸಲಿಡಲಾಗುತ್ತದೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ, ಪ್ರಾತಿನಿಧಿಕ ಸಭೆಯನ್ನು ಶಾಸನಬದ್ಧವಾಗಿ ಮಂಡಿಸಿದ ವರ್ಷ 1923ಕ್ಕಿಂತಲೂ ಹಿಂದಿನಿಂದಲೂ ಪ್ರಶ್ನೆ ಕೇಳುವ ಹಕ್ಕನ್ನು ನೀಡಲಾಗಿದೆ. 1950ನೇ ಇಸವಿಯಲ್ಲಿ ಭಾರತ ಸಂವಿಧಾನವು ಜಾರಿಗೆ ಬಂದ ತರುವಾಯ, ಅದಕ್ಕನುಸಾರವಾಗಿ ಮಂತ್ರಿಮಂಡಲವು ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳನ್ನು ನಡೆಸುವ ಹೊಣೆಯನ್ನು ಹೊತ್ತುಕೊಂಡಿದೆ. ಪ್ರಶ್ನೋತ್ತರ ಅವಧಿ ಬಹು ಮಹತ್ವಪೂರ್ಣವಾದದ್ದು. ಏಕೆಂದರೆ ಅದು ಕಾರ್ಯಾಂಗದ ಕಾರ್ಯಚಟುವಟಿಕೆಗಳ ಮೇಲೆ ಸಂಸದೀಯ ನಿಯಂತ್ರಣದ ಸ್ವಯಂಸಿದ್ಧವಾದ ಮತ್ತು ಅತ್ಯಂತ ಪರಿಣಾಮಕಾರಿಯಾದ ಪದ್ಧತಿಗಳಲ್ಲಿ ಒಂದು. ಇದನ್ನು ಸರ್ಕಾರದ ಕಾರ್ಯಚಟುವಟಿಕೆಗಳ ಮೇಲೆ ಬೆಳಕು ಬೀರುವ 'ಶೋಧನಾ ದೀಪ' ಎಂದು ಪರಿಗಣಿಸಲಾಗಿದೆ.

ಸೂಚನಾಪತ್ರದ ಸ್ವರೂಪ:– ಪ್ರಶ್ನೆಯ ಬಗ್ಗೆ ಸೂಚನಾ ಪತ್ರವನ್ನು ಕಾರ್ಯದರ್ಶಿಯವರಿಗೆ ಲಿಖಿತವಾಗಿ ಕೊಡತಕ್ಕದ್ದು ಮತ್ತು ಈ ಕೆಳಕಂಡವುಗಳನ್ನು ಅದರಲ್ಲಿ ನಿರ್ದಿಷ್ಟಪಡಿಸತಕ್ಕದ್ದು, ಎಂದರೆ–

(ಎ) ಯಾರಿಗೆ ಪ್ರಶ್ನೆಯನ್ನು ಕೇಳಲಾಗಿದೆಯೋ ಆ ಸಚಿವರ ಅಧಿಕೃತ ಪದನಾಮ; ಮತ್ತು
(ಬಿ) ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಪ್ರಶ್ನೆಯನ್ನು ಕೇಳಲು ಉದ್ದೇಶಿಸಲಾದ ದಿನಾಂಕ;

ವಿಧಾನ ಪರಿಷತ್ತಿನ ಕಾರ್ಯವಿಧಾನ ನಿಯಮಗಳಿಗನುಸಾರವಾಗಿ ಪ್ರಶ್ನೆಗಳನ್ನು ಸ್ಥೂಲವಾಗಿ ಮೂರು ಬಗೆಯಲ್ಲಿ ವರ್ಗೀಕರಣ ಮಾಡಲಾಗಿದೆ, ಅಂದರೆ,

(i) **ಚುಕ್ಕೆ ಗುರುತಿನ ಪ್ರಶ್ನೆಗಳು:**– ಸದಸ್ಯರು ತಮ್ಮ ಪ್ರಶ್ನೆಗೆ ಸದನದಲ್ಲಿ ಮೌಖಿಕ ಉತ್ತರವನ್ನು ಬಯಸುವ ಹಾಗೂ ಚುಕ್ಕೆ ಗುರುತಿನ ಮೂಲಕ ಪ್ರತ್ಯೇಕಿಸಲ್ಪಟ್ಟ ಪ್ರಶ್ನೆ.

ಚುಕ್ಕೆ ಗುರುತಿನ ಪ್ರಶ್ನೆಗಳ ಸಂಖ್ಯೆಯ ಮಿತಿ:– (1) ಒಬ್ಬ ಸದಸ್ಯನು ಕೇಳಬಹುದಾದ ಪ್ರಶ್ನೆಗೆ ಸಂಬಂಧಪಟ್ಟಂತೆ ಯಾವುದೇ ಒಂದು ದಿನಕ್ಕಾಗಿ ಚುಕ್ಕೆ ಗುರುತಿನ ಎರಡು ಪ್ರಶ್ನೆಗಿಂತ ಹೆಚ್ಚಿಲ್ಲದಂತೆ ಪ್ರಶ್ನೆಯನ್ನು ಮತ್ತು ಒಟ್ಟು ಹದಿನೈದು ಪ್ರಶ್ನೆಗಳನ್ನು ಮೀರದಂತೆ ಮೌಖಿಕವಾಗಿ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(2) ಮೌಖಿಕವಾಗಿ ಉತ್ತರಿಸುವುದಕ್ಕೆ ಕಳುಹಿಸಬೇಕಾದ ಪ್ರಶ್ನೆಗಳ ಆದ್ಯತಾ ಕ್ರಮವನ್ನು ಸೂಚನಾ ಪತ್ರವನ್ನು ಕೊಡುವ ಸದಸ್ಯರು ತಿಳಿಸತಕ್ಕದ್ದು ಮತ್ತು ಅಂತಹ ಆದ್ಯತಾ ಕ್ರಮವನ್ನು ತಿಳಿಸಿರದಿದ್ದರೆ, ಪ್ರಶ್ನೆಗಳ ಸೂಚನಾ ಪತ್ರಗಳನ್ನು ಸ್ವೀಕರಿಸಿದ ಕ್ರಮಕ್ಕನುಸಾರವಾಗಿ ಮೌಖಿಕವಾಗಿ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(3) ಲಿಖಿತ ಉತ್ತರಗಳಿಗಾಗಿ ಆಯ್ಕೆಯಾದ ಪ್ರಶ್ನೆಗಳನ್ನು ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(ii) **ಚುಕ್ಕೆ ಗುರುತಿಲ್ಲದ ಪ್ರಶ್ನೆ:–** ಎಂದರೆ, ಸದನದಲ್ಲಿ ಮೌಖಿಕ ಉತ್ತರವನ್ನು ಬಯಸದ ಪ್ರಶ್ನೆ. ಅಂತಹ ಪ್ರಶ್ನೆಗೆ ಲಿಖಿತ ಉತ್ತರವನ್ನು ಪ್ರಶ್ನೋತ್ತರ ಅವಧಿಯ ಕೊನೆಯಲ್ಲಿ ಮೇಜಿನ ಮೇಲಿಡಲಾಗಿದೆ ಎಂದು ಭಾವಿಸಬೇಕು.

ಪ್ರಶ್ನೆಗಳಿಗೆ ನೀಡಿದ ಲಿಖಿತ ಉತ್ತರಗಳನ್ನು ಮೌಖಿಕವಾಗಿ ಉತ್ತರಿಸತಕ್ಕದ್ದಲ್ಲ:– (1) ಅಂಗೀಕರಿಸಲಾದ ಆದರೆ ಮೌಖಿಕವಾಗಿ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸದ ಪ್ರಶ್ನೆಗಳನ್ನು, ಸಭಾಪತಿಯವರ ಆದೇಶಕ್ಕನುಗುಣವಾಗಿ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು

(2) ಒಬ್ಬ ಸದಸ್ಯರು ಮೌಖಿಕವಾಗಿ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯಲ್ಲಿ, ಒಂದು ಪ್ರಶ್ನೆಯನ್ನು ಕೇಳಿದ್ದರೆ, ಸದರಿ ಸದಸ್ಯರಿಂದ ನಾಲ್ಕು ಪ್ರಶ್ನೆಗಳನ್ನು ಮೀರದ ಮತ್ತು ಮೌಖಿಕವಾಗಿ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯಲ್ಲಿ ಅವರ ಯಾವುದೇ ಪ್ರಶ್ನೆಯನ್ನು ಸೇರಿಸಿರದಿದ್ದರೆ ಐದು ಪ್ರಶ್ನೆಗಳನ್ನು ಮೀರದಂತೆ ಒಟ್ಟು 230 ಪ್ರಶ್ನೆಗಳಿಗಿಂತ ಹೆಚ್ಚಿಲ್ಲದಂತೆ, ಯಾವುದೇ ಒಂದು ದಿನಾಂಕದಂದು ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು.

(3) ಅಂಥ ಪ್ರಶ್ನೆಗಳಿಗೆ ಮೌಖಿಕ ಉತ್ತರ ನೀಡುವ ಅಗತ್ಯವಿರತಕ್ಕದ್ದಲ್ಲ ಮತ್ತು ಅದರ ಸಂಬಂಧದಲ್ಲಿ ಪೂರಕ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ.

(iii) **ಅಲ್ಪಾವಧಿ ಪ್ರಶ್ನೆ:–** ಅಲ್ಪಾವಧಿ ಪ್ರಶ್ನೆಯು ತುರ್ತು ಸ್ವರೂಪದ ಸಾರ್ವಜನಿಕ ಮಹತ್ವಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸಲು 10 ದಿನಗಳಿಗಿಂತ ಕಡಿಮೆ ಇಲ್ಲದ ಅವಧಿಯನ್ನು ನೀಡಲಾಗುತ್ತದೆ.

ಕಾರ್ಯವಿಧಾನದ ನಿಯಮಗಳಲ್ಲಿ, ಪ್ರಶ್ನೆಗಳ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ಹಲವಾರು ಷರತ್ತುಗಳನ್ನು ವಿಧಿಸಲಾಗಿದೆ ಮತ್ತು ಪ್ರಶ್ನೆಗಳ ಅಂಗೀಕಾರಾರ್ಹತೆಗೆ ಸಂಬಂಧಿಸಿದ ಷರತ್ತುಗಳು ಈ ಕೆಳಗಿನಂತಿವೆ:

ಎ) ಪ್ರಶ್ನೆಯು ಒಂದೇ ವಿಷಯಕ್ಕೆ ಸಂಬಂಧಿಸಿರತಕ್ಕದ್ದು;

ಬಿ) ಪ್ರಶ್ನೆಯನ್ನು ಕೇವಲ ಮಾಹಿತಿ ಪಡೆಯುವ ಸಲುವಾಗಿ ವಿನಂತಿಸಿಕೊಳ್ಳುವ ರೀತಿಯಲ್ಲಿ ರೂಪಿಸಿರತಕ್ಕದ್ದು;

ಸಿ) ಪ್ರಶ್ನೆಯು ಸಂದಿಗ್ಧತೆಯಿಂದ ಅಥವಾ ಅಸ್ಪಷ್ಟತೆಯಿಂದ ಕೂಡಿರತಕ್ಕದ್ದಲ್ಲ;

ಡಿ) ಪ್ರಶ್ನೆಯನ್ನು ಸ್ಪಷ್ಟಪಡಿಸಲು ಯಾವುದೇ ಹೆಸರು ಅಥವಾ ಹೇಳಿಕೆಯನ್ನು ಕಡ್ಡಾಯವಾಗಿ ತರತಕ್ಕದ್ದಲ್ಲ;

ಇ) ಪ್ರಶ್ನೆಯು ಯಾವುದೇ ಹೇಳಿಕೆಯನ್ನು ಒಳಗೊಂಡಿದ್ದರೆ, ಸದಸ್ಯನು ಆ ಹೇಳಿಕೆಯ ಖಚಿತತೆಯ ಬಗ್ಗೆ ಪೂರ್ಣ ಹೊಣೆಗಾರನಾಗಿರತಕ್ಕದ್ದು;

ಎಫ್) ಪ್ರಶ್ನೆಯಲ್ಲಿರುವ ವಿಷಯವು, ವಾದ–ವಿವಾದ, ಊಹೆ, ವ್ಯಂಗ್ಯೋಕ್ತಿ, ಆಪಾದನೆ, ವಿಶೇಷಣಗಳಿಂದ ಅಥವಾ ಅಪಮಾನಕರ ಹೇಳಿಕೆಗಳಿಂದ ಕೂಡಿರತಕ್ಕದ್ದಲ್ಲ;

ಜಿ) ಪ್ರಶ್ನೆಯು ಯಾವುದೇ ಅಭಿಪ್ರಾಯದ ಬಗೆಗೆ ವಿವರಣೆಯನ್ನಾಗಲಿ ಅಥವಾ ಅಮೂರ್ತ ಕಾನೂನು ಪ್ರಶ್ನೆಯನ್ನು ಕುರಿತು ಪರಿಹಾರವನ್ನಾಗಲಿ ಅಥವಾ ಯಾವುದೇ ಒಂದು ವದಂತಿಯ ಪ್ರಸ್ತಾವವನ್ನಾಗಲಿ ಒಳಗೊಂಡಿರತಕ್ಕದ್ದಲ್ಲ;

ಹೆಚ್) ಯಾರೇ ವ್ಯಕ್ತಿಯ ಅಧಿಕೃತ ಅಥವಾ ಸಾರ್ವಜನಿಕ ಸಾಮರ್ಥ್ಯವನ್ನು ಹೊರತುಪಡಿಸಿ ಆತನ ಚಾರಿತ್ರ್ಯಶೀಲ ಅಥವಾ ವರ್ತನೆಯನ್ನು ಪ್ರಶ್ನಿಸುವಂತಿರತಕ್ಕದ್ದಲ್ಲ;

ಐ) ಪ್ರಶ್ನೆಯು ಸಾಮಾನ್ಯವಾಗಿ ನೂರೈವತ್ತು ಶಬ್ದಗಳಿಗೆ ಮೀರತಕ್ಕದ್ದಲ್ಲ;

ಜೆ) ಪ್ರಶ್ನೆಯು ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯವಾಗಿರತಕ್ಕದ್ದಲ್ಲ;

ಕೆ) ಸಮಿತಿಯು ವರದಿಯನ್ನು ಸಿದ್ಧಪಡಿಸಿ ಸದನದ ಮುಂದೆ ಮಂಡಿಸುವುದಕ್ಕೆ ಮೊದಲೇ ಅದರ ವ್ಯವಹರಣೆಗಳನ್ನು ಕುರಿತು ಪ್ರಶ್ನಿಸತಕ್ಕದ್ದಲ್ಲ;

ಎಲ್) ವೈಯಕ್ತಿಕ ಚಾರಿತ್ರ್ಯವನ್ನು ಕುರಿತು ಮಾತನಾಡತಕ್ಕದ್ದಲ್ಲ ಅಥವಾ ದೋಷಾರೋಪಣೆ ಮಾಡತಕ್ಕದ್ದಲ್ಲ;

ಎಮ್) ಪ್ರಶ್ನೆಗೆ ಉತ್ತರಿಸಬಹುದಾದ ಮಿತಿಯಲ್ಲಿ ಚರ್ಚಿಸಲು ಸಾಧ್ಯವಾಗದಂತಹ ಬಹಳ ದೊಡ್ಡದಾದ ಕಾರ್ಯನೀತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ;

ಎನ್) ಈಗಾಗಲೇ ಉತ್ತರಿಸಿರುವ ಅಥವಾ ಉತ್ತರಿಸಲು ನಿರಾಕರಿಸಿರುವಂತಹ ಪ್ರಶ್ನೆಗಳನ್ನೇ ಪುನ: ಕೇಳತಕ್ಕದ್ದಲ್ಲ;

ಓ) ಕ್ಷುಲ್ಲಕ ವಿಷಯಗಳ ಮಾಹಿತಿಗಾಗಿ ಪ್ರಶ್ನೆಗಳನ್ನು ಕೇಳತಕ್ಕದ್ದಲ್ಲ;

ಪಿ) ಗತಿಸಿಹೋದ ವಿಷಯಗಳ ಬಗ್ಗೆ ಮಾಹಿತಿ ಕೇಳತಕ್ಕದ್ದಲ್ಲ;

ಕ್ಯೂ) ಲಭ್ಯವಿರುವ ದಸ್ತಾವೇಜುಗಳಲ್ಲಿ ಅಥವಾ ಸಾಮಾನ್ಯ ಉಲ್ಲೇಖನಾ ಕೆಲಸಗಳಲ್ಲಿ ವಿವರಿಸಿರುವ ಮಾಹಿತಿಯನ್ನು ಕೇಳತಕ್ಕದ್ದಲ್ಲ;

ಆರ್) ರಾಜ್ಯ ಸರ್ಕಾರಕ್ಕೆ ಜವಾಬ್ದಾರರಲ್ಲದ ಸಂಸ್ಥೆಗಳ ಅಥವಾ ವ್ಯಕ್ತಿಗಳ ನಿಯಂತ್ರಣದಲ್ಲಿರುವ ವಿಷಯಗಳನ್ನು ಕೇಳತಕ್ಕದ್ದಲ್ಲ;

ಎಸ್) ಭಾರತದ ಯಾವುದೇ ಭಾಗದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಕಾನೂನು ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗಿರುವ ವಿಷಯದ ಬಗ್ಗೆ ಮಾಹಿತಿ ಕೇಳತಕ್ಕದ್ದಲ್ಲ;

ಟಿ) ಸಚಿವ ಸಂಪುಟದ ಚರ್ಚೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೇಳತಕ್ಕದ್ದಲ್ಲ ಅಥವಾ ಸಂವಿಧಾನಾತ್ಮಕ, ಶಾಸನಬದ್ಧ ಅಥವಾ ಸಾಂಪ್ರದಾಯಿಕ ಭಾದ್ಯತೆಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯಪಾಲರಿಗೆ ನೀಡಿದ ಸಲಹೆಯ ಬಗ್ಗೆ ಕೇಳತಕ್ಕದ್ದಲ್ಲ;

ಯು) ಯಾವುದೇ ನ್ಯಾಯಿಕ ಅಥವಾ ಅರೆನ್ಯಾಯಿಕ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಸಮಕ್ಷಮದಲ್ಲಿ ಇತ್ಯರ್ಥವಾಗಿಲ್ಲದ ಯಾವುದೇ ವಿಷಯದ ಬಗ್ಗೆ ಅಥವಾ ಯಾವುದೇ ವಿಷಯವನ್ನು ವಿಚಾರಣೆ ಮಾಡಲು ಅಥವಾ ತನಿಖೆ ನಡೆಸಲು ನೇಮಕವಾಗಿರುವ ಯಾವುದೇ ಆಯೋಗ ಅಥವಾ ವಿಚಾರಣಾ ನ್ಯಾಯಾಲಯದಲ್ಲಿ ತೀರ್ಮಾನವಾಗದೇ ಉಳಿದಿರುವ ವಿಷಯಗಳ ಬಗ್ಗೆ ಪ್ರಶ್ನೆ ಎತ್ತತಕ್ಕದ್ದಲ್ಲ. ಆದರೆ ನ್ಯಾಯಾಧಿಕರಣ ಅಥವಾ ಆಯೋಗ ಅಥವಾ ವಿಚಾರಣಾ ನ್ಯಾಯಾಲಯಕ್ಕೆ ವಿಷಯದ ಪರಿಶೀಲನೆಗೆ ಬಾಧಕವಾಗುವ ಸಂಭವವಿಲ್ಲದಿದ್ದರೆ ಮಾತ್ರ ವಿಚಾರಣಾ ವಿಧಾನ ಅಥವಾ ವಿಚಾರಣಾ ವಿಷಯ ಅಥವಾ ವಿಚಾರಣಾ ಹಂತಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಪ್ರಸ್ತಾಪಿಸಬಹುದು;

ವಿ) ತುರ್ತು ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಉದ್ದೇಶಗಳ ವಿವರಣೆಯ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು. ಆದರೆ ಅದು ಪ್ರಶ್ನೆ ಕೇಳುತ್ತಿರುವ ಸದಸ್ಯರು ಎತ್ತಿದ ವಿಷಯದ ಸಂಬಂಧದಲ್ಲಿ ಕೈಗೊಳ್ಳಬೇಕಾಗಿರುವ ಯಾವುದೇ ನಿರ್ದಿಷ್ಟ ಕ್ರಮದ ಬಗ್ಗೆ ಸಲಹೆಯ ರೂಪದಲ್ಲಿ ಇರಬಾರದು.

ವಿಧಾನ ಪರಿಷತ್ತಿನಲ್ಲಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಮೇರೆಗೆ ನಿಯಮಗಳು ಅಗತ್ಯಪಡಿಸಿರುವ ಪ್ರತಿಯೊಂದು ಸೂಚನೆಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರಿಗೆ ಲಿಖಿತದಲ್ಲಿ ಸಲ್ಲಿಸಬೇಕೇ ಹೊರತು ಸಭಾಪತಿಯವರಿಗಲ್ಲ ಮತ್ತು ಸೂಚನೆ ಕಳುಹಿಸುತ್ತಿರುವ ಸದಸ್ಯರು ಸೂಚನೆಗೆ ಸಹಿ ಹಾಕಿ ಸೂಚನಾ ಕಾರ್ಯಾಲಯಕ್ಕೆ ನೀಡಬೇಕು. ಸದಸ್ಯರು ಪ್ರಶ್ನೆಗಳನ್ನು ಖುದ್ದಾಗಿ ಅಥವಾ ಅಂಚೆಯ ಮೂಲಕವಾಗಲಿ ತಲುಪಿಸಬಹುದು. ಸೂಚನಾ ಕಚೇರಿಯಲ್ಲಿ ಸೂಚನೆಗಳನ್ನು ಸಲ್ಲಿಸಲು ಭಾನುವಾರ ಹಾಗೂ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಪ್ರತಿದಿನವೂ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆಯವರೆಗಿನ ಅವಧಿಯಲ್ಲಿ ಸೂಚನಾ ಕಚೇರಿಯಿಂದ ಸೂಚನೆಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸಮಯವನ್ನು ನಿಗದಿಪಡಿಸಲಾಗಿರುತ್ತದೆ. 3 ಗಂಟೆಯ ತರುವಾಯ ಸೂಚನಾ ಕಾರ್ಯಾಲಯಗಳಿಗೆ ತಲುಪಿಸಿದ ಸೂಚನೆಗಳನ್ನು ತರುವಾಯದ ಕೆಲಸದ ದಿನದಂದು 10 ಗಂಟೆಗೆ ನೀಡಲಾಗಿದೆಯೆಂದು ಭಾವಿಸಲಾಗುತ್ತದೆ. ಪ್ರಶ್ನೆಗಳು ಸ್ಪಷ್ಟವಾಗಿರಬೇಕು ಮತ್ತು ಸುಲಭವಾಗಿ ಓದುವಂತಿರಬೇಕು. ಪ್ರಶ್ನೆಗಳನ್ನು ಸೂಚನಾ ಕಚೇರಿಯಲ್ಲಿ ದೊರೆಯುವ ನಿಗದಿತ ಮುದ್ರಿತ ನಮೂನೆಯಲ್ಲಿ ಒಂದೇ ಬದಿಯಲ್ಲಿ ಬರೆದಿರಬೇಕು. ಅದನ್ನು ಬೆರಳಚ್ಚು ಮಾಡಿರಬಹುದು ಅಥವಾ ಶಾಯಿಯಿಂದ ಸ್ಪಟವಾಗಿ ಬರೆದಿರಬಹುದು. ಪ್ರತಿಯೊಂದು ಪ್ರಶ್ನೆಯ ಸೂಚನೆಗೆ ಸದಸ್ಯರು ತಮ್ಮ ಸಹಿ ಹಾಕಿ ಅದರ ಕೆಳಗಡೆ ದಪ್ಪ ಅಕ್ಷರಗಳಲ್ಲಿ ತಮ್ಮ ಹೆಸರನ್ನು ಬರೆದಿರಬೇಕು. ಅಸ್ಪಷ್ಟವಾಗಿ ಬರೆದಿರುವ ಪ್ರಶ್ನೆಗಳನ್ನು ಆಯಾ ಸದಸ್ಯರಿಗೆ ಹಿಂದಿರುಗಿಸಲಾಗುತ್ತದೆ. ಪ್ರಶ್ನೆಗಳ ಮಧ್ಯ ಬರುವ ಅಂಕಿತನಾಮಗಳನ್ನು ದಪ್ಪ ಅಕ್ಷರಗಳಲ್ಲಿ ಬರೆದಿರಬೇಕು. ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವಗಳನ್ನು ಒಂದೇ ಪತ್ರದಲ್ಲಿ ಸೇರಿಸಬಾರದು.

ಸದಸ್ಯರು ಆಗಾಗ್ಗೆ ಕಳುಹಿಸುವ ಕೆಲವು ಪ್ರಕಾರದ ಸೂಚನೆಗಳಿಗೆ ಅಗತ್ಯವಾಗಿರುವ ಸೂಚನಾ ಅವಧಿಗಳು ಈ ಕೆಳಗಿನಂತಿವೆ:

I. ಪ್ರಶ್ನೆಗಳು (ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ)

ಸದಸ್ಯನೊಬ್ಬನು, ತಾನು ಪ್ರಸ್ತಾಪಿಸಿದ ಪ್ರಶ್ನೆಗೆ ಉತ್ತರ ಪಡೆಯಲು ಯಾವ ದಿನ ಪ್ರಶ್ನೆಗಳ ಪಟ್ಟಿಯಲ್ಲಿ ಸೇರಿಸಬೇಕೆಂಬ ಬಗ್ಗೆ ದಿನಾಂಕವನ್ನು ನಮೂದಿಸಿ ಒಂದು ದಿನಕ್ಕೆ ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕೇಳಬಹುದು. ಪ್ರಶ್ನೆಯ ಸೂಚನೆಯನ್ನು ನೀಡುವಾಗ, ಸದಸ್ಯನು ಸದನದಲ್ಲಿ ತನ್ನ ಪ್ರಶ್ನೆಗೆ ಮೌಖಿಕ ಉತ್ತರವನ್ನು ಕೇಳಬೇಕಾಗಿದ್ದರೆ, ಅಂಥ ಪ್ರಶ್ನೆಯನ್ನು ನಕ್ಷತ್ರ ಗುರುತಿ (*)ನಿಂದ ಗುರುತಿಸಬೇಕು. ಅದನ್ನು ಈ ರೀತಿ ನಕ್ಷತ್ರ (*) ಗುರುತಿನಿಂದ ಗುರುತಿಸದೆ ಇದ್ದರೆ, ಆ ಪ್ರಶ್ನೆಗಳನ್ನು ಲಿಖಿತ ಉತ್ತರಗಳ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಸದನದಲ್ಲಿ ಮೌಖಿಕ ಉತ್ತರವನ್ನು ನೀಡುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಪೂರಕ ಪ್ರಶ್ನೆಗಳನ್ನು ಕೇಳುವಂತಿಲ್ಲ. ಅಂಥ ಪ್ರಶ್ನೆಗಳಿಗೆ ಉತ್ತರವನ್ನು ಪ್ರಶ್ನೋತ್ತರ ಅವಧಿಯ ಕೊನೆಯಲ್ಲಿ ಮತ್ತು ಆಯಾ ದಿನದ ಚರ್ಚೆಯಲ್ಲಿ ಮುದ್ರಿಸಿ ಸದನದ ಸಮಕ್ಷಮದಲ್ಲಿ ಮಂಡಿಸಲಾಗಿದೆಯೆಂದು ಭಾವಿಸಲಾಗುತ್ತದೆ. ಸಭಾಪತಿಯವರು ಅನ್ಯಥಾ ನಿರ್ದೇಶಿಸದ ಹೊರತು, ವಿಧಾನ ಪರಿಷತ್ತಿಗೆ 10 ದಿನಗಳಿಗಿಂತ ಕಡಿಮೆಯಿಲ್ಲದ 30 ದಿನಗಳಿಗೆ ಹೆಚ್ಚಾಗದಂತೆ ಪ್ರಶ್ನೆ ಸೂಚನೆಯನ್ನು ಸಲ್ಲಿಸಬೇಕು.

ಸಚಿವರುಗಳನ್ನು ಮತ್ತು ಸರ್ಕಾರದ ಇಲಾಖೆಗಳನ್ನು I, II, III, IV ಮತ್ತು V ಎಂದು 5 ಗುಂಪುಗಳಾಗಿ ವಿಭಜಿಸಲಾಗುವುದು. ವಿಧಾನ ಪರಿಷತ್ತಿನಲ್ಲಿ ಕ್ರಮವಾಗಿ ಸೋಮವಾರ, ಮಂಗಳವಾರ, ಬುಧವಾರ, ಗುರುವಾರ ಮತ್ತು ಶುಕ್ರವಾರಗಳಂದು ಆಯಾ ಸಚಿವರ ಗುಂಪುಗಳಿಗೆ ಪ್ರಶ್ನೋತ್ತರಗಳ ಸಲುವಾಗಿ ನಿರ್ದಿಷ್ಟ ದಿನಗಳನ್ನು ಹಂಚಿಕೆ ಮಾಡಲಾಗುತ್ತದೆ. ಆದರೆ, ಪ್ರಶ್ನೆಗಳಿಗೆ ಉತ್ತರಿಸಲು ಸಂಬಂಧಪಟ್ಟ ಸಚಿವರ ಗುಂಪುಗಳಿಗೆ ಹಂಚಿಕೆ ಮಾಡಿರುವ ದಿನಗಳು ಬೇರೆ ಬೇರೆ ಆಗಿರುವುದರಿಂದ ಪ್ರಶ್ನೆಗಳಿಗೆ ಉತ್ತರಿಸಲು ಸಂಬಂಧಪಟ್ಟ ಸಚಿವರುಗಳು ಹಾಜರಾಗುವುದಕ್ಕೆ ಯಾವುದೇ ತೊಂದರೆಯಾಗುವುದಿಲ್ಲ.

ಸದಸ್ಯರು ಸಮನ್ಸ್‌ಗಳನ್ನು ಹೊರಡಿಸಿದ ಮುಂದಿನ ದಿನದಿಂದ ಪ್ರಶ್ನೆಗಳ ಸೂಚನೆಗಳನ್ನು ಕೊಡಬಹುದು. ಒಬ್ಬ ವಿಧಾನ ಪರಿಷತ್ತಿನ ಸದಸ್ಯನು ಆದ್ಯತಾ ಕ್ರಮ ಸಂ. 1, ಆದ್ಯತಾ ಕ್ರಮ ಸಂ. 2 ಮುಂತಾದ ಆದ್ಯತಾ ಕ್ರಮವನ್ನು ಸೂಚಿಸಿ ಒಂದು ದಿನಕ್ಕೆ ಎಷ್ಟು ಪ್ರಶ್ನೆಗಳನ್ನು ಬೇಕಾದರೂ ಕಳುಹಿಸಬಹುದು. ಆದರೆ ಒಂದು ನಿರ್ದಿಷ್ಟ ದಿನಕ್ಕೆ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಎರಡೂ ಪ್ರಶ್ನೆಗಳ ಪಟ್ಟಿಯಲ್ಲಿ ಅವರ ಹೆಸರಿನಲ್ಲಿ ನೀಡಲಾದ ಪ್ರಶ್ನೆಗಳ ಒಟ್ಟು ಸಂಖ್ಯೆ 5ಕ್ಕೆ ಮೀರಕೂಡದು. ಒಂದು ನಿರ್ದಿಷ್ಟ ದಿನದಂದು ಉತ್ತರವನ್ನು ಬಯಸಿ ಪ್ರಶ್ನೆಗಳನ್ನು ಮಂಡಿಸಿದ ಸದಸ್ಯರುಗಳ ಹೆಸರುಗಳ ಪಟ್ಟಿ ಮಾಡಿದ ತರುವಾಯ, ಅವರ ಪ್ರಥಮ ಆದ್ಯತೆಯ ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪಟ್ಟಿಯಲ್ಲಿ ಸೇರಿಸಲಾಗುತ್ತದೆ. ಹೀಗೆ ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಎರಡೂ ಪ್ರಶ್ನೆಗಳ ಪಟ್ಟಿಯಲ್ಲಿ ಅವರ ಹೆಸರಿನಲ್ಲಿ ನೀಡಲಾದ ಪ್ರಶ್ನೆಗಳ ಒಟ್ಟು ಸಂಖ್ಯೆ ದಿನವೊಂದಕ್ಕೆ 5ಕ್ಕಿಂತ ಹೆಚ್ಚು ಇರಬಾರದು, ಚುಕ್ಕೆ ಗುರುತಿನ ಪ್ರಶ್ನೆಗಳ ಪಟ್ಟಿಯಲ್ಲಿ ಸಾಮಾನ್ಯವಾಗಿ ದಿನವೊಂದಕ್ಕೆ 15 ಪ್ರಶ್ನೆಗಳು ಇರುತ್ತವೆ.

ಚುಕ್ಕೆ ಗುರುತಿನ ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೆ ಪಟ್ಟಿಗಳಿಗೆ 5 ಪ್ರಶ್ನೆಗಳನ್ನು ಆಯ್ದುಕೊಂಡ ನಂತರ ಇನ್ನೂ ಕೆಲವು ಪ್ರಶ್ನೆಗಳು ಉಳಿದುಕೊಂಡರೆ, ಆ ಪ್ರಶ್ನೆಗಳು ಆ ದಿನಕ್ಕೆ ರದ್ದಾದವೆಂದು ಭಾವಿಸಲಾಗುತ್ತದೆ. ಹಾಗೆ ರದ್ದಾದ ಪ್ರಶ್ನೆಗಳನ್ನು ಸದಸ್ಯರು ಪುನ: ಎತ್ತಲು ಬಯಸಿದರೆ, ಅದಕ್ಕಾಗಿ ಅವರು ಮತ್ತೊಂದು ದಿನಕ್ಕೆ ಹೊಸ ಸೂಚನೆಯನ್ನು ನೀಡಬಹುದು.

ಅರ್ಧಗಂಟೆ ಚರ್ಚೆ
(ವಿ.ಪ.ನಿಯಮ 58)

ಸದಸ್ಯರು ಪರಿಷತ್ತಿನಲ್ಲಿ ಇತ್ತೀಚೆಗೆ ಪ್ರಸ್ತಾಪಿಸಲಾದ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅಂಥ ಪ್ರಶ್ನೆಗೆ ಸದನದಲ್ಲಿ ಉತ್ತರ ನೀಡಲಾಗಿದೆಯೇ ಅಥವಾ ಪ್ರಶ್ನೆಗಳಿಗೆ ನೀಡಿದ ಉತ್ತರವು ವಿಷಯದ ಮೇಲೆ ವಿವರಣೆಯನ್ನು ಅಪೇಕ್ಷಿಸುತ್ತದೆಯೇ ಎಂಬುದನ್ನು ಗಣನೆಗೆ ತೆಗೆದುಕೊಳ್ಳದೆ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆಗೆ ಎತ್ತಬಹುದು. ಸಭಾಪತಿಯವರು ವಾರದಲ್ಲಿ ಎರಡು ದಿನ ಎಂದರೆ ಮಂಗಳವಾರ ಮತ್ತು ಗುರುವಾರಗಳಂದು ಅರ್ಧ ಗಂಟೆ ಚರ್ಚೆಗೆ ಅವಕಾಶ ನೀಡಬಹುದು ಅಥವಾ ಮೇಲೆ ನಿರ್ದಿಷ್ಟಪಡಿಸಿದ ದಿನಗಳ ಬದಲು ಬೇರಾವುದೇ ದಿನದಂದು ಅವಕಾಶ ನೀಡಬಹುದು. ಸದಸ್ಯರು ಯಾವ ದಿನದಂದು ವಿಷಯವನ್ನು ಪ್ರಸ್ತಾಪಿಸಲು ಇಚ್ಛಿಸುತ್ತಾರೋ ಆ ದಿನಕ್ಕಿಂತ ಮೂರು ದಿನಗಳ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಲಿಖಿತ ರೂಪದಲ್ಲಿ ಸೂಚನೆ ನೀಡಬೇಕು ಮತ್ತು ತಾವು ಪ್ರಸ್ತಾಪಿಸಲು ಅಪೇಕ್ಷಿಸಿರುವ ವಿಷಯ ಅಥವಾ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸತಕ್ಕದ್ದು. ಸೂಚನೆಯ ಜೊತೆಗೆ ಪ್ರಶ್ನಿತ ವಿಷಯದ ಚರ್ಚೆಗೆ ಇರುವ ಕಾರಣಗಳನ್ನು ತಿಳಿಸುವ ವಿವರಣಾತ್ಮಕ ಟಿಪ್ಪಣಿಯೊಂದು ಇರತಕ್ಕದ್ದು. ಸಭಾಪತಿಯವರು, ಚರ್ಚೆಗೆ ತೆಗೆದುಕೊಳ್ಳಬೇಕಾದ ವಿಷಯ ಸಾಕಷ್ಟು ಸಾರ್ವಜನಿಕ ಮಹತ್ವವುಳ್ಳದ್ದಾಗಿದೆಯೇ ಎಂಬುದನ್ನು ನಿರ್ಧರಿಸುವರು ಮತ್ತು ಕಚೇರಿಯಲ್ಲಿ ಸ್ವೀಕರಿಸಿದ ಕ್ರಮಾನುಸಾರವಾಗಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದು. ಸದನದ ಮುಂದೆ ಯಾವುದೇ ಔಪಚಾರಿಕ ಪ್ರಸ್ತಾವವನ್ನು ಇಡತಕ್ಕದ್ದಲ್ಲ ಅಥವಾ ಮತ ಪಡೆಯತಕ್ಕದ್ದಲ್ಲ. ಸೂಚನೆಯನ್ನು ಕೊಟ್ಟಿರುವ ಸದಸ್ಯರು ಆ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಬಹುದು ಮತ್ತು ಸಂಬಂಧಪಟ್ಟ ಸಚಿವರು ಸಂಕ್ಷಿಪ್ತವಾಗಿ ಉತ್ತರವನ್ನು ಕೊಡತಕ್ಕದ್ದು.

ಗಮನ ಸೆಳೆಯುವ ಸೂಚನೆ
(ವಿ.ಪ. ನಿಯಮ 72)

ವಿಧಾನಮಂಡಲದ ಶಾಸನ ಹಾಗೂ ಹಣಕಾಸಿನ ಪ್ರಕಾರ್ಯಗಳು ಅಲ್ಲದೇ, ಸದನದ ಕೆಲವು ಸಂದಿಗ್ಧ ಪ್ರಕಾರ್ಯಗಳೂ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಮಹತ್ವವನ್ನು ಪಡೆದಿವೆ. ಸಾರ್ವಜನಿಕ ಮಹತ್ವವನ್ನು ಪಡೆದಿರುವ ತುರ್ತು ವಿಷಯಗಳನ್ನು ಸದನದ ಗಮನಕ್ಕೆ ತರಲು ಸದಸ್ಯರಿಗೆ ಸಾಧ್ಯವಾಗುವಂತೆ ಹಲವಾರು ಸಂಸದೀಯ ಕ್ರಮಗಳನ್ನು ರೂಪಿಸಲಾಗಿದೆ.

ಸದಸ್ಯರು, ಸಭಾಪತಿಯವರ ಅನುಮತಿ ಪಡೆದು ಸಾರ್ವಜನಿಕ ಮಹತ್ವವುಳ್ಳ ತುರ್ತು ವಿಷಯದ ಬಗ್ಗೆ ಸಚಿವರ ಗಮನ ಸೆಳೆಯಬಹುದು ಮತ್ತು ಆ ಬಗ್ಗೆ ಸಚಿವರು ಸಂಕ್ಷಿಪ್ತ ಹೇಳಿಕೆ ನೀಡಬಹುದು. ಸದನದಲ್ಲಿ ಸದಸ್ಯರು ಗಮನ ಸೆಳೆಯುವ ಸೂಚನೆಗಳ ಮೂಲಕ ಎತ್ತುವ ಮತ್ತು ಸಂಬಂಧಪಟ್ಟ ಸಚಿವರು ಆ ಬಗ್ಗೆ ಹೇಳಿಕೆ ನೀಡುವಂಥ ಕೆಲವು ವಿಷಯಗಳು ಹೀಗಿವೆ; ಸ್ಥಳವೊಂದರಲ್ಲಿ ಸಾಂಕ್ರಾಮಿಕ ರೋಗ ತಲೆದೋರಿರುವ ವಿಷಯ, ನೆರೆಹಾವಳಿ ಮತ್ತು ಅದರಿಂದುಂಟಾದ ಹಾನಿ, ಮುಷ್ಕರಗಳು, ಲಾಕ್‌ಔಟ್ ಮತ್ತಿತರ ಗಲಭೆ ಮುಂತಾದವು ಅಂಥ ಹೇಳಿಕೆಗಳ ಮೇಲೆ ಯಾವುದೇ ಚರ್ಚೆಗೆ ಆಸ್ಪದವಿರುವುದಿಲ್ಲ. ಆದಾಗ್ಯೂ, ಪ್ರಶ್ನೆ ಸೂಚನೆಯನ್ನು ಸಲ್ಲಿಸಿದವರು ಆ ಹೇಳಿಕೆ ಬಗ್ಗೆ ಸಚಿವರಿಂದ ಸ್ಪಷ್ಟೀಕರಣವನ್ನು ಪಡೆಯಲು ಅನುಮತಿ ಇದೆ. ಒಂದು ದಿನಕ್ಕೆ ಅಂಥ ಎರಡು

ವಿಷಯಗಳಿಗಿಂತ ಹೆಚ್ಚಿನ ವಿಷಯಗಳನ್ನು ಕೇಳತಕ್ಕದ್ದಲ್ಲ. ಅಂಥ ಯಾವುದೇ ಒಂದು ಉಪವೇಶನದಲ್ಲಿ ಯಾರೇ ಸದಸ್ಯರು ಅಂಥ ಎರಡು ಸೂಚನೆಗಳಿಗಿಂತ ಹೆಚ್ಚಾಗಿ ಪ್ರಶ್ನೆ ಸೂಚನೆಗಳನ್ನು ಸಲ್ಲಿಸತಕ್ಕದ್ದಲ್ಲ. ಸಚಿವರು ಹೇಳಿಕೆ ನೀಡಿದ ಕೂಡಲೇ ಯಾವ ರೀತಿಯ ಚರ್ಚೆಯನ್ನು ಮಾಡತಕ್ಕದ್ದಲ್ಲ. ಆದರೆ ಸದನದ ಕಾರ್ಯಕಲಾಪದ ಪಟ್ಟಿಯಲ್ಲಿ ಯಾವ ಸದಸ್ಯರ ಹೆಸರಿನಲ್ಲಿ ಪ್ರಶ್ನೆ ಸೂಚನೆಯು ನಮೂದಾಗಿದೆಯೋ ಅಂಥವರು ಕಾರ್ಯಕಲಾಪದ ಪಟ್ಟಿಯಲ್ಲಿ ಐದಕ್ಕಿಂತ ಹೆಚ್ಚು ಸದಸ್ಯರ ಹೆಸರುಗಳು ಇಲ್ಲದಿದ್ದರೆ ಮಾತ್ರ ಸಭಾಪತಿಯವರ ಅನುಮತಿ ಪಡೆದು ಪ್ರಶ್ನೆ ಕೇಳಬಹುದು. ಉಪವೇಶನದ ದಿನದಂದು 10–00 ಗಂಟೆಯವರೆಗೆ ಸ್ವೀಕೃತವಾದ ಗಮನ ಸೆಳೆಯುವ ಸೂಚನೆಗಳನ್ನು ಆ ದಿನಕ್ಕಾಗಿ ಬಂದವುಗಳೆಂದು ಭಾವಿಸಿ, ಅದೇ ವಿಷಯದ ಬಗ್ಗೆ ಬಂದಿರುವ ಅಂಥ ಪ್ರತಿಯೊಂದು ಸೂಚನೆಯ ಸಾಕ್ಷೇಪ ಆದ್ಯತೆಯನ್ನು ನಿರ್ಧರಿಸಲು ಆಯ್ಕೆಯ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. 10–00 ಗಂಟೆಯ ತರುವಾಯ ಬಂದ ಸೂಚನೆಗಳನ್ನು ತರುವಾಯದ ಉಪವೇಶನಕ್ಕಾಗಿ ನೀಡಿದ ಸೂಚನೆಗಳೆಂದು ಭಾವಿಸತಕ್ಕದ್ದು.

ಒಂದೇ ಉಪವೇಶನದಲ್ಲಿ ಅಂಥ ಎರಡು ವಿಷಯಗಳಿಗಿಂತ ಹೆಚ್ಚಾಗಿ ಪ್ರಸ್ತಾಪ ಮಾಡತಕ್ಕದ್ದಲ್ಲ.

ಅಂಥ ವಿಷಯಗಳನ್ನು ಪ್ರಶ್ನಾವಳಿ ಮುಗಿದ ತರುವಾಯ, ಅಂದಿನ ಕಾರ್ಯಕಲಾಪದ ಪಟ್ಟಿಯನ್ನು ತಯಾರಿಸುವುದಕ್ಕೆ ಮುಂಚೆ ಪ್ರಸ್ತಾಪಿಸಬಹುದು. ಗಮನ ಸೆಳೆಯುವ ಸೂಚನೆಯ ಅಂಗೀಕಾರಾರ್ಹತೆಯನ್ನು ಅದರ ತೀವ್ರತೆ ಮತ್ತು ಸಾರ್ವಜನಿಕ ಮಹತ್ವದ ದೃಷ್ಟಿಯಿಂದ ನಿರ್ಧರಿಸತಕ್ಕದ್ದು. ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಒಂದೇ ದಿನ ಮಂಡಿಸಬೇಕಾದ ಸಂದರ್ಭದಲ್ಲಿ, ಸಭಾಪತಿಯವರು ಅತ್ಯಂತ ಹೆಚ್ಚು ತುರ್ತು ಹಾಗೂ ಮಹತ್ವದ್ದೆಂದು ಅಭಿಪ್ರಾಯಪಡುವ ವಿಷಯಕ್ಕೆ ಆದ್ಯತೆಯನ್ನು ನೀಡಲಾಗುತ್ತದೆ.

ಒಂದು ಉಪವೇಶನದಲ್ಲಿ ಪ್ರಸ್ತಾವಿಸದೆ ಉಳಿದ ಎಲ್ಲ ಸೂಚನೆಗಳನ್ನು ತರುವಾಯದ ಉಪವೇಶನಕ್ಕಾಗಿ ಸಭಾಪತಿಯವರು ಅವುಗಳಲ್ಲಿ ಯಾವುದನ್ನಾದರೂ ಅಂಗೀಕರಿಸಿದ ಹೊರತು, ಅಂಥ ಸೂಚನೆಗಳು ಆ ಉಪವೇಶನದ ಕೊನೆಯಲ್ಲಿ ರದ್ದಾಗತಕ್ಕದ್ದು.

ಸಭಾಪತಿಯವರ ಅನುಮತಿ ಪಡೆದು ಸದಸ್ಯರು ಸಾರ್ವಜನಿಕ ಮಹತ್ವವುಳ್ಳ ತುರ್ತು ವಿಷಯದ ಬಗ್ಗೆ ಸಚಿವರ ಗಮನ ಸೆಳೆಯಬಹುದು ಮತ್ತು ಸಚಿವರು ಸದನದಲ್ಲಿ ಸಂಕ್ಷಿಪ್ತ ಹೇಳಿಕೆ ನೀಡಬಹುದು. ಗಮನ ಸೆಳೆಯುವ ಸೂಚನೆಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು. ಯಾರೇ ಸದಸ್ಯರು ಯಾವುದೇ ಒಂದು ಉಪವೇಶನಕ್ಕಾಗಿ ಅಂಥ ಎರಡಕ್ಕಿಂತ ಹೆಚ್ಚಿನ ಸೂಚನೆಗಳನ್ನು ಸಲ್ಲಿಸತಕ್ಕದ್ದಲ್ಲ. ಸಚಿವರು ಹೇಳಿಕೆ ನೀಡಿದಾಗ ಅದರ ಮೇಲೆ ಯಾವ ರೀತಿಯ ಚರ್ಚೆಯನ್ನೂ ಮಾಡತಕ್ಕದ್ದಲ್ಲ. ಆದರೆ, ಸದನದ ಕಾರ್ಯಕಲಾಪದ ಪಟ್ಟಿಯಲ್ಲಿ ಯಾವ ಸದಸ್ಯನ ಹೆಸರಿನಲ್ಲಿ ಪ್ರಶ್ನೆ ಸೂಚನೆಯು ನಮೂದಾಗಿದೆಯೋ ಅಂಥವರು, ಕಾರ್ಯಕಲಾಪದ ಪಟ್ಟಿಯಲ್ಲಿ ಐದಕ್ಕಿಂತ ಹೆಚ್ಚು ಸದಸ್ಯರ ಹೆಸರುಗಳು ಇಲ್ಲದಿದ್ದರೆ ಮಾತ್ರ, ಸಭಾಪತಿಯವರ ಅನುಮತಿ ಪಡೆದು ಸ್ಪಷ್ಟನೆಯನ್ನು ಪಡೆದುಕೊಳ್ಳಬಹುದು. ಸೂಚನೆಗಳನ್ನು ವಿಧಾನ ಪರಿಷತ್ತಿನ ಪ್ರಶ್ನೆಗಳ ಶಾಖೆಯಲ್ಲಿ 10–00 ಗಂಟೆಯ ವೇಳೆಗೆ ನೀಡತಕ್ಕದ್ದು. ಕಚೇರಿಯ ಅವಧಿ ಮುಗಿಯುವುದರೊಳಗೆ ಸೂಚನೆಗಳನ್ನು ಸದಸ್ಯರು ಸೂಚನಾ ಪತ್ರ ಶಾಖೆ (ಕೊಠಡಿ ಸಂಖ್ಯೆ.103)ಯ ಹೊರಗಡೆ ಇರುವ ಮರದ ಪೆಟ್ಟಿಗೆಯಲ್ಲಿ ಹಾಕಬೇಕು. 10–00 ಗಂಟೆಯ ನಂತರ ಬಂದ ಸೂಚನೆಗಳನ್ನು ತರುವಾಯದ ಉಪವೇಶನಕ್ಕಾಗಿ ನೀಡಿದ ಸೂಚನೆಗಳೆಂದು ಭಾವಿಸಲಾಗುತ್ತದೆ. ಸ್ವೀಕರಿಸಿದ ಎಲ್ಲಾ ಸೂಚನೆಗಳು ಅವರು ಮಂಡಿಸಿದ ದಿನದಿಂದ ಎರಡು ವಾರಗಳ ಕಾಲ ಮಾನ್ಯತೆಯನ್ನು ಹೊಂದಿರುತ್ತವೆ. ಸಭಾಪತಿಯವರಿಂದ ಆಯ್ಕೆಗೊಳ್ಳದ ಸೂಚನೆಗಳು ಹದಿನೈದು ದಿನಗಳ ಅವಧಿಯಲ್ಲಿ ತನ್ನಷ್ಟಕ್ಕೆ ತಾನೇ ರದ್ದಾಗುತ್ತವೆ. ಆದಾಗ್ಯೂ, ಸದಸ್ಯರು ಇಚ್ಛಿಸಿದರೆ, ಅದೇ ವಿಷಯಗಳ ಮೇಲೆ ಹೊಸ ಸೂಚನೆಯನ್ನು ನೀಡಬಹುದು.

ನಿಯಮ 330ರ ಅಡಿಯಲ್ಲಿನ ವಿಷಯ

ಕ್ರಿಯಾಲೋಪವಿಲ್ಲದಂಥ ಯಾವುದೇ ವಿಷಯವನ್ನಾಗಲಿ ಸದನದ ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ಸದನದಲ್ಲಿ ತಾವು ಪ್ರಸ್ತಾಪಿಸಬೇಕೆಂದಿರುವ ವಿಷಯವನ್ನು ಅದನ್ನು ಸೂಚಿಸಬೇಕೆಂದಿರುವ ಕಾರಣಗಳೊಡನೆ ಸಂಕ್ಷಿಪ್ತವಾಗಿ ತಿಳಿಸಿ ಲಿಖಿತವಾಗಿ ಕಾರ್ಯದರ್ಶಿಯವರಿಗೆ ಸೂಚನಾಪತ್ರವನ್ನು ಕೊಡಬೇಕು. ಸಭಾಪತಿಯವರು ಅನುಮತಿ ನೀಡಿದ ನಂತರ ಮಾತ್ರವೇ ಆ ಸದಸ್ಯರು ಸಭಾಪತಿಯವರು ಗೊತ್ತುಮಾಡಬಹುದಾದ ಕಾಲದಲ್ಲಿ ಮತ್ತು ದಿನದಂದು ಮಾತ್ರ ಅದನ್ನು ಸೂಚಿಸತಕ್ಕದ್ದು.

ಒಂದು ದಿನದಂದು ಮಧ್ಯಾಹ್ನ 3–00 ಗಂಟೆಯವರೆಗೆ ಸ್ವೀಕರಿಸಲಾದ ನಿಯಮ 330ರ ಅಡಿಯಲ್ಲಿನ ಸೂಚನೆಗಳನ್ನು ಮುಂದಿನ ದಿನದ ಉಪವೇಶನಕ್ಕಾಗಿ ತೆಗೆದುಕೊಳ್ಳತಕ್ಕದ್ದು. ಮಧ್ಯಾಹ್ನ 3–00 ಗಂಟೆಯ ನಂತರ ಸ್ವೀಕರಿಸಲಾದ ಸೂಚನೆಗಳನ್ನು ತರುವಾಯದ ಉಪವೇಶನಕ್ಕಾಗಿ ನೀಡಿದ ಸೂಚನೆಗಳೆಂದು ಭಾವಿಸಬೇಕಾಗುತ್ತದೆ.

ನಿಯಮ 330ಎ

330ಎ. ವಿಶೇಷ ಪ್ರಸ್ತಾವಗಳು (ಶೂನ್ಯ ವೇಳೆಗೆ ಬದಲಾಗಿ) :– ಪ್ರಶ್ನೋತ್ತರದ ವೇಳೆ ಇಲ್ಲದ ದಿನದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಗುವ ಮುಂಚೆ ಯಾರೇ ಸದಸ್ಯರು ಇತ್ತೀಚಿನ ಘಟನೆಗಳ ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಎರಡು ನೂರು ಪದಗಳಿಗೆ ಮೀರದಂತೆ ಸಭಾಪತಿಗಳ ಅನುಮತಿಯ ಮೇರೆಗೆ ವಿಶೇಷ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಬಹುದು. ಸರ್ಕಾರವು ಆ ಪ್ರಸ್ತಾವಕ್ಕೆ ಮೂರು ದಿನಗಳ ಒಳಗೆ ಉತ್ತರವನ್ನು ಸದನಕ್ಕೆ ನೀಡತಕ್ಕದ್ದು.

ಸಭಾಪತಿಯವರು ಒಂದು ದಿನಕ್ಕೆ ಮೂರಕ್ಕಿಂತ ಹೆಚ್ಚು ಇಲ್ಲದಂತೆ ಪ್ರಸ್ತಾವಗಳನ್ನು ಚರ್ಚಿಸಲು ಅನುಮತಿಸತಕ್ಕದ್ದಲ್ಲ.

ನಿಯಮ 58–ಎ,ಬಿ,ಸಿ,ಡಿ.
ಶೂನ್ಯವೇಳೆ

58–ಎ: ಶೂನ್ಯವೇಳೆ ಸೂಚನೆಗಳು:– ಪ್ರಶ್ನೋತ್ತರ ಮತ್ತು ಯಾವುದೇ ಕಾಗದ ಪತ್ರಗಳ ಮಂಡನೆಯ ತರುವಾಯ, ಯಾವುದಾದರೂ ಇದ್ದಲ್ಲಿ, ಹಾಗೂ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ಇತರೆ ವಿಷಯಗಳನ್ನು ಪ್ರಾರಂಭಿಸುವ ಮುನ್ನ ಯಾವುದೇ ಸದಸ್ಯರು ಹಿಂದಿನ ದಿನದ ಉಪವೇಶನ ಮುಂದೂಡಿದ ಸಮಯದಿಂದ ಮುಂದಿನ ಉಪವೇಶನ ಪ್ರಾರಂಭವಾಗುವ ಅವಧಿಯೊಳಗೆ ಘಟಿಸಿದ ಅತ್ಯಂತ ಸಾರ್ವಜನಿಕ ಮಹತ್ವವುಳ ಹಾಗೂ ಇತರೆ ನಿಯಮಗಳಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗದಂತಹ ವಿಷಯವನ್ನು ಪ್ರಸ್ತಾಪಿಸಲು ಇಚ್ಛಿಸಿದ್ದಲ್ಲಿ ಸಭಾಪತಿಯವರ ಪೂರ್ವಾನುಮತಿಯೊಡನೆ ಪ್ರಸ್ತಾಪಿಸಬಹುದು.

58–ಬಿ: ಸೂಚನೆಯನ್ನು ನೀಡಲು ಕಾಲಾವಧಿ:–

ಶೂನ್ಯವೇಳೆಯ ಸೂಚನಾ ಪತ್ರವು 150 ಪದಗಳಿಗೆ ಮೀರತಕ್ಕದ್ದಲ್ಲ ಮತ್ತು ಯಾವ ದಿನಾಂಕದಂದು ಪ್ರಸ್ತಾಪಿಸಲು ಉದ್ದೇಶಿಸಲಾಗಿದೆಯೋ ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚಿತವಾಗಿ ಸದಸ್ಯರು ಲಿಖಿತ ಮೂಲಕ ಖುದ್ದಾಗಿ ಅಥವಾ ಅವರ ಪ್ರತಿನಿಧಿಯ ಮೂಲಕ ಸಭಾಪತಿಯವರಿಗೆ ಅಥವಾ ಅವರ ಕಛೇರಿಗೆ ನೀಡತಕ್ಕದ್ದು.

ಪರಂತು, ಒಬ್ಬ ಸದಸ್ಯರು ಒಂದು ದಿನಕ್ಕೆ ಒಂದಕ್ಕಿಂತ ಹೆಚ್ಚಿನ ಸೂಚನೆಯನ್ನು ನೀಡತಕ್ಕದ್ದಲ್ಲ.

ಅಲ್ಲದೆ, ಪರಂತು, ಕಾರ್ಯಕಲಾಪ ನಡೆಯುವ ದಿನದಲ್ಲಿ ಅಂತಹ 10 ಸೂಚನಾ ಪತ್ರಗಳಿಗೆ ಮಾತ್ರ ಅವಕಾಶ ನೀಡತಕ್ಕದ್ದು ಹಾಗೂ ಅದರಲ್ಲಿ 05 ಸೂಚನಾ ಪತ್ರಗಳನ್ನು ಅದ್ಯತೆಯ ಮೇರೆಗೆ ಹಾಗೂ 05 ಸೂಚನಾ ಪತ್ರಗಳನ್ನು ಸಭಾಪತಿಯವರ ವಿವೇಚನೆ ಮೇರೆಗೆ ತೆಗೆದುಕೊಳ್ಳತಕ್ಕದ್ದು.

58–ಸಿ: ಭಾಷಣಗಳಿಗೆ ಕಾಲಮಿತಿ:–

ಶೂನ್ಯವೇಳೆಯ ಸೂಚನಾ ಪತ್ರದ ಮೇಲಿನ ಭಾಷಣವು ಸಭಾಪತಿಯವರ ಅನುಮತಿಯನ್ನು ಹೊರತುಪಡಿಸಿ, ಮೂರು ನಿಮಿಷಗಳಿಗೆ ಮೀರತಕ್ಕದ್ದಲ್ಲ.

58–ಡಿ: ಸರ್ಕಾರದಿಂದ ಉತ್ತರ:–

ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಕ್ಕೆ ಉತ್ತರಗಳನ್ನು ಸಾಧ್ಯವಾದಷ್ಟು ಸದಸ್ಯರು ಪ್ರಸ್ತಾಪಿಸಿದ ಕೂಡಲೇ ಅಥವಾ ಎರಡು ದಿನಗಳೊಳಗೆ ನೀಡತಕ್ಕದ್ದು.

ಖಾಸಗಿ ಸದಸ್ಯರ ಕಾರ್ಯಕಲಾಪಗಳು
(ವಿ.ಪ. ನಿಯಮಗಳು 28 ಮತ್ತು 30)

ಸಭಾಪತಿಯವರು ಅನ್ಯಥಾ ನಿರ್ದೇಶಿಸಿದ ಹೊರತು, ಶುಕ್ರವಾರದಂದು ಉಪವೇಶನದ ಎರಡೂವರೆ ಗಂಟೆಯನ್ನು ಖಾಸಗಿ ಸದಸ್ಯರ ಕಾರ್ಯಕಲಾಪಗಳು ಎಂದರೆ, ವಿಧೇಯಕಗಳು ಮತ್ತು ನಿರ್ಣಯಗಳಿಗಾಗಿ ಗೊತ್ತುಪಡಿಸಲಾಗುವುದು.

ಸಭಾಪತಿಯವರು ಸದನದ ನಾಯಕರೊಂದಿಗೆ ಸಮಾಲೋಚಿಸಿ, ಖಾಸಗಿ ಸದಸ್ಯರ ಕಾರ್ಯಕಲಾಪಗಳಿಗಾಗಿ ಶುಕ್ರವಾರ ದಿನ ಬಿಟ್ಟು ಬೇರೆ ದಿನವನ್ನು ಗೊತ್ತುಪಡಿಸಬಹುದು.

ಶುಕ್ರವಾರದಂದು ಪರಿಷತ್ತಿನ ಉಪವೇಶನ ಇಲ್ಲದಿದ್ದಲ್ಲಿ, ವಾರದಲ್ಲಿನ ಯಾವುದೇ ದಿನದಂದು ಎರಡೂವರೆ ಗಂಟೆಯನ್ನು ಖಾಸಗಿ ಸದಸ್ಯರ ಕಾರ್ಯಕಲಾಪಗಳಿಗಾಗಿ ಗೊತ್ತುಪಡಿಸಬಹುದು.

ಪ್ರಶ್ನೆಗಳ ಆಯ್ಕೆ

ಏಕಕಾಲದಲ್ಲಿ ಸ್ವೀಕೃತವಾದ ಪ್ರಶ್ನೆಗಳ ಸೂಚನೆಗಳಲ್ಲಿ ಆದ್ಯತೆಯನ್ನು ನಿರ್ಧರಿಸಲು, ಅಗತ್ಯವೆಂದು ಕಂಡುಬಂದರೆ, ಪ್ರತಿ ಕೆಲಸದ ದಿನಗಳಲ್ಲಿ ಮಧ್ಯಾಹ್ನ 3–00 ಗಂಟೆಗೆ ಕಾರ್ಯದರ್ಶಿಯವರ ಕೊಠಡಿಯಲ್ಲಿ ಪ್ರಶ್ನೆಗಳನ್ನು ಆಯ್ಕೆ ಮಾಡಲಾಗುತ್ತದೆ. ಸದಸ್ಯರುಗಳು ತಾವು ಬಯಸಿದಲ್ಲಿ, ಪ್ರಶ್ನೆಗಳ ಆಯ್ಕೆಯ ದಿನಾಂಕಗಳನ್ನು ಮತ್ತು ಅಧಿವೇಶನದ ಸಮನ್ಸ್‌ಗಳ ಜೊತೆಗೆ ಸದಸ್ಯರುಗಳಿಗೆ ಹಂಚಿದ ಪ್ರಶ್ನೆಗಳ ಸೂಚನೆಗಳ ಸ್ವೀಕೃತಿಗಳ ಕೊನೆಯ ದಿನಾಂಕಗಳನ್ನು ತೋರಿಸುವ ಚಾರ್ಟ್‌ನಲ್ಲಿ ಸೂಚಿಸಿರುವ ಪ್ರಶ್ನೆಗಳ ಆಯ್ಕೆ ದಿನಾಂಕಗಳಂದು ಚುಕ್ಕೆಗುರುತಿನ ಮತ್ತು ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಸೂಚನೆಗಳ ಆಯ್ಕೆಯ ರೀತಿಯನ್ನು ನೋಡಬಹುದು. ಪ್ರಶ್ನೆಯ ಆಯ್ಕೆಪಟ್ಟಿಯ ಪ್ರತಿಯೊಂದನ್ನು ಸದಸ್ಯರುಗಳ ಮಾಹಿತಿಗಾಗಿ ಸೂಚನಾ ಫಲಕದ ಮೇಲೆ ಅಂಟಿಸಲಾಗುತ್ತದೆ.

ಪ್ರಶ್ನೆಗಳ ಆಯ್ಕೆಯನ್ನು ನಡೆಸುವ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸದಸ್ಯರ ಹೆಸರುಗಳನ್ನು, ಸದಸ್ಯರುಗಳು ನೀಡಿದ ಪ್ರಶ್ನೆ ಸೂಚನೆಗಳ ಸಂಖ್ಯೆಯನ್ನು ಮತ್ತು ಉತ್ತರವನ್ನು ಮಂಡಿಸಬೇಕಾದ ದಿನಾಂಕಗಳನ್ನು ತೋರಿಸುವ ಪಟ್ಟಿಯೊಂದನ್ನು ಸಿದ್ಧಪಡಿಸಲಾಗುತ್ತದೆ. ಪ್ರತಿದಿನ ನೀಡಿರುವ ಎಲ್ಲಾ ಸೂಚನೆಗಳ ಬಗ್ಗೆ ಸದಸ್ಯವಾರು ಪ್ರಶ್ನೆಗಳ ಆಯ್ಕೆ ಕಾರ್ಯ ಪ್ರತ್ಯೇಕವಾಗಿಯೇ ನಡೆಯುತ್ತದೆ. ಸದಸ್ಯರು ಸಲ್ಲಿಸಿರುವ ಪ್ರಶ್ನೆ ಸೂಚನೆಗಳಲ್ಲಿ ಆದ್ಯತಾ ಕ್ರಮವಿದ್ದರೆ, ಅದನ್ನು ಪರಿಗಣಿಸಿದ ತರುವಾಯ ಸಂಬಂಧಪಟ್ಟ ಸದಸ್ಯರು ಯಾರೇ ಆಗಿದ್ದರೂ ಪ್ರತಿದಿನಕ್ಕೆ ಸಂಬಂಧಪಟ್ಟಂತೆ ಮಾಡಿದ ಆಯ್ಕೆಯ ಆಧಾರದಿಂದ ಆದ್ಯತಾ ಕ್ರಮಕ್ಕೆ ಅನುಸಾರವಾಗಿ ಪ್ರಶ್ನೆ ಸೂಚನೆಗಳನ್ನು ಸಿದ್ಧಪಡಿಸಲಾಗುತ್ತದೆ. ಪ್ರಶ್ನೆ ಸೂಚನೆಗಳಲ್ಲಿ ಆದ್ಯತಾ ಕ್ರಮದ ಯಾವುದೇ ಸೂಚನೆ ಇರದಿದ್ದರೆ, ಪ್ರಶ್ನೆ ಸೂಚನೆಗಳನ್ನು ಅವು ಸ್ವೀಕೃತವಾದ ಕಾಲಕ್ರಮಕ್ಕನುಗುಣವಾಗಿ ವ್ಯವಸ್ಥೆ ಮಾಡಲಾಗುತ್ತದೆ.

ಸದಸ್ಯರು ನೀಡಿದ ಆದ್ಯತಾ ಕ್ರಮವನ್ನು ದೃಷ್ಟಿಯಲ್ಲಿರಿಸಿಕೊಂಡು ಪ್ರಶ್ನೆಗಳನ್ನು ಆಯ್ಕೆ ಮಾಡಿದ ತರುವಾಯ, ದಿನ ಒಂದಕ್ಕೆ ಚುಕ್ಕೆ ಗುರುತಿನ ಪ್ರಶ್ನೆಗಳ ಪಟ್ಟಿಯಲ್ಲಿ 15 ಪ್ರಶ್ನೆಗಳಿಗೆ ಹೆಚ್ಚಿಲ್ಲದಂತೆ ಮತ್ತು ಚುಕ್ಕೆಗುರುತಿಲ್ಲದ ಪ್ರಶ್ನೆಗಳ ಪಟ್ಟಿಯಲ್ಲಿ 230 ಪ್ರಶ್ನೆಗಳಿಗೆ ಮೀರದಂತೆ ಪ್ರಶ್ನೆಗಳನ್ನು ಮಂಡಿಸತಕ್ಕದ್ದು.

ಪ್ರಶ್ನೋತ್ತರ ಅವಧಿಯಲ್ಲಿ, ಅಧ್ಯಕ್ಷಾಧಿಕಾರಿಯು ಪ್ರಶ್ನೆ ಸಲ್ಲಿಸಿದ ಪ್ರತಿಯೊಬ್ಬ ಸದಸ್ಯರ ಹೆಸರನ್ನು ಅನುಕ್ರಮವಾಗಿ ಕರೆಯುತ್ತಾರೆ. ತಮ್ಮ ಹೆಸರನ್ನು ಕೂಗಿದಾಗ ಸದಸ್ಯರು ತಮ್ಮ ಸ್ಥಳದಲ್ಲೇ ಎದ್ದು ನಿಂತು ಪ್ರಶ್ನೆ ಸಂಖ್ಯೆಯನ್ನು ಹೇಳಿ ತಮ್ಮ ಹೆಸರಿನಲ್ಲಿರುವ ಪ್ರಶ್ನೆಯನ್ನು ಕೇಳಬೇಕು. ಗೈರುಹಾಜರಾಗುವ ಸದಸ್ಯರು ತಾವು ಸಲ್ಲಿಸಿದ ಪ್ರಶ್ನೆಯನ್ನು ತಮ್ಮ ಪರವಾಗಿ ಕೇಳಲು ಬೇರೊಬ್ಬ ಸದಸ್ಯನಿಗೆ ಅಧಿಕಾರ ನೀಡಬಹುದು. ಆದರೆ ಈ ರೀತಿ ನೀಡಿದ ಅಧಿಕಾರವು ಆ ಒಂದು ದಿನಕ್ಕೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು ಇಡೀ ಅಧಿವೇಶನದ ಅವಧಿಗೆ ಅನ್ವಯವಾಗುವುದಿಲ್ಲ.

ಅಲ್ಪಾವಧಿ ಪ್ರಶ್ನೆಗಳನ್ನು ಕೇಳುವ ವಿಧಾನವು ಚುಕ್ಕೆಗುರುತಿನ ಪ್ರಶ್ನೆಗಳ ಮಾದರಿಯಲ್ಲಿಯೇ ಇರುತ್ತದೆ. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ, ಸಂಬಂಧಪಟ್ಟ ಸಚಿವರು ಅಲ್ಪಾವಧಿಯಲ್ಲಿ ಪ್ರಶ್ನೆಗೆ ಉತ್ತರಿಸಲು ಸಮ್ಮತಿಸಿದರೆ ಮಾತ್ರ ಅಲ್ಪಾವಧಿ ಪ್ರಶ್ನೆಗಳ ಪಟ್ಟಿಯಲ್ಲಿ ಸೇರುತ್ತವೆ. ಸಚಿವರು ಸಮ್ಮತಿಸದೇ ಇದ್ದು, ಆದರೆ

ಅಧ್ಯಕ್ಷಾಧಿಕಾರಿಯು ಆ ಪ್ರಶ್ನೆಯನ್ನು ಮಹತ್ವದ್ದೆಂದು ಹಾಗೂ ತುರ್ತು ಸ್ವರೂಪದೆಂದು ಪರಿಗಣಿಸಿದರೆ, ಅವರು ಆ ಪ್ರಶ್ನೆಯನ್ನು ಮೌಖಿಕ ಉತ್ತರಕ್ಕಾಗಿ ಇರುವ ಪ್ರಶ್ನೆಯೆಂದು ಅಂಗೀಕರಿಸಬಹುದು.

ಒಂದು ಪ್ರಶ್ನೆಯ ವಿಷಯವು ಒಂದು ವಿಧೇಯಕ, ನಿರ್ಣಯ ಅಥವಾ ಸದನದ ವ್ಯವಹಾರಕ್ಕೆ ಸಂಬಂಧಿಸಿದ ಇತರ ವಿಷಯವಾಗಿದ್ದು, ಅದಕ್ಕೆ ಸದಸ್ಯನು ಹೊಣೆಗಾರನಾಗಿದ್ದರೆ ಮಾತ್ರ ಖಾಸಗಿ ಸದಸ್ಯರಿಗೂ ಪ್ರಶ್ನೆಯನ್ನು ಕೇಳಬಹುದು. ಅಂಥ ಪ್ರಶ್ನೆಗಳಿಗೆ, ಸಚಿವರುಗಳಿಗೆ ಕೇಳುವ ಪ್ರಶ್ನೆಗಳಿಗೆ ಅನ್ವಯಿಸುವ ಕಾರ್ಯವಿಧಾನದ ನಿಯಮಗಳೇ ಅನ್ವಯಿಸುತ್ತವೆ.

ಪ್ರಶ್ನೆಗಳನ್ನು ಸಂಬಂಧಪಟ್ಟ ಸಚಿವರಿಗೆ ಕೇಳತಕ್ಕದ್ದು ಮತ್ತು ಸಚಿವರು ಯಾವ ವಿಷಯಕ್ಕೆ ಸಂಬಂಧಪಟ್ಟವರೆಂದು ತಿಳಿದುಕೊಳ್ಳಲು ಸದಸ್ಯರಿಗೆ ನೆರವಾಗುವ ದೃಷ್ಟಿಯಿಂದ ಅಂಥ ಮಾಹಿತಿಯುಳ್ಳ ಪ್ರತ್ಯೇಕ ಕಿರುಹೊತ್ತಿಗೆಯನ್ನು ಸದಸ್ಯರಿಗೆ ನೀಡಲಾಗುತ್ತದೆ ಮತ್ತು ಒಂದು ಪ್ರಶ್ನೆ ಒಂದೇ ವಿಷಯಕ್ಕೆ ಸಂಬಂಧಪಟ್ಟದ್ದಾಗಿರಬೇಕೆಂದು ಸದಸ್ಯರನ್ನು ವಿನಂತಿಸಿಕೊಳ್ಳಲಾಗುತ್ತದೆ.

ಭಾಗ – II

ಕರ್ನಾಟಕ ವಿಧಾನಮಂಡಲದ ಸದಸ್ಯರುಗಳು ಮತ್ತು

ಮಾಜಿ ಸದಸ್ಯರುಗಳಿಗೆ ಇರುವ ಸೌಲಭ್ಯಗಳು

(04.04.2025ರಂದು ಇದ್ದಂತೆ)

ಸದಸ್ಯರುಗಳ ಸಂಬಳ ಮತ್ತು ಭತ್ಯೆಗಳು

ಸಂಬಳ	–	ರೂ.80,000/–
ಇತರೆ ಭತ್ಯೆಗಳು		
ದೂರವಾಣಿ ವೆಚ್ಚಗಳು	–	ರೂ.1,10,000/–
ಚುನಾವಣಾ ಕ್ಷೇತ್ರ ಭತ್ಯೆಗಳು	–	
ಅಂಚೆ ವೆಚ್ಚಗಳು	–	
ಆಪ್ತ ಸಹಾಯಕ ಹಾಗೂ ರೂಮ್ ಬಾಯ್ ಸಂಬಳ	–	ರೂ.25,000/–
ತಿಂಗಳಿಗೆ ಒಟ್ಟು		**ರೂ.2,15,000/–**

ಚುನಾವಣೆ ಕ್ಷೇತ್ರದ ಪ್ರಯಾಣ ಭತ್ಯೆ	ತಿಂಗಳಿಗೆ	ರೂ.80,000/–
ಸಭೆಗಳ ಹಾಜರಾತಿಗಾಗಿ ದಿನ ಭತ್ಯೆ	ಅ) ರಾಜ್ಯದೊಳಗೆ ದಿನಕ್ಕೆ	ರೂ.2,500/–
	ಆ) ರಾಜ್ಯದ ಹೊರಗೆ ದಿನಕ್ಕೆ	ರೂ.3,500/–

ಟಿಪ್ಪಣಿ :

ಭಾರತದಲ್ಲಿನ ಇತರ ಹೊರ ರಾಜ್ಯಗಳಲ್ಲಿ ನಡೆಯುವ ಸಭೆಗೆ ಹಾಜರಾದಲ್ಲಿ ಬಿಲ್ಲುಗಳನ್ನು ಒದಗಿಸುವ ಷರತ್ತಿಗೊಳಪಟ್ಟು ಅನುಸೂಚಿತ ದರಪಟ್ಟಿಯಲ್ಲಿ ವಸತಿ ಮತ್ತು ಬೋರ್ಡಿಂಗ್‌ಅನ್ನು ಒದಗಿಸುವ ಹೋಟೆಲ್ ಅಥವಾ ಇತರ ನೋಂದಾಯಿತ ಸಂಸ್ಥೆಗಳಲ್ಲಿ ಉಳಿದುಕೊಳ್ಳಲು ಪ್ರತಿ ದಿನಕ್ಕೆ 7,000/– ರೂಪಾಯಿಗಳನ್ನು ದಿನಭತ್ಯಯಾಗಿ ಮತ್ತು 2,000/– ರೂಪಾಯಿಗಳನ್ನು ಸ್ಥಳೀಯ ಸಾರಿಗೆಗಾಗಿ ಸಂದಾಯ ಮಾಡಲಾಗುವುದು.

ಪ್ರಯಾಣ ಭತ್ಯೆ:

ಪ್ರಯಾಣದ ವಿಧಾನವನ್ನು ಗಣನೆಗೆ ತೆಗೆದುಕೊಳ್ಳದೆ ಪ್ರತಿ ಕಿಲೋ ಮೀಟರ್‌ಗೆ 35/– ರೂಗಳು ಅಥವಾ ಕಿಲೋ ಮೀಟರ್‌ಗಳಲ್ಲಿ ಪ್ರಯಾಣಿಸಿದ ಅಂತರದ ಆಧಾರದ ಮೇಲೆ ಪ್ರಯಾಣ ಭತ್ಯೆಯನ್ನು ಲೆಕ್ಕಹಾಕುವುದಕ್ಕೆ ಬದಲಾಗಿ ಪ್ರತಿ ಸಭೆಯ ಹಾಜರಾತಿಗೆ ರೂ.1,500/– ರಂತೆ ನಿಗದಿತ ಪ್ರಯಾಣ ಭತ್ಯೆ

ವಿಮಾನ ಮತ್ತು ರೈಲ್ವೆ ಪ್ರಯಾಣ ಭತ್ಯೆ:

ಪ್ರತಿ ಆರ್ಥಿಕ ವರ್ಷದಲ್ಲಿ, ಸದಸ್ಯರು ಭಾರತದಲ್ಲಿ ವಿಮಾನದ ಮೂಲಕ ಅಥವಾ ಯಾವುದೇ ರೈಲ್ವೆ ಮೂಲಕ ಒಂದು ಅಥವಾ ಒಂದಕ್ಕಿಂತ ಹೆಚ್ಚು ಪ್ರಯಾಣಗಳಲ್ಲಿ ಒಬ್ಬನೇಯಾಗಲಿ ಅಥವಾ ಒಬ್ಬ ಸಹಚರನೊಂದಿಗಾಗಲಿ ಪ್ರಯಾಣಿಸುವ ಉದ್ದೇಶಕ್ಕಾಗಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಪಾವತಿಸಬೇಕಾದಂತೆ ಎರಡು ಸಮಾನ ಕಂತುಗಳಲ್ಲಿ ರೂ.3,50,000/– (ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಮೊತ್ತವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಮೋಟಾರ್ ಕಾರ್/ಮೋಟಾರ್ ಸೈಕಲ್ ಖರೀದಿಗೆ ಮುಂಗಡ:

ಸದಸ್ಯರು ತಮ್ಮ ಅಧಿಕಾರಾವಧಿಯಲ್ಲಿ ಮೋಟಾರ್ ಕಾರ್ ಖರೀದಿಗಾಗಿ ಶೇ.3ರ ಸರಳ ಬಡ್ಡಿ ದರದಲ್ಲಿ ರೂ.30,00,000/–(ಮೂವತ್ತು ಲಕ್ಷ ರೂಪಾಯಿಗಳು ಮಾತ್ರ)ಗಳ ಮುಂಗಡ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ಸದಸ್ಯರು ತಮ್ಮ ಅಧಿಕಾರಾವಧಿಯಲ್ಲಿ ಮೋಟಾರ್ ಸೈಕಲ್ ಖರೀದಿಸುವುದಕ್ಕಾಗಿ ರೂ.8,000/– ಮುಂಗಡವನ್ನು ಪಡೆದುಕೊಳ್ಳಲು ಕೂಡ ಹಕ್ಕುಳ್ಳವರಾಗಿರುತ್ತಾರೆ.

ಮುಂಗಡದ ಬಾಕಿಗಳು ವಸೂಲಿಯಾಗುವುದಕ್ಕಿಂತ ಮುಂಚೆ ಯಾರೇ ಸದಸ್ಯರು ಮರಣ ಹೊಂದಿದ ಪಕ್ಷದಲ್ಲಿ, (ಅಸಲು ಹಾಗೂ ಅದರ ಮೇಲಿನ ಬಡ್ಡಿ ಎರಡೂ ಸೇರಿದಂತೆ) ಬಾಕಿಯಿರುವ ಸಂಪೂರ್ಣ ಹಣವನ್ನು ಮನ್ನಾ ಮಾಡತಕ್ಕದ್ದು.

ಗಣಕಯಂತ್ರದ ಸೌಲಭ್ಯಗಳು:

ಸದಸ್ಯರು ತಮ್ಮ ಅಧಿಕಾರಾವಧಿಯಲ್ಲಿ ಗಣಕಯಂತ್ರ/ಐ–ಪ್ಯಾಡ್/ಟ್ಯಾಬ್ಲೆಟ್ ಖರೀದಿಸುವುದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಒಂದು ಕಂತಿನಲ್ಲಿ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

ದೂರವಾಣಿ ಸೌಲಭ್ಯಗಳು:

ಶಾಸಕರ ಭವನದ ಕೊಠಡಿಗಳಲ್ಲಿ ಅಳವಡಿಸಲಾದ ದೂರವಾಣಿಗಳ ಬಿಲ್ಲುಗಳನ್ನು ಸದಸ್ಯರುಗಳು ನೇರವಾಗಿ ಬಿ.ಎಸ್.ಎನ್.ಎಲ್‌ಗೆ ಪಾವತಿಸಬೇಕು. ಸದಸ್ಯರು ಇಚ್ಛಿಸಿದ ಸ್ಥಳದಲ್ಲಿ ಕಾರ್ಯದರ್ಶಿಯವರ ಹೆಸರಿನಲ್ಲಿ ಸರ್ಕಾರಿ ವೆಚ್ಚದಲ್ಲಿ ಒಂದು ದೂರವಾಣಿಯನ್ನು ಅಳವಡಿಸಲಾಗುತ್ತದೆ. ಈ ದೂರವಾಣಿಯ ಬಾಡಿಗೆ ಹಣವನ್ನು ಮಾತ್ರ ಸದಸ್ಯರಿಗೆ ತುಂಬಿಕೊಡಲಾಗುತ್ತಿತ್ತು. ಪ್ರಸ್ತುತ ಈ ಸೌಲಭ್ಯವನ್ನು ಮುಂದುವರೆಸಿರುವುದಿಲ್ಲ/ಸ್ಥಗಿತಗೊಳಿಸಲಾಗಿದೆ.

ವೈದ್ಯಕೀಯ ಸೌಲಭ್ಯಗಳು:

ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಕರ್ನಾಟಕ ವಿಧಾನಮಂಡಲದಿಂದ ಅಧಿಸೂಚಿಸಲ್ಪಟ್ಟ ಯಾವುದೇ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ತಾನು ಮತ್ತು ತನ್ನ ಕುಟುಂಬದ ಸದಸ್ಯರು ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ವೆಚ್ಚಗಳನ್ನು ಮಾಡುವಂಥ ಯಾರೇ

ಸದಸ್ಯರು ಅದರ ಮೇಲೆ ಮಾಡಿದ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವರಾಗಿರತಕ್ಕದ್ದು. ವೆಚ್ಚಗಳಲ್ಲಿ ಅಂಥ ಚಿಕಿತ್ಸೆಯನ್ನು ಪಡೆದುಕೊಂಡ ಸ್ಥಳದಲ್ಲಿ ವಸತಿಗಾಗಿ ಮಾಡಿದ ಖರ್ಚು–ವೆಚ್ಚಗಳೂ ಸೇರತಕ್ಕದ್ದು.

ಯಾರೇ ಸದಸ್ಯರು ರಾಜ್ಯದ ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯವಾಗಿರದ ಮತ್ತು ಕರ್ನಾಟಕ ವಿಧಾನಮಂಡಲದಿಂದ ಅಧಿಸೂಚಿಸಲ್ಪಟ್ಟ ಆಸ್ಪತ್ರೆ ಅಥವಾ ಔಷಧಾಲಯವಾಗಿರದ ಸ್ಥಳದಲ್ಲಿ ತಾನು ಪಡೆದ ವೈದ್ಯೋಪಚಾರ ಹಾಗೂ ಚಿಕಿತ್ಸೆಗಾಗಿ ವೈದ್ಯಕೀಯ ವೆಚ್ಚಗಳನ್ನು ಭರಿಸಿದ ಸಂದರ್ಭದಲ್ಲಿ ಅವರು ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ಪಡೆದ ವೈದ್ಯೋಪಚಾರ ಅಥವಾ ಚಿಕಿತ್ಸೆಗಾಗಿ ಎಷ್ಟು ಪ್ರಮಾಣದ ವೈದ್ಯಕೀಯ ವೆಚ್ಚಗಳನ್ನು ಭರಿಸಿ ವೈದ್ಯಕೀಯ ವೆಚ್ಚಗಳ ಮರುಪಾವತಿ ಪಡೆಯುತ್ತಿದ್ದರೋ ಅಷ್ಟೇ ಪ್ರಮಾಣದ ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವರಾಗಿರತಕ್ಕದ್ದು.

ಟಿಪ್ಪಣಿ:

1. ಯಾರೇ ಸದಸ್ಯರು ತನ್ನ ಜೀವಿತಾವಧಿಯಲ್ಲಿ ಒಮ್ಮೆ ಶ್ರವಣ ಸಾಧನಕ್ಕೆ ಪ್ರತಿ ಕಿವಿಗೆ ರೂ.1,00,000/– ವರೆಗೆ, ದಂತಪಂಕ್ತಿಗಾಗಿ ರೂ.50,000/– ವರೆಗೆ ಹಾಗೂ ಕ್ಯಾಪ್‌ನೊಂದಿಗೆ ರೂಟ್‌ಕೆನಾಲ್‌ಗಾಗಿ ರೂ.10,000/– ವರೆಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಹಕ್ಕುಳ್ಳವರಾಗಿರುತ್ತಾರೆ.

2. 'ಕುಟುಂಬದ ಸದಸ್ಯ' ಎಂದರೆ ಗಂಡ ಅಥವಾ ಹೆಂಡತಿ, 25 ವರ್ಷ ವಯೋಮಾನದವರೆಗಿನ ಅವಲಂಬಿತ ಅವಿವಾಹಿತ ಮಗ, ಅವಲಂಬಿತ ಅವಿವಾಹಿತ ಮಗಳು, ಅಂಗವಿಕಲ ಮಕ್ಕಳೂ ಸೇರಿದಂತೆ ಮಾನಸಿಕ ಅಸ್ವಸ್ಥ ಮಕ್ಕಳು, ತಂದೆ ಹಾಗೂ ತಾಯಿ ಮತ್ತು ವಿಧಾನಮಂಡಲದ ಮಹಿಳಾ ಸದಸ್ಯರ ಸಂದರ್ಭದಲ್ಲಿ ಅವರ ಅತ್ತೆ/ಮಾವ ಎಂದರ್ಥ.

ಶಾಸಕರ ಭವನದ ಆವರಣದಲ್ಲಿ ಆಯುರ್ವೇದಿಕ್, ಹೋಮಿಯೋಪತಿ, ಪಂಚಕರ್ಮ ಹಾಗೂ ಅಲೋಪಥಿಕ್ ಔಷಧಾಲಯಗಳನ್ನು ಸ್ಥಾಪಿಸಲಾಗಿದೆ. ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆ/ವಿಧಾನ ಪರಿಷತ್ತುಗಳ ಮೊಗಸಾಲೆಗಳಲ್ಲಿ ತಾತ್ಕಾಲಿಕ ಔಷಧಾಲಯಗಳನ್ನು ತೆರೆಯಲು ಕೂಡ ವ್ಯವಸ್ಥೆಗಳನ್ನು ಮಾಡಲಾಗಿದೆ. ಸಣ್ಣ ಪುಟ್ಟ ಖಾಯಿಲೆಗಳು ಹಾಗೂ ಗಾಯಗಳುಂಟಾದ ಸಂದರ್ಭದಲ್ಲಿ ಸದಸ್ಯರು ಈ ತಾತ್ಕಾಲಿಕ ಔಷಧಾಲಯಗಳಲ್ಲಿ ಉಚಿತ ವೈದ್ಯಕೀಯ ನೆರವನ್ನು ಪಡೆಯಬಹುದಾಗಿದೆ.

ಗುರುತಿನ ಚೀಟಿಗಳು:

ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯಗಳಿಂದ ವಿಧಾನಮಂಡಲದ ಸದಸ್ಯರುಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ. ಪ್ರವೇಶದ್ವಾರದಲ್ಲಿ ಸ್ವಾಗತಗಾರ/ಭದ್ರತಾ ಸಿಬ್ಬಂದಿ ಗುರುತಿನ ಚೀಟಿಗಳನ್ನು ತೋರಿಸುವಂತೆ ಆಗ್ರಹಪಡಿಸಿದರೆ ಸದಸ್ಯರು ತಮ್ಮ ಗುರುತಿನ ಚೀಟಿಗಳನ್ನು ತೋರಿಸಬೇಕು.

ಸದಸ್ಯರು ತಮ್ಮ ಅಧಿಕಾರಾವಧಿ ಮುಕ್ತಾಯಗೊಂಡ ನಂತರ/ಸದಸ್ಯತ್ವ ಕೊನೆಗೊಂಡ ನಂತರ ತಮಗೆ ನೀಡಿದ ಗುರುತಿನ ಚೀಟಿಗಳನ್ನು ಆಯಾಯ ಸಚಿವಾಲಯಗಳಿಗೆ ಹಿಂದಿರುಗಿಸಬೇಕಾಗುತ್ತದೆ.

ವಸತಿ ಸೌಕರ್ಯ:

ಕರ್ನಾಟಕ ವಿಧಾನಮಂಡಲದ ಸದಸ್ಯರುಗಳಿಗೆ ಈ ಕೆಳಕಂಡಂತೆ ಪಾವತಿ ಆಧಾರದ ಮೇಲೆ ಶಾಸಕರ ಭವನದಲ್ಲಿ ಸುಸಜ್ಜಿತ ವಸತಿ ಸೌಕರ್ಯವನ್ನು ಒದಗಿಸಲಾಗುತ್ತದೆ.

ಫ್ಯಾಮಿಲಿ ಫ್ಲ್ಯಾಟ್‌ಗೆ ತಿಂಗಳಿಗೆ ರೂ.1,000/– (ಜಿ.ಎಸ್.ಟಿ. ಸೇರಿದಂತೆ)

(15ನೇ ಡಿಸೆಂಬರ್ 2022 ರಿಂದ ಜಾರಿಗೆ ಬರುವಂತೆ)

ಮಾಜಿ ಸಂಸತ್ ಸದಸ್ಯರುಗಳಿಗೆ ಹಾಗೂ ಕರ್ನಾಟಕದ ಮಾಜಿ ಶಾಸಕರುಗಳಿಗೆ

ಸಿಂಗಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.250/– (ಜಿ.ಎಸ್.ಟಿ. ಸೇರಿದಂತೆ)

ii) 3 ದಿನಗಳ ನಂತರ 7 ದಿನಗಳವರೆಗೆ ಪ್ರತಿ ದಿನಕ್ಕೆ ರೂ.400/–(ಜಿ.ಎಸ್.ಟಿ. ಸೇರಿದಂತೆ)

iii) 7 ದಿನಗಳ ನಂತರ ಕೊಠಡಿ ಖಾಲಿ ಮಾಡುವವರೆಗೆ ಪ್ರತಿ ದಿನಕ್ಕೆ ರೂ.600/–(ಜಿ.ಎಸ್.ಟಿ. ಸೇರಿದಂತೆ)

ಡಬಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.500/–(ಜಿ.ಎಸ್.ಟಿ. ಸೇರಿದಂತೆ)

ii) 3 ದಿನಗಳ ನಂತರ 7 ದಿನಗಳವರೆಗೆ ಪ್ರತಿ ದಿನಕ್ಕೆ ರೂ.800/–(ಜಿ.ಎಸ್.ಟಿ. ಸೇರಿದಂತೆ)

iii) 7 ದಿನಗಳ ನಂತರ ಕೊಠಡಿ ಖಾಲಿ ಮಾಡುವವರೆಗೆ ಪ್ರತಿ ದಿನಕ್ಕೆ ರೂ.1,000/–(ಜಿ.ಎಸ್.ಟಿ ಸೇರಿದಂತೆ)

ಕರ್ತವ್ಯದ ಮೇಲೆ ಬರುವ ರಾಜ್ಯ ಸರ್ಕಾರದ, ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಇತರೆ ರಾಜ್ಯ ಸರ್ಕಾರಿ ಅಧಿಕಾರಿಗಳು/ ಸಿಬ್ಬಂದಿಗಳು (ಸರ್ಕಾರಿ ಸ್ವಾಮ್ಯ ಸಂಸ್ಥೆಗಳು ಒಳಗೊಂಡಂತೆ) ರೂಂಗೆ :

ಸಿಂಗಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.1,200/– (ಜಿ.ಎಸ್.ಟಿ. ಸೇರಿದಂತೆ)

ಡಬಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.2,000/–(ಜಿ.ಎಸ್.ಟಿ. ಸೇರಿದಂತೆ)

ಅತಿಥಿಗಳು ಮಾನ್ಯ ಸದಸ್ಯರುಗಳು/ಹಾಲಿ ಸಂಸತ್ ಸದಸ್ಯರು/ಮಾಜಿ ಸದಸ್ಯರುಗಳು/ಮಾಜಿ ಸದಸ್ಯರುಗಳ ಅತಿಥಿಗಳು (ಸಂಬಂಧಪಟ್ಟವರ ಶಿಫಾರಸ್ಸು ಪತ್ರದ ಮೇರೆಗೆ)

ಸಿಂಗಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.800/– (ಜಿ.ಎಸ್.ಟಿ. ಸೇರಿದಂತೆ)

ii) 3 ದಿನಗಳ ನಂತರ ಪ್ರತಿ ದಿನಕ್ಕೆ ರೂ.1,200/–(ಜಿ.ಎಸ್.ಟಿ. ಸೇರಿದಂತೆ)

ಡಬಲ್ ರೂಂಗೆ :–

i) 3 ದಿನಗಳವರೆಗೆ ಪ್ರತಿ ದಿನಕ್ಕೆ ರೂ.1,200/– (ಜಿ.ಎಸ್.ಟಿ. ಸೇರಿದಂತೆ)

ii) 3 ದಿನಗಳ ನಂತರ ಪ್ರತಿ ದಿನಕ್ಕೆ ರೂ.2,000/–(ಜಿ.ಎಸ್.ಟಿ. ಸೇರಿದಂತೆ)

ಟಿಪ್ಪಣಿ:

ಮಾನ್ಯ ಸದಸ್ಯರು ವಿಧಾನ ಪರಿಷತ್ತಿನ ಪೀಠಾಸೀನಾಧಿಕಾರಿ/ಸಂಸದೀಯ ಪದಾಧಿಕಾರಿಗಳ/ಸಚಿವರು/ಸಂಸದೀಯ ಕಾರ್ಯದರ್ಶಿ/ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರಾಗಿ ನೇಮಕಗೊಂಡು ಸರ್ಕಾರದ ವತಿಯಿಂದ ಮನೆ ಬಾಡಿಗೆ ಭತ್ಯೆ ಮತ್ತು ಗೃಹ ನಿರ್ವಹಣಾ ಭತ್ಯೆಯನ್ನು ಪಡೆಯುತ್ತಿದ್ದು, ಶಾಸಕರ ಭವನದಲ್ಲಿ ತಮಗೆ ಹಂಚಿಕೆಯಾಗಿರುವ ಕೊಠಡಿಯನ್ನು ಉಪಯೋಗಿಸುತ್ತಿದ್ದರೆ ಅಂತಹ ಸದಸ್ಯರು ಮಾಸಿಕ ರೂ 1,000/–ಗಳ ಕೊಠಡಿ ಬಾಡಿಗೆಯನ್ನು ಪಾವತಿಸತಕ್ಕದ್ದು, (ದಿನಾಂಕ:18.07.2025 ರಿಂದ ಜಾರಿಗೆ ಬರುವಂತೆ)

ಒಂದು ದಿನವನ್ನು ಆಗಮನದ ಸಮಯದಿಂದ 24 ಗಂಟೆಗಳೆಂಬುದಾಗಿ ಲೆಕ್ಕಹಾಕಲಾಗುತ್ತದೆ. ಆರಂಭಿಕವಾಗಿ ಅಥವಾ 24 ಗಂಟೆಗಳ ವಾಸ್ತವ್ಯದ ಮುಂದುವರಿಕೆಯಾಗಿ 12 ಗಂಟೆ ಅಥವಾ ಅದಕ್ಕಿಂತ ಕಡಿಮೆ ಅವಧಿಯ ವಾಸ್ತವ್ಯಕ್ಕಾಗಿ ಅರ್ಧ ದಿನದ ವಸತಿ ದರಗಳನ್ನು ವಿಧಿಸಲಾಗುವುದು. ಆದಾಗ್ಯೂ, ರಾತ್ರಿಗಾಗಿ ರಾತ್ರಿ 10 ಗಂಟೆ ನಂತರ ಕೊಠಡಿಗಳನ್ನು ಬಾಡಿಗೆಗೆ ಪಡೆಯುವ ವ್ಯಕ್ತಿಗಳು ಪೂರ್ಣ ಪ್ರಮಾಣದ ವಸತಿ ದರಗಳನ್ನು ಪಾವತಿಸತಕ್ಕದ್ದು.

ಶಾಸಕರ ಭವನದಲ್ಲಿ ಕರ್ತವ್ಯದ ಮೇಲಿರುವ ಇತರೆ ರಾಜ್ಯ ವಿಧಾನಮಂಡಲಗಳ ಸಮಿತಿಗಳ ಸದಸ್ಯರುಗಳಿಗೆ ಬೆಂಗಳೂರು ನಗರದ ಪರಿಮಿತಿಯೊಳಗೆ ಉಚಿತ ವಸತಿ ಸೌಕರ್ಯ ಹಾಗೂ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ವಾಹನ ಸೌಕರ್ಯಗಳು:

ವಿಧಾನಮಂಡಲದ ಸದಸ್ಯರುಗಳ/ಅಧಿಕಾರಿಗಳ ಉಪಯೋಗಕ್ಕಾಗಿ ಶಾಸಕರ ಭವನದಲ್ಲಿ ಇಡಲಾದ ಕಾರುಗಳ ಬಳಕೆಗೆ ಈ ಕೆಳಕಂಡ ನಿಯಮಗಳು ಅನ್ವಯಿಸುತ್ತವೆ.

1. ಕಾರುಗಳು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು – ಇವರ ಆಡಳಿತಾತ್ಮಕ ನಿಯಂತ್ರಣದಡಿಯಲ್ಲಿರುತ್ತವೆ.
2. ಕಾರುಗಳ ಬಳಕೆಗಾಗಿ ಬಾಡಿಗೆ ದರಗಳು ಈ ಕೆಳಕಂಡಂತಿವೆ:

ಕ್ರ.ಸಂ	ವಾಹನದ ವಿಧ	ಪ್ರತಿ ಕಿ.ಮೀಗೆ ದರ
		ಬಿ.ಬಿ.ಎಂ.ಪಿ. ವ್ಯಾಪ್ತಿಯೊಳಗೆ
1	ಸ್ವಿಫ್ಟ್ ಕಾರ್/ಟಯೋಟಾ ಎಟಿಯೋಸ್	6.00 (ಜಿ.ಎಸ್.ಟಿ. ಸೇರಿದಂತೆ)
2	ಇನೋವಾ	8.00 (ಜಿ.ಎಸ್.ಟಿ. ಸೇರಿದಂತೆ)

ಅ) ಹೋಗುವ ಮತ್ತು ವಾಪಸ್ಸು ಬರುವ ಎರಡೂ ಪ್ರಯಾಣಗಳಿಗೂ ದರಗಳನ್ನು ವಿಧಿಸಲಾಗುವುದು. ಯಾವುದೇ ಕಾರನ್ನು ಯಾರೇ ಸದಸ್ಯನ ಸೇವೆಗಾಗಿ ನಿಯೋಜಿಸಿ ಆತನಿಗೆ ಲಭ್ಯವಾಗುವಂತೆ ಮಾಡಿದಲ್ಲಿ, ಕಾರನ್ನು ವಾಸ್ತವವಾಗಿ ಆತನು ಉಪಯೋಗಿಸಲಿ ಅಥವಾ ಉಪಯೋಗಿಸದಿರಲಿ ಶಾಸಕರ ಭವನದಿಂದ ಕಾರನ್ನು ಕಳುಹಿಸಿದ ಸಮಯದಿಂದ ಶಾಸಕರ ಭವನಕ್ಕೆ ಕಾರು ಹಿಂತಿರುಗಿ ಬರುವ ವರೆಗೆ ಬಾಡಿಗೆ ದರಗಳನ್ನು ವಿಧಿಸಲಾಗುವುದು.

ಆ) ಎರಡನೇ ಗಂಟೆಗೆ ರೂ.10/–, ಮೂರನೇ ಗಂಟೆಗೆ ರೂ.30/–, ನಾಲ್ಕನೇ ಗಂಟೆಗೆ ರೂ.150/–, ಐದನೇ ಗಂಟೆಗೆ ರೂ.175/–, ಆರನೇ ಗಂಟೆಗೆ ರೂ.200/–, ಏಳನೇ ಗಂಟೆಗೆ ರೂ.275/–, ಎಂಟನೇ ಗಂಟೆಗೆ ರೂ.325, ಒಂಭತ್ತನೆ ಗಂಟೆಗೆ ರೂ.400/–, ಹತ್ತನೇ ಗಂಟೆಗೆ ರೂ.475/–, ಹನ್ನೊಂದನೇ ಗಂಟೆಗೆ ರೂ.525/–, ಹನ್ನೆರಡನೇ ಗಂಟೆಗೆ ರೂ.600/– ರಂತೆ ಮೇಲಾಡಳಿತ ವೆಚ್ಚವನ್ನು (ಓವರ್ ಹೆಡ್ ಚಾರ್ಜ್) ವಿಧಿಸಲಾಗುವುದು.

ಇ) **ತುರ್ತು ಸಭೆಯ ಕಾರು:** ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 8 ಗಂಟೆವರೆಗಿನ ನಡುವಿನ ಅವಧಿಯಲ್ಲಿ ಜರೂರು/ತುರ್ತು ಉದ್ದೇಶಗಳಿಗಾಗಿ ಸದಸ್ಯರುಗಳ ಉಪಯೋಗಕ್ಕೆ ತುರ್ತು ಸೇವೆಯ ಕಾರುಗಳು ಲಭ್ಯವಿರುತ್ತವೆ. ತುರ್ತು ಸೇವೆಯ ಕಾರುಗಳಿಗೆ ಬಾಡಿಗೆ ದರಗಳನ್ನು ನಿಯತ ದರಗಳಲ್ಲಿ ಹೋಗಿ ಬರುವ ಪ್ರಯಾಣಗಳೆರಡಕ್ಕೂ ವಿಧಿಸಲಾಗುವುದು, ಆದರೆ ಮೊದಲ ಗಂಟೆಯ ನಂತರದ ಪ್ರತಿ ಒಂದು ಗಂಟೆಗೆ ರೂ.100/–ರಂತೆ ಕಾಯುವಿಕೆ ದರ (ವೇಟಿಂಗ್ ಚಾರ್ಜ್) ಗಳನ್ನು ವಿಧಿಸಲಾಗುವುದು. ಅಂದರೆ, ಎರಡನೇ ಗಂಟೆಗೆ ರೂ.100/–, ಮೂರನೇ ಗಂಟೆಗೆ ರೂ.200/–, ನಾಲ್ಕನೇ ಗಂಟೆಗೆ ರೂ.300/–, ಐದನೇ ಗಂಟೆಗೆ ರೂ.400/–, ಆರನೇ ಗಂಟೆಗೆ ರೂ.500/–, ಏಳನೇ ಗಂಟೆಗೆ ರೂ.600/–, ಎಂಟನೇ ಗಂಟೆಗೆ ರೂ.700/– ಒಂಭತ್ತನೆ ಗಂಟೆಗೆ ರೂ.800/–, ಹತ್ತನೇ ಗಂಟೆಗೆ ರೂ.900/–, ಹನ್ನೊಂದನೇ ಗಂಟೆಗೆ ರೂ.1,000/–, ಹನ್ನೆರಡನೇ ಗಂಟೆಗೆ ರೂ.1200/– ರಂತೆ ಮೇಲಾಡಳಿತ ವೆಚ್ಚವನ್ನು (ಓವರ್ ಹೆಡ್ ಚಾರ್ಜ್) ವಿಧಿಸಲಾಗುವುದು.

ಬ್ಯಾಂಕಿಂಗ್ ಸೌಲಭ್ಯಗಳು:

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ – ಇವುಗಳ ಶಾಖೆಗಳನ್ನು ವಿಧಾನಸೌಧದಲ್ಲಿ ತೆರೆಯಲಾಗಿದೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಶಾಖೆಯನ್ನು ಶಾಸಕರ ಭವನದಲ್ಲಿಯೂ ಕೂಡ ತೆರೆಯಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಟಿಎಮ್ ಕೌಂಟರ್‌ಗಳನ್ನು ವಿಧಾನಸೌಧ ಹಾಗೂ ಶಾಸಕರ ಭವನ ಎರಡೂ ಕಡೆಯಲ್ಲೂ ಒದಗಿಸಿದೆ.

ಅಂಚೆ ಸೌಕರ್ಯಗಳು:

ವಿಧಾನಮಂಡಲದ ಸದಸ್ಯರುಗಳ ಉಪಯೋಗಕ್ಕಾಗಿ ಶಾಸಕರ ಭವನ–2ರ ನೆಲ ಮಹಡಿ ಮತ್ತು ಮೊದಲನೇ ಮಹಡಿಯ ಮಧ್ಯದ ಅಂತಸ್ಥಿನಲ್ಲಿ ಹಾಗೂ ವಿಧಾನಸೌಧದ ಪೂರ್ವ ದಿಕ್ಕಿನ ನೆಲಮಹಡಿಯ ಕೊಠಡಿ ಸಂಖ್ಯೆ.1ರಲ್ಲಿ ಅಂಚೆ ಕಛೇರಿಗಳನ್ನು ಸ್ಥಾಪಿಸಲಾಗಿದೆ.

ಕ್ಯಾಂಟೀನ್ ಸೌಲಭ್ಯಗಳು:

ಕರ್ನಾಟಕ ಶಾಸಕರ ಭವನದ ಆವರಣದಲ್ಲಿ ಸಸ್ಯಾಹಾರಿ ಮತ್ತು ಉತ್ತರ ಕರ್ನಾಟಕ ಶೈಲಿಯ ಖಾದ್ಯಗಳು ದೊರೆಯುತ್ತವೆ. ಅಧಿವೇಶನದ ಸಮಯದಲ್ಲಿ ವಿಧಾನಸಭೆ/ವಿಧಾನ ಪರಿಷತ್‌ನ ಮೊಗಸಾಲೆಗಳಲ್ಲಿ ಸದಸ್ಯರುಗಳಿಗೆ ಹಣ ಪಾವತಿ ಆಧಾರದ ಮೇಲೆ ಲಘು ಉಪಹಾರಗಳು ದೊರೆಯುತ್ತವೆ.

ಮುಂಗಡ ಟಿಕೇಟು ಕಾಯ್ದಿರಿಸುವಿಕೆ ಸೌಲಭ್ಯಗಳು:

ಸದಸ್ಯರುಗಳ ಅನುಕೂಲಕ್ಕಾಗಿ ಶಾಸಕರ ಭವನದಲ್ಲಿ ರೈಲು ಮತ್ತು ಬಸ್ಸು ಟಿಕೇಟುಗಳ ಮುಂಗಡ ಕಾಯ್ದಿರಿಸುವಿಕೆಗಾಗಿ ನೈರುತ್ಯ ರೈಲ್ವೇ ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಕಂಪ್ಯೂಟರೀಕೃತ ಮುಂಗಡ ಟಿಕೇಟ್ ಕಾಯ್ದಿರಿಸುವಿಕೆ ಕೌಂಟರ್‌ಗಳನ್ನು ತೆರೆಯಲಾಗಿದೆ.

ಲಾಂಡ್ರಿ ಸೌಲಭ್ಯಗಳು:

ಶಾಸಕರ ಭವನಕ್ಕೆ ಹೊಂದಿಕೊಂಡಂತೆ ಎರಡು ಲಾಂಡ್ರಿಗಳಿವೆ. ಶಾಸಕರ ಭವನದಲ್ಲಿ ವಾಸ್ತವ್ಯ ಹೂಡುವ ಸದಸ್ಯರುಗಳು ಹಣ ಪಾವತಿ ಆಧಾರದ ಮೇಲೆ ಲಾಂಡ್ರಿ ಸೇವೆಗಳ ಉಪಯೋಗವನ್ನು ಪಡೆದುಕೊಳ್ಳಬಹುದು.

ಹೆಲ್ತ್ ಕ್ಲಬ್:

ಅನುಭವಿ ದೈಹಿಕ ಶಿಕ್ಷಕರುಗಳ ಮೇಲ್ವಿಚಾರಣೆಯಲ್ಲಿ ಇತ್ತೀಚಿನ ಅಂಗ ಸಾಧನ ಉಪಕರಣಗಳೊಂದಿಗೆ ಸುಸಜ್ಜಿತವಾದ ಒಂದು ಅತ್ಯಾಧುನಿಕ ಹೆಲ್ತ್ ಕ್ಲಬ್ ಸದಸ್ಯರುಗಳ ಉಪಯೋಗಕ್ಕಾಗಿಯೇ ಪ್ರತ್ಯೇಕವಾಗಿ ಲಭ್ಯವಿದೆ. ಇದು ಶಾಸಕರ ಭವನದ ಕಟ್ಟಡದ ನೆಲಮಹಡಿಯಲ್ಲಿರುವ ಸ್ವಾಗತಕಾರರ ಕೌಂಟರ್‌ನ ಬಳಿ ಇದೆ.

ಇತರ ಸೌಲಭ್ಯಗಳು:

i. ಸದಸ್ಯರುಗಳ ಕೋರಿಕೆಯ ಮೇರೆಗೆ ಮಿಲಿಟರಿ ಅಥವಾ ರಕ್ಷಣಾ ಇಲಾಖೆಯಿಂದ ತಿರಸ್ಕೃತ ಮಿಲಿಟರಿ ಜೀಪುಗಳು/ಮೋಟಾರ್ ಸೈಕಲ್‌ಗಳನ್ನು ಖರೀದಿಸಬಹುದು.

ii. ಸದಸ್ಯರುಗಳಿಗೆ ಹಿಂದೂಸ್ತಾನ ಪೆಟ್ರೋಲಿಯಂ ಕಾರ್ಪೋರೇಷನ್ ಅವರಿಂದ ಹಂಚಿಕೆ ಮಾಡಲ್ಪಟ್ಟ ಎಲ್.ಪಿ.ಜಿ ಸಂಪರ್ಕವನ್ನು ಪ್ರಥಮ ಆದ್ಯತೆ ಮೇರೆಗೆ ಕಲ್ಪಿಸಲಾಗುತ್ತದೆ.

iii. ವಿಧಾನಮಂಡಲದ ಹಾಲಿ ಸದಸ್ಯ ಮೃತಪಟ್ಟಲ್ಲಿ, ಅಂತಿಮ ವಿಧಿವಿಧಾನಗಳನ್ನು ನೆರವೇರಿಸಲು ಅವರ ಸ್ವಕ್ಷೇತ್ರಕ್ಕೆ ಮೃತದೇಹವನ್ನು ಕೊಂಡೊಯ್ಯಲು ಮೃತ ಸದಸ್ಯನ ಕುಟುಂಬಕ್ಕೆ ಒಂದು ಕಾರನ್ನು ನೀಡಲಾಗುತ್ತದೆ. ಮೃತ ಸದಸ್ಯರ ಶವ ಸಂಸ್ಕಾರ ಕಾರ್ಯದಲ್ಲಿ ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ ಸಚಿವಾಲಯದ ಪರವಾಗಿ ಖುದ್ದಾಗಿ ಪ್ರತಿನಿಧಿಸಲು ವಿಧಾನಮಂಡಲದ ಒಬ್ಬ ಅಧಿಕಾರಿಗೆ ಕೂಡ ಇನ್ನೊಂದು ಕಾರನ್ನು ಒದಗಿಸಲಾಗುತ್ತದೆ.

ಸಹಾಯಾರ್ಥ ನಿಧಿ:

ವಿಧಾನಪರಿಷತ್ತಿನ ಸದಸ್ಯರ ಮರಣಾನಂತರ ಅವರ ಕುಟುಂಬದ ನೆರವಿಗಾಗಿ ಹಾಗೂ ಸಂಕಷ್ಟದಲ್ಲಿರುವ ಮಾಜಿ ಸದಸ್ಯರು, ಮತ್ತು ಅವರ ಕುಟುಂಬದ ನೆರವಿಗಾಗಿ ವಿಧಾನ ಪರಿಷತ್ತಿನ ಸದಸ್ಯರುಗಳಿಂದ ಸಂಗ್ರಹಿಸಿದ ವಂತಿಗೆಯಲ್ಲಿ ಸಹಾಯಾರ್ಥ ನಿಧಿಯನ್ನು ಸ್ಥಾಪಿಸಲಾಗಿದೆ.

ವಿಧಾನಮಂಡಲ ಗ್ರಂಥಾಲಯ:

ಕರ್ನಾಟಕ ವಿಧಾನಸಭೆ, ವಿಧಾನ ಸೌಧ
ಕರ್ನಾಟಕ ವಿಧಾನಮಂಡಲ ಗ್ರಂಥಾಲಯ:

ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯವು ತನ್ನದೆ ಆದ ಭವ್ಯವಾದ ಇತಿಹಾವನ್ನು ಹೊಂದಿದ್ದು, 1930ರಲ್ಲಿ ಮೊದಲು ಅಠಾರ ಕಚೇರಿಯಲ್ಲಿ ಆರಂಭವಾಯಿತು. 1956ರಲ್ಲಿ ವಿಧಾನಮಂಡಲದ ಸಚಿವಾಲಯವು ವಿಧಾನ ಸೌಧಕ್ಕೆ ಸ್ಥಳಾಂತರಗೊಂಡಾದ, ಗ್ರಂಥಾಲಯವು ನೆಲಮಹಡಿಯ ಕೊಠಡಿ ಸಂಖ್ಯೆ:28ಕ್ಕೆ ಸ್ಥಳಾಂತರಗೊಂಡಿತು. ಅಂದಿನ ಮೈಸೂರು ಸಂಸ್ಥಾನದ ಆಳ್ವಿಕೆಯಲ್ಲಿ, 1881ರಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ವಿಧಾನಪರಿಷತ್ತಿನ ಎಲ್ಲಾ ನಡಾವಳಿಗಳ ಪ್ರತಿಗಳನ್ನು ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾಗಿದೆ ಹಾಗೂ 1935ರಲ್ಲಿ ಭಾರತದ ಇಂಪಿರಿಯಲ್ ಕೌನ್ಸಿಲ್ ಮತ್ತು ಮದ್ರಾಸ್ ವಿಧಾನಪರಿಷತ್ತಿನ ನಡಾವಳಿಗಳ ಪುಸ್ತಕದ ಚಂದದಾರಿಕೆಯನ್ನು ಪಡೆಯಲಾಯಿತು. ಗ್ರಂಥಾಲಯದಲ್ಲಿ ವಿವಿಧ ನಿಘಂಟುಗಳು, ಕಿರುಹೊತ್ತಿಗೆ, ಚುನಾವಣಾ ಕೈಪಿಡಿಗಳು, ನಿಯಮಗಳು, ಅಂದಿನ ಬ್ರಿಟೀಷ್ ಭಾರತೀಯ ಪ್ರಾಂತ್ಯಗಳ ಶಾಸನ ಸಭೆಗಳು ಮತ್ತು ಸ್ಥಾಯೀ ಸಂಸ್ಥೆಗಳ ಆದೇಶಗಳಂತಹ ಕೆಲವು ಪ್ರಮುಖವಾದ ಪರಾಮರ್ಶನ ಗ್ರಂಥಗಳನ್ನು ಖರೀದಿಸಲಾಯಿತು. 1939ರಲ್ಲಿ ಬಿಟೀಷ್ ಇಂಡಿಯಾದ ಶಾಸನ ಸಭೆಗಳ ನಡವಳಿಗಳ ಪುಸ್ತಕಗಳಿಗೆ ಚಂದಾದಾರಿಕೆಯನ್ನು ಪಡೆಯಲಾಯಿತು. 1941ರಲ್ಲಿ ಸರ್ಕಾರವು ಉತ್ತಮ ಪರಾಮರ್ಶನ ಗ್ರಂಥಗಳನ್ನು ಖರೀದಿಸಲು ಸಮ್ಮತಿಸಿದ ಹಿನ್ನೆಲೆಯಲ್ಲಿ ಮತ್ತು ಶಾಸನ ಸಭೆಯ ಸದಸ್ಯರುಗಳಿಗೆ ಗ್ರಂಥಾಲಯ ಸೌಲಭ್ಯ ಕಲ್ಪಿಸುವುದಕ್ಕಾಗಿ ಸರ್ಕಾರವು ವಿಧಾನ ಪರಿಷತ್ತಿನ ಸಭಾಪತಿಯವರ ಅಧ್ಯಕ್ಷತೆಯಲ್ಲಿ 6ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರುಗಳ ಸಮಿತಿಯನ್ನು ಸಹ ನೇಮಕ ಮಾಡಿತು.

ಸಾಮಾನ್ಯವಾಗಿ ಕರ್ನಾಟಕ ವಿಧಾನಮಂಡಲದ ಸದಸ್ಯರು ಹಾಗೂ ಸಂಸತ್ ಸದಸ್ಯರುಗಳು ಮತ್ತು ವಿಶೇಷವಾಗಿ ಗ್ರಂಥಾಲಯ ಸಮಿತಿಯ ಸದಸ್ಯರುಗಳು ಸಲಹೆಗಳು/ಶಿಫಾರಸ್ಸುಗಳನ್ನು ನೀಡುವ ಮೂಲಕ ಗ್ರಂಥಾಲಯ ಅಭಿವೃದ್ಧಿಯಲ್ಲಿ ತುಂಬಾ ಸಕ್ರಿಯ ಪಾತ್ರ ವಹಿಸಿದ್ದಾರೆ. ಪ್ರಸ್ತುತ ಗ್ರಂಥಾಲಯ ಸಮಿತಿಯು, ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರಿಂದ ನಾಮನಿರ್ದೇಶನಗೊಂಡ ವಿಧಾನಪರಿಷತ್ತಿನ 3 ಸದಸ್ಯರುಗಳನ್ನು ಮತ್ತು ವಿಧಾನಸಭೆಯ ಸನ್ಮಾನ್ಯ ಸಭಾಧ್ಯಕ್ಷರಿಂದ ನಾಮನಿರ್ದೇಶನಗೊಂಡ ವಿಧಾನಸಭೆಯ 5 ಸದಸ್ಯರುಗಳನ್ನು ಒಳಗೊಂಡಿದೆ. ಈ ಸಮಿತಿಗೆ ವಿಧಾನ ಪರಿಷತ್ತಿನ ಸಭಾಪತಿಯವರು ಅಧ್ಯಕ್ಷರಾಗಿರುತ್ತಾರೆ ಮತ್ತು ಸಭಾಧ್ಯಕ್ಷರು ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಗ್ರಂಥಾಲಯವು ಪ್ರಮುಖವಾದ ವಿಧಾನಮಂಡಲದ ಗೌರವಾನ್ವಿತ ಸದಸ್ಯರುಗಳ ಉಪಯೋಗಕ್ಕಾಗಿ ಇರುವುದಾಗಿದೆ ಹಾಗೂ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳು, ಕರ್ನಾಟಕವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರುಗಳು ಸಹ ಗ್ರಂಥಾಲಯದ ಉಪಯೋಗ ಪಡೆದುಕೊಳ್ಳಬಹುದಾಗಿದೆ ಅಲ್ಲದೆ ಸಂಶೋಧನಾ ವಿದ್ಯಾರ್ಥಿಗಳೂ ಸಹ ಗ್ರಂಥಾಲಯದ ಸದ್ಬಳಿಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಗ್ರಂಥಾಲಯವು ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10–00 ಗಂಟೆಯಿಂದ ಸಂಜೆ 5.30ರವರೆಗೆ ತೆರೆದಿರುತ್ತದೆ. ಆದರೆ ವಿಧಾನ ಸಭೆ ಅಥವಾ ವಿಧಾನ ಪರಿಷತ್ತು ಅಧಿವೇಶನ ನಡೆಸುವ ದಿನಗಳಂದು ಉಪವೇಶನ ಆರಂಭವಾಗುವ ಅರ್ಧಗಂಟೆ ಮುಂಚೆ ಹಾಗೂ ಉಪವೇಶನವು ಕೆಲಸದ ಅವಧಿಯನ್ನು ಮೀರಿ ಮುಂದುವರಿದಾಗ, ಉಪವೇಶನ ಮುಕ್ತಾಯಗೊಂಡ ತರುವಾಯ ಅರ್ಧಗಂಟೆಯವರೆಗೂ ತೆರೆದಿರುತ್ತದೆ.

ಗ್ರಂಥಾಲಯದ ಪುಸ್ತಕ ಸಂಗ್ರಹ ಮತ್ತು ಪ್ರಕಾರ್ಯಗಳು

ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯವು ಇತಿಹಾಸ, ರಾಜಕೀಯ, ವಿವಿಧ ದೇಶಗಳ ಸಂವಿಧಾನ, ಕಾನೂನು, ಅರ್ಥಶಾಸ್ತ್ರ, ಭೊಗೋಳ, ಸಂಸದೀಯ ಪ್ರಕ್ರಿಯೆ, ಧರ್ಮ, ಮನೋವಿಜ್ಞಾನ, ಸಮಾಜಶಾಸ್ತ್ರ,

ಸಾರ್ವಜನಿಕ ಆಡಳಿತ ಮುಂತಾದ ವಿವಿಧ ಬಗೆಯ ವಿಷಯಗಳ ಪುಸ್ತಕಗಳು ಮತ್ತು ನಿಯತಕಾಲಿಕೆಗಳ ಉತ್ತಮ ಸಂಗ್ರಹವನ್ನು ಹೊಂದಿದೆ. ಸರ್ಕಾರಿ ಪ್ರಕಟಣೆಗಳು ಮತ್ತು ಸಂಸತ್ತಿನ ಮತ್ತು ಇತರ ರಾಜ್ಯ ವಿಧಾನಮಂಡಲಗಳ ಕಾಯ್ದೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರ ಮತ್ತು ಇತರ ಶಾಸನಬದ್ದ ಸಂಸ್ಥೆಗಳು ನೇಮಿಸಿದ ವಿವಿಧ ಸಮಿತಿಯ ವರದಿಗಳು ಮತ್ತು ಶಾಸಕರಿಗೆ ಉಪಯುಕ್ತವಾದ ಇತರ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ ಮತ್ತು ಕಾದಂಬರಿಗಳನ್ನೂ ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಯ ನಡವಳಿಗಳೂ ಸಹ ಸದಸ್ಯರ ಪರಾಮರ್ಶನೆಗೆ ಲಭ್ಯವಿದೆ. ಇದಲ್ಲದೆ, ಅನುಕ್ರಮವಾಗಿ ಹೌಸ್ ಆಫ್ ಕಾಮನ್ಸ್ ಮತ್ತು ಹೌಡ್ ಆಫ್ ಲಾರ್ಡ್ಸ್ ನಡವಳಿಗಳನ್ನು 1919 ರಿಂದ 1947ರವರೆಗೆ ಗ್ರಂಥಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಗ್ರಂಥಾಲಯವು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಆಯ್ದ ಹಳೆಯ ಸುದ್ದಿ ಪತ್ರಿಕೆಗಳ ಸಂಗ್ರಹವನ್ನು ಹೊಂದಿದೆ. ಇವುಗಳನ್ನು ನಿರ್ದಿಷ್ಟ ಸಂಪುಟಗಳಲ್ಲಿ ಸಂರಕ್ಷಿಸಿಡಲಾಗಿದೆ. ಹೌಸ್ ಆಫ್ ಕಾಮನ್ಸ್, ಹೌಸ್ ಆಫ್ ಲಾರ್ಡ್ಸ್, ಲೋಕಸಭೆ ಮತ್ತು ರಾಜ್ಯಸಭೆ ನಡವಳಿಗಳು, ರಾಜ್ಯ ವಿಧಾನಮಂಡಲ ಚರ್ಚೆಗಳು, ವರದಿಗಳು, ಗೆಜೆಟ್, ಕಾಯ್ದೆಗಳು, ಇತ್ಯಾದಿಗಳನ್ನು ಗ್ರಂಥಾಲಯದಲ್ಲಿ ಸಂಗ್ರಹಿಸಲಾಗಿದೆ. ಪ್ರಸ್ತುತ ಗ್ರಂಥಾಲಯದಲ್ಲಿರುವ ಸಂಗ್ರಹಗಳು ಈ ಕೆಳಗಿನಂತಿವೆ:

ಕ್ರ. ಸಂ.	ವಿವಿಧ ಪುಸ್ತಕ ದಾಸ್ತನುಗಳ ವಿವರ	ಒಟ್ಟು ಸಂಗ್ರಹಗಳು
1.	ಖರೀದಿಸಿದ ಒಟ್ಟು ಪುಸ್ತಕಗಳು	51,968
2.	ಗೌರವ ಪ್ರತಿಗಳು	ಅ–9535
3.	ಮೈಸೂರು ಪ್ರಜಾಪ್ರತಿನಿಧಿ ಸಭೆಯ ನಡವಳಿಗಳು ಮತ್ತು ಕರ್ನಾಟಕ ವಿಧಾನ ಪರಿಷತ್ ಮತ್ತು ವಿಧಾನ ಸಭೆಯ ನಡವಳಿಗಳು (1881 ರಿಂದ 2016) ರ ವರೆಗೆ.	7,150
4.	ಲೋಕಸಭೆಯ ನಡವಳಿಗಳು (1955 ರಿಂದ 2014 ರ ವರೆಗೆ)	13,200
5.	ರಾಜ್ಯಸಭೆಯ ನಡವಳಿಗಳು (1953 ರಿಂದ 2020 ರ ವರೆಗೆ)	11,650
6.	ಕೇಂದ್ರ ಸರ್ಕಾರದ ಗೆಜೆಟ್ ಪ್ರತಿಗಳು (1935 ರಿಂದ 2015 ರ ವರೆಗೆ) ಸಾಮಾನ್ಯ ಮತ್ತು ವಿಶೇಷ ಪ್ರಕಟಣೆಗಳನ್ನೂ ಒಳಗೊಂಡಂತೆ.	5,050
7.	ರಾಜ್ಯ ಸರ್ಕಾರದ ಗೆಜೆಟ್ ಪ್ರತಿಗಳು (1952 ರಿಂದ 2019 ರ ವರೆಗೆ)	10,390
8.	ಹೌಸ್ ಆಫ್ ಕಾಮನ್ಸ್ ನಡವಳಿಗಳು	550 ಸಂಪುಟಗಳು
9.	ಹೌಸ್ ಆಫ್ ಲಾರ್ಡ್ಸ್ ನಡವಳಿಗಳು	350 ಸಂಪುಟಗಳು
	ಒಟ್ಟು ಸಂಗ್ರಹಗಳು	**1,18,043**

ವಿವಿಧ ಮೂಲಗಳಿಂದ ಸ್ವೀಕೃತಗೊಂಡ ಪುಸ್ತಕಗಳು, ನಿಯತಕಾಲಿಕೆಗಳು, ವರದಿಗಳು ಮತ್ತು ಇತರ ಪ್ರಕಟಿತ ವಿಷಯಗಳ ಆರ್ಜನೆ, ಗ್ರಂಥಸೂಚಿ, ಸಂರಕ್ಷಣೆ ಮತ್ತು ವಿತರಣೆ ಮಾಡುವುದು ವಿಧಾನಮಂಡಲ ಗ್ರಂಥಾಲಯದ ಪ್ರಮುಖ ಕಾರ್ಯವಾಗಿದೆ. ಬಹುತೇಕ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಮಾನವ ಚಟುವಟಿಕೆಯ ಎಲ್ಲಾ ಕ್ಷೇತ್ರದಿಂದ ವಿಶೇಷವಾಗಿ ಇತಿಹಾಸ, ರಾಜಕೀಯ, ವಿಜ್ಞಾನ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಕಾನೂನು, ಸಂಸತ್ತು ಮತ್ತು ಇತರ ವಿಷಯಗಳ ಬಗ್ಗೆ ವಿಶೇಷ ಒತ್ತು ನೀಡುವ ಪುಸ್ತಕಗಳನ್ನು ಗ್ರಂಥಾಲಯದ

ಪುಸ್ತಕಗಳನ್ನು ಆಯ್ಕೆ ಮಾಡಲಾಗುತ್ತದೆ ಮತ್ತು ಖರೀದಿ ಮಾಡಿಕೊಳ್ಳಲಾಗುತ್ತದೆ. ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪ್ರಖ್ಯಾತ ಸಂಸದೀಯ ಪಟುಗಳ ಜೀವನ ಚರಿತ್ರೆ ಮತ್ತು ಆತ್ಮಚರಿತ್ರೆ ಮತ್ತು ಇತರ ವಿಷಯಗಳನ್ನು ಸಹ ಸಂಗ್ರಹಿಸಿಡಲಾಗುತ್ತದೆ ಹೊಸ ಪುಸ್ತಕಗಳನ್ನು ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರಿಂದ ಅನುಮೋದನೆ ಪಡೆದ ತರುವಾಯ, ಸುದ್ದಿ ಪತ್ರಿಕೆಗಳು ಮತ್ತು ಪ್ರಕಾಶಕರಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಗಳನ್ನು ಆಯ್ಕೆಗಾಗಿ ಸಮಿತಿಯ ಮುಂದೆ ಇರಿಸಲಾಗುತ್ತದೆ.

Dewey Decimal Classification System (DDC) ಅನುಸಾರ ಗ್ರಂಥಾಲಯದ ಎಲ್ಲಾ ಪುಸ್ತಕ ಸಂಗ್ರಹಗಳನ್ನು ಪರಿಶೀಲಿಸಿ ವರ್ಗೀಕರಿಸಲಾಗಿದೆ. ಪ್ರಮುಖ ದಾಖಲೆಗಳು, ಪುಸ್ತಕಗಳು, ಚರ್ಚೆಗಳು, ವರದಿಗಳು ಇತ್ಯಾದಿಗಳ ಉದ್ಧೃತ ಭಾಗಗಳನ್ನು ಪಡೆಯಲು ಸದಸ್ಯರು/ಸಿಬ್ಬಂದಿಗೆ ಸೌಲಭ್ಯ ಕಲ್ಪಿಸಲಾಗಿದೆ. ಹಣ ಪಾವತಿ ಮಾಡಿದರೆ ಸೂಕ್ತ ದರಗಳಲ್ಲಿ ಸದಸ್ಯರ ಉಪಯೋಗಕ್ಕಾಗಿ ಛಾಯಾ ಪ್ರತಿಗಳನ್ನು ಒದಗಿಸಲಾಗುತ್ತದೆ.

ಗ್ರಂಥಾಲಯ ಸಮಿತಿಯ ಶಿಫಾರಸ್ಸಿನ ಮೇರೆಗೆ ರಚಿತವಾದ ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ನಿಯಮಗಳ ಪ್ರಕಾರ ಸದಸ್ಯರಿಗೆ ಪುಸ್ತಕಳು ಮತ್ತು ಇತರ ಪ್ರಕಟಣೆಗಳನ್ನು ವಿತರಿಸಲಾಗುತ್ತದೆ. ಗ್ರಂಥಾಲಯದಲ್ಲಿ ಸದಸ್ಯರು ಅಧ್ಯಯನ ಮಾಡಲು ಪ್ರಶಾಂತವಾದ ವಾತಾವರಣ ಕಲ್ಪಿಸಲಾಗಿದೆ.

ಸದಸ್ಯರು ಶಾಸಕರ ಭವನದಲ್ಲಿ ತಂಗಿದಾಗ ಅವರ ಬಳಕೆಗಾಗಿ ಶಾಸಕರ ಭವನ ಕಟ್ಟಡಗಳಲ್ಲಿ ಒಂದು ಅಧ್ಯಯನ ಕೊಠಡಿಯ ಜೊತೆಗೆ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆ. ಸದಸ್ಯರು ಓದಲು ಮತ್ತು ಪರಾಮರ್ಶನ ಮಾಡಲು ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ವಿವಿಧ ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ತರಿಸಲಾಗುತ್ತಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳು ಮತ್ತು ಸಮಿತಿಯ ಪದನಿಮಿತ್ತ ಸದಸ್ಯರಾಗಿರುವ ಮಾನ್ಯ ಸಭಾಧ್ಯಕ್ಷರು, ಅಧ್ಯಕ್ಷರಾಗಿರುವ ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಸಮಿತಿಯ ಮಾರ್ಗದರ್ಶನದ ಮೇರೆಗೆ ಗ್ರಂಥಾಲಯವನ್ನು ಆಧುನೀಕರಣಗೊಳಿಸಲಾಗಿದೆ ಮತ್ತು 02.03.2006ರಂದು ಕರ್ನಾಟಕದ ಅಂದಿನ ಘನತೆವೆತ್ತ ರಾಜ್ಯಪಾಲರು ಗ್ರಂಥಾಲಯಕ್ಕೆ ಕರ್ನಾಟಕ ವಿಧಾನಮಂಡಲ ಇ–ಗ್ರಂಥಾಲಯವೆಂದು ಮರುನಾಮಕರಣ ಮಾಡಿ ಉದ್ಘಾಟನೆ ಮಾಡಿದ್ದಾರೆ. ಗ್ರಂಥಾಲಯದ ಆದುನೀಕರಣದಿಂದಾಗಿ ಅಂತರ್ಜಾಲ ಸೌಲಭ್ಯಗಳ ಜೊತೆಗೆ ಆರಾಮದಾಯಕ ಓದುವ ವಾತಾವರಣವನ್ನು ಹೊಂದಲು ಓದುಗರಿಗೆ ಅನುವು ಮಾಡಿಕೊಟ್ಟಿದೆ.

ಪ್ರಕಟಣೆಗಳು

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಸಮಿತಿಯ ಮೇಲ್ವಿಚಾರಣೆಯಲ್ಲಿ, ವಿಧಾನಮಂಡಲ ಗ್ರಂಥಾಲಯವು ರಾಜ್ಯದ 'ಪ್ರತಿಭಾವಂತ ಸಂಸದೀಯ ಪಟುಗಳ' ಮಾಲಿಕೆಯಡಿ ಸುಮಾರು 93 ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸಲಾಗಿದೆ. 'ಪ್ರತಿಭಾವಂತ ಸಂಸದೀಯ ಪಟುಗಳ' ಮಾಲಿಕೆಯಡಿ ಲೋಕಸಭಾ ಸಚಿವಾಲಯವು ಪ್ರಕಟಿಸಿರುವ ಅಯ್ದ 14 ಪುಸ್ತಕಗಳನ್ನು ಕನ್ನಡ ಭಾಷೆಗೆ ಭಾಷಾಂತರಿಸಿದ್ದು, ಓದುಗರು ಪಾದೇಶಿಕ ಭಾಷೆಯಲ್ಲಿ ಓದುವಂಥ ಸೌಲಭ್ಯ ಕಲ್ಪಿಸಲಾಗಿದೆ.

ಗ್ರಂಥಾಲಯ ಸಮಿತಿಯು, ರಾಜ್ಯದ 'ಪ್ರತಿಭಾವಂತ ಸಂಸದೀಯ ಪಟುಗಳ' ಕುರಿತು ಹಲವು ಪುಸ್ತಕಗಳನ್ನು ಹೊರತಂದಿದೆ. ಪ್ರಸ್ತುತ ಈ ಕೆಳಗೆ ಪಟ್ಟಿ ಮಾಡಿದ ವ್ಯಕ್ತಿಗಳ ಕುರಿತು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಗಿದೆ.

ಕ್ರ. ಸಂ.	ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕಗಳ ಹೆಸರು	ಲೇಖಕರು
1.	ಶ್ರೀ ಕೆ ಹನುಮಂತಯ್ಯ	ಪ್ರೊ.ಎನ್.ಬಿ.ಪಾಂಗಣ್ಣಾಯ ಮತ್ತು ಇತರರು
2.	ಶ್ರೀ ಎಸ್.ನಿಜಲಿಂಗಪ್ಪ	ಡಾ॥ ಸಂದೀಪ್ ಶಾಸ್ತ್ರಿ
3.	ಶ್ರೀ ಶಾಂತವೇರಿ ಗೋಪಾಲಗೌಡ	ಪ್ರೊ.ಎನ್.ಬಿ.ಪಾಂಗಣ್ಣಾಯ
4.	ಶ್ರೀ ವೈಕುಂಠ ಬಾಳಿಗ	ಡಾ॥ ಪಿ.ಜೀವನ್ ಕುಮಾರ್
5.	ಶ್ರೀ ವೀರೇಂದ್ರ ಪಾಟೀಲ್	ಡಾ॥ ಎಸ್.ಹೆಚ್.ಕವಂಟೆ ಮತ್ತು ಇತರರು
6.	ಶ್ರೀ ಕಡಿದಾಳ್ ಮಂಜಪ್ಪ	ಡಾ॥ ಎಸ್.ಹೆಚ್.ಕವಂಟೆ ಮತ್ತು ಇತರರು
7.	ಶ್ರೀ ಜಿ.ವಿ. ಹಳ್ಳಿಕೇರಿ	ಡಾ॥ ಆರ್.ಎಲ್.ಎಂ.ಪಾಟೀಲ್
8.	ಶ್ರೀಮತಿ ಕೆ.ಎಸ್.ನಾಗರತ್ನಮ್ಮ	ಪ್ರೊ.ಎನ್.ಬಿ.ಪಾಂಗಣ್ಣಾಯ ಮತ್ತು ಇತರರು
9.	ಶ್ರೀ ಡಿ.ದೇವರಾಜ ಅರಸು	ಶ್ರೀ ಜೆ.ಎಸ್.ಸದಾನಂದ
10.	ಶ್ರೀ ಕೆ.ಟಿ.ಬಾಷ್ಯಂ	ಡಾ॥ ವಿಘ್ನೇಶ್ ಎನ್.ಭಟ್
11.	ಶ್ರೀ ಟಿ.ಸಿದ್ದಲಿಂಗಯ್ಯ	ಶ್ರೀ ಜಿ.ದಕ್ಷಿಣಾಮೂರ್ತಿ
12.	ಶ್ರೀ ಕೆ.ಪುಟ್ಟಸ್ವಾಮಿ	ಶ್ರೀ ಡಿ.ಎಸ್.ಜಯಪ್ಪಗೌಡ
13.	ಶ್ರೀ ಜಗಳೂರು ಮೊಹಮ್ಮದ್ ಇಮಾಮ್	ಶ್ರೀ ಜೆ.ಎಸ್.ಸದಾನಂದ
14.	ಶ್ರೀ ಕೆ.ಸಿ.ರೆಡ್ಡಿ	ಡಾ॥ ಕೆ.ಆರ್.ಸಂದ್ಯಾರೆಡ್ಡಿ
15.	ಶ್ರೀ ಬಿ.ವಿ.ಕಕ್ಕಿಲ್ಲಾಯ	ಶ್ರೀ ಎಂ.ಕೆ.ಭಂಡಿ
16.	ಶ್ರೀ ಜೆ.ಬಿ.ಮಲ್ಲಾರಾಧ್ಯ	ಡಾ॥ ಹೆಚ್.ಎಂ.ಪಂಚಾಕ್ಷರಯ್ಯ
17.	ಶ್ರೀ ಹೆಚ್.ಎಂ.ಚನ್ನಬಸಪ್ಪ	ಪ್ರೊ.ಬಿ.ನಂ.ಚಂದ್ರಯ್ಯ
18.	ಶ್ರೀ ಎಂ.ನಾಗಪ್ಪ	ಡಾ॥ ಎಂ.ಎಸ್.ಪಾಟೀಲ್
19.	ಶ್ರೀ ಬಿ.ರಾಚಯ್ಯ	ಡಾ॥ ಎಂ.ನಂಜಯ್ಯ ಹೊಂಗನೂರು
20.	ಶ್ರೀ ಗಂಗಾಧರ ನಮೋಶಿ	ಡಾ॥ ಎಸ್.ಹೆಚ್.ಕವಂಟೆ ಮತು ಇತರರು
21.	ಶ್ರೀ ಬಿ.ಡಿ.ಜತ್ತಿ	ಶ್ರೀ ಕೃಷ್ಣ ಕೋಲ್ಹಾರ ಕುಲಕರ್ಣಿ
22.	ಶ್ರೀ ಆರ್.ಗುಂಡೂರಾವ್	ಶ್ರೀ ಈಶ್ವರ ದೈತೋಟ
23.	ಶ್ರೀ ಕೆ.ಹೆಚ್.ಪಾಟೀಲ್	ಶ್ರೀ ಎಂ.ಕೆ.ಭಂಡಿ
24.	ಶ್ರೀ ಅಜೀಜ್ ಸೇಠ್	ಶ್ರೀ ಹೆಚ್.ಕೆ.ಬಾಲಸೂರಿ
25.	ಶ್ರೀ ಸಿ.ಎಂ.ಆರ್ಮುಗಂ	ಶ್ರೀ ಹೆಚ್.ಕೆ.ಬಾಲಸೂರಿ
26.	ಶ್ರೀ ಎಸ್.ಡಿ.ಗಾಂವಕರ್	ಶ್ರೀ ಮೋಹನ್ ವೆರ್ಣೇಕರ್
27.	ಶ್ರೀಮತಿ ಬಿ.ಎಲ್.ಸುಬ್ಬಮ್ಮ	ಡಾ॥ ಡಿ.ಎಸ್.ಜಯಪ್ಪಗೌಡ
28.	ಶ್ರೀ ಟಿ.ಆರ್.ಶಾಮಣ್ಣ	ಶ್ರೀ ಎಲ್.ಎನ್.ಮುಕುಂದರಾಜ್
29.	ಶ್ರೀ ಜೆ.ಹೆಚ್.ಪಟೇಲ್	ಎಸ್.ಕೆ.ಶೇಷಚಂದ್ರಿಕ
30.	ಶ್ರೀ ಎಂ.ಪಿ.ಎಲ್.ಶಾಸ್ತ್ರಿ	ಶ್ರೀಮತಿ ಉಷಾ ಹಾರೋಗದ್ದೆ ನಾಯಕ್
31.	ಶ್ರೀ ಎಸ್.ಶಿವಪ್ಪ	ಡಾ॥ ಕೂಡ್ಲಿಗೆರೆ ಮಲ್ಲಿಕಾರ್ಜುನ

32.	ಕಾಗೋಡು ಚಳುವಳಿ	ಡಾ॥ ಕೂಡ್ಲಿಗೆರೆ ಮಲ್ಲಿಕಾರ್ಜುನ
33.	ಶ್ರೀ ಕೆ.ವಿ.ಶಂಕರಗೌಡ	ಶ್ರೀ ಜಗದೀಶ್ ಕೊಪ್ಪ
34.	ಶ್ರೀ ಟಿ.ಎನ್.ನರಸಿಂಹಮೂರ್ತಿ	ಡಾ॥ ಕೆ.ಜೆ.ಸುರೇಶ್
35.	ಶ್ರೀ ಎಸ್.ಆರ್.ಕಂಠಿ	ಶ್ರೀ ಮನುಬಳಿಗಾರ್
36.	ಶ್ರೀ ಎಸ್.ಸಿ.ಮಲ್ಲಯ್ಯ	ಡಾ॥ ಟಿ.ಸಿ.ಪೂರ್ಣಿಮ
37.	ಶ್ರೀ ಅಬ್ದುಲ್ ನಜೀರ್‌ಸಾಬ್	ಶ್ರೀ ಮನುಬಳಿಗಾರ್
38.	ಶ್ರೀ ಪಿ.ಎಂ.ನಾಡಗೌಡ	ಪ್ರೊ. ಗಂಗಾಧರಯ್ಯ ಹಿರೇಮಠ
39.	ಶ್ರೀ ಕೆ.ಪಟ್ಟಾಭಿರಾಮನ್	ಶ್ರೀ ಸಂಜಯ್‌ದೊರೆ
40.	ಶ್ರೀ ಎಂ.ಎಸ್.ಕೃಷ್ಣನ್	ಶ್ರೀ ಹೆಚ್.ಕೆ.ಬಾಲಸೂರಿ
41.	ಶ್ರೀ ಎಂ.ವಿ.ಕೃಷ್ಣಪ್ಪ	ಶ್ರೀ ಜೆ.ಜಿ.ನಾಗರಾಜ ಬೇತಮಂಗಲ
42.	ಶ್ರೀ ಕೆ.ಹೆಚ್.ರಂಗನಾಥ್	ಶ್ರೀ ಎಲ್.ಎನ್.ಮುಕುಂದರಾಜ್
43.	ಶ್ರೀ ರಾಮಕೃಷ್ಣ ಹೆಗಡೆ	ಶ್ರೀ ಶೂದ್ರ ಶ್ರೀನಿವಾಸ್
44.	ಶ್ರೀ ಸಿ.ಬೈರೇಗೌಡ	ಶ್ರೀ ಪ್ರಹ್ಲಾದರಾವ್
45.	ಶ್ರೀ ಎಸ್.ಎಂ.ಯಾಹ್ಯ	ಶ್ರೀ ಬಿ.ಎಂ.ಹನೀಫ್
46.	ಶ್ರೀ ಬಾಪುಗೌಡ ದರ್ಶನಾಪುರ	ಶ್ರೀ ಗಂಗಾಧರಯ್ಯ ಹಿರೇಮಠ
47.	ಡಾ॥ ಹೆಚ್.ನರಸಿಂಹಯ್ಯ	ಪ್ರೊ. ಗಂಗಾಧರಮೂರ್ತಿ
48.	ಕರ್ನಾಟಕ ಏಕೀಕರಣ ಹಾಗೂ ನಾಮಕರಣ	ಡಾ॥ ಸಿ.ಆರ್.ಗೋವಿಂದರಾಜು
49.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–1	ಡಾ॥ ಎಂ.ಜಿ.ನಾಗರಾಜ್
50.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–2	ಡಾ॥ ಎಂ.ಜಿ.ನಾಗರಾಜ್
51.	ಕರ್ನಾಟಕ ರೈತ ಚಳುವಳಿ– ಸತ್ಯಾಗ್ರಹಗಳು ಸಂಪುಟ–3	ಡಾ॥ ಎಂ.ಜಿ.ನಾಗರಾಜ್
52.	ಶ್ರೀ ಕೇಶವರಾವ ನಿಟ್ಟೂರಕರ್	ಡಾ॥ ಜಿ.ಬಿ.ವಿಸಾಜಿ
53.	ಶ್ರೀ ಶಂಕರಶೆಟ್ಟಿ ಪಾಟೀಲ್	ಡಾ॥ ಎಮ್.ಎಸ್.ಲಠ್ಠೆ
54.	ಶ್ರೀ ದೇವೇಂದ್ರಪ್ಪ ಫಾಳಪ್ಪ ಜಮಾದಾರ	ಡಾ॥ ನಾಗಾಬಾಯಿ.ಬಿ.ಬುಳ್ಳಾ
55.	ಶ್ರೀ ಕೆ.ಕೆಂಚಪ್ಪ	ಶ್ರೀ ಚಂದ್ರಶೇಖರ ತಾಳ್ಯ
56.	ಶ್ರೀ ಬಿ.ಎಂ.ಹೊರಕೇರಿ	ಶ್ರೀ ಎಂ.ಎಸ್.ಪಾಟೀಲ
57.	ಶ್ರೀ ಕೊಲೂರ ಮಲ್ಲಪ್ಪ	ಶ್ರೀ ಗಂಗಾಧರಯ್ಯ ಹಿರೇಮಠ ಮತ್ತು ದೇವೇಂದ್ರಪ್ಪಗೌಡ ಮಾಲಿ ಪಾಟೀಲ
58.	ಶ್ರೀ ಬಿ.ಶ್ಯಾಮ ಸುಂದರ್	ಶ್ರೀ ಗಂಧರ್ವಸೇನಾ
59.	ಶ್ರೀಮತಿ ಬಸವರಾಜೇಶ್ವರಿ	ಶ್ರೀ ಪ್ರಹ್ಲಾದ ಬೆಟಗೇರಿ
60.	ಶ್ರೀ ಮೊಹಮ್ಮದ್ ಅಲಿ	ಪ್ರೊ.ಶಿವರಾಜ ಪಾಟೀಲ

61.	ಶ್ರೀ ಸರದಾರ ಶರಣಗೌಡ ಇನಾಮದಾರ	ಡಾ॥ ಬಿ.ವಿ.ಮಲ್ಲಾಪುರ
62.	ಶ್ರೀ ಸದಾಶಿವ.ಎಸ್.ಶೆಟ್ಟರ	ಶ್ರೀ ನಾರಾಯಣ ಘಳಗಿ
63.	ಶ್ರೀ ಅಂದಾನಪ್ಪ ದೊಡ್ಡಮೇಟಿ	ಪ್ರೊ.ಸಿ.ವಿ.ಕೆರಿಮನಿ
64.	ಶ್ರೀ ಎಸ್.ವೈ.ಪಾಟೀಲ	ಡಾ॥ ಎಂ.ಎಸ್.ಪಾಟೀಲ
65.	ಶ್ರೀ ವೈ.ರಾಮಚಂದ್ರ	ಪ್ರೊ.ಎನ್.ಚಿಕ್ಕಣ್ಣ
66.	ಶ್ರೀ ಕೆ.ಪಿ.ರೇವಣ್ಣಸಿದ್ದಪ್ಪ	ಶ್ರೀ ಸಿದ್ದಗಂಗಯ್ಯ ಕಂಬಾಳು
67.	ಶ್ರೀ ವೈ.ಕೆ.ರಾಮಯ್ಯ	ಡಾ॥ ಹಿ.ಚಿ.ಬೋರಲಿಂಗಯ್ಯ
68.	ಶ್ರೀ ಸೋಲೂರು ಸಿದ್ದಪ್ಪ	ಶ್ರೀ ಬಿ.ಸಿದ್ದಗಂಗಯ್ಯ ಕಂಬಾಳು
69.	ಶ್ರೀ ಎಂ.ವೈ.ಘೋರ್ಪಡೆ	ಶ್ರೀ ಮಹಾಬಲೇಶ್ವರ ಕಾಟ್ರಹಳ್ಳಿ
70.	ಶ್ರೀ ಎಂ.ಪಿ.ಪಾಟೀಲ್	ಡಾ॥ ಗುರುಪಾದಪ್ಪ ಮರಿಗುದ್ದಿ
71.	ಶ್ರೀ ಎಚ್.ವಿ.ಕೌಜಲಗಿ	ಡಾ॥ ಡಿ.ಎಸ್.ಜಯಪ್ಪಗೌಡ
72.	ಡಾ॥ ಎಂ.ಆರ್.ತಂಗಾ	ಶ್ರೀ ಎಸ್.ಸುರೇಶ್‌ಕುಮಾರ್
73.	ಶ್ರೀ ಕೆ.ಎನ್.ನಾಗೇಗೌಡ	ಪ್ರೊ.ಎಚ್.ಎಸ್.ಮುದ್ದೇಗೌಡ
74.	ಶ್ರೀ ಎ.ಆರ್.ಪಂಚಗಾವಿ	ಪ್ರೊ.ಚಂದ್ರಶೇಖರ ಅಕ್ಕಿ
75.	ಶ್ರೀ ಡಾ॥ ಕೆ.ನಾಗಪ್ಪ ಆಳ್ವ	ಶ್ರೀ ರಘು ಶೆಟ್ಟಿಗಾರ್
76.	ಶ್ರೀ ಎಚ್.ಸಿದ್ದವೀರಪ್ಪ	ಶ್ರೀ ಆರ್.ಜಿ.ಹಳ್ಳಿ ನಾಗರಾಜ
77.	ಶ್ರೀ ಕೊಂಡಜ್ಜಿ ಬಸಪ್ಪ	ಡಾ॥ ಸಾ.ಶಿ.ಮರುಳಯ್ಯ
78.	ಶ್ರೀ ಟಿ.ಎ.ಪೈ	ಡಾ॥ ಶಿವಾನಂದ ಬೇಕಲ್
79.	ಶ್ರೀ ವಿಶ್ವನಾಥ ಕತ್ತಿ	ಡಾ॥ ರಾಮಕೃಷ್ಣ ಮರಾಠೆ
80.	ಶ್ರೀ ಎನ್.ಹುಚ್ಚಮಾಸ್ತಿಗೌಡ	ಶ್ರೀಮತಿ ಕವಿತಾಕೃಷ್ಣ
81.	ಶ್ರೀ ಡಿ.ವಿ.ಗುಂಡಪ್ಪ	ಶ್ರೀ ರಾಘವೇಂದ್ರ ಪಾಟೀಲ
82.	ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು–ಸಂಪುಟ–4	ಡಾ॥ ಎಂ.ಜಿ.ನಾಗರಾಜ್
83.	ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು–ಸಂಪುಟ–5	ಡಾ॥ ಎಂ.ಜಿ.ನಾಗರಾಜ್
84.	ಕರ್ನಾಟಕ ರೈತ ಚಳುವಳಿ–ಸತ್ಯಾಗ್ರಹಗಳು–ಸಂಪುಟ–6	ಡಾ॥ ಎಂ.ಜಿ.ನಾಗರಾಜ್
85.	ಶ್ರೀ ಪಿ.ಎಂ.ಬಾಂಗಿ	ಡಾ॥ ಎಂ.ಎಸ್.ಪಾಟೀಲ
86.	ದಿ.ಎಸ್.ಆರ್.ಬೊಮ್ಮಾಯಿ	ಶ್ರೀ ಚಂದ್ರಶೇಖರ ಬೆಳಗೆರೆ
87.	ಶ್ರೀ ಬಿ.ಜಿ.ಬಣಕಾರ	ಡಾ॥ ಭೋಜರಾಜ ಪಾಟೀಲ
88.	ಶ್ರೀ ಚಂದ್ರಶೇಖರ ಪಾಟೀಲ್ ಮಹಾಗಾಂವ್	ಡಾ॥ ಶಿವಾನಂದ ಬೇಕಲ್
89.	ದಿ: ಎ.ಎಸ್.ಪಾಟೀಲ್	ಎಸ್.ಎಸ್.ಹಾದಿಮನಿ
90.	ಶ್ರೀ ಎನ್.ರಾಚಯ್ಯ	ಡಾ॥ ರಾಮಚಂದ್ರಪ್ಪ ಜಿ.ಟಿ. ಮತ್ತು ಡಾ॥ ಎನ್.ಕೆ.ಲೋಲಾಕ್ಷಿ
91.	ಶ್ರೀ ಬಿ.ಬಸವಲಿಂಗಪ್ಪ	ಡಾ॥ ಎಸ್.ನಾಗರಾಜು

92.	ಶ್ರೀ ಎ.ಕೆ.ಸುಬ್ಬಯ್ಯ	ಎಂ.ಎಸ್.ಶಶಿಕಲಾಗೌಡ
93.	ಡಾ॥ ಮಹಾದೇವ ಬಣಕಾರ್	ಶ್ರೀ ಕುಮಾರಸ್ವಾಮಿ ಯಳವತ್ತಿಮಠ
94.	ಎಂ.ಎಸ್.ಶಶಿಕಲಾ ಗೌಡ	

ಎ) ಲೋಕಸಭಾ ಸಚಿವಾಲಯವು 'ಪ್ರತಿಭಾವಂತ ಸಂಸದೀಯ ಪಟುಗಳ' ಮಾಲಿಕೆಯಡಿ ಪ್ರಕಟಿಸಲಾದ ಅಯ್ದು ಪುಸ್ತಕಗಳನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ಭಾಷಾಂತರ ಮಾಡಲಾದ ಪುಸ್ತಕಗಳು ಈ ಕೆಳಕಂಡಂತಿವೆ.

ಕ್ರ. ಸಂ.	**ಪ್ರತಿಭಾವಂತ ಸಂಸದೀಯ ಪಟುಗಳ ಪುಸ್ತಕಗಳ ಹೆಸರು**	**ಅನುವಾದಕರು**
1.	ಡಾ॥ ಬಿ.ಆರ್.ಅಂಬೇಡ್ಕರ್	ಭಾಷಾಂತರ ನಿರ್ದೇಶಕರು
2.	ಡಾ॥ ರಾಂಮನೋಹರ ಲೋಹಿಯಾ	ಭಾಷಾಂತರ ನಿರ್ದೇಶಕರು
3.	ಶ್ರೀ ವಿ.ಕೆ.ಕೃಷ್ಣಮೆನನ್	ಅಧ್ಯಕ್ಷರು,ರಾಜ್ಯ ಭಾಷಾ ವಿದಾಯಿ ಆಯೋಗ
4.	ಡಾ॥ ರಾಜೇಂದ್ರ ಪ್ರಸಾದ್	ಪ್ರೊ.ಆರ್.ಕೆ.ಹುಡಗಿ
5.	ಶ್ರೀ ಶೇಖ್ ಮೊಹಮ್ಮದ್ ಅಬ್ದುಲ್ಲಾ	ಭಾಷಾಂತರ ನಿರ್ದೇಶಕರು
6.	ಡಾ॥ ಶ್ಯಾಮ್ ಪ್ರಸಾದ್ ಮುಖರ್ಜಿ	ಭಾಷಾಂತರ ನಿರ್ದೇಶಕರು
7.	ಶ್ರೀ ಭೂಪೇಶ್ ಗುಪ್ತ	ಪ್ರೊ.ಆರ್.ಕೆ.ಹುಡಗಿ
8.	ಶ್ರೀ ಅನಂತ ಶಯನಂ ಅಯ್ಯಂಗಾರ್	ಭಾಷಾಂತರ ನಿರ್ದೇಶಕರು
9.	ಶ್ರೀಮತಿ ರಾಜಕುಮಾರಿ ಅಮೃತ್ ಕೌರ್	ಶ್ರೀಮತಿ ಕೆ.ಹೆಚ್.ಸಾವಿತ್ರಿ
10.	ಡಾ॥ ಚಿಂತಾಮನ್ ಡಿ.ದೇಶಮುಖ್	ಶ್ರೀ ಬೇಲೂರು ಸುದರ್ಶನ
11.	ಶ್ರೀ ಪನಂಪಿಲ್ಲಿ ಗೋವಿಂದ ಮೆನನ್	ಭಾಷಾಂತರ ನಿರ್ದೇಶಕರು
12.	ಶ್ರೀ ಎಸ್.ಎಂ.ಜೋಷಿ	ಶ್ರೀಮತಿ ಕೆ.ಹೆಚ್.ಸಾವಿತ್ರಿ
13.	ಶ್ರೀ ಜೈ ಸುಖಲಾಲ್ ಹಾಥಿ	ಶ್ರೀಮತಿ ಎಸ್.ಸುಮಿತ್ರ
14.	ಡಾ॥ ಲಂಕಾ ಸುಂದರಂ	ಶ್ರೀ ಬಿ.ಜವರಯ್ಯ

ಬಿ) ಎಂ.ಎನ್ ಕೌಲ್ ಮತ್ತು ಎಸ್.ಎಲ್ ಶಕ್ದರ್ ಬರೆದಿರುವ **"Practice and Procedure of Parliament – ಆರನೇ ಆವೃತ್ತಿ"** ಪುಸ್ತಕವನ್ನು ಕನ್ನಡ ಭಾಷೆಗೆ ಭಾಷಾಂತರಿಸಿ **"ಸಂಸದೀಯ ಪದ್ದತಿ ಮತ್ತು ಪ್ರಕ್ರಿಯೆ"** ಎಂಬ ಶೀರ್ಷಿಕೆಯಲ್ಲಿ ಕನ್ನಡದಲ್ಲಿ ಪ್ರಕಟಿಸಲಾಗಿದೆ.

ಡಿಜಿಟಲ್ ಗ್ರಂಥಾಲಯ

ಇ–ಗ್ರಂಥಾಲಯದ ಭಾಗವಾಗಿ, ಕರ್ನಾಟಕ ವಿಧಾನಮಂಡಲ ಗ್ರಂಥಾಲಯವನ್ನು ನ್ಯಾಷನಲ್ ಇನ್‌ಫಾರಮೆಟಿಕ್ ಸೆಂಟರ್(ಎನ್‌ಐಸಿ), ನವದೆಹಲಿ ಇವರು ಅಭಿವೃದ್ದಿಪಡಿಸಿರುವ 'ಇ–ಗ್ರಂಥಾಲಯ' ಇನ್–ಹೌಸ್ ಲೈಬ್ರರಿ ಆಪರೇಷನ್ ಸಾಫ್ಟ್‌ವೇರ್ ಅನ್ನು ಬಳಸಿಕೊಂಡು ಸಂಪೂರ್ಣವಾಗಿ ಸ್ವಯಂಚಾಲಿತವಾಗಿ ಕಾರ್ಯಗತಗೊಳಿಸಲಾಗಿದೆ. ಆನ್‌ಲೈನ್ ಪಬ್ಲಿಕ್ ಅಕ್ಸೆಸ್ ಕೆಟಲಾಗ್(ಒಪ್ಯಾಕ್) ಪದ್ದತಿಯನ್ನು ಪರಿಚಯಿಸಲಾಗಿದೆ ಮತ್ತು ಗ್ರಂಥಾಲಯದ ಸದಸ್ಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಎಲ್ಲಿಂದಾದರೂ, ಯಾವುದೇ ಸಮಯದಲ್ಲಿ ಗ್ರಂಥಾಲಯದಲ್ಲಿ ಲಭ್ಯವರುವ ಮಾಹಿತಿಯನ್ನು ಸುಲಭವಾಗಿ ಹುಡುಕಬಹುದಾಗಿದೆ. ಇಂದಿನ ಆಧುನಿಕ ಮಾಹಿತಿ

ತಂತ್ರಜ್ಞಾನದ ಯುಗದಲ್ಲಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಎಲ್ಲಾ ನಡವಳಿಗಳನ್ನು ಎಲ್ಲರಿಗೂ ದೂರಕಿಸಿಕೊಡುವ ದೃಷ್ಟಿಯಿಂದ ಅವುಗಳನ್ನು ಡಿಜಿಟಲೀಕರಣಗೊಳಿಸುವ ಕಾರ್ಯವು ಪ್ರಗತಿಯಲ್ಲಿದೆ.

ಕರ್ನಾಟಕ ವಿಧಾನಮಂಡಲ ಗ್ರಂಥಾಲಯವು ಉತ್ತಮ ಕುಶಲತೆಯನ್ನು ಹೊಂದಿದ ನುರಿತ ಮಾನವ ಸಂಪನ್ಮೂಲವನ್ನು ಹೊಂದಿದ್ದು ಮುಖ್ಯ ಗ್ರಂಥಪಾಲಕರು ಗ್ರಂಥಾಲಯ ವಿಭಾಗದ ಮೇಲ್ವಿಚಾರಣೆ ನಡೆಸುತ್ತಾರೆ ಮತ್ತು ಮುಖ್ಯ ಗ್ರಂಥಪಾಲಕರಿಗೆ ನೆರವು ನೀಡಲು 01 ಹಿರಿಯ ಗ್ರಂಥಾಲಯ ಸಹಾಯಕರು, 06 ಗ್ರಂಥಾಲಯ ಸಹಾಯಕರು ಮತ್ತು 03 ಕಿರಿಯ ಗ್ರಂಥಾಲಯ ಸಹಾಯಕರುಗಳನ್ನು ಒಳಗೊಂಡಿದೆ.

****

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ:

ವಿಧಾನಸೌಧದ ಉತ್ತರ ಭಾಗದಲ್ಲಿರುವ ನೆಲಮಹಡಿಯ ಕೊಠಡಿ ಸಂಖ್ಯೆ 28ರಲ್ಲಿ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ ಇದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ ಅಧಿವೇಶನದ ಉಪವೇಶನಗಳಲ್ಲಿ ಚರ್ಚೆಗೊಳಗಾಗಬಹುದಾಂತಹ ಸಾಧ್ಯತೆ ಇರುವ ವಿಷಯಗಳ ಬಗ್ಗೆ ಹಾಗೂ ಮಾನ್ಯ ಶಾಸಕರು ಕೋರಬಹುದಾದಂತಹ ಪ್ರಸ್ತುತ ಸಂಸದೀಯ ಹಿತಾಸಕ್ತಿಯ ವಿಷಯಗಳು, ಶಾಸನಾತ್ಮಕ ಕ್ರಮಗಳು, ಪ್ರಚಲಿತ ವಿದ್ಯಮಾನಗಳ/ಸುದ್ದಿಗಳ ಬಗೆಗಿನ ಮಾಹಿತಿ ಮತ್ತು ವಿವರಗಳನ್ನು ನಿರೀಕ್ಷಿಸಿ ಕ್ರೋಢೀಕರಿಸಿ ಮಾನ್ಯ ಸದಸ್ಯರ ಬೇಡಿಕೆಗಳಂತೆ ಮಾಹಿತಿಗಳನ್ನು ಪೂರೈಸುವುದು ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯ ಕಾರ್ಯಗಳಾಗಿವೆ. ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಅಧಿವೇಶನ ಹಾಗೂ ಅಧಿವೇಶನೇತರ ಎರಡೂ ಅವಧಿಯಲ್ಲಿ ಉಭಯ ಸದನಗಳ ಸದಸ್ಯರುಗಳ ಮಾಹಿತಿಯ ಅಗತ್ಯತೆಗಳನ್ನು ಪೂರೈಸುತ್ತಿದೆ. **(Press Clippings)** ಪತ್ರಿಕಾ ತುಣುಕು ಸೇವೆಗಳು, ಸದಸ್ಯರುಗಳ ಪರಾಮರ್ಶನಾ ಸೇವೆಗಳು ಮತ್ತು ಸಂಸದೀಯ ಹಿತಾಸಕ್ತಿಯ ಮತ್ತು ಪರಾಮರ್ಶನ ಮೌಲ್ಯವುಳ್ಳ ಪುಸ್ತಕಗಳ ಪ್ರಕಟಣೆ ಹಾಗೂ ಕಾಲ ಕಾಲಕ್ಕೆ ಅವುಗಳ ಪರಿಷ್ಕರಣೆ ಒಳಗೊಂಡಂತೆ ಕರ್ನಾಟಕ ವಿಧಾನಮಂಡಲದ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ನಿರ್ವಹಿಸುವ ಪ್ರಮುಖ ಕಾರ್ಯಗಳಾಗಿವೆ.

ಪತ್ರಿಕಾ ತುಣುಕುಗಳಿಗೆ ಸಂಬಂಧಪಟ್ಟ ಮಾಹಿತಿಯ ಪೂರೈಕೆ:

ವಿಧಾನ ಮಂಡಲದ ಮಾನ್ಯ ಸದಸ್ಯರುಗಳಿಗೆ ಪ್ರಸಕ್ತ ವಿದ್ಯಮಾನಗಳ ಪರಾಮರ್ಶೆಗಾಗಿ ಕೋರುವ ವಿಷಯಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ತ್ವರಿತವಾಗಿ ಒದಗಿಸುವ ಉದ್ದೇಶದಿಂದ ಪತ್ರಿಕಾ ತುಣುಕುಗಳ **(Press Clippings)** ಸೇವೆಯನ್ನು ಪ್ರಾರಂಭಿಸಲಾಯಿತು. ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಶಾಸಕಾಂಗ, ರಾಜಕೀಯ, ಆರ್ಥಿಕ, ಸಾಮಾಜಿಕ–ಸಾಂಸ್ಕೃತಿಕ, ವೈಜ್ಞಾನಿಕ, ತಾಂತ್ರಿಕ ಹಾಗೂ ಇತರೆ ಕ್ಷೇತ್ರಗಳಲ್ಲಿನ ಬೆಳವಣಿಗೆಗಳ ಬಗ್ಗೆ ಎಲ್ಲಾ ಪ್ರಮುಖ, ಸಂಬಂಧಿತ ಮತ್ತು ನವೀಕೃತ ಸುದ್ದಿ ವಿಷಯಗಳು, ಸಂಪಾದಕೀಯ ಟಿಪ್ಪಣಿಗಳು ಮತ್ತು ಲೇಖನಗಳನ್ನು ಸಂಗ್ರಹಿಸುತ್ತಿದೆ. ಈ ಪತ್ರಿಕಾ ತುಣುಕುಗಳನ್ನು/ಕ್ಲಿಪ್ಪಿಂಗ್‌ಗಳನ್ನು 7 ಕನ್ನಡ

ಮತ್ತು 4 ಆಂಗ್ಲ ಭಾಷೆಯ ದಿನ ಪತ್ರಿಕೆಗಳಿಂದ ಆಯ್ಕೆ ಮಾಡಿ ಸಿದ್ಧಪಡಿಸಲಾಗುತ್ತಿದೆ. ಕನ್ನಡ ದಿನಪತ್ರಿಕೆಗಳೆಂದರೆ– ಪ್ರಜಾವಾಣಿ, ಕನ್ನಡಪ್ರಭ, ವಿಶ್ವವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಸಂಯುಕ್ತ ಕರ್ನಾಟಕ ಮತ್ತು ಉದಯವಾಣಿ. ಆಂಗ್ಲ ಭಾಷೆಯ ದಿನ ಪತ್ರಿಕೆಗಳೆಂದರೆ ಡೆಕ್ಕನ್ ಹೆರಾಲ್ಡ್, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ ಮತ್ತು ಟೈಮ್ಸ್ ಆಫ್ ಇಂಡಿಯಾ.

ಭವಿಷ್ಯದಲ್ಲಿ ಪರಾಮರ್ಶನೆಗಾಗಿ ಮೂರು ಪ್ರಮುಖ ಪತ್ರಿಕೆಗಳನ್ನು ಜನವರಿ–2018 ರಿಂದ (ಒಂದು ಆಂಗ್ಲ ಮತ್ತು ಎರಡು ಕನ್ನಡ ದಿನ ಪತ್ರಿಕೆಗಳು) ಪರಿಮಿತ ಸಂಪುಟಗಳ ರೂಪದಲ್ಲಿ (bounded volumes) ಸಂರಕ್ಷಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಪತ್ರಿಕಾ ತುಣುಕು ಸೇವೆಗಳು ಮತ್ತು ಸದಸ್ಯರುಗಳ ಪರಾಮರ್ಶನಾ ಸೇವೆಗಳು ಕರ್ನಾಟಕ ವಿಧಾನಸಭೆಯ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ನಿರ್ವಹಿಸುವ ಪ್ರಮುಖ ಕಾರ್ಯದ ಭಾಗವಾಗಿರುತ್ತದೆ. ಕರ್ನಾಟಕ ವಿಧಾನಸಭೆಯ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯ ಪತ್ರಿಕಾ ತುಣುಕುಗಳನ್ನು ವಿಷಯವಾರು ಕಡತಗಳಲ್ಲಿ, ಕಾಲಾನುಕ್ರಮಣಿಕೆಯಲ್ಲಿ ನಿರ್ವಹಿಸಲಾಗುತ್ತದೆ ಮತ್ತು ಲಿಖಿತ ಕೋರಿಕೆಯ ಮೇರೆಗೆ ಸದಸ್ಯರಿಗೆ ಅವುಗಳ ಛಾಯಾ ಪ್ರತಿಯನ್ನು ಒದಗಿಸಲಾಗುತ್ತದೆ.

ಮಾನ್ಯ ಪೀಠಾಸೀನಾಧಿಕಾರಿಗಳು, ಸದಸ್ಯರುಗಳು, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯ ಸಿಬ್ಬಂದಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಅಲ್ಲದೆ, ಉಭಯ ಸಚಿವಾಲಯಗಳ ಬೇರೆ ಬೇರೆ ಶಾಖೆಗಳು ಅದರಲ್ಲೂ ನಿರ್ದಿಷ್ಟವಾಗಿ ಸಮಿತಿ ಶಾಖೆಗಳು ಪತ್ರಿಕಾ ತುಣುಕುಗಳನ್ನು ವ್ಯಾಪಕವಾಗಿ ಬಳಸುತ್ತಾರೆ.

ಹಳೆಯ ಪತ್ರಿಕಾ ತುಣುಕುಗಳ ಪರಿಶೀಲನೆಯನ್ನು ನಿಯತವಾಗಿ ನಡೆಸಲಾಗುತ್ತದೆ. ಬಹುತೇಕ ಪತ್ರಿಕಾ ತುಣುಕುಗಳನ್ನು ಒಂದು ವರ್ಷದವರೆಗೆ ಉಳಿಸಿಕೊಳ್ಳಲಾಗುತ್ತದೆ.

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಪೀಠಾಸೀನಾಧಿಕಾರಿಗಳ ಸಮ್ಮೇಳನ, ಕಾರ್ಯದರ್ಶಿಗಳ ಸಮ್ಮೇಳನ, ಸಿಪಿಎ ಸಮ್ಮೇಳನ, ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ ಮತ್ತು ಇತರ ಸಮ್ಮೇಳನಗಳಿಗೆ ಹಾಜರಾಗುವ ಪೀಠಾಸೀನಾಧಿಕಾರಿಗಳ ಉಪಯೋಗಕ್ಕಾಗಿ ಕೋರಿಕೆಯ ಮೇರೆಗೆ ಹಿನ್ನೆಲೆ ಟಿಪ್ಪಣಿಗಳನ್ನೂ ಸಹ ಸಿದ್ಧಪಡಿಸಿ ಒದಗಿಸಲಾಗುತ್ತದೆ.

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯಲ್ಲಿ ಲಭ್ಯವಿರುವಂತಹ ವಿಧಾನ ಮಂಡಲದ ಉಭಯ ಸದನಗಳ ನಡವಳಿ ಮತ್ತು ಇತರೆ ಅತ್ಯಾವಶ್ಯಕ ದಾಖಲಾತಿಗಳು/ಪ್ರಕಟಣೆಗಳನ್ನು ಮಾನ್ಯ ಸದಸ್ಯರು ಪರಾಮರ್ಶಿಸಿ

ಆಯ್ಕೆ ಮಾಡುವ ಪುಟಗಳ ಉದ್ಧೃತ ಭಾಗದ ಛಾಯಾ ಪ್ರತಿಗಳನ್ನು ಕೋರಿಕೆಯ ಮೇರೆಗೆ ಅವರು ಅಥವಾ ಅವರ ಅಧಿಕೃತ ಸಹಾಯಕರಿಗೆ ಒದಗಿಸಲಾಗುವುದು.

ಕಾಗದ ರಹಿತ ಕಛೇರಿಯ ಅನುಷ್ಠಾನ ಕಾರ್ಯದ ಭಾಗವಾಗಿ, ಕಛೇರಿಯ ಕಾರ್ಯಗಳನ್ನು ಕಾಗದ ರಹಿತಗೊಳಿಸಲು ಹಾಗೂ ತ್ವರಿತವಾಗಿ ಮಾನ್ಯ ಸದಸ್ಯರಿಗೆ ಅವರು ಕೋರುವ ಮಾಹಿತಿಗಳನ್ನು ಒದಗಿಸುವ ಸಲುವಾಗಿ ಲೋಕಸಭಾ ಮಾದರಿಯಲ್ಲಿ ಕರ್ನಾಟಕ ವಿಧಾನ ಸಭೆ ಸಚಿವಾಲಯದ ವತಿಯಿಂದ ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ನಡವಳಿಗಳು ಮತ್ತು ಇತರೆ ಅತ್ಯಾವಶ್ಯಕ ದಾಖಲಾತಿಗಳನ್ನು ಡಿಜಿಟೈಸ್ ಮಾಡುವ ಕಾರ್ಯವು ಪ್ರಗತಿಯಲ್ಲಿದೆ. ಈ ಕಾರ್ಯವು ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮೊದಲನೇ ಅಧಿವೇಶನದಿಂದ ಆರಂಭಗೊಂಡು ಇತ್ತೀಚಿನವರೆಗಿನ ಎಲ್ಲಾ ನಡವಳಿಗಳನ್ನು ಮೆಟಾಡೇಟಾ ಮೂಲಕ ದಾಖಲಿಸುವ ಯೋಜನೆಯಾಗಿರುತ್ತದೆ. ಮೆಟಾಡೇಟಾ ಕಾರ್ಯವು ಎಲ್ಲಾ ನಡವಳಿಗಳನ್ನು ಪರಿಶೀಲಿಸುವುದು, ಪ್ರತಿಯೊಬ್ಬ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯ, ಅದಕ್ಕೆ ಸಂಬಂಧಿಸಿದಂತೆ ಆಯಾ ಇಲಾಖಾ ಸಚಿವರು ನೀಡಿರುವ ಉತ್ತರ ಮತ್ತು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಇತ್ಯಾದಿ ವಿವರಗಳನ್ನು ಕ್ರೋಢೀಕರಿಸಿ ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯವನ್ನೊಳಗೊಂಡಿರುತ್ತದೆ. ಈ ಕಾರ್ಯವು ಪೂರ್ಣಗೊಂಡಲ್ಲಿ, ಸದನದಲ್ಲಿ ಪ್ರಸ್ತಾಪಿಸಿರುವ ವಿಷಯಗಳು, ಯಾವ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ, ಯಾವ ಸಚಿವರು ಉತ್ತರಿಸಿರುತ್ತಾರೆ, ಸಚಿವರು ನೀಡಿರುವ ಭರವಸೆ, ಕೈಗೊಂಡಿರುವ ತೀರ್ಮಾನ, ಈ ರೀತಿಯಾಗಿ ಎಲ್ಲಾ ಮಾಹಿತಿಗಳನ್ನು ಓಸಿಆರ್ ತಂತ್ರಾಂಶ ಬಳಸಿ ತಕ್ಷಣ ಪಡೆಯಬಹುದಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಒದಗಿಸುವ ಸೌಲಭ್ಯಗಳು ಸ್ಥೂಲವಾಗಿ ಈ ಕೆಳಗಿನ ವರ್ಗಗಳ ಅಡಿಯಲ್ಲಿ ಬರುತ್ತವೆ:

- ಪತ್ರಿಕಾ ತುಣುಕುಗಳಿಗೆ ಸಂಬಂಧಪಟ್ಟ ಮಾಹಿತಿಯ ಪೂರೈಕೆ ಹಾಗೂ ಪ್ರಕಟಿತ ದಸ್ತಾವೇಜುಗಳಿಂದ ಸದಸ್ಯರಿಗೆ ಸ್ಥಳದಲ್ಲೇ ಮಾಹಿತಿಯನ್ನು ಪೂರೈಸುವುದು;
- ಸದಸ್ಯರ ಲಿಖಿತ ಕೋರಿಕೆಗಳಿಗೆ ಇತ್ತೀಚಿನ ಮಾಹಿತಿ, ವಾಸ್ತವಿಕ ದತ್ತಾಂಶ, ಅಂಕಿ ಅಂಶಗಳು, ಇತ್ಯಾದಿಗಳ ಮಾಹಿತಿಗಳ ಪೂರೈಕೆ;
- ಪೀಠಾಸೀನಾಧಿಕಾರಿಗಳಿಗೆ ಪ್ರಮುಖ ವಿಷಯಗಳ ಬಗ್ಗೆ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸುವುದು;

- ಮಾನ್ಯ ಸಭಾಧ್ಯಕ್ಷರ ಭಾಷಣಗಳಿಗೆ ವಿವಿಧ ವಿಷಯಗಳ ಬಗ್ಗೆ ಭಾಷಣದ ಕರಡು/ ಮಾಹಿತಿ/ಟಿಪ್ಪಣಿ ಸಿದ್ಧಪಡಿಸುವುದು;
- ಕಾಲಕಾಲಕ್ಕೆ ವಿವಿಧ ಪ್ರಕಟಣೆಗಳ ಪರಿಷ್ಕರಣೆ ಮತ್ತು ಮುದ್ರಣ.

ಮಾನ್ಯ ಶಾಸಕರ ಪರಾಮರ್ಶೆಗಾಗಿ ಕೋರುವ ಮಾಹಿತಿಗಳ ವ್ಯಾಪ್ತಿಯು ಸಾಮಾನ್ಯವಾಗಿ ಶಾಸಕಾಂಗದ ಮುಂದಿರುವ ತಕ್ಷಣದ ಕಾರ್ಯಕಲಾಪಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸೀಮಿತವಾಗಿರುತ್ತದೆ. ಅಧಿವೇಶನದ ಅವಧಿಯಲ್ಲಿ ಸದಸ್ಯರು ವಿರೋಧ ಪಕ್ಷದ ಮೊಗಸಾಲೆಗೆ ಹೊಂದಿಕೊಂಡಿರುವ ವಾಚನಾಲಯದ ಸಿಬ್ಬಂದಿಗೆ ನಿರ್ದಿಷ್ಟ ಅಂಶಗಳನ್ನು ಸ್ಪಷ್ಟವಾಗಿ ಮತ್ತು ನಿಖರವಾಗಿ ಸೂಚಿಸಿ ಲಿಖಿತ ಮೂಲಕ ಕೋರಬಹುದು. ವಿಧಾನಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ 28 ರಲ್ಲಿನ ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯ ಸಿಬ್ಬಂದಿಗೆ ದೂರವಾಣಿ ಮೂಲಕ ಅಥವಾ ತಮ್ಮ ಅವಶ್ಯಕತೆಗಳನ್ನು ಲಿಖಿತ ಮೂಲಕ ತಲುಪಿಸಬಹುದಾಗಿರುತ್ತದೆ. ಮಾನ್ಯ ಸದಸ್ಯರು ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯಿಂದ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿನ ವಿಷಯಗಳ ಬಗೆಗಿನ ಮಾಹಿತಿಗಳನ್ನು ಸಂಗ್ರಹಣೆ ಹಾಗೂ ಮಾನವ ಸಂಪನ್ಮೂಲದ ಲಭ್ಯತೆಯ ಮಿತಿಗೆ ಒಳಪಟ್ಟು ಪಡೆಯಬಹುದಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಕಾಲಕಾಲಕ್ಕೆ ಹಲವಾರು ಪ್ರಮುಖ ಪ್ರಕಟಣೆಗಳು, ಮೊನೊಗ್ರಾಫ್‌ಗಳು, ಕಿರುಪುಸ್ತಕಗಳು, ಕೈಪಿಡಿಗಳು ಇತ್ಯಾದಿಗಳನ್ನು ಹೊರ ತಂದಿದೆ.

ಈ ಕೆಳಗಿನ ಪ್ರಕಾಶನಗಳನ್ನು ಸದಸ್ಯರ ಪರಾಮರ್ಶೆಗಾಗಿ/ಉಲ್ಲೇಖನಕ್ಕಾಗಿ ಪ್ರಕಟಿಸಿ ಮತ್ತು ಕಾಲಕಾಲಕ್ಕೆ ಪರಿಷ್ಕರಣೆ ಮಾಡಲಾಗುತ್ತಿದೆ:

1. **ಪುನರಾವಲೋಕನ ಪುಸ್ತಕ (Review):** ಪ್ರತಿ ವಿಧಾನಸಭಾ ಅವಧಿಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಚಟುವಟಿಕೆಗಳ ಸಂಪೂರ್ಣ ಮಾಹಿತಿಯನ್ನು ಒಳಗೊಂಡ ಪುನರಾವಲೋಕನ ಪುಸ್ತಕವನ್ನು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಪ್ರಕಟಿಸಲಾಗುವುದು. ಇದು ವಿಧಾನ ಪರಿಷತ್ತಿನ ಕಾರ್ಯನಿರ್ವಹಣೆಯ ವಿವಿಧ ಅಂಶಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಒಳಗೊಂಡಿರುವ ಒಂದು ಪುಸ್ತಕವಾಗಿದೆ. ಇದು ಪ್ರತಿ ವಿಧಾನ ಸಭೆಯ ಅವಧಿಯಲ್ಲಿ ಸದನದ ಕಾರ್ಯಚಟುವಟಿಕೆ ಮತ್ತು ವಿವಿಧ ಸಮಿತಿಗಳ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿರುತ್ತದೆ. ಪ್ರತಿ ವಿಧಾನ ಸಭೆಯ ಅವಧಿ ಪೂರ್ಣಗೊಂಡ ನಂತರ ಎರಡೂ ಸದನಗಳ ಪುನರಾವಲೋಕನವನ್ನು ಪ್ರತ್ಯೇಕವಾಗಿ

ಸಿದ್ಧಪಡಿಸಲಾಗುತ್ತದೆ. ಪ್ರಸ್ತುತ 2018ರವರೆಗೆ ವಿಧಾನ ಪರಿಷತ್ತಿನ **ಪುನರಾವಲೋಕನ ಪುಸ್ತಕಗಳು (Review)** ಸಿದ್ಧವಾಗಿರುತ್ತವೆ.

2. **ಕರ್ನಾಟಕ ಮಂತ್ರಿಮಂಡಲ: (Council of Ministers of Karnataka):** 1947 ರಿಂದ 2014 ರವರೆಗೆ ಕರ್ನಾಟಕ ಮಂತ್ರಿಮಂಡಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ ಮತ್ತು ಮುಂದಿನ ಅವಧಿಯ ಸಂಪುಟವು ಸಿದ್ಧಗೊಳ್ಳುತ್ತಿದೆ.

3. **ಕರ್ನಾಟಕ ಶಾಸಕಾಂಗ ಪತ್ರಿಕೆ: (Shasakanga Patrike):** "ಕರ್ನಾಟಕ ಶಾಸಕಾಂಗ ಪತ್ರಿಕೆ" ಎಂಬುದು ಸಂಸತ್ತು, ರಾಜ್ಯ ಶಾಸನ ಸಭೆಗಳು, ನ್ಯಾಯಾಂಗ ಇತ್ಯಾದಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ, ದಿನ ಪತ್ರಿಕೆಗಳಲ್ಲಿ ಪ್ರಕಟವಾದ ಪ್ರಮುಖ ಸುದ್ದಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲು ಹೊರತರಲಾದ ಒಂದು ತ್ರೈಮಾಸಿಕ ನಿಯತಕಾಲಿಕವಾಗಿದೆ. ಇದು ಸರ್ಕಾರದ ಮೂರು ಅಂಗಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಹಲವು ವಿಷಯಗಳ ಮಾಹಿತಿಯನ್ನೂ ಸಹ ಒಳಗೊಂಡಿದೆ. ಸದರಿ ನಿಯತಕಾಲಿಕದ ಪ್ರಕಟಣೆಯನ್ನು ದಿನಾಂಕ:24.01.2018ರ ಕರ್ನಾಟಕ ವಿಧಾನಸಭೆಯ ಅಧಿಕೃತ ಜ್ಞಾಪನ ಪತ್ರದ ಪ್ರಕಾರ ಸ್ಥಗಿತಗೊಳಿಸಲಾಗಿತ್ತು. ಆದರೆ, ತದನಂತರ ಮಾನ್ಯ ಸಭಾಧ್ಯಕ್ಷರ ಆದೇಶದಂತೆ ಈ ಶಾಸಕಾಂಗ ಪತ್ರಿಕೆ (ತ್ರೈಮಾಸಿಕ) ಪ್ರಕಟಣೆಯನ್ನು ಸೆಪ್ಟೆಂಬರ್ 2019 ರಿಂದ ಪುನರಾರಂಭಿಸಲಾಗಿದೆ (ಜುಲೈ, ಆಗಸ್ಟ್, ಸೆಪ್ಟೆಂಬರ್–2019 ಅವಧಿಯ ಸಂಪುಟ –1 ರಿಂದ).

4. **ಕರ್ನಾಟಕ ಕುರಿತ ಆಂಗ್ಲ ಕಿರುಹೊತ್ತಿಗೆ (Brochure on Karnataka):** ಕರ್ನಾಟಕ ಕುರಿತ ಆಂಗ್ಲ ಭಾಷೆಯಲ್ಲಿನ ಸದರಿ ಕಿರುಹೊತ್ತಿಗೆಯು, ಕರ್ನಾಟಕ ಭೌಗೋಳಿಕ ಮಾಹಿತಿ, ಇತಿಹಾಸ, ಕರ್ನಾಟಕ ವಿಧಾನಮಂಡಲ, ವಿಧಾನಸೌಧ ಕಟ್ಟಡ ನಿರ್ಮಾಣ, ಆಡಳಿತ, ಪ್ರವಾಸಿ ಸ್ಥಳಗಳು, ಬೆಂಗಳೂರಿನ ಮಾಹಿತಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯವ್ಯಕ್ತಿಗಳ ಮಾಹಿತಿ ಹಾಗೂ ಕರ್ನಾಟಕದ ಬಗೆಗಿನ ಒಳನೋಟಗಳನ್ನು ನೀಡುತ್ತದೆ. ಇದು ಕೊನೆಯ ಬಾರಿಗೆ 2015ರಲ್ಲಿ ಪ್ರಕಟಣೆಗೊಂಡಿದ್ದು, ಮುಂದಿನ ಅವಧಿಗೆ ಪ್ರಕಟಣೆಯು ಪ್ರಕ್ರಿಯೆಯಲ್ಲಿದೆ.

5. **ರಾಷ್ಟ್ರದ ಹಾಗೂ ರಾಜ್ಯದ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಗಣ್ಯ ವ್ಯಕ್ತಿಗಳ ಅಧಿಕಾರವಧಿಯ ಕೈಪಿಡಿ:** ಸಂಸತ್ತು/ಕರ್ನಾಟಕ ವಿಧಾನಮಂಡಲದ ಪೀಠಾಸೀನಾಧಿಕಾರಿಗಳು ಮತ್ತು ಉನ್ನತ ಹುದ್ದೆಗಳನ್ನು ಹೊಂದಿರುವ ಇತರ ಗಣ್ಯರ ಪದಾವಧಿಗಳಿಗೆ ಸಂಬಂಧಿಸಿದ ವಿವರಗಳನ್ನು ಕೈಪಿಡಿಯ ರೂಪದಲ್ಲಿ ಪ್ರಕಟಿಸಲಾಗುತ್ತದೆ. ಇದು ಕೊನೆಯ ಬಾರಿಗೆ 2015 ರಲ್ಲಿ ಪ್ರಕಟಣೆಗೊಂಡಿದ್ದು, ಮುಂದಿನ ಅವಧಿಗೆ ಪ್ರಕಟಣೆಯು ಪ್ರಕ್ರಿಯೆಯಲ್ಲಿದೆ.

6. **ಕರ್ನಾಟಕ ಮಾಹಿತಿ ಕೈಪಿಡಿ:** ಮುಖ್ಯವಾಗಿ ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಅಧಿವೇಶನ, ಉಪವೇಶನಗಳ ಕುರಿತ ವಿಧಾನ ಸಭಾವಾರು, ಅವಧಿ, ದಿನಾಂಕ, ವಿಶೇಷ ಅಧಿವೇಶನಗಳು, ರಾಷ್ಟ್ರಪತಿ ಆಡಳಿತ ಕುರಿತ ಮಾಹಿತಿಯನ್ನು ಒಳಗೊಂಡಂತೆ, ಕರ್ನಾಟಕದ ವೈಭವಯುತ ಇತಿಹಾಸ, ಪರಂಪರೆ,, ಸಂಸ್ಕೃತಿ, ವಾಸ್ತುಶಿಲ್ಪ, ಲಲಿತ ಕಲೆಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಕೃಷಿ, ಕೈಗಾರಿಕೆ, ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮದಲ್ಲಿ ರಾಜ್ಯವು ಸಾಧಿಸಿರುವ ಅದ್ಭುತ ಪ್ರಗತಿ ಇವುಗಳ ಬಗ್ಗೆ ಒಳನೋಟಗಳನ್ನು ನೀಡುತ್ತದೆ. ಸದರಿ ಕೈಪಿಡಿಯು ಕೊನೆಯದಾಗಿ 2012ರಲ್ಲಿ ಪ್ರಕಟವಾಗಿದ್ದು, ಮುಂದಿನ ಅವಧಿಗೆ ಪ್ರಕಟಣೆ ಪ್ರಕ್ರಿಯೆಯಲ್ಲಿದೆ.

7. **ಲೇಖನ ಸೂಚಿ:** ಲೇಖನ ಸೂಚಿ ಎಂಬುದು ವೃತ್ತಪತ್ರಿಕೆಗಳು/ನಿಯತಕಾಲಿಕೆಗಳಲ್ಲಿ ಪ್ರಕಟವಾದ ವಿವಿಧ ಲೇಖನಗಳ ಸೂಚ್ಯಂಕವನ್ನು ಒಳಗೊಂಡಿರುವ ಒಂದು ಪುಸ್ತಕವಾಗಿದ್ದು, ಇದನ್ನು ಪ್ರತಿ ತಿಂಗಳು ತಯಾರಿಸಲಾಗುತ್ತಿತ್ತು. 2017 ರಿಂದ ಕಾರ್ಯದರ್ಶಿಯವರ ಸೂಚನೆಯಂತೆ ಈ ಪುಸ್ತಕದ ಪ್ರಕಟಣೆಯನ್ನು ನಿಲ್ಲಿಸಲಾಗಿದೆ ಮತ್ತು ಅಗತ್ಯ ಮಾನವ ಸಂಪನ್ಮೂಲದ ಲಭ್ಯತೆಯ ಮೇಲೆ ಅದರ ಪ್ರಕಟಣೆಯನ್ನು ಮತ್ತೆ ಪ್ರಾರಂಭಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

   ವಿವಿಧ ವಿಷಯಗಳ ಲೇಖನಗಳನ್ನು ಕಾಲಕಾಲಕ್ಕೆ ವಿಷಯವಾರು ಕಡತಗಳಲ್ಲಿ ಸಂಗ್ರಹಿಸಿ ನಿರ್ವಹಿಸಲಾಗುತ್ತಿದೆ.

ಗೌರವಾನ್ವಿತ ಸದಸ್ಯರ ಬಳಕೆಗಾಗಿ ಈ ಕೆಳಗಿನ ಪ್ರಕಟಣೆಗಳನ್ನು ಹೊರತರಲಾಗಿದೆ:

Informative folders on the following subjects:

ಫೋಲ್ಡರ್ ನಂ. **FOLDER NO.**	ಫೋಲ್ಡರ್‌ನ ಹೆಸರು **NAME OF THE FOLDER**	ಸಂಬಂಧಿಸಿದ ಸಚಿವಾಲಯ **SECRETARIAT TO WHICH THE FOLDER RELATES**
1	ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ ಸದಸ್ಯರಿಗೆ ಸೌಲಭ್ಯಗಳು. Facilities to the Members of Karnataka Legislature	ಕವಿಸ/ಕವಿಪ K.L.A/K.L.C.
2	ಶಾಸಕರ ಭವನ Legislators' Home	ಕವಿಸ K.L.A
3	ನಿಲುವಳಿ ಸೂಚನೆ Adjournment Motion	ಕವಿಸ K.L.A
4	ಪ್ರಶ್ನೋತ್ತರ ಅವಧಿ Question Hour	ಕವಿಸ K.L.A
5	ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಬಗ್ಗೆ ಗಮನ ಸೆಳೆಯುವುದು Calling Attention to matters of Urgent Public Importance	ಕವಿಸ K.L.A
6	ಅಲ್ಪಾವಧಿಗೆ ತುರ್ತು ಸಾರ್ವಜನಿಕ ಪ್ರಾಮುಖ್ಯತೆಯ ವಿಷಯಗಳ ಬಗ್ಗೆ ಚರ್ಚೆ Discussion On Matters of Urgent Public Importance for short duration	ಕವಿಸ K.L.A

7	ಅಧಿಕಾರೇತರ ನಿರ್ಣಯಗಳು Non-Official Resolutions	ಕವಿಸ K.L.A
8	ಒಂದು ವಿಧೇಯಕವು ಹೇಗೆ ಅಧಿನಿಯಮವಾಗುತ್ತದೆ How a Bill becomes an Act	ಕವಿಸ K.L.A
9	ವಿಧಾನಸಭೆಯಲ್ಲಿ ವರದಿ ಮಾಡುವುದು Reporting in Legislative Assembly	ಕವಿಸ K.L.A
10	ಶಾಸನಸಭೆಯಲ್ಲಿ ಚರ್ಚೆಗಳ ಸಂಪಾದನೆ Editing of Debates in Legislative Assembly	ಕವಿಸ K.L.A
11	ಗ್ರಂಥಾಲಯ, ಉಲ್ಲೇಖನಾ ಮತ್ತು ಸಂಶೋಧನಾ ಸೇವೆ Library, Research and Reference service	ಕವಿಸ/ಕವಿಪ K.L.A/K.L.C.
12	ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ Committee on Public Accounts	ಕವಿಸ K.L.A
13	ಸಾರ್ವಜನಿಕ ಉದ್ದಿಮೆಗಳ ಸಮಿತಿ Committee on Public Undertakings	ಕವಿಸ K.L.A
14	ಅಂದಾಜುಗಳ ಸಮಿತಿ Committee on Estimates	ಕವಿಸ K.L.A
15	ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ Committee on the Welfare of Backward Classes and Minorities	ಕವಿಸ K.L.A
16	ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ Committee on the Welfare of Scheduled Castes and Scheduled Tribes	ಕವಿಸ K.L.A
17	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ Committee on the Welfare of Women and Children	ಕವಿಸ K.L.A
18	ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ Committee on Papers Laid on the Table	ಕವಿಸ K.L.A
19	ಅಧೀನ ಶಾಸನ ರಚನಾ ಸಮಿತಿ Committee on Sub-Ordinate Legislation	ಕವಿಸ K.L.A
20	ವಿಧಾನಸಭೆಯ ಅರ್ಜಿಗಳ ಸಮಿತಿ Committee on Petitions, Legislative Assembly	ಕವಿಸ K.L.A
21	ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿ Committee on Government Assurances, Legislative Assembly	ಕವಿಸ K.L.A
22	ವಿಧಾನಸಭೆಯ ಹಕ್ಕುಬಾಧ್ಯತೆಗಳ ಸಮಿತಿ Committee of Privileges, Legislative Assembly	ಕವಿಸ K.L.A
23	ವಿಧಾನಸಭೆಯ ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ Committee on Private Members' Bills and Resolutions, Legislative Assembly	ಕವಿಸ K.L.A
24	ಸದನ ಸಮಿತಿ ಮತ್ತು ಜಂಟಿ ಸದನ ಸಮಿತಿಗಳು Select and Joint Select Committees	ಕವಿಸ/ಕವಿಪ K.L.A/K.L.C.
25	**ಹಕ್ಕುಬಾಧ್ಯತೆಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು (ದಿನಾಂಕ 24.05.2018 ರಲ್ಲಿದ್ದಂತೆ)** **Committee of Privileges Legislative Council (updated as on 24.05.2018)**	**ಕವಿಪ** **K.L.C.**

26	ಅರ್ಜಿಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು (31.05.2018 ರಲ್ಲಿದ್ದಂತೆ) **Committee on Petitions, Legislative Council (as on 31.05.2018)**	ಕವಿಪ **K.L.C.**
27	ಸರ್ಕಾರಿ ಭರವಸೆಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು (06.06.2018 ರಲ್ಲಿದ್ದಂತೆ) **Committee on Government Assurances, Legislative Council (as on 06.06.2018)**	ಕವಿಪ **K.L.C.**
28	ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿ, ಕರ್ನಾಟಕ ವಿಧಾನ ಪರಿಷತ್ತು (02.06.2018 ರಲ್ಲಿದ್ದಂತೆ) **Committee on Private Members' Bills and Resolutions, Legislative Council (as on 02.06.2018)**	ಕವಿಪ **K.L.C.**
29	ಶಾಸಕರ ಭವನ–1 (ದಿನಾಂಕ 13.06.2018 ರಲ್ಲಿದ್ದಂತೆ) **Legislators' Home-1 (as on 13.06.2018)**	ಕವಿಪ **K.L.C.**
30	ಇಲಾಖಾ ಸಂಬಂಧಿತ ವಿಷಯ ಸಮಿತಿಗಳು Departmentally Related Subject Committees	ಕವಿಸ K.L.A
31	ಗಣಕ ಕೇಂದ್ರ Computer Centre	ಕವಿಸ K.L.A
32	ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ Committee on Local Bodies and Panchayat Raj Institutions	ಕವಿಸ K.L.A

* ದಿನಾಂಕ:24.01.2018ರ ಕರ್ನಾಟಕ ವಿಧಾನಸಭೆಯ ಅಧಿಕೃತ ಜ್ಞಾಪನಾ ಪತ್ರದ ಪ್ರಕಾರ, ವಿಧಾನ ಸಭೆಯ ಕಿರು ಹೊತ್ತಿಗೆಗಳನ್ನು ಆಯಾ ಶಾಖೆಗಳಿಂದ/ಸಮಿತಿ ಶಾಖೆಗಳಿಂದಲೇ ಮುದ್ರಣಗೊಳ್ಳುತ್ತಿವೆ. ವಿಧಾನ ಪರಿಷತ್ತಿಗೆ ಸಂಬಂಧಪಟ್ಟ ಕಿರುಹೊತ್ತಿಗೆಗಳನ್ನು ಮಾತ್ರ ಜೂನ್ 2018ರಲ್ಲಿ ಪರಿಷ್ಕರಿಸಿದಂತೆ, ಸಂಶೋಧನಾ ಮತ್ತು ಉಲ್ಲೇಖನ ಶಾಖೆಯಿಂದಲೇ ಪ್ರಕಟಿಸಲಾಗಿದೆ.

ವಿಧಾನಮಂಡಲದ ಮಾಜಿ ಸದಸ್ಯರಿಗೆ ಸೌಲಭ್ಯಗಳು

(4–4–2025ರಂದು ಇದ್ದಂತೆ)

ನಿವೃತ್ತಿ ವೇತನ:

ಒಬ್ಬ ವ್ಯಕ್ತಿಯು ವಿಧಾನ ಪರಿಷತ್ತು ಅಥವಾ ವಿಧಾನಸಭಾ ಸದಸ್ಯರಾಗಿ ಅಥವಾ ಭಾಗಶ: ವಿಧಾನಸಭಾ ಸದಸ್ಯ ಮತ್ತು ಭಾಗಶ: ವಿಧಾನ ಪರಿಷತ್ತಿನ ಸದಸ್ಯರಾಗಿ ಐದು ವರ್ಷಗಳ ಅವಧಿಗಾಗಿ ಸೇವೆಯನ್ನು ಸಲ್ಲಿಸಿದ್ದರೆ, ಅವರ ಉಳಿದ ಜೀವಿತಾವಧಿಗೆ ತಿಂಗಳಿಗೆ ರೂ.75,000/–(ಎಪ್ಪತ್ತೈದು ಸಾವಿರ ರೂಪಾಯಿ)ಗಳ ನಿವೃತ್ತಿ ವೇತನವನ್ನು ಸಂದಾಯ ಮಾಡಲಾಗುವುದು.

ಯೊವೊಬ್ಬ ವ್ಯಕ್ತಿಯು ಐದು ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವ ಸಂದರ್ಭದಲ್ಲಿ ಆತನಿಗೆ ತದನಂತರದ ಪ್ರತಿಯೊಂದು ಪೂರ್ಣಗೊಂಡ ಅವಧಿಗೆ ಪ್ರತಿ ತಿಂಗಳಿಗೆ ಇಪ್ಪತ್ತು ಸಾವಿರ ರೂಪಾಯಿಗಳ ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು ಅದು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

ಟಿಪ್ಪಣಿ:

1. ಮೊದಲ ಬಾರಿಗೆ ಆಯ್ಕೆಗೊಂಡ ಸದಸ್ಯರು ವಿಧಾನಸಭೆಯ ವಿಸರ್ಜನೆಯ ಕಾರಣದಿಂದಾಗಿ ಐದು ವರ್ಷಗಳವರೆಗೆ ಸೇವೆ ಸಲ್ಲಿಸಲು ಸಾಧ್ಯವಾಗದಿದ್ದಲ್ಲಿ, ಅವರು ಐದು ವರ್ಷಗಳವರೆಗೆ ಸೇವೆ ಸಲ್ಲಿಸಿದ ಸದಸ್ಯರೆಂದು ಭಾವಿಸತಕ್ಕದ್ದು.

2. ಹೆಚ್ಚುವರಿ ನಿವೃತ್ತಿ ವೇತನವನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಯನ್ನು ಪೂರ್ಣ ಅವಧಿ ಎಂದು ಪರಿಗಣಿಸತಕ್ಕದ್ದು.

ವೈದ್ಯಕೀಯ ಸೌಲಭ್ಯಗಳು:

ನಿವೃತ್ತಿ ವೇತನವನ್ನು ಸ್ವೀಕರಿಸುವ ಪ್ರತಿಯೊಬ್ಬ ಮಾಜಿ ಸದಸ್ಯರು ಸದರಿ ತಿಂಗಳ ಅವಧಿಯಲ್ಲಿನ ವೈದ್ಯಕೀಯ ವೆಚ್ಚ ಮರುಸಂದಾಯ ಕ್ಲೇಮುಗಳಾವುದಾದರೂ ಇದ್ದಲ್ಲಿ, ಅವುಗಳಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಪ್ರತಿ ತಿಂಗಳು ರೂ.20,000/–(ಇಪ್ಪತ್ತು ಸಾವಿರ ರೂಪಾಯಿ)ಗಳ ನಿಗದಿತ ವೈದ್ಯಕೀಯ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ರಾಜ್ಯ ಸರ್ಕಾರದ ಒಡೆತನದ ಯಾವುದೇ ಆಸ್ಪತ್ರೆ ಅಥವಾ ಔಷಧಾಲಯ ಅಥವಾ ಕರ್ನಾಟಕ ವಿಧಾನಮಂಡಲದಿಂದ ಅಧಿಸೂಚಿಸಲ್ಪಟ್ಟ ಯಾವುದೇ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ತಾನು ಮತ್ತು ತನ್ನ ಕುಟುಂಬದ ಸದಸ್ಯರು ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ವೆಚ್ಚಗಳನ್ನು ಮಾಡುವಂಥ ಯಾರೇ ಪಿಂಚಣಿದಾರರು ಅದರ ಮೇಲೆ ಮಾಡಿದ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವರಾಗಿರತಕ್ಕದ್ದು. ವೆಚ್ಚಗಳಲ್ಲಿ ಅಂಥ ಚಿಕಿತ್ಸೆಯನ್ನು ಪಡೆದುಕೊಂಡ ಸ್ಥಳದಲ್ಲಿ ವಸತಿಗಾಗಿ ಮಾಡಿದ ಖರ್ಚು–ವೆಚ್ಚಗಳೂ ಸೇರತಕ್ಕದ್ದು.

ಯಾರೇ ಸದಸ್ಯರು ರಾಜ್ಯದ ಸರ್ಕಾರಿ ಒಡೆತನದ ಆಸ್ಪತ್ರೆ ಅಥವಾ ಔಷಧಾಲಯವಾಗಿರದ ಮತ್ತು ಕರ್ನಾಟಕ ವಿಧಾನಮಂಡಲದಿಂದ ಅಧಿಸೂಚಿಸಲ್ಪಟ್ಟ ಆಸ್ಪತ್ರೆ ಅಥವಾ ಔಷಧಾಲಯವಾಗಿರದ ಸ್ಥಳದಲ್ಲಿ ತಾನು ಪಡೆದ ವೈದ್ಯೋಪಚಾರ ಹಾಗೂ ಚಿಕಿತ್ಸೆಗಾಗಿ ವೈದ್ಯಕೀಯ ವೆಚ್ಚಗಳನ್ನು ಭರಿಸಿದ ಸಂದರ್ಭದಲ್ಲಿ ಅವರು ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ಪಡೆದ ವೈದ್ಯೋಪಚಾರ ಅಥವಾ ಚಿಕಿತ್ಸೆಗಾಗಿ ಎಷ್ಟು ಪ್ರಮಾಣದ ವೈದ್ಯಕೀಯ ವೆಚ್ಚಗಳನ್ನು ಭರಿಸಿ ವೈದ್ಯಕೀಯ ವೆಚ್ಚಗಳ ಮರುಪಾವತಿ ಪಡೆಯುತ್ತಿದ್ದರೋ ಅಷ್ಟೇ ಪ್ರಮಾಣದ ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಹಕ್ಕುಳ್ಳವರಾಗಿರತಕ್ಕದ್ದು.

ಟಿಪ್ಪಣಿ:

1. ಪಿಂಚಣಿದಾರರು ತನ್ನ ಜೀವಿತಾವಧಿಯಲ್ಲಿ ಒಮ್ಮೆ ಶ್ರವಣ ಸಾಧನಕ್ಕೆ ಪ್ರತಿ ಕಿವಿಗೆ ರೂ.1,00,000/– ವರೆಗೆ, ದಂತಪಂಕ್ತಿಗಾಗಿ ರೂ.50,000/– ವರೆಗೆ ಹಾಗೂ ಕ್ಯಾಪ್‌ನೊಂದಿಗೆ ರೂಟ್ ಕೆನಾಲ್‌ಗಾಗಿ ರೂ.10,000/– ವರೆಗೆ ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಹಕ್ಕುಳ್ಳವರಾಗಿರುತ್ತಾರೆ.

2. 'ಕುಟುಂಬದ ಸದಸ್ಯ' ಎಂದರೆ ಗಂಡ ಅಥವಾ ಹೆಂಡತಿ, 25 ವರ್ಷ ವಯೋಮಾನದವರೆಗಿನ ಅವಲಂಬಿತ ಅವಿವಾಹಿತ ಮಗ, ಅವಲಂಬಿತ ಅವಿವಾಹಿತ ಮಗಳು, ಅಂಗವಿಕಲ ಮಕ್ಕಳೂ ಸೇರಿದಂತೆ ಮಾನಸಿಕ ಅಸ್ವಸ್ಥ ಮಕ್ಕಳು, ತಂದೆ ಹಾಗೂ ತಾಯಿ ಮತ್ತು ವಿಧಾನಮಂಡಲದ ಮಹಿಳಾ ಸದಸ್ಯರ ಸಂದರ್ಭದಲ್ಲಿ ಅವರ ಅತ್ತೆ/ಮಾವ ಎಂದರ್ಥ.

ಪ್ರಯಾಣಭತ್ಯೆ:

ಮಾಜಿ ಸದಸ್ಯನು ವಿಮಾನ ಅಥವಾ ರೈಲು ಮೂಲಕ ಒಂದು ಅಥವಾ ಹೆಚ್ಚು ಪ್ರಯಾಣಗಳಿಗಾಗಿ ಒಬ್ಬ ಅಥವಾ ಒಬ್ಬ ಸಹಚರರೊಡನೆ ಪ್ರಯಾಣಿಸುವ ಉದ್ದೇಶಕ್ಕಾಗಿ ಪ್ರತಿ ಹಣಕಾಸು ವರ್ಷದಲ್ಲಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ವರ್ಷಕ್ಕೆ ಎರಡು ಸಮಾನ ಕಂತುಗಳಲ್ಲಿ ಸಂದಾಯ ಮಾಡಬಹುದಾದಂತೆ ಎರಡು ಲಕ್ಷ ರೂಪಾಯಿಗಳನ್ನು ಪಡೆದುಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

ಬಸ್‌ಪಾಸ್ ಮತ್ತು ಗುರುತಿನ ಚೀಟಿ:

ಮಾಜಿ ಸದಸ್ಯರಿಗೆ ಮತ್ತು ಅವರ ಒಬ್ಬ ಸಹಚರರಿಗೆ ವರ್ಗಾವಣೆ ಮಾಡಲಾರದಂತಹ ಪಾಸನ್ನು ಒದಗಿಸಲಾಗುವುದು. ಅದರ ಮೂಲಕ ಸದಸ್ಯರು ಕರ್ನಾಟಕದಲ್ಲಿನ ಅವರ ಸಾಮಾನ್ಯ ವಾಸಸ್ಥಳದಿಂದ ಕರ್ನಾಟಕ ರಾಜ್ಯದಲ್ಲಿ ಮತ್ತು ಕರ್ನಾಟಕದ ಹೊರಗಿನ ಯಾವುದೇ ಸ್ಥಳಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಲ್ಲಿ ಯಾವುದೇ ಸಮಯದಲ್ಲಿ ಪ್ರಯಾಣ ಮಾಡುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

ಮೃತ ಸದಸ್ಯರ ಕುಟುಂಬಕ್ಕೆ ಸೌಲಭ್ಯಗಳು

(04–04–2025ರಂದು ಇದ್ದಂತೆ)

ಕುಟುಂಬ ನಿವೃತ್ತಿ ವೇತನ:

ಸದಸ್ಯರು ತಮ್ಮ ಅಧಿಕಾರಾವಧಿ ಮುಕ್ತಾಯಗೊಳ್ಳುವುದಕ್ಕಿಂತ ಮೊದಲೇ ಮೃತಪಟ್ಟಲ್ಲಿ ಅಥವಾ ನಿವೃತ್ತಿ ವೇತನಕ್ಕೆ ಅರ್ಹನಾದ ವ್ಯಕ್ತಿ ಮರಣ ಹೊಂದಿದ್ದಲ್ಲಿ, ಅವನ/ಅವಳ ಕುಟುಂಬದ ಸದಸ್ಯರು ಆ ಸದಸ್ಯರಿಗೆ ಅಂಗೀಕರಿಸಬಹುದಾದ ನಿವೃತ್ತಿ ವೇತನದಲ್ಲಿ ಶೇಕಡಾ ಐವತ್ತರಷ್ಟು ಕುಟುಂಬ ನಿವೃತ್ತಿ ವೇತನ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ವಿಧಾನ ಪರಿಷತ್ತು ಅಥವಾ ವಿಧಾನಸಭೆಯ ಸದಸ್ಯರಾಗಿದ್ದ ಮೃತ ವ್ಯಕ್ತಿಯ ಕುಟುಂಬವು, ಸದಸ್ಯರು ನಿವೃತ್ತಿ ವೇತನ ಪಡೆಯುತ್ತಿರಲಿ ಅಥವಾ ಇಲ್ಲದಿರಲಿ, ಆ ಸದಸ್ಯರಿಗೆ ಅಂಗೀಕರಿಸಬಹುದಾದ ನಿವೃತ್ತಿ ವೇತನದಲ್ಲಿ ಶೇಕಡಾ ಐವತ್ತರಷ್ಟು ಕುಟುಂಬ ನಿವೃತ್ತಿ ವೇತನ ಪಡೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.

ವೈದ್ಯಕೀಯ ಭತ್ಯೆ:

ಕುಟುಂಬ ನಿವೃತ್ತಿ ವೇತನ ಪಡೆಯುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಪ್ರತಿ ತಿಂಗಳು ರೂ.10,000/–(ಹತ್ತು ಸಾವಿರ ರೂಪಾಯಿ)ಗಳ ನಿಗದಿತ ವೈದ್ಯಕೀಯ ಭತ್ಯೆಯನ್ನು ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

ಭಾಗ–III

1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 2

(1957ರ ಜನವರಿ ಇಪ್ಪತ್ತನಾಲ್ಕನೇ ದಿನದಂದು 1[ಕರ್ನಾಟಕ ರಾಜ್ಯಪತ್ರ]1 ದಲ್ಲಿ ಮೊದಲು ಪ್ರಕಟಿಸಲಾಯಿತು)

[1][ಕರ್ನಾಟಕ ವಿಧಾನ ಮಂಡಲ][1]ದ ಸಂಬಳಗಳು, [2][ನಿವೃತ್ತಿ ವೇತನಗಳು ಮತ್ತು ಭತ್ಯೆಗಳ][2] ಅಧಿನಿಯಮ, 1956

(1957ರ ಜನವರಿ ಹದಿನೈದನೇ ದಿನದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)

(1957ರ 17, 1957ರ 27, 1959ರ 12, 1960ರ 10, 1967ರ 8, 1968ರ 18, 1969ರ 15, 1974ರ 19, 1975ರ 3, 1976ರ 13, 1976ರ 49, 1976ರ 72, 1978ರ 31, 1979ರ 5, 1979ರ 31, 1981ರ 26, 1982ರ 21, 1984ರ 22, 1985ರ 14, 1985ರ 24, 1985ರ 38, 1987ರ 16, 1988ರ 9, 1991ರ 5, 1992ರ 16, 1994ರ 5, 1995ರ 11, 1997ರ 4, 1997ರ 19, 1998ರ 30, 2001ರ 14, 2004ರ 1, 2005ರ 24, 2009ರ 16, 2009ರ 27, 2011ರ 6, 2011ರ 32, 2012ರ 22, 2013ರ 7, 2013ರ 8, 2014ರ 8, 2015ರ 18, 2016ರ 2, 2020ರ 24, 2022ರ 10 ಮತ್ತು 2025 ರ20 - ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ).

ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ, [3][ವಿರೋಧ ಪಕ್ಷದ ನಾಯಕರು, ಸರ್ಕಾರದ ಮುಖ್ಯ ಸಚೇತಕ][3] ಮತ್ತು ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಸಂಬಂಧದಲ್ಲಿ ಉಪಬಂಧ ಕಲ್ಪಿಸಲು ಅಧಿನಿಯಮ.

ಸಭಾಪತಿ ಮತ್ತು ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ, [4][ವಿರೋಧ ಪಕ್ಷದ ನಾಯಕ, [5][ಸರ್ಕಾರದ ಮುಖ್ಯ ಸಚೇತಕ][4] ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][5] ಮತ್ತು [1][ಕರ್ನಾಟಕ ರಾಜ್ಯ][1]ದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ [3][ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು][3] ಹಾಗೂ ಇತರ ಕೆಲವು ವಿಷಯಗಳ ಸಂಬಂಧದಲ್ಲಿ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1979ರ ಅಧಿನಿಯಮ ಸಂಖ್ಯೆ 5ರ ಮೂಲಕ 27.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ
5. 2009ರ ಅಧಿನಿಯಮ ಸಂಖ್ಯೆ 16ರ ಮೂಲಕ ದಿನಾಂಕ 1.1.2009ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸಲಾಗಿದೆ.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು [1][ಕರ್ನಾಟಕ ವಿಧಾನ ಮಂಡಲ][1]ದ ಸಂಬಳಗಳು, [2][ನಿವೃತ್ತಿ ವೇತನಗಳು ಮತ್ತು ಭತ್ಯೆಗಳ][2] ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು 1956ರ ನವೆಂಬರ್ ಮೊದಲನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1979ರ ಅಧಿನಿಯಮ ಸಂಖ್ಯೆ 5ರ ಮೂಲಕ 27.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) `**ಸಭಾಪತಿ**' ಎಂದರೆ ವಿಧಾನ ಪರಿಷತ್ತಿನ ಸಭಾಪತಿ[1][* * * * *][1]

1. 1968ರ ಅಧಿನಿಯಮ ಸಂಖ್ಯೆ 18ರ ಮೂಲಕ 24ನೇ ಅಕ್ಟೋಬರ್ 1968 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಬಿ) `**ಉಪ-ಸಭಾಪತಿ**' ಎಂದರೆ ವಿಧಾನ ಪರಿಷತ್ತಿನ ಉಪ-ಸಭಾಪತಿ;

[1][(ಬಿಬಿ) `**ಸರ್ಕಾರದ ಮುಖ್ಯ ಸಚೇತಕ**' ಎಂದರೆ, ವಿಧಾನಸಭೆ, ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಮುಖ್ಯ ಸಚೇತಕನೆಂದು ಮುಖ್ಯಮಂತ್ರಿಗಳು ನಾಮನಿರ್ದೇಶನ ಮಾಡಿದ ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ;][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

(ಸಿ) ರೈಲು ಪ್ರಯಾಣಗಳಿಗೆ ಸಂಬಂಧಿಸಿದಂತೆ `ಅತ್ಯುನ್ನತ ದರ್ಜೆ' ಎಂಬುದು ರೈಲಿನಲ್ಲಿ ಲಭ್ಯವಿರುವ ಹವಾನಿಯಂತ್ರಿತ ಸ್ಥಳಾವಕಾಶವನ್ನು ಒಳಗೊಳ್ಳುತ್ತದೆ;

[1][(ಸಿಸಿ) `**ವಿರೋಧ ಪಕ್ಷದ ನಾಯಕ**' ಎಂದರೆ, ಸಂದರ್ಭಾನುಸಾರ ಸಭಾಧ್ಯಕ್ಷ ಅಥವಾ ಸಭಾಪತಿ, ವಿರೋಧ ಪಕ್ಷದ ನಾಯಕ ಎಂದು ತತ್ಕಾಲದಲ್ಲಿ ಮನ್ನಣೆ ನೀಡಿದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ;][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

[1][(ಸಿಸಿಸಿ) `**ವಿರೋಧ ಪಕ್ಷದ ಮುಖ್ಯ ಸಚೇತಕ**' ಎಂದರೆ, ಸಂದರ್ಭಾನುಸಾರ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕನೆಂದು ಗೊತ್ತುಮಾಡಲಾದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ ;][1]

1. 2009ರ ಅಧಿನಿಯಮ ಸಂಖ್ಯೆ 16ರ ಮೂಲಕ ದಿನಾಂಕ 1.1.2009ರಂದು ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸಲಾಗಿದೆ

(ಡಿ) `**ನಿಯಮಿಸಲಾದುದು**' ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

[1][(ಡಿಡಿ) `**ಗುರುತಿಸಲಾದ ಗುಂಪು**' ಎಂದರೆ,-

(i) ಕರ್ನಾಟಕ ವಿಧಾನ ಪರಿಷತ್ತಿನ ಸಂದರ್ಭದಲ್ಲಿ, ವಿಧಾನ ಪರಿಷತ್ತಿನಲ್ಲಿ ಕೋರಂ ಬಲ ಸದಸ್ಯರು ಎಂದರೆ 10 ಸದಸ್ಯರಿಗಿಂತ ಕಡಿಮೆಯಲ್ಲದ ಬಲ ಹೊಂದಿರುವ ಯಾವುದೇ ಪಕ್ಷ;

(ii) ಕರ್ನಾಟಕ ವಿಧಾನ ಸಭೆಯ ಸಂದರ್ಭದಲ್ಲಿ ವಿಧಾನ ಸಭೆಯಲ್ಲಿ ಕೋರಂ ಬಲ ಸದಸ್ಯರು ಎಂದರೆ 23 ಸದಸ್ಯರಿಗಿಂತ ಕಡಿಮೆಯಲ್ಲದ ಬಲ ಹೊಂದಿರುವ ಯಾವುದೇ ಪಕ್ಷ;

(ಇ) `**ವಾಸದ ಮನೆ'ಯ** ಸಿಬ್ಬಂದಿ ವಸತಿಗಳು ಮತ್ತು ಅದಕ್ಕೆ ಲಗತ್ತಾದ ಕಟ್ಟಡಗಳು ಮತ್ತು ತೋಟಗಳನ್ನು ಒಳಗೊಳ್ಳುತ್ತದೆ;

(ಎಫ್) `**ಸಭಾಧ್ಯಕ್ಷ**' ಎಂದರೆ ವಿಧಾನ ಸಭೆಯ ಸಭಾಧ್ಯಕ್ಷ [1][xxx][1];

1. 1968ರ ಅಧಿನಿಯಮ ಸಂಖ್ಯೆ 18ರ ಮೂಲಕ 24ನೇ ಅಕ್ಟೋಬರ್ 1968 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ಜಿ) `**ಉಪ-ಸಭಾಧ್ಯಕ್ಷ**' ಎಂದರೆ ವಿಧಾನ ಸಭೆಯ ಉಪ-ಸಭಾಧ್ಯಕ್ಷ.

3. ಸಭಾಪತಿ ಮತ್ತು ಸಭಾಧ್ಯಕ್ಷರ ಸಂಬಳಗಳು ಮತ್ತು ಆತಿಥ್ಯ ಭತ್ಯೆಗಳು.- (1) ಸಭಾಪತಿಗೆ ಒಂದು ತಿಂಗಳಿಗೆ [6][[5][[4][3][[1][ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳ][1]][3]][4]][5]][6] ಸಂಬಳ ಮತ್ತು ಒಂದು ವರ್ಷಕ್ಕೆ [6][[5][[4][2][1][ಐದು ಲಕ್ಷ ರೂಪಾಯಿಗಳ][1]][2]][4]][5]][6] ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಭಾಧ್ಯಕ್ಷರಿಗೆ ಒಂದು ತಿಂಗಳಿಗೆ [7][6][[5][[4][ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳ][4]][5]][6]][7] ಸಂಬಳ ಮತ್ತು ಒಂದು ವರ್ಷಕ್ಕೆ [7][6][[5][[3][[1][ಐದು ಲಕ್ಷ ರೂಪಾಯಿಗಳ][1]][3]][5]][6]][7] ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 2001ರ ಅಧಿನಿಯಮ 14ರ ಮೂಲಕ 1.12.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.
3. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3ಎ. ಸಂಬಳ ಮತ್ತು ಭತ್ಯೆಗಳನ್ನು ಕಡಿಮೆಗೊಳಿಸುವುದು.- ಕರ್ನಾಟಕ ವಿಧಾನ ಮಂಡಲದ ಸಂಬಳಗಳು, ನಿವೃತ್ತಿವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರಲ್ಲಿ(1957ರ ಕರ್ನಾಟಕ ಅಧಿನಿಯಮ 2) ಏನೇ ಒಳಗೊಂಡಿದ್ದರೂ, ಸಭಾಪತಿ, ಉಪಸಭಾಪತಿ, ಸಭಾಧ್ಯಕ್ಷ, ಉಪಸಭಾಧ್ಯಕ್ಷ, ವಿರೋಧಪಕ್ಷದ ನಾಯಕ, ಸರ್ಕಾರದ ಮುಖ್ಯ ಸಚೇತಕ, ವಿರೋಧಪಕ್ಷದ ಮುಖ್ಯ ಸಚೇತಕ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಪಾವತಿಸಬೇಕಾದ ಸಂಬಳಗಳು ಮತ್ತು ಭತ್ಯೆಗಳನ್ನು, ಕೊರೊನಾ ರೋಗಾಣು (ಕೋವಿಡ್-19) ಸಾಂಕ್ರಾಮಿಕ ರೋಗದಿಂದ ಉಂಟಾಗುವ ಅಗತ್ಯಗಳನ್ನು ಪೂರೈಸುವ ಸಲುವಾಗಿ 2020ರ ಏಪ್ರಿಲ್ 1ನೇ ದಿನದಿಂದ ಪ್ರಾರಂಭವಾಗಿ ಒಂದು ವರ್ಷದ ಅವಧಿಗಾಗಿ ಶೇಕಡಾ ಮೂವತ್ತರಷ್ಟನ್ನು ಕಡಿಮೆಗೊಳಿಸತಕ್ಕದ್ದು.

1. 2020ರ ಅಧಿನಿಯಮ ಸಂಖ್ಯೆ 24ರ ಮೂಲಕ 1.4.2020 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

4. [6][ಸಭಾಪತಿ ಮತ್ತು ಸಭಾಧ್ಯಕ್ಷರ][6] ವಾಸದ ಮನೆಗಳು.- (1) [6][ಸಭಾಪತಿ, ಸಭಾಧ್ಯಕ್ಷರು, ಉಪಸಭಾಪತಿ, ಉಪಸಭಾಧ್ಯಕ್ಷರು, ಪ್ರತಿಪಕ್ಷದ ನಾಯಕರು, [7][ಸರ್ಕಾರದ ಮುಖ್ಯ ಸಚೇತಕರು ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][6]][7] ಪ್ರತಿಯೊಬ್ಬರು ತಮ್ಮ ಅಧಿಕಾರದ ಅವಧಿ ಪೂರ್ತಿ ಮತ್ತು ಅದರ ನಿಕಟ ತರುವಾಯದ [3][ಅರವತ್ತು ದಿವಸಗಳ][3] ಅವಧಿಯ ಕಾಲ ಬೆಂಗಳೂರು ನಗರ [2][ಅಥವಾ ಬೆಂಗಳೂರು ನಗರದ ಪರಿಮಿತಿಗಳಿಂದ ಮೂವತ್ತು ಕಿಲೋಮೀಟರ್ ಒಳಗೆ][2] ಒಂದು ಸುಸಜ್ಜಿತ ಮನೆಯನ್ನು ಬಾಡಿಗೆ ಸಂದಾಯ ಮಾಡದೆ ಬಳಸಲು ಹಕ್ಕುಳ್ಳವರಾಗಿರತಕ್ಕದ್ದು. [1][xxx][1] ಅಥವಾ ಅಂಥ ಸುಸಜ್ಜಿತ ಮನೆಗೆ ಬದಲಾಗಿ ತಿಂಗಳಿಗೆ [11][[10][[9][[8][[4][ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳ][4]][8]][9]][10]][11] ದರದಲ್ಲಿ ಮನೆ ಬಾಡಿಗೆ ಭತ್ಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು. [5][ಈ ಉಪ-ಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆಯನ್ನು ನಿಯಮಿಸಲಾದಂಥ ಶ್ರೇಣಿಗಳಲ್ಲಿ ಸುಸಜ್ಜಿತಗೊಳಿಸತಕ್ಕದ್ದು ಮತ್ತು ಅದರ ಪ್ಲಿಂತ್ ವಿಸ್ತೀರ್ಣವು ನಿಯಮಿಸಲಾದಂಥ ಮಿತಿಗಳನ್ನು ಮೀರತಕ್ಕದ್ದಲ್ಲ.][5]

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 23ನೇ ಮಾರ್ಚ್ 1972 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1994ರ ಅಧಿನಿಯಮ ಸಂಖ್ಯೆ 5ರ ಮೂಲಕ 1ನೇ ಸೆಪ್ಟೆಂಬರ್ 1993 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 23ನೇ ಮಾರ್ಚ್ 1972 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 1979ರ ಅಧಿನಿಯಮ ಸಂಖ್ಯೆ 5ರ ಮೂಲಕ 27ನೇ ಡಿಸೆಂಬರ್ 1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2009ರ ಅಧಿನಿಯಮ 16ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.
8. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
9. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
10. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
11. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಮನೆ ಬಾಡಿಗೆ ಭತ್ಯೆಗೆ ಹಕ್ಕುಳ್ಳವರಾದ ಸಭಾಪತಿ ಅಥವಾ ಸಭಾಧ್ಯಕ್ಷರು, ನಿವಾಸದ ನಿರ್ವಹಣೆ ಹಾಗೂ ಅದನ್ನು ಉತ್ತಮವಾಗಿ ಇಟ್ಟುಕೊಳ್ಳಲು ಮತ್ತು ಆ ಮನೆಗೆ ಸೇರಿದ ತೋಟದ ರೂಪುರೇಷೆ ಹಾಗೂ ನಿರ್ವಹಣೆಗಾಗಿ ತಿಂಗಳಿಗೆ [2][ಇಪ್ಪತ್ತೈದು ಸಾವಿರ ರೂಪಾಯಿಗಳ][2] ಭತ್ಯೆಗೆ ಅವರು ಹಕ್ಕುಳ್ಳವರಾಗಿರತಕ್ಕದ್ದು.][1]

1. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

5. ಸಭಾಪತಿ ಮತ್ತು ಸಭಾಧ್ಯಕ್ಷರ ವಾಹನ ಸೌಲಭ್ಯ.- (1) ರಾಜ್ಯ ಸರ್ಕಾರವು ಸಭಾಪತಿ ಮತ್ತು ಸಭಾಧ್ಯಕ್ಷರುಗಳಿಗೆ ಸಂಬಂಧಿಸಿದಂತೆ, ಪ್ರತಿಯೊಬ್ಬರಿಗೂ ಅವರ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸಬಹುದು.

(2) ಸಭಾಪತಿ ಮತ್ತು ಸಭಾಧ್ಯಕ್ಷರಿಗೆ ಸರ್ಕಾರವು ಪ್ರತಿ ತಿಂಗಳು [5][[4][[3][[2][[1][ಎರಡು ಸಾವಿರ ಲೀಟರ್][2]][3]][4]][5] ಪೆಟ್ರೋಲ್ ದರಗಳ ವೆಚ್ಚಕ್ಕೆ ಸಮನಾದ][1] ವಾಹನ ಭತ್ಯೆಯನ್ನು ಪ್ರತಿಯೊಬ್ಬರಿಗೂ ಸಂದಾಯ ಮಾಡತಕ್ಕದ್ದು.

1. 1991ರ ಅಧಿನಿಯಮ ಸಂಖ್ಯೆ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1994ರ ಅಧಿನಿಯಮ ಸಂಖ್ಯೆ 5ರ ಮೂಲಕ 1.9.1993 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

6. ಸಭಾಪತಿ ಮತ್ತು ಸಭಾಧ್ಯಕ್ಷರು ಹಾಗೂ ಸರ್ಕಾರ ಸಂದಾಯ ಮಾಡಬೇಕಾದ ವೆಚ್ಚಗಳು:- (1) ಸಭಾಪತಿ ಮತ್ತು ಸಭಾಧ್ಯಕ್ಷರು 4ನೇ ಪ್ರಕರಣದ (1)ನೇ ಉಪಪ್ರಕರಣದ ಮತ್ತು 5ನೇ ಪ್ರಕರಣದ ಮೇರೆಗೆ ಅವರ ಬಳಕೆಗಾಗಿ ಹಂಚಿಕೆ ಮಾಡಲಾದ ವಾಸದ ಮನೆ ಮತ್ತು ಮೋಟಾರು ಕಾರುಗಳ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:-

[1][(ಎ) ಸರ್ಕಾರವು ಸಂದಾಯ ಮಾಡಿದ [5][[4][[3][[2][ಎರಡು ಸಾವಿರ][3]][4]][5] ಲೀಟರ್ ಪೆಟ್ರೋಲ್][2] ವೆಚ್ಚಕ್ಕಿಂತ ಹೆಚ್ಚಾಗಿ ತಮ್ಮ ಮೋಟಾರು ಕಾರುಗಳಿಗೆ ಬಳಸಿದ ಪೆಟ್ರೋಲ್ ವೆಚ್ಚ; ಮತ್ತು][1]

1. 1991ರ ಅಧಿನಿಯಮ ಸಂಖ್ಯೆ 5ರ ಮೂಲಕ 1ನೇ ನವೆಂಬರ್ 1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ ಸಂಖ್ಯೆ 5ರ ಮೂಲಕ 1ನೇ ಸೆಪ್ಟೆಂಬರ್ 1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆಗಾಗಿ ಅವೆರಡರ ಒಟ್ಟು ಮಾಸಿಕ ದರದ ಮೊದಲ ಇನ್ನೂರು ರೂಪಾಯಿಗಳು.][1]

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 23ನೇ ಮಾರ್ಚ್ 1972 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆ ಮತ್ತು 5ನೇ ಪ್ರಕರಣದ ಮೇರೆಗೆ ಒದಗಿಸಿದ ಮೋಟಾರು ಕಾರು ಇವುಗಳ ದುರಸ್ತಿ ಖರ್ಚು ಸೇರಿದಂತೆ ಅವುಗಳ ನಿರ್ವಹಣೆ ಹಾಗೂ ಸುಸ್ಥಿತಿಗಾಗಿನ ಎಲ್ಲಾ ಇತರ ವೆಚ್ಚಗಳು, ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್‌ಗಳ ಸಂಬಳಗಳು ಮತ್ತು ಭತ್ಯೆಗಳು ಮತ್ತು ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗಳಿಗೆ ಸೇರಿದ ತೋಟಗಳ ರೂಪರೇಷೆ ಮತ್ತು ಅದರ ನಿರ್ವಹಣೆಗಾಗಿನ ಎಲ್ಲಾ ವೆಚ್ಚಗಳು, -ಇವುಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

7. ಸಭಾಪತಿ ಮತ್ತು ಸಭಾಧ್ಯಕ್ಷರು ಅಧಿಕಾರ ವಹಿಸಿಕೊಂಡ ಮೇಲೆ ಅಥವಾ ಅಧಿಕಾರ ತ್ಯಜಿಸಿದ ಮೇಲೆ ಪಡೆಯುವ ಪ್ರಯಾಣ ಭತ್ಯೆಗಳು.- ಸಭಾಪತಿ ಮತ್ತು ಸಭಾಧ್ಯಕ್ಷರು,-

(ಎ) ರಾಜ್ಯದಲ್ಲಿನ ತಮ್ಮ ಸಾಮಾನ್ಯ ವಾಸಸ್ಥಳದಿಂದ, ಅದು ಸದರಿ ನಗರದ ಹೊರಗಡೆ ಇದ್ದರೆ, ಬೆಂಗಳೂರು ನಗರದಲ್ಲಿ ಅಧಿಕಾರ ವಹಿಸಿಕೊಳ್ಳುವ ಸಂಬಂಧದಲ್ಲಿನ ಪ್ರಯಾಣಕ್ಕಾಗಿ; ಮತ್ತು

(ಬಿ) ಅವರು ಅಧಿಕಾರವನ್ನು ವಹಿಸಿಕೊಳ್ಳುವ ಮೊದಲು ರಾಜ್ಯದಲ್ಲಿನ ಅವರ ಸಾಮಾನ್ಯ ವಾಸಸ್ಥಳಕ್ಕೆ ಅಂಥ ಸ್ಥಳವು ಸದರಿ ನಗರದ ಹೊರಗಡೆ ಇದ್ದರೆ ಬೆಂಗಳೂರು ನಗರದಲ್ಲಿ ಅಧಿಕಾರ ತ್ಯಜಿಸಿದ ಸಂಬಂಧದ ಪ್ರಯಾಣಕ್ಕಾಗಿ ತಮಗೆ ಮತ್ತು ತಮ್ಮ ಕುಟುಂಬದ ಸದಸ್ಯರುಗಳ ಹಾಗೂ ವೈಯಕ್ತಿಕ ಸಾಮಾನುಗಳನ್ನು ಸಾಗಿಸುವುದಕ್ಕೆ ಈ ಮುಂದೆ ನಿರ್ದಿಷ್ಟಪಡಿಸಿದ ದರಗಳಲ್ಲಿ ಪ್ರಯಾಣ ಭತ್ಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು, ಎಂದರೆ,-

(i) ಪ್ರಯಾಣವನ್ನು ರೈಲಿನಲ್ಲಿ ಮಾಡಿರಲಿ ಅಥವಾ ರಸ್ತೆಯ ಮೂಲಕ ಮಾಡಿರಲಿ ಅಥವಾ ಅವೆರಡರ ಮೂಲಕ ಮಾಡಿರಲಿ, ಸಭಾಪತಿ ಮತ್ತು ಸಭಾಧ್ಯಕ್ಷರು ತಮಗಾಗಿ ಮತ್ತು ತಮ್ಮ ಕುಟುಂಬದ ಸದಸ್ಯರಿಗಾಗಿ ಮಾಡಿದ ವಾಸ್ತವಿಕ ವೆಚ್ಚಗಳು;

(ii) ರಸ್ತೆ ಮೂಲಕವಾಗಿರಲಿ ಅಥವಾ ರೈಲು ಮೂಲಕವೇ ಆಗಿರಲಿ ವೈಯಕ್ತಿಕ ಸಾಮಾನುಗಳ ಸಾಗಾಣಿಕೆಗಾಗಿ ಮಾಡಿದ ವಾಸ್ತವಿಕ ವೆಚ್ಚಗಳು; ಪರಂತು, ಅಂಥ ಸಾಗಾಣಿಕೆಗಾಗಿ ರೈಲು ವ್ಯಾಗನನ್ನು ಮೀಸಲಿರಿಸಿದ್ದರೆ, ಅಂಥ ವ್ಯಾಗನ್ನಿಗಾಗಿ ವಹಿಸಿದ ವೆಚ್ಚಗಳು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ ``ಕುಟುಂಬದ ಸದಸ್ಯರು'' ಎಂದರೆ, ಸಂದರ್ಭಾನುಸಾರ ಸಭಾಪತಿ ಅಥವಾ ಸಭಾಧ್ಯಕ್ಷರನ್ನು ಪೂರ್ಣವಾಗಿ ಅವಲಂಬಿಸಿರುವ ಮತ್ತು ಅವರೊಡನೆ ವಾಸಿಸುತ್ತಿರುವ ಗಂಡ, ಹೆಂಡತಿ, ಮಗ, ಮಗಳು, ತಂದೆ ತಾಯಿ, ಸಹೋದರ ಅಥವಾ ಸಹೋದರಿ.

8. ಪ್ರವಾಸದ ಮೇಲಿರುವಾಗ ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, [1][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [2][ಸರ್ಕಾರಿ ಮುಖ್ಯ ಸಚೇತಕರು ಮತ್ತು]][1] ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು][2] ಇವರುಗಳ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು.- (1) ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ಸಭಾಪತಿ ಮತ್ತು [1][ಉಪ-ಸಭಾಪತಿ, ವಿರೋಧ ಪಕ್ಷದ ನಾಯಕರು [2][ಸರ್ಕಾರಿ ಮುಖ್ಯ ಸಚೇತಕರು ಮತ್ತು]][1] ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು][2]ಇವರುಗಳು ತಮ್ಮ ಅಧಿಕಾರ ಸ್ಥಾನಗಳಿಗೆ ಸಂಬಂಧಿಸಿದ ಕರ್ತವ್ಯಗಳ ಮೇಲೆ ಪ್ರವಾಸ ಮಾಡುವಾಗ, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳು ಮತ್ತು ಷರತ್ತುಗಳ ಅನುಸಾರ ಪ್ರಯಾಣ ಮತ್ತು ದೈನಂದಿನ ಭತ್ಯೆ ಅಥವಾ ಇತರ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ ಸಂಖ್ಯೆ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

(2) [1][ಭಾರತದ ಒಳಗೆ ಪ್ರವಾಸ ಮಾಡುವಾಗ,][1] ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು [2][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು, [3][ಸರ್ಕಾರಿ ಮುಖ್ಯ ಸಚೇತಕರು][2] ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು][3] ಇವರು,-

1. 1959ರ ಅಧಿನಿಯಮ 12ರ ಮೂಲಕ 1.4.1959 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ ಸಂಖ್ಯೆ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

(ಎ) ರೈಲಿನ ಮೂಲಕ ಮಾಡಲಾದ ಪ್ರಯಾಣಗಳಿಗಾಗಿ ಆ ರೈಲಿನಲ್ಲಿ ಲಭ್ಯವಿರುವ ಉತ್ತಮ ದರ್ಜೆಯ ಒಂದು ಪ್ರಯಾಣ ದರದ [1][ಎರಡರಷ್ಟಕ್ಕೆ][1] ಹಕ್ಕುಳ್ಳವರಾಗಿರತಕ್ಕದ್ದು:

1. 1974ರ ಅಧಿನಿಯಮ 19ರ ಮೂಲಕ 25.05.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, [1][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ [2][ಉಪ-ಸಭಾಧ್ಯಕ್ಷ][1], ವಿರೋಧ ಪಕ್ಷದ ನಾಯಕರು, [3][ಸರ್ಕಾರಿ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು][2]][3]ಇವರು ತಮ್ಮ ಪ್ರಯಾಣಕ್ಕೆ ಒಂದು ಬೋಗಿಯನ್ನು ಮೀಸಲಿರಿಸಿಕೊಂಡಿದ್ದರೆ ಅಂಥ ಬೋಗಿಯ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

1. 1974ರ ಅಧಿನಿಯಮ 19ರ ಮೂಲಕ 25.05.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ ಸಂಖ್ಯೆ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

ಮತ್ತೂ ಪರಂತು, [1][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ [2][ಉಪ-ಸಭಾಧ್ಯಕ್ಷ][1], ವಿರೋಧ ಪಕ್ಷದ ನಾಯಕರು, [3][ಸರ್ಕಾರಿ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರು][2]][3] ಇವರ ಜೊತೆಯಲ್ಲಿ ಯಾರೇ ವ್ಯಕ್ತಿ ಮೀಸಲಿರಿಸಿದ ಬೋಗಿಯಲ್ಲಿ ಪ್ರಯಾಣ ಮಾಡಿದರೆ ಅಂಥ ವ್ಯಕ್ತಿಯ ಸಂಬಂಧದ ವೆಚ್ಚಗಳನ್ನು ವಸೂಲು ಮಾಡತಕ್ಕದ್ದು ಮತ್ತು ಸರ್ಕಾರಕ್ಕೆ ಜಮೆ ಮಾಡತಕ್ಕದ್ದು.

1. 1974ರ ಅಧಿನಿಯಮ 19ರ ಮೂಲಕ 25.05.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

(ಬಿ) ರಸ್ತೆಯ ಮೂಲಕ ಪ್ರಯಾಣ ಮಾಡಿದಾಗ [1][ಪ್ರತಿ ಕಿಲೋಮೀಟರಿಗೆ [5][[4][[3][[2][ನಲವತ್ತು ರೂಪಾಯಿ][1]][2]][3]][4]][5] ರಸ್ತೆ ಮೈಲು ದರಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

1. 1967ರ ಅಧಿನಿಯಮ 8ರ ಮೂಲಕ 10.08.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.5.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಸಿ) ವಿಮಾನದ ಮೂಲಕ ಮಾಡುವ ಪ್ರಯಾಣಕ್ಕಾಗಿ, ಅಂಥ ಪ್ರಯಾಣಕ್ಕೆ ಸಂದಾಯ ಮಾಡಿದ ಒಂದು ದರದ [2][ಒಂದು ಮತ್ತು ನಾಲ್ಕನೇ ಒಂದು][2] ಭಾಗದಷ್ಟು [1][ಮತ್ತು ಅಂಥ ಯಾಣಗಳ ಸಂದರ್ಭದಲ್ಲಿ ಅಪಘಾತಗಳು ಉಂಟಾದಲ್ಲಿ ವಿಮೆಗಾಗಿ ನಿಗದಿಪಡಿಸಿದ ವಿಮಾಕಂತು][1];

1. 1968ರ ಅಧಿನಿಯಮ 18ರ ಮೂಲಕ 01.11.1956 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಡಿ) ಪ್ರಯಾಣದ ದಿನಗಳಿಗಾಗಿ ಮತ್ತು ಯಾವುದೇ ಸ್ಥಳದಲ್ಲಿ ಉಳಿದುಕೊಳ್ಳುವ ಪ್ರತಿದಿನಕ್ಕೆ [4][3][2][[1][ಮೂರು ಸಾವಿರ][1]][2]][3]][4] ರೂಪಾಯಿಗಳ ದಿನಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು:

1.2001ರ ಅಧಿನಿಯಮ 14ರ ಮೂಲಕ 01.12.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ರಾಜ್ಯದ ಹೊರಗೆ ಮಾಡುವ ಪ್ರವಾಸಗಳ ಸಂದರ್ಭಗಳಲ್ಲಿ ಪ್ರಯಾಣದ ದಿನಗಳಿಗೆ [3][2][[1][ಐದು ಸಾವಿರ ರೂಪಾಯಿಗಳು][2]][3] ಮತ್ತು ಬಿಲ್ಲುಗಳನ್ನು ಒದಗಿಸುವುದಕ್ಕೆ ಒಳಪಟ್ಟು, ಅನುಸೂಚಿತ ದರಗಳಲ್ಲಿ ವಸತಿ ಮತ್ತು ಬೋರ್ಡಿಂಗ್‌ಅನ್ನು ಒದಗಿಸುವ ಹೋಟೆಲ್ ಅಥವಾ ಇತರ ನೋಂದಾಯಿತ ಸಂಸ್ಥೆಗಳಲ್ಲಿ ಉಳಿದುಕೊಳ್ಳಲು ಪ್ರತಿದಿನಕ್ಕೆ [3][2][ಹತ್ತು ಸಾವಿರ ರೂಪಾಯಿಗಳು][2]][3] ದಿನಭತ್ಯೆಯಾಗಿರತಕ್ಕದ್ದು][1]:

1. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

ಮತ್ತೂ ಪರಂತು, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ [1][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [2][ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][1]][2] ಇವರನ್ನು ರಾಜ್ಯದ ಅತಿಥಿಗಳೆಂದು ಪರಿಗಣಿಸಿದ ಸಂದರ್ಭಗಳಲ್ಲಿ, ಅವರನ್ನು ರಾಜ್ಯದ ಅತಿಥಿ ಎಂದು ಪರಿಗಣಿಸಿದಂಥ ಅವಧಿಗಾಗಿ ದಿನಭತ್ಯದ ಕಾಲುಭಾಗದಷ್ಟು ಹಣವನ್ನು ಮಾತ್ರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

[1][2ಎ) [2][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಅಥವಾ [3][ಉಪ-ಸಭಾಧ್ಯಕ್ಷ][2], ವಿರೋಧ ಪಕ್ಷದ ನಾಯಕರು, [4][ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯಸಚೇತಕರು][3]][4] - ಇವರು ಸಾರ್ವಜನಿಕ ಹಿತಾಸಕ್ತಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಮೋಟಾರು ಕಾರಿನಲ್ಲಿ ರಸ್ತೆಯ ಮೂಲಕ ಪ್ರಯಾಣ ಮಾಡುತ್ತಿರುವಾಗ ಮುಂದಿನ ಪ್ರಯಾಣವನ್ನು ರೈಲು ಅಥವಾ ವಿಮಾನದ ಮೂಲಕ ಕೈಗೊಳ್ಳಬೇಕಾದರೆ ಅವರು ಮೋಟಾರು ಕಾರಿನ ಬಳಕೆಯನ್ನು ನಿಲ್ಲಿಸಿದ ಸ್ಥಳದಿಂದ ಬೆಂಗಳೂರು ನಗರಕ್ಕೆ ಮೋಟಾರು ಕಾರು ವಾಪಸ್ಸು ಬರಲು ಬಳಸಿದ ಪೆಟ್ರೋಲ್ ವೆಚ್ಚವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು:

1.1968ರ ಅಧಿನಿಯಮ 18ರ ಮೂಲಕ 1.1.1966 ರಿಂದ ಜಾರಿಗೆ ಬರುವಂತೆ ಉಪಪ್ರಕರಣಗಳಾದ (2ಎ) ಮತ್ತು (2ಬಿ)ಗಳನ್ನು ಪ್ರತಿಯೋಜಿಸಲಾಗಿದೆ.
2. 1975ರ ಅಧಿನಿಯಮ 3ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

[1][ಪರಂತು, (2ಬಿ) ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಭಾರತದಲ್ಲಿ ರಾಜ್ಯದ ಹೊರಗಡೆ ಪ್ರವಾಸದ ಮೇಲಿರುವಾಗ ಹಾಗೂ ಅವರು ತಮ್ಮೊಡನೆ ಮೋಟಾರು ಕಾರನ್ನು ತೆಗೆದುಕೊಂಡು ಹೋಗಿಲ್ಲದೇ ಇರುವಾಗ ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, [2][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [3][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][2]][3] ಇವರು ತಮ್ಮ ಇಚ್ಛಾನುಸಾರ ಪ್ರಯಾಣ ಭತ್ಯದ ಬದಲಾಗಿ ಅಥವಾ ತಾವು ಹಕ್ಕುಳ್ಳವರಾದ ರಸ್ತೆ ಮೈಲು ದರದ ಬದಲಾಗಿ, ತಾವು ವಾಸ್ತವವಾಗಿ ಸಾರ್ವಜನಿಕ ಹಿತಾಸಕ್ತಿಗಾಗಿ ಬಾಡಿಗೆಗೆ ತೆಗೆದುಕೊಂಡ ಮೋಟಾರು ಕಾರಿನ ವಾಸ್ತವಿಕ ಬಾಡಿಗೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ಸಂದರ್ಭಾನುಸಾರ, ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, [2][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [3][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][2]][3] ಇವರು ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮೋಟಾರು ಕಾರನ್ನು ಬಾಡಿಗೆಗೆ ತೆಗೆದುಕೊಳ್ಳುವುದು ಅವಶ್ಯವಾಗಿತ್ತೆಂಬ ಪ್ರಮಾಣ ಪತ್ರವನ್ನು ಬಿಲ್‌ನೊಂದಿಗೆ ನೀಡತಕ್ಕದ್ದು.][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 1.1.1966 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

(2ಬಿ) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, [1][ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [3][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][1]][3]- ಇವರು (2)ನೇ ಉಪಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳ ಜೊತೆಗೆ ನವದೆಹಲಿಯ [2][ಕರ್ನಾಟಕ ಭವನ][2] ದಲ್ಲಿ ರಾಜ್ಯ ಸರ್ಕಾರವು ನಿರ್ವಹಿಸಿಕೊಂಡು ಬರುತ್ತಿರುವ ಮೋಟಾರು ಕಾರುಗಳನ್ನು ವೆಚ್ಚ ಸಂದಾಯ ಮಾಡದೇ ಬಳಸಲು ಹಕ್ಕುಳ್ಳವರಾಗಿರತಕ್ಕದ್ದು.][1]

1.1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2.1973ರ ಕಾನೂನುಗಳ ಅಳವಡಿಕೆ ಆದೇಶದ IIನೇ ಅನುಚೂಚಿಯ 1ನೇ ಕ್ರಮ ಸಂಖ್ಯೆಯನ್ನು 1.1.2009ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

[1][(3) (ಎ) ಸಭಾಪತಿ ಮತ್ತು ಸಭಾಧ್ಯಕ್ಷರು ಕರ್ತವ್ಯದ ಮೇಲೆ ಭಾರತದ ಹೊರಗೆ ಪ್ರವಾಸ ಮಾಡುವಾಗ, [2][ರಾಜ್ಯ ಸರ್ಕಾರದ ಸಚಿವರಿಗೆ ಅನ್ವಯಿಸುವ ಪ್ರಯಾಣ ಮತ್ತು ಇತರ ವೆಚ್ಚಗಳ ಸಂಬಂಧದಲ್ಲಿನ ನಿಬಂಧನೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.][2]

1.1976ರ ಅಧಿನಿಯಮ 49ರ ಮೂಲಕ (3)(ಎ) ಮತ್ತು (3)(ಬಿ) ಉಪಪ್ರಕರಣಗಳನ್ನು 1.6.1979ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

2.1987ರ ಅಧಿನಿಯಮ 16ರ ಮೂಲಕ 1.4.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

1[(ಎಎ) ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [3][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][3]-ಇವರು ವೈದ್ಯಕೀಯ ಚಿಕಿತ್ಸೆಗಾಗಿ ಭಾರತದ ಹೊರಗೆ ಪ್ರವಾಸ ಮಾಡುವಾಗ [2][ರಾಜ್ಯ ಸರ್ಕಾರದ ಸಚಿವರಿಗೆ ಅನ್ವಯಿಸುವ ಪ್ರಯಾಣ ಮತ್ತು ಇತರ ವೆಚ್ಚಗಳ ಸಂಬಂಧದಲ್ಲಿನ ನಿಬಂಧನೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.][2]][1].

1.1979ರ ಅಧಿನಿಯಮ 31ರ ಮೂಲಕ 1.6.1979 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2.1987ರ ಅಧಿನಿಯಮ 16ರ ಮೂಲಕ 1.4.1987 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

[1][(ಬಿ) xxx][1]

1.1987ರ ಅಧಿನಿಯಮ 16ರ ಮೂಲಕ 1.4.1987 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

9. ವೈದ್ಯಕೀಯ ಶುಶ್ರೂಷೆ.- ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು, [1][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಮತ್ತು ಉಪ-ಸಭಾಧ್ಯಕ್ಷ,][1] [2][ವಿರೋಧ ಪಕ್ಷದ ನಾಯಕರು [5][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][2]][5] ಮತ್ತು ಸಂದರ್ಭಾನುಸಾರ [1][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ ಅಥವಾ ಉಪ-ಸಭಾಧ್ಯಕ್ಷ,][1] 2[ವಿರೋಧ ಪಕ್ಷದ ನಾಯಕ [5][,ಸರ್ಕಾರಿ ಮುಖ್ಯ ಸಚೇತಕ

ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರು][2]][5] ಇವರೊಂದಿಗೆ ವಾಸಿಸುವ ಮತ್ತು ಅವರನ್ನು ಅವಲಂಬಿಸಿದ ಕುಟುಂಬದ ಸದಸ್ಯರು, ರಾಜ್ಯ ಸರ್ಕಾರವು ನಿರ್ವಹಿಸುವ ಆಸ್ಪತ್ರೆಯಲ್ಲಿ ಕೊಠಡಿ ಮತ್ತು ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. [3][ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು 4[ಭಾರತದಲ್ಲಾಗಲಿ ಅಥವಾ ಹೊರಗಡೆಯಾಗಲಿ]4 ಇತರ ಯಾವುದೇ ಸ್ಥಳದಲ್ಲಿ ಪಡೆದುಕೊಂಡ ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಅವರು ಖರ್ಚು ಮಾಡಿದ ವೆಚ್ಚಗಳಿಗೆ ಸರ್ಕಾರದಿಂದ ಹಣದ ಮರು ಭರ್ತಿ ಹೊಂದಲು ಸಹ ಅವರು ಹಕ್ಕುಳ್ಳವರಾಗಿರತಕ್ಕದ್ದು.][3]

1. 1975ರ ಅಧಿನಿಯಮ 3ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 1974ರ ಅಧಿನಿಯಮ 19ರ ಮೂಲಕ 27.05.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1979ರ ಅಧಿನಿಯಮ ಸಂಖ್ಯೆ 31ರ ಮೂಲಕ 1.6.1979 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.

ವಿವರಣೆ:- ಈ ಪ್ರಕರಣ [1][ಮತ್ತು (12)ನೇ ಪ್ರಕರಣ][1]ದ ಉದ್ದೇಶ ಕುಟುಂಬದ ಸದಸ್ಯರು ಎಂದರೆ ಗಂಡ, ಹೆಂಡತಿ, ಮಗ, ಮಗಳು, ತಂದೆ-ತಾಯಿ, ಸಹೋದರ ಅಥವಾ ಸಹೋದರಿ.

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

10. ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷರ ಸಂಬಳಗಳು.- [1][(1)][1] ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷ ಈ ಪ್ರತಿಯೊಬ್ಬರಿಗೂ ತಿಂಗಳಿಗೆ [7][6][5][4][3][2][ಎಂಬತ್ತು ಸಾವಿರ ರೂಪಾಯಿಗಳ][2]][3]][4]][5]][6]][7] ಸಂಬಳವನ್ನು ಸಂದಾಯ ಮಾಡತಕ್ಕದ್ದು.

1. 1974ರ ಅಧಿನಿಯಮ 19ರ ಮೂಲಕ 27.5.1974 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆನೀಡಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ.
4. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷ ಈ ಪ್ರತಿಯೊಬ್ಬರಿಗೂ, ಪ್ರತಿ ತಿಂಗಳಿಗೆ, [6][5][4][3][ಒಂದು ಸಾವಿರದ ಐದು ನೂರು ಲೀಟರ್][3]][4]][5]][6] [2][ಪೆಟ್ರೋಲ್ ಬೆಲೆಗೆ ಸಮನಾದ][2] ವಾಹನ ಭತ್ಯವನ್ನು ಸಂದಾಯ ಮಾಡತಕ್ಕದ್ದು.][1]

1. 1974ರ ಅಧಿನಿಯಮ 19ರ ಮೂಲಕ 27.5.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1997ರ ಅಧಿನಿಯಮ 19ರ ಮೂಲಕ 1.1.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಗಿದೆ.
4. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][10ಎ. ಉಪ-ಸಭಾಪತಿ, ಉಪ-ಸಭಾಧ್ಯಕ್ಷ ಅಥವಾ ಸಭಾಪತಿ ಅಥವಾ ಸಭಾಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸುವ ವ್ಯಕ್ತಿಗೆ ಸಂದಾಯ ಮಾಡಬೇಕಾದ ಸಂಬಳ, ವಾಹನ ಮತ್ತು ವಾಹನ ಭತ್ಯೆ.- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಸಭಾಪತಿಯ ಸ್ಥಾನವು ಖಾಲಿ ಇದ್ದಾಗ ಮತ್ತು ಸದರಿ ಸ್ಥಾನದ ಕರ್ತವ್ಯಗಳನ್ನು ಉಪ-ಸಭಾಪತಿ ಅಥವಾ ಸಂವಿಧಾನದ 184ನೇ ಅನುಚ್ಛೇದದ (ಬಿ) ಖಂಡದ ಮೇರೆಗೆ ನೇಮಕ ಮಾಡಿದ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ನಿರ್ವಹಿಸಿದರೆ, ಉಪ-ಸಭಾಪತಿ ಅಥವಾ ಅಂಥ ಸದಸ್ಯರಿಗೆ ಅವರು ಹಾಗೆ ಕರ್ತವ್ಯ ನಿರ್ವಹಿಸಿದ ಅವಧಿಗಾಗಿ ಪ್ರತಿ ತಿಂಗಳಿಗೆ [5][4][3][2][ಅರವತ್ತು ಸಾವಿರ ರೂಪಾಯಿಗಳ][2]][3]][4]][5] ಸಂಬಳವನ್ನು ಸಂದಾಯ ಮಾಡತಕ್ಕದ್ದು ಮತ್ತು ಸೂಕ್ತ ಮೋಟಾರು ಕಾರು

ಒದಗಿಸತಕ್ಕದ್ದು ಮತ್ತು 5 ಮತ್ತು 6ನೇ ಪ್ರಕರಣಗಳ ಉಪಬಂಧಗಳ ಅನುಸಾರ ವಾಹನ ಭತ್ಯವನ್ನು ಸಂದಾಯ ಮಾಡತಕ್ಕದ್ದು:

1. 1968ರ ಅಧಿನಿಯಮ ಸಂಖ್ಯೆ 18ರ ಮೂಲಕ 1.11.1956 ರಿಂದ ಜಾರಿಗೆ ಬರುವಂತೆ 10ಎ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳನ್ನು ಸೇರಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಮೇಲೆ ಹೇಳಲಾದ ಅವಧಿಯಲ್ಲಿ ಸಂದರ್ಭಾನುಸಾರ, ಉಪ-ಸಭಾಪತಿ ಅಥವಾ ಸದಸ್ಯರು 10ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗಿನ ಸಂಬಳ ಮತ್ತು ವಿಶೇಷ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಸಭಾಧ್ಯಕ್ಷನ ಸ್ಥಾನವು ಖಾಲಿ ಇದ್ದಾಗ ಮತ್ತು ಆ ಖಾಲಿ ಸ್ಥಾನದ ಕರ್ತವ್ಯಗಳನ್ನು ಉಪ-ಸಭಾಧ್ಯಕ್ಷ ಅಥವಾ ಸಂವಿಧಾನದ 180ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ನೇಮಕಗೊಂಡಂಥ ವಿಧಾನಸಭೆಯ ಸದಸ್ಯರೊಬ್ಬರು ನಿರ್ವಹಿಸಿದರೆ ಅಂಥ ಕರ್ತವ್ಯಗಳನ್ನು ಅವರು ನಿರ್ವಹಿಸಿದ ಅಂಥ ಅವಧಿಗಾಗಿ ಅವರಿಗೆ ಪ್ರತಿ ತಿಂಗಳಿಗೆ [4][3][2][1][ಅರವತ್ತು ಸಾವಿರ ರೂಪಾಯಿಗಳ]1]2]3]4 ಸಂಬಳ ಸಂದಾಯ ಮಾಡತಕ್ಕದ್ದು ಮತ್ತು ಸೂಕ್ತ ಮೋಟಾರು ಕಾರನ್ನು ಒದಗಿಸತಕ್ಕದ್ದು ಹಾಗೂ 5 ಮತ್ತು 6ನೇ ಪ್ರಕರಣದ ಉಪಬಂಧಗಳ ಅನುಸಾರ ವಾಹನ ಭತ್ಯವನ್ನು ಸಂದಾಯ ಮಾಡತಕ್ಕದ್ದು:

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಮೇಲೆ ಹೇಳಲಾದ ಅವಧಿಯಲ್ಲಿ ಸಂದರ್ಭಾನುಸಾರ ಉಪ-ಸಭಾಧ್ಯಕ್ಷ ಅಥವಾ ಸದಸ್ಯರು 10ನೇ ಪ್ರಕರಣ ಅಥವಾ 11ನೇ ಪ್ರಕರಣದ ಮೇರೆಗಿನ ಸಂಬಳ ಮತ್ತು ವಿಶೇಷ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.][1].

[1][10ಬಿ.XXX][1]

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

10ಸಿ. ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷರ ವಾಹನ ಸೌಲಭ್ಯ.- ರಾಜ್ಯ ಸರ್ಕಾರವು ಉಪಸಭಾಪತಿ ಮತ್ತು ಉಪ-ಸಭಾಧ್ಯಕ್ಷರು - ಪ್ರತಿಯೊಬ್ಬರ ಬಳಕೆಗಾಗಿ ಸೂಕ್ತ ಮೋಟಾರು ಕಾರನ್ನು ಒದಗಿಸಬಹುದು.

10ಡಿ. ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷರ ಹಾಗೂ ಸರ್ಕಾರ ಸಂದಾಯ ಮಾಡಬೇಕಾದ ವೆಚ್ಚಗಳು.- (1) ಉಪ-ಸಭಾಪತಿ ಮತ್ತು ಉಪ-ಸಭಾಧ್ಯಕ್ಷರು [1][4ನೇ ಪ್ರಕರಣದ (1)ನೇ ಉಪಪ್ರಕರಣ]1 ಮತ್ತು 10ಸಿ ಪ್ರಕರಣದ ಮೇರೆಗೆ ಅವರ ಬಳಕೆಗಾಗಿ ಹಂಚಿಕೆ ಮಾಡಲಾದ ವಾಸದ ಮನೆ ಮತ್ತು ಮೋಟಾರು ಕಾರುಗಳ ಸಂಬಂಧದಲ್ಲಿ ಈ ಮುಂದಿನ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:-

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎ) ಸರ್ಕಾರವು ಸಂದಾಯ ಮಾಡಿದ [4][3][2][ಒಂದು ಸಾವಿರದ ಐದು ನೂರು ಲೀಟರ್]3]2]4 ಪೆಟ್ರೋಲ್ ಬೆಲೆಗಿಂತ ಹೆಚ್ಚಾಗಿ ತಮ್ಮ ತಮ್ಮ ಮೋಟಾರು ಕಾರುಗಳಿಗೆ ಅಗತ್ಯವಾದ ಪೆಟ್ರೋಲ್ ಬೆಲೆ; ಮತ್ತು,]1

1. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ 19ರ ಮೂಲಕ 1.1.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಗಿದೆ.
3. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆ ಸಂಬಂಧದಲ್ಲಿ ಅವೆರಡೂ ಸೇರಿ ಒಟ್ಟು ಮಾಸಿಕ ದರಗಳ ಮೊದಲ ಎರಡು ನೂರು ರೂಪಾಯಿಗಳು.][1]

1. 1978ರ ಅಧಿನಿಯಮ 31ರ ಮೂಲಕ 14.10.1974 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][4 ಪ್ರಕರಣದ][1] (1)ನೇ ಉಪಪ್ರಕರಣದ ಮೇರೆಗೆ ಒದಗಿಸಿದ ವಾಸದ ಮನೆ ಮತ್ತು 10ಸಿ ಪ್ರಕರಣದ ಮೇರೆಗೆ ಒದಗಿಸಿದ ಮೋಟಾರಿನ ದುರಸ್ತಿ ವೆಚ್ಚವು ಸೇರಿದಂತೆ ಅವುಗಳ ನಿರ್ವಹಣೆ ಮತ್ತು ಸುಸ್ಥಿತಿಯಲ್ಲಿಡುವ ಹಾಗೂ ಅಂಥ ಮೋಟಾರು ಕಾರಿನ ಚಾಲಕರು ಮತ್ತು ಕ್ಲೀನರ್‌ಗಳ ಸಂಬಳಗಳು ಮತ್ತು ಭತ್ಯೆಗಳು, ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗೆ ಸೇರಿದ ತೋಟಗಳ ರೂಪರೇಷೆ ಹಾಗೂ ಅವುಗಳ ನಿರ್ವಹಣೆ - ಈ ಇತರ ಎಲ್ಲಾ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.][1]

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][10ಇ. ವಿರೋಧ ಪಕ್ಷದ ನಾಯಕನ ಸಂಬಳ.- ವಿರೋಧ ಪಕ್ಷದ ಪ್ರತಿಯೊಬ್ಬ ನಾಯಕನಿಗೆ ತಿಂಗಳಿಗೆ [6][5][4][3][2][ಎಂಬತ್ತು ಸಾವಿರ ರೂಪಾಯಿಗಳ][2]][3]][4]][5]][6] ಸಂಬಳವನ್ನು ಸಂದಾಯ ಮಾಡತಕ್ಕದ್ದು.

1. 1976ರ ಅಧಿನಿಯಮ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ 10ಇ ಯಿಂದ 10ಎಫ್‌ವರೆಗಿನ ಪ್ರಕರಣಗಳನ್ನು ಸೇರಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.1.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**10ಎಫ್.**][1]

1.2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

10ಜಿ. ವಿರೋಧ ಪಕ್ಷದ ನಾಯಕರಿಗೆ ವಾಹನ ಸೌಲಭ್ಯ.- (1) ರಾಜ್ಯ ಸರ್ಕಾರವು ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನಿಗೆ ಬಳಸಲು ಸೂಕ್ತ ಮೋಟಾರು ಕಾರನ್ನು ಒದಗಿಸತಕ್ಕದ್ದು.

(2) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನಿಗೆ ಸರ್ಕಾರವು ಪ್ರತಿ ತಿಂಗಳು [5][4][3][2][ಎರಡು ಸಾವಿರ ಲೀಟರ್][2]][3]][4]][5] [1][ಪೆಟ್ರೋಲ್ ಬೆಲೆಗೆ ಸಮನಾದ][1] ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[4][**10ಹೆಚ್. x x x x**][4].

1.1978ರ ಅಧಿನಿಯಮ ಸಂಖ್ಯೆ 31ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

10ಐ. ವಿರೋಧ ಪಕ್ಷದ ನಾಯಕರು ಮತ್ತು ಸರ್ಕಾರ ಸಂದಾಯ ಮಾಡಬೇಕಾದ ವೆಚ್ಚಗಳು.- (1) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನು [1][4 ಪ್ರಕರಣದ][1] (1)ನೇ ಉಪಪ್ರಕರಣ ಮತ್ತು 10ಜಿ ಪ್ರಕರಣದ ಮೇರೆಗೆ ಅವರ ಬಳಕೆಗಾಗಿ ಹಂಚಿಕೆ ಮಾಡಲಾದ ವಾಸದ ಮನೆ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಮುಂದಿನ ಶುಲ್ಕಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:-

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎ) ಸರ್ಕಾರವು ಸಂದಾಯ ಮಾಡಿದ [4][3][2][ಒಂದು ಸಾವಿರದ ಐದು ನೂರು ಲೀಟರ್][2]][3]][4] ಪೆಟ್ರೋಲ್ ಬೆಲೆಗಿಂತ ಹೆಚ್ಚಾಗಿ ತಮ್ಮ ಮೋಟಾರು ಕಾರುಗಳಿಗೆ ಬಳಸಿದ ಪೆಟ್ರೋಲ್ ವೆಚ್ಚ; ಮತ್ತು][1]

1. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ವಾಸದ ಮನೆಯಲ್ಲಿ ವಿದ್ಯುಚ್ಛಕ್ತಿ ಮತ್ತು ನೀರು ಬಳಕೆ ಸಂಬಂಧದಲ್ಲಿ ಒಟ್ಟು ಮಾಸಿಕ ದರದ ಮೊದಲ ಎರಡು ನೂರು ರೂಪಾಯಿಗಳು.][1]

1. 1976ರ ಅಧಿನಿಯಮ ಸಂಖ್ಯೆ 31ರ ಮೂಲಕ 19..7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) [1][4ನೇ ಪ್ರಕರಣದ][1] (1)ನೇ ಉಪಪ್ರಕರಣದ ಮೇರೆಗೆ ಒದಗಿಸಲಾದ ವಾಸದ ಮನೆ ಮತ್ತು 10ಎಫ್ ಪ್ರಕರಣದ ಮೇರೆಗೆ ಒದಗಿಸಲಾದ ಮೋಟಾರು ಕಾರು - ಇದರ ದುರಸ್ತಿ ವೆಚ್ಚವೂ ಸೇರಿದಂತೆ ಅವುಗಳ ನಿರ್ವಹಣೆ ಮತ್ತು ಸುಸ್ಥಿತಿಯಲ್ಲಿಡುವ ಹಾಗೂ ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್ಗಳ ಸಂಬಳ ಮತ್ತು ಭತ್ಯೆಗಳು ಹಾಗೂ ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗೆ ಸೇರಿದ ತೋಟಗಳ ರೂಪರೇಷೆ ಮತ್ತು ಅದರ ನಿರ್ವಹಣೆ - ಈ ಎಲ್ಲ ಇತರ ವೆಚ್ಚಗಳನ್ನು ರಾಜ್ಯಸರ್ಕಾರವು ಭರಿಸತಕ್ಕದ್ದು.

10ಜೆ. ಸರ್ಕಾರಿ ಮುಖ್ಯ ಸಚೇತಕರಿಗೆ ಸಂಬಳ.- ಪ್ರತಿಯೊಬ್ಬ ಸರ್ಕಾರಿ ಸಚೇತಕರಿಗೆ ತಿಂಗಳಿಗೆ [6][5][4][3][2][1][ಎಪ್ಪತ್ತು ಸಾವಿರ ರೂಪಾಯಿಗಳ][1]][2]][3]][4]][5]][6] ಸಂಬಳವನ್ನು ಸಂದಾಯ ಮಾಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ .
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][1][**10ಕೆ. ವಿರೋಧಪಕ್ಷದ ಮುಖ್ಯ ಸಚೇತಕರಿಗೆ ಸಂಬಳ.-** ಪ್ರತಿಯೊಬ್ಬ ಸರ್ಕಾರಿ ಸಚೇತಕರಿಗೆ ತಿಂಗಳಿಗೆ [6][5][4][3][ಎಪ್ಪತ್ತು ಸಾವಿರ ರೂಪಾಯಿಗಳ][3]][4]][5]][6] ಸಂಬಳವನ್ನು ಸಂದಾಯ ಮಾಡತಕ್ಕದ್ದು.][1]][2]

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿರುವುದಾಗಿ ಭಾವಿಸಲಾಗಿದೆ .
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

10ಎಲ್. ಸರ್ಕಾರಿ ಮುಖ್ಯ ಸಚೇತಕರಿಗೆ ವಾಹನ ಸೌಲಭ್ಯ.- (1) ರಾಜ್ಯ ಸರ್ಕಾರವು ಪ್ರತಿ ಸರ್ಕಾರಿ ಮುಖ್ಯ ಸಚೇತಕರಿಗೆ, ಅವರ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸತಕ್ಕದ್ದು.

(2) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನಿಗೆ ಸರ್ಕಾರವು ಪ್ರತಿ ತಿಂಗಳು [5][4][3][2][ಒಂದು ಸಾವಿರದ ಐದು ನೂರು ಲೀಟರ್][2]][3]][4]][5] [1][ಪೆಟ್ರೋಲ್ ಬೆಲೆಗೆ ಸಮನಾದ][1] ವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

1. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][1][**10ಎಂ. ವಿರೋಧಪಕ್ಷದ ಮುಖ್ಯ ಸಚೇತಕರಿಗೆ ವಾಹನ ಸೌಲಭ್ಯ.-** (1) ರಾಜ್ಯ ಸರ್ಕಾರವು ಪ್ರತಿ ವಿರೋಧಪಕ್ಷದ ಮುಖ್ಯ ಸಚೇತಕರಿಗೆ, ಅವರ ಬಳಕೆಗಾಗಿ ಒಂದು ಸೂಕ್ತ ಮೋಟಾರು ಕಾರನ್ನು ಒದಗಿಸತಕ್ಕದ್ದು.

(2) ಪ್ರತಿಯೊಬ್ಬ ವಿರೋಧ ಪಕ್ಷದ ನಾಯಕನಿಗೆ ಸರ್ಕಾರವು ಪ್ರತಿ ತಿಂಗಳು [5][4][3][2][ಒಂದು ಸಾವಿರದ ಐದು ನೂರು ಲೀಟರ್]3]]4]5 ಪೆಟ್ರೋಲ್ ಬೆಲೆಗೆ ಸಮನಾದವಾಹನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.]1]2

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿರುವುದಾಗಿ ಭಾವಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

10ಎನ್. ಸರ್ಕಾರಿ ಮುಖ್ಯ ಸಚೇತಕ [2][ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರಿಗೆ]2 ಸರ್ಕಾರವು ಸಂದಾಯ ಮಾಡಬೇಕಾದ ವೆಚ್ಚಗಳು.- (1) [2][ಪ್ರತಿಯೊಬ್ಬ ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕರಿಗೆ]2 [1][4ನೇ ಪ್ರಕರಣದ]1 (1)ನೇ ಉಪಪ್ರಕರಣ ಮತ್ತು [2][ಸಂದರ್ಭಾನುಸಾರ 10ಎಲ್ ಪ್ರಕರಣ ಅಥವಾ 10ಎಂ ಪ್ರಕರಣದ ಮೇರೆಗೆ,]2 ಅವರಿಗೆ ಹಂಚಿಕೆ ಮಾಡಲಾದ ವಾಸದ ಮನೆ ಮತ್ತು ಮೋಟಾರು ಕಾರಿನ ಸಂಬಂಧದಲ್ಲಿ ಈ ಕೆಳಗೆ ತಿಳಿಸಿದ ವೆಚ್ಚಗಳನ್ನು ಸಂದಾಯ ಮಾಡಲು ಬದ್ಧರಾಗಿರತಕ್ಕದ್ದು, ಎಂದರೆ:-

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ .

[1][(ಎ) ಸರ್ಕಾರವು ಸಂದಾಯ ಮಾಡಿದ [4][3][2][ಒಂದು ಸಾವಿರದ ಐದು ನೂರು ಲೀಟರ್]2]]3]]4 ಪೆಟ್ರೋಲ್ ಬೆಲೆಗಿಂತ ಹೆಚ್ಚಾಗಿ ತಮ್ಮ ಮೋಟಾರು ಕಾರುಗಳಿಗೆ ಬಳಸಿದ ಪೆಟ್ರೋಲ್ ವೆಚ್ಚ; ಮತ್ತು]1

1. 1991ರ ಅಧಿನಿಯಮ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1997ರ ಅಧಿನಿಯಮ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ವಾಸದ ಮನೆಯಲ್ಲಿನ ವಿದ್ಯುಚ್ಛಕ್ತಿ ಮತ್ತು ನೀರಿನ ಬಳಕೆ ಸಂಬಂಧದಲ್ಲಿ ಒಟ್ಟು ಮಾಸಿಕ ದರದ ಮೊದಲ ಎರಡು ನೂರು ರೂಪಾಯಿಗಳು]1.

1.1978ರ ಅಧಿನಿಯಮ ಸಂಖ್ಯೆ 31ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) [1][4ನೇ ಪ್ರಕರಣದ]1 (1)ನೇ ಉಪಪ್ರಕರಣದ ಮೇರೆಗೆ ಒದಗಿಸಲಾದ ವಾಸದ ಮನೆ ಮತ್ತು 10ಎಲ್ ಪ್ರಕರಣದ ಮೇರೆಗೆ ಒದಗಿಸಲಾದ ಮೋಟಾರು ಕಾರಿನ ದುರಸ್ತಿ ಖರ್ಚು ಸೇರಿದಂತೆ - ಅವುಗಳ ನಿರ್ವಹಣೆ ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿಡಲು ಅಂಥ ಮೋಟಾರು ಕಾರುಗಳ ಚಾಲಕರು ಮತ್ತು ಕ್ಲೀನರ್ಗಳ ಸಂಬಳ ಮತ್ತು ಭತ್ಯೆಗಳು ಹಾಗೂ ಅದರ ದರಗಳು ಮತ್ತು ತೆರಿಗೆಗಳು ಹಾಗೂ ಅಂಥ ವಾಸದ ಮನೆಗೆ ಸೇರಿದ ತೋಟಗಳ ರೂಪುರೇಷೆ ಮತ್ತು ಅವುಗಳ ನಿರ್ವಹಣೆ - ಈ ಎಲ್ಲಾ ಇತರೆ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.][1]

1. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][10ಓ. ಸಚೇತಕರಿಗೆ ಅಧಿನಿಯಮದ ಅನ್ವಯ.- ಒಬ್ಬ ಸಚಿವ ಅಥವಾ ರಾಜ್ಯ ಸಚಿವ ಅಥವಾ ಉಪಸಚಿವನನ್ನು ಸರ್ಕಾರಿ ಮುಖ್ಯ ಸಚೇತಕನನ್ನಾಗಿ ನೇಮಕ ಮಾಡಿದರೆ ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸಂಬಳ ಅಥವಾ ಭತ್ಯೆಗಳಿಗೆ ಅವನು ಹಕ್ಕುಳ್ಳವನಾಗಿರತಕ್ಕದ್ದಲ್ಲ ಮತ್ತು ಅವನಿಗೆ ಕರ್ನಾಟಕ ಸಚಿವರ ಸಂಬಳಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ ಉಪಬಂಧಗಳು ಅನ್ವಯವಾಗತಕ್ಕದ್ದು.

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 23.3.1972 ರಿಂದ ಜಾರಿಗೆ ಬರುವಂತೆ 10ಓ ಪ್ರಕರಣದಿಂದ 10ಕ್ಕೂ ಪ್ರಕರಣದವರೆಗೆ ಸೇರಿಸಲಾಗಿದೆ.

10ಪಿ. ಕೆಲವು ಇತರ ಸಂದರ್ಭಗಳಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕವನ್ನು ಸರ್ಕಾರವು ಭರಿಸುವುದು.- ವಾಸದ ಮನೆಯ ಸಂಬಂಧದಲ್ಲಿ ಸುಸಜ್ಜಿತ ವಾಸದ ಮನೆ ಸೌಲಭ್ಯ ಪಡೆದುಕೊಳ್ಳುವ ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [1][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕ][1] ಇವರು ತಮ್ಮ ವಾಸದ ಮನೆಯಲ್ಲಿ ಬಳಸುವ ವಿದ್ಯುಚ್ಛಕ್ತಿ ಮತ್ತು ನೀರು ಇವೆರಡೂ ಸೇರಿ, ಎರಡು ನೂರು ರೂಪಾಯಿಗಳನ್ನು ಮೀರಿ ಆದ ಮಾಸಿಕ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

1. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ .

10ಕ್ಯೂ. ಮನೆ ಬಾಡಿಗೆ ಸಂಬಂಧದಲ್ಲಿ ಕಡಿತಗಳು ಇತ್ಯಾದಿ.- ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [1][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯ ಸಚೇತಕ][1] ಇವರಿಗೆಗೆ ಸಂದಾಯ ಮಾಡುವ ಸಂಬಳದಿಂದ ಪ್ರತಿ ತಿಂಗಳು ಈ ಕೆಳಕಂಡ ಮೊಬಲಗನ್ನು ಕಡಿತಗೊಳಿಸತಕ್ಕದ್ದು, ಎಂದರೆ,-

(ಎ) ಅವರು ರಾಜ್ಯ ಸರ್ಕಾರವು ಒದಗಿಸಿದ ವಾಸದ ಮನೆಯಲ್ಲಿ ವಾಸಿಸುತ್ತಿದ್ದರೆ ಮನೆ ಬಾಡಿಗೆಯಾಗಿ ಅವರ ಸಂಬಳದ ಶೇಕಡಾ 10 ರಷ್ಟಕ್ಕೆ ಸಮನಾದ ಮೊಬಲಗು;

(ಬಿ) ಅವರು ರಾಜ್ಯ ಸರ್ಕಾರವು ಒದಗಿಸಿದ ವಾಸದ ಮನೆಯಲ್ಲಿ ವಾಸಿಸುತ್ತಿದ್ದರೆ ಮನೆ ಬಾಡಿಗೆಯಾಗಿ ಅವರ ಸಂಬಳದ ಶೇಕಡಾ 10 ರಷ್ಟಕ್ಕೆ ಸಮನಾದ ಮೊಬಲಗು][1];

1. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸಲಾಗಿದೆ .

11. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ [1][2][xxx][2] ಸಂಬಳ][1].- [3][(1)][3] ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನಿಗೆ [4][ತಿಂಗಳಿಗೆ [10][9][8][7][6][5][ಎಂಬತ್ತು ಸಾವಿರ ರೂಪಾಯಿಗಳ][5][6][7][8][9][10] ಸಂಬಳವನ್ನು][4] ಸಂದಾಯ ಮಾಡತಕ್ಕದ್ದು. ಆ ಸಂಬಳವು ಅವರನ್ನು ಕ್ರಮಬದ್ಧವಾಗಿ ಚುನಾಯಿಸಲಾಗಿದೆ ಎಂದು ಘೋಷಿಸಿದ ದಿನಾಂಕದಿಂದ ಅವರಿಗೆ ಪ್ರಾಪ್ತವಾಗತಕ್ಕದ್ದು ಅಥವಾ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ ಖಾಲಿ ಸ್ಥಾನವನ್ನು ತುಂಬಲು ರಾಜ್ಯಪಾಲರಿಂದ ನಾಮನಿರ್ದೇಶನ ಮಾಡಿದ ಸದಸ್ಯರ ಸಂದರ್ಭದಲ್ಲಿ ಅವರನ್ನು ಹಾಗೆ ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅಥವಾ ಖಾಲಿಸ್ಥಾನವು ಉಂಟಾಗುವ ಮೊದಲೇ ಅಂಥ ಘೋಷಣೆ ಅಥವಾ ನಾಮನಿರ್ದೇಶನ ಮಾಡಿದ್ದರೆ ಆ ಖಾಲಿಸ್ಥಾನವು ಉಂಟಾದ ದಿನಾಂಕದಿಂದ ಅಂಥ ಸಂಬಳವು ಪ್ರಾಪ್ತವಾಗತಕ್ಕದ್ದು:

1. 1960ರ ಅಧಿನಿಯಮ 10ರ ಮೂಲಕ 1.1.1960 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
3. 1967ರ ಅಧಿನಿಯಮ 8ರ ಮೂಲಕ 10.8.1967 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆನೀಡಲಾಗಿದೆ.
4. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2005ರ ಅಧಿನಿಯಮ ಸಂಖ್ಯೆ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2009ರ ಅಧಿನಿಯಮ 16ರ ಮೂಲಕ 14.8.2008 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿರುವುದಾಗಿ ಭಾವಿಸಲಾಗಿದೆ .
7. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
8. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
9. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
10. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಆ ಸಂಬಳವನ್ನು [1][xxx][1] ಭಾರತ ಸಂವಿಧಾನದ 188ನೇ ಅನುಚ್ಛೇದದಲ್ಲಿ ಉಲ್ಲೇಖಿಸಲಾದ ಪ್ರಮಾಣ ವಚನ ಅಥವಾ ಸತ್ಯ ದೃಢೀಕರಣವನ್ನು ಆ ಸದಸ್ಯನು ಮಾಡಿ ಅದಕ್ಕೆ ರುಜು ಮಾಡುವವರೆಗೆ ಸಂದಾಯ ಮಾಡತಕ್ಕದ್ದಲ್ಲ:

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಮತ್ತೂ ಪರಂತು,-

(i) ಸಾರ್ವಜನಿಕ ಚುನಾವಣೆಯ ತರುವಾಯ ರಚಿಸಲಾದ ನೂತನ ವಿಧಾನಸಭೆ ಸದಸ್ಯನ ಸಂದರ್ಭದಲ್ಲಿ ಸಂಬಳವನ್ನು [2][xxx][2] ಆ ವಿಧಾನ ಸಭೆಯ ಅವಧಿಯ ಪ್ರಾರಂಭದ ದಿನಾಂಕದಿಂದ ಮಾತ್ರ ಸಂದಾಯ ಮಾಡತಕ್ಕದ್ದು ಅಥವಾ ಹಿಂದಿನ ವಿಧಾನಸಭೆಯನ್ನು ಮೇಲೆ ಹೇಳಲಾದ ದಿನಾಂಕದ ಮೊದಲೇ ವಿಸರ್ಜನೆ ಮಾಡಲಾಗಿದ್ದರೆ ಅಂಥ ವಿಸರ್ಜನೆಯ ದಿನಾಂಕದಿಂದ ಮಾತ್ರ ಸಂದಾಯ ಮಾಡತಕ್ಕದ್ದು; ಮತ್ತು

1. 1957ರ ಅಧಿನಿಯಮ ಸಂಖ್ಯೆ 17ರ ಮೂಲಕ 1.11.1956 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(ii) ವಿಧಾನ ಪರಿಷತ್ತಿನ ಸದಸ್ಯನ ಸಂದರ್ಭದಲ್ಲಿ ಸಂಬಳವನ್ನು [1][xxx][1] ಸದರಿ ಪರಿಷತ್ತಿನ ಸದಸ್ಯನಾಗಿ ಆತನ ಅಧಿಕಾರಾವಧಿ ಪ್ರಾರಂಭವಾದ ದಿನಾಂಕದಿಂದ ಮಾತ್ರ ಸಂದಾಯ ಮಾಡತಕ್ಕದ್ದು.:][1]

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 1.4.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][ಪರಂತು, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ ಈಗಾಗಲೇ ಸದಸ್ಯನಾಗಿರುವ ವ್ಯಕ್ತಿ ವಿಧಾನ ಪರಿಷತ್ ಅಥವಾ ವಿಧಾನ ಸಭೆಯ ಸದಸ್ಯನಾಗಿ ಆಯ್ಕೆ ಅಥವಾ ನಾಮನಿರ್ದೇಶನಗೊಂಡಿರುವಾಗ, ಸಂದರ್ಭಾನುಸಾರ ಆತನ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯತ್ವವು ಕೊನೆಗೊಂಡ ದಿನಾಂಕದಿಂದ ಮಾತ್ರ ವಿಧಾನ ಪರಿಷತ್ ಅಥವಾ ವಿಧಾನಸಭಾ ಸದಸ್ಯನಾಗಿ ಸಂಬಳವನ್ನು [2][xxx][2] ಆತನಿಗೆ ಸಂದಾಯ ಮಾಡತಕ್ಕದ್ದು.][1]

1. 1960ರ ಅಧಿನಿಯಮ 10ರ ಮೂಲಕ 1.1.1960 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(2) (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಸಂಬಳಕ್ಕೆ [2][xxx][2] ಹಕ್ಕುದಾರರಾದ ಯಾರೇ ಸದಸ್ಯನು, ವಿಧಾನಸಭಾ ಸದಸ್ಯನಾಗಿದ್ದರೆ ಸಭಾಧ್ಯಕ್ಷರಿಗೆ ಮತ್ತು ವಿಧಾನ ಪರಿಷತ್‌ನ ಸದಸ್ಯನಾಗಿದ್ದರೆ ಸಭಾಪತಿಗೆ ಲಿಖಿತದಲ್ಲಿ ತಿಳಿಸುವ ಮೂಲಕ ಯಾವುದೇ ಸಮಯದಲ್ಲಿ ಅದರ ಪೂರ್ಣ ಭಾಗವನ್ನು ಅಥವಾ ಯಾವುದೇ ಭಾಗವನ್ನು ಬಿಟ್ಟುಕೊಡಬಹುದು:

ಪರಂತು, ಯಾವುದೇ ಸಂಬಳದ ಸಂಬಂಧದಲ್ಲಿ [2][xxx][2] ಸದಸ್ಯರೊಬ್ಬರು ಒಬ್ಬ ಸದಸ್ಯನು ಹಾಗೆ ಬಿಟ್ಟುಕೊಟ್ಟಿರುವುದನ್ನು ಸಭಾಧ್ಯಕ್ಷ ಅಥವಾ ಸಭಾಪತಿಗೆ ಲಿಖಿತದ ಮೂಲಕ ತಿಳಿಸಿ ಯಾವುದೇ ಸಮಯದಲ್ಲಿ ಉತ್ತರಾನ್ವಯವಾಗಿ ಅದನ್ನು ಅವರು ರದ್ದುಪಡಿಸಬಹುದು.][1]

1. 1967ರ ಅಧಿನಿಯಮ 8ರ ಮೂಲಕ 10.8.1967 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][11ಎ. ಸದಸ್ಯರಿಗೆ ನಿವೃತ್ತಿ ವೇತನ ಇತ್ಯಾದಿ.- [13][[3][(1) ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ಅಧಿನಿಯಮ, 2025][3]][13]ರಂತೆ ಐದು ವರ್ಷ ಸೇವೆಸಲ್ಲಿಸಿದ ಈ ಕೆಳಕಂಡ ಪ್ರತಿಯೊಬ್ಬ ವ್ಯಕ್ತಿ, ಎಂದರೆ,-

(i) ವಿಧಾನ ಪರಿಷತ್‌ನ ಸದಸ್ಯನಾಗಿ; ಅಥವಾ

(ii) ವಿಧಾನಸಭಾ ಸದಸ್ಯನಾಗಿ; ಅಥವಾ

(iii) ವಿಧಾನಸಭಾ ಸದಸ್ಯನಾಗಿ ಭಾಗಶಃ ಮತ್ತು ವಿಧಾನ ಪರಿಷತ್‌ನ ಸದಸ್ಯನಾಗಿ ಭಾಗಶಃ ಸೇವೆ ಸಲ್ಲಿಸಿರುವವನಿಗೆ ಅವನ ಜೀವಿತದ ಉಳಿದ ಅವಧಿಗೆ ಪ್ರತಿ ತಿಂಗಳು [13][[11][[8][[4][[3][ಎಪ್ಪತ್ತೈದು ಸಾವಿರ][4] ರೂಪಾಯಿಗಳ][3]][8]][11]][13] ನಿವೃತ್ತಿ ವೇತನ ಸಂದಾಯವಾಗತಕ್ಕದ್ದು:

[9] [[3] [XXX][3]][9]

ಪರಂತು, ಅಂಥ ಸದಸ್ಯನ ಒಂದು ವರ್ಷದ ಭಾಗವಾಗಿ ಆರು ತಿಂಗಳುಗಳಿಗೆ ಹೆಚ್ಚಿದ್ದರೆ ಹೆಚ್ಚುವರಿ ನಿವೃತ್ತಿವೇತನ ಲೆಕ್ಕಹಾಕುವ ಉದ್ದೇಶಕ್ಕಾಗಿ ಒಂದು ಪೂರ್ಣವರ್ಷವೆಂದು ಪರಿಗಣಿಸತಕ್ಕದ್ದು:

ಮತ್ತು ಪರಂತು, [10][ಮೊದಲಬಾರಿ ಚುನಾಯಿತನಾದ][10] ಸದಸ್ಯನು ವಿಧಾನ ಸಭೆಯ ವಿಸರ್ಜನೆಯ ಕಾರಣದಿಂದಾಗಿ ಐದು ವರ್ಷಗಳು ಸೇವೆ ಸಲ್ಲಿಸದಂತೆ ಪ್ರತಿಬಂಧಿತನಾಗಿದ್ದರೆ, ಅವನು ಸದಸ್ಯನಾಗಿ ಐದು ವರ್ಷ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಮತ್ತೂ ಪರಂತು, ಒಬ್ಬ ವ್ಯಕ್ತಿಯು ಮೊದಲು ವಿಧಾನ ಪರಿಷತ್ತಿನ ಸದಸ್ಯನಾಗಿದ್ದು ಅವನು ತನ್ನ ಆರು ವರ್ಷಗಳ ಪೂರ್ಣ ಅಧಿಕಾರಾವಧಿಯ ಸೇವೆ ಸಲ್ಲಿಸುವ ಮೊದಲೇ ಚೀಟಿ ಮೂಲಕ ಅವನ ಅಧಿಕಾರಾವಧಿ ಮುಕ್ತಾಯವಾಗಿದ್ದರೆ, ಅವನು ಧಾರಣ ಮಾಡಿದ್ದ ಅಧಿಕಾರದ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಅವನು ಐದು ವರ್ಷಗಳ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೆ ಪರಂತು, ಒಂದು ಚುನಾವಣಾ ಮನವಿಯಲ್ಲಿ ನ್ಯಾಯಾಲಯವು ವ್ಯಕ್ತಿಯನ್ನು ಚುನಾಯಿತನಾಗಿವುದಾಗಿ ಘೋಷಿಸಿದ್ದು ಮತ್ತು ಚುನಾವಣಾ ಮನವಿಯ ಬಾಕಿಯಿಂದ ಸದಸ್ಯನಾಗಿ ಸೇವೆಸಲ್ಲಿಸಲು ಸಾಧ್ಯವಾಗಿದಿದ್ದರೆ, ವಾಸ್ತವ ಸೇವಾ ಅವಧಿಯ ಹೊರತಾಗಿ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

[6][5][ಅಲ್ಲದೆ ಪರಂತು, ಒಬ್ಬ ವ್ಯಕ್ತಿಗೆ ಆರೋಪಿಸಲಾಗದ ತಾಂತ್ರಿಕ ಕಾರಣಗಳಿಗಾಗಿ ಚುನಾವಣಾ ಅರ್ಜಿಯೊಂದರಲ್ಲಿ ಆ ಚುನಾವಣೆಯನ್ನು ನ್ಯಾಯಾಲಯವು ರದ್ದುಗೊಳಿಸಲಾಗಿದ್ದಲ್ಲಿ ಮತ್ತು ಈ ಕಾರಣಕ್ಕಾಗಿ ಆ ವ್ಯಕ್ತಿಯು ಐದು ವರ್ಷಗಳ ಅವಧಿಯನ್ನು ಸದಸ್ಯನಾಗಿ ಸೇವೆ ಸಲ್ಲಿಸಲು ಅಸಮರ್ಥನಾದಲ್ಲಿ, ಆತನು ಸಲ್ಲಿಸಿದ ವಾಸ್ತವವಾದ ಸೇವೆಯ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ, ಆತನು ಐದು ವರ್ಷಗಳ ಅವಧಿಗೆ ಸದಸ್ಯನಾಗಿ ಸೇವೆ ಸಲ್ಲಿಸಿದ್ದಾನೆಂದು ಭಾವಿಸತಕ್ಕದ್ದು.

ವಿವರಣೆ: ಈ ಪರಂತುಕದ ಉದ್ದೇಶಕ್ಕಾಗಿ ತಾಂತ್ರಿಕ ಕಾರಣ ಎಂದರೆ ಭಾರತದ ಚುನಾವಣಾ ಆಯೋಗವು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮತದಾರರ ಪಟ್ಟಿಯಲ್ಲಿ ಕೆಲವು ಮತದಾರರನ್ನು ಸೇರಿಸುವುದು.][5][6]

ಅಲ್ಲದೇ ಪರಂತು, ಒಬ್ಬ ವ್ಯಕ್ತಿಯು, ಉಪ-ಚುನಾವಣೆಯಲ್ಲಿ ಚುನಾಯಿತನಾಗಿರುವನೆಂದು ಘೋಷಿತನಾಗಿದ್ದರೆ ಅಥವಾ ಅಧಿಕಾರಾವಧಿಯ ಮಧ್ಯದಲ್ಲಿ ಸದಸ್ಯನೆಂದು ನಾಮನಿರ್ದೇಶನಗೊಂಡಿದ್ದರೆ ಮತ್ತು ಅವನಿಗೆ ಪೂರ್ಣಾವಧಿ ಸೇವೆ ಸಲ್ಲಿಸಲು ಸಾಧ್ಯವಾಗದಿದ್ದರೆ ಅವನು ವಾಸ್ತವವಾಗಿ ಸಲ್ಲಿಸಿದ ಸೇವೆಯನ್ನು ಗಣನೆಗೆ ತೆಗೆದುಕೊಳ್ಳದೆ ಐದು ವರ್ಷಗಳ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೇ ಪರಂತು, [1][XXX][1] ಒಬ್ಬ ಸದಸ್ಯನು ರಾಜೀನಾಮೆ ಸಲ್ಲಿಸಿದರೆ, ಅವನು ಸದಸ್ಯನಾಗಿ ಐದು ವರ್ಷಗಳವರೆಗೆ ಸೇವೆ ಸಲ್ಲಿಸಿರುವುದಾಗಿ ಭಾವಿಸತಕ್ಕದ್ದು.

1.2011ರ ಅಧಿನಿಯಮ 6ರ ಮೂಲಕ 05.02.2011 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[10][ಅಲ್ಲದೇ ಪರಂತು, ಯಾರೇ ವ್ಯಕ್ತಿ ಐದು ವರ್ಷಗಳಿಗಿಂತ ಹೆಚ್ಚಿನ ಸೇವೆ ಸಲ್ಲಿಸಿದಾಗ, ನಂತರದ ಪೂರ್ಣಗೊಂಡ ಪ್ರತಿ ವರ್ಷಕ್ಕೆ ಹೆಚ್ಚುವರಿಯಾಗಿ ಪ್ರತಿ ತಿಂಗಳಿಗೆ ಒಂದು ಸಾವಿರ ರೂಪಾಯಿಗಳ ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಪಾವತಿಸತಕ್ಕದ್ದು.][10]

[7]**[ವಿವರಣೆ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ ಎನ್ನುವುದು,-

(1) 1956ರ ನವೆಂಬರ್ ಒಂದನೇ ದಿನಾಂಕಕ್ಕೆ ಮೊದಲು ಒಬ್ಬ ವ್ಯಕ್ತಿಯು, ಸದರಿ ದಿನಾಂಕದಂದು ಮತ್ತು ಆ ತರುವಾಯ ನವ ಕರ್ನಾಟಕ ರಾಜ್ಯದ ಒಂದು ಭಾಗವಾಗಿ ಸೇರಿದ ಯಾವುದೇ ಪ್ರದೇಶವನ್ನು, ಸದರಿ ಪ್ರದೇಶವು ಆ ಹಿಂದೆ ತನ್ನ ಒಂದು ಭಾಗವಾಗಿದ್ದ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ, ಪ್ರತಿನಿಧಿಸಿದ್ದರೆ ಆತನನ್ನೂ ಒಳಗೊಳ್ಳುತ್ತದೆ:

[12][ಅಲ್ಲದೇ ಪರಂತು, ಯಾವೊಬ್ಬ ವ್ಯಕ್ತಿಯು ಐದು ವರ್ಷಗಳಿಗಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವ ಸಂದರ್ಭದಲ್ಲಿ ಆತನಿಗೆ ತದನಂತರದ ಪ್ರತಿಯೊಂದು ಪೂರ್ಣಗೊಂಡ ಅವಧಿಗೆ ಪ್ರತಿ ತಿಂಗಳಿಗೆ [13][ಇಪ್ಪತ್ತು ಸಾವಿರ ರೂಪಾಯಿಗಳ][13] ದರದಲ್ಲಿ ಹೆಚ್ಚುವರಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು ಅದು [13][ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು][13] ಮೀರತಕ್ಕದ್ದಲ್ಲ.][12]

ಪರಂತು, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ, ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಆತನ ಸದಸ್ಯತ್ವದ ಅವಧಿಯಲ್ಲಿ, ಕರ್ನಾಟಕ ರಾಜ್ಯದ

ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ ಆತನು ಖಾಯಂ ಆಗಿ ವಾಸ ಮಾಡುತ್ತಿದ್ದರೆ, ಆತನು ನಿವೃತ್ತಿವೇತನಕ್ಕೆ ಅರ್ಹನಾಗಿರತಕ್ಕದ್ದು.

(2) 1952ರ ಜನವರಿ ಮೊದಲನೇ ದಿನಾಂಕಕ್ಕೆ ಮೊದಲು,-

(ಎ) ಸಂವಿಧಾನ ಸಭೆಯ;

(ಬಿ) ಮೈಸೂರು ಪ್ರತಿನಿಧಿ ಸಭೆಯ;

(ಸಿ) ಮೈಸೂರು ವಿಧಾನ ಸಭೆಯ;

(ಡಿ) ಈಗ ಕರ್ನಾಟಕ ರಾಜ್ಯದ ಭಾಗವಾಗಿವಾಗಿರುವ ಯಾವುದೇ ರಾಜ್ಯದ (ಒಂದು ಭಾರತೀಯ ರಾಜ್ಯವೂ ಒಳಗೊಂಡಂತೆ) ಅಥವಾ ಪ್ರಾಂತ್ಯದ ಅಥವಾ ಯಾವುದೇ ಪ್ರದೇಶದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ,

- ಸದಸ್ಯನಾಗಿದ್ದ ವ್ಯಕ್ತಿಯನ್ನು ಒಳಗೊಳ್ಳುತ್ತದೆ:

ಪರಂತು, ಅಂಥ ನಿವೃತ್ತಿ ವೇತನವನ್ನು, ಒಬ್ಬ ವ್ಯಕ್ತಿಗೆ, ಆತನು,-

(i) ತಾನು ಪ್ರತಿನಿಧಿಸಿದ ಪ್ರಾದೇಶಿಕ ಚುನಾವಣಾ ಕ್ಷೇತ್ರವನ್ನು, ಸದಸ್ಯನಾಗಿ ಸೇವೆ ಸಲ್ಲಿಸಿದ ವ್ಯಕ್ತಿಯ ಸಂದರ್ಭದಲ್ಲಿ ಹೊರತು; ಮತ್ತು

(ii) ಯಾವೊಬ್ಬ ಇತರ ಸದಸ್ಯನ ಸಂದರ್ಭದಲ್ಲಿ, ಈಗ ಕರ್ನಾಟಕ ರಾಜ್ಯದ ಭಾಗವಾಗಿರುವ ಯಾವುದೇ ಪ್ರದೇಶದಲ್ಲಿ, ಅಂಥ ಸದಸ್ಯತ್ವದ ಅವಧಿಯಲ್ಲಿ ಆತನು ಶಾಶ್ವತವಾಗಿ ವಾಸವಾಗಿದ್ದ ಹೊರತು,

- ಪಾವತಿಸತಕ್ಕದ್ದಲ್ಲ.][7]

ವಿವರಣೆ:- ಈ ಉಪ-ಪ್ರಕರಣದ ಉದ್ದೇಶಕ್ಕಾಗಿ, ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಸದಸ್ಯ ಎಂದರೆ, 1956ರ ನವೆಂಬರ್ ಒಂದನೇ ದಿನಾಂಕಕ್ಕೆ ಮೊದಲು ಒಬ್ಬ ವ್ಯಕ್ತಿಯು, ಸದರಿ ದಿನಾಂಕದಂದು ಮತ್ತು ಆ ತರುವಾಯ ನವ ಕರ್ನಾಟಕ ರಾಜ್ಯದ ಒಂದು ಭಾಗವಾಗಿ ಸೇರಿದ ಯಾವುದೇ ಪ್ರದೇಶವನ್ನು, ಸದರಿ ಪ್ರದೇಶವು ಆ ಹಿಂದೆ ತನ್ನ ಒಂದು ಭಾಗವಾಗಿದ್ದ ರಾಜ್ಯದ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಪ್ರತಿನಿಧಿಸಿದ್ದರೆ ಆತನನ್ನೂ ಒಳಗೊಳ್ಳುತ್ತದೆ:

ಅಲ್ಲದೇ ಪರಂತು, ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಅವನ ಸದಸ್ಯತ್ವದ ಅವಧಿಯಲ್ಲಿ ಅವನು ಖಾಯಂ ಆಗಿ ಕರ್ನಾಟಕ ರಾಜ್ಯದ ಭಾಗವಾಗುವ ಯಾವುದೇ ಪ್ರದೇಶದಲ್ಲಿ ವಾಸವಾಗಿದ್ದರೆ ನಿವೃತ್ತಿ ವೇತನಕ್ಕೆ ಅರ್ಹನಾಗತಕ್ಕದ್ದು.][2]

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
4. 2012ರ ಅಧಿನಿಯಮ 22ರ ಮೂಲಕ 28.04.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2013ರ ಅಧಿನಿಯಮ 7ರ ಮೂಲಕ 15.1.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
6. 2014ರ ಅಧಿನಿಯಮ 8ರ ಮೂಲಕ 1.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
7. 2014ರ ಅಧಿನಿಯಮ 8ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
8. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
9. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
10. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
11. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
12. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
13. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

[1][(1ಎxxx)][1]

1. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) (1)ನೇ ಉಪ-ಪ್ರಕರಣದ ಮೇರೆಗೆ ನಿವೃತ್ತಿ ವೇತನಕ್ಕೆ ಹಕ್ಕುದಾರನಾಗಿರುವ ಯಾರೇ ವ್ಯಕ್ತಿಯು,-

(i) ಭಾರತದ ರಾಷ್ಟ್ರಪತಿ ಅಥವಾ ಉಪ-ರಾಷ್ಟ್ರಪತಿಯ ಪದವಿಗೆ ಚುನಾಯಿತನಾದರೆ ಅಥವಾ ಯಾವುದೇ ರಾಜ್ಯದ ರಾಜ್ಯಪಾಲರ ಅಥವಾ ಯಾವುದೇ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರರ ಹುದ್ದೆಗೆ ನೇಮಕಗೊಂಡರೆ; ಅಥವಾ

(ii) ಸಚಿವ, ರಾಜ್ಯ ಸಚಿವ, ಉಪ ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [1][, ಸರ್ಕಾರಿ ಮುಖ್ಯ ಸಚೇತಕ ಅಥವಾ ಸರ್ಕಾರಿ ಮುಖ್ಯ ಸಚೇತಕ][1] ಈ ಹುದ್ದೆಗೆ ನೇಮಕಗೊಂಡರೆ ಅಥವಾ ಚುನಾಯಿತನಾದರೆ; ಅಥವಾ

(iii) ರಾಜ್ಯಸಭೆ ಅಥವಾ ಲೋಕಸಭೆ ಅಥವಾ ಒಂದು ರಾಜ್ಯದ ಅಥವಾ ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅಥವಾ ರಾಜ್ಯದ ಯಾವುದೇ ವಿಧಾನ ಪರಿಷತ್ತಿನ ಸದಸ್ಯನಾದರೆ; ಅಥವಾ

(iv) ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ನಿಗಮ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದಲ್ಲಿ ಸಂಬಳದ ಮೇಲೆ ನಿಯೋಜಿತನಾದರೆ ಅಥವಾ ಅನ್ಯಥಾ ಅಂಥ ಸರ್ಕಾರ, ನಿಗಮ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ಪರಿಶ್ರಮ ಧನಕ್ಕೆ ಯಾವುದೇ ಇತರ ರೀತಿಯಲ್ಲಿ ಹಕ್ಕುದಾರನಾದರೆ ಅಂಥ ವ್ಯಕ್ತಿಯು ಅಂಥ ಅಧಿಕಾರ ಹೊಂದಿರುವ ಅವಧಿಗಾಗಿ ಅಥವಾ ಅಂಥ ಸದಸ್ಯನಾಗಿರುವಾಗ ಅಥವಾ ಹಾಗೆ ನಿಯೋಜಿತನಾಗಿರುವಾಗ ಅಥವಾ ಅಂಥ ಪರಿಶ್ರಮಧನಕ್ಕೆ ಹಕ್ಕುದಾರನಾಗಿ ಮುಂದುವರೆಯುತ್ತಿರುವಾಗ, (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, ಅಂಥ ವ್ಯಕ್ತಿಗೆ ಅಂಥ ಅಧಿಕಾರ ಹೊಂದಿರುವುದಾಗಿ ಅಥವಾ ಅಂಥ ಸದಸ್ಯನಾಗಿರುವುದಕ್ಕಾಗಿ ಅಥವಾ ಹಾಗೆ ನಿಯೋಜಿತನಾಗಿರುವುದಕ್ಕಾಗಿ ಸಂದಾಯ ಮಾಡಬಹುದಾದ ಸಂಬಳ ಅಥವಾ ಅಂಥ ವ್ಯಕ್ತಿಗೆ ಸಂದಾಯ ಮಾಡಬಹುದಾದ, (iv)ನೇ ಖಂಡದಲ್ಲಿ ಉಲ್ಲೇಖಿಸಿದ ಪರಿಶ್ರಮ ಧನವು ಎರಡೂ ಸಂದರ್ಭಗಳಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ಅವನಿಗೆ ಸಂದಾಯವಾಗತಕ್ಕ ನಿವೃತ್ತಿ ವೇತನಕ್ಕಿಂತ ಕಡಿಮೆ ಇದ್ದರೆ ಅಂಥ ವ್ಯಕ್ತಿಯು ಆ ಉಪ-ಪ್ರಕರಣದ ಮೇರೆಗೆ ಉಳಿದ ಭಾಗವನ್ನು ಮಾತ್ರ ನಿವೃತ್ತಿ ವೇತನವಾಗಿ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

1.2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

[1][(3) xxx][1]

1. 1987ರ ಅಧಿನಿಯಮ ಸಂಖ್ಯೆ 16ರ ಮೂಲಕ 1ನೇ ಏಪ್ರಿಲ್ 1987 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(4) (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ವರ್ಷಗಳ ಸಂಖ್ಯೆಯನ್ನು ಲೆಕ್ಕ ಹಾಕುವಾಗ, ವ್ಯಕ್ತಿಯು ಈ ಮುಂದಿನ ಸ್ಥಾನಗಳಲ್ಲಿ, ಎಂದರೆ ಸಚಿವ, ರಾಜ್ಯ ಸಚಿವ, ಉಪ ಸಚಿವ, ಸಂಸದೀಯ ಕಾರ್ಯದರ್ಶಿ, ಸಭಾಪತಿ, ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯತ್ವದ ಆಧಾರದ ಮೇಲೆ [1][ಸರ್ಕಾರಿ ಮುಖ್ಯ ಸಚೇತಕ ಅಥವಾ ವಿರೋಧಪಕ್ಷದ ಮುಖ್ಯಸಚೇತಕ][1] ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಹೆಚ್ಚು ಸ್ಥಾನಗಳಲ್ಲಿ ಅವನು ಸಲ್ಲಿಸಿದ ಸೇವೆಯ ಅವಧಿಯನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

1. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

[1][(5) (1)ನೇ ಉಪ-ಪ್ರಕರಣದ [2][XXX][2] ಮೇರೆಗೆ ನಿವೃತ್ತಿ ವೇತನಕ್ಕೆ ಹಕ್ಕುಳ್ಳವನಾದ ಪ್ರತಿಯೊಬ್ಬ ಸದಸ್ಯನಿಗೆ,-

1. 1991ರ ಅಧಿನಿಯಮ ಸಂಖ್ಯೆ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ 1ನೇ ಮತ್ತು 2ನೇ ಪರಂತುಕಗಳನ್ನು ಪ್ರತಿಯೋಜಿಸಲಾಗಿದೆ.

2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) [1][ಅವನಿಗೆ ಮತ್ತು ಅವನ ಜೊತೆಗಾರನಿಗೆ ವರ್ಗಾವಣೆ ಮಾಡಲಾಗದ ಒಂದು ಪಾಸನ್ನು][1] ಒದಗಿಸತಕ್ಕದ್ದು ಮತ್ತು ಅದು, ಅವನು ಯಾವುದೇ ಸಮಯದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ರಸ್ತೆ ಸಾರಿಗೆ ಸೇವೆಗಳ ಮೂಲಕ, ಕರ್ನಾಟಕದಲ್ಲಿ [1][ಅವನು ಸಾಮಾನ್ಯವಾಗಿ ವಾಸಿಸುವ ಸ್ಥಳದಿಂದ][1] [2][ಕರ್ನಾಟಕದ ಯಾವುದೇ ಸ್ಥಳಕ್ಕೆ ಅಥವಾ ರಾಜ್ಯದ ಹೊರಗೆ][2] ಅದರಲ್ಲಿ ನಿಯಮಿಸಬಹುದಾದಂಥ ದರ್ಜೆಯಲ್ಲಿ ಹೋಗಿಬರಲು [3][xxx][3] ಹಕ್ಕನ್ನು ನೀಡತಕ್ಕದ್ದು.

1. 1997ರ ಅಧಿನಿಯಮ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1996ರ ಅಧಿನಿಯಮ 4ರ ಮೂಲಕ 12.12.1996 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[4][[3][[2][[1][(ii) ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಭಾರತದಲ್ಲಿ ವಿಮಾನದ ಮೂಲಕ ಅಥವಾ ರೈಲ್ವೆಯ ಮೂಲಕ ಒಂದು ಅಥವಾ ಹೆಚ್ಚು ಪ್ರಯಾಣಗಳಿಗೆ ಆತನು ಒಬ್ಬನೇ ಆಗಲೀ ಅಥವಾ ಆತನ ಒಬ್ಬ ಜೊತೆಗಾರನೊಂದಿಗಾಗಲೀ, ಪ್ರಯಾಣ ಮಾಡುವ ಉದ್ದೇಶಕ್ಕಾಗಿ, ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಎರಡು ಸಮಾನ ಕಂತುಗಳಲ್ಲಿ ಸಂದಾಯ ಮಾಡಬಹುದಾದ, ಒಂದು ವರ್ಷಕ್ಕೆ [5][ಎರಡು ಲಕ್ಷ ರೂಪಾಯಿಗಳಿಗೆ][5] ಅರ್ಹನಾಗಿರತಕ್ಕದ್ದು.][1]][2]][3]][4]

1. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
3. 2012ರ ಅಧಿನಿಯಮ 22ರ ಮೂಲಕ 28.04.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2013ರ ಅಧಿನಿಯಮ 7ರ ಮೂಲಕ 15.1.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

11ಬಿ. ಕುಟುಂಬ ನಿವೃತ್ತಿ ವೇತನ.- [1][(1) ಸದಸ್ಯರೊಬ್ಬರು ತಮ್ಮ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುನ್ನವೇ ಮರಣ ಹೊಂದಿದಲ್ಲಿ, ಅಥವಾ 11ಎ ಪ್ರಕರಣದಡಿಯಲ್ಲಿ ನಿವೃತ್ತಿ ವೇತನಕ್ಕೆ ಅರ್ಹರಾದ ಒಬ್ಬ ವ್ಯಕ್ತಿಯು ಮೃತರಾದಲ್ಲಿ, 11ಎ ಪ್ರಕರಣದಡಿಯಲ್ಲಿ ಪ್ರತಿ ತಿಂಗಳಿಗೆ [3][2][ಅರ್ಹನಾದ ನಿವೃತ್ತಿ ವೇತನದ][2]][3] ಶೇಕಡಾ ಐವತ್ತರ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು.][1]

1. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
2. 2012ರ ಅಧಿನಿಯಮ 22ರ ಮೂಲಕ 28.04.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2013ರ ಅಧಿನಿಯಮ 7ರ ಮೂಲಕ 15.1.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[2][[1][(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ವಿಧಾನ ಪರಿಷತ್ತಿನ ಅಥವಾ ವಿಧಾನ ಸಭೆಯ ಸದಸ್ಯನಾಗಿದ್ದು, ಮೃತನಾದ ವ್ಯಕ್ತಿಯ ಕುಟುಂಬವು, ಆತನು ನಿವೃತ್ತಿ ವೇತನವನ್ನು ಸ್ವೀಕರಿಸುತ್ತಿದ್ದಿರಲಿ ಅಥವಾ ಇಲ್ಲದಿದ್ದಿರಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಕುಟುಂಬ ನಿವೃತ್ತಿ ವೇತನಕ್ಕೆ ಅರ್ಹನಾಗಿರತಕ್ಕದ್ದು.][1]][2] [3][ಮೃತ ವ್ಯಕ್ತಿಯು 26.12.1978ರ ತರುವಾಯ ಸದಸ್ಯನಾಗಿದ್ದಂತೆ][3]

1. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2014ರ ಅಧಿನಿಯಮ 8ರ ಮೂಲಕ 22.02.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2016ರ ಅಧಿನಿಯಮ 2ರ ಮೂಲಕ 22.02.2014 ರಿಂದ ಜಾರಿಗೆ ಬಂದಿರುವುದಾಗಿ ಸೇರಿಸಲಾಗಿದೆ.

ವಿವರಣೆ.- [1][(1) ಮತ್ತು (2)ನೇ ಉಪ-ಪ್ರಕರಣಗಳ][1] ಉದ್ದೇಶಗಳಿಗಾಗಿ, `ಕುಟುಂಬ' ಎಂದರೆ ಮೃತ ಸದಸ್ಯನ ಈ ಮುಂದಿನ ಸಂಬಂಧಿಗಳು, ಎಂದರೆ:-

(ಎ) ಹೆಂಡತಿ ಅಥವಾ ಗಂಡ;

(ಬಿ) ಅಪ್ರಾಪ್ತ ವಯಸ್ಕ ಗಂಡು ಮಕ್ಕಳು; ಮತ್ತು

(ಸಿ) ಅವಿವಾಹಿತ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳು.

(2) (1)ನೇ ಉಪ-ಪ್ರಕರಣದ ಮೇರೆಗೆ ಅನ್ವಯಿಸುವ ಕುಟುಂಬ ನಿವೃತ್ತಿ ವೇತನವು ಈ ಮುಂದಿನ ಕ್ರಮದಲ್ಲಿ ಸಂದಾಯವಾಗತಕ್ಕದ್ದು:-

(ಎ) ಹೆಂಡತಿ ಅಥವಾ ಗಂಡ; ಮತ್ತು

(ಬಿ) ಸದಸ್ಯನ/ ಳ ಗಂಡ: ಹೆಂಡತಿ ಬದುಕಿರದಿದ್ದಾಗ ವಯಸ್ಕ ಗಂಡು ಮಕ್ಕಳಲ್ಲಿ ಅಥವಾ ಅವಿವಾಹಿತ ಅಪ್ರಾಪ್ತ ವಯಸ್ಕ ಹೆಣ್ಣು ಮಕ್ಕಳಲ್ಲಿ ಹಿರಿಯ ವ್ಯಕ್ತಿಗೆ:

ಪರಂತು, ಕುಟುಂಬ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ ಮೃತನಾದರೆ ಅಥವಾ ವಿವಾಹವಾದರೆ ಅಥವಾ ಪ್ರಾಪ್ತ ವಯಸ್ಕನಾದರೆ ಸಂದಾಯ ಮಾಡಬೇಕಾದ ನಿವೃತ್ತಿ ವೇತನವನ್ನು ಆದ್ಯತೆಯ ಕ್ರಮಾಂಕದಲ್ಲಿ ಅವನ ನಂತರ ಕಿರಿಯನಾದ ವ್ಯಕ್ತಿಗೆ ವೇತನವು ಸಂದಾಯವಾಗತಕ್ಕದ್ದು.

1. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

11ಸಿ. ಆತಿಥ್ಯ ಭತ್ಯೆ.- (1) ವಿರೋಧ ಪಕ್ಷದ ನಾಯಕನಿಗೆ ವರ್ಷಕ್ಕೆ [5][[4][[3][2][[1][ಮೂರು ಲಕ್ಷ ರೂಪಾಯಿಗಳ][1]][2]][3]][4][5] ಆತಿಥ್ಯ ಭತ್ಯೆ ಸಂದಾಯವಾಗತಕ್ಕದ್ದು.

1. 2001ರ ಅಧಿನಿಯಮ 14ರ ಮೂಲಕ 1.12.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪ-ಸಭಾಪತಿ, ಉಪ-ಸಭಾಧ್ಯಕ್ಷ [2][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧಪಕ್ಷದ ಮುಖ್ಯಸಚೇತಕ][2] ಇವರಿಗೆ [1][ವರ್ಷಕ್ಕೆ [6][5][[4][[3][2][ಮೂರು ಲಕ್ಷ ರೂಪಾಯಿಗಳ][2]][3]][4]][5]][6] ಆತಿಥ್ಯ ಭತ್ಯೆ ಸಂದಾಯವಾಗತಕ್ಕದ್ದು.][1]

1. 2001ರ ಅಧಿನಿಯಮ 14ರ ಮೂಲಕ 1.12.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
3. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][[1][11ಡಿ. XXX.][1]][2]

1. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

12. ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್‌ನ ಸದಸ್ಯರು-ಇವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳು ಮತ್ತು ವೈದ್ಯಕೀಯ [1][ಮತ್ತು ಇತರೆ][1] ಸೌಲಭ್ಯಗಳು.- ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿರ್ಧರಿಸಲಾದಂಥ ಷರತ್ತುಗಳಿಗೆ ಒಳಪಟ್ಟು,-

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 1.4.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎ) ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಸದಸ್ಯರಿಗೆ ಪ್ರವಾಸಗಳಿಗೆ ಸಂಬಂಧಿಸಿದಂತೆ ನಿಯಮಿಸಲಾದಂಥ ಷರತ್ತುಗಳಿಗೆ ಒಳಪಟ್ಟು ಅಥವಾ ಕಿಲೋಮೀಟರು ಆಧಾರದ ಮೇಲೆ ಲೆಕ್ಕ ಹಾಕಿದ ಪ್ರಯಾಣ ಭತ್ಯೆಯ ಬದಲು ಪ್ರತಿಯೊಂದು ಸಭೆಗೆ ಒಂದು ಸಾವಿರದ ಐದು ನೂರು ರೂಪಾಯಿಗಳ ನಿಗದಿ ಪ್ರಯಾಣ ಭತ್ಯೆಯನ್ನು, ಯಾವುದೇ ಬಗೆಯ ಪ್ರಯಾಣವಾಗಿರಲಿ ಅದಕ್ಕೆ ಪ್ರತಿ ಕಿಲೋಮೀಟರಿಗೆ [2][ಮೂವತ್ತೈದು ರೂಪಾಯಿಗಳ][2] ದರದಲ್ಲಿ ಪ್ರಯಾಣ ಭತ್ಯವು ಸಂದಾಯವಾಗತಕ್ಕದ್ದು.][1]

1. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಬಿ) ಎಲ್ಲ ಸದಸ್ಯರಿಗೆ,-

1. (i) ಮತ್ತು (ii) ಖಂಡಗಳನ್ನು 1957ರ ಅಧಿನಿಯಮ ಸಂಖ್ಯೆ 27ರ ಮೂಲಕ 1.6.1957 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ಅವರು ಸಭೆಗೆ ಹಾಜರಾದುದಕ್ಕಾಗಿ ಮತ್ತು ಸಭೆಯ ನಡುವೆ ಬರುವ ಗೈರುಹಾಜರಿಯ ನಿಯಮಿಸಿದ ಮಧ್ಯಂತರ ರಜಾದಿನಗಳಿಗಾಗಿ ರಾಜ್ಯದ ಒಳಗಡೆ, ಪ್ರತಿ ದಿನಕ್ಕೆ [5][[4][[3][[2][ಎರಡು ಸಾವಿರದ ಐದು ನೂರು ರೂಪಾಯಿಗಳು][2]][3]][4]][5] ಮತ್ತು ಭಾರತದಲ್ಲಿ ಇತರ ಹೊರ ರಾಜ್ಯಗಳಲ್ಲಿ, ಪ್ರತಿ ದಿನಕ್ಕೆ [5][[4][[3][[2][ಮೂರು ಸಾವಿರದ ಐದು ನೂರು ರೂಪಾಯಿಗಳು][5] ಮತ್ತು ಬಿಲ್ಲುಗಳನ್ನು ಒದಗಿಸುವುದಕ್ಕೆ ಒಳಪಟ್ಟು, ಅನುಸೂಚಿತ ದರಪಟ್ಟಿಯಲ್ಲಿ ವಸತಿ ಮತ್ತು ಬೋರ್ಡಿಂಗ್ ಅನ್ನು ಒದಗಿಸುವ ಹೋಟೆಲ್ ಅಥವಾ ಇತರ ನೋಂದಾಯಿತ ಸಂಸ್ಥೆಗಳಲ್ಲಿ ಉಳಿದುಕೊಳ್ಳಲು ಪ್ರತಿದಿನಕ್ಕೆ [5][ಏಳು ಸಾವಿರ ರೂಪಾಯಿಗಳು][5] ಮತ್ತು ಸ್ಥಳೀಯ ಸಾರಿಗೆಗಾಗಿ [5][ಎರಡು ಸಾವಿರ ರೂಪಾಯಿಗಳ][2]][3]][4]][5] ದಿನಭತ್ಯ ಸಂದಾಯವಾಗತಕ್ಕದ್ದು;][1]

1. 1991ರ ಅಧಿನಿಯಮ ಸಂಖ್ಯೆ 5ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2011ರ ಅಧಿನಿಯಮ 6ರ ಮೂಲಕ 5.2.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ಎಲ್ಲಾ ಸದಸ್ಯರಿಗೆ [1][xxx][1] [2][ಸಭೆ ಪ್ರಾರಂಭವಾಗುವ ಎರಡು ದಿನಗಳ ಮೊದಲು ಮತ್ತು ಸಭೆ ಮುಕ್ತಾಯವಾದ ನಂತರದ ಎರಡು ದಿನಗಳಿಗೆ ದಿನಭತ್ಯವು ಸಂದಾಯವಾಗತಕ್ಕದ್ದು.][2]][1]

1. 1981ರ ಅಧಿನಿಯಮ ಸಂಖ್ಯೆ 26ರ ಮೂಲಕ 9.4.1981 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 1974ರ ಅಧಿನಿಯಮ ಸಂಖ್ಯೆ 19ರ ಮೂಲಕ 27.5.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(iii) ವಿದೇಶದಲ್ಲಿ ಅಧ್ಯಯನ ಪ್ರವಾಸಗಳ ಸಂಬಂಧದಲ್ಲಿ ಸದಸ್ಯರ ಪ್ರಯಾಣ ಭತ್ಯೆ ಕ್ಲೇಮುಗಳನ್ನು, ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 03 ಎಸ್‌ಆರ್‌ಎ 2011, ದಿನಾಂಕ: 15.11.2011ರ ಅನ್ವಯ ಕ್ರಮಬದ್ಧಗೊಳಿಸತಕ್ಕದ್ದು.][1]

1. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][[2][(ಸಿ) [3][[4][ಪ್ರತಿಯೊಬ್ಬ ಸದಸ್ಯ ಅಥವಾ ಮಾಜಿ ಸದಸ್ಯ][4] ಮತ್ತು ಅವನೊಂದಿಗೆ ವಾಸಿಸುವ ಅಥವಾ ಅವಲಂಬಿತರಾದ ಅವನ ಕುಟುಂಬ ಸದಸ್ಯರು,-][3]

1. 1967ರ ಅಧಿನಿಯಮ ಸಂಖ್ಯೆ 8ರ ಮೂಲಕ 10.8.1967 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 1.4.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(i) ರಾಜ್ಯ ಸರ್ಕಾರವು ನಿರ್ವಹಿಸಿಕೊಂಡು ಬರುವ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ [1][ಅಥವಾ ಕರ್ನಾಟಕ ವಿಧಾನ ಮಂಡಲವು ಅಧಿಸೂಚಿಸಿದ ಆಸ್ಪತ್ರೆ ಅಥವಾ ಔಷಧಾಲಯಗಳಲ್ಲಿ][1] ನಿಯಮಿಸಬಹುದಾದಂಥ ಸ್ಥಳಾವಕಾಶ ಹಾಗೂ ನಿಯಮಿಸಬಹುದಾದಂಥ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಯನ್ನು ಉಚಿತವಾಗಿ ಪಡೆದುಕೊಳ್ಳಲು;

1. 1997ರ ಅಧಿನಿಯಮ ಸಂಖ್ಯೆ 19ರ ಮೂಲಕ 1.9.1997 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ii) ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು, ಅವರು ಯಾವುದೇ ಇತರೆ ಸ್ಥಳದಲ್ಲಿ ಪಡೆದುಕೊಂಡ ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗೆ ಖರ್ಚು ಮಾಡಿದ ವೆಚ್ಚಗಳನ್ನು ವಾಪಸ್ಸುಪಡೆಯಲು;

[1][(iii) 11ಎ ಪ್ರಕರಣದ ಅಡಿಯಲ್ಲಿ ನಿವೃತ್ತಿ ವೇತನವನ್ನು ಸ್ವೀಕರಿಸುತ್ತಿರುವ ಪ್ರತಿಯೊಬ್ಬ ಮಾಜಿ-ಸದಸ್ಯನು, ಸದರಿ ತಿಂಗಳಿನ ಅವಧಿಯಲ್ಲಿ ವೈದ್ಯಕೀಯ ಮರುಪಾವತಿಯ ಕ್ಲೇಮು ಏನಾದರೂ ಇದ್ದಲ್ಲಿ ಅದರಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸತಕ್ಕ ಷರತ್ತಿಗೆ ಒಳಪಟ್ಟು, ಪ್ರತಿ ತಿಂಗಳು [3][[2][ಇಪ್ಪತ್ತು ಸಾವಿರ][2] ರೂಪಾಯಿಗಳ][3] ನಿಗದಿತ ವೈದ್ಯಕೀಯ ಭತ್ಯೆಗೆ ಹಕ್ಕುಳ್ಳವನಾಗಿರತಕ್ಕದ್ದು.][1]

- ಹಕ್ಕುಳ್ಳವರಾಗಿರತಕ್ಕದ್ದು.][2]

1. 2012ರ ಅಧಿನಿಯಮ 22ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][1][(iv) 11ಬಿ ಪ್ರಕರಣದ ಅಡಿಯಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು, ಪ್ರತಿ ತಿಂಗಳಿಗೆ [3][ಹತ್ತು ಸಾವಿರ ರೂಪಾಯಿಗಳ]3 ನಿಗದಿತ ವೈದ್ಯಕೀಯ ಭತ್ಯೆಗೆ ಅರ್ಹನಾಗಿರತಕ್ಕದ್ದು.][1]][2]

1. 2013ರ ಅಧಿನಿಯಮ 8ರ ಮೂಲಕ 17.01.2013 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2015ರ ಅಧಿನಿಯಮ 18ರ ಮೂಲಕ 30.4.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿಸಿ) ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಪ್ರತಿಯೊಬ್ಬ ಸದಸ್ಯನು, ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆಯಾಗಿ [5][ಪ್ರತಿ ತಿಂಗಳಿಗೆ [7][6][4][3][2][ಎಂಬತ್ತು ಸಾವಿರ ರೂಪಾಯಿಗಳ]3]4]5]6]7 ಮೊಬಲಗನ್ನು ನಿಯಮಿಸಬಹುದಾದ ರೀತಿಯಲ್ಲಿ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.][2]][1]

1. 1978ರ ಅಧಿನಿಯಮ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದ್ದು, ಪುನಃ 2004ರ ಅಧಿನಿಯಮ 1ರ ಮೂಲಕ 1.4.2003ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
4. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಸಿಸಿಸಿ) ಸಚಿವ, ರಾಜ್ಯ ಸಚಿವ, ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [3][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ]3 ಇವರೂ ಸೇರಿದಂತೆ ಪ್ರತಿಯೊಬ್ಬ ಸದಸ್ಯನು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಒಂದು ಅಥವಾ ಹೆಚ್ಚಿನ ಪ್ರಯಾಣಗಳನ್ನು ಒಬ್ಬನೇ ಆಗಲಿ ಅಥವಾ ಜೊತೆಗಾರನೊಂದಿಗೆ ಆಗಲಿ ಭಾರತದಲ್ಲಿ ವಿಮಾನದಲ್ಲಾಗಲಿ ಅಥವಾ ರೈಲ್ವೆಯ ಮೂಲಕ ಯಾವುದೇ ದರ್ಜೆಯಲ್ಲಿ ಪ್ರಯಾಣ ಮಾಡಲು ಪ್ರವಾಸದ ಉದ್ದೇಶಕ್ಕಾಗಿ ಏಪ್ರಿಲ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ [6][5][4][2][ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು]2]4]5]6 ಎರಡು ಸಮಾನ ಕಂತುಗಳಲ್ಲಿ ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು. ಅಂಥ ಪ್ರಯಾಣಗಳನ್ನು ಮಾಡಿದಾಗ ಸದಸ್ಯರು ಪ್ರಯಾಣ ಅಥವಾ ದಿನಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.][1]

1. 1992ರ ಅಧಿನಿಯಮ ಸಂಖ್ಯೆ 16ರ ಮೂಲಕ 1.11.1990 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2001ರ ಅಧಿನಿಯಮ ಸಂಖ್ಯೆ 14ರ ಮೂಲಕ 1.12.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
4. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಡಿ) (ಎ) ಖಂಡದ ಮೇರೆಗೆ ಪ್ರಯಾಣ ಭತ್ಯಕ್ಕೆ ಹಕ್ಕುಳ್ಳವರಾದ ಸದಸ್ಯರು, ಬೆಂಗಳೂರು ನಗರದಲ್ಲಿ ಸಭೆಗಳ ಸಂಬಂಧದಲ್ಲಿ ಅವರ ಹಾಜರಾತಿಯು ಅಗತ್ಯವಿರುವ ದಿನಗಳಲ್ಲದೆ ಇತರ ದಿನಗಳಲ್ಲಿ ಅವರು ತಂಗಬೇಕಾದಾಗ, [2][ಮಂಡಲಿಯು, ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಬಾಡಿಗೆ]2 ಯನ್ನು ಸಂದಾಯ ಮಾಡಿದ ಮೇಲೆ ಪೂರ್ಣವಾಗಿ ಸುಸಜ್ಜಿತವಾದ ಸ್ವಳಾವಕಾಶವನ್ನು ಅವರಿಗೆ ಒದಗಿಸತಕ್ಕದ್ದು.][1]

1. 1957ರ ಅಧಿನಿಯಮ ಸಂಖ್ಯೆ 27ರ ಮೂಲಕ 1.6.1957 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2004ರ ಅಧಿನಿಯಮ ಸಂಖ್ಯೆ 1ರ ಮೂಲಕ 1.4.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಡಿಡಿ) ಸದಸ್ಯರು ನವದೆಹಲಿಯಲ್ಲಿ ತಂಗಬೇಕಾದ ದಿನಗಳಲ್ಲಿ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದರಗಳಲ್ಲಿ ಬಾಡಿಗೆಯನ್ನು ಸಂದಾಯಮಾಡಿದ ಮೇಲೆ [2][ಕರ್ನಾಟಕ ಭವನ][2]ದಲ್ಲಿ ಸ್ಥಳಾವಕಾಶವನ್ನು ಒದಗಿಸಬಹುದು.][1]

1. 1968ರ ಅಧಿನಿಯಮ ಸಂಖ್ಯೆ 18ರ ಮೂಲಕ 24.10.1968 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(ಇ) ಸಮಿತಿಯು ಕೈಗೊಂಡ ಪ್ರಯಾಣಗಳ ಸಂಬಂಧದಲ್ಲಿ ಸಮಿತಿಯ ಸದಸ್ಯರಿಗೆ,-

(i) ಸಮಿತಿಯು ಕೇವಲ ವಿಧಾನ ಪರಿಷತ್ತಿನ ಸದಸ್ಯರ ಸಮಿತಿಯಾಗಿದ್ದಾಗ, ಸಭಾಪತಿಯ ಅನುಮೋದನೆಯೊಂದಿಗೆ;

(ii) ಸಮಿತಿಯು ಕೇವಲ ವಿಧಾನ ಸಭಾ ಸದಸ್ಯರುಗಳ ಸಮಿತಿಯಾಗಿದ್ದಾಗ, ಸಭಾಧ್ಯಕ್ಷರ ಅನುಮೋದನೆಯೊಂದಿಗೆ; ಮತ್ತು

(iii) ಸಮಿತಿಯು ವಿಧಾನ ಮಂಡಲದ ಸದನಗಳ ಸದಸ್ಯರ ಸಮಿತಿಯಾಗಿದ್ದಾಗ, ಸಭಾಪತಿ ಮತ್ತು ಸಭಾಧ್ಯಕ್ಷರ ಅನುಮೋದನೆಯೊಂದಿಗೆ;

ಭಾರತದಲ್ಲಿ ರಾಜ್ಯದ ಒಳಗಡೆಯಾಗಲಿ ಅಥವಾ ರಾಜ್ಯದ ಹೊರಗಡೆಯಾಗಲಿ ರೈಲಿನ ಮೂಲಕ ಮಾಡಲಾದ ಪ್ರಯಾಣಗಳಿಗೆ ಮತ್ತು ರಸ್ತೆ ಮೂಲಕ ಮಾಡಿದ ಪ್ರಯಾಣಗಳಿಗೆ, (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ [2][ಮತ್ತು ರಾಜ್ಯದೊಳಗೆ ಮತ್ತು ಭಾರತದಲ್ಲಿ ರಾಜ್ಯದ ಹೊರಗೆ ವಿಮಾನದ ಮೂಲಕ ಪ್ರಯಾಣಕ್ಕಾಗಿ ವಾಸ್ತವಿಕ ವಿಮಾನ ದರವನ್ನು ಸಂದಾಯ ಮಾಡತಕ್ಕದು][2] ಮತ್ತು ರಾಜ್ಯದ ಹೊರಗಡೆ ಭಾರತದಲ್ಲಿ ವಿಮಾನದ ಮೂಲಕ ಮಾಡಲಾದ ಪ್ರಯಾಣಗಳಿಗೆ, ಅಂಥ ಪ್ರಯಾಣಗಳಿಗೆ ಸಂದಾಯಮಾಡಿದ ವಿಮಾನಯಾನ ದರದ ಒಂದು ಐದನೇ ಒಂದು ಭಾಗದಷ್ಟು ಪ್ರಯಾಣ ಭತ್ಯವನ್ನು ಮತ್ತು ವಿಮಾನದ ಮೂಲಕ ಪ್ರಯಾಣ ಮಾಡುವಾಗ ಉಂಟಾಗುವ ಅಪಘಾತಗಳ ಸಂಬಂಧದಲ್ಲಿ ವಿಮೆಗಾಗಿ ನಿಯಮಿಸಬಹುದಾದಂಥ ವಿಮಾಕಂತು ಮತ್ತು ರಾಜ್ಯದ ಒಳಗೆ ಯಾವುದೇ ಸ್ಥಳದಲ್ಲಿ ತಂಗುವ ದಿನಗಳಿಗೆ ಪ್ರತಿ ದಿವಸಕ್ಕೆ ಹದಿನೈದು ರೂಪಾಯಿಗಳು ಮತ್ತು ರಾಜ್ಯದ ಹೊರಗಡೆ ಯಾವುದೇ ಸ್ಥಳದಲ್ಲಿ ತಂಗುವ ಪ್ರತಿ ದಿವಸಕ್ಕೆ ಇಪ್ಪತ್ತೈದು ರೂಪಾಯಿಗಳ ದಿನಭತ್ಯವು ಸಂದಾಯವಾಗತಕ್ಕದ್ದು:

ಪರಂತು, ಈ ಖಂಡದ ಮೇರೆಗೆ ಸಂದಾಯಮಾಡುವ ವಿಮಾನ ಪ್ರಯಾಣದ ಒಂದು ದರದ ಐದನೇ ಒಂದು ಭಾಗವು ಮೂವತ್ತು ರೂಪಾಯಿಗಳನ್ನು ಮೀರಿದ್ದಾಗ, ಹಾಗೆ ಸಂದಾಯವಾಗಬೇಕಾದ ಮೊಬಲಗನ್ನು ಮೂವತ್ತು ರೂಪಾಯಿಗೆ ಮಿತಿಗೊಳಿಸತಕ್ಕದ್ದು.][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಎಫ್) ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಅಥವಾ ಅವೆರಡರ ಸದನ ಸಮಿತಿಯ ಅಧ್ಯಕ್ಷನಾಗಿರುವ ಸದನದ ಸದಸ್ಯನು ಸಮಿತಿಯ ಅಧ್ಯಕ್ಷನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸುವ ಸಂಬಂಧದಲ್ಲಿ ಭಾರತದಲ್ಲಿ ರಾಜ್ಯದ ಹೊರಗೆ ಪ್ರಯಾಣಮಾಡುವ ಸಂದರ್ಭದಲ್ಲಿ,-

(i) ಅಂಥ ಸದಸ್ಯನು ರೈಲಿನ ಮೂಲಕ ಅಥವಾ ರಸ್ತೆಯ ಮೂಲಕ ಪ್ರಯಾಣಿಸಿದರೆ, (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಹಾಗೂ ವಿಮಾನ ಮೂಲಕ ಪ್ರಯಾಣಿಸಿದರೆ, ವಿಮಾನಯಾನದ ಒಂದು ಕಡೆಯ ಪ್ರಯಾಣ ದರದ ಒಂದು ಐದನೇ ಒಂದರಷ್ಟು ದರದಲ್ಲಿ ಪ್ರಯಾಣ ಭತ್ಯೆಯನ್ನು ಅವರಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಸಂದಾಯವಾಗಬೇಕಾದ ವಿಮಾನಯಾನದ ದರದ ಐದನೇ ಒಂದು ಭಾಗವು ಮೂವತ್ತು ರೂಪಾಯಿಗಳನ್ನು ಮೀರಿದ್ದರೆ ಹಾಗೆ ಸಂದಾಯವಾಗಬೇಕಾದ ಮೊಬಲಗನ್ನು ಮೂವತ್ತು ರೂಪಾಯಿಗಳಿಗೆ ಮಿತಿಗೊಳಿಸತಕ್ಕದ್ದು;

(ii) ವಿಮಾನದ ಮೂಲಕ ಪ್ರಯಾಣ ಮಾಡುವಾಗ ಉಂಟಾಗಬಹುದಾದ ಅಪಘಾತಗಳ ಸಂಬಂಧದಲ್ಲಿ ವಿಮೆಗಾಗಿ ನಿಯಮಿಸಬಹುದಾದಂಥ ವಿಮಾ ಕಂತು;

(iii) ಪ್ರತಿ ದಿನಕ್ಕೆ ಇಪ್ಪತ್ತೈದು ರೂಪಾಯಿಗಳ ದಿನಭತ್ಯ; ಮತ್ತು

(iv) ಅಂಥ ಸಮಿತಿಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಭಾಗವಹಿಸಲು ಅವರು ಉಳಿದುಕೊಂಡಿದ್ದ ಸ್ಥಳದಲ್ಲಿ ಸಾರಿಗೆ ಸೌಲಭ್ಯಕ್ಕಾಗಿ ನಿಯಮಿಸಬಹುದಾದಂಥ ವೆಚ್ಚಗಳು;][1]

1. 1976ರ ಅದಿನಿಯಮ ಸಂಖ್ಯೆ 13ರ ಮೂಲಕ 1.3.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಜಿ) [2][ಸಚಿವ, ರಾಜ್ಯ ಸಚಿವ, ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [4][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][4] ಇವರೂ ಸೇರಿದಂತೆ ಸದಸ್ಯರು [3][ತಾವು ಆಯ್ಕೆಮಾಡಿದ ಸ್ಥಳದಲ್ಲಿ ಸರ್ಕಾರದ ವೆಚ್ಚದಲ್ಲಿ][3] ದೂರವಾಣಿ ಹಾಕಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು;][2]

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 1.4.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1979ರ ಅಧಿನಿಯಮ ಸಂಖ್ಯೆ 5ರ ಮೂಲಕ 27.12.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1979ರ ಅಧಿನಿಯಮ ಸಂಖ್ಯೆ 31ರ ಮೂಲಕ 17.10.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

ಮೂಲ ಠೇವಣಿ, ಸ್ಥಾಪನೆ ಮತ್ತು ಬಾಡಿಗೆ ವೆಚ್ಚಗಳ ಸಂಬಂಧದಲ್ಲಿನ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು. ಒಬ್ಬ ಸದಸ್ಯನು ತನ್ನ ಸ್ವಂತ ವೆಚ್ಚದಲ್ಲಿ ದೂರವಾಣಿ ಹಾಕಿಸಿಕೊಂಡಿರುವಾಗ [1][ಅಂಥ ಸ್ಥಳದಲ್ಲಿ][1] ಅದಕ್ಕೆ ಸಂಬಂಧಿಸಿದ ಬಾಡಿಗೆ ವೆಚ್ಚಗಳನ್ನೂ ರಾಜ್ಯ ಸರ್ಕಾರವು ಭರಿಸತಕ್ಕದ್ದು.

1. 1979ರ ಅಧಿನಿಯಮ ಸಂಖ್ಯೆ 31ರ ಮೂಲಕ 17.10.1979 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[7][[6][[5][[4][[3][[2][[1][(ಹೆಚ್) (i) ದೂರವಾಣಿ ಮತ್ತು ಮೊಬೈಲ್ ಕರೆಗಳು, ಚುನಾವಣಾ ಕ್ಷೇತ್ರ ಭತ್ಯೆಗಳು ಹಾಗೂ ಅಂಚೆ ವೆಚ್ಚಗಳನ್ನು ಭರಿಸಲು ಅತನು ಮಾಡಿದ ವೆಚ್ಚಗಳಿಗಾಗಿ ಪ್ರತಿ ತಿಂಗಳಿಗೆ ಒಂದು ಲಕ್ಷದ ಹತ್ತು ಸಾವಿರ ರೂಪಾಯಿಗಳು;

(ii) ಸದಸ್ಯನು, ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಆಪ್ತ ಸಹಾಯಕನಿಗೆ ಮತ್ತು ರೂಂಬಾಯ್‌ಗಳ ಸಂಬಳ ಎಂದು ಇಪ್ಪತ್ತೈದು ಸಾವಿರ ರೂಪಾಯಿಗಳು.][1]][2]][3]][4]][5]][6]][7]

1. 2001ರ ಅಧಿನಿಯಮ ಸಂಖ್ಯೆ 14ರ ಮೂಲಕ 1.12.2000 ದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ 24ರ ಮೂಲಕ 24.8.2005 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.
4. 2011ರ ಅಧಿನಿಯಮ 32ರ ಮೂಲಕ 4.7.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2015ರ ಅಧಿನಿಯಮ 18ರ ಮೂಲಕ 30.04.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2022ರ ಅಧಿನಿಯಮ 10ರ ಮೂಲಕ ದಿನಾಂಕ: 01.04.2022ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2025ರ ಅಧಿನಿಯಮ 25ರ ಮೂಲಕ ದಿ: 04.04.2025ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ವಿವರಣೆ.- ಈ ಪ್ರಕರಣದ ಉದ್ದೇಶಕ್ಕಾಗಿ, 'ಸಭೆ' ಎಂದರೆ ವಿಧಾನ ಸಭೆ ಅಥವಾ ವಿಧಾನ ಪರಿಷತ್‌ನ ಸಭೆ ಅಥವಾ ಸದರಿ ವಿಧಾನ ಸಭೆ ಅಥವಾ ಪರಿಷತ್ ಅಥವಾ ಅವೆರಡರ ಯಾವುದೇ ಸಮಿತಿಯ ಸಭೆ.

[1][12ಎ. xxxx][1]

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 1.4.1978 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

13. ಸಚಿವ [1][ರಾಜ್ಯ ಸಚಿವ][1] ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಪತಿ, [2][ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕರು [5][ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][2]][5] ಇವರು ಸದಸ್ಯರಾಗಿ ಸಂಬಳ ಪಡೆಯದಿರುವುದು.- (1) ಸಚಿವ, [1][ರಾಜ್ಯ ಸಚಿವ][1], ಉಪಸಚಿವ, [3][ಸಭಾಪತಿ, ಉಪ-ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ][3], [4][ಅಥವಾ ವಿರೋಧ ಪಕ್ಷದ ನಾಯಕರು [5][ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][4]][5] ತಮ್ಮ ಅಧಿಕಾರ ಸ್ಥಾನದ ಸಂಬಳ ಮತ್ತು ಭತ್ಯಗಳನ್ನು ಪಡೆಯುತ್ತಿರುವಾಗ ಸಂದರ್ಭಾನುಸಾರ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಯಾವುದೇ ಸಂಬಳ ಅಥವಾ ಭತ್ಯವನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದಲ್ಲ:

1. 1978ರ ಅಧಿನಿಯಮ ಸಂಖ್ಯೆ 31ರ ಮೂಲಕ 26.12.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1975ರ ಅಧಿನಿಯಮ ಸಂಖ್ಯೆ 3ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

[1][ಪರಂತು, 10ಬಿ ಪ್ರಕರಣದ ಮೇರೆಗೆ ಒದಗಿಸಲಾದ ಸೌಲಭ್ಯವನ್ನು ಪಡೆದುಕೊಳ್ಳದ ಉಪಕೆಸಭಾಪತಿ ಅಥವಾ ಉಪ-ಸಭಾಧ್ಯಕ್ಷನು 12ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಭತ್ಯಗಳನ್ನು ಸಂದರ್ಭಾನುಸಾರ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಪಡೆದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಮತ್ತೂ ಪರಂತು, ಅವನು ಸಂದರ್ಭಾನುಸಾರ 8ನೇ ಪ್ರಕರಣದ ಮೇರೆಗೆ ಅಥವಾ 12ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಅನ್ವಯಿಸುವ ಭತ್ಯಗಳಿಗೆ ಸಹ ಹಕ್ಕುಳ್ಳವರಾಗಿರತಕ್ಕದ್ದು.][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(1ಎ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ 10ಎಫ್ ಪ್ರಕರಣದಲ್ಲಿ ಅಥವಾ 10ನೇ ಪ್ರಕರಣದಲ್ಲಿ ಒದಗಿಸಲಾದ ಸೌಲಭ್ಯವನ್ನು ಪಡೆದುಕೊಳ್ಳದಿರುವ ವಿರೋಧ ಪಕ್ಷದ ನಾಯಕ [2][,ಸರ್ಕಾರಿ ಮುಖ್ಯ ಸಚೇತಕ ಅಥವಾ ವಿರೋಧ ಪಕ್ಷದ ಮುಖ್ಯ ಸಚೇತಕ][2] ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಅಥವಾ ವಿಧಾನ ಸಭೆ ಅಥವಾ ವಿಧಾನ ಪರಿಷತ್ತು ಅಥವಾ ಅವೆರಡರ ಯಾವುದೇ ಸಮಿತಿಯ ಅಧ್ಯಕ್ಷರಾಗಿ 12ನೇ ಪ್ರಕರಣದ (ಎ), (ಬಿ), (ಸಿ) ಮತ್ತು (ಎಫ್) ಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಭತ್ಯಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.][1]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

(2) [1][ಸಭಾಪತಿ, ಉಪ-ಸಭಾಪತಿ, [2][ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ,][1] [3][,ಸರ್ಕಾರಿ ಮುಖ್ಯ ಸಚೇತಕ ಅಥವಾ ವಿರೋಧ ಪಕ್ಷದ ಮುಖ್ಯ ಸಚೇತಕ][2]][3]ಇವರು ತಮ್ಮ ಅಧಿಕಾರದ ಅವಧಿಯಲ್ಲಿ, ಸಂದರ್ಭಾನುಸಾರ [1][ಸಭಾಪತಿ, ಉಪ-ಸಭಾಪತಿ, [2][ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ,][1] ವಿರೋಧ ಪಕ್ಷದ ನಾಯಾಕ, ಅಥವಾ ಸರ್ಕಾರಿ ಮುಖ್ಯ ಸಚೇತಕರು][2] ತನ್ನ ಕರ್ತವ್ಯದ ಹೊರತಾದ ಯಾವುದೇ ವೃತ್ತಿ ನಡೆಸತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರದಲ್ಲಿ ನಿರತನಾಗತಕ್ಕದ್ದಲ್ಲ ಅಥವಾ ಪರಿಶ್ರಮಧನ ಪಡೆಯಲು ಇತರ ಯಾವುದೇ ಉದ್ಯೋಗವನ್ನು ಮಾಡತಕ್ಕದ್ದಲ್ಲ.

1. 1975ರ ಅಧಿನಿಯಮ ಸಂಖ್ಯೆ 3ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

[1][(3) xxx][1]

1. 1975ರ ಅಧಿನಿಯಮ ಸಂಖ್ಯೆ 3ರ ಮೂಲಕ 14.10.1974 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][13ಎ. ಮೋಟಾರು ಕಾರುಗಳು ಮತ್ತು ಮೋಟಾರು ಸೈಕಲ್‌ಗಳ ಖರೀದಿಗಾಗಿ ಮುಂಗಡಗಳ ಮಂಜೂರಾತಿ.- ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಬ್ಬ ಸದಸ್ಯನು ಮೋಟಾರು ಕಾರು ಅಥವಾ ಮೋಟಾರು ಸೈಕಲ್ ಖರೀದಿಗಾಗಿ ಮುಂಗಡ ಮಂಜೂರಾತಿಗೆ ಹಕ್ಕುಳ್ಳವರಾಗಿರತಕ್ಕದ್ದು.

1. 1985ರ ಅಧಿನಿಯಮ ಸಂಖ್ಯೆ 38ರ ಮೂಲಕ 1.4.1985 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

13ಬಿ. ಬಾಕಿಗಳ ವಸೂಲಿ.- ವಿಧಾನ ಮಂಡಲದ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ವ್ಯಕ್ತಿಯಿಂದ ಸರ್ಕಾರ ಅಥವಾ ವಿಧಾನ ಮಂಡಲದ ಸಚಿವಾಲಯಕ್ಕೆ ಬಾಕಿ ಇರುವ ಯಾವುದೇ ಮೊತ್ತದ ವಸೂಲಿಯ ಯಾವುದೇ ಇತರೆ ವಿಧಾನಕ್ಕೆ ಬಾಧಕವಿಲ್ಲದಂತೆ,-

(ಎ) 11ನೇ ಪ್ರಕರಣದ ಮೇರೆಗೆ ಸಂದಾಯವಾಗತಕ್ಕ ಆತನ ಸಂಬಳದಿಂದ;

(ಬಿ) 11ಎ ಪ್ರಕರಣದ ಮೇರೆಗೆ ಸಂದಾಯವಾಗತಕ್ಕ ಆತನ ನಿವೃತ್ತಿ ವೇತನದಿಂದ;

(ಸಿ) ಅದು ಭೂಕಂದಾಯದ ಬಾಕಿ ಆಗಿದ್ದರೆ ಹೇಗೋ ಹಾಗೆ

- ವಸೂಲಿ ಮಾಡಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ ವಿಧಾನ ಮಂಡಲದ ಸದಸ್ಯ ಎಂಬ ಪದವು ಸಚಿವ, ರಾಜ್ಯ ಸಚಿವ, ಉಪ-ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ-ಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, [1][ಸರ್ಕಾರಿ ಮುಖ್ಯ ಸಚೇತಕ ಅಥವಾ ವಿರೋಧಪಕ್ಷದ ಮುಖ್ಯಸಚೇತಕ][1] ಇವರುಗಳನ್ನು ಒಳಗೊಳ್ಳುತ್ತದೆ.

1.2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

[1][**13ಸಿ. ಕ್ಷೇಮಾಭಿವೃದ್ಧಿ ನಿಧಿಯ ಸ್ಥಾಪನೆ.-** (1) ಕರ್ನಾಟಕ ಶಾಸಕರ ಕ್ಷೇಮಾಭಿವೃದ್ಧಿ ನಿಧಿ (ಇದರಲ್ಲಿ ಇನ್ನು ಮುಂದೆ ನಿಧಿ ಎಂದು ಉಲ್ಲೇಖಿಸಲಾಗಿದೆ) ಎಂದು ಕರೆಯಲಾಗುವ ಒಂದು ನಿಧಿಯು ಸ್ಥಾಪಿತವಾಗತಕ್ಕದ್ದು.

1. 1992ರ ಅಧಿನಿಯಮ ಸಂಖ್ಯೆ 16ರ ಮೂಲಕ 8.5.1992 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ನಿಧಿಯು,-

(ಎ) ಕರ್ನಾಟಕ ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಯಾರೇ ಸದಸ್ಯ ಅಥವಾ ಮಾಜಿ ಸದಸ್ಯರು ನೀಡಬಹುದಾದಂಥ ಮೊಬಲಗು;

(ಬಿ) ಸರ್ಕಾರ ಅಥವಾ ಯಾರೇ ಇತರ ವ್ಯಕ್ತಿಗಳಿಂದ ನಿಧಿಗೆ ಕಾಣಿಕೆ ಅಥವಾ ದಾನ ಅಥವಾ ದೇಣಿಗೆಯಾಗಿ ನೀಡಬಹುದಾದಂಥ ಮೊಬಲಗು;

(ಸಿ) ಸದರಿ ನಿಧಿಯಲ್ಲಿನ ಮೊಬಲಗಿನ ಮೇಲೆ ಗಳಿಸಲಾದ ಬಡ್ಡಿ

-ಇವುಗಳನ್ನು ಒಳಗೊಂಡಿರತಕ್ಕದ್ದು.

(3) ನಿಧಿಯನ್ನು ಕರ್ನಾಟಕ ಶಾಸಕರ ಕ್ಷೇಮಾಭಿವೃದ್ಧಿ ನಿಧಿ ಪ್ರಾಧಿಕಾರ ಎಂದು ಕರೆಯಲಾಗುವ ಪ್ರಾಧಿಕಾರವು ನಿಯಮಿಸಬಹುದಾದಂಥ ನಿಯಮಗಳಿಗೆ ಅನುಸಾರವಾಗಿ ಪ್ರವರ್ತಿಸತಕ್ಕದ್ದು ಅಥವಾ ಆಡಳಿತ ನಡೆಸತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು.

[2][(4) ಕರ್ನಾಟಕ ವಿಧಾನ ಸಭೆಯ ಕ್ಷೇಮಾಭಿವೃದ್ಧಿ ನಿಧಿ ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ,-

1. 1998ರ ಅಧಿನಿಯಮ 30ರ ಮೂಲಕ 24.11.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ)	ಸಭಾಧ್ಯಕ್ಷ, ಕರ್ನಾಟಕ ವಿಧಾನಸಭೆ	ಅಧ್ಯಕ್ಷರು
(ಬಿ)	ಸಂಸದೀಯ ವ್ಯವಹಾರಗಳ ಪ್ರಭಾರದಲ್ಲಿರುವ ಸಚಿವರು ಕರ್ನಾಟಕ ಸರ್ಕಾರ	ಸದಸ್ಯರು
(ಸಿ)	ವಿಧಾನ ಸಭೆಯ ವಿರೋಧ ಪಕ್ಷದ ನಾಯಕ	ಸದಸ್ಯರು
(ಡಿ)	ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಯು, ಪ್ರಾಧಿಕಾರದ ಕಾರ್ಯದರ್ಶಿಯಾಗಿರತಕ್ಕದ್ದು.	

(4ಎ) ಕರ್ನಾಟಕ ವಿಧಾನ ಪರಿಷತ್ತಿನ ಕ್ಷೇಮಾಭಿವೃದ್ಧಿ ನಿಧಿ ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ,-

(ಎ)	ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು	ಅಧ್ಯಕ್ಷರು
(ಬಿ)	ಸಂಸದೀಯ ವ್ಯವಹಾರಗಳ ಪ್ರಭಾರದಲ್ಲಿರುವ ಸಚಿವರು, ಕರ್ನಾಟಕ ಸರ್ಕಾರ	ಸದಸ್ಯರು
(ಸಿ)	ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ	ಸದಸ್ಯರು
(ಡಿ)	ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿಯು, ಪ್ರಾಧಿಕಾರದ ಕಾರ್ಯದರ್ಶಿಯಾಗಿರತಕ್ಕದ್ದು.][2]	

(5) ಸದರಿ ನಿಧಿಯಲ್ಲಿ ಜಮೆ ಇರುವ ಮೊತ್ತವನ್ನು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಈ ಕೆಳಕಂಡ ವ್ಯಕ್ತಿಗಳ ಪ್ರಯೋಜನಕ್ಕಾಗಿ ಅಥವಾ ಕಲ್ಯಾಣಕ್ಕಾಗಿ ಅನ್ವಯಿಸತಕ್ಕದ್ದು ಅಥವಾ ತೊಡಗಿಸತಕ್ಕದ್ದು ಅಥವಾ ಖರ್ಚು ಮಾಡತಕ್ಕದ್ದು,-

(i) 11ಎ ಪ್ರಕರಣದ ಮೇರೆಗೆ ನಿವೃತ್ತಿ ವೇತನಕ್ಕೆ ಹಕ್ಕುದಾರರಾದ ವ್ಯಕ್ತಿಗಳು;

(ii) ವಿಧಾನ ಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸುತ್ತಿರುವಾಗ ಮೃತರಾದ ವ್ಯಕ್ತಿಗಳ ಕುಟುಂಬ;

(iii) (i)ನೇ ಖಂಡದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳ ಮರಣದ ತರುವಾಯ ಅವರ ಕುಟುಂಬ;

ಟಿಪ್ಪಣಿ.- ಈ ಪ್ರಕರಣದ ಉದ್ದೇಶಕ್ಕಾಗಿ ಕುಟುಂಬ ಎಂದರೆ, 11ಬಿ ಪ್ರಕರಣದ (1)ನೇ ಉಪಪ್ರಕರಣದ ವಿವರಣೆಯಲ್ಲಿ ಅದಕ್ಕೆ ನೀಡಲಾಗಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.][1]

[1][**13ಡಿ. ಮಾನ್ಯತೆ ಪಡೆದ ಸಮೂಹಗಳಿಗೆ ಸೌಲಭ್ಯಗಳು.-** (1) ಮಾನ್ಯತೆ ಪಡೆದ ಸಮೂಹವು ದೂರವಾಣಿಗೆ ಮತ್ತು ಈ ಬಗ್ಗೆ ನಿಯಮಿಸಬಹುದಾದ ಅಂಥ ಸಚಿವಾಲಯ ಸೌಲಭ್ಯಗಳಿಗೆ ಹಕ್ಕುಳ್ಳದ್ದಾಗಿರತಕ್ಕದ್ದು:

ಪರಂತು, ಅಂಥ ಸೌಲಭ್ಯಗಳನ್ನು,-

(i) ವಿಧಾನಮಂಡಲ ಸಮಿತಿಯಲ್ಲಿ ಅಥವಾ ಇತರ ಸಮಿತಿಯಲ್ಲಿ, ಪರಿಷತ್ತು, ಮಂಡಳಿ, ಆಯೋಗ ಅಥವಾ ಸರ್ಕಾರವು ಸ್ಥಾಪಿಸಿದ ಇತರ ಸಂಸ್ಥೆಯಲ್ಲಿ ಯಾವುದೇ ಪದವನ್ನು ಧಾರಣ ಮಾಡಿರುವುದರ ಅಥವಾ ಪ್ರಾತಿನಿಧ್ಯವನ್ನು ಹೊಂದಿರುವುದರ ಬಲದಿಂದ ಅಂತಹುದೇ ದೂರವಾಣಿ ಮತ್ತು ಸಚಿವಾಲಯ ಸೌಲಭ್ಯಗಳನ್ನು ಒದಗಿಸಲಾಗಿರುವ; ಅಥವಾ

(ii) ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿರುವ ನಿಗಮದಿಂದ ಯಾವುದೇ ಇತರ ಸಾಮರ್ಥ್ಯದಲ್ಲಿ ಅಂತಹುದೇ ದೂರವಾಣಿ ಮತ್ತು ಸಚಿವಾಲಯ ಸೌಲಭ್ಯಗಳನ್ನು ಒದಗಿಸಲಾಗಿರುವ;

- ಅಂಥ ನಾಯಕರಿಗೆ ಅಥವಾ ಸಂದರ್ಭಾನುಸಾರ ಉಪ ನಾಯಕರಿಗೆ, ಒದಗಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದಲ್ಲಿ ದೊರೆಯತಕ್ಕ ಸೌಲಭ್ಯಗಳು ಮಾನ್ಯತೆ ಪಡೆದ ಸಮೂಹದ ನಾಯಕರ ಅಥವಾ ಸಂದರ್ಭಾನುಸಾರವಾಗಿ ಉಪನಾಯಕರ ಪದಾವಧಿಯ ಮುಕ್ತಾಯದೊಂದಿಗೆ ಮುಕ್ತಾಯವಾಗತಕ್ಕದ್ದು.][1]

1. 2012ರ ಅಧಿನಿಯಮ ಸಂಖ್ಯೆ 22ರ ಮೂಲಕ 28.4.2012 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

14. ಉಳಿಸುವಿಕೆ.- ಈ ಅಧಿನಿಯಮದಲ್ಲಿರುವುದಾವುದೂ ಒಬ್ಬ ನಿವೃತ್ತ ಸರ್ಕಾರಿ ನೌಕರನನ್ನು, ಈ ಅಧಿನಿಯಮದ ಮೇರೆಗೆ ಅವನು ಹಕ್ಕುಳ್ಳವನಾಗಿರಬಹುದಾದ ಯಾವುದೇ ಸಂಬಳ ಅಥವಾ ಭತ್ಯೆಯ ಜೊತೆಗೆ ತನ್ನ ನಿವೃತ್ತಿ ವೇತನವನ್ನು ಪಡೆಯುವುದರಿಂದ ಪ್ರತಿಬಂಧಿಸತಕ್ಕದ್ದಲ್ಲ.

15. ನಿಯಮ ರಚನಾಧಿಕಾರ.- (1) ರಾಜ್ಯ ಸರ್ಕಾರವು, [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶವನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು.

1. 1973ರ ಕರ್ನಾಟಕ ಕಾನೂನು ಅಳವಡಿಕೆಗಳ ಆದೇಶದ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(1ಎ) ಈ ಅಧಿನಿಯಮದ ಮೇರೆಗಿನ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರಚಿಸಬಹುದು ಮತ್ತು ಯಾವುದೇ ಅಂಥ ನಿಯಮವನ್ನು ರಚಿಸಿದ್ದರೆ, ಅಂಥ ನಿಯಮದ ರಚನೆಗೆ ಉಂಟಾದ ಕಾರಣಗಳನ್ನು ನಿರ್ದಿಷ್ಟಪಡಿಸುವ ಒಂದು ವಿವರಣೆಯನ್ನು (2)ನೇ ಉಪ-ಪ್ರಕರಣದ ಮೇರೆಗಿನ ನಿಯಮದೊಂದಿಗೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.][1]

1. 1968ರ ಅಧಿನಿಯಮ ಸಂಖ್ಯೆ 18ರ ಮೂಲಕ 1.11.1956 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳು ಯಾವುದೇ ನಿಯಮದಲ್ಲಿ ಯಾವುದೇ

ಮಾಪಾರ್ಾಟನ್ನು ಮಾಡಲು ಒಪ್ಪಿದರೆ ಅಥವಾ ಯಾವುದೇ ನಿಯಮವನ್ನು ರಚಿಸತಕ್ಕದ್ದಲ್ಲ ಎಂದು ಒಪ್ಪಿದರೆ ಆ ನಿಯಮಗಳು ಆ ತರುವಾಯ ಸಂದರ್ಭಾನುಸಾರ ಅಂಥ ಮಾಪಾರ್ಾಟಾದ ರೂಪದಲ್ಲಿ ಮಾತ್ರ ಪರಿಣಾಮ ಹೊಂದಿರತಕ್ಕದ್ದು ಅಥವಾ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾಪಾರ್ಾಟು ಅಥವಾ ರದ್ದಿಯಾತಿಯು ಸದರಿ ನಿಯಮದ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.][1]

1. 1960ರ ಅಧಿನಿಯಮ ಸಂಖ್ಯೆ 10ರ ಮೂಲಕ 1.1.1960 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು, ಸಭಾಪತಿ, ಉಪಸಭಾಪತಿ, ಸಭಾಧ್ಯಕ್ಷ, ಉಪಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ [2][,ಸರ್ಕಾರಿ ಮುಖ್ಯ ಸಚೇತಕ ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕ][2] ಇವರಿಗೆ ಸಂಬಂಧಿಸಿದಂತೆ ಮತ್ತು ಅವರ ಸಂಬಳ, ಭತ್ಯಗಳು, ನಿವೃತ್ತಿ ವೇತನಗಳು, ವೈದ್ಯಕೀಯ ಬಿಲ್ಲುಗಳು, ವಸತಿ ವ್ಯವಸ್ಥೆ, ಆಪ್ತ ಸಿಬ್ಬಂದಿ ಪ್ರಯಾಣಗಳು, ಮತ್ತು ಎಲ್ಲ ಬಗೆಯ ಸೌಲಭ್ಯಗಳಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಅಥವಾ ಹೊರಡಿಸಬಹುದಾದ ಇಲ್ಲವೇ ರಚಿಸಲು ಅಥವಾ ಹೊರಡಿಸಲು ಅಗತ್ಯಪಡಿಸಬಹುದಾದ ಯಾವುದೇ ಇತರ ಕಾನೂನು, ನಿಯಮ ಅಥವಾ ಆದೇಶ, ಎಲ್ಲಾ ನಿಯಮಗಳು, ಅಧಿಸೂಚನೆಗಳು ಮತ್ತು ಆದೇಶಗಳನ್ನು ಕರ್ನಾಟಕ ವಿಧಾನ ಮಂಡಲದ ಕಾರ್ಯದರ್ಶಿಯು, ಸಭಾಪತಿ, ಸಭಾಧ್ಯಕ್ಷ, ಮುಖ್ಯಮಂತ್ರಿ ಮತ್ತು ಸಂಸದೀಯ ವ್ಯವಹಾರಗಳ ಪ್ರಭಾರಹೊಂದಿರುವ ಸಚಿವ, ಇವರನ್ನೊಳಗೊಂಡ ವಿಶೇಷ ಮಂಡಲಿಯು ಹಣಕಾಸು ಇಲಾಖೆ ಮತ್ತು ನಿಯಮಿಸಬಹುದಾದಂಥ ರಾಜ್ಯ ಸರ್ಕಾರದ ವ್ಯಕ್ತಿ, ಮಂಡಲಿ, ಪ್ರಾಧಿಕಾರ ಅಥವಾ ಇಲಾಖೆಯೊಂದಿಗೆ ಸಮಾಲೋಚಿಸಿ ಅನುಮೋದಿಸಿದ ನಂತರ ರಚಿಸತಕ್ಕದ್ದು ಅಥವಾ ಹೊರಡಿಸತಕ್ಕದ್ದು.][1]

1. 1985ರ ಅಧಿನಿಯಮ ಸಂಖ್ಯೆ 14ರ ಮೂಲಕ 29.09.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2.2009ರ ಅಧಿನಿಯಮ 16ರ ಮೂಲಕ 1.1.2009 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿರುವುದಾಗಿ ಭಾವಿಸತಕ್ಕದ್ದು.

16. 1956ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3ರ ನಿರಸನ ಮತ್ತು ಉಳಿಸುವಿಕೆಗಳು.- ಕರ್ನಾಟಕ ವಿಧಾನ ಮಂಡಲ ಸಂಬಳಗಳ ಅಧ್ಯಾದೇಶ, 1956 ನ್ನು ಈ ಮೂಲಕ ನಿರಸನಗೊಳಿಸಲಾಗಿದೆ. ಆದರೆ, ಸದರಿ ಅಧ್ಯಾದೇಶದ ಮೇರೆಗೆ ರಚಿಸಿದ ಯಾವುದೇ ನಿಯಮಗಳು, ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು 1956ರ ನವೆಂಬರ್ ಮೊದಲನೇ ದಿವಸದಂದು ಈ ಅಧಿನಿಯಮವು ಜಾರಿಗೆ ಬಂದಿದ್ದರೆ ಹೇಗೋ ಹಾಗೆ ಈ ಅಧಿನಿಯಮದ ಮೇರೆಗೆ ರಚಿಸಲಾಗಿದೆ, ಮಾಡಲಾಗಿದೆ, ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಸದರಿ ಅಧ್ಯಾದೇಶದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ಈ ಅಧಿನಿಯಮವನ್ನು ಅಂಗೀಕರಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಒಂದು ತಿಂಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ರಾಜ್ಯ ವಿಧಾನ ಮಂಡಲದ ಯಾವುದೇ ಸದನವು ಈ ನಿಯಮಗಳಲ್ಲಿ ಯಾವುದೇ ಮಾಪಾರ್ಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮವು ಪರಿಣಾಮಹೊಂದಿರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾಪಾರ್ಾಟು ಅಥವಾ ನಿರ್ದೇಶನಕ್ಕೆ ಇನ್ನೊಂದು ಸದನವು ಒಪ್ಪಿದರೆ, ಆ ತರುವಾಯ, ಆ ನಿಯಮಗಳು ಸಂದರ್ಭಾನುಸಾರ, ಅಂಥ ಮಾಪಾರ್ಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

*****

ಕರ್ನಾಟಕ ವಿಧಾನಮಂಡಲ (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956

[1][ಕರ್ನಾಟಕ][1] ಅಧಿನಿಯಮ, 1957ರ 3

(1957ರ ಜನವರಿ ಇಪ್ಪತ್ನಾಲ್ಕನೇ ದಿನದಂದು [ಕರ್ನಾಟಕ ರಾಜ್ಯಪತ್ರ]ದಲ್ಲಿ ಮೊದಲು ಪ್ರಕಟಿಸಲಾಯಿತು.)

[1][ಕರ್ನಾಟಕ ವಿಧಾನ ಮಂಡಲ][1] (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956.

(1957ರ ಜನವರಿ ಹದಿನೈದನೇ ದಿನದಂದು ರಾಜ್ಯಪಾಲರ ಒಪ್ಪಿಗೆ ಪಡೆಯಲಾಗಿದೆ.)

[1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದ ಎರಡೂ ಸದನಗಳಿಗೆ ಸದಸ್ಯನಾಗಿ ಆಯ್ಕೆಯಾದ ವ್ಯಕ್ತಿಯು ಎರಡು ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿಮಾಡಬೇಕೆಂದು ಉಪಬಂಧಿಸುವ ಅಧಿನಿಯಮ.

ಭಾರತ ಸಂವಿಧಾನದ 190ನೇ ಅನುಚ್ಛೇದಕ್ಕೆ ಅನುಸಾರವಾಗಿ, [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದ ಎರಡೂ ಸದನಗಳ ಸದಸ್ಯನಾಗಿ ಆಯ್ಕೆಯಾಗಿರುವ ವ್ಯಕ್ತಿಯು ಎರಡು ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿ ಮಾಡಬೇಕೆಂದು ಉಪಬಂಧಿಸುವುದು ಅವಶ್ಯವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

1. ಚಿಕ್ಕ ಹೆಸರು.– ಈ ಅಧಿನಿಯಮವನ್ನು [1][ಕರ್ನಾಟಕ ವಿಧಾನ ಮಂಡಲ][1] (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956 ಎಂದು ಕರೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಯಾವುದಾದರೂ ಇದ್ದ ಹೊರತು,–

1. "ವಿಧಾನಸಭೆ" ಎಂದರೆ [1][ಕರ್ನಾಟಕ ರಾಜ್ಯ][1] ವಿಧಾನ ಸಭೆ ;
2. "ಪರಿಷತ್ತು" ಎಂದರೆ [1][ಕರ್ನಾಟಕ ರಾಜ್ಯ][1] ವಿಧಾನ ಪರಿಷತ್ತು ;
3. "ಸದನ" ಎಂದರೆ ವಿಧಾನ ಸಭೆ ಅಥವಾ ವಿಧಾನ ಪರಿಷತ್ತು.

3. ವಿಧಾನಸಭೆ ಮತ್ತು ವಿಧಾನ ಪರಿಷತ್ತು – ಈ ಎರಡಕ್ಕೂ ಸದಸ್ಯರಾಗಿ ಚುನಾಯಿತರಾದಾಗ, ವ್ಯಕ್ತಿಗಳು, ಒಂದು ಸ್ಥಾನವನ್ನು ಖಾಲಿಮಾಡುವುದು.– (1) ವಿಧಾನ ಸಭೆ ಮತ್ತು ವಿಧಾನ ಪರಿಷತ್ತು – ಈ ಎರಡಕ್ಕೂ ಸದಸ್ಯನಾಗಿ ಆಯ್ಕೆಗೊಂಡಿರುವ ಮತ್ತು ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಳ್ಳದೇ ಇರುವ ಯಾರೇ ವ್ಯಕ್ತಿಯು, ಅವನು ತನ್ನನ್ನು ಹಾಗೆ ಆಯ್ಕೆಮಾಡಿರುವುದಾಗಿ ಘೋಷಣೆಗಳನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ದಿನಾಂಕದಿಂದ ಹತ್ತು ದಿವಸಗಳೊಳಗೆ ಅಥವಾ ಪ್ರಕಟಣೆಗಳನ್ನು ಬೇರೆ ಬೇರೆ ದಿನಾಂಕಗಳಂದು ಮಾಡಲಾಗಿದ್ದರೆ ಅಂಥ ದಿನಾಂಕಗಳ ತರುವಾಯ ಹತ್ತು ದಿವಸಗಳೊಳಗೆ ಪ್ರತಿಯೊಂದು ಸದನದ ಕಾರ್ಯದರ್ಶಿಗೆ ಅಥವಾ ಈ ಬಗ್ಗೆ ರಾಜ್ಯಪಾಲರು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ, ತಾನುಬರೆದು ಸಹಿ ಹಾಕಿ ಸಲ್ಲಿಸಿದ ನೋಟೀಸಿನ ಮೂಲಕ ಯಾವ ಸದನದಲ್ಲಿ ತಾನು ಸೇವೆ ಸಲ್ಲಿಸಲು ಇಚ್ಛಿಸುವನೋ ಅದನ್ನು ತಿಳಿಸಬಹುದು ಮತ್ತು ಆ ತರುವಾಯ ಆತ ಯಾವ ಸದನದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವುದಿಲ್ಲವೋ ಆ ಸದನದಲ್ಲಿ ಆತನ ಸ್ಥಾನವು ಖಾಲಿಯಾಗತಕ್ಕದ್ದು.

(2) ಮೇಲೆ ಹೇಳಿದ ಅವಧಿಯೊಳಗೆ ಅಂಥ ತಿಳಿವಳಿಕೆಯನ್ನು ಕೊಡಲು ತಪ್ಪಿದಲ್ಲಿ, ಆ ಅವಧಿಯು ಮುಕ್ತಾಯವಾದ ತರುವಾಯ ವಿಧಾನ ಪರಿಷತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ತಿಳಿವಳಿಕೆಯು ಅಂತಿಮವಾಗಿರತಕ್ಕದ್ದು ಮತ್ತು ರದ್ದುಗೊಳಿಸಲಾಗದಂತೆ ಇರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

4. ಒಂದು ಸದನದಲ್ಲಿ ಈಗಾಗಲೇ ಸದಸ್ಯರಾಗಿರುವ ವ್ಯಕ್ತಿಗಳು ಇನ್ನೊಂದು ಸದನಕ್ಕೆ ಚುನಾಯಿತರಾದ ಮೇಲೆ ಒಂದು ಸ್ಥಾನವನ್ನು ಖಾಲಿಮಾಡುವುದು.– (1) ಈಗಾಗಲೇ ವಿಧಾನಸಭೆಯ ಸದಸ್ಯನಾಗಿರುವ ಮತ್ತು ಆ ಸಭೆಯಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ವ್ಯಕ್ತಿಯು ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡರೆ ವಿಧಾನಸಭೆಯಲ್ಲಿನ ಅವನ ಸ್ಥಾನವು, ಅವನನ್ನು ಹಾಗೆ ಆಯ್ಕೆಮಾಡಲಾಗಿದೆ ಎಂಬ ಘೋಷಣೆಯನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ತರುವಾಯ ಖಾಲಿಯಾಗತಕ್ಕದ್ದು.

(2) ಈಗಾಗಲೇ ವಿಧಾನ ಪರಿಷತ್ತಿನ ಸದಸ್ಯನಾಗಿರುವ ಮತ್ತು ವಿಧಾನ ಪರಿಷತ್ತಿನಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ವ್ಯಕ್ತಿಯನ್ನು ವಿಧಾನ ಸಭೆಯ ಸದಸ್ಯನನ್ನಾಗಿ ಆಯ್ಕೆಮಾಡಿದರೆ, ವಿಧಾನ ಪರಿಷತ್ತಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಗೊಂಡಿದ್ದಾನೆಂಬ ಘೋಷಣೆಯನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ತರುವಾಯ ಖಾಲಿಯಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * * *

The above translation of the Karnataka Legislature (Prohibition of simultaneous membership) Act, 1956 (3 of 1957) shall be authoritative text in the Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore

Date:

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಮ.ರಾ ಹೆಗಡೆ
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 4

(1957ರ ಜನವರಿ ಇಪ್ಪತ್ತನಾಲ್ಕನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲು ಪ್ರಕಟಿಸಲಾಯಿತು.)

[1][ಕರ್ನಾಟಕ ವಿಧಾನ ಮಂಡಲ][1] (ಅನರ್ಹತಾ ನಿವಾರಣಾ) ಅಧಿನಿಯಮ, 1956

(ಕರ್ನಾಟಕ ಅಧಿನಿಯಮ, 1962ರ 35, 1964ರ 34, 1976ರ 72, 1989ರ 22, 1991ರ 20, 2000ದ 22, 2006ರ 17, 2019ರ 07, 2023ರ 26 ಮತ್ತು 2025ರ 11ರ ಮೂಲಕ ತಿದ್ದುಪಡಿ ಮಾಡಲಾದಂತೆ)

(1957ರ ಜನವರಿ ಹದಿನೈದನೇ ದಿನದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

ಕೆಲವು ಲಾಭದಾಯಕ ಹುದ್ದೆಗಳು, ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರೆಂದು ಆಯ್ಕೆಗೊಳ್ಳುವುದಕ್ಕೆ ಅಥವಾ ಅವುಗಳ ಸದಸ್ಯರಾಗಿರುವುದಕ್ಕೆ ಅನರ್ಹಗೊಳಿಸತಕ್ಕುದಲ್ಲವೆಂದು ಘೋಷಿಸುವ ಅಧಿನಿಯಮ.

ಕೆಲವು ಹುದ್ದೆಗಳು, ಕೆಲವು ಸಂದರ್ಭಗಳಲ್ಲಿ ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರಾಗಿ ಇರುವುದಕ್ಕೆ ಅಥವಾ ಆಯ್ಕೆಯಾಗುವುದಕ್ಕೆ ಅನರ್ಹಗೊಳಿಸತಕ್ಕುದಲ್ಲ ಅಥವಾ ಅನರ್ಹಗೊಳಿಸುವುದಾಗಿ ಭಾವಿಸತಕ್ಕುದಲ್ಲವೆಂದು ಘೋಷಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ, [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಇದು ಈ ಮುಂದಿನಂತೆ ಅಧಿನಿಯಮಿತವಾಗತಕ್ಕುದು:-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

1. ಚಿಕ್ಕ ಹೆಸರು.- ಈ ಅಧಿನಿಯಮವನ್ನು 1[ಕರ್ನಾಟಕ ವಿಧಾನ ಮಂಡಲ]1 ಅನರ್ಹತಾ ನಿವಾರಣಾ) ಅಧಿನಿಯಮ, 1956 ಎಂದು ಕರೆಯತಕ್ಕುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಸಮಿತಿ'' ಎಂದರೆ, ಭಾರತ ಸರ್ಕಾರ ಅಥವಾ ಯಾವುದೇ ರಾಜ್ಯದ ಸರ್ಕಾರವು ಸ್ಥಾಪಿಸಿದ, ಅದು ಶಾಸನಬದ್ಧವಾದುದಾಗಿರಲಿ ಅಥವಾ ಇಲ್ಲದಿರಲಿ, ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನುಳ್ಳ ಯಾವುದೇ ಸಮಿತಿ, ಆಯೋಗ, ಪರಿಷತ್ತು, ಮಂಡಲಿ ಅಥವಾ ಯಾವುದೇ ಇತರೆ ನಿಕಾಯ;

(ಬಿ) ``ಪರಿಹಾರ ಭತ್ಯೆ'' ಎಂದರೆ, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯದ ಸರ್ಕಾರವು, ಸಮಿತಿಯ ಅಧ್ಯಕ್ಷ ಅಥವಾ ಅದರ ಇತರ ಯಾರೇ ಸದಸ್ಯನಿಗೆ, ಅವನು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಥವಾ ಸಮಿತಿಯ ಸದಸ್ಯನಾಗಿ ಯಾವುದೇ ಇತರೆ ಪ್ರಕಾರ್ಯವನ್ನು ನೆರವೇರಿಸಲು ವಹಿಸಿದ ಯಾವುದೇ ವೆಚ್ಚವನ್ನು ಮರುಭರ್ತಿ ಮಾಡಿಕೊಳ್ಳಲು ಅವನನ್ನು ಶಕ್ತಗೊಳಿಸುವ ಉದ್ದೇಶಕ್ಕಾಗಿ ಪ್ರಯಾಣ ಭತ್ಯೆ, ದಿನ ಭತ್ಯೆ, ಉಪವೇಶನ ಶುಲ್ಕ, ವಾಹನ ಭತ್ಯೆ ಅಥವಾ ಮನೆ ಬಾಡಿಗೆ ಭತ್ಯೆದ ರೂಪದಲ್ಲಿ ಅವನಿಗೆ ಸಂದಾಯ ಮಾಡಲಾಗಿದೆಯೆಂದು ನಿರ್ಧರಿಸಬಹುದಾದಂಥ ಹಣದ ಮೊತ್ತ;

(ಸಿ) ``ಶಾಸನಬದ್ಧ ನಿಕಾಯ '' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕೇಂದ್ರ ಕಾನೂನು ಅಥವಾ ಯಾವುದೇ ರಾಜ್ಯದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ, ನೋಂದಾಯಿತವಾದ ಅಥವಾ ರೂಪಿಸಲಾದ ಅಥವಾ ಯಾವುದೇ ಅಂಥ ಕಾನೂನಿನ ಮೇರೆಗೆ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸುತ್ತಿರುವ ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳುಳ್ಳ, ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ, ಯಾವುದೇ ನಿಗಮ, ಮಂಡಲಿ, ಕಂಪನಿ, ಸಂಘ ಅಥವಾ ಯಾವುದೇ ಇತರೆ ನಿಕಾಯ.

3. ಕೆಲವು ಅನರ್ಹತೆಗಳನ್ನು ತೆಗೆದುಹಾಕುವುದು.- ಈ ಕೆಳಕಂಡ ಹುದ್ದೆಗಳು, ಅವುಗಳನ್ನು ಹೊಂದಿರುವ ವ್ಯಕ್ತಿಗಳನ್ನು [1][ಕರ್ನಾಟಕ ವಿಧಾನ ಸಭೆ][1] ಮತ್ತು [1][ಕರ್ನಾಟಕ ವಿಧಾನ ಪರಿಷತ್ತಿನ][1] ಸದಸ್ಯರಾಗಿ ಆಯ್ಕೆಗೊಳ್ಳಲು ಅಥವಾ ಅದರ ಸದಸ್ಯರಾಗಲು ಅನರ್ಹಗೊಳಿಸತಕ್ಕುದಲ್ಲ ಮತ್ತು, ಎಂದೂ ಅನರ್ಹಗೊಳಿಸಿಲ್ಲವೆಂದು ಭಾವಿಸತಕ್ಕುದು ಎಂಬುದಾಗಿ ಈ ಮೂಲಕ ಘೋಷಿಸಲಾಗಿದೆ:

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) [2][ಸಭಾಧ್ಯಕ್ಷ, ಸಭಾಪತಿ, ಉಪ ಸಭಾಧ್ಯಕ್ಷ, ಉಪ ಸಭಾಪತಿ, ರಾಜ್ಯ ಮಂತ್ರಿ, ಉಪ-ಮಂತ್ರಿ, ಸಂಸದೀಯ ಕಾರ್ಯದರ್ಶಿ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರದ ಮುಖ್ಯ ಸಚೇತಕರ ಹುದ್ದೆಗಳು;][2]

1. 1976ರ ಅಧಿನಿಯಮ ಸಂಖ್ಯೆ 72ರ ಮೂಲಕ 19.7.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 17ರ ಮೂಲಕ 24.1.1957ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ರಾಷ್ಟ್ರೀಯ ಯುವ ಸೇನಾದಳ ಅಧಿನಿಯಮ, 1948 (1948ರ ಕೇಂದ್ರ ಅಧಿನಿಯಮ ಸಂಖ್ಯೆ XXXI)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ರಾಷ್ಟ್ರೀಯ ಯುವ ಸೇನಾ ದಳದಲ್ಲಿ, ಪ್ರಾದೇಶಿಕ ಸೇನಾ ಅಧಿನಿಯಮ, 1948(1948ರ ಕೇಂದ್ರ ಅಧಿನಿಯಮ ಸಂಖ್ಯೆ LVII)ರ ಮೇರೆಗೆ ರಚಿಸಲಾದ ಮತ್ತು ನಿರ್ವಹಿಸಿಕೊಂಡು ಬಂದಿರುವ ಪ್ರಾದೇಶಿಕ ಸೇವೆಯಲ್ಲಿ, ಮತ್ತು ಮೀಸಲು ಮತ್ತು ಸಹಾಯಕ ವಾಯು ಬಲಗಳ ಅಧಿನಿಯಮ, 1952(1952ರ ಕೇಂದ್ರ ಅಧಿನಿಯಮ ಸಂಖ್ಯೆ LXII)ರ ಮೇರೆಗೆ ಸಹಾಯಕ ವಾಯುಬಲ ಮತ್ತು ವಾಯು ರಕ್ಷಣಾ ಮೀಸಲು ಇವುಗಳಲ್ಲಿ ಧಾರಣ ಮಾಡಿರುವ ಹುದ್ದೆಗಳು;

[1][(ಬಿಬಿ) [2][ಕರ್ನಾಟಕ][2] ಗೃಹ ರಕ್ಷಕ ದಳ ಅಧಿನಿಯಮ, 1962ರ ಮೇರೆಗೆ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯನ ಹುದ್ದೆ;][1]

1. 1962ರ ಅಧಿನಿಯಮ 35ರ ಮೂಲಕ 27-12-1962ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(ಬಿಬಿಬಿ)(XXX)][1]

1. 2006ರ ಅಧಿನಿಯಮ 17ರ ಮೂಲಕ 4.11.2006ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಸಿ)(XXX)][1]

1. 2006ರ ಅಧಿನಿಯಮ 17ರ ಮೂಲಕ 4.11.2006ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][(ಸಿ1) ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964ರಡಿಯಲ್ಲಿನ ಮುನಿಪಾಲಿಟಿ ಕೌನ್ಸಿಲ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳು.

(ಸಿ2) ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರಡಿಯಲ್ಲಿನ ನಗರಪಾಲಿಕೆಯ ಮಹಾಪೌರ ಮತ್ತು ಉಪಮಹಾಪೌರ ಹುದ್ದೆಗಳು.

(ಸಿ3) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993(1985ರ ಕರ್ನಾಟಕ ಅಧಿನಿಯಮ ಸಂಖ್ಯೆ 20)ರಡಿಯಲ್ಲಿನ ಜಿಲ್ಲಾ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು;][1]

1. 2006ರ ಅಧಿನಿಯಮ 17ರ ಮೂಲಕ 4.11.2006ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(ಡಿ) ಸೊಸೈಟಿಗಳ ನೋಂದಣಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿಸಲಾದ ಯಾವುದೇ ಸೊಸೈಟಿಯ ಆಡಳಿತ ಮಂಡಳಿಯ ಚೇರ್ಮನ್, ವೈಸ್ ಚೇರ್ಮನ್, ಅಧ್ಯಕ್ಷ, ಉಪಾಧ್ಯಕ್ಷ, ನಿರ್ದೇಶಕ ಹುದ್ದೆ ಅಥವಾ ಯಾವುದೇ ಸಮತಿಯ (ಯಾವುದೇ ಹೆಸರಿನ ಮೂಲಕ ಕರೆಯಲಾಗುವ) ಮೇಲೆ ಹೇಳಲಾದ ಹುದ್ದೆಯನ್ನು ಯಾವುದೇ ಹೇಸರಿನ ಮೂಲಕ ಕರೆಯಲಾಗುವ ಸದಸ್ಯ;][1]

1. 2006ರ ಅಧಿನಿಯಮ 17ರ ಮೂಲಕ 24.1.1957ರಿಂದ ಜಾರಿಗೆ ಬಂದಿರುವುದಾಗಿ ಭಾವಿಸಲಾಗಿದೆ.

[2][[1][(ಇ) ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ-I ಹುದ್ದೆ;

(ಇ1) ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ- II ಹುದ್ದೆ;][1]][2]

1. 2019ರ ಅಧಿನಿಯಮ 7ರ ಮೂಲಕ 8.2.2009ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2025ರ ಅಧಿನಿಯಮ 11ರ ಮೂಲಕ ದಿ:01.06.2023ರಿಂದ ಜಾರಿಗೆ ಬರುವಂತೆ ಪ್ರತ್ಯಾಯೋಜಿಸಲಾಗಿದೆ.

[1][(ಎಫ್) ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರ ಹುದ್ದೆ'

(ಜಿ) ನವದೆಹಲಿಯ ಕರ್ನಾಟಕ ರಾಜ್ಯ ವಿಶೇಷ ಪ್ರತಿನಿಧಿಯವರ ಹುದ್ದೆ.][1]

1. 2023ರ ಅಧಿನಿಯಮ 26ರ ಮೂಲಕ 20.5.2023ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(ಎಚ್) ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರ ಹುದ್ದೆ ;

(ಐ) ಮುಖ್ಯಮಂತ್ರಿಗಳ ಸಲಹೆಗಾರರು (ನೀತಿ ಮತ್ತು ಯೋಜನೆ) ಹುದ್ದೆ; ಮತ್ತು

(ಜೆ) ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರ ಹುದ್ದೆ][1]

1. 2025ರ ಅಧಿನಿಯಮ 11ರ ಮೂಲಕ ದಿ:29.12.2023ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

****

ಅಧಿಸೂಚನೆ

ಬೆಂಗಳೂರು, ದಿನಾಂಕ 16:18ನೇ ಆಕ್ಟೋಬರ್ 1965 [ಸಂಖ್ಯೆ ಎಚ್‌ಡಿ 354 ಪಿಇಜಿ 65]

ಎಸ್.ಓ. 3354.- ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ ಸಂ. 34)ರ 1ನೇ ಪ್ರಕರಣದ (3)ನೇ ಉಪಕಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1965ರ ನವೆಂಬರ್ 1ನೇ ದಿನವನ್ನು ಸದರಿ ಅಧಿನಿಯಮವು ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಶಂಕರರಾವ್
ಕಾರ್ಯದರ್ಶಿ,
ಗೃಹ ಇಲಾಖೆ.

(ಕರ್ನಾಟಕ ರಾಜ್ಯಪತ್ರ ಭಾಗ IV-2ಸಿ (ii), ದಿನಾಂಕ 28.10.1965ರ ಪುಟ 3160 ರಲ್ಲಿ ಪ್ರಕಟಿಸಲಾಗಿದೆ)

****

1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4

(1985ರ ಫೆಬ್ರವರಿ 11ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984

(1985ರ ಜನವರಿ 16ನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿ ಪಡೆಯಲಾಗಿದೆ)

(1986ರ 15, 1986ರ 31, 1988ರ 1 1991ರ 30, 2010ರ 25, 2015ರ 35, 2020ರ 05 ಮತ್ತು 2020 ರ 36ನೇ ಅಧಿನಿಯಮಗಳಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸಾರ್ವಜನಿಕ ಪ್ರಾಧಿಕಾರಗಳಿಂದ ಅಥವಾ ಅವುಗಳ ಪರವಾಗಿ ಕೆಲವೊಂದು ಸಂದರ್ಭಗಳಲ್ಲಿ ಕೈಗೊಂಡ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2 ಅಥವಾ ಪಟ್ಟಿ 3ರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ ಸಂಬಂಧಪಡಬಹುದಾದ ಆಡಳಿತಾತ್ಮಕ ಕ್ರಮದ (ಅಂಥ ಕ್ರಮಕ್ಕೆ ಸಂಬಂಧಪಟ್ಟಂತೆ ಅಥವಾ ಅದರಿಂದುಟಾಗುವ ಯಾವುದೇ ಲೋಪ ಮತ್ತು ನೆರವೇರಿಕೆಯೂ ಸೇರಿದಂತೆ) ವಿಚಾರಣೆ ನಡೆಸುವುದಕ್ಕಾಗಿ ಕೆಲವು ಪ್ರಾಧಿಕಾರಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳಿಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಆನುಷಂಗಿಕವಾದ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸಾರ್ವಜನಿಕ ಪ್ರಾಧಿಕಾರಗಳಿಂದ ಅಥವಾ ಅವುಗಳ ಪರವಾಗಿ ಕೆಲವೊಂದು ಸಂದರ್ಭಗಳಲ್ಲಿ ಕೈಗೊಂಡ, ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ 2 ಅಥವಾ ಪಟ್ಟಿ 3ರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ ಸಂಬಂಧಪಡಬಹುದಾದ ಆಡಳಿತಾತ್ಮಕ ಕ್ರಮದ (ಅಂಥ ಕ್ರಮಕ್ಕೆ ಸಂಬಂಧಪಟ್ಟಂತೆ ಅಥವಾ ಅದರಿಂದುಂಟಾಗುವ ಯಾವುದೇ ಲೋಪ ಮತ್ತು ನೆರವೇರಿಕೆಯೂ ಸೇರಿದಂತೆ) ವಿಚಾರಣೆ ನಡೆಸುವುದಕ್ಕಾಗಿ ಕೆಲವು ಪ್ರಾಧಿಕಾರಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳಿಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗಲಿ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆ ಮೂಲಕ ದಿನಾಂಕ: 15.01.1986ರಿಂದ ಜಾರಿಗೆ ಬಂದಿದೆ.

2. ಪರಿಭಾಷೆಗಳು.– ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,–

(1) "ಕ್ರಮ" ಎಂದರೆ ನಿರ್ಧಾರ, ಶಿಫಾರಸು ಅಥವಾ ನಿರ್ಣಯ ರೂಪದಲ್ಲಿ ಅಥವಾ ಇತರ ಯಾವುದೇ ರೀತಿಯಲ್ಲಿ ಕೈಗೊಂಡ ಆಡಳಿತಾತ್ಮಕ ಕ್ರಮ ಮತ್ತು ಕ್ರಮ ಕೈಗೊಳ್ಳಲು ಉದ್ದೇಶಪೂರ್ವಕವಾಗಿ ತಪ್ಪುವುದನ್ನು ಅಥವಾ ಲೋಪ ಮಾಡುವುದನ್ನು ಒಳಗೊಳ್ಳುತ್ತದೆ ಮತ್ತು ಅಂಥ ಕ್ರಮಕ್ಕೆ [1][ಸಂಬಂಧಿಸುವ][1] ಇತರ ಎಲ್ಲಾ ಪದ ಪ್ರಯೋಗಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) ಸಾರ್ವಜನಿಕ ನೌಕರನ ಸಂಬಂಧದಲ್ಲಿ "ಆಪಾದನೆ" ಎಂದರೆ, ಅಂಥ ಸಾರ್ವಜನಿಕ ನೌಕರನು,–

(ಎ) ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲ ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತ ಹಾನಿ ಅಥವಾ ತೊಂದರೆಯನ್ನುಂಟು ಮಾಡಲು ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾನೆ;

(ಬಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ವೈಯಕ್ತಿಕ ಹಿತಾಸಕ್ತಿಯಿಂದ ಅಥವಾ ಅನುಚಿತ ಅಥವಾ ಭ್ರಷ್ಟ ಪ್ರೇರಣೆಗಳಿಂದ ಪ್ರಚೋದಿತನಾಗಿದ್ದಾನೆ;

(ಸಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನದಲ್ಲಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ ಅಥವಾ ನೀತಿನಿಷ್ಠೆಯ ಕೊರತೆಯಿಂದ ದೋಷಿಯಾಗಿದ್ದಾನೆ; ಅಥವಾ

(ಡಿ) ಅವನು ಯಾವ ವರ್ಗಕ್ಕೆ ಸೇರುವನೋ ಆ ವರ್ಗದ ಸಾರ್ವಜನಿಕ ನೌಕರರು ಅನುಸರಿಸಲೇಬೇಕಾದ ನೀತಿನಿಷ್ಠೆಯ ಮತ್ತು ನಡತೆಗಳ ಸೂತ್ರ ಪ್ರಮಾಣಗಳಿಗನುಸಾರವಾಗಿ ಕಾರ್ಯನಿರ್ವಹಿಸಲು ತಪ್ಪಿದ್ದಾನೆ;

– ಎಂಬ ಯಾವುದೇ ಸ್ಥಿರೀಕರಣ

(3) "ಮುಖ್ಯ ಮಂತ್ರಿ" ಎಂದರೆ ಕರ್ನಾಟಕದ ಮುಖ್ಯ ಮಂತ್ರಿ;

(4) ಸಾರ್ವಜನಿಕ ನೌಕರನ ಸಂಬಂಧದಲ್ಲಿ, "ಸಕ್ಷಮ ಪ್ರಾಧಿಕಾರ" ಎಂದರೆ,–

(ಎ) ಮುಖ್ಯ ಮಂತ್ರಿ ಅಥವಾ ರಾಜ್ಯ ವಿಧಾನಮಂಡಲದ ಒಬ್ಬ ಸದಸ್ಯನ ಸಂದರ್ಭದಲ್ಲಿ, ತನ್ನ ವಿವೇಚನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯಪಾಲ;

(ಬಿ) ಒಬ್ಬ ಮಂತ್ರಿ ಅಥವಾ ಕಾರ್ಯದರ್ಶಿಯ ಸಂದರ್ಭದಲ್ಲಿ, ಮುಖ್ಯಮಂತ್ರಿ;

(ಸಿ) ಕಾರ್ಯದರ್ಶಿಯಲ್ಲದ ಇತರ ಸರ್ಕಾರಿ ನೌಕರನ ಸಂಬಂಧದಲ್ಲಿ ಕರ್ನಾಟಕ ಸರ್ಕಾರ;

(ಡಿ) ಇತರ ಯಾವೊಬ್ಬ ಸಾರ್ವಜನಿಕ ನೌಕರನ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ಪ್ರಾಧಿಕಾರ;

(5) "ಭ್ರಷ್ಟಾಚಾರ" ಎನ್ನುವುದರಲ್ಲಿ ಭಾರತ ದಂಡ ಸಂಹಿತೆಯ 9ನೇ ಅಧ್ಯಾಯದ ಮೇರೆಗೆ ಅಥವಾ ಭ್ರಷ್ಟಾಚಾರ ನಿವಾರಣಾ ಅಧಿನಿಯಮ, 1947ರ ಮೇರೆಗೆ, ದಂಡನೀಯವಾದ ಯಾವುದನ್ನೂ ಒಳಗೊಳ್ಳುತ್ತದೆ;

(6) "ಸರ್ಕಾರಿ ನೌಕರ" ಎಂದರೆ ಕರ್ನಾಟಕ ರಾಜ್ಯದ ಸಿವಿಲ್ ಸೇವೆಗಳ ಸದಸ್ಯನಾಗಿರುವ ಅಥವಾ ಕರ್ನಾಟಕ ರಾಜ್ಯದ ವ್ಯವಹಾರಗಳ ಸಂಬಂಧದಲ್ಲಿ ಸಿವಿಲ್ ಹುದ್ದೆಯನ್ನು ಧಾರಣ ಮಾಡಿರುವ ಅಥವಾ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಮತ್ತು ಇದರಲ್ಲಿ ಯಾರ ಸೇವೆಯನ್ನು ಭಾರತ ಸರ್ಕಾರಕ್ಕೆ, ಇತರ ರಾಜ್ಯ ಸರ್ಕಾರಕ್ಕೆ, ನಿಗಮಿತವಾಗಿರುವ ಅಥವಾ ನಿಗಮಿತವಾಗಿಲ್ಲದ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ವ್ಯಕ್ತಿಗೆ ತಾತ್ಕಾಲಿಕವಾಗಿ ವಹಿಸಿಕೊಡಲಾಗಿದೆಯೋ ಅಂಥ ಯಾವೊಬ್ಬ ವ್ಯಕ್ತಿ ಮತ್ತು ಕೇಂದ್ರ ಸರ್ಕಾರದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಸೇವೆಯಲ್ಲಿರುವ ಯಾವ ವ್ಯಕ್ತಿಯ ಸೇವೆಯನ್ನು ಕರ್ನಾಟಕ ಸರ್ಕಾರಕ್ಕೆ ತಾತ್ಕಾಲಿಕವಾಗಿ ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯೂ ಒಳಗೊಳ್ಳುತ್ತಾನೆ;

(7) "ರಾಜ್ಯಪಾಲ" ಎಂದರೆ, ಕರ್ನಾಟಕ ರಾಜ್ಯಪಾಲ;

(8) "ದೂರು" ಎಂದರೆ, ದುರಾಡಳಿತದ ಪರಿಣಾಮವಾಗಿ ತಾನು ಅನ್ಯಾಯ ಅಥವಾ ಅನುಚಿತ ತೊಂದರೆಗೆ ಒಳಗಾಗಿದ್ದೇನೆಂದು ಒಬ್ಬ ವ್ಯಕ್ತಿಯು ಮಾಡುವ ಕ್ಲೇಮು;

(9) "ಲೋಕಾಯುಕ್ತ" ಎಂದರೆ 3ನೇ ಪ್ರಕರಣದ ಮೇರೆಗೆ ಲೋಕಾಯುಕ್ತನಾಗಿ ನೇಮಿತನಾದ ಒಬ್ಬ ವ್ಯಕ್ತಿ;

(10) "ದುರಾಡಳಿತ" ಎಂದರೆ ಯಾವುದೇ ಸಂದರ್ಭದಲ್ಲಿ,–

(ಎ) ಕ್ರಮ ಅಥವಾ ಅಂಥ ಕ್ರಮಕ್ಕೆ ಸಂಬಂಧಿಸಿದ ಆಡಳಿತ ವಿಧಾನ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಪದ್ಧತಿ ಅಸಮಂಜಸವಾಗಿದ್ದರೆ, ನ್ಯಾಯ ಪೂರ್ಣವಾಗಿಲ್ಲದಿದ್ದರೆ, ದಬ್ಬಾಳಿಕೆಯಿಂದ ಕೂಡಿದ್ದರೆ ಅಥವಾ ಅನುಚಿತ ತಾರತಮ್ಯ ತೋರುವಂತಿದ್ದರೆ; ಅಥವಾ

(ಬಿ) ಅಂಥ ಕ್ರಮವನ್ನು ಕೈಗೊಳ್ಳುವಲ್ಲಿ ಉದ್ದೇಶಪೂರ್ವಕ ನಿರ್ಲಕ್ಷ್ಯ ಅಥವಾ ಅನುಚಿತ ವಿಳಂಬವಾಗಿದ್ದರೆ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದರೆ,

ಹಾಗೆ ಆಡಳಿತ ಪ್ರಕಾರ್ಯಗಳ ಜಾರಿಯಲ್ಲಿ ಕೈಗೊಂಡ ಕ್ರಮ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಕ್ರಮ;

(11) "ಮಂತ್ರಿ" ಎಂದರೆ ಮುಖ್ಯ ಮಂತ್ರಿಯನ್ನು ಹೊರತುಪಡಿಸಿ ಕರ್ನಾಟಕ ರಾಜ್ಯದ ಮಂತ್ರಿ ಮಂಡಲದ ಸದಸ್ಯ;

(12) "ಸಾರ್ವಜನಿಕ ನೌಕರ" ಎಂದರೆ ಯಾವುದೇ ಕಾಲದಲ್ಲಿ,–

(ಎ) ಮುಖ್ಯ ಮಂತ್ರಿಯಾಗಿರುವ ಅಥವಾ ಮುಖ್ಯ ಮಂತ್ರಿಯಾಗಿದ್ದ;

(ಬಿ) ಮಂತ್ರಿಯಾಗಿರುವ ಅಥವಾ ಮಂತ್ರಿಯಾಗಿದ್ದ;

(ಸಿ) ರಾಜ್ಯ ವಿಧಾನಮಂಡಲದ ಸದಸ್ಯರಾಗಿರುವ ಅಥವಾ ಸದಸ್ಯನಾಗಿದ್ದ;

(ಡಿ) ಸರ್ಕಾರಿ ನೌಕರನಾಗಿರುವ ಅಥವಾ ಸರ್ಕಾರಿ ನೌಕರನಾಗಿದ್ದ;

(ಇ) ಒಂದು ಸಹಕಾರ ಸಂಘ ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಂಪನಿ ಮತ್ತು ರಾಜ್ಯ ಸರ್ಕಾರವು ನಿಗಮಗಳು ಅಥವಾ ಮಂಡಲಿಗಳಲ್ಲಿ ತನಗಿರುವ ಆರ್ಥಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆಗಿಂದಾಗ್ಗೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಂಥ ಇತರ ನಿಗಮಗಳು ಅಥವಾ ಮಂಡಲಿಗಳು ಸೇರಿದಂತೆ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರದ ಅಥವಾ ಶಾಸನಬದ್ಧ ಮಂಡಲಿ ಅಥವಾ ನಿಗಮದ (ಯಾವುದೇ ಹೆಸರಿನಿಂದ ಕರೆಯಲಾಗುವ) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಥವಾ ಸದಸ್ಯನಾಗಿರುವ ಅಥವಾ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಅಥವಾ ಸದಸ್ಯನಾಗಿದ್ದ;

(ಎಫ್) ರಾಜ್ಯ ಸರ್ಕಾರದಿಂದ ರಚಿತವಾದ ಶಾಸನ ಬದ್ಧವಾದ ಅಥವಾ ಶಾಸನ ಬದ್ಧವಲ್ಲದ ಸಮಿತಿಯ ಅಥವಾ ಮಂಡಲಿಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ – ಒಬ್ಬ ವ್ಯಕ್ತಿ;

(ಜಿ) ಈ ಕೆಳಗಿನವುಗಳಲ್ಲಿ, ಎಂದರೆ,–

(i) ಕರ್ನಾಟಕ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರ;

(ii) ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾಗಿದ್ದು, ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ಶಾಸನಬದ್ಧ ನಿಕಾಯ ಅಥವಾ ನಿಗಮ (ಸ್ಥಳೀಯ ಪ್ರಾಧಿಕಾರವಾಗಿರದ) ಹಾಗೂ ರಾಜ್ಯ ಸರ್ಕಾರವು ತನಗಿರುವ ಆರ್ಥಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಆಗಿಂದಾಗ್ಗೆ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಮಂಡಲಿ ಅಥವಾ ನಿಗಮ;

(iii) ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನೋಂದಾಯಿತವಾಗಿದ್ದು, ಅದರಲ್ಲಿ, ರಾಜ್ಯ ಸರ್ಕಾರವು ಪೂರ್ಣ ಸಂದಾಯವಾದ ಷೇರುಬಂಡವಾಳದಲ್ಲಿ ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಷ್ಟನ್ನು ಹೊಂದಿರುವ ಕಂಪನಿ ಅಥವಾ ಅಂಥ ಕಂಪನಿಗೆ ಅಧೀನವಾದ ಯಾವುದೇ ಕಂಪನಿ;

(iv) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿರುವ ಮತ್ತು ಸರ್ಕಾರಿ ರಾಜ್ಯ ಪತ್ರದಲ್ಲಿ ಈ ಸಂಬಂಧದಲ್ಲಿ ಅಧಿಸೂಚಿತವಾಗಿರುವ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಲಾದ ಒಂದು ಸಂಘ;

(v) ಒಂದು ಸಹಕಾರಿ ಸಂಘ;

(vi) ಒಂದು ವಿಶ್ವವಿದ್ಯಾನಿಲಯ;

ಇವುಗಳಲ್ಲಿ ಸೇವೆಮಾಡುವ ಅಥವಾ ವೇತನ ಪಡೆಯುವ ಒಬ್ಬ ವ್ಯಕ್ತಿ;

ವಿವರಣೆ.– ಈ ಖಂಡದಲ್ಲಿ "ಸಹಕಾರಿ ಸಂಘ" ಎಂದರೆ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾಗಿರುವುದಾಗಿ ಭಾವಿಸಲಾದ ಸಹಕಾರಿ ಸಂಘ ಮತ್ತು "ವಿಶ್ವವಿದ್ಯಾನಿಲಯ" ಎಂದರೆ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿರುವುದಾಗಿ ಭಾವಿಸಲಾದ ವಿಶ್ವವಿದ್ಯಾನಿಲಯ;

(13) "ಕಾರ್ಯದರ್ಶಿ" [1][ಎಂದರೆ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಅಥವಾ ಕಾರ್ಯದರ್ಶಿ–II][1] ಮತ್ತು ಇದರಲ್ಲಿ ವಿಶೇಷ ಕಾರ್ಯದರ್ಶಿ, ಒಬ್ಬ ಅಪರ ಕಾರ್ಯದರ್ಶಿ ಮತ್ತು ಒಬ್ಬ ಸಹ ಕಾರ್ಯದರ್ಶಿಯನ್ನು ಒಳಗೊಳ್ಳುತ್ತದೆ;

(14) "ಉಪಲೋಕಾಯುಕ್ತ" ಎಂದರೆ, 3ನೇ ಪ್ರಕರಣದ ಮೇರೆಗೆ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿ.

1. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

3. ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ನೇಮಕ.– (1) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತನಿಖೆಗಳನ್ನು ಮತ್ತು ವಿಚಾರಣೆಗಳನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಪಾಲರು ಲೋಕಾಯುಕ್ತನೆಂದು ಕರೆಯಲಾಗುವ ಒಬ್ಬ ವ್ಯಕ್ತಿಯನ್ನು ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರುಗಳೆಂದು ಕರೆಯಲಾಗುವ ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು.

(2) (ಎ) ಒಬ್ಬ ವ್ಯಕ್ತಿ ಲೋಕಾಯುಕ್ತನಾಗಿ ನೇಮಿತನಾಗಬೇಕಾದರೆ ಅವನು ಸರ್ವೋಚ್ಚನ್ಯಾಯಾಲಯದ ಒಬ್ಬ ನ್ಯಾಯಾಧೀಶನಾಗಿ ಅಥವಾ ಒಂದು ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿ ಪದಧಾರಣೆ ಮಾಡಿದ್ದಂಥ [1][ಅಥವಾ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಂತೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ಪದಧಾರಣೆ ಮಾಡಿದ್ದಂಥ][1] ವ್ಯಕ್ತಿಯಾಗಿರತಕ್ಕದ್ದು ಮತ್ತು ಮುಖ್ಯಮಂತ್ರಿಯು ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಕರ್ನಾಟಕ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿ ನೀಡಿದ ಸಲಹೆಯ ಮೇಲೆ ನೇಮಿತನಾಗತಕ್ಕದ್ದು.

(ಬಿ) ಒಬ್ಬ ವ್ಯಕ್ತಿ ಉಪಲೋಕಾಯುಕ್ತನಾಗಿ ನೇಮಿತನಾಗಬೇಕಾದರೆ ಅವನು ಒಂದು ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ [1][ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ][1] ಪದಧಾರಣೆ ಮಾಡಿದ್ದಂಥ ವ್ಯಕ್ತಿಯಾಗಿರತಕ್ಕದ್ದು ಮತ್ತು ಮುಖ್ಯಮಂತ್ರಿಯು ಕರ್ನಾಟಕ ರಾಜ್ಯದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ, ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಕರ್ನಾಟಕ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರ ಜೊತೆ ಸಮಾಲೋಚನೆ ನಡೆಸಿ ನೀಡಿದ ಸಲಹೆಯ ಮೇಲೆ ನೇಮಿತನಾಗತಕ್ಕದ್ದು.

(ಸಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡುವ ಮೊದಲು, ರಾಜ್ಯಪಾಲರ ಅಥವಾ ಈ ಸಂಭಂಧದಲ್ಲಿ ಅವರು ನೇಮಕ ಮಾಡಿದ ಯಾವನಾದರೂ ವ್ಯಕ್ತಿಯ ಎದುರಿನಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞೆಯನ್ನು ಮೊದಲನೇ ಅನುಸೂಚಿಯಲ್ಲಿ ಆ ಉದ್ದೇಶಕ್ಕಾಗಿ ನಿರೂಪಿತವಾದ ನಮೂನೆಯಲ್ಲಿ ಮಾಡತಕ್ಕದ್ದು ಮತ್ತು ಬರೆದುಕೊಡತಕ್ಕದ್ದು.

1. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಸೇರಿಸಲಾಗಿದೆ.

4. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಇತರ ಯಾವುದೇ ಪದವನ್ನು ಧಾರಣ ಮಾಡತಕ್ಕದ್ದಲ್ಲ.– ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಸಂಸತ್ತಿನ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಯಾವುದೇ ರಾಜ್ಯದ ವಿಧಾನ ಮಂಡಲದ ಸದಸ್ಯನಾಗಿರತಕ್ಕದ್ದಲ್ಲ ಮತ್ತು (ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ತನ್ನ ಪದದ ಹೊರತು) ಯಾವುದೇ ನ್ಯಾಸದ ಅಥವಾ ಲಾಭದ ಪದವನ್ನು ಧಾರಣ ಮಾಡತಕ್ಕದ್ದಲ್ಲ. ಅಥವಾ ಯಾವುದೇ ರಾಜಕೀಯ ಪಕ್ಷದೊಡನೆ ಸಂಬಂಧ ಹೊಂದಿರತಕ್ಕದ್ದಲ್ಲ ಅಥವಾ ಯಾವುದೇ ವ್ಯಾಪಾರ ನಿರ್ವಹಿಸತಕ್ಕದ್ದಲ್ಲ ಅಥವಾ ಯಾವುದೇ ವೃತ್ತಿಯನ್ನು ನಡೆಸತಕ್ಕದ್ದಲ್ಲ ಮತ್ತು ತದನುಸಾರವಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ವ್ಯಕ್ತಿಯು ತನ್ನ ಪದಧಾರಣ ಮಾಡುವ ಮುಂಚೆ,–

(ಎ) ಸಂಸತ್ತಿನ ಅಥವಾ ಯಾವುದೇ ರಾಜ್ಯದ ವಿಧಾನಮಂಡಲದ ಸದಸ್ಯನಾಗಿದ್ದರೆ ಅಂಥ ಸದಸ್ಯತ್ವಕ್ಕೆ ರಾಜೀನಾಮೆ ಕೊಡತಕ್ಕದ್ದು; ಅಥವಾ

(ಬಿ) ನ್ಯಾಸದ ಅಥವಾ ಲಾಭದ ಯಾವುದೇ ಪದವನ್ನು ಧಾರಣ ಮಾಡಿದ್ದರೆ ಅಂಥ ಪದಕ್ಕೆ ರಾಜೀನಾಮೆ ಕೊಡತಕ್ಕದ್ದು; ಅಥವಾ

(ಸಿ) ಯಾವುದೇ ರಾಜಕೀಯ ಪಕ್ಷದೊಡನೆ ಸಂಬಂಧವಿರಿಸಿಕೊಂಡಿದ್ದರೆ ಅದರೊಡನೆ ಸಂಬಂಧವನ್ನು ಕಡಿದುಕೊಳ್ಳತಕ್ಕದ್ದು; ಅಥವಾ

(ಡಿ) ಯಾವುದೇ ವ್ಯಾಪಾರವನ್ನು ನಿರ್ವಹಿಸುತ್ತಿದ್ದರೆ, ಅಂಥ ವ್ಯಾಪಾರದ ನಡೆಸುವಿಕೆ ಮತ್ತು ನಿರ್ವಹಣೆಯೊಂದಿಗೆ ತನಗಿರುವ ಸಂಬಂಧವನ್ನು, (ತನ್ನ ಸ್ವಾಮ್ಯವನ್ನು ತ್ಯಜಿಸುವುದೊಂದನ್ನು ಬಿಟ್ಟು) ಕಡಿದುಕೊಳ್ಳತಕ್ಕದ್ದು; ಅಥವಾ

(ಇ) ಯಾವುದೇ ವೃತ್ತಿಯನ್ನು ನಡೆಸುತ್ತಿದ್ದರೆ ಅಂಥ ವೃತ್ತಿ ನಡೆಸುವುದನ್ನು ನಿಲಂಬನಗೊಳಿಸತಕ್ಕದ್ದು.

5. ಲೋಕಾಯುಕ್ತ ಮತ್ತು ಉಪಲೋಕಾಯುಕ್ತನ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು.– (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಾಗಿ ನೇಮಿತನಾದ ಒಬ್ಬ ವ್ಯಕ್ತಿ, ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು,–

(ಎ) ಲೋಕಾಯುಕ್ತ ಅಥವಾ ಒಬ್ಬ ಉಪಲೋಕಾಯುಕ್ತನು ತನ್ನ ಹಸ್ತಾಧೀನ ಲೇಖಿದ ಮೂಲಕ ರಾಜ್ಯಪಾಲರಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು;

(ಬಿ) 6ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಆ ಪದದಿಂದ ತೆಗೆದುಹಾಕಬಹುದು.

(2) ಲೋಕಾಯುಕ್ತ ಅಥವಾ ಒಬ್ಬ ಉಪಲೋಕಾಯುಕ್ತನು ಪದಧಾರಣ ಮಾಡುವುದು ಸಮಾಪ್ತವಾದ ಮೇಲೆ ಕರ್ನಾಟಕ ಸರ್ಕಾರದಲ್ಲಿ ಅಥವಾ 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲಿಖಿತವಾದ ಯಾವುದೇ ಪ್ರಾಧಿಕಾರ, ನಿಗಮ, ಕಂಪನಿ, ಸಂಘ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಲಾಭದ ಪದದಲ್ಲಿ ಪುನಃ ನಿಯೋಜನೆ ಹೊಂದಲು ಅನರ್ಹನಾಗತಕ್ಕದ್ದು.

(3) ಲೋಕಾಯುಕ್ತ ಮತ್ತು ಉಪಲೋಕಾಯುಕ್ತನಿಗೆ ಪ್ರತಿ ತಿಂಗಳು [1][ಅನುಕ್ರಮವಾಗಿ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತು ಉಚ್ಚನ್ಯಾಯಾಲಯದ ಒಬ್ಬ ನ್ಯಾಯಾಧೀಶರ ವೇತನಕ್ಕೆ ಸಮಾನವಾದ][1] ವೇತನ ಸಂದಾಯ ಮಾಡತಕ್ಕದ್ದು:

[2][ಪರಂತುಕ x x x][2]

1. 1991ರ ಅಧಿನಿಯಮ ಸಂಖ್ಯೆ: 30ರ ಮೂಲಕ ದಿನಾಂಕ: 01.01.1991ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 15ರ ಮೂಲಕ ದಿನಾಂಕ: 04.12.1985ರಿಂದ ಲೋಪಿಸಲಾಗಿದೆ.

(4) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, –

(ಎ) ಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಮಿಸುವಲ್ಲಿ, ಭಾರತದ ಮುಖ್ಯ ನ್ಯಾಯಾಧೀಶನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು.

(ಬಿ) ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳನ್ನು ನಿಯಮಿಸುವಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶನಿಗೆ ಸಂದೇಯವಿರುವ ಭತ್ಯೆಗಳು ಹಾಗೂ ಇತರ ಸೇವಾ ಷರತ್ತುಗಳನ್ನು ಗಮನದಲ್ಲಿರಿಸಿಕೊಳ್ಳತಕ್ಕದ್ದು;

[1][(ಸಿ) ಲೋಕಾಯುಕ್ತನಿಗಾಗಲೀ, ಉಪಲೋಕಾಯುಕ್ತನಿಗಾಗಲೀ, ಯಾವುದೇ ತುಟ್ಟಿಭತ್ಯ, ಸಂದೇಯವಾಗತಕ್ಕದ್ದಲ್ಲ.][1]

ಮತ್ತು ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯಗಳನ್ನು ಮತ್ತು ಇತರ ಸೇವಾ ಷರತ್ತುಗಳನ್ನು ಅವನ ನೇಮಕಾತಿಯ ತರುವಾಯ ಅವನಿಗೆ ಅನನುಕೂಲವಾಗುವ ರೀತಿಯಲ್ಲಿ ಮಾರ್ಪಾಡು ಮಾಡತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ:15ರ ಮೂಲಕ ದಿನಾಂಕ: 04.12.1985ರಿಂದ ಸೇರಿಸಲಾಗಿದೆ.

(5) ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ಅಥವಾ ಅವರಿಗೆ ಸಂದೇಯವಿರುವ ಎಲ್ಲ ವೇತನಗಳು, ಭತ್ಯಗಳು ಮತ್ತು ನಿವೃತ್ತಿ ವೇತನಗಳೂ ಸೇರಿದಂತೆ ಆ ಕಚೇರಿಯ ಆಡಳಿತ ವೆಚ್ಚಗಳನ್ನು ರಾಜ್ಯದ ಸಂಚಿತ ನಿಧಿಯ ಮೇಲೆ ಹೊಣೆ ಹಾಕತಕ್ಕದ್ದು.

[1][**6. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪದಚ್ಯುತಿ.**–(1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು, ಅವನ ವಿಷಯದಲ್ಲಿ ರುಜುವಾತಾದ ದುರ್ವರ್ತನೆಯ ಅಥವಾ ಅಸಾಮರ್ಥ್ಯದ ಕಾರಣಕ್ಕಾಗಿ ಪದಚ್ಯುತಿಗೊಳಿಸಬೇಕೆಂಬುದಾಗಿ ರಾಜ್ಯ ವಿಧಾನ ಮಂಡಲದ ಪ್ರತಿ ಸದನದಿಂದಲೂ ಆಯಾ ಸದನದ ಸಮಸ್ತ ಸದಸ್ಯ ಸಂಖ್ಯೆಯ ಬಹುಮತದ ಮೂಲಕ ಮತ್ತು ಹಾಜರಿರುವ ಮತ್ತು ಮತ ಕೊಡುವ ಆಯಾ ಸದನದ ಸದಸ್ಯರಲ್ಲಿ ಮೂರನೇ ಎರಡು ಭಾಗಕ್ಕೆ ಕಡಿಮೆಯಿಲ್ಲದ ಬಹುಮತದ ಮೂಲಕ ಸಮರ್ಥಿತವಾದ ಒಂದು ಮನವಿಯನ್ನು ರಾಜ್ಯಪಾಲರಿಗೆ ಅದೇ ಅಧಿವೇಶನದಲ್ಲಿ ಒಪ್ಪಿಸಿದ ತರುವಾಯ ರಾಜ್ಯಪಾಲರು ಹೊರಡಿಸಿರುವ ಆದೇಶದಿಂದಲ್ಲದೆ ಪದಚ್ಯುತಿಗೊಳಿಸತಕ್ಕದ್ದಲ್ಲ.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಪದಚ್ಯುತಿಗೊಳಿಸುವ ಗೊತ್ತುವಳಿ ಸೂಚನೆಯನ್ನು ಲಿಖಿತದಲ್ಲಿ,–

(ಎ) ಕರ್ನಾಟಕ ರಾಜ್ಯ ವಿಧಾನ ಸಭೆಯ ಸಭಾಧ್ಯಕ್ಷರಿಗೆ, ಆ ಸದನದ ಮೂರನೇ ಒಂದಕ್ಕಿಂತ ಕಡಿಮೆ ಇಲ್ಲದ ಒಟ್ಟು ಸದಸ್ಯರ ಯುಕ್ತ ಸಹಿಯೊಂದಿಗೆ; ಅಥವಾ

(ಬಿ) ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಗೆ, ಆ ಸದನದ ಮೂರನೇ ಒಂದಕ್ಕಿಂತ ಕಡಿಮೆ ಇಲ್ಲದ ಒಟ್ಟು ಸದಸ್ಯರ ಯುಕ್ತ ಸಹಿಯೊಂದಿಗೆ, –ನೀಡಬಹುದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳು, ಯಾರಾದರೂ ಇದ್ದಲ್ಲಿ, ಅವರೊಡನೆ ಸಮಾಲೋಚಿಸಿದ ತರುವಾಯ ಮತ್ತು ತನಗೆ ಲಭ್ಯವಿರಬಹುದಾದ ಅಂಥ ವಾಸ್ತವಾಂಶಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಪರಿಗಣಿಸಿದ ತರುವಾಯ ಮತ್ತು ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ಅಸಾಮರ್ಥ್ಯತೆ ಅಥವಾ ದುರ್ವರ್ತನೆಯ ಪ್ರಕರಣ ಇದೆ ಎಂಬುದರ ಬಗ್ಗೆ ಮೇಲ್ನೋಟಕ್ಕೆ ತನಗೆ ಮನದಟ್ಟಾದ ತರುವಾಯ, ಗೊತ್ತುವಳಿಯನ್ನು ಅಂಗೀಕರಿಸಬಹುದು ಅಥವಾ ಅದನ್ನು ಅಂಗೀಕರಿಸುವುದನ್ನು ನಿರಾಕರಿಸಬಹುದು.

(4) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಯನ್ನು ಅಂಗೀಕರಿಸಿದಲ್ಲಿ, ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರು ಗೊತ್ತುವಳಿಯನ್ನು ಬಾಕಿ ಇಡತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನನ್ನು ಪದಚ್ಯುತಿಗೊಳಿಸುವಂತೆ ಕೋರಿರುವ ಆಧಾರದಲ್ಲಿ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ವಿಷಯವನ್ನು ಉಲ್ಲೇಖಿಸತಕ್ಕದ್ದು:

ಪರಂತು, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಗೊತ್ತುವಳಿ ಸೂಚನೆಗಳನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಒಂದೇ ದಿನ ನೀಡಿದ್ದಲ್ಲಿ, ಉಭಯ ಸದನಗಳಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿದ ಹೊರತು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಉಲ್ಲೇಖಿಸತಕ್ಕದ್ದಲ್ಲ ಮತ್ತು ಉಭಯ ಸದನಗಳಲ್ಲಿ ಅಂಥ ಗೊತ್ತುವಳಿಯನ್ನು ಅಂಗೀಕರಿಸಿದ್ದಲ್ಲಿ, ಸಭಾಧ್ಯಕ್ಷರು ಮತ್ತು ಸಭಾಪತಿಯವರು ಜಂಟಿಯಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ವಿಷಯವನ್ನು ಉಲ್ಲೇಖಿಸತಕ್ಕದ್ದು.

ಮತ್ತು ಪರಂತು, ಮೇಲೆ ಹೇಳಿದ ಗೊತ್ತುವಳಿ ಸೂಚನೆಗಳನ್ನು ವಿಧಾನ ಮಂಡಲದ ಸದನಗಳಲ್ಲಿ ಬೇರೆ ಬೇರೆ ದಿನಾಂಕಗಳಂದು ನೀಡಲಾಗಿದ್ದರೆ, ತದನಂತರ ನೀಡಲಾದ ಸೂಚನೆಯು ತಿರಸ್ಕೃತವಾಗತಕ್ಕದ್ದು.

(5) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಗೊತ್ತುವಳಿಯನ್ನು ಉಲ್ಲೇಖಿಸಿದಾಗ, ಕರ್ನಾಟಕದ ಮುಖ್ಯ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರವಾಗಿ ಅವರು ನಾಮನಿರ್ದೇಶಿಸಿರುವ ಉಚ್ಚನ್ಯಾಯಾಲಯದ ಅಂಥ ಇತರ ನ್ಯಾಯಾಧೀಶರು, ಯಾವ ಉದ್ದೇಶದ ಆಧಾರದಲ್ಲಿ ತನಿಖೆಯನ್ನು ನಡೆಸಲು ಉದ್ದೇಶಿಸಲಾಗಿದೆಯೋ ಅದರ ಮೇಲೆ ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ನಿರ್ದಿಷ್ಟ ಚಾರ್ಜುಗಳನ್ನು ರೂಪಿಸತಕ್ಕದ್ದು. ಅಂಥ ಪ್ರತಿಯೊಂದು ಚಾರ್ಜನ್ನು ಯಾವ ಆಧಾರದ ಮೇಲೆ ಮಾಡಲಾಗಿದೆಯೋ ಆ ಆಧಾರಗಳ ಪಟ್ಟಿಯೊಂದಿಗೆ ಅಂಥ ಚಾರ್ಜುಗಳನ್ನು

ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಮತ್ತು ಆತನಿಗೆ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವರು ಹಾಗೆ ನಾಮನಿರ್ದೇಶನ ಮಾಡಿದ ಉಚ್ಚ ನ್ಯಾಯಾಲಯದ ಇತರ ನ್ಯಾಯಾಧೀಶರು, ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಅವಧಿಯೊಳಗೆ ರಕ್ಷಣಾ ಲಿಖಿತ ಹೇಳಿಕೆಯನ್ನು ಹಾಜರುಪಡಿಸುವುದಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(6) ರಾಜ್ಯ ಸರ್ಕಾರವು, ಸಭಾಧ್ಯಕ್ಷರು ಅಥವಾ ಸಭಾಪತಿ ಅಥವಾ ಸಂದರ್ಭಾನುಸಾರವಾಗಿ ಇಬ್ಬರೂ ಅಗತ್ಯಪಡಿಸಿದರೆ, ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ಪ್ರಕರಣವನ್ನು ನಡೆಸಲು ಒಬ್ಬ ವಕೀಲರನ್ನು ನೇಮಿಸಬಹುದು.

(7) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ತನಿಖೆಯನ್ನು ನಡೆಸುವಲ್ಲಿ ತಮ್ಮದೇ ಆದ ಪ್ರಕ್ರಿಯೆಯನ್ನು ನಿಯಂತ್ರಿಸುವ ಅಧಿಕಾರವಿರತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನಿಗೆ ರಕ್ಷಣೆಯ ಲಿಖಿತ ಹೇಳಿಕೆಯನ್ನು ಹಾಜರುಪಡಿಸುವುದಕ್ಕೆ, ಸಾಕ್ಷಿಗಳನ್ನು ಪಾಟಿಸವಾಲು ಮಾಡುವುದಕ್ಕೆ, ಸಾಕ್ಷ್ಯವನ್ನು ಒದಗಿಸಲು ಮತ್ತು ತನ್ನ ರಕ್ಷಣೆಯನ್ನು ಹೇಳಿಕೊಳ್ಳಲು ಆತನಿಗೆ ಅಥವಾ ಆತನ ವಕೀಲನ ಮೂಲಕ ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(8) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತನಿಖೆಯನ್ನು ಮಾಡುವ ಉದ್ದೇಶಕ್ಕಾಗಿ, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವನು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಅಡಿಯಲ್ಲಿ ದಾವೆಯನ್ನು ನಡೆಸಲು, ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾವೊಬ್ಬ ವ್ಯಕ್ತಿಯ ಹಾಜರಾತಿಯನ್ನು ಸಮನು ಮಾಡುವುದು ಮತ್ತು ಒತ್ತಾಯಪಡಿಸುವುದು ಮತ್ತು ಆತನನ್ನು ಪ್ರಮಾಣದ ಮೇಲೆ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಹುಡುಕುವುದು ಮತ್ತು ಸಲ್ಲಿಸುವುದನ್ನು ಅಗತ್ಯಪಡಿಸುವುದು;

(ಸಿ) ಪ್ರಮಾಣದ ಮೇಲೆ ಸಾಕ್ಷಿಯನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳು ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನುಗಳನ್ನು ಹೊರಡಿಸುವುದು.

(9) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮಗೆ ಉಲ್ಲೇಖಿಸಿದ ವಿಷಯವನ್ನು ತನಿಖೆ ಮಾಡಿದ ತರುವಾಯ ಒಂದು ವರದಿಯನ್ನು ಸಿದ್ದಪಡಿಸತಕ್ಕದ್ದು ಮತ್ತು ಅದನ್ನು ಅಂಥ ಉಲ್ಲೇಖಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರವಾಗಿ ಸಭಾಪತಿಯವರಿಗೆ ಸಲ್ಲಿಸತಕ್ಕದ್ದು ಮತ್ತು ವಿಷಯವನ್ನು ಇಬ್ಬರೂ ಉಲ್ಲೇಖಿಸಿದ ಸಂದರ್ಭದಲ್ಲಿ ಸಭಾಧ್ಯಕ್ಷರಿಗೆ ಮತ್ತು ಸಭಾಪತಿಯವರಿಗೆ ಸಲ್ಲಿಸತಕ್ಕದ್ದು.

(10) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಅಥವಾ ಅವರು ನಾಮನಿರ್ದೇಶಿಸಿದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವರದಿಯು, ಯಾವ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ ಚಾರ್ಜನ್ನು ಮಾಡಲಾಗಿದೆಯೋ, ಅವರು ಯಾವುದೇ ದುರ್ವರ್ತನೆಯ ತಪ್ಪಿತಸ್ಥರಲ್ಲ ಅಥವಾ ಯಾವುದೇ ಅಸಾಮರ್ಥ್ಯತೆಯಿಂದ ಬಳಲುತ್ತಿಲ್ಲ ಎಂಬುದನ್ನು ಒಳಗೊಂಡಿದ್ದರೆ, ಅಂಥ ವರದಿಯ ಸಂಬಂಧದಲ್ಲಿ ರಾಜ್ಯ ವಿಧಾನ ಮಂಡಲದ ಯಾವುದೇ ಸದನದಲ್ಲಿ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಬಾಕಿ ಗೊತ್ತುವಳಿಯ ಸಂಬಂಧದಲ್ಲಿ ಮುಂದಿನ ಪ್ರಕ್ರಿಯೆಯು ಅವಶ್ಯವಿರತಕ್ಕದ್ದಲ್ಲ.

(11) ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಅಥವಾ ಅವರು ನಾಮನಿರ್ದೇಶಿಸಿದ ನ್ಯಾಯಾಧೀಶನ ವರದಿಯು, ಯಾವ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ ಚಾರ್ಜನ್ನು ಮಾಡಲಾಗಿದೆಯೋ, ಅವರು ಯಾವುದೇ ದುರ್ವರ್ತನೆಯ ತಪ್ಪಿತಸ್ಥರೆಂದೂ ಅಥವಾ ಯಾವುದೇ ಅಸಾಮರ್ಥ್ಯತೆಯಿಂದ ಬಳಲುತ್ತಿದ್ದಾರೆ ಎಂಬುದನ್ನು ಒಳಗೊಂಡಿದ್ದರೆ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಇತ್ಯರ್ಥದಲ್ಲಿರುವ ಗೊತ್ತುವಳಿಯ ಜೊತೆಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯನ್ಯಾಯಾಧೀಶರ ಅಥವಾ ಸಂದರ್ಭಾನುಸಾರವಾಗಿ ಅವರು ನಾಮನಿರ್ದೇಶಿಸಿದ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ವರದಿಯನ್ನು, ರಾಜ್ಯ ವಿಧಾನಮಂಡಲದ ಸದನ ಅಥವಾ ಸದನಗಳು ಪರಿಗಣನೆಗಾಗಿ ತೆಗೆದುಕೊಳ್ಳತಕ್ಕದ್ದು.

(12) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಗೊತ್ತುವಳಿಯನ್ನು, (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನವು ಅಂಗೀಕರಿಸಿದಲ್ಲಿ, ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ದುರ್ವರ್ತನೆಯು ಅಥವಾ ಅಸಾಮರ್ಥ್ಯತೆಯು ರುಜುವಾತಾಗಿದೆ ಎಂದು ಭಾವಿಸಕತಕ್ಕದ್ದು ಮತ್ತು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪದಚ್ಯುತಿಗಾಗಿನ ಕೋರಿಕೆಯುಳ್ಳ, ಸಭಾಧ್ಯಕ್ಷ ಮತ್ತು ಸಭಾಪತಿಯವರ ಯುಕ್ತ ಸಹಿ ಹೊಂದಿರುವ ಮನವಿಯನ್ನು ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು.

(13) (12)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಮನವಿಗೆ ರಾಜ್ಯಪಾಲರು ಒಪ್ಪಿಗೆಯನ್ನು ನೀಡಿದಾಗ, ಲೋಕಾಯುಕ್ತನನ್ನು ಅಥವಾ ಉಪಲೋಕಾಯುಕ್ತನನ್ನು ಕಾನೂನಿನ ಅನುಸಾರವಾಗಿ ಹುದ್ದೆಯಿಂದ ತೆಗೆದುಹಾಕಲಾಗಿದೆ ಎಂದು ಭಾವಿಸತಕ್ಕದ್ದು.

(14) ಲೋಕಾಯುಕ್ತ ಅಥವಾ ಸಂದರ್ಭಾನುಸಾರವಾಗಿ ಉಪಲೋಕಾಯುಕ್ತನ ವಿರುದ್ಧ ರಾಜ್ಯ ವಿಧಾನ ಮಂಡಲದ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿಯನ್ನು ಮಂಡಿಸಿರುವಾಗ, ಹಾಗೂ ರಾಜ್ಯ ವಿಧಾನ ಮಂಡಲದ ಸದನ ಅಥವಾ ಸದನಗಳ ಮುಂದೆ ಆತನ ಪದಚ್ಯುತಿಗಾಗಿ ಗೊತ್ತುವಳಿಯು ಇತ್ಯರ್ಥದಲ್ಲಿರುವಾಗ, ಆತನನ್ನು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದರಿಂದ ತಡೆಹಿಡಿಯುವುದು.][1]

1. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಸೇರಿಸಲಾಗಿದೆ.

7. ಲೋಕಾಯುಕ್ತ ಮತ್ತು ಒಬ್ಬ ಉಪಲೋಕಾಯುಕ್ತನು ತನಿಖೆ ಮಾಡಬಹುದಾದ ವಿಷಯಗಳು.–

[1][(1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು,–

(ಎ) (i) ಮುಖ್ಯಮಂತ್ರಿ;

(ii) ಒಬ್ಬ ಮಂತ್ರಿ;

(iii) ರಾಜ್ಯ ವಿಧಾನಮಂಡಲದ ಒಬ್ಬ ಸದಸ್ಯ;

(iv) ಒಂದು ಸಂಘ, ಸಹಕಾರ ಸಂಘ ಅಥವಾ ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಸರ್ಕಾರಿ ಕಂಪನಿಯು ಒಳಗೊಂಡಂತೆ ಒಂದು ಪ್ರಾಧಿಕಾರ, ಮಂಡಳಿ ಅಥವಾ ಸಮಿತಿಯ ಅಥವಾ ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಒಂದು ನಿಗಮದ ಅಥವಾ ಶಾಸನಾತ್ಮಕವಾದ ಅಥವಾ ಶಾಸನಾತ್ಮಕವಲ್ಲದ ಒಂದು ನಿಕಾಯದ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಒಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷ (ಯಾವುದೇ ಹೆಸರಿನಿಂದ ಕರೆದಿರಲಿ) ಅಥವಾ ಒಬ್ಬ ಸದಸ್ಯನು,

– ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಅನುಮೋದನೆಯೊಡನೆ ಕೈಗೊಂಡ ಯಾವುದೇ ಕ್ರಮದ ಸಂಬಂಧದಲ್ಲಿ ಒಂದು ದೂರು ಅಥವಾ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾದ ಸಂದರ್ಭದಲ್ಲಿ,

(ಬಿ) ಮಾಸಿಕ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ, ನಿಗದಿತ ವೇತನ, ಸಂಬಳ ಅಥವಾ ಗೌರವಧನವನ್ನಾಗಲೀ ಅಥವಾ ಕಾಲಕಾಲಕ್ಕೆ ಪರಿಷ್ಕರಿಸಬಹುದಾದ, ಇಪ್ಪತ್ತು ಸಾವಿರ ರೂಪಾಯಿಗಳಿಗೂ ಹೆಚ್ಚಿನ ಕನಿಷ್ಠ ವೇತನವುಳ್ಳ ವೇತನ ಶ್ರೇಣಿಯ ಒಂದು ಹುದ್ದೆ ಅಥವಾ ಪದವನ್ನು ಹೊಂದಿರುವ ಯಾವೊಬ್ಬ ಇತರ ಸಾರ್ವಜನಿಕ ನೌಕರನು ಕೈಗೊಂಡ ಅಂಥ ಕ್ರಮದ ಸಂದರ್ಭದಲ್ಲಿ ಅಥವಾ ಅಂಥ ಕ್ರಮವು ಒಂದು ದೂರು ಅಥವಾ ಆಪಾದನೆಯ ವಸ್ತುವಾಗಬಹುದೆಂದು ಅಥವಾ ಆಗಿರಬಹುದಾಗಿತ್ತೆಂದು ಲೋಕಾಯುಕ್ತನು ಅಭಿಪ್ರಾಯಪಡುವ ಯಾವುದೇ ಸಂದರ್ಭದಲ್ಲಿ ಅದನ್ನು ಲಿಖಿತದಲ್ಲಿ ದಾಖಲುಮಾಡಿ,

– ಲೋಕಾಯುಕ್ತನು ಅಂಥ ಕ್ರಮದ ಬಗ್ಗೆ ತನಿಖೆ ನಡೆಸಬಹುದು.][1]

1. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮುಖ್ಯಮಂತ್ರಿ, ಮಂತ್ರಿ, ರಾಜ್ಯ ವಿಧಾನ ಮಂಡಲದ ಸದಸ್ಯ, ಕಾರ್ಯದರ್ಶಿ ಅಥವಾ (1) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಇತರ ಸಾರ್ವಜನಿಕ ನೌಕರನಾಗಿರುವ ಯಾವೊಬ್ಬ ಸಾರ್ವಜನಿಕ ನೌಕರನು ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಮಂಜೂರಾತಿ ಪಡೆದು ಕೈಗೊಂಡ ಕ್ರಮವನ್ನು ಕುರಿತು ದೂರು ಅಥವಾ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾದಂಥ ಸಂದರ್ಭದಲ್ಲಿ ಅಥವಾ ಅಂಥ ಕ್ರಮವು ಒಂದು ದೂರು ಇಲ್ಲವೇ ಆಪಾದನೆಯ ಕಾರಣ ವಸ್ತುವಾಗಬಹುದು ಅಥವಾ ಆಗಿರಬಹುದಾಗಿತ್ತು ಎಂದು [2][ಉಪಲೋಕಾಯುಕ್ತನು ಲಿಖಿತದಲ್ಲಿ ದಾಖಲ್ಮಾಡಿದ][2] ಅಭಿಪ್ರಾಯಪಡುವ ಯಾವುದೇ ಸಂದರ್ಭದಲ್ಲಿ ಉಪಲೋಕಾಯುಕ್ತನು ಅಂಥ ಕ್ರಮದ ಕುರಿತು ತನಿಖೆ ಮಾಡಬಹುದು.

[1][(2ಎ) ಉಪ–ಪ್ರಕರಣ (1) ಮತ್ತು (2) ರಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ನೌಕರನು ಕೈಗೊಂಡ ಅಥವಾ ಅವನ ಸಾಮಾನ್ಯ ಅಥವಾ ವಿಶೇಷ ಅನುಮೋದನೆಯೊಂದಿಗೆ ಕೈಗೊಳ್ಳಲಾದ ಯಾವುದೇ ಕ್ರಮವನ್ನು ರಾಜ್ಯ ಸರ್ಕಾರವು ತನಿಖೆಗಾಗಿ ಕಳುಹಿಸಿದರೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತನಿಖೆ ಮಾಡಬಹುದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(3) ಈ ಅಧಿನಿಯಮದ ಮೇರೆಗೆ ಇಬ್ಬರು ಅಥವಾ ಹೆಚ್ಚು ಉಪಲೋಕಾಯುಕ್ತರನ್ನು ನೇಮಕ ಮಾಡಿರುವಲ್ಲಿ, [1][ಲೋಕಾಯುಕ್ತನು][1] ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅವರಲ್ಲಿ ಪ್ರತಿಯೊಬ್ಬರಿಗೆ ಈ ಅಧಿನಿಯಮದ ಮೇರೆಗೆ ಅವರು ತನಿಖೆ ಮಾಡಬಹುದಾದ ವಿಷಯಗಳನ್ನು ವಹಿಸಿ ಕೊಡಬಹುದು:

ಪರಂತು, ಈ ಅಧಿನಿಯಮದ ಮೇರೆಗೆ ಒಬ್ಬ ಉಪಲೋಕಾಯುಕ್ತನು ಮಾಡಿದ ಯಾವುದೇ ತನಿಖೆಯು ಮತ್ತು ಅಂಥ ತನಿಖೆಯ ಸಂಬಂಧದಲ್ಲಿ ಅವನು ಕೈಗೊಂಡ ಕ್ರಮ ಅಥವಾ ನಿರ್ವಹಿಸಿದ ಕಾರ್ಯವು ಅಂಥ ಆದೇಶದ ಮೂಲಕ ಅವನಿಗೆ ವಹಿಸಿಕೊಡದ ವಿಷಯಕ್ಕೆ ಸಂಬಂಧಿಸಿದೆ ಎಂಬ ಕಾರಣಮಾತ್ರದಿಂದಲೇ ಪ್ರಶ್ನಾರ್ಹವಾಗತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

[1][(4) ಉಪ-ಪ್ರಕರಣ (1)ರಿಂದ (3)ರಲ್ಲಿ ಏನೇ ಒಳಗೊಂಡಿದ್ದರೂ, [2][ಉಪಲೋಕಾಯುಕ್ತನ ಪದವು ಆತನ ಮರಣ, ರಾಜೀನಾಮೆ, ನಿವೃತ್ತಿ, ತೆಗೆದುಹಾಕುವುದು ಅಥವಾ ಅನ್ಯಥಾ ಕಾರಣಗಳಿಂದಾಗಿ ರಿಕ್ತವಾದಾಗ ಅಥವಾ][2] ಗೈರುಹಾಜರಿ, ಅಸ್ವಸ್ಥತೆ ಅಥವಾ ಇತರ ಯಾವುವೇ ಕಾರಣಗಳಿಂದಾಗಿ ಒಬ್ಬ ಉಪ-ಲೋಕಾಯುಕ್ತನು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಅವನ ಪ್ರಕಾರ್ಯಗಳನ್ನು ಇತರ ಉಪಲೋಕಾಯುಕ್ತನಿದ್ದರೆ ಅವನು ಮತ್ತು ಇತರ ಉಪ-ಲೋಕಾಯುಕ್ತನು ಇಲ್ಲದಿದ್ದರೆ ಲೋಕಾಯುಕ್ತನು ನಿರ್ವಹಿಸಬಹುದು][1]

[3][(5) (1) ರಿಂದ (4)ನೇ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಲೋಕಾಯುಕ್ತನ ಅಭಿಪ್ರಾಯದಲ್ಲಿ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳು ಮುಂತಾದವುಗಳಲ್ಲಿ ಯಾವುದೇ ಒಂದನ್ನು ಆಲಿಸಲು ಅಥವಾ ಪರಿಗಣಿಸಲು ಅಥವಾ ಯಾವುದೇ ರೀತಿಯಲ್ಲಿ ವ್ಯವಹರಿಸಲು ಅಥವಾ ವಿಲೆ ಮಾಡಲು ಆತನು ಅಸಮರ್ಥನಾಗಿದ್ದಲ್ಲಿ, ಆತನು, ಆದೇಶದ ಮೂಲಕ, ಲಿಖಿತದಲ್ಲಿ, ಅಂಥ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ಉಪಲೋಕಾಯುಕ್ತರಲ್ಲಿ ಯಾರಾದರೊಬ್ಬರಿಗೆ ಒಪ್ಪಿಸಬಹುದು ಅಥವಾ ವರ್ಗಾಯಿಸಬಹುದು:

ಪರಂತು, ಅಂಥ ಒಪ್ಪಿಸಿದ ಅಥವಾ ವರ್ಗಾಯಿಸಿದ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ಉಪಲೋಕಾಯುಕ್ತನು ತೆಗೆದುಕೊಂಡಾಗ, ಆತನು ಅಂಥ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳನ್ನು ವಿಲೆಗೊಳಿಸುವ ಉದ್ದೇಶಗಳಿಗಾಗಿ ಲೋಕಾಯುಕ್ತನದೇ ರೀತಿಯಲ್ಲಿ ಮತ್ತು ಅದೇ ವ್ಯಾಪ್ತಿಯಲ್ಲಿ ಸಕ್ಷಮನೆಂದು ಭಾವಿಸತಕ್ಕದ್ದು ಹಾಗೂ ಲೋಕಾಯುಕ್ತನ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು:

ಮತ್ತು ಪರಂತು, ಮೇಲೆ ಹೇಳಿದ ವಿಷಯದಲ್ಲಿ ಉಪಲೋಕಾಯುಕ್ತರು ತೆಗೆದುಕೊಂಡ ಕ್ರಮ ಅಥವಾ ಮಾಡಿದ ಆದೇಶಗಳು, ಲೋಕಾಯುಕ್ತನು ತೆಗೆದುಕೊಂಡಂತೆಯೇ ಅಥವಾ ಮಾಡಿದಂತೆಯೇ ಪರಿಣಾಮಕಾರಿಯಾಗಿರತಕ್ಕದ್ದು ಮತ್ತು ಸಿಂಧುವಾಗಿರತಕ್ಕದ್ದು:

ಅಲ್ಲದೇ ಪರಂತು, ಅಂಥ ಒಪ್ಪಿಸಿದ ಅಥವಾ ವರ್ಗಾಯಿಸಿದ ಪ್ರಕರಣಗಳು ಅಥವಾ ದೂರುಗಳು ಅಥವಾ ವಿಷಯಗಳ ಸಂಬಂಧದಲ್ಲಿ ಉಪಲೋಕಾಯುಕ್ತರು ತೆಗೆದುಕೊಂಡ ಯಾವುದೇ ಕ್ರಮ ಅಥವಾ ಮಾಡಿದ ಕೆಲಸಗಳು, ಈ ಅಧಿನಿಯಮದ ಅಡಿಯಲ್ಲಿ ಆತನಿಗೆ ವಹಿಸಿಕೊಡದ ವಿಷಯಕ್ಕೆ ಅಂಥ ತನಿಖೆಯು ಸಂಬಂಧಿಸಿದೆ ಎಂಬ ಕಾರಣ ಮಾತ್ರದಿಂದಲೇ ಪ್ರಶ್ನಾರ್ಹವಾಗತಕ್ಕದ್ದಲ್ಲ.][3]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 05ರ ಮೂಲಕ ದಿನಾಂಕ: 27.03.2020ರಿಂದ ಸೇರಿಸಲಾಗಿದೆ.

8. ತನಿಖೆಗೆ ಒಳಪಡದ ವಿಷಯಗಳು.- (1) ಇದರಲ್ಲಿ ಇನ್ನು ಮುಂದೆ ಉಪ ಬಂಧಿಸಿರುವ ಹೊರತಾಗಿ, ಯಾವುದೇ ಕ್ರಮವನ್ನು ಕುರಿತು ದೂರನ್ನು ಒಳಗೊಂಡ ಫಿರ್ಯಾದನ್ನು ನೀಡಿದಾಗ,-

(ಎ) ಅಂಥ ಕ್ರಮವು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದರೆ; ಅಥವಾ

(ಬಿ) ಫಿರ್ಯಾದು ನೀಡಿದವರಿಗೆ ಯಾವುದೇ ನ್ಯಾಯಾಧೀಕರಣ, [1][ನ್ಯಾಯಾಲಯ, ಅಧಿಕಾರಿ ಮತ್ತು ಇತರ ಪ್ರಾಧಿಕಾರ][1] ದ ಮುಂದೆ ಅಪೀಲು, ಪುನರೀಕ್ಷಣ ಅಥವಾ ಪುನರ್ವಿಲೋಕನದ ಅಥವಾ ಇತರ ವ್ಯವಹರಣೆಗಳ ಮೂಲಕ ಯಾವುದೇ ಪರಿಹಾರ ಪಡೆಯಲು ಅವಕಾಶ ಇರುವುದಾದರೆ ಅಥವಾ [1][ಇದ್ದರೆ ಮತ್ತು ಅದರ ಪ್ರಯೋಜನ ಪಡೆಯದಿದ್ದರೆ,][1]

-ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಯನ್ನು ನಡೆಸತಕ್ಕದ್ದಲ್ಲ.

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಪ್ರತಿಯೋಸಲಾಗಿದೆ.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು,–

(ಎ) ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಸಹಮತಿ ಪಡೆದು ವಿದ್ಯುಕ್ತ ಮತ್ತು ಸಾರ್ವಜನಿಕ ತನಿಖೆ ನಡೆಯತಕ್ಕದ್ದೆಂದು ಆದೇಶಿಸಲಾದ ಯಾವುದೇ ಕ್ರಮದ ಬಗ್ಗೆ;

(ಬಿ) ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಸಹಮತಿ ಪಡೆದು ವಿಚಾರಣಾ ಆಯೋಗಗಳ ಅಧಿನಿಯಮ, 1952ರ ಮೇರೆಗೆ ವಿಚಾರಣೆಗಾಗಿ ಕಳುಹಿಸಿ ಕೊಡಲಾದ ಎಂದು ವಿಷಯಕ್ಕೆ ಸಂಬಂಧಿಸಿದ ಯಾವುದೇ ಕ್ರಮದ ಬಗ್ಗೆ;

(ಸಿ) ಯಾವ ಕ್ರಮದ ವಿರುದ್ಧ ದೂರನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾಗಿದೆಯೋ ಆ ಕ್ರಮವು ಫಿರ್ಯಾದು ಸಲ್ಲಿಸಿದವರಿಗೆ ತಿಳಿದ ದಿನಾಂಕದಿಂದ ಆರು ತಿಂಗಳ ಅವಧಿಯು ಮುಕ್ತಾಯವಾದ ತರುವಾಯ ಆ ಫಿರ್ಯಾದನ್ನು ನೀಡಿರುವ ಸಂದರ್ಭದಲ್ಲಿ; ಅಥವಾ

(ಡಿ) ಯಾವ ಕ್ರಮದ ವಿರುದ್ಧ ಆಪಾದನೆಯನ್ನು ಒಳಗೊಂಡ ಫಿರ್ಯಾದನ್ನು ಸಲ್ಲಿಸಲಾಗಿದೆಯೋ ಆ ಕ್ರಮ ಯಾವ ದಿನಾಂಕದಂದು ಕೈಗೊಳ್ಳಲಾಯಿತು ಎಂದು ಆಪಾದಿಸಲಾಗಿದೆಯೋ ಆ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ನೀಡಿರುವ ಫಿರ್ಯಾದಿನ ಬಗ್ಗೆ;

–ತನಿಖೆ ನಡೆಸತಕ್ಕದ್ದಲ್ಲ:

ಪರಂತು, (ಸಿ) ಮತ್ತು (ಡಿ) ಖಂಡಗಳಲ್ಲಿ ಉಲ್ಲೇಖಿಸಿದ ಫಿರ್ಯಾದನ್ನು ಆ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಲ್ಲಿಸದಿರಲು ತನಗೆ ಸಾಕಷ್ಟು ಕಾರಣಗಳಿದ್ದವೆಂದು ಫಿರ್ಯಾದಿಯು ಮನವರಿಕೆ ಮಾಡಿಕೊಟ್ಟರೆ, ಆ ಫಿರ್ಯಾದನ್ನು ತನಿಖೆಗಾಗಿ ಅಂಗೀಕರಿಸಬಹುದು.

(3) ವಿವೇಚನಾಧಿಕಾರವನ್ನು ಚಲಾಯಿಸುವಲ್ಲಿ ಒಳಗೊಳ್ಳಬೇಕಾದ ಅಂಶಗಳ ಕೊರತೆ ಮೇಲ್ನೋಟಕ್ಕೆ ವಿವೇಚನಾಧಿಕಾರವನ್ನು ತಪ್ಪಾಗಿ ಚಲಾಯಿಸಲಾಗಿದೆಯೆಂದು ಗಮನಿಸುವಷ್ಟರ ಮಟ್ಟಿಗೆ ಇವೆಯೆಂದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದ ಹೊರತು ವಿವೇಚನಾಧಿಕಾರವನ್ನು ಚಲಾಯಿಸುವುದನ್ನೊಳಗೊಂಡ ಯಾವುದೇ ಆಡಳಿತಾತ್ಮಕ ಕ್ರಮವನ್ನು ಪ್ರಶ್ನಿಸಲು ದೂರನ್ನೊಳಗೊಂಡ ಯಾವುದೇ ಫಿರ್ಯಾದಿನ ಸಂಬಂಧದಲ್ಲಿ ಈ ಅಧಿನಿಯಮದಲ್ಲಿ ಇರುವುದು ಯಾವುದೂ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಅಧಿಕಾರ ನೀಡುತ್ತದೆಂದು ಅರ್ಥೈಸತಕ್ಕದ್ದಲ್ಲ.

9. ಫಿರ್ಯಾದುಗಳಿಗೆ ಮತ್ತು ತನಿಖೆಗೆ ಸಂಬಂಧಿಸಿದ ಉಪಬಂಧಗಳು.– (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಫಿರ್ಯಾದು ನೀಡಬಹುದು.

[2][ಪರಂತು, ದೂರುಗಳ ಸಂದರ್ಭದಲ್ಲಿ ಬಾಧಿತ ವ್ಯಕ್ತಿಯು ಮರಣ ಹೊಂದಿದ್ದಲ್ಲಿ ಅಥವಾ ಯಾವುದೇ ಕಾರಣಕ್ಕಾಗಿ ಕಾರ್ಯ ನಿರ್ವಹಿಸಲು ಆತನು ಸ್ವತ: ಅಸಮರ್ಥನಾಗಿದ್ದರೆ, ಆತನ ಪರವಾಗಿ ಆತನ ಕಾನೂನುಬದ್ಧ ಪ್ರತಿನಿಧಿಗಳು ಅಥವಾ ಈ ಸಂಬಂಧದಲ್ಲಿ ಲಿಖಿತದಲ್ಲಿ ಆತನು ಪ್ರಾಧಿಕರಿಸಿದ ಯಾವೊಬ್ಬ ಇತರ ವ್ಯಕ್ತಿಯು ಫಿರ್ಯಾದನ್ನು ಸಲ್ಲಿಸಬಹುದು ಅಥವಾ ಈಗಾಗಲೇ ಸಲ್ಲಿಸಿದ್ದರೆ, ಅಭಿಯೋಜನೆ ನಡೆಸಬಹುದು.][2]

(2) ಪ್ರತಿಯೊಂದು ಫಿರ್ಯಾದನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒಂದು ಅಫಿಡವಿಟ್ಟಿನ ಸಹಿತ ವಿವರಣೆಯ ರೂಪದಲ್ಲಿ ಸಲ್ಲಿಸಬಹುದು.

(3) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತಾನು ಸೂಕ್ತವೆಂದು ಭಾವಿಸುವಂಥ ಪ್ರಾರಂಭಿಕ ತನಿಖೆಯನ್ನು ನಡೆಸಿದ ತರುವಾಯ ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಯನ್ನು ನಡೆಸಲು ಉದ್ದೇಶಿಸಿರುವಲ್ಲಿ, ಅವನು,–

(ಎ) ಫಿರ್ಯಾದಿನ [2][ಮತ್ತು ತನಿಖೆಯನ್ನು ಆತನು ತಾನಾಗಿಯೇ ಪ್ರಾರಂಭಿಸಿದ್ದರೆ, (7)ನೇ ಪ್ರಕರಣದ (1) ಅಥವಾ ಸಂದರ್ಭಾನುಸಾರ (2) ನೇ ಉಪಪ್ರಕರಣದ ಅಡಿಯಲ್ಲಿ ತನಿಖೆಯನ್ನು ಪ್ರಾರಂಭಿಸುವುದಕ್ಕಾಗಿ ದಾಖಲಿಸಿದ ತನ್ನ ಅಭಿಪ್ರಾಯದ][2] ಒಂದು ಪ್ರತಿಯನ್ನು ಸಾರ್ವಜನಿಕ ನೌಕರನಿಗೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು;

(ಬಿ) ಅಂಥ ಫಿರ್ಯಾದಿನ [2][ಅಥವಾ 7ನೇ ಪ್ರಕರಣದ (1) ಮತ್ತು ಸಂದರ್ಭಾನುಸಾರ (2)ನೇ ಉಪಪ್ರಕರಣದ ಅಡಿಯಲ್ಲಿ ದಾಖಲಿಸಿದ ಅಭಿಪ್ರಾಯದ][2] ಮೇಲೆ ತನ್ನ ಟಿಪ್ಪಣಿಗಳನ್ನು ನೀಡಲು ಅಂಥ ಸಾರ್ವಜನಿಕ ನೌಕರನಿಗೆ ಅವಕಾಶ ಕೊಡತಕ್ಕದ್ದು;

(ಸಿ) ತನಿಖೆಗೆ ಸಂಬಂಧಪಟ್ಟ ದಸ್ತಾವೇಜುಗಳ ಸುರಕ್ಷಿತ ಅಭಿರಕ್ಷೆಯ ಬಗ್ಗೆ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು.

[3][(3ಎ) (3)ನೇ ಉಪಪ್ರಕರಣದಡಿಯಲ್ಲಿ ತನಿಖೆಗೆ ಆದೇಶಿಸುವ ಮೊದಲು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಉದ್ದೇಶಿಸಲಾದ ಪ್ರಾರಂಭಿಕ ವಿಚಾರಣೆಯನ್ನು, ಸಾಮಾನ್ಯವಾಗಿ ತೊಂಬತ್ತು ದಿನಗಳೊಳಗಾಗಿ

ಮತ್ತು ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ದೂರು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳ ಮತ್ತಷ್ಟು ಅವಧಿಯೊಳಗಾಗಿ ಪೂರ್ಣಗೊಳಿಸತಕ್ಕದ್ದು.

(3ಬಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಅಂಥ ಪ್ರಾರಂಭಿಕ ವಿಚಾರಣೆಯನ್ನು ಮಾಡಿದ ತರುವಾಯ, (3)ನೇ ಉಪಪ್ರಕರಣದ ಅಡಿಯಲ್ಲಿ ಉಲ್ಲೇಖಿಸಿದಂತೆ ತನಿಖೆಯನ್ನು ನಡೆಸಬೇಕೆಂದು ನಿರ್ಧರಿಸಿದ ಸಂದರ್ಭದಲ್ಲಿ, ಆತನು ಸಾಧ್ಯವಾದಷ್ಟು ಶೀಘ್ರವಾಗಿ ಮತ್ತು ಪ್ರಾಶಸ್ತ್ಯವನ್ನು ನೀಡಿ (3)ನೇ ಉಪಪ್ರಕರಣದ ಅಡಿಯಲ್ಲಿ ತನಿಖೆಯನ್ನು ಪ್ರಾರಂಭಿಸಲು ಆತನು ಆದೇಶಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯ ಒಳಗಾಗಿ ತನಿಖೆಯನ್ನು ನಡೆಸುವಂತೆ ಮಾಡತಕ್ಕದ್ದು:

ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಸದರಿ ಅವಧಿಯನ್ನು ಒಂದು ಬಾರಿಗೆ ಆರು ತಿಂಗಳಿಗೆ ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು, ಮೇಲೆ ಹೇಳಲಾದಂತೆ ಪ್ರಾರಂಭಿಕ ವಿಚಾರಣೆ ಅಥವಾ ತನಿಖೆಯನ್ನು ಮುಕ್ತಾಯಗೊಳಿಸುವಲ್ಲಿನ ಯಾವುದೇ ವಿಳಂಬವು ವ್ಯವಹರಣೆಗಳನ್ನು ನಿರರ್ಥಕಗೊಳಿಸತಕ್ಕದ್ದಲ್ಲ ಅಥವಾ ಪ್ರತಿಕೂಲ ಪ್ರಭಾವ ಉಂಟುಮಾಡತಕ್ಕದ್ದಲ್ಲ, ಅದನ್ನು ಸಮರ್ಥನೆಯಾಗಿ ತೆಗೆದುಕೊಳ್ಳಲಾಗುವುದಿಲ್ಲ.][3]

(4) ಈ ಹಿಂದೆ ಹೇಳಿದುದನ್ನುಳಿದು, ಅಂಥ ಯಾವುದೇ ತನಿಖೆಯನ್ನು ನಡೆಸುವ ವಿಧಾನವು, ಮತ್ತು ಅದನ್ನು ಬಹಿರಂಗವಾಗಿ ಅಥವಾ ಗುಪ್ತವಾಗಿ ನಡೆಸಬೇಕೆ ಎಂಬುದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆ ಪ್ರಕರಣದ ಸನ್ನಿವೇಶಗಳಿಗೆ ಸೂಕ್ತವೆಂದು ಭಾವಿಸಬಹುದಾದಂತೆ ಇರತಕ್ಕದ್ದು.

(5) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ದೂರು ಅಥವಾ ಆಪಾದನೆಯನ್ನೊಳಗೊಂಡ ಯಾವುದೇ ಫಿರ್ಯಾದಿನ ಸಂಬಂಧದಲ್ಲಿ,–

(ಎ) ಆ ಫಿರ್ಯಾದು ಕ್ಷುಲ್ಲಕವೆಂದು ಅಥವಾ ಕಿರುಕುಳಕಾರಿಯೆಂದು ಅಥವಾ ಸದುದ್ದೇಶದಿಂದ ಸಲ್ಲಿಸಿದುದಲ್ಲವೆಂದು; ಅಥವಾ

(ಬಿ) ತನಿಖೆ ನಡೆಸುವುದಕ್ಕೆ ಅಥವಾ ಸಂದರ್ಭಾನುಸಾರ ತನಿಖೆಯನ್ನು ಮುಂದುವರಿಸಲು ಸಾಕಷ್ಟು ಕಾರಣಗಳಿಲ್ಲವೆಂದು; ಅಥವಾ

(ಸಿ) ಫಿರ್ಯಾದಿಗೆ ಇತರ ಪರಿಹಾರೋಪಾಯಗಳಿವೆಯೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಫಿರ್ಯಾದಿಯು ಅಂಥ ಪರಿಹಾರೋಪಾಯಗಳನ್ನು ಪಡೆಯುವುದು ಹೆಚ್ಚು ಸೂಕ್ತವೆಂದು,

–ಅಭಿಪ್ರಾಯ ಪಟ್ಟರೆ, ತನ್ನ ವಿವೇಚನಾನುಸಾರ ಅವನು ಆ ಫಿರ್ಯಾದಿನ ತನಿಖೆ ನಡೆಸಲು ನಿರಾಕರಿಸಬಹುದು ಅಥವಾ ತನಿಖೆಯನ್ನು ನಿಲ್ಲಿಸಬಹುದು.

(6) ಯಾವುದೇ ಸಂದರ್ಭದಲ್ಲಿ, ಒಂದು ಫಿರ್ಯಾದನ್ನು ಅಂಗೀಕರಿಸದಿರಲು ಅಥವಾ ಒಂದು ಫಿರ್ಯಾದಿನ ಸಂಬಂಧದಲ್ಲಿ ಯಾವುದೇ ತನಿಖೆಯನ್ನು ಮುಂದುವರಿಸದಿರಲು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ನಿರ್ಧರಿಸುವಲ್ಲಿ ಅವನು ಆ ಸಂಬಂಧವಾದ ಕಾರಣಗಳನ್ನು ದಾಖಲು ಮಾಡಿ ಅವುಗಳನ್ನು ಫಿರ್ಯಾದಿಗೆ ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನಿಗೆ ತಿಳಿಸತಕ್ಕದ್ದು.

(7) ಯಾವುದೇ ಕ್ರಮದ ಸಂಬಂಧದಲ್ಲಿ [1][ಈ ಅಧಿನಿಯಮದ ಮೇರೆಗೆ ಯಾವೊಬ್ಬ ಸಾರ್ವಜನಿಕ ನೌಕರನ ವಿರುದ್ಧ][1] ನಡೆಸುವ ತನಿಖೆ, ಅಂಥ ಕ್ರಮವನ್ನಾಗಲಿ ಆ ತನಿಖೆಗೆ ಒಳಪಟ್ಟು ಯಾವುದೇ ವಿಷಯದ ಸಂಬಂಧದಲ್ಲಿ ಮುಂದಿನ ಕ್ರಮ ಕೈಗೊಳ್ಳಲು [1][ಯಾವೊಬ್ಬ ಇತರ ಸಾರ್ವಜನಿಕ ನೌಕರನ][1] ಯಾವುದೇ ಅಧಿಕಾರ ಇಲ್ಲವೇ ಕರ್ತವ್ಯವನ್ನು ಬಾಧಿಸತಕ್ಕದ್ದಲ್ಲ.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

10. ಶೋಧನಾ ವಾರಂಟ್, ಮೊದಲಾದುವುಗಳ ಹೊರಡಿಸುವಿಕೆ.– (1) ತಮ್ಮ ವಶದಲ್ಲಿರುವ ಮಾಹಿತಿಯ ಪರಿಣಾಮವಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ,–

(ಎ) (i) ಈ ಅಧಿನಿಯಮದ ಮೇರೆಗೆ ಸಮನು ಅಥವಾ ನೋಟೀಸು ನೀಡಲಾಗಿರುವ ಅಥವಾ ನೀಡಬಹುದಾದ ಯಾವೊಬ್ಬ ವ್ಯಕ್ತಿಯು, ತಾನು ನಡೆಸುವ ಯಾವುದೇ ವಿಚಾರಣೆ ಅಥವಾ ಇತರ ವ್ಯವಹರಣೆಗೆ ಅವಶ್ಯವಾದ ಅಥವಾ ಉಪಯುಕ್ತವಾದ ಅಥವಾ ಅದಕ್ಕೆ ಸುಸಂಗತವಾದ ಯಾವುದೇ ಸ್ವತ್ತು, ದಸ್ತಾವೇಜು ಅಥವಾ ವಸ್ತುವನ್ನು ಹಾಜರುಪಡಿಸುವುದಿಲ್ಲ ಅಥವಾ ಹಾಜರುಪಡಿಸಲಾರನು ಅಥವಾ ಹಾಜರುಪಡಿಸುವಂತೆ ಮಾಡುವುದಿಲ್ಲ ಅಥವಾ ಮಾಡಲಾರನೆಂದು;

(ii) ಯಾವೊಬ್ಬ ವ್ಯಕ್ತಿ ಯಾವುದೇ ಹಣ, ಚಿನ್ನ–ಬೆಳ್ಳಿ, ಒಡವೆ ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಯನ್ನು ಹೊಂದಿದ್ದು, ಅಂಥ ಹಣ, ಚಿನ್ನ–ಬೆಳ್ಳಿ, ಒಡವೆ ಅಥವಾ ಇತರ ಅಮೂಲ್ಯ ವಸ್ತು

ಅಥವಾ ಸಾಮಗ್ರಿಯು, ಜಾರಿಯಲ್ಲಿರುವ ಮತ್ತು ಹಾಗೆ ಹೊರಗೆಡವ- ಬೇಕೆಂದು ಅಗತ್ಯಪಡಿಸುವ ಯಾವುದೇ ಕಾನೂನಿನ ಅಥವಾ ನಿಯಮದ ಉದ್ದೇಶಗಳಿಗಾಗಿ ಅಧಿಕಾರಿಗಳಿಗೆ ಹೊರಗೆಡವದೆ ಇದ್ದ ಆದಾಯವನ್ನು ಅಥವಾ ಸ್ವತ್ತನ್ನು ಪೂರ್ಣವಾಗಿ ಅಥವಾ ಭಾಗಶಃ ಪ್ರತಿನಿಧಿಸುವುದೆಂದು, ನಂಬಲು ಕಾರಣವಿದ್ದರೆ, ಅಥವಾ

(ಬಿ) ತಾನು ನಡೆಸಬೇಕಾದ ಯಾವುದೇ ವಿಚಾರಣೆ ಅಥವಾ ಇತರ ವ್ಯವಹರಣೆಗಳ ಉದ್ದೇಶಗಳು ಸಾಮಾನ್ಯ ಶೋಧನೆ ಅಥವಾ ಪರಿವೀಕ್ಷಣೆಯ ಮೂಲಕ ಸಾಧಿತವಾಗುತ್ತದೆಂದು ಅವನು ಪರಿಗಣಿಸಿದರೆ,

[1][ಅವನು, ಅದಕ್ಕನುಸಾರವಾಗಿ ತನಿಖೆಯನ್ನು ಕೈಗೊಳ್ಳಲು ಅಥವಾ ಶೋಧನೆಯನ್ನು ನಡೆಸಲು ಪೊಲೀಸ್ ಇನ್ಸ್ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಯಾವೊಬ್ಬ ಪೊಲೀಸ್ ಅಧಿಕಾರಿಯನ್ನು ಮತ್ತು ವಿಶೇಷವಾಗಿ][1],-

(i) ಅಂಥ ಸ್ವತ್ತು, ದಸ್ತಾವೇಜು, ಹಣ, ಚಿನ್ನ-ಬೆಳ್ಳಿ, ಆಭರಣ ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಯನ್ನು ಇಡಲಾಗಿದೆಯೆಂದು ಸಂದೇಹಪಡಲು ಕಾರಣವಿರುವ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು,

[2][(iಎ) ಶೋಧನೆಯನ್ನು ನಡೆಸಬೇಕಾದ ಯಾವುದೇ ವಸ್ತುವನ್ನು ತನ್ನಲ್ಲಿ ಬಚ್ಚಿಟ್ಟು ಕೊಂಡಿದ್ದಾನೆಂದು ಸಕಾರಣವಾಗಿ ಸಂದೇಹಕ್ಕೊಳಗಾಗುವ ಯಾವೊಬ್ಬ ವ್ಯಕ್ತಿಯನ್ನು ಶೋಧಿಸಲು,][2]

(ii) ಯಾವುದೇ ಬಾಗಿಲು, ಪೆಟ್ಟಿಗೆ, ಲಾಕರ್, ತಿಜೋರಿ, ಅಲಮಾರು ಅಥವಾ ಇತರ ಯಾವುವೇ ಕೋಶಗಳ ಬೀಗದ ಕೈಗಳು ದೊರೆಯದಿರುವಲ್ಲಿ, (1)ನೇ ಉಪಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅವುಗಳ ಬೀಗವನ್ನು ಒಡೆಯಲು,

(iii) ಅಂಥ ಶೋಧನೆಯ ಫಲವಾಗಿ ಕಂಡುಬಂದ ಯಾವುದೇ ಆಸ್ತಿ, ದಸ್ತಾವೇಜುಗಳು, ಹಣ, ಚಿನ್ನ-ಬೆಳ್ಳಿ ಆಭರಣಗಳು ಅಥವಾ ಇತರ ಅಮೂಲ್ಯ ವಸ್ತುಗಳನ್ನು ಅಥವಾ ಸಾಮಗ್ರಿಗಳನ್ನು ಅಭಿಗ್ರಹಿಸಲು,

(iv) ಯಾವುದೇ ಸ್ವತ್ತು ಅಥವಾ ದಸ್ತಾವೇಜುಗಳ ಮೇಲೆ ಅವುಗಳನ್ನು ಗುರುತಿಸುವ ಸಲುವಾಗಿ ಗುರುತು ಚಿಟ್ಟೆ ಕೊಡಲು, ಅವುಗಳ ಉದ್ಧೃತ ಭಾಗಗಳನ್ನು ಅಥವಾ ಪ್ರತಿಗಳನ್ನು ತೆಗೆಯಲು ಅಥವಾ ತೆಗೆಯುವಂತೆ ಮಾಡಲು,

(v) ಅಂಥ ಸ್ವತ್ತು, ದಸ್ತಾವೇಜುಗಳು, ಹಣ, ಚಿನ್ನ-ಬೆಳ್ಳಿ, ಆಭರಣಗಳು ಅಥವಾ ಇತರ ಅಮೂಲ್ಯ ವಸ್ತು ಅಥವಾ ಸಾಮಗ್ರಿಗಳ ಬಗ್ಗೆ ಟಿಪ್ಪಣಿ ಅಥವಾ ವಿವರಣ ಪಟ್ಟಿಯನ್ನು ಬರೆಯಲು,

-ಶೋಧನ ವಾರಂಟ್ ಮೂಲಕ ಅಧಿಕಾರ ನೀಡಬಹುದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ ಶೋಧನೆ ಮತ್ತು ಅಭಿಗ್ರಹಣಕ್ಕೆ ಸಂಬಂಧಪಟ್ಟ ಉಪಬಂಧಗಳು (1)ನೇ ಉಪಪ್ರಕರಣದ ಶೋಧನೆಗಳು ಮತ್ತು ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ವಾರಂಟನ್ನು ಎಲ್ಲ ಉದ್ದೇಶಗಳಿಗಾಗಿ, ದಂಡ ಪ್ರಕ್ರಿಯಾ ಸಂಹಿತೆ, 1973ರ 93ನೇ ಪ್ರಕರಣದ ಮೇರೆಗೆ ನ್ಯಾಯಾಲಯವು ಹೊರಡಿಸಿದ ವಾರಂಟ್ ಎಂಬುದಾಗಿ ಭಾವಿಸತಕ್ಕದ್ದು.

11. ಸಾಕ್ಷ್ಯ.- (1) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ಯಾವುದೇ ತನಿಖೆಯ ಉದ್ದೇಶಕ್ಕಾಗಿ (ಅಂಥ ತನಿಖೆಗೆ ಮುಂಚೆ ಪ್ರಾರಂಭಿಕ ತನಿಖೆ ಯಾವುದಾದರೂ ಇದ್ದಲ್ಲಿ, ಅದೂ ಸೇರಿದಂತೆ) ತನಿಖೆಗೆ ಸುಸಂಗತವಾದ ಮಾಹಿತಿಯನ್ನು ಒದಗಿಸಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಶಕ್ತನೆಂದು ತಾನು ಅಭಿಪ್ರಾಯಪಡುವ ಯಾವೊಬ್ಬ ಸಾರ್ವಜನಿಕ ನೌಕರ ಅಥವಾ ಇತರ ಯಾವೊಬ್ಬ ವ್ಯಕ್ತಿಯನ್ನು ಅಂಥ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಅಥವಾ ಅಂಥ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆಗತ್ಯಪಡಿಸಬಹುದು.

(2) ಅಂಥ ಯಾವುದೇ ತನಿಖೆಯ (ಪ್ರಾರಂಭಿಕ ತನಿಖೆಯೂ ಸೇರಿದಂತೆ) ಉದ್ದೇಶಕ್ಕಾಗಿ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ಎಂದರೆ: -

(ಎ) ಯಾವೊಬ್ಬ ವ್ಯಕ್ತಿಯು ಹಾಜರಾಗುವಂತೆ ಸಮನು ಮಾಡುವುದು ಮತ್ತು ಒತ್ತಾಯ ಪಡಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು.

(ಬಿ) ಯಾವುದೇ ದಸ್ತಾವೇಜನ್ನು ಪತ್ತೆ ಮಾಡುವಂತೆ ಮತ್ತು ಅದನ್ನು ಹಾಜರುಪಡಿಸುವಂತೆ ಆಗತ್ಯಪಡಿಸುವುದು.

(ಸಿ) ಅಫಿಡವಿಟ್ಟುಗಳ ಮೇಲೆ ಸಾಕ್ಷಿ ಪಡೆಯುವುದು.

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಅಧಿಗ್ರಹಿಸುವುದು.

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗೆ ಕಮಿಷನ್‌ಗಳನ್ನು ಹೊರಡಿಸುವುದು.

(ಎಫ್) ನಿಯಮಿಸಬಹುದಾದಂಥ ಇತರ ವಿಷಯಗಳು.

–ಈ ವಿಷಯಗಳ ಸಂಬಂಧದಲ್ಲಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ದಾವೆಯ ವಿಚಾರಣೆ ನಡೆಸುವ ಕಾಲದಲ್ಲಿ ಸಿವಿಲ್ ನ್ಯಾಯಾಲಯಕ್ಕಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಮುಂದಿರುವ ಯಾವುದೇ ವ್ಯವಹರಣೆಯು ಭಾರತ ದಂಡ ಸಂಹಿತೆಯ 193ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.

(4) ಯಾವೊಬ್ಬ ವ್ಯಕ್ತಿಯನ್ನು ಈ ಅಧಿನಿಯಮದ ನಿಮಿತ್ತ,–

(ಎ) ಕರ್ನಾಟಕ ರಾಜ್ಯದ ಕಾರ್ಯಕಲಾಪಗಳಿಗೆ ಅಥವಾ (ಯಾವುದೇ ಇತರ ರಾಷ್ಟ್ರದ ಸರ್ಕಾರದೊಂದಿಗೆ ಅಥವಾ ಯಾವುದೇ ಅಂತರರಾಷ್ಟ್ರೀಯ ಸಂಸ್ಥೆಯೊಂದಿಗೆ ಭಾರತವು ಇರಿಸಿಕೊಂಡಿರುವಂಥ ಸಂಬಂಧವೂ ಸೇರಿದಂತೆ) ಭಾರತದ ಭದ್ರತೆ ಅಥವಾ ರಕ್ಷಣೆ ಅಥವಾ ಅಂತರರಾಷ್ಟ್ರೀಯ ಸಂಬಂಧಗಳಿಗೆ ಪ್ರತಿಕೂಲ ಪ್ರಭಾವ ಬೀರುವ;

(ಬಿ) ರಾಜ್ಯ ಸರ್ಕಾರದ ಮಂತ್ರಿ ಮಂಡಲದ ಅಥವಾ ಮಂತ್ರಿ ಮಂಡಲದ ಯಾವುದೇ ಸಮಿತಿಯ ವ್ಯವಹರಣೆಗಳನ್ನು ಹೊರಗೆಡಹುವುದನ್ನೊಳಗೊಳ್ಳಬಹುದಾದ,

–ಯಾವುದೇ ಮಾಹಿತಿಯನ್ನು ಒದಗಿಸಲು ಅಥವಾ ಅಂಥ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಅಥವಾ ಅಂಥ ಯಾವುದೇ ದಸ್ತಾವೇಜಿನ ಅಷ್ಟು ಭಾಗವನ್ನು ಹಾಜರುಪಡಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಆತನಿಗೆ ಅಧಿಕಾರ ನೀಡತಕ್ಕದ್ದಲ್ಲ ಮತ್ತು ಈ ಉಪಪ್ರಕರಣದ ಉದ್ದೇಶಕ್ಕಾಗಿ ಮುಖ್ಯ ಕಾರ್ಯದರ್ಶಿಯು ಯಾವುದೇ ಮಾಹಿತಿ, ಉತ್ತರ ಅಥವಾ ದಸ್ತಾವೇಜಿನ ಭಾಗವು (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ್ದಾಗಿರುವುದೆಂದು ಪ್ರಮಾಣೀಕರಿಸಿ ನೀಡಿದ ಪ್ರಮಾಣಪತ್ರವು ಬಂಧಕವಾಗಿರತಕ್ಕದ್ದು ಮತ್ತು ನಿರ್ಣಾಯಕವಾಗಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ತನಿಖೆ ನಡೆಸುವ ಉದ್ದೇಶಕ್ಕಾಗಿ, ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಲ್ಲಿ ಯಾವ ಸಾಕ್ಷ್ಯವನ್ನು ಕೊಡುವಂತೆ ಇಲ್ಲವೇ ಯಾವ ದಸ್ತಾವೇಜನ್ನು ಹಾಜರುಪಡಿಸುವಂತೆ ಯಾವೊಬ್ಬ ವ್ಯಕ್ತಿಯನ್ನು ಒತ್ತಾಯಪಡಿಸಲು ಸಾಧ್ಯವಿಲ್ಲವೋ ಅಂಥ ಯಾವುದೇ ಸಾಕ್ಷ್ಯವನ್ನು ಕೊಡುವಂತೆ ಅಥವಾ ದಸ್ತಾವೇಜನ್ನು ಹಾಜರುಪಡಿಸುವಂತೆ ಅವನನ್ನು ಒತ್ತಾಯಪಡಿಸತಕ್ಕದ್ದಲ್ಲ.

12. ಲೋಕಾಯುಕ್ತನ ವರದಿಗಳು, ಮೊದಲಾದುವು.– (1) [1][x x x][1] ದೂರನ್ನು ಒಳಗೊಂಡ [1][x x x][1] ಯಾವುದೇ ಕ್ರಮವನ್ನು ಕುರಿತು ತನಿಖೆ ನಡೆಸಿದ ತರುವಾಯ, ಅಂಥ ಕ್ರಮವು ಫಿರ್ಯಾದಿಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನ್ಯಾಯ ಅಥವಾ ಅನುಚಿತ ತೊಂದರೆಯನ್ನು ಉಂಟುಮಾಡಿದೆಯೆಂದು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಲಿಖಿತ ವರದಿಯ ಮೂಲಕ [2][ಮೂರು ತಿಂಗಳೊಳಗೆ ಅಥವಾ ಯಾವುದೇ ಸಂದರ್ಭದಲ್ಲಿ ಪಿರ್ಯಾದಿನ ದಿನಾಂಕದಿಂದ ನಾಲ್ಕು ತಿಂಗಳಿಗೆ ಮೀರದಂತೆ][2] ಅಂಥ ಅನ್ಯಾಯವನ್ನು ಅಥವಾ ತೊಂದರೆಯನ್ನು ನಿರ್ದಿಷ್ಟಪಡಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ಪರಿಹರಿಸತಕ್ಕದ್ದೆಂದು ಅಥವಾ ನಿವಾರಿಸತಕ್ಕದ್ದೆಂದು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.

2. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) (1)ನೇ ಉಪ ಪ್ರಕರಣದ ಮೇರೆಗೆ ಯಾವ ಸಕ್ಷಮ ಪ್ರಾಧಿಕಾರಕ್ಕೆ ಒಂದು ವರದಿಯನ್ನು ಕಳುಹಿಸಲಾಗಿದೆಯೋ ಆ ಪ್ರಾಧಿಕಾರವು ಆ ವರದಿಯಲ್ಲಿ ನಿರ್ದಿಷ್ಟಪಡಿಸಿರುವ ಅವಧಿ ಪೂರ್ಣಗೊಂಡ ಒಂದು ತಿಂಗಳೊಳಗಾಗಿ ಆ ವರದಿಯ ಮೇರೆಗೆ ಕೈಗೊಂಡ ಕ್ರಮವನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಅಥವಾ ತಿಳಿಸುವ ಏರ್ಪಾಟು ಮಾಡತಕ್ಕದ್ದು.

(3) [1][x x x][1] ಆಪಾದನೆಯನ್ನೊಳಗೊಂಡ [1][x x x][1] ಯಾವುದೇ ಕ್ರಮದ ಕುರಿತು ತನಿಖೆ ನಡೆಸಿದ ತರುವಾಯ ಅಂಥ ಆಪಾದನೆಯನ್ನು ಪೂರ್ಣವಾಗಿ ಅಥವಾ ಭಾಗಶಃ [2][ಸಮರ್ಥಿಸಲಾಗಿದೆಯೆಂದು][2] ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ ಅವನು ತನ್ನ ನಿರ್ಣಯವನ್ನು ಮತ್ತು ಶಿಫಾರಸ್ಸುಗಳನ್ನು ಸಂಬಂಧಪಟ್ಟ ದಸ್ತಾವೇಜು, ಸಾಮಗ್ರಿಗಳು ಮತ್ತು ಇತರ ಸಾಕ್ಷ್ಯಗಳೊಡನೆ ಸಕ್ಷಮ ಪ್ರಾಧಿಕಾರಕ್ಕೆ ಲಿಖಿತ ವರದಿಯ ಮೂಲಕ [3][ತನಿಖೆ ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳೊಳಗೆ][3] ತಿಳಿಸತಕ್ಕದ್ದು.

[3][ಪರಂತು, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ಸದರಿ ಅವಧಿಯನ್ನು ಆರು ತಿಂಗಳಿಗೆ ಮೀರದ ಮತ್ತಷ್ಟು ಅವಧಿಗೆ ವಿಸ್ತರಿಸಬಹುದು][3].

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ: 36ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಸಕ್ಷಮ ಪ್ರಾಧಿಕಾರವು (3)ನೇ ಉಪಪ್ರಕರಣದ ಮೇರೆಗೆ ತನಗೆ ಕಳುಹಿಸಿದ ವರದಿಯನ್ನು ಪರೀಕ್ಷಿಸತಕ್ಕದ್ದು ಮತ್ತು ಆ ವರದಿಯು ಬಂದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ವರದಿಯನ್ನು ಆಧರಿಸಿ ಕೈಗೊಂಡ ಇಲ್ಲವೇ ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು ಅಥವಾ ತಿಳಿಸುವ ಏರ್ಪಾಡು ಮಾಡತಕ್ಕದ್ದು.

(5) (1)ನೇ ಮತ್ತು (3)ನೇ ಉಪಪ್ರಕರಣಗಳಲ್ಲಿ ಉಲ್ಲಿಖಿತವಾದ ತಮ್ಮ ಶಿಫಾರಸುಗಳ ಇಲ್ಲವೇ ನಿರ್ಣಯಗಳ ಮೇರೆಗೆ ಕೈಗೊಂಡ ಇಲ್ಲವೇ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಸಮಾಧಾನ ಹೊಂದಿದರೆ, ಆ ವಿಷಯವನ್ನು ಸಂಬಂಧಪಟ್ಟ ಫಿರ್ಯಾದಿಗೆ, ಸಾರ್ವಜನಿಕ ನೌಕರನಿಗೆ ಮತ್ತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸತಕ್ಕದ್ದು. ಆದರೆ, ಅವರಿಗೆ ಹಾಗೆ ಸಮಾಧಾನವಾಗದ ಸಂದರ್ಭದಲ್ಲಿ ಆ ಪ್ರಕರಣದ ಬಗ್ಗೆ ರಾಜ್ಯಪಾಲರಿಗೆ ವಿಶೇಷ ವರದಿಯನ್ನು ಸಲ್ಲಿಸಲು ಆ ಪ್ರಕರಣವು ಅರ್ಹವೆಂದು ಅವರು ಪರಿಗಣಿಸಿದಲ್ಲಿ, ಹಾಗೆ ಮಾಡಬಹುದು ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಕ್ಕೆ ಹಾಗೂ ಫಿರ್ಯಾದಿಗೆ ಆ ಬಗ್ಗೆ ತಿಳಿಸತಕ್ಕದ್ದು.

[2][[1][(6) ಈ ಅಧಿನಿಯಮದ ಅಡಿಯಲ್ಲಿ, ಲೋಕಾಯುಕ್ತರು, ತಮ್ಮ ಮತ್ತು ಉಪಲೋಕಾಯುಕ್ತರ ಕಾರ್ಯನಿರ್ವಹಣೆಯ ಬಗ್ಗೆ ರಾಜ್ಯಪಾಲರಿಗೆ, ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಪ್ರತಿವರ್ಷದ ಅಕ್ಟೋಬರ್ 31ರಂದು ಅಥವಾ ಅದಕ್ಕೆ ಮೊದಲು ಒಪ್ಪಿಸತಕ್ಕದ್ದು.][1]][2].

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಪ್ರತಿಯೋಜಿಸಲಾಗಿದೆ.
2. 2015ರ ಅಧಿನಿಯಮ ಸಂಖ್ಯೆ: 35ರ ಮೂಲಕ ದಿನಾಂಕ: 25.08.2015ರಿಂದ ಪ್ರತಿಯೋಜಿಸಲಾಗಿದೆ.

(7) (5)ನೇ ಉಪಪ್ರಕರಣದ ಮೇರೆಗೆ ವಿಶೇಷ ವರದಿ, ಅಥವಾ (6)ನೇ ಉಪಪ್ರಕರಣದ ಮೇರೆಗೆ ವಾರ್ಷಿಕ ವರದಿ ಬಂದ ತರುವಾಯ, ರಾಜ್ಯಪಾಲರು ಅದರ ಒಂದು ಪ್ರತಿಯನ್ನು ವಿವರಣಾತ್ಮಕ ಜ್ಞಾಪನದೊಂದಿಗೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವ ಏರ್ಪಾಡು ಮಾಡತಕ್ಕದ್ದು.

(8) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ತಾನು ಮುಕ್ತಾಯಗೊಳಿಸಿದ ಅಥವಾ ಅನ್ಯಥಾ ವಿಲೆ ಮಾಡಿದ ಪ್ರಕರಣಗಳ ಪೈಕಿ ಸಾಮಾನ್ಯ, ಸಾರ್ವಜನಿಕ, ಶೈಕ್ಷಣಿಕ ಅಥವಾ ವೃತ್ತಿಯ ಆಸಕ್ತಿಯುಳ್ಳದ್ದೆಂದು ತನಗೆ ಕಂಡುಬರಬಹುದಾದ ಪ್ರಕರಣಗಳ ಸಾರಾಂಶವನ್ನು ಸೂಕ್ತವೆಂದು ತಾನು ಭಾವಿಸಬಹುದಾದ ವಿಧಾನದಲ್ಲಿ ಮತ್ತು ಅಂಥ ವ್ಯಕ್ತಿಗಳಿಗೆ ತಮ್ಮ ವಿವೇಚನಾನುಸಾರ ಆಗಿಂದಾಗ್ಗೆ ಒದಗಿಸಬಹುದು.

13. ಲೋಕಾಯುಕ್ತನು, ನಿರ್ದೇಶಿಸಿದರೆ, ಸಾರ್ವಜನಿಕ ನೌಕರನು ತನ್ನ ಪದವನ್ನು ರಿಕ್ತಗೊಳಿಸುವುದು ಮುಂತಾದುವು.– (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಫಿರ್ಯಾದಿನ ಸಂಬಂಧದಲ್ಲಿ ತನಿಖೆ ನಡೆಸಿದ ತರುವಾಯ ಸಾರ್ವಜನಿಕ ನೌಕರನ ವಿರುದ್ಧವಾಗಿ ಇರುವ ಆಪಾದನೆಯನ್ನು ಒಳಗೊಳ್ಳುವ ಫಿರ್ಯಾದನ್ನು [1][ಸಮರ್ಥಿಸಲಾಗಿದೆಯೆಂದು][1] ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನು ಅವನು ಇರುವ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲವೆಂದು ಮನದಟ್ಟಾದರೆ, 12ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗಿನ ತನ್ನ ವರದಿಯಲ್ಲಿ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಆ ಬಗ್ಗೆ ಒಂದು ಘೋಷಣೆ ಹೊರಡಿಸತಕ್ಕದ್ದು. [1][ಸಕ್ಷಮ ಪ್ರಾಧಿಕಾರವು ರಾಜ್ಯಪಾಲ, ರಾಜ್ಯ ಸರ್ಕಾರ ಅಥವಾ ಮುಖ್ಯಮಂತ್ರಿಗಳಾಗಿದ್ದಲ್ಲಿ, ಅದು [3][ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ][3] ಘೋಷಣೆಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು. ಇತರ ಸಂದರ್ಭಗಳಲ್ಲಿ, ಸಕ್ಷಮ ಪ್ರಾಧಿಕಾರವು ಅಂಥ ವರದಿಯ ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರ ಆ [3][ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಅವಕಾಶವನ್ನು ನೀಡಿದ ತರುವಾಯ][3] ಘೋಷಣೆಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು][1] [1][ಸಂಧರ್ಭಾನುಸಾರ, ಸದರಿ (3)ನೇ ಉಪ ಪ್ರಕರಣದ ಮೇರೆಗಿನ ವರದಿ ಅಥವಾ ವರದಿಯ ಒಂದು ಪ್ರತಿಯನ್ನು][1] ಸ್ವೀಕರಿಸುವ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ಅದನ್ನು ತಿರಸ್ಕರಿಸದಿದ್ದರೆ, ಸದರಿ ಮೂರು ತಿಂಗಳ ಅವಧಿಯು ಮುಕ್ತಾಯವಾದ ಮೇಲೆ [2][x x x][2] ಅದನ್ನು ಅಂಗೀಕರಿಸಿರುವುದಾಗಿ ಭಾವಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಲೋಪಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.

(2) ಹಾಗೆ ಮಾಡಿದ ಘೋಷಣೆಯನ್ನು [1][ಅಂಗೀಕರಿಸಿದರೆ][1] ಅಥವಾ ಅಂಗೀಕರಿಸಿದೆಯೆಂದು ಭಾವಿಸಲಾದರೆ ಅಂಥ ಅಂಗೀಕಾರ ಅಥವಾ ಭಾವಿಸಲಾದ ಅಂಗೀಕಾರವನ್ನು [1][ರಾಜ್ಯಪಾಲ, ರಾಜ್ಯ ಸರ್ಕಾರ ಅಥವಾ ಮುಖ್ಯಮಂತ್ರಿ ಅವರಲ್ಲಿ ಯಾರಾದರೂ ಒಬ್ಬರು ಸಕ್ಷಮ ಪ್ರಾಧಿಕಾರಿಯಾಗಿದ್ದರೆ, ಅವರು ಮತ್ತು ಇತರ ಸಂದರ್ಭಗಳಲ್ಲಿ ರಾಜ್ಯ ಸರ್ಕಾರವು ನೋಂದಾಯಿತ ಅಂಚೆಯ ಮೂಲಕ ಕೂಡಲೇ ತಿಳಿಸತಕ್ಕದ್ದು][1] ಆಗ ಯಾವುದೇ ಕಾನೂನು, ಆದೇಶ, ಅಧಿಸೂಚನೆ, ನಿಯಮ ಅಥವಾ ನೇಮಕಾತಿ ಕರಾರಿನಲ್ಲಿ ಏನೇ ಇದ್ದರೂ [1][ಅಂಥ ಮಾಹಿತಿ ತಲುಪಿದ ದಿನಾಂಕದಿಂದ ಅಥವಾ ಅದಕ್ಕೆ][1] ಸಂಭಂಧಪಟ್ಟ ಸಾರ್ವಜನಿಕ ನೌಕರನು,–

(i) ಮುಖ್ಯ ಮಂತ್ರಿ ಅಥವಾ ಮಂತ್ರಿಯಾಗಿದ್ದರೆ ಸಂದರ್ಭಾನುಸಾರ ತನ್ನ ಮುಖ್ಯ ಮಂತ್ರಿಯ ಅಥವಾ ಮಂತ್ರಿಯ ಪದಕ್ಕೆ ರಾಜೀನಾಮೆ ಕೊಡತಕ್ಕದ್ದು.

[1][(ii) ಪ್ರಕರಣ 2ರ ಖಂಡ (12)ರ ಬಾಬುಗಳಾದ (ಇ) ಮತ್ತು (ಎಫ್)ಗಳಲ್ಲಿ ಬರುವ, ಆದರೆ ಬಾಬುಗಳಾದ (ಡಿ) ಮತ್ತು (ಜಿ)ಯೊಳಗೆ ಬರದ ಒಬ್ಬ ಸಾರ್ವಜನಿಕ ನೌಕರನು ತನ್ನ ಸ್ಥಾನವನ್ನು ರಿಕ್ತಗೊಳಿಸಿರುವುದಾಗಿ ಭಾವಿಸತಕ್ಕದ್ದು; ಮತ್ತು][1]

(iii) [1][ಪ್ರಕರಣ 2ರ ಖಂಡ (12)ರ ಬಾಬುಗಳಾದ (ಡಿ) ಮತ್ತು (ಜಿ)ಗಳ ಅಡಿಯಲ್ಲಿ ಬರುವ ಸಾರ್ವಜನಿಕ ನೌಕರನಾಗಿದ್ದರೆ,][1] ನೇಮಕ ಪ್ರಾಧಿಕಾರಿಯ ಆದೇಶದ ಮೂಲಕ ಅವರನ್ನು ನಿಲಂಬನದಲ್ಲಿಡಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, [1][ಸಾರ್ವಜನಿಕ ನೌಕರನು][1], ಅಖಿಲ ಭಾರತ ಸೇವಾ ಅಧಿನಿಯಮ, 1951ರ (ಕೇಂದ್ರಾಧಿನಿಯಮ, 1951ರ 61) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಅಖಿಲ ಭಾರತ ಸೇವೆಯ ಸದಸ್ಯನಾಗಿದ್ದರೆ, ರಾಜ್ಯ ಸರ್ಕಾರವು, ಅವನ ಸೇವೆಗಳಿಗೆ ಅನ್ವಯವಾಗತಕ್ಕ ನಿಯಮಗಳಿಗೆ ಮತ್ತು ವಿನಿಮಯಗಳಿಗೆ ಅನುಸಾರವಾಗಿ, ಅವನನ್ನು ನಿಲಂಬನದಲ್ಲಿಡಲು ಕ್ರಮಕೈಗೊಳ್ಳತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

14. ಅಭಿಯೋಜನೆಗಳ ಪ್ರಾರಂಭ.– ಯಾವುದೇ ಫಿರ್ಯಾದಿನ ಸಂಬಂಧದಲ್ಲಿ ತನಿಖೆಯನ್ನು ನಡೆಸಿದ ತರುವಾಯ, ಸಾರ್ವಜನಿಕ ನೌಕರನು, ಯಾವುದೇ ಕ್ರಿಮಿನಲ್ ಅಪರಾಧವನ್ನು ಮಾಡಿದ್ದಾನೆಂದು [1][ಮತ್ತು ಅಂಥ ಅಪರಾಧಕ್ಕಾಗಿ ನ್ಯಾಯಾಲಯದಲ್ಲಿ ಅಭಿಯೋಜನೆಯನ್ನು ಹೂಡತಕ್ಕದ್ದೆಂದು,][1] ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದರೆ, ಆಗ ಅವನು ಹಾಗೆ ಪರಿಣಮಿಸುವಂತೆ ಆದೇಶ ಹೊರಡಿಸಬಹುದು ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನ ಅಭಿಯೋಜನೆಯನ್ನು ಪ್ರಾರಂಭಿಸಬಹುದು ಮತ್ತು ಅಂಥ ಅಭಿಯೋಜನೆಗೆ ಯಾವುದೇ ಪ್ರಾಧಿಕಾರದ ಪೂರ್ವ ಮಂಜೂರಾತಿಯ ಅಗತ್ಯವಿದ್ದರೆ ಆಗ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಆದೇಶವನ್ನು ನೀಡಿದ ದಿನಾಂಕದಂದು ಯುಕ್ತ ಪ್ರಾಧಿಕಾರವು ಅಂಥ ಮಂಜೂರಾತಿಯನ್ನು ನೀಡಿದೆಯೆಂದು ಭಾವಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

15. ಲೋಕಾಯುಕ್ತನ ಸಿಬ್ಬಂದಿ ವರ್ಗ, ಮೊದಲಾದವು.– [1][(1) ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಅಥವಾ ಉಪಲೋಕಾಯುಕ್ತರು ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರಿಗೆ ನೆರವಾಗಲು ನಿಯಮಿಸಬಹುದಾದಂಥ ಅಧಿಕಾರಿಗಳು ಮತ್ತು ನೌಕರರು ಇರತಕ್ಕದ್ದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತರಾದ ಅಧಿಕಾರಿಗಳು ಮತ್ತು ನೌಕರರು ನಿರ್ಭಯವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ನೆರವಾಗುವಲ್ಲಿ ಅವಶ್ಯವಿರಬಹುದಾದಂಥ ವಿಶೇಷ ಷರತ್ತುಗಳೂ ಸೇರಿ ಅವರ ಸೇವಾಭರ್ತಿ, ಸೇವಾ ಷರತ್ತುಗಳು ಸಂದರ್ಭಾನುಸಾರ, [1][x x x][1] ಲೋಕಾಯುಕ್ತರೊಡನೆ ಸಮಾಲೋಚನೆ ನಡೆಸಿ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಲೋಪಿಸಲಾಗಿದೆ.

(3) (1)ನೆಯ ಉಪಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿನಿಯಮದ ಮೇರೆಗೆ ತನಿಖೆ ನಡೆಸುವ ಉದ್ದೇಶಕ್ಕಾಗಿ,–

[1][(ಎ) ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು;

(ಎಎ) [3][ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸಹಮತಿಯನ್ನು ಪಡೆದು ಕೇಂದ್ರ ಸರ್ಕಾರದ][3] ಯಾವೊಬ್ಬ ಅಧಿಕಾರಿ ಅಥವಾ ತನಿಖಾ ಏಜೆನ್ಸಿಯ ಸೇವೆಯನ್ನು; ಅಥವಾ][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಪ್ರತಿಯೋಜಿಸಲಾಗಿದೆ.

(ಬಿ)[2][ಯಾವೊಬ್ಬ ವ್ಯಕ್ತಿ ಅಥವಾ ಇತರ ಯಾವುದೇ ಏಜೆನ್ಸಿಯ][2] ಸೇವೆಯನ್ನು, ಬಳಸಿಕೊಳ್ಳಬಹುದು.

[1][(4) ಉಪ-ಪ್ರಕರಣ (1) ರಲ್ಲಿ ಉಲ್ಲೇಖಿಸಲಾಗಿರುವ ಅಧಿಕಾರಿಗಳು ಮತ್ತು ಇತರ ನೌಕರರು ಲೋಕಾಯುಕ್ತನ ಆಡಳಿತಾತ್ಮಕ ಮತ್ತು ಶಿಸ್ತು ಪಾಲನೆಯ ನಿಯಂತ್ರಣದಡಿಯಲ್ಲಿರತಕ್ಕದ್ದು.

ಪರಂತು [3][ಲೋಕಾಯುಕ್ತನ ಪದವು ಆತನ ಮರಣ, ರಾಜೀನಾಮೆ, ನಿವೃತ್ತಿ, ತೆಗೆದುಹಾಕುವುದು ಅಥವಾ ಅನ್ಯಥಾ ಕಾರಣಗಳಿಂದಾಗಿ ರಿಕ್ತವಾಗಿದ್ದರೆ ಅಥವಾ][3] ಲೋಕಾಯುಕ್ತನು ಗೈರು ಹಾಜರಿ, ಆಸ್ವಸ್ಥತೆ ಅಥವಾ ಯಾವುದೇ ಇತರ ಕಾರಣಗಳಿಂದ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದರೆ ಉಪ-ಲೋಕಾಯುಕ್ತನು ಅಥವಾ ಒಬ್ಬನಿಗಿಂತ ಹೆಚ್ಚು ಉಪ-ಲೋಕಾಯುಕ್ತರಿದ್ದರೆ ಅವರ ಪೈಕಿ ಜ್ಯೇಷ್ಠ ಉಪ-ಲೋಕಾಯುಕ್ತನು ಈ ಉಪ-ಪ್ರಕರಣದ ಮೇರೆಗಿನ ಲೋಕಾಯುಕ್ತನ ಪ್ರಕಾರ್ಯಗಳನ್ನು ನಿರ್ವಹಿಸಬಹುದು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 15.01.1986ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 01.08.2006ರಿಂದ ಪ್ರತಿಯೋಜಿಸಲಾಗಿದೆ.
3. 2010ರ ಅಧಿನಿಯಮ ಸಂಖ್ಯೆ: 25ರ ಮೂಲಕ ದಿನಾಂಕ: 23.07.2010ರಿಂದ ಸೇರಿಸಲಾಗಿದೆ.

16. ಮಾಹಿತಿಯ ಗೌಪ್ಯ.- (1) ಈ ಅಧಿನಿಯಮದ ಮೇರೆಗೆ ನಡೆಯುವ ಯಾವುದೇ ತನಿಖೆಯ ಕಾಲದಲ್ಲಿ ಅಥವಾ ಅದರ ಉದ್ದೇಶಗಳಿಗಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಅಥವಾ ಅವನ ಸಿಬ್ಬಂದಿ ವರ್ಗದವರು ಪಡೆದ ಯಾವುದೇ ಮಾಹಿತಿ ಮತ್ತು ಅಂಥ ಮಾಹಿತಿಯ ಸಂಬಂಧದಲ್ಲಿ ದಾಖಲು ಮಾಡಿದ ಅಥವಾ ಸಂಗ್ರಹಿಸಿದ ಯಾವುದೇ ಸಾಕ್ಷ್ಯವನ್ನು ಗೌಪ್ಯವೆಂದು ಪರಿಗಣಿಸತಕ್ಕದ್ದು ಮತ್ತು ಅಂಥ ಮಾಹಿತಿಯ ಸಂಬಂಧವಾಗಿ ಸಾಕ್ಷ್ಯ ಕೊಡುವಂತೆ ಅಥವಾ ಹಾಗೆ ದಾಖಲು ಮಾಡಿಕೊಂಡ ಅಥವಾ ಸಂಗ್ರಹಿಸಲಾದ ಸಾಕ್ಷ್ಯವನ್ನು ಹಾಜರುಪಡಿಸುವಂತೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತ ಅಥವಾ ಯಾವೊಬ್ಬ ಸಾರ್ವಜನಿಕ ನೌಕರನನ್ನು ಒತ್ತಾಯಿಸಲು ಯಾವ ನ್ಯಾಯಾಲಯಕ್ಕೂ ಹಕ್ಕಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ,-

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ ಅಥವಾ 12ನೇ ಪ್ರಕರಣದ ಮೇರೆಗಿನ ಅಂಥ ವರದಿಯ ಮೇಲೆ ಕೈಗೊಳ್ಳತಕ್ಕ ಯಾವುದೇ ಕ್ರಮದ ಅಥವಾ ವ್ಯವಹರಣೆಗಳ ಉದ್ದೇಶಗಳಿಗಾಗಿ,

(ಬಿ) ಸರ್ಕಾರಿ ರಹಸ್ಯಗಳ ಅಧಿನಿಯಮ, 1923ರ ಮೇರೆಗಿನ ಅಪರಾಧದ ಅಥವಾ ಭಾರತ ದಂಡಸಂಹಿತೆಯ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನೀಡುವ ಅಥವಾ ಸೃಷ್ಟಿಸುವ ಅಪರಾಧದ ಯಾವುವೇ ವ್ಯವಹರಣೆಗಳ ಉದ್ದೇಶಗಳಿಗಾಗಿ ಅಥವಾ 14ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧ ವಿಚಾರಣೆಯ ಅಥವಾ 17ನೇ ಪ್ರಕರಣದ ಮೇರೆಗಿನ ಯಾವುವೇ ವ್ಯವಹರಣೆಗಳ ಉದ್ದೇಶಗಳಿಗಾಗಿ, ಅಥವಾ

(ಸಿ) ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ,

(1) ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಯಾವುದೇ ಮಾಹಿತಿಯನ್ನು ಅಥವಾ ಯಾವುವೇ ವಿವರಗಳನ್ನು ಹೊರಗೆಡುಹುವುದಕ್ಕೆ ಅನ್ವಯಿಸತಕ್ಕದ್ದಲ್ಲ.

17. ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಉದ್ದೇಶಪೂರ್ವಕವಾಗಿ ಅಪಮಾನ ಮಾಡುವುದು ಅಥವಾ ತಡೆ ಉಂಟುಮಾಡುವುದು ಅಥವಾ ಅಪಖ್ಯಾತಿ ತರುವುದು.- (1) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿಯನಿಯಮದ ಮೇರೆಗೆ ಯಾವುದೇ ತನಿಖೆ ಅಥವಾ ವಿಚಾರಣೆ ನಡೆಸುವಾಗ ಅವನಿಗೆ ಉದ್ದೇಶಪೂರ್ವಕ ಅಪಮಾನ ಮಾಡುವ ಅಥವಾ ತಡೆಯನ್ನುಂಟು ಮಾಡುವ ಯಾವೊಬ್ಬ ವ್ಯಕ್ತಿಯು ದೋಷಸಿದ್ದವಾದ ಅನಂತರ, ಆರು ತಿಂಗಳುಗಳ ಅವಧಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ಅಪಖ್ಯಾತಿ ತರಬೇಕೆಂದೆಣಿಸಿ ಆಡುವ ಅಥವಾ ಓದಬೇಕೆಂದು ಉದ್ದೇಶಿಸಿದ ಮಾತುಗಳ ಮೂಲಕ ಯಾವುದೇ ಹೇಳಿಕೆಯನ್ನು ಕೊಡುವ ಅಥವಾ ಪ್ರಕಟಿಸುವ ಅಥವಾ ಇತರ ಯಾವುದೇ ಕೃತ್ಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು ದೋಷಸಿದ್ದವಾದ ತರುವಾಯ ಆರು ತಿಂಗಳುಗಳ ಅವಧಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಸಾದಾಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

(3) ದಂಡ ಪ್ರಕ್ರಿಯಾ ಸಂಹಿತೆ, 1973ರ 199ನೇ ಪ್ರಕರಣದ ಉಪಬಂಧಗಳು ಸದರಿ 199ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲಿಖಿತವಾಗಿರುವ ಅಪರಾಧದ ಸಂಬಂಧದಲ್ಲಿ ಅನ್ವಯಿಸುವ ಹಾಗೆಯೇ (1)ನೇ ಉಪಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಲೋಕಾಯುಕ್ತ ಅಥವಾ ಸಂಬಂಧಪಟ್ಟ ಉಪಲೋಕಾಯುಕ್ತನ

ಪೂರ್ವ ಮಂಜೂರಾತಿಯಿಲ್ಲದೆ ಅಂಥ ಅಪರಾಧದ ಸಂಬಂಧವಾಗಿ ಸರ್ಕಾರಿ ಅಭಿಯೋಜಕ ಯಾವುದೇ ಫಿರ್ಯಾದು ಮಾಡತಕ್ಕದ್ದಲ್ಲವೆಂಬ ಮಾರ್ಪಾಡಿಗೆ ಒಳಪಟ್ಟು ಅನ್ವಯವಾಗತಕ್ಕದ್ದು.

(4) ನ್ಯಾಯಾಲಯವು ತೀರ್ಪಿನಲ್ಲಿ ನಮೂದಿಸಬೇಕಾದ ಯಾವುವೇ ಸಾಕಷ್ಟು ಮತ್ತು ವಿಶೇಷ ಕಾರಣಗಳಿಗಾಗಿ ಕಡಿಮೆ ಮಾಡಿದ ಕಾರಾವಾಸದ ಅಥವಾ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಬಹುದು.

[1][**17ಎ. ಅಪಮಾನಕ್ಕಾಗಿ ಶಿಕ್ಷೆ ವಿಧಿಸಲು ಅಧಿಕಾರ.**– ಲೋಕಾಯುಕ್ತ ಅಥವಾ ಉಪಲೋಕಾಯುಕ್ತರು, ಅಪಮಾನದ ಬಗ್ಗೆ ಉಚ್ಚ ನ್ಯಾಯಾಲಯಕ್ಕಿರುವಂಥ ಮತ್ತು ಚಲಾಯಿಸುವಂಥ ಅಧಿಕಾರ ವ್ಯಾಪ್ತಿ, ಅಧಿಕಾರಗಳು ಮತ್ತು ಪ್ರಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ನ್ಯಾಯಾಲಯಗಳ ನಿಂದೆ ಅಧಿನಿಯಮ, 1971ರ (1971ರ ಕೇಂದ್ರಾಧಿನಿಯಮ 70) ಉಪಬಂಧಗಳು ಉಚ್ಚನ್ಯಾಯಾಲಯಕ್ಕೆ ಅವುಗಳಲ್ಲಿ ಮಾಡಲಾದ ಉಲ್ಲೇಖಗಳು, ಸಂದರ್ಭಾನುಸಾರ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತರ ಬಗೆಗಿನ ಉಲ್ಲೇಖವನ್ನು ಒಳಗೊಂಡಿದೆಯೆಂದು ಅರ್ಥೈಸತಕ್ಕದ್ದೆಂಬ ಮಾರ್ಪಾಟಿಗೊಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು.][1]

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಸೇರಿಸಲಾಗಿದೆ.

18. ರಕ್ಷಣೆ.– (1) ಈ ಅಧಿನಿಯಮದ ಮೇರೆಗೆ ತಮಗೆ ವಿಧಿಸಿರುವ ಕರ್ತವ್ಯಗಳನ್ನು ನೆರವೇರಿಸುವಾಗ ಅಥವಾ ನೆರವೇರಿಸಲು ಉದ್ದೇಶಿಸಿರುವಾಗ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯದ ಬಗ್ಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ವಿರುದ್ಧ, ಅಥವಾ 15ನೇ ಪ್ರಕರಣದಲ್ಲಿ ಉಲ್ಲಿಖಿತವಾದ ಯಾವೊಬ್ಬ ಅಧಿಕಾರಿಯ, ಉದ್ಯೋಗಿಯ, ಏಜೆನ್ಸಿಯ ಅಥವಾ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆ ಇರತಕ್ಕದ್ದಲ್ಲ.

(2) ಕಾರ್ಯ ವಿಧಾನದಲ್ಲಿ ಕೊರತೆಯಿರುವ ಕಾರಣದಿಂದ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಸಂಬಂಧದಲ್ಲಿಯ ಯಾವುವೇ ವ್ಯವಹರಣೆಗಳು ಸರಿಯಾದ ಕ್ರಮದಲ್ಲಿಲ್ಲವೆಂದು ತಿಳಿಯತಕ್ಕದ್ದಲ್ಲ ಮತ್ತು ಅಧಿಕಾರ ವ್ಯಾಪ್ತಿಯ ಕಾರಣದ ಹೊರತಾಗಿ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಯಾವುದೇ ವ್ಯವಹರಣೆಗಳು ಅಥವಾ ತೀರ್ಮಾನವು ಸಾಮಾನ್ಯ ಸಿವಿಲ್ ಅಧಿಕಾರ ವ್ಯಾಪ್ತಿಯ ಯಾವುದೇ ನ್ಯಾಯಾಲಯದಲ್ಲಿ ಆಕ್ಷೇಪಕ್ಕೆ, ಪುನರೀಕ್ಷಣೆಗೆ, ರದ್ದಿಯಾತಿಗೆ ಗುರಿಯಾಗತಕ್ಕದ್ದಲ್ಲ ಅಥವಾ ಪ್ರಶ್ನಿತವಾಗತಕ್ಕದ್ದಲ್ಲ.

19. ಉಪಲೋಕಾಯುಕ್ತನಿಗೆ ಹೆಚ್ಚಿನ ಪ್ರಕಾರ್ಯಗಳ ಪ್ರದಾನ.– (1) ಸರ್ಕಾರವು ಲಿಖಿತ ಆದೇಶದ ಮೂಲಕ ಮತ್ತು ಉಪಲೋಕಾಯುಕ್ತನ ಜೊತೆ ಸಮಾಲೋಚಿಸಿದ ತರುವಾಯ, ಉಪ ಲೋಕಾಯುಕ್ತನ ಶಿಫಾರಸುಗಳ ಮುಂದುವರಿಕೆಯಲ್ಲಿ ಅಥವಾ ಅನ್ಯಥಾ ಸರ್ಕಾರಿ ನೌಕರರ ಮತ್ತು 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲೇಖಿಸಿದ [1][ಆದರೆ 7ನೇ ಪ್ರಕರಣದ (1)ನೇ ಉಪಪ್ರಕರಣದ (ii) ಮತ್ತು (iv)ನೇ ಖಂಡಗಳ ಅಡಿಯಲ್ಲಿ ಬರದ][1] ವ್ಯಕ್ತಿಗಳ ವಿರುದ್ಧ ಪ್ರಾರಂಭಿಸಿದ ಶಿಸ್ತಿನ ಅಥವಾ [2][ಪ್ರಕರಣ 26ರ ಉಪ ಪ್ರಕರಣ (3)ರ ಮೇರೆಗೆ ವರ್ಗಾಯಿಸಲಾದ ಅಥವಾ ಇತರ][2] ವ್ಯವಹರಣೆಗಳ ಸಂಬಂಧದಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಮತ್ತು 15ನೇ ಪ್ರಕರಣದಲ್ಲಿ ಉಲ್ಲಿಖಿತರಾದ ಅಧಿಕಾರಿಗಳು, ಉದ್ಯೋಗಿಗಳು, ಏಜೆನ್ಸಿಗಳ ಮೂಲಕ ವಿಚಾರಣೆಗಳನ್ನು ನಡೆಸಲು ಉಪಲೋಕಾಯುಕ್ತನಿಗೆ ಅಧಿಕಾರಿಗಳನ್ನು ಪ್ರದಾನ ಮಾಡಬಹುದು.

1. 1988ರ ಅಧಿನಿಯಮ ಸಂಖ್ಯೆ: 1ರ ಮೂಲಕ ದಿನಾಂಕ: 25.02.1988ರಿಂದ ಸೇರಿಸಲಾಗಿದೆ.
2. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಉಪಲೋಕಾಯುಕ್ತನಿಗೆ ಅಧಿಕಾರಗಳನ್ನು ಪ್ರದಾನ ಮಾಡಿರುವಲ್ಲಿ ಉಪಲೋಕಾಯುಕ್ತನು, ಸಂದರ್ಭಾನುಸಾರ ದೂರು, ಅಥವಾ ಆಪಾದನೆಯನ್ನೊಳಗೊಂಡ [1][ಒಂದು ಫಿರ್ಯಾದಿನ ಮೇಲೆ][1] ಯಾವುದೇ ತನಿಖೆಯನ್ನು ಮಾಡುವ ಸಂದರ್ಭದಲ್ಲಿ ಯಾವ ಅಧಿಕಾರಗಳನ್ನು ಚಲಾಯಿಸುತ್ತಿದ್ದನೋ ಮತ್ತು ಯಾವ ಪ್ರಕಾರ್ಯಗಳನ್ನು ನಿರ್ವಹಿಸುತ್ತಿದ್ದನೋ ಅದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅವೇ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಅದಕ್ಕನುಸಾರವಾಗಿ ಅನ್ವಯವಾಗತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

20. ಸುಳ್ಳು ಫಿರ್ಯಾದಿಗಾಗಿ ಅಭಿಯೋಜನೆ.– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಯಾವುದೇ ಫಿರ್ಯಾದನ್ನು ಈ ಅಧಿನಿಯಮದ ಮೇರೆಗೆ ಮಾಡುವ ಯಾವೊಬ್ಬ ವ್ಯಕ್ತಿಯು ದೋಷ ಸಿದ್ಧಿಯಾದ ತರುವಾಯ, ಆರು ತಿಂಗಳುಗಳಿಗೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮೊದಲನೇ ವರ್ಗದ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯದ ಹೊರತಾಗಿ ಇತರ ಯಾವುದೇ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

[1][(2ಎ) ಯಾವ ವ್ಯಕ್ತಿಯ ವಿರುದ್ಧ ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಫಿರ್ಯಾದನ್ನು ಮಾಡಲಾಗಿದೆಯೋ ಆ ವ್ಯಕ್ತಿಯು, ಸಂದರ್ಭಾನುಸಾರ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಪೂರ್ವ ಮಂಜೂರಾತಿಯನ್ನು ಪಡೆದು ನೀಡಿದ ಫಿರ್ಯಾದಿನ ಹೊರತು ಯಾವುದೇ ಅಂಥ ನ್ಯಾಯಾಲಯವು ಉಪ-ಪ್ರಕರಣ (1)ರ ಮೇರೆಗಿನ ಅಪರಾಧದ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಸೇರಿಸಲಾಗಿದೆ.

(3) (1)ನೇ ಉಪಪ್ರಕರಣದ ಮೇರೆಗಿನ ಅಪರಾಧದ ಸಂಬಂಧದಲ್ಲಿ ಸಾರ್ವಜನಿಕ ಅಭಿಯೋಜಕರು ಅಭಿಯೋಜನೆ ನಡೆಸತಕ್ಕದ್ದು ಮತ್ತು ಅಂತಹ ಅಭಿಯೋಜನೆಗೆ ಸಂಬಂಧಪಟ್ಟ ಎಲ್ಲ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸತಕ್ಕದ್ದು.

21. ಪ್ರತ್ಯಾಯೋಜಿಸಲು ಅಧಿಕಾರ.- ಉಪಲೋಕಾಯುಕ್ತನು, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ 19ನೇ ಪ್ರಕರಣದ ಮೂಲಕ ಪ್ರದತ್ತವಾದ ಪ್ರಕಾರ್ಯಗಳನ್ನು ಮತ್ತು ಅಧಿಕಾರಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ 15ನೇ ಪ್ರಕರಣದಲ್ಲಿ ಉಲ್ಲೇಖಿಸಿದಂಥ ಅಧಿಕಾರಿಗಳು, ಉದ್ಯೋಗಿಗಳು ಅಥವಾ ಏಜೆನ್ಸಿಗಳು ಸಹ ಚಲಾಯಿಸಬಹುದೆಂದು ಅಥವಾ ನಿರ್ವಹಿಸಬಹುದೆಂದು ನಿರ್ದೇಶಿಸಬಹುದು.

22. ಸಾರ್ವಜನಿಕ ನೌಕರರು ಸ್ವತ್ತಿನ ಹೇಳಿಕೆಯನ್ನು ಒಪ್ಪಿಸುವುದು.- (1) ಸರ್ಕಾರಿ ನೌಕರರನ್ನುಳಿದು 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಬ್ಬ ಸಾರ್ವಜನಿಕ ನೌಕರನು ಈ ಅಧಿನಿಯಮದ ಪ್ರಾರಂಭದ ತರುವಾಯ ಮೂರು ತಿಂಗಳೊಳಗೆ ಮತ್ತು ಆ ತರುವಾಯ ಪ್ರತಿ ವರ್ಷ ಜೂನ್ ತಿಂಗಳ 30ರೊಳಗೆ [1][ತನ್ನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಹಾಗೂ][1] ತನ್ನ ಕುಟುಂಬದ ಸದಸ್ಯರುಗಳ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಹೇಳಿಕೆಯನ್ನು ನಿಯಮಿಸಲಾದ ನಮೂನೆಯಲ್ಲಿ ಲೋಕಾಯುಕ್ತನಿಗೆ ಸಲ್ಲಿಸತಕ್ಕದ್ದು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

(2) (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅಂಥ ಯಾವೊಬ್ಬ ಸಾರ್ವಜನಿಕ ನೌಕರನಿಂದ ಲೋಕಾಯುಕ್ತನು ಯಾವುದೇ ಹೇಳಿಕೆಯನ್ನು ಪಡೆಯದಿದ್ದರೆ ಲೋಕಾಯುಕ್ತನು ಆ ಕುರಿತು ಸಕ್ಷಮ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ವರದಿಯ ಒಂದು ಪ್ರತಿಯನ್ನು ಸಂಬಂಧಪಟ್ಟ ಸಾರ್ವಜನಿಕ ನೌಕರನಿಗೆ ಕಳಿಸಿಕೊಡತಕ್ಕದ್ದು ಅಂಥ ವರದಿಯ ಎರಡು ತಿಂಗಳೊಳಗೆ ಸಂಬಂಧಪಟ್ಟ ಸಾರ್ವಜನಿಕ ನೌಕರನು [1][ತನ್ನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಅಂಥ ಹೇಳಿಕೆಗಳನ್ನು ಸಲ್ಲಿಸದಿದ್ದರೆ, ಲೋಕಾಯುಕ್ತನು ಅಂಥ ಸಾರ್ವಜನಿಕ ನೌಕರನ][1] ಹೆಸರುಗಳನ್ನು ರಾಜ್ಯದಲ್ಲಿ ವ್ಯಾಪಕ ಪ್ರಸಾರದ ಮೂರು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕದ್ದು.

[1][***ವಿವರಣೆ***][1].- ಈ ಪ್ರಕರಣದಲ್ಲಿ 'ಸಾರ್ವಜನಿಕ ನೌಕರನ ಕುಟುಂಬ ಎಂದರೆ ಗಂಡ ಅಥವಾ ಹೆಂಡತಿ ಮತ್ತು [1][ಸಾರ್ವಜನಿಕ ನೌಕರನ ಮೇಲೆ ಅವನ ಎಂಥ ಮಕ್ಕಳು ಮತ್ತು ತಂದೆತಾಯಿಯರು ಆಶ್ರಿತರಾಗಿರುವರೋ ಅಂಥವರು.][1]

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

23. ನಿಯಮಗಳ ರಚನಾಧಿಕಾರ.- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಪೂರ್ವೋಕ್ತ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಅಂಥ ನಿಯಮಗಳು ಈ ಕೆಳಗಿನವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು: -

(ಎ) 2ನೇ ಪ್ರಕರಣದ (4)ನೇ ಖಂಡದ (ಡಿ) ಉಪಖಂಡದ ಮೇರೆಗೆ ನಿಯಮಿಸಬೇಕಾದ ಪ್ರಾಧಿಕಾರಗಳು;

(ಬಿ) ಲೋಕಾಯುಕ್ತ ಮತ್ತು ಉಪಲೋಕಾಯುಕ್ತನಿಗೆ ಸಂದೇಯವಿರುವ ಭತ್ಯೆಗಳು ಮತ್ತು ನಿವೃತ್ತಿ ವೇತನ ಮತ್ತು ಇತರ ಸೇವಾ ಷರತ್ತುಗಳು;

(ಸಿ) [1][ಒಂದು ಫಿರ್ಯಾದನ್ನು][1] ಮಾಡಬಹುದಾದ ನಮೂನೆ ಮತ್ತು ವಿಧಾನ;

(ಡಿ) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು 11ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಚಲಾಯಿಸಬಹುದಾದ ಸಿವಿಲ್ ನ್ಯಾಯಾಲಯದ ಅಧಿಕಾರಗಳು;

(ಇ) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನ ಸಿಬ್ಬಂದಿ ಮತ್ತು ಉದ್ಯೋಗಿಗಳ ವೇತನ, ಭತ್ಯೆ, ಸೇವಾ ಭರ್ತಿ ಮತ್ತು ಇತರ ಸೇವಾ ಷರತ್ತುಗಳು;

(ಎಫ್) [1][ಪ್ರಕರಣ 19ರ ಮೇರೆಗೆ ಸರ್ಕಾರಿ ನೌಕರರ ವಿರುದ್ಧ ತನಿಖೆಗಳು;][1]

(ಜಿ) ಇತರ ಯಾವ ವಿಷಯದ ಬಗ್ಗೆ ಈ ಅಧಿನಿಯಮದ ಮೇರೆಗೆ ನಿಯಮಗಳನ್ನು ರಚಿಸಬೇಕೋ [1][ಅಥವಾ ಅಗತ್ಯವಿವೆಯೋ][1], ಆ ವಿಷಯಗಳು.

1. 1986ರ ಅಧಿನಿಯಮ ಸಂಖ್ಯೆ: 31ರ ಮೂಲಕ ದಿನಾಂಕ: 16.06.1986ರಿಂದ ಪ್ರತಿಯೋಜಿಸಲಾಗಿದೆ.

[1][(2ಎ) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ಅಂಥ ನಿಯಮವನ್ನು ರಚಿಸಬೇಕಾಗಿಬಂದ ಕಾರಣಗಳನ್ನು,ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇರಿಸಲಾದ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು. (3)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವು ಈ ಅಧಿನಿಯಮದಿಂದ ಅಧಿನಿಯಮಿತವಾದಂತೆ ಪರಿಣಾಮಕಾರಿಯಾಗಿರತಕ್ಕದ್ದು][1]

1. 1991ರ ಅಧಿನಿಯಮ ಸಂಖ್ಯೆ: 30ರ ಮೂಲಕ ದಿನಾಂಕ: 08.08.1991ರಿಂದ ಪ್ರತಿಸ್ಥಾಪಿಸಲಾಗಿದೆ.

(3) ಈ ಪ್ರಕರಣದ ಕೆಳಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಮೇಲೆ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಇರಿಸತಕ್ಕದ್ದು, ಮತ್ತು ಹಿಂದೆ ಹೇಳಿದ, ಅಧಿವೇಶನದ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳ, ನಿಕಟೋತ್ತರ ಅಧಿವೇಶನ ಮುಗಿಯುವುದಕ್ಕೂ ಮೊದಲು, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ರಾಜ್ಯಸರ್ಕಾರದ ಸರ್ಕಾರಿ ರಾಜ್ಯಪತ್ರದಲ್ಲಿ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಅಧಿಸೂಚನೆ ಮಾಡಿದ ದಿನಾಂಕದಿಂದ, ಸಂದರ್ಭಾನುಸಾರ, ಅಂಥ ಮಾರ್ಪಾಟು ಆದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಮಾರ್ಪಾಟು ಅಥವಾ ರದ್ದಿಯಾತಿ ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಊರ್ಜಿತತೆಗೆ ಪ್ರತಿಕೂಲವಾಗಿ ಇರತಕ್ಕದ್ದಲ್ಲ.

24. ಸಂದೇಹಗಳ ನಿವಾರಣೆ.– (1) ಸಂದೇಹಗಳ ನಿವಾರಣೆಗಾಗಿ,–

(ಎ) ಭಾರತ ದಂಡ ಸಂಹಿತೆಯ 19ನೇ ಪ್ರಕರಣದಲ್ಲಿ ಪರಿಭಾಷಿಸಿದ ಯಾವೊಬ್ಬ ನ್ಯಾಯಾಧೀಶ;

(ಬಿ) ಭಾರತದಲ್ಲಿಯ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ನ್ಯಾಯಾಲಯದ ಯಾವೊಬ್ಬ ಅಧಿಕಾರಿ ಅಥವಾ ನೌಕರ;

(ಸಿ) ಕರ್ನಾಟಕ ಮಹಾಲೇಖಾಪಾಲ;

(ಡಿ) ಸಂವಿಧಾನದ 324ನೇ ಅನುಚ್ಛೇದದಲ್ಲಿ ಉಲ್ಲೇಖಿತವಾದ ಮುಖ್ಯ ಚುನಾವಣಾ ಕಮೀಷನರು, ಚುನಾವಣಾ ಕಮೀಷನರುಗಳು ಮತ್ತು ಪ್ರಾದೇಶಿಕ ಕಮೀಷನರುಗಳು ಹಾಗೂ ಕರ್ನಾಟಕ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ;

(ಇ) ಕರ್ನಾಟಕ ವಿಧಾನಸಭೆಯ ಅಧ್ಯಕ್ಷ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ; ಮತ್ತು

(ಎಫ್) ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಅಥವಾ ಒಬ್ಬ ಸದಸ್ಯನು,

–ಕೈಗೊಂಡ ಅಥವಾ ಇವರ ಅನುಮೋದನೆಯಿಂದ ಕೈಗೊಂಡ ಯಾವುದೇ ಕ್ರಮದ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತನಿಗೆ ಈ ಅಧಿನಿಯಮದಲ್ಲಿರುವುದಾವುದೂ ಅಧಿಕಾರ ನೀಡುತ್ತದೆಂದು ಅರ್ಥ ಮಾಡತಕ್ಕದ್ದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

(2) ಈ ಅಧಿನಿಯಮದ ಮೇರೆಗೆ ಫಿರ್ಯಾದು ಮಾಡುವ ವ್ಯಕ್ತಿಗೆ ಯಾವುದೇ ಕ್ರಮದ ಸಂಬಂಧದಲ್ಲಿ ಇತರ ಯಾವುದೇ ಅಧಿನಿಯಮ ಅಥವಾ ನಿಯಮ ಅಥವಾ ಕಾನೂನಿನ ಮೇರೆಗೆ ಅಪೀಲು, ಪರಿಷ್ಕರಣ, ಪುನರೀಕ್ಷಣೆ ಅಥವಾ ಇತರ ಯಾವುದೇ ರೀತಿಯಲ್ಲಿ ದೊರೆಯುವ ಪರಿಹಾರದ ಜೊತೆಗೆ ಈ ಅಧಿನಿಯಮದ ಉಪಬಂಧಗಳು ಇರತಕ್ಕದ್ದು ಮತ್ತು ಈ ಅಧಿನಿಯಮದಲ್ಲಿರುವ ಯಾವುದೂ ಅಂಥ ಪರಿಹಾರ ಪಡೆಯಲು ಅಂಥ ವ್ಯಕ್ತಿಗಿರುವ ಹಕ್ಕನ್ನು ಪರಿಮಿತಿಗೊಳಪಡಿಸತಕ್ಕದ್ದಲ್ಲ ಅಥವಾ ಭಾಧಿಸತಕ್ಕದ್ದಲ್ಲ.

25. ತೊಂದರೆಗಳ ನಿವಾರಣೆ.– ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ರಾಜ್ಯಪಾಲರು ಆದೇಶದ ಮೂಲಕ,–

(1) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು;

(2) ಸರ್ಕಾರದ ಅಥವಾ ಕರ್ನಾಟಕ ರಾಜ್ಯ ಜಾಗೃತ ಆಯೋಗ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗವೂ ಸೇರಿದಂತೆ ಇತರ ಯಾವುದೇ ಪ್ರಾಧಿಕಾರದ ಮುಂದೆ ಇತ್ಯರ್ಥವಾಗದೇ ಇರುವ ಸರ್ಕಾರಿ ನೌಕರರ ಮತ್ತು 2ನೇ ಪ್ರಕರಣದ (12)ನೇ ಖಂಡದ (ಜಿ) ಬಾಬಿನಲ್ಲಿ ಉಲ್ಲೇಖಿಸಿದ ವ್ಯಕ್ತಿಗಳ ವಿರುದ್ಧದ

ವಿಚಾರಣೆ ಮತ್ತು ತನಿಖೆಗಳನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ,

–ತಾನು ಅವಶ್ಯಕವೆಂದು ಭಾವಿಸುವ ಅಥವಾ ಯುಕ್ತವೆಂದು ಬಾವಿಸುವಂಥ ಉಪಬಂಧವನ್ನು ಮಾಡಬಹುದು.

26. ನಿರಸನ ಮತ್ತು ಉಳಿಸುವಿಕೆಗಳು.– (1) ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980 ಮತ್ತು ಕರ್ನಾಟಕ ಸಾರ್ವಜನಿಕ ಪ್ರಾಧಿಕಾರಗಳ (ಉದ್ಯೋಗಿಗಳ ವಿರುದ್ಧ ಶಿಸ್ತು ವ್ಯವಹರಣೆಗಳು) ಅಧಿನಿಯಮ, 1982(ಕರ್ನಾಟಕ ಅಧಿನಿಯಮ 1982ರ 31) ಇವುಗಳು ಈ ಮೂಲಕ ನಿರಸಿತವಾಗಿವೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ನಿಯಮಗಳ ಅಥವಾ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕೃತ್ಯ ಅಥವಾ ಕಾರ್ಯವು, ಸದರಿ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅದನ್ನು ಮುಂದುವರಿಸಬಹುದು ಮತ್ತು ಪೂರ್ಣಗೊಳಿಸಬಹುದು.

(3) ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗದ ಮುಂದೆ ಇತ್ಯರ್ಥವಾಗದೆ ಉಳಿದು ವಿಲೆಯಾಗದಿರುವ ಎಲ್ಲ ವಿಚಾರಣೆಗಳು ಮತ್ತು ತನಿಖೆಗಳು ಮತ್ತು ಇತರ ಶಿಸ್ತು ವ್ಯವಹರಣೆಗಳು ಉಪಲೋಕಾಯುಕ್ತನಿಗೆ ವರ್ಗಾವಣೆಯಾಗತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅವನ ಮುಂದೆ ಅವುಗಳನ್ನು ಪ್ರಾರಂಭಿಸಿದ್ದರೆ ಹೇಗೋ ಹಾಗೆ ಅವುಗಳು ಮುಂದುವರಿಯತಕ್ಕದ್ದು.

(4) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಪ್ರಾರಂಭದಲ್ಲಿ ಲೋಕಾಯುಕ್ತನ ಸಿಬ್ಬಂದಿಯು, ಕರ್ನಾಟಕ ರಾಜ್ಯ ಜಾಗೃತ ಆಯೋಗದ ನಿಯಮಗಳು, 1980ರ ಮೇರೆಗೆ ರಚಿತವಾದ ಕರ್ನಾಟಕ ರಾಜ್ಯ ಜಾಗೃತ ಆಯೋಗದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿದ್ದ ಕಾರ್ಯದರ್ಶಿ, ಮತ್ತು ಇತರ ಅಧಿಕಾರಿಗಳ ಮತ್ತು ಉದ್ಯೋಗಿಗಳ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು ಮತ್ತು ರಾಜ್ಯ ಜಾಗೃತ ಆಯೋಗದಲ್ಲಿ ಸಂವಾದಿ ಹುದ್ದೆಗಳನ್ನು ಹೊಂದಿರುವ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು ಮತ್ತು ಉದ್ಯೋಗಿಗಳನ್ನು ವರ್ಗಾವಣೆ ಮೂಲಕ ಸದರಿ ಹುದ್ದೆಗಳಿಗೆ ನೇಮಕಗಳನ್ನು ಈ ಮೂಲಕ ಮಾಡಲಾಗಿದೆ. ಸದರಿ ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ಉದ್ಯೋಗಿಗಳ ವೇತನ, ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು, ಬದಲಾವಣೆ ಆಗುವವರೆಗೆ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅವರು ಯಾವುದಕ್ಕೆ ಹಕ್ಕುಳ್ಳವರಾಗಿದ್ದರೋ ಅದೇ ಆಗಿರತಕ್ಕದ್ದು.

ಮೊದಲನೇ ಅನುಸೂಚಿ

(ಪ್ರಕರಣ 3 (3) ನೋಡಿ)

.....ಎಂಬ ಹೆಸರಿನವನಾದ ನಾನು, ಲೋಕಾಯುಕ್ತನಾಗಿ ನೇಮಕಗೊಂಡಿದ್ದು, ಕಾನೂನಿನ ಮೂಲಕ ಸ್ಥಾಪಿತವಾದ ಭಾರತ ಸಂವಿಧಾನದ ಬಗ್ಗೆ ನಿಜ ಶ್ರದ್ಧೆ ಮತ್ತು ನಿಷ್ಠೆಯನ್ನು ತಳೆಯುತ್ತೇನೆಂದೂ ನನ್ನ ಪದದ ಕರ್ತವ್ಯಗಳನ್ನು ಸರಿಯಾಗಿ, ಶ್ರದ್ಧಾಪೂರ್ವಕವಾಗಿ ಮತ್ತು ನನ್ನ ಪೂರ್ಣ ಸಾಮರ್ಥ್ಯ, ಜ್ಞಾನ ಮತ್ತು ವಿವೇಕದಿಂದ ಯಾವುದೇ ಭಯ, ಪಕ್ಷಪಾತ, ರಾಗದ್ವೇಷವಿಲ್ಲದೆ ಪಾಲನೆ ಮಾಡುತ್ತೇನೆಂದೂ ಭಗವಂತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಸತ್ಯನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ.

ಎರಡನೇ ಅನುಸೂಚಿ

(ಪ್ರಕರಣ 8 (1) (ಎ) ನೋಡಿ)

(ಎ) ರಾಜ್ಯದ ಭದ್ರತೆಗೆ ಸಂಬಂಧಿಸಿದ ಅಪರಾಧಗಳ ತನಿಖೆಯ ಉದ್ದೇಶಕ್ಕಾಗಿ ಕೈಗೊಂಡ ಕ್ರಮ.

(ಬಿ) ಒಂದು ವಿಷಯವು ನ್ಯಾಯಾಲಯಕ್ಕೆ ಹೋಗತಕ್ಕದ್ದೆ ಅಲ್ಲವೇ ಎಂಬುದನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಅಧಿಕಾರಗಳ ಚಲಾವಣೆಯಲ್ಲಿ ಕೈಗೊಂಡ ಕ್ರಮ.

(ಸಿ) ಕರಾರಿನ ಬಾಧ್ಯತೆಗಳನ್ನು ಪೂರೈಸುವಲ್ಲಿ ಉಂಟಾದ ಪೀಡನೆ ಅಥವಾ ಅತಿ ವಿಳಂಬವನ್ನು ಫಿರ್ಯಾದಿಯು ಆರೋಪಿಸಿರುವಲ್ಲಿ ಹೊರತು ಗ್ರಾಹಕರ ಅಥವಾ ಸರಬರಾಜುದಾರರೊಡನೆ ಆಡಳಿತದ ವಾಣಿಜ್ಯ ಸಂಬಂಧಗಳನ್ನು ಮಾತ್ರವೇ ನಿಯಂತ್ರಿಸುವ ಒಂದು ಒಪ್ಪಂದದ ಷರತ್ತುಗಳಿಂದ ಉದ್ಭವಿಸುವ ವಿಷಯಗಳಲ್ಲಿ ತೆಗೆದುಕೊಳ್ಳಲಾದ ಕ್ರಮ.

(ಡಿ) ನಿವೃತ್ತಿ ವೇತನ, ಉಪದಾನ, ಭವಿಷ್ಯನಿಧಿಯ ಕ್ಲೇಮುಗಳಿಗೆ ಅಥವಾ ನಿವೃತ್ತಿ, ಪದಚ್ಯುತಿ ಅಥವಾ ಸೇವಾ ಸಮಾಪನದಿಂದ ಉದ್ಭವಿಸುವ ಯಾವುದೇ ಕ್ಲೇಮುಗಳಿಗೆ ಸಂಬಂಧಿಸಿದ ಕ್ರಮವನ್ನು ಒಳಗೊಳ್ಳದ ಸಾರ್ವಜನಿಕ ನೌಕರರ ನೇಮಕಗಳು, ಪದಚ್ಯುತಿ, ವೇತನ, ಶಿಸ್ತು, ನಿವೃತ್ತಿ ವಯಸ್ಸು ಅಥವಾ ಅವರ ಸೇವಾ ಷರತ್ತುಗಳಿಗೆ ಸಂಬಂಧಿಸಿದ ಇತರ ವಿಷಯಗಳ ಸಂಬಂಧದಲ್ಲಿ ಕೈಗೊಂಡ ಕ್ರಮ.

(ಇ) ಗೌರವ ಪದವಿಗಳ ಮತ್ತು ಪ್ರಶಸ್ತಿಗಳ ಪ್ರದಾನ.

* * * *

ಅಧಿಸೂಚನೆ

(See notification in English)

2010ರ ಕರ್ನಾಟಕ ಅಧಿನಿಯಮ ಸಂಖ್ಯೆ 25

(2010ರ ಜುಲೈ ಇಪ್ಪತ್ಮೂರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010

(2010ರ ಜುಲೈ ಇಪ್ಪತ್ತೇರಡನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪ್ರಕರಣ 2, 7, 9, 13, 15 ಮತ್ತು ಸಿಂಧುತ್ವವನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

7. ಸಿಂಧುತ್ವ.– ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಅದರ ಮೇಲೆ ಮಾಡಿದ ತನಿಖೆ, ವ್ಯವಹರಣೆಗಳು, ವಿಚಾರಣೆ ಅಥವಾ ಶಿಫಾರಸ್ಸು ಒಳಗೊಂಡಂತೆ ಯಾವುದೇ ಅಂಥ ಕ್ರಮವು, ಅಂಥ ಕ್ರಮವನ್ನು ಕೈಗೊಂಡ ಸಮಯದಲ್ಲಿ ಲೋಕಾಯುಕ್ತರಿಗೆ ಮೂಲ ಅಧಿನಿಯಮದ ಅಡಿ ಅಂಥ ಕ್ರಮ ಕೈಗೊಳ್ಳಲು ಅಧಿಕಾರ ಇರಲಿಲ್ಲವೆಂಬ ಕಾರಣದಿಂದಾಗಿಯೇ ಅಸಿಂಧುವಾಗಿವೇ ಎಂದು ಭಾವಿಸತಕ್ಕದ್ದಲ್ಲ ಮತ್ತು ಮೂಲ ಅಧಿನಿಯಮದ ಅಡಿಯಲ್ಲಿ ಲೋಕಾಯುಕ್ತನು, ಚಲಾಯಿಸಿದ ಯಾವುದೇ ಅಧಿಕಾರ ವ್ಯಾಪ್ತಿಯನ್ನು ಯಾವುದೇ ನ್ಯಾಯಾಲಯದ, ಪ್ರಾಧಿಕಾರದ ಅಥವಾ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

ಅಧಿಸೂಚನೆ

ಸಂಖ್ಯೆ: ಸಿಆಸುಇ 147 ಸೇಲೋಯು 2010, ಬೆಂಗಳೂರು, ದಿನಾಂಕ: 02.08.2010

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2010 (2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 25)ರ 1ನೇ ಪ್ರಕರಣ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ: 23.07.2010ರಿಂದಲೇ ಸದರಿ ಅಧಿನಿಯಮದ ಉಪಬಂಧಗಳು ಜಾರಿಗೆ ಬಂದಿವೆಯೆಂದು ಪರಿಭಾವಿಸುತ್ತದೆಯೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಪಿ. ಮಾರ್ಕಂಡೇಯ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2)

2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 35

(2015ರ ಆಗಸ್ಟ್ ತಿಂಗಳ ಹದಿನಾಲ್ಕನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015

(2015ರ ಆಗಸ್ಟ್ ತಿಂಗಳ ಹದಿಮೂರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

ಪ್ರಕರಣ 3, 6 ಮತ್ತು 12ನ್ನು ಮೂಲ ಅಧಿನಿಯಮದಲ್ಲಿ ಇಂದೀಕರಿಸಲಾಗಿದೆ.

ಅಧಿಸೂಚನೆ

ಸಂಖ್ಯೆ: ಸಿಆಸುಇ 112 ಸೇಲೋಯು 2015(ಭಾ), ಬೆಂಗಳೂರು, ದಿನಾಂಕ: 02.08.2010

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 35)ರ ಒಂದನೇ ಪ್ರಕರಣ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಉಪಬಂಧಗಳು ತಕ್ಷಣದಿಂದ ಜಾರಿಗೆ ಬರುತ್ತವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಉಮಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2)

ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985

ಭಾರತ ಸಂವಿಧಾನವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ

ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಸಂವಿಧಾನದಿಂದ ಈ ಮುಂದಿನಂತೆ ಅಧಿನಿಯಮಿತವಾಗಿದೆ:–

1. ಚಿಕ್ಕ ಹೆಸರು ಮತ್ತು ಪ್ರಾರಂಭ:– (**1**) ಈ ಅಧಿನಿಯಮವನ್ನು ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಅನುಚ್ಛೇದ 101ರ ತಿದ್ದುಪಡಿ:– ಸಂವಿಧಾನದ ಅನುಚ್ಛೇದ 101ರಲ್ಲಿನ (3)ನೇ ಖಂಡದ ಉಪ–ಖಂಡ (ಎ)ಯಲ್ಲಿ, ಆವರಣಗಳು ಮತ್ತು ಅಂಕಿಗಳಿಗೆ "ಅನುಚ್ಛೇದ 102ರ (2)ನೇ ಖಂಡದ (1)ನೇ ಉಪ–ಖಂಡ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

3. ಅನುಚ್ಛೇದ 102ರ ತಿದ್ದುಪಡಿ:– ಸಂವಿಧಾನದ ಅನುಚ್ಛೇದ 102ರಲ್ಲಿ:–

(ಎ) (2) "ಈ ಅನುಚ್ಛೇದದ ಉದ್ದೇಶಗಳಿಗಾಗಿ" ಎಂಬ ಆವರಣಗಳು, ಅಂಕಿಗಳು ಮತ್ತು ಪದಗಳಿಗೆ "ವಿವರಣೆ:– ಈ ಖಂಡದ ಉದ್ದೇಶಕ್ಕಾಗಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) ಕೊನೆಯಲ್ಲಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(2) ಒಬ್ಬ ವ್ಯಕ್ತಿಯನ್ನು, ಆತನು 'ಹತ್ತನೇ ಅನುಸೂಚಿ'ಯಡಿ ಹಾಗೆ ಅನರ್ಹಗೊಂಡಿದ್ದರೆ ಸಂಸತ್ತಿನ ಉಭಯ ಸದನಗಳ ಸದಸ್ಯನಾಗುವುದರಿಂದ, ಅನರ್ಹಗೊಳಿಸತಕ್ಕದ್ದು".

4. ಅನುಚ್ಛೇದ 190ರ ತಿದ್ದುಪಡಿ:– ಸಂವಿಧಾನದ 190ನೇ ಅನುಚ್ಛೇದದಲ್ಲಿನ (3)ನೇ ಖಂಡದ (ಎ) ಉಪ–ಖಂಡದಲ್ಲಿರುವ "ಅನುಚ್ಛೇದ 191ರ (1)ನೇ ಖಂಡ" ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ, "ಅನುಚ್ಛೇದ 191ರ (2)ನೇ ಖಂಡದ (1)ನೇ ಖಂಡ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

5. ಅನುಚ್ಛೇದ 191ರ ತಿದ್ದುಪಡಿ:– ಸಂವಿಧಾನದ ಅನುಚ್ಛೇದ 191ರಲ್ಲಿ,–

(ಎ) "(2) ಈ ಅನುಚ್ಛೇದದ ಉದ್ದೇಶಗಳಿಗಾಗಿ" ಎಂಬ ಆವರಣಗಳು, ಅಂಕಿಗಳು ಮತ್ತು ಪದಗಳಿಗೆ, "ವಿವರಣೆ:– ಈ ಖಂಡದ ಉದ್ದೇಶಗಳಿಗಾಗಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) ಈ ಮುಂದಿನ ಖಂಡವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

"(2) ಒಬ್ಬ ವ್ಯಕ್ತಿಯನ್ನು, ಆತನು ಹತ್ತನೇ ಅನುಸೂಚಿಯಡಿ ಹಾಗೆ ಅನರ್ಹಗೊಂಡಿದ್ದರೆ" ರಾಜ್ಯಗಳ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗುವುದರಿಂದ ಅನರ್ಹಗೊಳಿಸತಕ್ಕದ್ದು.

ಹತ್ತನೇ ಅನುಸೂಚಿ

[ಅನುಚ್ಛೇದ 102(2) ಮತ್ತು 191(2)]

ಪಕ್ಷಾಂತರದ ಕಾರಣದ ಮೇಲೆ ಅನರ್ಹತೆಗೆ ಸಂಬಂಧಿಸಿದಂತೆ ಉಪಬಂಧಗಳು

1. **ಅರ್ಥ ವಿವರಣೆ:**– ಈ ಅನುಸೂಚಿಯಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಸದನ"** ಎಂದರೆ, ಸಂಸತ್ತಿನ ಎರಡೂ ಸದನಗಳು ಅಥವಾ ವಿಧಾನಸಭೆ ಅಥವಾ ಸಂದರ್ಭಾನುಸಾರ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಥವಾ;

(ಬಿ) ಕಂಡಿಕೆ 2 ಅಥವಾ ಕಂಡಿಕೆ 3 ಅಥವಾ ಸಂದರ್ಭಾನುಸಾರ ಕಂಡಿಕೆ 4ರ ಪ್ರಕಾರ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಒಂದು ಸದನದ ಸದಸ್ಯನ ಸಂಬಂಧದಲ್ಲಿ **"ವಿಧಾನಮಂಡಲ ಪಕ್ಷ"** ಎಂದರೆ, ತತ್ಕಾಲದಲ್ಲಿ ಸದರಿ ಉಪಬಂಧಗಳಿಗನುಸಾರವಾಗಿ ರಾಜಕೀಯ ಪಕ್ಷಕ್ಕೆ ಸೇರಿದ ಆ ಸದನದ ಎಲ್ಲಾ ಸದಸ್ಯರನ್ನು ಒಳಗೊಂಡ ಗುಂಪು;

(ಸಿ) ಸದನದ ಒಬ್ಬ ಸದಸ್ಯನ ಸಂಬಂಧದಲ್ಲಿ **"ಮೂಲ ರಾಜಕೀಯ ಪಕ್ಷ"** ಎಂದರೆ, 2ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಅವನು ಸೇರಿರುವ ರಾಜಕೀಯ ಪಕ್ಷ;

(ಡಿ) **"ಕಂಡಿಕೆ"** ಎಂದರೆ, ಈ ಅನುಸೂಚಿಯ ಕಂಡಿಕೆ.

2. ಪಕ್ಷಾಂತರದ ಕಾರಣದ ಮೇಲೆ ಅನರ್ಹತೆ:– (1) 3, 4 ಮತ್ತು 5ನೇ ಕಂಡಿಕೆಗೆ ಒಳಪಟ್ಟು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಒಂದು ಸದನದ ಸದಸ್ಯನಾಗಿರುವುದರಿಂದ,

(ಎ) ಅಂಥ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಆತನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟರೆ; ಅಥವಾ

(ಬಿ) ಅವನು ಸೇರಿರುವ ರಾಜಕೀಯ ಪಕ್ಷ ಅಥವಾ ಈ ಬಗ್ಗೆ ಅದರಿಂದ ಅಧಿಕೃತಗೊಂಡ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರವು ನೀಡಿದ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿ ಅಂಥ ಸದನದಲ್ಲಿ, ಯಾವುದೇ ಸಂದರ್ಭದಲ್ಲಿ, ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೆ ಮತದಾನ ಮಾಡಿದರೆ ಅಥವಾ ಮತದಾನದಿಂದ ವಿಮುಖನಾದರೆ ಮತ್ತು ಅಂಥ ಮತದಾನದ ಅಥವಾ ಮತದಾನದಿಂದ ವಿಮುಖವಾದ ದಿನದಿಂದ ಹದಿನೈದು ದಿನಗಳ ಒಳಗಾಗಿ ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಅಂಥ ಮತದಾನ ಅಥವಾ ವಿಮುಖತೆಯನ್ನು ಮಾಫಿ ಮಾಡದಿದ್ದರೆ, –ಅನರ್ಹಗೊಳಿಸತಕ್ಕದ್ದು.

ವಿವರಣೆ:– ಈ ಉಪ–ಕಂಡಿಕೆಯ ಉದ್ದೇಶಕ್ಕಾಗಿ,

(ಎ) ಸದನದ ಚುನಾಯಿತ ಸದಸ್ಯನನ್ನು ಅಂಥ ಸದಸ್ಯನಾಗಿ ಚುನಾವಣೆಗೆ ಒಬ್ಬ ಅಭ್ಯರ್ಥಿಯನ್ನಾಗಿ ಆತನನ್ನು ಯಾವ ರಾಜಕೀಯ ಪಕ್ಷ ನಿಲ್ಲಿಸಿದೆಯೋ ಅಂಥ ರಾಜಕೀಯ ಪಕ್ಷಕ್ಕೆ ಸೇರಿರುವನೆಂದು ಭಾವಿಸತಕ್ಕದ್ದು;

(ಬಿ) ಸದನದ ಒಬ್ಬ ನಾಮನಿರ್ದೇಶಿತ ಸದಸ್ಯನು:–

(i) ಅಂಥ ಸದಸ್ಯನಾಗಿ ಆತನ ನಾಮನಿರ್ದೇಶನದ ದಿನಾಂಕದಂದು ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಿರುವಲ್ಲಿ, ಅಂಥ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು;

(ii) ಇತರ ಯಾವುದೇ ಸಂದರ್ಭದಲ್ಲಿ, ಅನುಚ್ಛೇದ 99ರ ಅಥವಾ ಸಂದರ್ಭಾನುಸಾರ ಅನುಚ್ಛೇದ 188ರ ಅಗತ್ಯತೆಗಳನ್ನು ಪಾಲಿಸಿದ ತರುವಾಯ ಆತನು ತನ್ನ ಪದಗ್ರಹಣ ಮಾಡಿದ ದಿನಾಂಕದಿಂದ ಆರು ತಿಂಗಳುಗಳು ಕೊನೆಗೊಳ್ಳುವುದಕ್ಕೆ ಮುಂಚೆ ಆತನು ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗಿರುವನೋ ಅಥವಾ ಸಂದರ್ಭಾನುಸಾರ ಮೊದಲು ಸದಸ್ಯನಾಗುವನೋ ಆ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು.

(2) ಯಾವುದೇ ರಾಜಕೀಯ ಪಕ್ಷವು ನಿಲ್ಲಿಸಿದ ಒಬ್ಬ ಅಭ್ಯರ್ಥಿಯಾಗಿ ಅಲ್ಲದೆ, ಅನ್ಯಥಾ ಹಾಗೆಂದು ಚುನಾಯಿತನಾಗಿರುವ ಸದನದ ಚುನಾಯಿತ ಸದಸ್ಯನನ್ನು ಅಂಥ ಚುನಾವಣೆಯ ತರುವಾಯ ಯಾವುದೇ ರಾಜಕೀಯ ಪಕ್ಷವನ್ನು ಆತನು ಸೇರಿದರೆ, ಸದನದ ಸದಸ್ಯನಾಗಿರುವುದಕ್ಕೆ ಅನರ್ಹನಾಗಿರತಕ್ಕದ್ದು.

(3) ಸದನದ ನಾಮನಿರ್ದೇಶಿತ ಸದಸ್ಯನನ್ನು, 99ನೇ ಅನುಚ್ಛೇದದ ಅಥವಾ ಸಂದರ್ಭಾನುಸಾರ 188ನೇ ಅನುಚ್ಛೇದದ ಅಗತ್ಯಗಳನ್ನು ಪಾಲಿಸಿದ ತರುವಾಯ ಆತನು ತನ್ನ ಸ್ಥಾನವನ್ನು ವಹಿಸಿಕೊಳ್ಳುವ ದಿನಾಂಕದಿಂದ ಆರು ತಿಂಗಳುಗಳು ಮುಕ್ತಾಯವಾದ ನಂತರ ಯಾವುದೇ ರಾಜಕೀಯ ಪಕ್ಷವನ್ನು ಸೇರಿದರೆ, ಸದನದ ಸದಸ್ಯನಾಗಿರುವುದರಿಂದ ಅನರ್ಹನಾಗತಕ್ಕದ್ದು.

(4) ಈ ಕಂಡಿಕೆಯ ಹಿಂದಿನ ಉಪಬಂಧಗಳಲ್ಲಿ ಇರುವುದು ಏನೇ ಇದ್ದರೂ, ಸಂವಿಧಾನ (ಐವತ್ತೆರಡನೇ ತಿದ್ದುಪಡಿ) ಅಧಿನಿಯಮ, 1985ರ ಪ್ರಾರಂಭದಂದು ಸದನದ ಸದಸ್ಯನಾಗುವ ಒಬ್ಬ ವ್ಯಕ್ತಿಯು (ಹಾಗೆಂದು ಚುನಾಯಿತನಾಗಿರಲಿ ಅಥವಾ ನಾಮನಿರ್ದೇಶನಗೊಂಡಿರಲಿ),–

(i) ಆತನು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಒಂದು ರಾಜಕೀಯ ಪಕ್ಷದ ಸದಸ್ಯನಾಗಿದ್ದಲ್ಲಿ ಈ ಕಂಡಿಕೆಯ (i)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಅಂಥ ರಾಜಕೀಯ ಪಕ್ಷವು

ನಿಲ್ಲಿಸಿದ ಅಭ್ಯರ್ಥಿಯಾಗಿ ಅಂಥ ಸದನದ ಸದಸ್ಯನಾಗಿ ಚುನಾಯಿತರಾಗಿರುವುದಾಗಿ ಭಾವಿಸತಕ್ಕದ್ದು;

(ii)ಇತರ ಯಾವುದೇ ಸಂದರ್ಭದಲ್ಲಿ, ಈ ಕಂಡಿಕೆಯ (2)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಯಾವುದೇ ರಾಜಕೀಯ ಪಕ್ಷವು ನಿಲ್ಲಿಸಿದ ಅಭ್ಯರ್ಥಿಯಾಗಿದ್ದ ಹೊರತು, ಹಾಗೆಂದು ಚುನಾಯಿತನಾಗಿರುವ ಸದನದ ಚುನಾಯಿತ ಸದಸ್ಯನೆಂದು ಭಾವಿಸತಕ್ಕದ್ದು ಅಥವಾ ಸಂದರ್ಭಾನುಸಾರ, ಈ ಕಂಡಿಕೆಯ (3)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಸದನದ ನಾಮನಿರ್ದೇಶಿತ ಸದಸ್ಯನಾಗಿರುವನೆಂದು ಭಾವಿಸತಕ್ಕದ್ದು.

3. ಪಕ್ಷಾಂತರದ ಆಧಾರದ ಮೇಲೆ ಅನರ್ಹತೆ ಇಬ್ಬಾಗದ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ:– ಸದನದ ಒಬ್ಬ ಸದಸ್ಯನು, ತಾನು ಮತ್ತು ತನ್ನ ವಿಧಾನಮಂಡಲ ಪಕ್ಷದ ಯಾರೇ ಇತರ ಸದಸ್ಯರು ಈ ಮೂಲ ರಾಜಕೀಯ ಪಕ್ಷದಲ್ಲಿ ಇಬ್ಬಾಗದ ಪರಿಣಾಮವಾಗಿ ಉಂಟಾಗಿರುವ ಒಂದು ಒಳಪಕ್ಷವನ್ನು ಪ್ರತಿನಿಧಿಸುವ ಗುಂಪನ್ನು ಸ್ಥಾಪಿಸಿಕೊಂಡಿರುವರೆಂದು ಮತ್ತು ಅಂಥ ಗುಂಪು ಅಂಥ ವಿಧಾನಮಂಡಲ ಪಕ್ಷದ ಸದಸ್ಯರ ಒಂದನೇ ಮೂರರಷ್ಟಕ್ಕಿಂತ ಕಡಿಮೆ ಇಲ್ಲದ ಸದಸ್ಯರನ್ನು ಒಳಗೊಂಡಿರುವುದೆಂದು ಕ್ಲೇಮು ಮಾಡಿದಲ್ಲಿ :–

(ಎ) ಆತನನ್ನು, –

(i) ಆತನು ತನ್ನ ಮೂಲ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟಿರುವನೆಂಬ;

(ii) ಆತನು, ಅಂಥ ಪಕ್ಷದ ಅಥವಾ ಅದರಿಂದ ಪ್ರಾಧಿಕೃತನಾದ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯು ನೀಡಿದ ಯಾವುದೇ ನಿರ್ದೇಶನಕ್ಕೆ ವಿರುದ್ಧವಾಗಿ ಅಂಥ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರಿಯ ಪೂರ್ವಾನುಮೋದನೆಯನ್ನು ಪಡೆಯದೆ ಆ ಬಗ್ಗೆ ಅಂಥ ಸದನದಲ್ಲಿ ಮತದಾನ ಮಾಡಿದ್ದಾನೆಂಬ ಅಥವಾ ಮತದಾನ ಮಾಡುವುದರಿಂದ ವಿಮುಖನಾಗಿರುವನೆಂಬ ಮತ್ತು ಅಂಥ ಮತದಾನ ಅಥವಾ ವಿಮುಖತೆಯ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಅಂಥ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಮಾಫಿ ಮಾಡಿಲ್ಲವೆಂಬ

– ಆಧಾರದ ಮೇಲೆ (2)ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ ಮೇರೆಗೆ ಅನರ್ಹಗೊಳಿಸತಕ್ಕದ್ದಲ್ಲ ಮತ್ತು

(ಬಿ) ಅಂಥ ಇಬ್ಬಾಗದ ಸಮಯದಿಂದ, ಅಂಥ ಒಳಪಕ್ಷವನ್ನು 2ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಆತನು ಸೇರಿರುವ ರಾಜಕೀಯ ಪಕ್ಷವೆಂದು ಭಾವಿಸತಕ್ಕದ್ದು ಮತ್ತು ಈ ಕಂಡಿಕೆಯ ಉದ್ದೇಶಗಳಿಗಾಗಿ ಆತನ ಮೂಲ ರಾಜಕೀಯ ಪಕ್ಷವಾಗಿರತಕ್ಕದ್ದು.

4. ಪಕ್ಷಾಂತರದ ಆಧಾರದ ಮೇಲೆ ಅನರ್ಹತೆ ವಿಲೀನದ ಸಂದರ್ಭದಲ್ಲಿ ಅನ್ವಯವಾಗುವುದಿಲ್ಲ:– (1) ಸದನದ ಒಬ್ಬ ಸದಸ್ಯನನ್ನು, ಆತನ ಮೂಲ ರಾಜಕೀಯ ಪಕ್ಷವು ಇನ್ನೊಂದು ರಾಜಕೀಯ ಪಕ್ಷದೊಂದಿಗೆ ವಿಲೀನಗೊಂಡಲ್ಲಿ ಮತ್ತು ಆತನು ತಾನಾಗಲಿ ಮತ್ತು ಆತನ ಮೂಲ ರಾಜಕೀಯ ಪಕ್ಷದ ಸದಸ್ಯರಾಗಲಿ,

(ಎ) ಅಂಥ ಇತರ ರಾಜಕೀಯ ಪಕ್ಷದ ಅಥವಾ ಸಂದರ್ಭಾನುಸಾರ ಅಂಥ ವಿಲೀನದಿಂದ ರೂಪುಗೊಂಡ ಕೆಲವು ಹೊಸ ರಾಜಕೀಯ ಪಕ್ಷದ ಸದಸ್ಯರಾಗಿರುವರೆಂದು; ಅಥವಾ

(ಬಿ) ವಿಲೀನವನ್ನು ಒಪ್ಪಿಕೊಂಡಿರುವುದಿಲ್ಲವೆಂದು ಮತ್ತು ಪ್ರತ್ಯೇಕ ಗುಂಪಾಗಿ ಕಾರ್ಯನಿರ್ವಹಿಸುವುದಾಗಿ ಆಯ್ಕೆ ಮಾಡಿಕೊಂಡಿರುವರೆಂದು ಮತ್ತು ಅಂಥ ವಿಲೀನದ ಸಮಯದಿಂದ, ಅಂಥ ರಾಜಕೀಯ ಪಕ್ಷ ಅಥವಾ ಸಂದರ್ಭಾನುಸಾರ ಗುಂಪನ್ನು 2ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಆತನು ಸೇರಿರುವ ರಾಜಕೀಯ ಪಕ್ಷವಾಗಿರುವುದೆಂದು ಮತ್ತು ಈ ಉಪ–ಕಂಡಿಕೆಯ ಉದ್ದೇಶಗಳಿಗಾಗಿ ಮೂಲ ರಾಜಕೀಯ ಪಕ್ಷವೆಂದು ಭಾವಿಸತಕ್ಕದ್ದೆಂದು ಕ್ಲೇಮು ಮಾಡಿದಲ್ಲಿ, 2ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ ಮೇರೆಗೆ ಅನರ್ಹರಾಗತಕ್ಕದ್ದಲ್ಲ.

(2) ಈ ಕಂಡಿಕೆಯ (1)ನೇ ಉಪ–ಕಂಡಿಕೆಯ ಉದ್ದೇಶಗಳಿಗಾಗಿ, ಸದನದ ಸದಸ್ಯನ ಮೂಲ ರಾಜಕೀಯ ಪಕ್ಷದ ವಿಲೀನವನ್ನು ಸಂಬಂಧಪಟ್ಟ ವಿಧಾನಮಂಡಲ ಪಕ್ಷದ ಸದಸ್ಯರ ಮೂರನೇ ಎರಡಕ್ಕಿಂತ ಕಡಿಮೆ ಇಲ್ಲದಿದ್ದರೆ ಮಾತ್ರ ಅಂಥ ವಿಲೀನಕ್ಕೆ ಒಪ್ಪಲಾಗಿದೆ ಎಂದು ಭಾವಿಸತಕ್ಕದ್ದು.

5. ವಿನಾಯಿತಿ:– ಈ ಅನುಸೂಚಿಯಲ್ಲಿರುವುದು ಏನೇ ಇದ್ದರೂ, ಲೋಕಸಭೆಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರ ಅಥವಾ ರಾಜ್ಯಸಭೆಯ ಸಭಾಪತಿ ಅಥವಾ ಒಂದು ರಾಜ್ಯದ ವಿಧಾನ ಪರಿಷತ್ತಿನ ಸಭಾಪತಿ ಅಥವಾ ಉಪ–ಸಭಾಪತಿಯ ಅಥವಾ ವಿಧಾನಸಭೆಯ ಸಭಾಧ್ಯಕ್ಷ ಅಥವಾ ಉಪ–ಸಭಾಧ್ಯಕ್ಷರ ಸ್ಥಾನಕ್ಕೆ ಚುನಾಯಿತರಾಗುವ ವ್ಯಕ್ತಿಯನ್ನು,

ಎ) ಆತನು, ಈ ಚುನಾವಣೆಯ ಕಾರಣದಿಂದ ಆ ಸ್ಥಾನಕ್ಕೆ, ಅಂಥ ಚುನಾವಣೆಗೆ ನಿಕಟ ಪೂರ್ವದಲ್ಲಿ ಆತನು ಸೇರಿರುವ ರಾಜಕೀಯ ಪಕ್ಷದ ಸದಸ್ಯತ್ವವನ್ನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟರೆ ಮತ್ತು ತದನಂತರ ಅಂಥ ಪದವನ್ನು ಹೊಂದಿರುವುದು ಮುಂದುವರಿಯುವವರೆಗೆ, ಆ ರಾಜಕೀಯ ಪಕ್ಷವನ್ನು ಪುನ: ಸೇರದಿದ್ದರೆ ಅಥವಾ ಇನ್ನೊಂದು ರಾಜಕೀಯ ಪಕ್ಷದ ಸದಸ್ಯನಾಗದಿದ್ದರೆ; ಅಥವಾ

ಬಿ) ಅಂಥ ಸ್ಥಾನಕ್ಕೆ ತನ್ನ ಚುನಾವಣೆಯ ಕಾರಣದಿಂದ, ಅಂಥ ಚುನಾವಣೆಯ ನಿಕಟಪೂರ್ವದಲ್ಲಿ ಆತನು ಸೇರಿದ್ದ ರಾಜಕೀಯ ಪಕ್ಷದ ತನ್ನ ಸದಸ್ಯತ್ವವನ್ನು ಬಿಟ್ಟುಕೊಟ್ಟು, ಆತನು ಅಂಥ ಪದವನ್ನು ಹೊಂದುವುದು ಕೊನೆಗೊಂಡ ತರುವಾಯ ಅಂಥ ರಾಜಕೀಯ ಪಕ್ಷಕ್ಕೆ ಪುನ: ಸೇರಿಕೊಂಡರೆ, ಈ ಅನುಸೂಚಿಯ ಮೇರೆಗೆ ಅನರ್ಹನನ್ನಾಗಿಸತಕ್ಕದ್ದಲ್ಲ.

6. ಪಕ್ಷಾಂತರದ ಕಾರಣಗಳ ಮೇಲೆ ಅನರ್ಹತೆಗೆ ಸಂಬಂಧಿಸಿದ ಪ್ರಶ್ನೆಯ ಮೇಲಿನ ನಿರ್ಣಯ:– (1) ಈ ಅನುಸೂಚಿಯ ಮೇರೆಗೆ ಸದನದ ಸದಸ್ಯನು ಅನರ್ಹತೆಗೆ ಒಳಪಟ್ಟಿರುವನೇ ಎಂಬ ಯಾವುದೇ ಪ್ರಶ್ನೆ

ಉದ್ಭವಿಸಿದರೆ, ಪ್ರಶ್ನೆಯನ್ನು ಸಭಾಪತಿಯ ಅಥವಾ ಸಂದರ್ಭಾನುಸಾರ ಸದನದ ಅಧ್ಯಕ್ಷರ ನಿರ್ಣಯಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆತನ ನಿರ್ಣಯವು ಅಂತಿಮವಾಗಿರತಕ್ಕದ್ದು.

ಪರಂತು, ಅಂಥ ಅನರ್ಹತೆಗೆ ಸದನದ ಸಭಾಪತಿ ಅಥವಾ ಅಧ್ಯಕ್ಷರು ಒಳಪಟ್ಟಿರುವರೇ ಎಂಬ ಪ್ರಶ್ನೆ ಉದ್ಭವಿಸಿದಲ್ಲಿ, ಪ್ರಶ್ನೆಯನ್ನು ಈ ಬಗ್ಗೆ ಸದನವು ಆಯ್ಕೆ ಮಾಡಬಹುದಾದಂಥ ಸದನದ ಸದಸ್ಯರಿಗೆ ಉಲ್ಲೇಖಿಸತಕ್ಕದ್ದು ಮತ್ತು ಆತನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಈ ಅನುಸೂಚಿಯ ಮೇರೆಗೆ ಸದನದ ಸದಸ್ಯನ ಅನರ್ಹತೆಯ ಯಾವುದೇ ಪ್ರಶ್ನೆಗೆ ಸಂಬಂಧಿಸಿದಂತೆ, ಈ ಕಂಡಿಕೆಯ (1)ನೇ ಉಪ–ಕಂಡಿಕೆಯ ಮೇರೆಗೆ ಎಲ್ಲಾ ವ್ಯವಹರಣೆಗಳನ್ನು 122ನೇ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ಸಂಸತ್ತಿನ ವ್ಯವಹರಣೆಗಳೆಂದು ಭಾವಿಸತಕ್ಕದ್ದು ಅಥವಾ 212ನೇ ಅನುಚ್ಛೇದದ ಅರ್ಥವ್ಯಾಪ್ತಿಯೊಳಗೆ ರಾಜ್ಯದ ವಿಧಾನಮಂಡಲದಲ್ಲಿನ ವ್ಯವಹರಣೆಗಳೆಂದು ಭಾವಿಸತಕ್ಕದ್ದು.

7. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ:– ಈ ಸಂವಿಧಾನದಲ್ಲಿರುವುದು ಏನೇ ಇದ್ದರೂ, ಯಾವುದೇ ನ್ಯಾಯಾಲಯವು ಈ ಅನುಸೂಚಿಯ ಮೇರೆಗೆ ಸದನದ ಸದಸ್ಯರ ಅನರ್ಹತೆಗೆ ಸಂಬಂಧಿಸಿದ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದಲ್ಲ.

8. ನಿಯಮಗಳು:– (1) ಈ ಕಂಡಿಕೆಯ (2)ನೇ ಉಪ–ಕಂಡಿಕೆಯ ಉಪಬಂಧಗಳಿಗೆ ಒಳಪಟ್ಟು ಸದನದ ಸಭಾಪತಿ ಅಥವಾ ಅಧ್ಯಕ್ಷರು ಈ ಅನುಸೂಚಿಯ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು ಮತ್ತು ಹಿಂದೆ ಹೇಳಿದ ನಿಯಮಗಳ ಸಾಮಾನ್ಯತ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳನ್ನು,–

(ಎ) ಸದನದ ಬೇರೆ ಬೇರೆ ಸದಸ್ಯರು ಸೇರಿರುವ ಯಾವುದೇ ರಾಜಕೀಯ ಪಕ್ಷಗಳಿದ್ದರೆ ಅವುಗಳ ರಿಜಿಸ್ಟರುಗಳ ಅಥವಾ ಇತರ ದಾಖಲೆಗಳ ನಿರ್ವಹಣೆಗಾಗಿ,

(ಬಿ) ಅಂಥ ಸದಸ್ಯನ ಸಂಬಂಧದಲ್ಲಿ 2ನೇ ಕಂಡಿಕೆಯ (1)ನೇ ಉಪ–ಕಂಡಿಕೆಯ (ಬಿ) ಖಂಡದಲ್ಲಿ ಉಲ್ಲೇಖಿಸಿದ ಸ್ವರೂಪದ ಯಾವುದೇ ಮಾಫಿಗೆ ಸಂಬಂಧಿಸಿದಂತೆ ಸದನದ ಸದಸ್ಯನ ಸಂಬಂಧದಲ್ಲಿ ವಿಧಾನಮಂಡಲ ಪಕ್ಷದ ನಾಯಕನೇ ಸಲ್ಲಿಸಬೇಕಾಗಿರುವ ವರದಿಯನ್ನು, ಅಂಥ ವರದಿಯನ್ನು ಸಲ್ಲಿಸಬೇಕಾಗಿರುವ ಸಮಯದೊಳಗೆ ಮತ್ತು ಯಾವ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುವುದೋ ಆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದೆಂದು;

(ಸಿ) ಸದನದ ಯಾರೇ ಸದಸ್ಯರ ಅಂಥ ರಾಜಕೀಯ ಪಕ್ಷಕ್ಕೆ ಸಂಬಂಧಿಸಿದಂತೆ ರಾಜಕೀಯ ಪಕ್ಷವು ಸಲ್ಲಿಸತಕ್ಕಂಥ ವರದಿಗೆ ಮತ್ತು ಅಂಥ ವರದಿಗಳನ್ನು ಯಾರಿಗೆ ಸಲ್ಲಿಸಬೇಕೋ ಸದನದ ಆ ಅಧಿಕಾರಿಗೆ;

(ಡಿ) 6ನೇ ಕಂಡಿಕೆಯ (1)ನೇ ಉಪ–ಕಂಡಿಕೆಯಲ್ಲಿ ಉಲ್ಲೇಖಿಸಿದ ಯಾವುದೇ ಪ್ರಶ್ನೆಯನ್ನು ನಿರ್ಧರಿಸುವುದಕ್ಕಾಗಿನ ಪ್ರಕ್ರಿಯೆಗಾಗಿ ಅಂಥ ಪ್ರಶ್ನೆಗಳ ನಿರ್ಧರಣೆಯ ಉದ್ದೇಶಕ್ಕಾಗಿ ನಡೆಸಬೇಕಾಗಿರುವ ಯಾವುದೇ ವಿಚಾರಣೆಗಾಗಿನ ಪ್ರಕ್ರಿಯೆಗಾಗಿ;

– ಉಪಬಂಧವನ್ನು ರಚಿಸಬಹುದು.

(2) ಈ ಕಂಡಿಕೆಯ (1)ನೇ ಉಪ–ಕಂಡಿಕೆಯ ಅಡಿಯಲ್ಲಿ ಸದನದ ಸಭಾಪತಿ ಅಥವಾ ಸಭಾಧ್ಯಕ್ಷರು ರಚಿಸಿದ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಒಳಗೊಳ್ಳಬಹುದಾಗಿರುವ ಮೂವತ್ತು ದಿನಗಳ ಒಟ್ಟು ಅವಧಿಗಾಗಿ ಸದನದ ಮುಂದೆ ಮಂಡಿಸತಕ್ಕದ್ದು ಮತ್ತು ಅನ್ಯಥಾ ಸದನವು ಮಾರ್ಪಾಡುಗಳೊಂದಿಗೆ ಅಥವಾ ಮಾರ್ಪಾಡುಗಳಿಲ್ಲದೆ ಅವುಗಳನ್ನು ಅನುಮೋದನೆಯಾದ ಅಥವಾ ಅನುಮೋದನೆಯಾಗದಿರುವ ನಿಕಟಪೂರ್ವದಲ್ಲಿ ಸದರಿ ಮೂವತ್ತು ದಿನಗಳ ಅವಧಿಯು ಕೊನೆಗೊಂಡ ಮೇಲೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ಅವುಗಳು ಹಾಗೆ ಅನುಮೋದನೆಗೊಂಡಲ್ಲಿ, ಅವುಗಳನ್ನು ಮಂಡಿಸಿರುವ ರೂಪದಲ್ಲಿ ಅಥವಾ ಅಂಥ ಮಾರ್ಪಾಡುಗೊಂಡ ರೂಪದಲ್ಲಿ ಅಂಥ ಅನುಮೋದನೆಯ ಮೇಲೆ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಹಾಗೆ ಅನುಮೋದನೆಯಾಗದಿರುವಲ್ಲಿ ಅವು ಪರಿಣಾಮಕಾರಿಯಾಗಿರತಕ್ಕದ್ದಲ್ಲ.

(3) ಸದನದ ಸಭಾಪತಿ ಅಥವಾ ಸಭಾಧ್ಯಕ್ಷರು, ಉಪಬಂಧ ಅಥವಾ 105ನೇ ಅನುಚ್ಛೇದಕ್ಕೆ ಅಥವಾ ಸಂದರ್ಭಾನುಸಾರ 194ನೇ ಅನುಚ್ಛೇದಕ್ಕೆ ಮತ್ತು ಈ ಸಂವಿಧಾನದ ಅಡಿಯಲ್ಲಿ ಆತನು ಹೊಂದಿರಬಹುದಾಗಿರುವ ಯಾವುದೇ ಇತರ ಅಧಿಕಾರಕ್ಕೆ ಬಾಧಕವಾಗದಂತೆ, ಯಾರೇ ವ್ಯಕ್ತಿಯಿಂದಾದ ಈ ಕಂಡಿಕೆಯಡಿ ರಚಿಸಲಾದ ನಿಯಮಗಳು ಯಾವುದೇ ಉದ್ದೇಶಪೂರ್ವಕ ಉಲ್ಲಂಘನೆಯನ್ನು ಸದನದ ವಿಶೇಷಾಧಿಕಾರಗಳ ಉಲ್ಲಂಘನೆಯೆಂಬ ರೀತಿಯಲ್ಲಿಯೇ ವ್ಯವಹರಿಸಬಹುದು.

ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೧

(೧೯೫೧ರ ಅಧಿನಿಯಮ ಸಂಖ್ಯೆ ೪೩)

[ಜುಲೈ ೧೭, ೧೯೫೧]

ಸಂಸತ್ತಿನ ಸದನಗಳಿಗೆ ಮತ್ತು ಪ್ರತಿಯೊಂದು ರಾಜ್ಯದ ವಿಧಾನ ಮಂಡಲದ ಸದನ ಅಥವಾ ಸದನಗಳಿಗೆ ಚುನಾವಣೆಗಳನ್ನು ನಡೆಸುವುದು, ಆ ಸದನಗಳ ಸದಸ್ಯತ್ವದ ಅರ್ಹತೆಗಳು ಮತ್ತು ಅನರ್ಹತೆಗಳು, ಅಂಥ ಚುನಾವಣೆಗಳಲ್ಲಿ ಅಥವಾ ಆ ಸಂಬಂಧದಲ್ಲಿನ ಭ್ರಷ್ಟ ಆಚರಣೆಗಳು ಮತ್ತು ಇತರ ಅಪರಾಧಗಳು ಹಾಗೂ ಅಂಥ ಚುನಾವಣೆಗಳಿಂದ ಅಥವಾ ಆ ಸಂಬಂಧದಲ್ಲಿ ಉದ್ಭವಿಸುವ ಸಂದೇಹಗಳ ಮತ್ತು ವಿವಾದಗಳ ತೀರ್ಮಾನ – ಇವುಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

ಭಾಗ - I
ಪ್ರಾರಂಭಿಕ

೧. ಸಂಕ್ಷಿಪ್ತ ಹೆಸರು:- ಈ ಅಧಿನಿಯಮವನ್ನು ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೧ ಎಂದು ಕರೆಯತಕ್ಕುದು.

೨. ಅರ್ಥ ವಿವರಣೆ:- (೧) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೨ನೇ ಪ್ರಕರಣ ಅಥವಾ ೨೭ನೇ ಪ್ರಕರಣದ (೧)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದ್ದು, ಆದರೆ ಈ ಅಧಿನಿಯಮದಲ್ಲಿ ಪರಿಭಾಷಿಸಿರದ ಪ್ರತಿಯೊಂದು ಪದಾವಳಿಯು ಆ ಅಧಿನಿಯಮದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕುದು;

(ಬಿ) "ಸಮುಚಿತ ಪ್ರಾಧಿಕಾರ" ಎಂದರೆ ಲೋಕಸಭೆಯ ಅಥವಾ ರಾಜ್ಯಸಭೆಯ ಚುನಾವಣೆಯ ಸಂಬಂಧದಲ್ಲಿ ಕೇಂದ್ರ ಸರ್ಕಾರ, ಮತ್ತು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಚುನಾವಣೆಯ ಸಂಬಂಧದಲ್ಲಿ ರಾಜ್ಯ ಸರ್ಕಾರ;

(ಬಿಬಿ) "ಮುಖ್ಯ ಚುನಾವಣಾಧಿಕಾರಿ" ಎಂದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೧೩ಎ ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿ;

(ಸಿ) "ಭ್ರಷ್ಟ ಆಚರಣೆ" ಎಂದರೆ ೧೨೩ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಆಚರಣೆ;

(ಸಿಸಿ) "ಜಿಲ್ಲಾ ಚುನಾವಣಾ ಅಧಿಕಾರಿ" ಎಂದರೆ ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೧೩ಎಎ ಪ್ರಕರಣದ ಮೇರೆಗೆ ಹೆಸರಿಸಲಾದ ಅಥವಾ ನಾಮನಿರ್ದೇಶಿತನಾದ ಅಧಿಕಾರಿ;

(ಡಿ) ''ಚುನಾವಣೆ" ಎಂದರೆ ಸಂಸತ್ತಿನ ಯಾವುದೇ ಸದನದಲ್ಲಿನ ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಯಾವುದೇ ರಾಜ್ಯದ ವಿಧಾನ ಮಂಡಲದ ಸದನದಲ್ಲಿನ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸುವ ಚುನಾವಣೆ;

(ಇ) ಚುನಾವಣಾ ಕ್ಷೇತ್ರದ ಸಂಬಂಧದಲ್ಲಿ ''ಮತದಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನಮೂದಿತವಾಗಿರುವ ಮತ್ತು ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೧೬ನೇ ಪ್ರಕರಣದಲ್ಲಿ ಹೇಳಿದ ಯಾವುದೇ ಅನರ್ಹತೆಗೆ ಒಳಪಡದ ವ್ಯಕ್ತಿ;

(ಎಫ್) ''ರಾಜಕೀಯ ಪಕ್ಷ" ಎಂದರೆ ೨೯ಎ ಪ್ರಕರಣದ ಮೇರೆಗೆ ರಾಜಕೀಯ ಪಕ್ಷವೆಂದು ಚುನಾವಣಾ ಆಯೋಗದಲ್ಲಿ ನೋಂದಾಯಿತವಾದ ಒಂದು ಸಂಘ ಅಥವಾ ಭಾರತದ ವ್ಯಕ್ತಿಗತ ನಾಗರಿಕ ನಿಕಾಯ;

(ಜಿ) ''ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) ''ಸಾರ್ವಜನಿಕ ರಜಾ ದಿನ" ಎಂದರೆ ವರ್ಗಾವಣೀಯ ಲಿಖಿತಗಳ ಅಧಿನಿಯಮ, ೧೮೮೧ (೧೮೮೧ರ ೨೬)ರ ೨೫ನೇ ಪ್ರಕರಣದ ಉದ್ದೇಶಗಳಿಗಾಗಿ ಸಾರ್ವಜನಿಕ ರಜಾ ದಿನವಾಗಿರುವ ಯಾವುದೇ ದಿನ;

(ಐ) ತನ್ನ ಹೆಸರನ್ನು ಬರೆಯಲು ಅಸಮರ್ಥನಾದ ವ್ಯಕ್ತಿಯ ಸಂಬಂಧದಲ್ಲಿ ''ಸಹಿ" ಎಂದರೆ ನಿಯಮಿಸಬಹುದಾದ ರೀತಿಯಲ್ಲಿ ಅಧಿಪ್ರಮಾಣಿಸುವುದು.

(೨) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸಂಸದೀಯ ಚುನಾವಣಾ ಕ್ಷೇತ್ರ, ವಿಧಾನಸಭಾ ಚುನಾವಣಾ ಕ್ಷೇತ್ರ, ಪರಿಷತ್ ಚುನಾವಣಾ ಕ್ಷೇತ್ರ, ಸ್ಥಳೀಯ ಪ್ರಾಧಿಕಾರಗಳ ಚುನಾವಣಾ ಕ್ಷೇತ್ರ, ಪದವೀಧರರ ಚುನಾವಣಾ ಕ್ಷೇತ್ರ ಮತ್ತು ಶಿಕ್ಷಕರ ಚುನಾವಣಾ ಕ್ಷೇತ್ರ ಇವುಗಳನ್ನು ಬೇರೆ ಬೇರೆ ವರ್ಗದ ಚುನಾವಣಾ ಕ್ಷೇತ್ರವೆಂದು ಪರಿಗಣಿಸತಕ್ಕುದು.

(೩) ಈ ಅಧಿನಿಯಮದ ಮೇರೆಗಿನ ಯಾವುದೇ ಅಗತ್ಯತೆಗಳ ಅಂದರೆ ಯಾವುದೇ ಪ್ರಾಧಿಕಾರವು ಹೊರಡಿಸಿದ ಅಥವಾ ಮಾಡಿದ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು. ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿತವಾದ ಹೊರತು, ಅಂಥ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿ ಇವುಗಳನ್ನು ಅಗತ್ಯತೆಯೆಂದು ಅರ್ಥೈಸಬೇಕು. ಆ ಅಧಿಸೂಚನೆ, ಆದೇಶ, ನಿಯಮ, ಘೋಷಣೆ, ನೋಟೀಸು ಅಥವಾ ಪಟ್ಟಿ ಇವುಗಳನ್ನು ,-

(ಎ) ಕೇಂದ್ರ ಸರ್ಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ಭಾರತದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು;

(ಬಿ) ರಾಜ್ಯ ಸರ್ಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ರಾಜ್ಯದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು; ಮತ್ತು

(ಸಿ) ಯಾವುದೇ ಇತರ ಪ್ರಾಧಿಕಾರವು ಹೊರಡಿಸಿರುವಲ್ಲಿ ಅಥವಾ ಮಾಡಿರುವಲ್ಲಿ, ಅದು ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಚುನಾವಣೆಗೆ ಅಥವಾ ಸದಸ್ಯತ್ವಕ್ಕೆ ಸಂಬಂಧಿಸಿದ್ದರೆ ಅದನ್ನು ಭಾರತದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು ಮತ್ತು ಅದು ರಾಜ್ಯದ ವಿಧಾನ ಮಂಡಲಕ್ಕೆ ಅಥವಾ ವಿಧಾನ ಮಂಡಲದ ಉಭಯ ಸದನಗಳ ಪೈಕಿ ಯಾವುದೇ ಸದನದ ಚುನಾವಣೆಗೆ ಅಥವಾ ಸದಸ್ಯತ್ವಕ್ಕೆ ಸಂಬಂಧಿಸಿದ್ದರೆ ಅದನ್ನು ರಾಜ್ಯದ ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(೪) ಈ ಅಧಿನಿಯಮದ ಯಾವುವೇ ಉಪಬಂಧಗಳ ಮೇರೆಗೆ, ಏನನ್ನಾದರೂ ನಿಯಮಿಸಬೇಕಾಗಿರುವಲ್ಲಿ ಬೇರೆ ಬೇರೆ ವಿಷಯಗಳು ಅಥವಾ ವಿಷಯಗಳ ವರ್ಗಗಳಿಗಾಗಿ ಬೇರೆ ಬೇರೆ ಉಪಬಂಧಗಳನ್ನು ರಚಿಸಬಹುದು.

(೫) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ಕಾನೂನಿಗೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ, ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು ಯಾವುದಾದರೂ ಇದ್ದರೆ, ಆ ಕಾನೂನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕುದು.

ಭಾಗ - II
ಅರ್ಹತೆಗಳು ಮತ್ತು ಅನರ್ಹತೆಗಳು
ಅಧ್ಯಾಯ I - ಸಂಸತ್ ಸದಸ್ಯತ್ವದ ಅರ್ಹತೆಗಳು

೩. ರಾಜ್ಯಸಭಾ ಸದಸ್ಯತ್ವಕ್ಕಾಗಿ ಅರ್ಹತೆಗಳು:- ಒಬ್ಬ ವ್ಯಕ್ತಿಯು ರಾಜ್ಯಸಭೆಯಲ್ಲಿ ಯಾವುದೇ ರಾಜ್ಯದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಪ್ರತಿನಿಧಿಯಾಗಿ ಆಯ್ಕೆಯಾಗಲು ಭಾರತದ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು ಅರ್ಹನಾಗತಕ್ಕುದಲ್ಲ.

೪. ಲೋಕಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು:- ಒಬ್ಬ ವ್ಯಕ್ತಿಯು,-

(ಎ) ಯಾವುದೇ ರಾಜ್ಯದಲ್ಲಿ ಅನುಸೂಚಿತ ಜಾತಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ, ಆ ರಾಜ್ಯದ ಅಥವಾ ಯಾವುದೇ ಇತರ ರಾಜ್ಯದ ಯಾವುದೇ ಅನುಸೂಚಿತ ಜಾತಿಯ ಸದಸ್ಯನಾಗಿರುವ ಮತ್ತು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದಲ್ಲಿ ಮತದಾರನಾಗಿರುವ ಹೊರತು;

(ಬಿ) ಯಾವುದೇ ರಾಜ್ಯದಲ್ಲಿ (ಅಸ್ಸಾಂನ ಸ್ವಾಯತ್ತ ಜಿಲ್ಲೆಗಳನ್ನು ಹೊರತುಪಡಿಸಿ) ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ ಅವನು ಈ ರಾಜ್ಯದಲ್ಲಾಗಲಿ ಅಥವಾ ಯಾವುದೇ ಇತರ ರಾಜ್ಯದಲ್ಲಾಗಲಿ (ಅಸ್ಸಾಂನ ಬುಡಕಟ್ಟು

ಪ್ರದೇಶಗಳನ್ನು ಹೊರತುಪಡಿಸಿ) ಯಾವುದೇ ಅನುಸೂಚಿತ ಬುಡಕಟ್ಟುಗಳ ಸದಸ್ಯನಾಗಿರುವ, ಮತ್ತು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಳಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಅಂಥ ಅನುಸೂಚಿತ ಬುಡಕಟ್ಟುಗಳ ಪೈಕಿ ಯಾವುದೇ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಅಂಥ ಸ್ಥಾನವನ್ನು ಮೀಸಲಿಟ್ಟಿರುವ ಸಂಸದೀಯ ಚುನಾವಣಾ ಕ್ಷೇತ್ರದ ಅಥವಾ ಅಂಥ ಯಾವುದೇ ಸ್ವಾಯತ್ತ ಜಿಲ್ಲೆಯನ್ನೊಳಗೊಳ್ಳುವ ಯಾವುದೇ ಇತರ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿ) ಲಕ್ಷದ್ವೀಪ ಒಕ್ಕೂಟ ರಾಜ್ಯ ಕ್ಷೇತ್ರದಲ್ಲಿ ಅನುಸೂಚಿತ ಬುಡಕಟ್ಟುಗಳಿಗೆ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಈ ಒಕ್ಕೂಟ ರಾಜ್ಯ ಕ್ಷೇತ್ರದ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿಸಿಸಿ) ಸಿಕ್ಕಿಂ ರಾಜ್ಯಕ್ಕೆ ಹಂಚಿಕೆ ಮಾಡಿರುವ ಸ್ಥಾನದ ಸಂದರ್ಭದಲ್ಲಿ ಅವನು ಸಿಕ್ಕಿಂನ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,-

(ಡಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ ಅವನು ಯಾವುದೇ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು

- ಲೋಕಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಯಾಗಲು ಅರ್ಹನಾಗತಕ್ಕುದಲ್ಲ.

ಅಧ್ಯಾಯ II - ರಾಜ್ಯ ವಿಧಾನ ಮಂಡಲಗಳ ಸದಸ್ಯತ್ವಕ್ಕಾಗಿ ಅರ್ಹತೆಗಳು

೫. ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು:- ಒಬ್ಬ ವ್ಯಕ್ತಿಯು -

(ಎ) ಒಂದು ರಾಜ್ಯದ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಸಂದರ್ಭಾನುಸಾರ ಆ ಯಾವುದೇ ಜಾತಿಯ ಅಥವಾ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಬಿ) ಅಸ್ಸಾಂನ ಸ್ವಾಯತ್ತ ಜಿಲ್ಲೆಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಯಾವುದೇ ಸ್ವಾಯತ್ತ ಜಿಲ್ಲೆಯ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವ ಮತ್ತು ಆ ಜಿಲ್ಲೆಗಾಗಿ ಯಾವ ವಿಧಾನಸಭಾ ಚುನಾವಣಾ ಕ್ಷೇತ್ರದಲ್ಲಿ ಅಂಥ ಸ್ಥಾನ ಅಥವಾ ಯಾವುದೇ ಇತರ ಸ್ಥಾನಗಳನ್ನು ಮೀಸಲಿಡಲಾಗಿದೆಯೋ ಆ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಸಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ, ಅವನು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು

- ಅಂಥ ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ:

ಪರಂತು, ೩೭೧ಎ ಅನುಚ್ಛೇದದ (೨)ನೇ ಖಂಡದಲ್ಲಿ ಉಲ್ಲೇಖಿಸಿರುವ ಅವಧಿಗಾಗಿ ಒಬ್ಬ ವ್ಯಕ್ತಿಯು ನಾಗಾಲ್ಯಾಂಡ್ ವಿಧಾನ ಸಭೆಯಲ್ಲಿ ತ್ಯೂನ್‌ಸಾಂಗ್ ಜಿಲ್ಲೆಗೆ ಹಂಚಿಕೆ ಮಾಡಿರುವ ಯಾವುದೇ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅವನು ಆ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಪ್ರಾದೇಶಿಕ ಪರಿಷತ್‌ನ ಸದಸ್ಯನಾಗಿರುವ ಹೊರತು ಅರ್ಹನಾಗತಕ್ಕುದಲ್ಲ.

೩೭ಎ. ಸಿಕ್ಕಿಂ ವಿಧಾನಸಭೆಯ ಸದಸ್ಯತ್ವಕ್ಕಾಗಿ ಅರ್ಹತೆಗಳು:- (೧) ೩೭ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಬ್ಬ ವ್ಯಕ್ತಿಯು-

(ಎ) ಭೂಟಿಯ - ಲಿಪ್ಚಾ ಮೂಲದ ಸಿಕ್ಕಿಂನವರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಭೂಟಿಯ ಅಥವಾ ಲಿಪ್ಚಾ ಮೂಲದವನಾಗಿರುವ ಮತ್ತು ಸಂಘಗಳಿಗಾಗಿ ಮೀಸಲಿಟ್ಟಿರುವ ಚುನಾವಣಾ ಕ್ಷೇತ್ರವನ್ನು ಹೊರತುಪಡಿಸಿ ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಬಿ) ನೇಪಾಳಿ ಮೂಲದ ಸಿಕ್ಕಿಂನವರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ, ಅವನು ನೇಪಾಳಿ ಮೂಲದ ವ್ಯಕ್ತಿಯಾಗಿರುವ, ಮತ್ತು ಈ ರಾಜ್ಯದಲ್ಲಿನ ಯಾವುದೇ ವಿಧಾನಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಅನುಸೂಚಿತ ಜಾತಿಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ೧೯೭೪ರ ಸಿಕ್ಕಿಂ ಪ್ರಜಾ ಪ್ರಾತಿನಿಧ್ಯ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಜಾತಿಯ ಸದಸ್ಯನಾಗಿರುವ ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಡಿ) ಸಂಘಗಳಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಸಂಘ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,

- ಸಿಕ್ಕಿಂ ವಿಧಾನ ಸಭೆ (ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಆ ರಾಜ್ಯದ ವಿಧಾನ ಸಭೆ ಎಂದು ಭಾವಿಸಲಾಗುವ) ಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

(೨) ೩೭ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ, ಒಬ್ಬ ವ್ಯಕ್ತಿಯು -

(ಎ) ಭೂಟಿಯಾ - ಲಿಪ್ಚಾ ಮೂಲದ ಸಿಕ್ಕಿಮಿಯರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಭೂಟಿಯಾ ಅಥವಾ ಲಿಪ್ಚಾ ಮೂಲದ ವ್ಯಕ್ತಿಯಾಗಿರುವ

ಹೊರತು ಮತ್ತು ಸಂಘಕ್ಕಾಗಿ ಮೀಸಲಿಟ್ಟ ಚುನಾವಣಾ ಕ್ಷೇತ್ರವನ್ನು ಹೊರತುಪಡಿಸಿ ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭೆಯ ಚುನಾವಣಾ ಕ್ಷೇತ್ರದ ಒಬ್ಬ ಮತದಾರನಾಗಿರುವ ಹೊರತು;

(ಬಿ) ಅನುಸೂಚಿತ ಜಾತಿಗಳಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಸಿಕ್ಕಿಂ ರಾಜ್ಯದಲ್ಲಿನ ಜಾತಿಗಳ ಪೈಕಿ ಯಾವುದೇ ಜಾತಿಗೆ ಸೇರಿದ ಸದಸ್ಯನಾಗಿರುವ ಹೊರತು ಮತ್ತು ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು;

(ಸಿ) ಸಂಘ ಜನರಿಗಾಗಿ ಮೀಸಲಿಟ್ಟಿರುವ ಸ್ಥಾನದ ಸಂದರ್ಭದಲ್ಲಿ, ಅವನು ಸಂಘ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು; ಮತ್ತು

(ಡಿ) ಯಾವುದೇ ಇತರ ಸ್ಥಾನದ ಸಂದರ್ಭದಲ್ಲಿ, ಆ ರಾಜ್ಯದಲ್ಲಿನ ಯಾವುದೇ ವಿಧಾನ ಸಭೆ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು,

- ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, ೧೯೮೦ (೧೯೮೦ರ ೮)ರ ಪ್ರಾರಂಭದ ತರುವಾಯ ಯಾವುದೇ ಕಾಲದಲ್ಲಿ ರಚಿಸಬೇಕಾದ ಸಿಕ್ಕಿಂ ರಾಜ್ಯದ ವಿಧಾನ ಸಭೆಯಲ್ಲಿನ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

ವಿವರಣೆ:- ಈ ಉಪ ಪ್ರಕರಣದಲ್ಲಿ "ಭೂಟಿಯಾ" ಎಂಬುದು ಚುಂಬಿಪಾ, ದೊಪ್ತಪಾ, ದುಖ್ಪಾ, ಕಾಗಟೆ, ಷೆರ್ಪಾ, ಟಿಬೇಟನ್, ಟ್ಸೊಮಾಪಾ ಮತ್ತು ಯೊಲ್ಮೊ ಎಂಬುವುಗಳನ್ನು ಒಳಗೊಳ್ಳುತ್ತದೆ.

೬. ವಿಧಾನಪರಿಷತ್ತಿನ ಸದಸ್ಯತ್ವಕ್ಕಾಗಿ ಅರ್ಹತೆಗಳು:- (೧) ಒಬ್ಬ ವ್ಯಕ್ತಿಯು ರಾಜ್ಯದಲ್ಲಿನ ಯಾವುದೇ ವಿಧಾನ ಸಭಾ ಚುನಾವಣಾ ಕ್ಷೇತ್ರದ ಮತದಾರನಾಗಿರುವ ಹೊರತು, ಅವನು ಆ ರಾಜ್ಯದ ವಿಧಾನ ಪರಿಷತ್‌ನಲ್ಲಿನ ಒಂದು ಸ್ಥಾನವನ್ನು ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

(೨) ಒಬ್ಬ ವ್ಯಕ್ತಿಯು ಸಾಮಾನ್ಯವಾಗಿ ರಾಜ್ಯದ ನಿವಾಸಿಯಾಗಿರುವ ಹೊರತು, ರಾಜ್ಯಪಾಲರು ನಾಮನಿರ್ದೇಶನದ ಮೂಲಕ ಭರ್ತಿ ಮಾಡಬೇಕಾದ ಆ ರಾಜ್ಯದ ವಿಧಾನ ಪರಿಷತ್‌ನಲ್ಲಿನ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗತಕ್ಕುದಲ್ಲ.

ಅಧ್ಯಾಯ III - ಸಂಸತ್ತು ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯತ್ವಕ್ಕಾಗಿ ಅನರ್ಹತೆಗಳು

೭. ಪರಿಭಾಷೆಗಳು:- ಈ ಅಧ್ಯಾಯದಲ್ಲಿ,-

(ಎ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ "ಸಮುಚಿತ ಸರ್ಕಾರ" ಎಂದರೆ ಕೇಂದ್ರ ಸರ್ಕಾರ, ಮತ್ತು ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ

ಅಥವಾ ಸದಸ್ಯನಾಗಿರುವುದಕ್ಕೆ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಆ ರಾಜ್ಯ ಸರ್ಕಾರ;

(ಬಿ) ''ಅನರ್ಹಗೊಳಿಸಲಾದ" ಎಂದರೆ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯದ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನೆಂದು ಆಯ್ಕೆಯಾಗುವುದಕ್ಕೆ ಮತ್ತು ಸದಸ್ಯನಾಗಿರುವುದಕ್ಕೆ ಅನರ್ಹಗೊಳಿಸಲಾದ ವ್ಯಕ್ತಿ.

ಎ. ಕೆಲವು ಅಪರಾಧಗಳ ಬಗ್ಗೆ ಅಪರಾಧ ನಿರ್ಣಯವಾದ ಮೇಲೆ ಅನರ್ಹತೆ:-

(೧) ಒಬ್ಬ ವ್ಯಕ್ತಿಯು,-

(ಎ) ಭಾರತ ದಂಡ ಸಂಹಿತೆ, ೧೮೬೦ (೧೮೬೦ರ ೪೫)ರ ೧೫೩ಎ ಪ್ರಕರಣ (ಮತ, ಮೂಲ ವಂಶ, ಜನ್ಮಸ್ಥಳ, ನಿವಾಸ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ಮಧ್ಯೆ ದ್ವೇಷವನ್ನು ಹೆಚ್ಚಿಸುವ ಅಪರಾಧ, ಮತ್ತು ಸೌಹಾರ್ದತೆಗೆ ಬಾಧಕವಾಗುವ ಕೃತ್ಯಗಳನ್ನು ಮಾಡುವುದು) ಅಥವಾ ೧೭೧ಇ ಪ್ರಕರಣ (ಲಂಚಗುಳಿತನದ ಅಪರಾಧ) ಅಥವಾ ೧೭೧ಎಫ್ ಪ್ರಕರಣ (ಚುನಾವಣೆಯಲ್ಲಿ ಅನುಚಿತ ಪ್ರಭಾವ ಅಥವಾ ಇನ್ನೊಬ್ಬನಂತೆ ನಟಿಸುವ ಅಪರಾಧ) ಅಥವಾ ೩೭೬ನೇ ಪ್ರಕರಣದ (೧)ನೇ ಉಪಪ್ರಕರಣ ಅಥವಾ (೨)ನೇ ಉಪಪ್ರಕರಣ ಅಥವಾ ೩೭೬ಎ ಪ್ರಕರಣ ಅಥವಾ ೩೭೬ಬಿ ಪ್ರಕರಣ ಅಥವಾ ೩೭೬ಸಿ ಪ್ರಕರಣ ಅಥವಾ ೩೭೬ಡಿ ಪ್ರಕರಣ (ಬಲಾತ್ ಸಂಭೋಗಕ್ಕೆ ಸಂಬಂಧಿಸಿದ ಅಪರಾಧಗಳು) ಅಥವಾ ೪೯೮ಎ ಪ್ರಕರಣ (ಗಂಡ ಅಥವಾ ಗಂಡನ ಸಂಬಂಧಿಕರಿಂದ ಸ್ತ್ರೀಗೆ ಉಂಟು ಮಾಡುವ ಕ್ರೌರ್ಯದ ಅಪರಾಧ) ಅಥವಾ ೫೦೫ನೇ ಪ್ರಕರಣದ (೨)ನೇ ಉಪಪ್ರಕರಣ ಅಥವಾ (೩)ನೇ ಉಪಪ್ರಕರಣದ (ವರ್ಗಗಳ ನಡುವೆ ವೈರ, ದ್ವೇಷ ಅಥವಾ ವೈಮನಸ್ಯವನ್ನು ಉಂಟು ಮಾಡುವ ಅಥವಾ ಬೆಳೆಸುವ ಹೇಳಿಕೆಯನ್ನು ಕೊಡುವ ಅಪರಾಧ ಅಥವಾ ಯಾವುದೇ ಪೂಜಾ ಸ್ಥಳದಲ್ಲಿ ಅಥವಾ ಮತೀಯ ಪೂಜೆಯಲ್ಲಿ ಅಥವಾ ಮತೀಯ ಕರ್ಮಗಳಲ್ಲಿ ತೊಡಗಿದ ಯಾವುದೇ ಕೂಟದಲ್ಲಿ ಕೊಡುವ ಅಂಥ ಹೇಳಿಕೆಗೆ ಸಂಬಂಧಿಸಿದ ಅಪರಾಧ) ಮೇರೆಗೆ; ಅಥವಾ

(ಬಿ) ''ಅಸ್ಪೃಶ್ಯತೆ"ಯ ಬೋಧನೆ ಮತ್ತು ಆಚರಣೆಗಾಗಿ ಶಿಕ್ಷೆಯನ್ನು ಮತ್ತು ಅದರಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯ ಜಾರಿಯನ್ನು ಉಪಬಂಧಿಸುವ ನಾಗರೀಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, ೧೯೫೫ರ (೧೯೫೫ರ ೨೨) ಮೇರೆಗೆ; ಅಥವಾ

(ಸಿ) ಸೀಮಾ ಸುಂಕ ಅಧಿನಿಯಮ, ೧೯೬೨ (೧೯೬೨ರ ೫೨)ರ ೧೧ನೇ ಪ್ರಕರಣದ (ನಿಷೇಧಿತ ಸರಕುಗಳನ್ನು ಆಮದು ಮಾಡುವ ಅಥವಾ ರಫ್ತು ಮಾಡುವ ಅಪರಾಧ) ಮೇರೆಗೆ; ಅಥವಾ

(ಡಿ) ಕಾನೂನು ಬಾಹಿರ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, ೧೯೬೭ (೧೯೬೭ರ ೩೭)ರ ೧೦ ರಿಂದ ೧೨ರ ವರೆಗಿನ ಪ್ರಕರಣಗಳ (ಕಾನೂನು ಬಾಹಿರವೆಂದು ಘೋಷಿಸಲಾಗಿರುವ ಸಂಘದ ಸದಸ್ಯನಾಗಿರುವ ಅಪರಾಧ, ಕಾನೂನು ಬಾಹಿರ ಸಂಘದ ನಿಧಿಗಳೊಂದಿಗೆ ವ್ಯವಹರಿಸುವುದಕ್ಕೆ ಸಂಬಂಧಪಟ್ಟ ಅಪರಾಧ ಅಥವಾ ಅಧಿಸೂಚಿತ ಸ್ಥಳಕ್ಕೆ ಸಂಬಂಧಿಸಿದಂತೆ ಮಾಡಿದ ಆದೇಶದ ಉಲ್ಲಂಘನೆಗೆ ಸಂಬಂಧಪಟ್ಟ ಅಪರಾಧ) ಮೇರೆಗೆ; ಅಥವಾ

(ಇ) ವಿದೇಶಿ ವಿನಿಮಯ (ನಿಯಂತ್ರಣ) ಅಧಿನಿಯಮ, ೧೯೭೩ರ (೧೯೭೩ರ ೪೬) ಮೇರೆಗೆ; ಅಥವಾ

(ಎಫ್) ನಿದ್ರಾಜನಕ ಔಷಧಗಳು ಮತ್ತು ಮನಃಪ್ರಭಾವಿ ಪದಾರ್ಥಗಳ ಅಧಿನಿಯಮ, ೧೯೮೫ (೧೯೮೫ರ ೬೧)ರ ಮೇರೆಗೆ; ಅಥವಾ

(ಜಿ) ಭಯೋತ್ಪಾದಕ ಮತ್ತು ವಿಚ್ಛಿದ್ರಕಾರಕ ಚಟುವಟಿಕೆಗಳ (ಪ್ರತಿಬಂಧ) ಅಧಿನಿಯಮ, ೧೯೮೭ರ (೧೯೮೭ರ ೨೮) ೩ನೇ ಪ್ರಕರಣದ (ಭಯೋತ್ಪಾದಕ ಕಾರ್ಯಗಳನ್ನು ಮಾಡುವ ಅಪರಾಧ) ಅಥವಾ ೪ನೇ ಪ್ರಕರಣದ (ವಿಚ್ಛಿದ್ರಕಾರಕ ಚಟುವಟಿಕೆಗಳನ್ನು ಮಾಡುವ ಅಪರಾಧ) ಮೇರೆಗೆ; ಅಥವಾ

(ಹೆಚ್) ಧಾರ್ಮಿಕ ಸಂಸ್ಥೆಗಳ (ದುರುಪಯೋಗದ ಪ್ರತಿಬಂಧ) ಅಧಿನಿಯಮ, ೧೯೮೮ರ (೧೯೮೮ರ ೪೧) ೭ನೇ ಪ್ರಕರಣದ (೩ ರಿಂದ ೬ರ ವರೆಗಿನ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸುವ ಅಪರಾಧ) ಮೇರೆಗೆ; ಅಥವಾ

(ಐ) ಈ ಅಧಿನಿಯಮದ ೧೨೫ನೇ ಪ್ರಕರಣದ (ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರವನ್ನು ಬೆಳೆಸುವ ಅಪರಾಧ) ಅಥವಾ ೧೩೫ನೇ ಪ್ರಕರಣದ (ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವ ಅಪರಾಧ) ಅಥವಾ ೧೩೫ಎ ಪ್ರಕರಣ (ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ) ಅಥವಾ ೧೩೬ನೇ ಪ್ರಕರಣದ (೨)ನೇ ಉಪಪ್ರಕರಣದ (ಎ) ಖಂಡದ (ಯಾವುದೇ ನಾಮನಿರ್ದೇಶನ ಮತಪತ್ರಗಳನ್ನು ಮೋಸದಿಂದ ವಿರೂಪಗೊಳಿಸುವ ಅಥವಾ ಮೋಸದಿಂದ ನಾಶಪಡಿಸುವ ಅಪರಾಧ); ಅಥವಾ

(ಜೆ) ಪೂಜಾ ಸ್ಥಳಗಳ (ವಿಶೇಷ ಉಪಬಂಧಗಳ) ಅಧಿನಿಯಮ, ೧೯೯೧ರ ೬ನೇ ಪ್ರಕರಣದ (ಪೂಜಾ ಸ್ಥಳವನ್ನು ಪರಿವರ್ತಿಸುವ ಅಪರಾಧ); ಅಥವಾ

(ಕೆ) ರಾಷ್ಟ್ರಗೌರವ ಅಪಮಾನ ಪ್ರತಿಬಂಧಕ ಅಧಿನಿಯಮ, ೧೯೭೧ (೧೯೭೧ ರ ೬೯) ರ ೨ನೇ ಪ್ರಕರಣ (ಭಾರತದ ರಾಷ್ಟ್ರಧ್ವಜಕ್ಕೆ ಅಥವಾ ಭಾರತ ಸಂವಿಧಾನಕ್ಕೆ ಅಪಮಾನ ಮಾಡುವ ಅಪರಾಧ) ಅಥವಾ ೩ನೇ ಪ್ರಕರಣ (ರಾಷ್ಟ್ರಗೀತೆ ಹಾಡುವುದನ್ನು ಪ್ರತಿಬಂಧಿಸುವ ಅಪರಾಧ); ಅಥವಾ

(ಎಲ್) ಸತಿ ಹೋಗುವಿಕೆ (ಪ್ರತಿಬಂಧ) ಅಧಿನಿಯಮ, ೧೯೮೭ (೧೯೮೮ರ ೩); ಅಥವಾ

(ಎಂ) ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, ೧೯೮೮ (೧೯೮೮ರ ೪೯); ಅಥವಾ

(ಎನ್) ಭಯೋತ್ಪಾದನ ಪ್ರತಿಬಂಧಕ ಅಧಿನಿಯಮ, ೨೦೦೨ (೨೦೦೨ರ ೧೫); - ಇವುಗಳ ಮೇರೆಗೆ

- ಅಪರಾಧಿಯೆಂದು ನಿರ್ಣೀತನಾಗಿರುವ ವ್ಯಕ್ತಿಯು,-

(i) ಜುಲ್ಮಾನೆ ಶಿಕ್ಷೆಗೆ ಮಾತ್ರ ಗುರಿಯಾಗಿರುವಲ್ಲಿ, ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಅನರ್ಹಗೊಳ್ಳತಕ್ಕದ್ದು;

(ii) ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಲ್ಲಿ ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳಿಸತಕ್ಕದ್ದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕದ್ದು;

(೨) (ಎ) ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಯಾವುದೇ ಕಾನೂನನ್ನು; ಅಥವಾ

(ಬಿ) ಆಹಾರ ಅಥವಾ ಔಷಧಗಳ ಕಲಬೆರಕೆಗೆ ಸಂಬಂಧಿಸಿದ ಯಾವುದೇ ಕಾನೂನನ್ನು; ಅಥವಾ

(ಸಿ) ವಧು - ವರದಕ್ಷಿಣೆ ನಿಷೇಧ ಅಧಿನಿಯಮ, ೧೯೬೧ (೧೯೬೧ರ ೨೮)ರ ಯಾವುವೇ ಉಪಬಂಧಗಳನ್ನು

- ಉಲ್ಲಂಘಿಸಿರುವುದಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಮತ್ತು ಆರು ತಿಂಗಳುಗಳಿಗೆ ಕಡಿಮೆ ಇಲ್ಲದ ಕಾರಾವಾಸ ಶಿಕ್ಷೆಗೆ ಗುರಿಯಾದ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮಂದುವರೆಯತಕ್ಕುದು.

(೩) (೧)ನೇ ಉಪಪ್ರಕರಣ ಅಥವಾ (೨)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಅಪರಾಧವಲ್ಲದ ಯಾವುದೇ ಇತರ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವ ಮತ್ತು ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದ ಕಾರಾವಾಸದ ಶಿಕ್ಷೆಗೆ ಗುರಿಯಾಗಿರುವ ಒಬ್ಬ ವ್ಯಕ್ತಿಯು ಅಂಥ ಅಪರಾಧ ನಿರ್ಣಯದ ದಿನಾಂಕದಿಂದ ಅನರ್ಹಗೊಳ್ಳತಕ್ಕುದು ಮತ್ತು ಅವನು ಬಿಡುಗಡೆಯಾದಂದಿನಿಂದ ಆರು ವರ್ಷಗಳ ಹೆಚ್ಚಿನ ಅವಧಿಗಾಗಿ ಅನರ್ಹಗೊಂಡಿರುವುದು ಮುಂದುವರೆಯತಕ್ಕುದು.

(೪) (೧)ನೇ ಉಪಪ್ರಕರಣ, (೨)ನೇ ಉಪ ಪ್ರಕರಣ ಅಥವಾ (೩)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಆ ಉಪ ಪ್ರಕರಣಗಳ ಪೈಕಿ ಯಾವುದೇ ಒಂದರ ಮೇರೆಗಿನ ಅನರ್ಹತೆಯು, ಅಪರಾಧ ನಿರ್ಣಯದ ದಿನಾಂಕದಂದು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯನಾಗಿರುವ ವ್ಯಕ್ತಿಯ ಸಂದರ್ಭದಲ್ಲಿ ಆ

ದಿನಾಂಕದಿಂದ, ಮೂರು ತಿಂಗಳುಗಳು ಕಳೆದಿರುವವರೆಗೆ ಅಥವಾ ಆ ಅವಧಿಯೊಳಗಾಗಿ ಆ ಅಪರಾಧ ನಿರ್ಣಯ ಅಥವಾ ಶಿಕ್ಷೆಯ ಸಂಬಂಧದಲ್ಲಿ ಪರಿಷ್ಕರಣೆಗಾಗಿ ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿದರೆ, ನ್ಯಾಯಾಲಯವು ಆ ಅಪೀಲು ಅಥವಾ ಅರ್ಜಿಯನ್ನು ವಿಲೆ ಮಾಡುವವರೆಗೆ ಪರಿಣಾಮಕಾರಿಯಾಗತಕ್ಕುದಲ್ಲ.

ವಿವರಣೆ:- ಈ ಪ್ರಕರಣದಲ್ಲಿ,-

(ಎ) "ದಾಸ್ತಾನು ಮಾಡುವುದನ್ನು ಅಥವಾ ಲಾಭ ಬಡುಕತನವನ್ನು ಪ್ರತಿಬಂಧಿಸುವ ಬಗ್ಗೆ ಉಪಬಂಧಿಸುವ ಕಾನೂನು" ಎಂದರೆ,-

(i) ಯಾವುದೇ ಅತ್ಯಾವಶ್ಯಕ ವಸ್ತುವಿನ ಉತ್ಪಾದನೆ ಅಥವಾ ತಯಾರಿಕೆಯ ನಿಯಂತ್ರಣಕ್ಕಾಗಿ;

(ii) ಯಾವುದೇ ಅತ್ಯಾವಶ್ಯಕ ವಸ್ತುವನ್ನು ಯಾವ ಬೆಲೆಗೆ ಕೊಳ್ಳಬಹುದೋ ಅಥವಾ ಮಾರಬಹುದೋ ಆ ಬೆಲೆಯ ನಿಯಂತ್ರಣಕ್ಕಾಗಿ;

(iii) ಯಾವುದೇ ಅತ್ಯಾವಶ್ಯಕ ವಸ್ತುವಿನ ಆರ್ಜನೆ, ಸ್ವಾಧೀನ, ದಾಸ್ತಾನು, ಸಾಗಣೆ, ವಿತರಣೆ, ವಿಲೆ, ಉಪಯೋಗ ಅಥವಾ ಬಳಕೆಯ ನಿಯಂತ್ರಣಕ್ಕಾಗಿ;

(iv) ಸಾಮಾನ್ಯವಾಗಿ ಮಾರಾಟಕ್ಕೆ ಇಟ್ಟ ಯಾವುದೇ ಅತ್ಯಾವಶ್ಯಕ ವಸ್ತುವಿನ ಮಾರಾಟವನ್ನು ತಡೆಹಿಡಿಯುವುದರ ನಿಷೇಧಕ್ಕಾಗಿ

- ಉಪಬಂಧಿಸುವ ಯಾವುದೇ ಕಾನೂನು ಅಥವಾ ಯಾವುದೇ ಆದೇಶ, ನಿಯಮ ಅಥವಾ ಕಾನೂನಿನ ಬಲವುಳ್ಳ ಯಾವುದೇ ಅಧಿಸೂಚನೆ;

(ಬಿ) "ಔಷಧ" ಎಂಬುದಕ್ಕೆ ಔಷಧಗಳು ಮತ್ತು ಪ್ರಸಾಧನ ಸಾಮಗ್ರಿಗಳ ಅಧಿನಿಯಮ, ೧೯೪೦ (೧೯೪೦ರ ೨೩) ರಲ್ಲಿ ಇದಕ್ಕೆ ಕೊಟ್ಟುಪಡಿಸಿರುವ ಅರ್ಥವೇ ಇರುತ್ತದೆ;

(ಸಿ) "ಅತ್ಯಾವಶ್ಯಕ ವಸ್ತು" ಎಂಬುದಕ್ಕೆ ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, ೧೯೫೫ (೧೯೫೫ರ ೧೦) ರಲ್ಲಿ ಅದಕ್ಕೆ ಕೊಟ್ಟುಪಡಿಸಿರುವ ಅರ್ಥವೇ ಇರುತ್ತದೆ;

(ಡಿ) "ಆಹಾರ" ಎಂಬುದಕ್ಕೆ ಆಹಾರ ಕಲಬೆರಕೆ ಪ್ರತಿಬಂಧ ಅಧಿನಿಯಮ, ೧೯೫೪ (೧೯೫೪ರ ೩೭) ರಲ್ಲಿ ಅದಕ್ಕೆ ಕೊಟ್ಟುಪಡಿಸಿರುವ ಅರ್ಥವೇ ಇರುತ್ತದೆ.

೮೨. ಭ್ರಷ್ಟಾಚಾರಗಳ ಆಧಾರದ ಮೇಲೆ ಅನರ್ಹತೆ:- (೧) ೯೯ನೇ ಪ್ರಕರಣದ ಮೇರೆಗೆ ಆದೇಶದ ಮೂಲಕ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನೆಂದು ಕಂಡುಬಂದ ಪ್ರತಿಯೊಬ್ಬ ವ್ಯಕ್ತಿಯ ಪ್ರಕರಣವನ್ನು ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರವು ಅಂಥ ಆದೇಶವು ಜಾರಿಗೆ ಬಂದ ತರುವಾಯ ಆದಷ್ಟು ಬೇಗನೆ, ಅಂಥ ವ್ಯಕ್ತಿಯನ್ನು ಅನರ್ಹಗೊಳಿಸತಕ್ಕದ್ದೇ ಮತ್ತು

ಹಾಗಿದ್ದರೆ ಎಷ್ಟು ಅವಧಿಯವರೆಗೆ ಎಂಬ ಪ್ರಶ್ನೆಯನ್ನು ನಿರ್ಧರಿಸಲು ರಾಷ್ಟ್ರಪತಿಗಳಿಗೆ ಒಪ್ಪಿಸತಕ್ಕುದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವ ಅವಧಿಯವರೆಗೆ ಯಾವನೇ ವ್ಯಕ್ತಿಯನ್ನು ಅನರ್ಹಗೊಳಿಸಬಹುದೋ ಆ ಅವಧಿಯು, ೯೯ನೇ ಪ್ರಕರಣದ ಮೇರೆಗೆ ಅವನಿಗೆ ಸಂಬಂಧಪಟ್ಟಂತೆ ಮಾಡಿರುವ ಆದೇಶವು ಜಾರಿಗೆ ಬಂದ ದಿನಾಂಕದಿಂದ ಆರು ವರ್ಷಗಳ ಅವಧಿಯನ್ನು ಯಾವ ಸಂದರ್ಭದಲ್ಲೂ ಮೀರತಕ್ಕುದಲ್ಲ.

(೨) ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, ೧೯೭೫ (೧೯೭೫ರ ೪೦)ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಈ ಅಧಿನಿಯಮವು ಇದ್ದಂತೆ, ಅದರ ೮ಎ ಪ್ರಕರಣದ ಮೇರೆಗೆ ಅನರ್ಹಗೊಂಡಿರುವ ಯಾವನೇ ವ್ಯಕ್ತಿಯು ಇಂಥ ಅನರ್ಹತೆಯ ಅವಧಿಯು ಮುಕ್ತಾಯವಾಗಿರದಿದ್ದರೆ, ಸದರಿ ಅವಧಿಯ ಮುಕ್ತಾಯಗೊಳ್ಳದ ಭಾಗಕ್ಕಾಗಿ ಅಂಥ ಅನರ್ಹತೆಯನ್ನು ತೆಗೆದುಹಾಕುವುದಕ್ಕಾಗಿ ರಾಷ್ಟ್ರಪತಿಗೆ ಅರ್ಜಿಯನ್ನು ಸಲ್ಲಿಸಬಹುದು.

(೩) (೧)ನೇ ಉಪ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಪ್ರಶ್ನೆಯ ಬಗ್ಗೆ ಅಥವಾ (೨)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಲಾದ ಯಾವುದೇ ಅರ್ಜಿಯ ಬಗ್ಗೆ ರಾಷ್ಟ್ರಪತಿಯು ತನ್ನ ತೀರ್ಮಾನವನ್ನು ಕೊಡುವುದಕ್ಕೆ ಮುಂಚೆ ಅವನು ಅಂಥ ಪ್ರಶ್ನೆಯ ಅಥವಾ ಅರ್ಜಿಯ ಬಗ್ಗೆ ಚುನಾವಣಾ ಆಯೋಗದ ಅಭಿಪ್ರಾಯವನ್ನು ಪಡೆದುಕೊಳ್ಳತಕ್ಕುದು ಮತ್ತು ಅಂಥ ಅಭಿಪ್ರಾಯಕ್ಕೆ ಅನುಸಾರವಾಗಿ ವರ್ತಿಸತಕ್ಕುದು.

೯. ಭ್ರಷ್ಟಾಚಾರ ಅಥವಾ ದ್ರೋಹದ ಸಲುವಾಗಿ ವಜಾ ಮಾಡಿದ್ದಕ್ಕಾಗಿ ಅನರ್ಹತೆ:- (೧) ಭಾರತ ಸರ್ಕಾರದ ಅಧೀನದಲ್ಲಿ ಅಥವಾ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿದ್ದು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಆಗಿರುವ ಒಬ್ಬ ವ್ಯಕ್ತಿಯನ್ನು, ಹಾಗೆ ವಜಾ ಆದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅನರ್ಹಗೊಳಿಸತಕ್ಕುದು.

(೨) (೧)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಸರ್ಕಾರದ ಅಧೀನದಲ್ಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಪದಧಾರಣ ಮಾಡಿರುವ ವ್ಯಕ್ತಿಯನ್ನು ಭ್ರಷ್ಟಾಚಾರ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಅಥವಾ ಮಾಡಲಾಗಿಲ್ಲ ಎಂಬುದಾಗಿ ಚುನಾವಣಾ ಆಯೋಗವು ನೀಡಿದ ಪ್ರಮಾಣಪತ್ರವು ಆ ಸಂಗತಿಯ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕುದು:

ಪರಂತು, ಒಬ್ಬ ವ್ಯಕ್ತಿಯನ್ನು ಭ್ರಷ್ಟಾಚಾರಕ್ಕಾಗಿ ಅಥವಾ ದೇಶ ದ್ರೋಹಕ್ಕಾಗಿ ವಜಾ ಮಾಡಲಾಗಿದೆ ಎಂಬ ಪ್ರಮಾಣಪತ್ರವನ್ನು, ಸದರಿ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ನೀಡತಕ್ಕುದಲ್ಲ.

೯ಎ. ಸರ್ಕಾರಿ ಕರಾರುಗಳು, ಇತ್ಯಾದಿಗಳಿಗಾಗಿ ಅನರ್ಹತೆ:- ಒಬ್ಬ ವ್ಯಕ್ತಿಯು ಸಮುಚಿತ ಸರ್ಕಾರಕ್ಕೆ ಸರಕುಗಳ ಸರಬರಾಜಿಗಾಗಿ ಅಥವಾ ಅದು ಕೈಗೊಂಡಿರುವ

ಯಾವುದೇ ಕಾಮಗಾರಿಗಳ ನಿರ್ವಹಣೆಗಾಗಿ ಆ ಸರ್ಕಾರದೊಂದಿಗೆ ತನ್ನ ವೃತ್ತಿ ಅಥವಾ ವ್ಯವಹಾರದ ಕ್ರಮದಲ್ಲಿ ತಾನು ಮಾಡಿಕೊಂಡಿರುವ ಕರಾರು ಅಸ್ತಿತ್ವದಲ್ಲಿದ್ದರೆ ಮತ್ತು ಹಾಗೆ ಇರುವವರೆಗೆ ಅನರ್ಹಗೊಳ್ಳತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, ಸಮುಚಿತ ಸರ್ಕಾರದೊಂದಿಗೆ ಕರಾರು ಮಾಡಿಕೊಂಡಿರುವ ವ್ಯಕ್ತಿಯು ಅದನ್ನು ಪೂರ್ಣವಾಗಿ ಪಾಲಿಸಿರುವಲ್ಲಿ, ಸರ್ಕಾರವು ಪೂರ್ಣವಾಗಿ ಅಥವಾ ಭಾಗಶಃ ಆ ಕರಾರಿನ ತನ್ನ ಭಾಗವನ್ನು ಪಾಲಿಸಿಲ್ಲವೆಂಬ ಸಂಗತಿಯ ಕಾರಣ ಮಾತ್ರದಿಂದಲೇ ಆ ಕರಾರು ಅಸ್ತಿತ್ವದಲ್ಲಿದೆ ಎಂದು ಭಾವಿಸತಕ್ಕುದಲ್ಲ.

೧೦. ಸರ್ಕಾರಿ ಕಂಪನಿಯ ಅಧೀನದಲ್ಲಿನ ಹುದ್ದೆಗಾಗಿ ಅನರ್ಹತೆ:- ಒಬ್ಬ ವ್ಯಕ್ತಿಯು, (ಸಹಕಾರ ಸಂಘವಲ್ಲದ) ಯಾವ ಕಂಪನಿ ಅಥವಾ ನಿಗಮದ ಬಂಡವಾಳದಲ್ಲಿ ಸಮುಚಿತ ಸರ್ಕಾರವು ಶೇ. ೨೫ ಕ್ಕಿಂತ ಕಡಿಮೆ ಇಲ್ಲದಷ್ಟು ಷೇರನ್ನು ಹೊಂದಿದೆಯೋ ಆ ಯಾವುದೇ ಕಂಪನಿಯ ಅಥವಾ ನಿಗಮದ ವ್ಯವಸ್ಥಾಪಕ, ಏಜೆಂಟ್, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿಯು ಆಗಿದ್ದರೆ ಮತ್ತು ಹಾಗೆ ಆಗಿರುವವರೆಗೆ ಅವನು ಅನರ್ಹನಾಗಿರತಕ್ಕುದು.

೧೦ಎ. ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಲು ತಪ್ಪಿದ್ದಕ್ಕಾಗಿ ಅನರ್ಹತೆ:- ಒಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಿದ ಕಾಲದೊಳಗೆ ಮತ್ತು ಅಗತ್ಯಪಡಿಸಿದ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲ್ಮಾಡಲು ತಪ್ಪಿದ್ದಾನೆ ಎಂದು; ಮತ್ತು

(ಬಿ) ಹಾಗೆ ತಪ್ಪಿರುವುದಕ್ಕೆ ಯಾವುದೇ ಸರಿಯಾದ ಕಾರಣ ಅಥವಾ ಸಮರ್ಥನೆಯನ್ನು ಅವನು ಹೊಂದಿಲ್ಲ ಎಂದು

- ಚುನಾವಣಾ ಆಯೋಗಕ್ಕೆ ಮನದಟ್ಟಾದರೆ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಪ್ರಕಟವಾದ ಆದೇಶದ ಮೂಲಕ ಅವನು ಅನರ್ಹನಾಗಿದ್ದಾನೆಂದು ಘೋಷಿಸತಕ್ಕುದು ಮತ್ತು ಅಂಥ ವ್ಯಕ್ತಿಯನ್ನು ಆ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸತಕ್ಕುದು.

೧೧. ಅನರ್ಹತೆಯ ಅವಧಿಯನ್ನು ತೆಗೆದುಹಾಕುವುದು ಅಥವಾ ಕಡಿಮೆ ಮಾಡುವುದು:- ಚುನಾವಣಾ ಆಯೋಗವು, ಕಾರಣಗಳನ್ನು ದಾಖಲ್ಮಾಡಿ, ಈ ಅಧ್ಯಾಯದ ಮೇರೆಗೆ (೮ಎ ಪ್ರಕರಣದ ಮೇರೆಗಿರುವುದರ ಹೊರತು) ಯಾವುದೇ ಅನರ್ಹತೆಯನ್ನು ತೆಗೆದುಹಾಕಬಹುದು ಅಥವಾ ಯಾವುದೇ ಅಂಥ ಅನರ್ಹತೆಯ ಅವಧಿಯನ್ನು ಕಡಿಮೆ ಮಾಡಬಹುದು.

ಅಧ್ಯಾಯ IV - ಮತದಾನಕ್ಕಾಗಿ ಅನರ್ಹತೆಗಳು

೧೧ಎ. ಅಪರಾಧ ನಿರ್ಣಯ ಮತ್ತು ಭ್ರಷ್ಟ ಆಚರಣೆಗಳಿಂದ ಉದ್ಭವಿಸುವ ಅನರ್ಹತೆ:- (೧) ಈ ಅಧಿನಿಯಮದ ಪ್ರಾರಂಭದ ತರುವಾಯ ಯಾವನೇ ವ್ಯಕ್ತಿಯು,- ಭಾರತ ದಂಡ ಸಂಹಿತೆ (೧೮೬೦ರ ೪೫)ಯ ೧೭೧ಇ ಪ್ರಕರಣ ಅಥವಾ ೧೭೧ಎಫ್ ಪ್ರಕರಣದ ಮೇರೆಗೆ, ಅಥವಾ ಈ ಅಧಿನಿಯಮದ ೨೨ನೇ ಪ್ರಕರಣದ ಅಥವಾ ೨೩ನೇ ಪ್ರಕರಣದ ಅಥವಾ ೨೩ಬನೇ ಪ್ರಕರಣದ (೨)ನೇ ಉಪ ಪ್ರಕರಣದ (ಎ) ಖಂಡದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿದ್ದರೆ, ಅವನು, ಅಪರಾಧ ನಿರ್ಣಯದ ದಿನಾಂಕದಿಂದ ಅಥವಾ ಆದೇಶವು ಜಾರಿಗೆ ಬರುವ ದಿನಾಂಕದಿಂದ ಆರು ವರ್ಷಗಳ ಅವಧಿಯವರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅನರ್ಹಗೊಳ್ಳತಕ್ಕುದು.

(೨) ಯಾವುದೇ ಅವಧಿಯವರೆಗೆ ೮ಎ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರಪತಿಯ ತೀರ್ಮಾನದ ಮೂಲಕ ಅನರ್ಹಗೊಳಿಸಲಾದ ಯಾವನೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಲು ಅದೇ ಅವಧಿಯವರೆಗೆ ಅನರ್ಹನಾಗಿರತಕ್ಕುದು.

(೩) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯ ವಿಧಾನ ಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಳ್ಳುವ ಮತ್ತು ಸದಸ್ಯನಾಗಿ ಇರುವ ಬಗೆಗಿನ ಯಾವುದೇ ಅನರ್ಹತೆಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ ೮(ಎ) ಪ್ರಕರಣದ (೨)ನೆಯ ಉಪಪ್ರಕರಣದ ಮೇರೆಗಿನ ರಾಷ್ಟ್ರಪತಿಯ ತೀರ್ಮಾನವು ಸಾಧ್ಯವಾದಷ್ಟು ಮಟ್ಟಿಗೆ, ಚುನಾವಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ, ೧೯೭೫ (೧೯೭೫ರ ೪೦) ರ ನಿಕಟ ಪ್ರಾರಂಭಕ್ಕೆ ಮುಂಚೆ ಈ ಅಧಿನಿಯಮವು ಇದ್ದಂತೆ, ಅದರ ೧೧ಎ ಪ್ರಕರಣದ (೧)ನೆಯ ಉಪಪ್ರಕರಣದ (ಬಿ) ಖಂಡದ ಮೇರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕಾಗಿ ಅವನು ಒಳಗಾಗಿರುವ ಅನರ್ಹತೆಯ ಸಂಬಂಧದಲ್ಲಿ ಅಂಥ ತೀರ್ಮಾನವು ಮತದಾನ ಮಾಡುವುದಕ್ಕಾಗಿನ ಸದರಿ ಅನರ್ಹತೆಗೆ ಸಂಬಂಧಿಸಿದ ತೀರ್ಮಾನವಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು.

೧೧ಬಿ. ಅನರ್ಹತೆಗಳ ನಿವಾರಣೆ:- ಚುನಾವಣಾ ಆಯೋಗವು ಕಾರಣಗಳನ್ನು ದಾಖಲು ಮಾಡಿ ೧೧ಎ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಯಾವುದೇ ಅನರ್ಹತೆಯನ್ನು ನಿವಾರಿಸಬಹುದು.

ಭಾಗ - III

ಸಾರ್ವತ್ರಿಕ ಚುನಾವಣೆಗಳ ಅಧಿಸೂಚನೆ

೧೨. ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ:- ರಾಜ್ಯಸಭೆಯ ಸದಸ್ಯರ ಅವಧಿಯು ಮುಕ್ತಾಯಗೊಂಡ ಮೇಲೆ ನಿವೃತ್ತರಾಗುವ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ರಾಷ್ಟ್ರಪತಿಯು ಚುನಾವಣಾ ಆಯೋಗವು ಶಿಫಾರಸು

ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ಸಂಬಂಧಪಟ್ಟ ಪ್ರತಿಯೊಂದು ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸಂದರ್ಭಾನುಸಾರ ಚುನಾಯಕ ಗಣದ ಸದಸ್ಯರನ್ನು ಕೋರತಕ್ಕುದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ನಿವೃತ್ತಿಯಾಗಲಿರುವ ಸದಸ್ಯರ ಪದಾವಧಿಯು ಮುಕ್ತಾಯಗೊಳ್ಳಬೇಕಾದ ಮೂರು ತಿಂಗಳಿಗಿಂತ ಹೆಚ್ಚು ಮುಂಚಿತವಾಗಿ ಹೊರಡಿಸತಕ್ಕುದಲ್ಲ.

೧೨ಎ. ರಾಜ್ಯಸಭೆಯಲ್ಲಿ ಸಿಕ್ಕಿಂ ರಾಜ್ಯಕ್ಕೆ ಹಂಚಿಕೊಟ್ಟಿರುವ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಗಾಗಿ ಅಧಿಸೂಚನೆ:- ರಾಜ್ಯ ಸಭೆಯಲ್ಲಿ ಸಂವಿಧಾನ (೩೬ನೇ ತಿದ್ದುಪಡಿ) ಅಧಿನಿಯಮ, ೧೯೭೫ರ ಮೂಲಕ ಸಿಕ್ಕಿಂ ರಾಜ್ಯಕ್ಕೆ ಹಂಚಿಕೊಟ್ಟಿರುವ ಸ್ಥಾನವನ್ನು ಮೊದಲ ಬಾರಿಗೆ ಭರ್ತಿ ಮಾಡುವ ಉದ್ದೇಶಕ್ಕಾಗಿ, ರಾಷ್ಟ್ರಪತಿಯು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕದಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳ ಅನುಸಾರವಾಗಿ ಒಬ್ಬ ಸದಸ್ಯನನ್ನು ಆಯ್ಕೆ ಮಾಡಲು ಸಿಕ್ಕಿಂ ರಾಜ್ಯದ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಕೋರತಕ್ಕುದು ಮತ್ತು ಹಾಗೆ ನಡೆಸಿದ ಚುನಾವಣೆಯನ್ನು ಎಲ್ಲ ಉದ್ದೇಶಗಳು ಮತ್ತು ಆಶಯಗಳಿಗಾಗಿ ೧೨ನೇ ಪ್ರಕರಣದ ಮೇರೆಗೆ ನಡೆಸಲಾಗಿದೆಯೆಂಬುದಾಗಿ ಭಾವಿಸತಕ್ಕುದು.

೧೩. [ಕೆಲವು ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿ ಚುನಾವಣಾ ಗಣಗಳನ್ನು ಪುನರ್‌ರಚಿಸುವುದಕ್ಕಾಗಿ ಅಧಿಸೂಚನೆ]:- ಪ್ರಾದೇಶಿಕ ಪರಿಷತ್ತುಗಳ ಅಧಿನಿಯಮ, ೧೯೫೬ (೧೯೫೬ರ ೧೦೩)ರ ೬೬ನೇ ಪ್ರಕರಣದ ಮೂಲಕ ನಿರಸಿತವಾಗಿದೆ.

೧೪. ಲೋಕಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ:- (೧) ಅಸ್ತಿತ್ವದಲ್ಲಿರುವ ಸದನದ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅದು ವಿಘಟಿತವಾದ ಮೇಲೆ ಹೊಸ ಲೋಕಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕುದು.

(೨) ಸದರಿ ಉದ್ದೇಶಕ್ಕಾಗಿ ರಾಷ್ಟ್ರಪತಿಯು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ಭಾರತ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ಎಲ್ಲ ಸಂಸದೀಯ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು:

ಪರಂತು, ಅಸ್ತಿತ್ವದಲ್ಲಿರುವ ಲೋಕಸಭೆಯು ವಿಘಟಿತವಾದ ಮೇಲಲ್ಲದೆ ಅನ್ಯಥಾ ಸಾರ್ವತ್ರಿಕ ಚುನಾವಣೆಯನ್ನು ನಡೆಸಿರುವಲ್ಲಿ ಆಕನೇ ಅನುಚ್ಛೇದದ (೨)ನೇ ಖಂಡದ ಉಪಬಂಧಗಳ ಮೇರೆಗೆ ಆ ಸದನದ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮೊದಲು ಆರು ತಿಂಗಳಿಗಿಂತ ಮುಂಚೆ ಯಾವುದೇ ಕಾಲದಲ್ಲಿ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

೧೪ಎ. ಅಸ್ತಿತ್ವದಲ್ಲಿರುವ ಲೋಕಸಭೆಗೆ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಆಯ್ಕೆ ಮಾಡುವುದಕ್ಕಾಗಿ ಅಧಿಸೂಚನೆ:- ಸಂವಿಧಾನದ ೩೭೧ಎಫ್ ಅನುಚ್ಛೇದದ (ಇ) ಖಂಡದಲ್ಲಿ ನಿರ್ದಿಷ್ಟಪಡಿಸಿರುವಂತೆ ಲೋಕಸಭೆಗೆ ಸಿಕ್ಕಿಂ ರಾಜ್ಯದ ಪ್ರತಿನಿಧಿಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಚುನಾವಣಾ ಆಯೋಗವು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಯಾವ ಉಪಬಂಧಗಳು ರಾಜ್ಯ ಸಭೆಯ ಸದಸ್ಯರ ಆಯ್ಕೆಗೆ ಅನ್ವಯವಾಗುತ್ತವೆಯೋ ಆ ಉಪಬಂಧಗಳಿಗೆ ಅನುಸಾರವಾಗಿ ಆ ಪ್ರತಿನಿಧಿಯನ್ನು ಆಯ್ಕೆ ಮಾಡಲು, ಸಿಕ್ಕಿಂ ರಾಜ್ಯದ ವಿಧಾನಸಭೆಯ ಸದಸ್ಯರನ್ನು ಕೋರತಕ್ಕುದು.

೧೫. ರಾಜ್ಯ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗಾಗಿ ಅಧಿಸೂಚನೆ:- (೧) ಅಸ್ತಿತ್ವದಲ್ಲಿರುವ ವಿಧಾನ ಸಭೆಯ ಅವಧಿ ಮುಕ್ತಾಯವಾದ ಮೇಲೆ ಅಥವಾ ಅದು ವಿಘಟಿತವಾದ ಮೇಲೆ ಹೊಸ ವಿಧಾನ ಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕುದು.

(೨) ಸದರಿ ಉದ್ದೇಶಕ್ಕಾಗಿ, ಸಂದರ್ಭಾನುಸಾರ ರಾಜ್ಯಪಾಲನು ಅಥವಾ ಆಡಳಿತಗಾರನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚು ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದಲ್ಲಿನ ಎಲ್ಲ ವಿಧಾನ ಸಭೆಯ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು:

ಪರಂತು, ಅಸ್ತಿತ್ವದಲ್ಲಿರುವ ವಿಧಾನ ಸಭೆಯು ವಿಘಟಿತಗೊಂಡ ಮೇಲಲ್ಲದೆ ಅನ್ಯಥಾ ಸಾರ್ವತ್ರಿಕ ಚುನಾವಣೆಯನ್ನು ನಡೆಸಿರುವಲ್ಲಿ, ಸಂದರ್ಭಾನುಸಾರ ೧೭ನೇ ಅನುಚ್ಛೇದದ (೧)ನೇ ಖಂಡದ ಉಪಬಂಧಗಳ ಮೇರೆಗೆ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರ ಅಧಿನಿಯಮ, ೧೯೬೩ (೧೯೬೩ರ ೨೦)ರ ೫ನೇ ಪ್ರಕರಣದ ಉಪಬಂಧಗಳ ಮೇರೆಗೆ ಆ ವಿಧಾನ ಸಭೆಯ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮೊದಲು ಆರು ತಿಂಗಳಿಗಿಂತ ಮುಂಚೆ ಯಾವುದೇ ಕಾಲದಲ್ಲಿ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕುದಲ್ಲ.

೧೫ಎ. ವಿಧಾನಪರಿಷತ್ತುಗಳ ಕೆಲವು ಚುನಾವಣೆಗಳಿಗಾಗಿ ಅಧಿಸೂಚನೆ:- ರಾಜ್ಯಗಳ ಪುನರ್‌ರಚನೆ ಅಧಿನಿಯಮ, ೧೯೫೬ (೧೯೫೬ರ ೩೭)ರ ಮೇರೆಗೆ ಮಧ್ಯಪ್ರದೇಶದ ರಾಜ್ಯದ ವಿಧಾನ ಪರಿಷತ್ತನ್ನು ರಚಿಸುವ ಮತ್ತು ವಿಧಾನ ಪರಿಷತ್ತುಗಳ ಅಧಿನಿಯಮ, ೧೯೫೭ (೧೯೫೭ರ ೩೭)ರ ಮೇರೆಗೆ ಆಂಧ್ರಪ್ರದೇಶ ರಾಜ್ಯದ ವಿಧಾನ ಪರಿಷತ್ತನ್ನು ರಚಿಸುವ ಉದ್ದೇಶಕ್ಕಾಗಿ, ಮೇಲೆ ಹೇಳಿದ ಪ್ರತಿಯೊಂದು ರಾಜ್ಯದ ರಾಜ್ಯಪಾಲನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳ ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ವಿಧಾನ ಸಭೆಯ ಸದಸ್ಯರನ್ನು ಮತ್ತು ಪರಿಷತ್ತಿನ ಎಲ್ಲ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳತಕ್ಕುದು.

೧೬. ರಾಜ್ಯ ವಿಧಾನಪರಿಷತ್ತಿನ ದ್ವೈವಾರ್ಷಿಕ ಚುನಾವಣೆಗಾಗಿ ಅಧಿಸೂಚನೆ:- ರಾಜ್ಯದ ವಿಧಾನ ಪರಿಷತ್ತಿನ ಸದಸ್ಯರ ಪದಾವಧಿಯು ಮುಕ್ತಾಯಗೊಂಡ ಮೇಲೆ ನಿವೃತ್ತರಾಗುವ ಸದಸ್ಯರ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ, ರಾಜ್ಯಪಾಲನು, ಚುನಾವಣಾ ಆಯೋಗವು ಶಿಫಾರಸು ಮಾಡಬಹುದಾದಂಥ ದಿನಾಂಕ ಅಥವಾ ದಿನಾಂಕಗಳಂದು ರಾಜ್ಯದ ರಾಜಪತ್ರದಲ್ಲಿ ಪ್ರಕಟಿತವಾದ ಒಂದು ಅಥವಾ ಹೆಚ್ಚಿನ ಅಧಿಸೂಚನೆಗಳ ಮೂಲಕ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿರುವ ನಿಯಮಗಳು ಮತ್ತು ಆದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದ ವಿಧಾನ ಸಭೆಯ ಮತ್ತು ಸಂಬಂಧಪಟ್ಟ ಎಲ್ಲ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರಗಳ ಸದಸ್ಯರನ್ನು ಕೇಳಿಕೊಳ್ಳತಕ್ಕುದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ನಿವೃತ್ತರಾಗಲಿರುವ ಸದಸ್ಯರ ಪದಾವಧಿಯು ಮುಕ್ತಾಯಗೊಳ್ಳಬೇಕಾದ ದಿನಾಂಕಕ್ಕೆ ಮೂರು ತಿಂಗಳಿಗಿಂತ ಹೆಚ್ಚು ಮುಂಚಿತವಾಗಿ ಹೊರಡಿಸತಕ್ಕುದಲ್ಲ.

ಭಾಗ - IV
ಚುನಾವಣೆಗಳನ್ನು ನಡೆಸುವುದಕ್ಕಾಗಿ ಆಡಳಿತ ಯಂತ್ರ

೧೯. ಪರಿಭಾಷೆ:- ಈ ಭಾಗದಲ್ಲಿ ಮತ್ತುಗಿನೇ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು ''ಚುನಾವಣಾ ಕ್ಷೇತ್ರ" ಎಂದರೆ ಸಂಸದೀಯ ಚುನಾವಣಾ ಕ್ಷೇತ್ರ ಅಥವಾ ವಿಧಾನ ಸಭಾ ಚುನಾವಣಾ ಕ್ಷೇತ್ರ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರ.

೧೯ಎ. ಚುನಾವಣಾ ಆಯೋಗದ ಪ್ರಕಾರ್ಯಗಳ ಪ್ರತ್ಯಾಯೋಜನೆ:- ಸಂವಿಧಾನದ, ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ಮತ್ತು ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗಿನ ಚುನಾವಣಾ ಆಯೋಗದ ಪ್ರಕಾರ್ಯಗಳನ್ನು, ಈ ಬಗ್ಗೆ, ಚುನಾವಣಾ ಆಯೋಗವು

ಕೊಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳು, ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟು, ಉಪ ಚುನಾವಣಾ ಆಯುಕ್ತನು ಅಥವಾ ಚುನಾವಣಾ ಆಯೋಗದ ಕಾರ್ಯದರ್ಶಿಯು ಸಹ ನಿರ್ವಹಿಸಬಹುದು.

೨೦. ಮುಖ್ಯ ಚುನಾವಣಾ ಅಧಿಕಾರಿಗಳ ಸಾಮಾನ್ಯ ಕರ್ತವ್ಯಗಳು:- ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಗಳಿಗೊಳಪಟ್ಟು, ಪ್ರತಿಯೊಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ರಾಜ್ಯದಲ್ಲಿನ ಎಲ್ಲ ಚುನಾವಣೆಗಳನ್ನು ನಡೆಸುವುದರ ಮೇಲ್ವಿಚಾರಣೆ ನೋಡಿಕೊಳ್ಳತಕ್ಕುದು.

೨೦ಎ. ಜಿಲ್ಲಾ ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯಗಳು:- (೧) ಮುಖ್ಯ ಚುನಾವಣಾ ಅಧಿಕಾರಿಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಗಳಿಗೊಳಪಟ್ಟು ಜಿಲ್ಲಾ ಚುನಾವಣಾ ಅಧಿಕಾರಿಯು ಸಂಸತ್ತು ಮತ್ತು ರಾಜ್ಯದ ವಿಧಾನ ಮಂಡಲದ ಎಲ್ಲ ಚುನಾವಣೆಗಳ ನಡೆಯುವಿಕೆಯ ಸಂಬಂಧದಲ್ಲಿ ಜಿಲ್ಲೆಯಲ್ಲಿನ ಅಥವಾ ಅವನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿನ ಎಲ್ಲ ಕಾರ್ಯವನ್ನು ಸಮನ್ವಯಗೊಳಿಸತಕ್ಕುದು ಮತ್ತು ಮೇಲ್ವಿಚಾರಣೆ ನೋಡಿಕೊಳ್ಳತಕ್ಕುದು.

(೨) ಜಿಲ್ಲಾ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗವು ಮತ್ತು ಮುಖ್ಯ ಚುನಾವಣಾ ಅಧಿಕಾರಿಯು ತನಗೆ ವಹಿಸಿಕೊಡಬಹುದಾದಂಥ ಇತರೆ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕುದು.

೨೦ಬಿ. ಪರಿವೀಕ್ಷಕರು:- (೧) ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳ ಸಮೂಹದಲ್ಲಿ ಚುನಾವಣೆ ಅಥವಾ ಚುನಾವಣೆಗಳನ್ನು ನಡೆಸುತ್ತಿರುವುದನ್ನು ಗಮನಿಸಲು ಅಥವಾ ಚುನಾವಣಾ ಆಯೋಗವು ತನಗೆ ವಹಿಸಿಕೊಡಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಪರಿವೀಕ್ಷಕನನ್ನು ಚುನಾವಣಾ ಆಯೋಗವು ನಾಮನಿರ್ದೇಶನ ಮಾಡಬಹುದು.

(೨) (೧)ನೇ ಉಪ-ಪ್ರಕರಣದ ಮೇರೆಗೆ ನಾಮನಿರ್ದೇಶಿತನಾದ ಪರಿವೀಕ್ಷಕನು, ಬಹಳಷ್ಟು ಮತಗಟ್ಟೆಗಳಲ್ಲಿ ಅಥವಾ ಮತದಾನಕ್ಕೆ ಅಥವಾ ಮತಗಳ ಎಣಿಕೆಗೆ ನಿಗದಿಪಡಿಸಲಾದ ಸ್ಥಳಗಳಲ್ಲಿ ಮತಗಟ್ಟೆಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಥವಾ ಮತಗಟ್ಟೆಯಲ್ಲಿ ಅಥವಾ ಮತದಾನಕ್ಕೆ ನಿಗದಿಪಡಿಸಲಾದ ಸ್ಥಳದಲ್ಲಿ ಬಳಸಲಾದ ಮತಪತ್ರಗಳನ್ನು ಕಾನೂನು ವಿರುದ್ಧವಾಗಿ ರಿಟರ್ನಿಂಗ್ ಆಫೀಸರನ ಅಭಿರಕ್ಷೆಯಿಂದ ಹೊರಕ್ಕೆ ತೆಗೆದುಕೊಂಡು ಹೋಗಲಾಗಿದೆಯೆಂದು ಅಥವಾ ಅವುಗಳನ್ನು ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಲಾಗಿದೆಯೆಂದು ಅಥವಾ ಅವು ಕಳೆದುಹೋಗಿವೆಯೆಂದು ಅಥವಾ ಆ ಮತಗಟ್ಟೆಯ ಅಥವಾ ಸ್ಥಳದ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲಾಗದಷ್ಟು ಮಟ್ಟಿಗೆ ಅವು ಹಾನಿಗೊಳಗಾಗಿವೆಯೆಂದು ಅಥವಾ ಅವುಗಳನ್ನು ಅಕ್ರಮವಾಗಿ ತಿದ್ದಲಾಗಿದೆ ಎಂದು ಅಭಿಪ್ರಾಯಪಟ್ಟರೆ ಫಲಿತಾಂಶವನ್ನು ಘೋಷಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸಿದಂತೆ ಆ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಆಫೀಸರನಿಗೆ ಅಥವಾ ಅವನು

ನಾಮನಿರ್ದೇಶಿತನಾಗಿರುವಂಥ ಚುನಾವಣಾ ಕ್ಷೇತ್ರಗಳ ಪೈಕಿ ಯಾವುದೇ ಚುನಾವಣಾ ಕ್ಷೇತ್ರದ ರಿಟರ್ನಿಂಗ್ ಆಫೀಸರನಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(೩) ಪರಿವೀಕ್ಷಕನು ಈ ಪ್ರಕರಣದ ಮೇರೆಗೆ ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ಅಥವಾ ಫಲಿತಾಂಶವನ್ನು ಘೋಷಿಸದಂತೆ ರಿಟರ್ನಿಂಗ್ ಆಫೀಸರನಿಗೆ ನಿರ್ದೇಶನ ನೀಡಿರುವಲ್ಲಿ, ಆ ಸಂಗತಿಯನ್ನು ಆ ಕೂಡಲೇ ಅವನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು ಮತ್ತು ಆ ತರುವಾಯ ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ೫೮ ಎ ಪ್ರಕರಣ ಅಥವಾ ೬೪ ಎ ಪ್ರಕರಣ ಅಥವಾ ೬೬ನೇ ಪ್ರಕರಣದ ಮೇರೆಗೆ ಯುಕ್ತ ನಿರ್ದೇಶನಗಳನ್ನು ನೀಡತಕ್ಕುದು.

ವಿವರಣೆ:- (೨)ನೇ ಉಪಪ್ರಕರಣ ಮತ್ತು (೩)ನೇ ಉಪಪ್ರಕರಣದ ಉದ್ದೇಶಗಳಿಗಾಗಿ "ಪರಿವೀಕ್ಷಕ" ಎಂಬ ಪದವು ಒಂದು ಚುನಾವಣಾ ಕ್ಷೇತ್ರದಲ್ಲಿ ಅಥವಾ ಚುನಾವಣಾ ಕ್ಷೇತ್ರಗಳ ಸಮೂಹಕ್ಕೆ ಚುನಾವಣೆ ಅಥವಾ ಚುನಾವಣೆಗಳನ್ನು ನಡೆಸುವುದನ್ನು ಗಮನಿಸುವ ಕರ್ತವ್ಯವನ್ನು ಈ ಪ್ರಕರಣದ ಮೇರೆಗೆ ಆಯೋಗವು ವಹಿಸಿಕೊಟ್ಟಿರುವ ಚುನಾವಣಾ ಆಯೋಗದ ಪ್ರಾದೇಶಿಕ ಕಮಿಷನರ್ ಅಥವಾ ಯಾರೇ ಅಂಥ ಅಧಿಕಾರಿಯನ್ನು ಒಳಗೊಳ್ಳತಕ್ಕದ್ದು.

೨೧. ಚುನಾವಣಾಧಿಕಾರಿಗಳು:- ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕಾಗಿ ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವ ಬಗೆಗಿನ ಪ್ರತಿಯೊಂದು ಚುನಾವಣೆಗಾಗಿ ಮತ್ತು ರಾಜ್ಯದ ವಿಧಾನ ಪರಿಷತ್‌ನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ, ರಾಜ್ಯದ ವಿಧಾನ ಸಭೆಯ ಸದಸ್ಯರಿಂದ ನಡೆಯುವ ಪ್ರತಿಯೊಂದು ಆಯ್ಕೆಗಾಗಿ, ಚುನಾವಣಾ ಆಯೋಗವು, ಆ ರಾಜ್ಯದ ಸರ್ಕಾರದೊಂದಿಗೆ ಸಮಾಲೋಚಿಸಿ, ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಚುನಾವಣಾ ಅಧಿಕಾರಿಯನ್ನು ಗೊತ್ತು ಮಾಡತಕ್ಕುದು ಅಥವಾ ನಾಮನಿರ್ದೇಶನ ಮಾಡತಕ್ಕುದು, ಅವನು ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕುದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಒಬ್ಬನೇ ವ್ಯಕ್ತಿಯನ್ನು ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿಗಾಗಿ ಚುನಾವಣಾಧಿಕಾರಿಯಾಗಿರುವಂತೆ ಚುನಾವಣಾ ಆಯೋಗವು ಗೊತ್ತು ಮಾಡುವುದಕ್ಕೆ ಅಥವಾ ನಾಮನಿರ್ದೇಶನ ಮಾಡಲು ಪ್ರತಿಬಂಧಿಸತಕ್ಕುದಲ್ಲ.

೨೨. ಸಹಾಯಕ ಚುನಾವಣಾ ಅಧಿಕಾರಿಗಳು:- (೧) ಚುನಾವಣಾ ಆಯೋಗವು ಯಾವನೇ ಚುನಾವಣಾ ಅಧಿಕಾರಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ಸಹಾಯ ಮಾಡಲು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ನೇಮಕ ಮಾಡಬಹುದು:

ಪರಂತು, ಅಂಥ ಪ್ರತಿಯೊಬ್ಬ ವ್ಯಕ್ತಿಯು, ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಯಾಗಿರತಕ್ಕುದು.

(೨) ಪ್ರತಿಯೊಬ್ಬ ಸಹಾಯಕ ಚುನಾವಣಾ ಅಧಿಕಾರಿಯು, ಚುನಾವಣಾ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ಚುನಾವಣಾ ಅಧಿಕಾರಿಯ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕುದು:

ಪರಂತು, ಯಾವನೇ ಸಹಾಯಕ ಚುನಾವಣಾ ಅಧಿಕಾರಿಯು, ನಾಮಪತ್ರಗಳ ಪರಿಶೀಲನೆಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿಯ ಯಾವುವೇ ಪ್ರಕಾರ್ಯಗಳನ್ನು, ಚುನಾವಣಾ ಅಧಿಕಾರಿಯು ಸದರಿ ಪ್ರಕಾರ್ಯವನ್ನು ನಿರ್ವಹಿಸಲು ಅನಿವಾರ್ಯವಾಗಿ ಪ್ರತಿಬಂಧಿತನಾಗಿರುವ ಹೊರತು ನಿರ್ವಹಿಸತಕ್ಕುದಲ್ಲ.

೨೩. ಚುನಾವಣಾ ಅಧಿಕಾರಿ ಎಂಬುದು ಚುನಾವಣಾ ಪ್ರಕಾರ್ಯಗಳನ್ನು ನಿರ್ವಹಿಸುವ ಸಹಾಯಕ ಚುನಾವಣಾ ಅಧಿಕಾರಿಗಳನ್ನು ಒಳಗೊಳ್ಳುವುದು:- ಈ ಅಧಿನಿಯಮದಲ್ಲಿ ಚುನಾವಣಾಧಿಕಾರಿಗೆ ಸಂಬಂಧಪಟ್ಟ ಉಲ್ಲೇಖಗಳು ಅನ್ಯಥಾ ಅಗತ್ಯಪಡಿಸಿದ ಹೊರತು ೨೨ನೇ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಕಾರ್ಯವನ್ನು ನಿರ್ವಹಿಸಲು ಸಹಾಯಕ ಚುನಾವಣಾ ಅಧಿಕಾರಿಯು ಅಧಿಕೃತನಾಗಿರುವನೋ ಆ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಸಹಾಯಕ ಚುನಾವಣಾಧಿಕಾರಿಯನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು.

೨೪. ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯ:- ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಆದೇಶಗಳ ಮೂಲಕ ಉಪಬಂಧಿಸಿರುವ ರೀತಿಯಲ್ಲಿ ಚುನಾವಣೆಯನ್ನು ಪರಿಣಾಮಕಾರಿಯಾಗಿ ನಡೆಸಲು ಅವಶ್ಯವಿರಬಹುದಾದಂಥ ಎಲ್ಲ ಕಾರ್ಯ ಮತ್ತು ಕೆಲಸಗಳನ್ನು ಮಾಡುವುದು ಯಾವುದೇ ಚುನಾವಣೆಯಲ್ಲಿ ಚುನಾವಣಾ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕುದು.

೨೫. ಚುನಾವಣಾ ಕ್ಷೇತ್ರಗಳಿಗಾಗಿ ಮತದಾನ ಕೇಂದ್ರಗಳ ವ್ಯವಸ್ಥೆ:- ಜಿಲ್ಲಾ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗದ ಪೂರ್ವಾನುಮೋದನೆಯಿಂದ ಯಾವ ಚುನಾವಣಾ ಕ್ಷೇತ್ರದ ಪೂರ್ಣ ಅಥವಾ ಹೆಚ್ಚಿನ ಭಾಗವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೋ ಆ ಪ್ರತಿಯೊಂದು ಚುನಾವಣಾ ಕ್ಷೇತ್ರದಲ್ಲಿ ಸಾಕಷ್ಟು ಸಂಖ್ಯೆಯ ಮತದಾನ ಕೇಂದ್ರಗಳನ್ನು ವ್ಯವಸ್ಥೆ ಮಾಡತಕ್ಕುದು ಮತ್ತು ಹಾಗೆ ವ್ಯವಸ್ಥೆ ಮಾಡಲಾದ ಮತದಾನ ಕ್ಷೇತ್ರಗಳನ್ನು ಮತ್ತು ಅವುಗಳನ್ನು ಅನುಕ್ರಮವಾಗಿ ಯಾವ ಮತದಾನ ಪ್ರದೇಶಗಳು ಅಥವಾ ಮತದಾರರ ಗುಂಪುಗಳಿಗಾಗಿ ವ್ಯವಸ್ಥೆ ಮಾಡಲಾಗಿದೆಯೋ ಅವುಗಳನ್ನು ತೋರಿಸುವ ಪಟ್ಟಿಯನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ರೀತಿಯಲ್ಲಿ ಪ್ರಕಟಿಸತಕ್ಕುದು.

೨೬. ಮತದಾನ ಕೇಂದ್ರಗಳಿಗೆ ಪೀಠಾಸೀನಾಧಿಕಾರಿಗಳ ನೇಮಕ:- (೧) ಜಿಲ್ಲಾ ಚುನಾವಣಾ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಪೀಠಾಸೀನ

ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಯೋಚಿಸುವಂಥ ಮತದಾನ ಅಧಿಕಾರಿಯನ್ನು ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕುದು, ಆದರೆ ಅವನು ಆ ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ ಇತರ ರೀತಿಯಲ್ಲಿ ಆ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ಯಾವನೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ:

ಪರಂತು, ಒಬ್ಬ ಮತದಾನ ಅಧಿಕಾರಿಯು ಮತದಾನ ಕೇಂದ್ರದಿಂದ ಗೈರು ಹಾಜರಾದಲ್ಲಿ, ಪೀಠಾಸೀನ ಅಧಿಕಾರಿಯು, ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ ಇತರೆ ರೀತಿಯಲ್ಲಿ ಆ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಯನ್ನು ಹೊರತುಪಡಿಸಿ, ಮತದಾನ ಕೇಂದ್ರದಲ್ಲಿ ಹಾಜರಿರುವ ಇತರ ಯಾವನೇ ವ್ಯಕ್ತಿಯನ್ನು ಮೊದಲಿನ ಅಧಿಕಾರಿಯ ಗೈರುಹಾಜರಿಯ ಅವಧಿಯಲ್ಲಿ ಮತದಾನ ಅಧಿಕಾರಿಯಾಗಿರಲು ನೇಮಕ ಮಾಡಬಹುದು, ಮತ್ತು ತದನುಸಾರವಾಗಿ ಅದನ್ನು ಜಿಲ್ಲಾ ಚುನಾವಣಾ ಅಧಿಕಾರಿಗೆ ತಿಳಿಸಬಹುದು:

ಮತ್ತೂ ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಒಬ್ಬನೇ ವ್ಯಕ್ತಿಯನ್ನು ಅದೇ ಆವರಣದಲ್ಲಿರುವ ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯಾಗಿರುವಂತೆ ನೇಮಕ ಮಾಡಲು ಜಿಲ್ಲಾ ಚುನಾವಣಾಧಿಕಾರಿಯನ್ನು ಪ್ರತಿಬಂಧಿಸತಕ್ಕುದಲ್ಲ.

(೨) ಮತದಾನ ಅಧಿಕಾರಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮಗಳು ಅಥವಾ ಆದೇಶಗಳ ಮೇರೆಗೆ ಪೀಠಾಸೀನ ಅಧಿಕಾರಿಯ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ಪೀಠಾಸೀನ ಅಧಿಕಾರಿಯಿಂದ ನಿರ್ದೇಶಿತನಾಗಿದ್ದರೆ, ಅವನು ಹಾಗೆ ಮಾಡತಕ್ಕುದು.

(೩) ಪೀಠಾಸೀನ ಅಧಿಕಾರಿಯು, ಕಾಯಿಲೆ ಅಥವಾ ಇತರ ಅನಿವಾರ್ಯ ಕಾರಣದಿಂದಾಗಿ ಮತದಾನ ಕೇಂದ್ರದಿಂದ ತಾನು ಕಡ್ಡಾಯವಾಗಿ ಗೈರು ಹಾಜರಾಗಬೇಕಾಗಿದ್ದರೆ ಯಾವುದೇ ಅಂಥ ಗೈರು ಹಾಜರಿಯ ಸಮಯದಲ್ಲಿ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಲು ಜಿಲ್ಲಾ ಚುನಾವಣಾ ಅಧಿಕಾರಿಯಿಂದ ಈ ಮುಂಚೆ ಅಧಿಕೃತನಾಗಿರುವಂಥ ಯಾವನೇ ಮತದಾನ ಅಧಿಕಾರಿಯು ಅವನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕುದು.

(೪) ಈ ಅಧಿನಿಯಮದಲ್ಲಿ ಪೀಠಾಸೀನ ಅಧಿಕಾರಿಯನ್ನು ಕುರಿತ ಉಲ್ಲೇಖಗಳು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಸಂದರ್ಭಾನುಸಾರ (೨)ನೇ ಉಪಪ್ರಕರಣ ಅಥವಾ (೩)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಕಾರ್ಯವನ್ನು ನಿರ್ವಹಿಸಲು ತಾನು ಅಧಿಕೃತನಾಗಿರುವನೋ ಆ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯನ್ನು ಒಳಗೊಂಡಿರುವುದಾಗಿ ಭಾವಿಸತಕ್ಕುದು.

೨೭. ಪೀಠಾಸೀನ ಅಧಿಕಾರಿಯ ಸಾಮಾನ್ಯ ಕರ್ತವ್ಯ:- ಮತದಾನ ಕೇಂದ್ರದಲ್ಲಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು ಮತ್ತು ಮತದಾನವು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತದಾನ ಕೇಂದ್ರದಲ್ಲಿರುವ ಪೀಠಾಸೀನ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕುದು.

೨೮. ಮತದಾನಾಧಿಕಾರಿಯ ಕರ್ತವ್ಯಗಳು:- ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅಂಥ ಪೀಠಾಸೀನ ಅಧಿಕಾರಿಗೆ ಸಹಾಯ ಮಾಡುವುದು ಮತದಾನ ಕೇಂದ್ರದಲ್ಲಿರುವ ಮತದಾನ ಅಧಿಕಾರಿಗಳ ಕರ್ತವ್ಯವಾಗಿರತಕ್ಕುದು.

೨೮ಎ. ಚುನಾವಣಾ ಅಧಿಕಾರಿ, ಪೀಠಾಸೀನ ಅಧಿಕಾರಿ, ಮೊದಲಾದವರು ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾದವರೆಂದು ಭಾವಿಸುವುದು:- ಯಾವುದೇ ಚುನಾವಣೆಯನ್ನು ನಡೆಸುವುದಕ್ಕಾಗಿ ಈ ಭಾಗದ ಮೇರೆಗೆ ನೇಮಕಗೊಂಡ ಚುನಾವಣಾ ಅಧಿಕಾರಿ, ಸಹಾಯಕ ಚುನಾವಣಾ ಅಧಿಕಾರಿ, ಪೀಠಾಸೀನ ಅಧಿಕಾರಿ, ಮತದಾನಾಧಿಕಾರಿ ಮತ್ತು ಯಾವನೇ ಇತರೆ ಅಧಿಕಾರಿ ಮತ್ತು ರಾಜ್ಯ ಸರ್ಕಾರವು ತತ್ಕಾಲದಲ್ಲಿ ಗೊತ್ತು ಮಾಡಿದ ಯಾವನೇ ಪೊಲೀಸ್ ಅಧಿಕಾರಿ- ಇವರುಗಳು ಅಂಥ ಚುನಾವಣೆಯನ್ನು ಆಹ್ವಾನಿಸುವ ಅಧಿಸೂಚನೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಪ್ರಾರಂಭವಾಗುವ ಮತ್ತು ಅಂಥ ಚುನಾವಣೆಯ ಫಲಿತಾಂಶಗಳ ಘೋಷಣೆಯ ದಿನಾಂಕದಂದು ಕೊನೆಗೊಳ್ಳುವ ಅವಧಿಯವರೆಗೆ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿರುವವರು ಎಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ, ಅಂಥ ಅಧಿಕಾರಿಗಳು ಆ ಅವಧಿಯಲ್ಲಿ ಚುನಾವಣಾ ಆಯೋಗದ ನಿಯಂತ್ರಣ, ಅಧೀಕ್ಷಣೆ ಮತ್ತು ಶಿಸ್ತಿಗೆ ಒಳಪಟ್ಟಿರತಕ್ಕುದು.

೨೯. ಕೆಲವು ಚುನಾವಣೆಗಳ ಸಂದರ್ಭದಲ್ಲಿ ವಿಶೇಷ ವ್ಯವಸ್ಥೆಗಳು:- (೧) ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿನ ಚುನಾವಣೆಗಾಗಿ ಅಥವಾ ರಾಜ್ಯದ ವಿಧಾನ ಪರಿಷತ್ತಿನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ರಾಜ್ಯದ ವಿಧಾನ ಸಭೆಯ ಸದಸ್ಯರಿಂದ ನಡೆಯುವ ಚುನಾವಣೆಗಾಗಿ ಇರುವ ಚುನಾವಣಾಧಿಕಾರಿಯು ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ಅಂಥ ಚುನಾವಣೆಗಾಗಿ ಮತದಾನ ನಡೆಯುವ ಸ್ಥಳವನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ನಿಗದಿಪಡಿಸಿದ ಸ್ಥಳವನ್ನು ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು.

(೨) ಚುನಾವಣಾಧಿಕಾರಿಯು, ಹಾಗೆ ನಿಗದಿಪಡಿಸಿದ ಸ್ಥಳದಲ್ಲಿ ಅಂಥ ಚುನಾವಣೆಯ (ಅಧಿಪತ್ಯವನ್ನು ವಹಿಸಿಕೊಳ್ಳತಕ್ಕುದು ಮತ್ತು ಅವನು ಅವಶ್ಯವೆಂದು ಯೋಚಿಸುವಂಥ ಮತದಾನಾಧಿಕಾರಿ ಅಥವಾ ಅಧಿಕಾರಿಗಳನ್ನು ತನಗೆ ಸಹಾಯ ಮಾಡಲು ನೇಮಕ ಮಾಡತಕ್ಕುದು, ಆದರೆ ಅವನು ಆ ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಒಬ್ಬ ಅಭ್ಯರ್ಥಿಯಿಂದ ಅಥವಾ ಅವನ ಪರವಾಗಿ ನೇಮಕಗೊಂಡಿರುವ ಅಥವಾ

ಇತರೆ ರೀತಿಯಲ್ಲಿ ಅಭ್ಯರ್ಥಿಗಾಗಿ ಕೆಲಸ ಮಾಡುತ್ತಿರುವ ಯಾವನೇ ವ್ಯಕ್ತಿಯನ್ನು ನೇಮಕ ಮಾಡತಕ್ಕುದಲ್ಲ.

ಭಾಗ - IV ಎ
ರಾಜಕೀಯ ಪಕ್ಷಗಳ ನೋಂದಣಿ

೨೯ಎ. ಸಂಘಗಳು ಮತ್ತು ನಿಕಾಯಗಳನ್ನು ರಾಜಕೀಯ ಪಕ್ಷಗಳೆಂದು ಚುನಾವಣಾ ಆಯೋಗದಲ್ಲಿ ನೋಂದಾಯಿಸುವುದು:- (೧) ತನ್ನನ್ನು ಒಂದು ರಾಜಕೀಯ ಪಕ್ಷವೆಂದು ಕರೆದುಕೊಳ್ಳುವ ಮತ್ತು ಈ ಭಾಗದ ಉಪಬಂಧಗಳ ಪ್ರಯೋಜನವನ್ನು ತಾನು ಪಡೆಯಲಿಚ್ಛಿಸುವ ಭಾರತದ ವ್ಯಕ್ತಿಗತ ನಾಗರಿಕರ ಯಾವುದೇ ಸಂಘ ಅಥವಾ ನಿಕಾಯವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಅದನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸುವುದಕ್ಕಾಗಿ ಚುನಾವಣಾ ಆಯೋಗಕ್ಕೆ ಅರ್ಜಿಯನ್ನು ಸಲ್ಲಿಸತಕ್ಕುದು.

(೨) ಅಂಥ ಪ್ರತಿಯೊಂದು ಅರ್ಜಿಯನ್ನು,-

(ಎ) ಆ ಸಂಘವು ಅಥವಾ ನಿಕಾಯವು ಜನತಾ ಪ್ರಾತಿನಿಧ್ಯ (ತಿದ್ದುಪಡಿ) ಅಧಿನಿಯಮ, ೧೯೮೮ (೧೯೮೯ರ ೧)ರ ಪ್ರಾರಂಭ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದರೆ, ಹಾಗೆ ಪ್ರಾರಂಭವಾದ ನಿಕಟ ತರುವಾಯದ ಅರವತ್ತು ದಿವಸಗಳೊಳಗೆ;

(ಬಿ) ಆ ಸಂಘ ಅಥವಾ ನಿಕಾಯವನ್ನು ಅಂಥ ಪ್ರಾರಂಭದ ತರುವಾಯ ರಚಿಸಲಾಗಿದ್ದರೆ ಅದರ ರಚನೆಯ ದಿನಾಂಕದ ನಿಕಟ ತರುವಾಯದ ಮೂವತ್ತು ದಿವಸಗಳೊಳಗೆ ಸಲ್ಲಿಸತಕ್ಕುದು.

(೩) (೧)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅರ್ಜಿಗೆ, ಆ ಸಂಘ ಅಥವಾ ನಿಕಾಯದ ಮುಖ್ಯ ನಿರ್ವಹಣಾ ಅಧಿಕಾರಿಯು (ಅಂಥ ಮುಖ್ಯ ನಿರ್ವಹಣಾ ಅಧಿಕಾರಿಯನ್ನು ಕಾರ್ಯದರ್ಶಿ ಎಂದು ಅಥವಾ ಯಾವುದೇ ಇತರ ಪದನಾಮದಿಂದ ಕರೆಯಲಿ) ಸಹಿ ಹಾಕಿರತಕ್ಕುದು ಮತ್ತು ಅದನ್ನು ಆಯೋಗದ ಕಾರ್ಯದರ್ಶಿಗೆ ಒಪ್ಪಿಸತಕ್ಕುದು ಅಥವಾ ಅಂಥ ಕಾರ್ಯದರ್ಶಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕುದು.

(೪) ಅಂಥ ಪ್ರತಿಯೊಂದು ಅರ್ಜಿಯು, ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕುದು, ಎಂದರೆ:-

(ಎ) ಸಂಘ ಅಥವಾ ನಿಕಾಯದ ಹೆಸರು;

(ಬಿ) ಅದರ ಮುಖ್ಯ ಕಚೇರಿ ಇರುವ ರಾಜ್ಯ;

(ಸಿ) ಅದಕ್ಕೆ ಸಂಬಂಧಪಟ್ಟ ಪತ್ರಗಳು ಮತ್ತು ಇತರ ಪತ್ರ ವ್ಯವಹಾರಗಳನ್ನು ಯಾವ ವಿಳಾಸಕ್ಕೆ ಕಳಿಸಬೇಕೋ ಆ ವಿಳಾಸ;

(ಡಿ) ಅದರ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಮತ್ತು ಇತರ ಪದಾಧಿಕಾರಿಗಳ ಹೆಸರುಗಳು;

(ಇ) ಅದರ ಸದಸ್ಯರ ಸಂಖ್ಯಾಬಲ ಮತ್ತು ಅದರ ಸದಸ್ಯರ ಪ್ರವರ್ಗಗಳು ಇದ್ದರೆ, ಪ್ರತಿಯೊಂದು ಪ್ರವರ್ಗದಲ್ಲಿನ ಸಂಖ್ಯಾಬಲ;

(ಎಫ್) ಅದು ಯಾವುದೇ ಸ್ಥಳೀಯ ಘಟಕಗಳನ್ನು ಹೊಂದಿದೆಯೇ, ಹಾಗಿದ್ದರೆ ಯಾವ ಮಟ್ಟಗಳಲ್ಲಿ;

(ಜಿ) ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿ ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದಲ್ಲಿ ಯಾವನೇ ಸದಸ್ಯ ಅಥವಾ ಸದಸ್ಯರು ಅದನ್ನು ಪ್ರತಿನಿಧಿಸುತ್ತಿರುವರೇ, ಹಾಗಿದ್ದರೆ ಅಂಥ ಸದಸ್ಯ ಅಥವಾ ಸದಸ್ಯರ ಸಂಖ್ಯೆ.

(೫) (೧)ನೆಯ ಉಪಪ್ರಕರಣದ ಮೇರೆಗಿನ ಅರ್ಜಿಯ ಜೊತೆ, ಯಾವುದೇ ಹೆಸರಿನಿಂದ ಕರೆಯಲಾಗುವ ಸಂಘ ಅಥವಾ ನಿಕಾಯದ ಜ್ಞಾಪನಪತ್ರ ಅಥವಾ ನಿಯಮಗಳು ಮತ್ತು ವಿನಿಯಮಗಳ ಪ್ರತಿಯು ಇರತಕ್ಕುದು. ಮತ್ತು ಅಂಥ ಜ್ಞಾಪನಪತ್ರವು ಅಥವಾ ನಿಯಮಗಳು ಮತ್ತು ವಿನಿಯಮಗಳು ಆ ಸಂಘ ಅಥವಾ ನಿಕಾಯವು ಕಾನೂನು ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನಕ್ಕೆ ಮತ್ತು ಸಮಾಜವಾದ, ಸರ್ವಧರ್ಮ ಸಮಭಾವ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ಸತ್ಯ, ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುವುದು ಎಂಬ ಮತ್ತು ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯನ್ನು ಎತ್ತಿಹಿಡಿಯುವುದು ಎಂಬ ನಿರ್ದಿಷ್ಟ ಉಪಬಂಧವನ್ನು ಒಳಗೊಂಡಿರತಕ್ಕುದು.

(೬) ಆಯೋಗವು ಸಂಘ ಅಥವಾ ನಿಕಾಯದಿಂದ ತಾನು ಯುಕ್ತವೆಂದು ಭಾವಿಸಬಹುದಾದಂಥ ಇತರ ವಿವರಗಳನ್ನು ತರಿಸಿಕೊಳ್ಳಬಹುದು.

(೭) ಆಯೋಗವು ತನ್ನ ಸ್ವಾಧೀನದಲ್ಲಿರುವ ಮೇಲೆ ಹೇಳಿದ ಎಲ್ಲ ವಿವರಗಳನ್ನು ಮತ್ತು ಯಾವುವೇ ಇತರೆ ಅವಶ್ಯಕ ಮತ್ತು ಸುಸಂಗತವಾದ ಅಂಶಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಸಂಘದ ಅಥವಾ ನಿಕಾಯದ ಪ್ರತಿನಿಧಿಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅದು, ಈ ಭಾಗದ ಉದ್ದೇಶಗಳಿಗಾಗಿ ಆ ಸಂಘ ಅಥವಾ ನಿಕಾಯವನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸಲು ತೀರ್ಮಾನಿಸತಕ್ಕುದು, ಅಥವಾ ಹಾಗೆ ನೋಂದಾಯಿಸದಿರಲು ತೀರ್ಮಾನಿಸತಕ್ಕುದು; ಮತ್ತು ಆಯೋಗವು ತನ್ನ ತೀರ್ಮಾನವನ್ನು ಆ ಸಂಘ ಅಥವಾ ನಿಕಾಯಕ್ಕೆ ತಿಳಿಸತಕ್ಕುದು:

ಪರಂತು, ಅಂಥ ಸಂಘ ಅಥವಾ ನಿಕಾಯದ ಜ್ಞಾಪನಪತ್ರ ಅಥವಾ ನಿಯಮಗಳು ಮತ್ತು ವಿನಿಯಮಗಳು (೫)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಗುಣವಾಗಿದ್ದ

ಹೊರತು, ಈ ಉಪಪ್ರಕರಣದ ಮೇರೆಗೆ ಯಾವುದೇ ಸಂಘ ಅಥವಾ ನಿಕಾಯವನ್ನು ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸತಕ್ಕುದಲ್ಲ.

(ಲ) ಆಯೋಗದ ತೀರ್ಮಾನವು ಅಂತಿಮವಾಗಿರತಕ್ಕುದು.

(ಳ) ಒಂದು ಸಂಘ ಅಥವಾ ನಿಕಾಯವನ್ನು ಮೇಲೆ ಹೇಳಿದಂತೆ ಒಂದು ರಾಜಕೀಯ ಪಕ್ಷವೆಂದು ನೋಂದಾಯಿಸಿದ ತರುವಾಯ, ಅದರ ಹೆಸರು, ಮುಖ್ಯ ಕಚೇರಿ, ಪದಾಧಿಕಾರಿಗಳು, ವಿಳಾಸ ಅಥವಾ ಯಾವುದೇ ಇತರ ಮುಖ್ಯ ವಿಷಯಗಳಲ್ಲಿ ಉಂಟಾಗುವ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ ಆಯೋಗಕ್ಕೆ ತಿಳಿಸತಕ್ಕುದು.

೨೯ಬಿ. ರಾಜಕೀಯ ಪಕ್ಷಗಳು ವಂತಿಗೆಯನ್ನು ಸ್ವೀಕರಿಸುವ ಹಕ್ಕು:- ಕಂಪನಿಗಳ ಅಧಿನಿಯಮ, ೧೯೫೬ರ (೧೯೫೬ರ ೧) ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ರಾಜಕೀಯ ಪಕ್ಷವು, ಸರ್ಕಾರಿ ಕಂಪನಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯಿಂದ ಅಥವಾ ಕಂಪನಿಯಿಂದ ಅದಕ್ಕೆ ಸ್ವಚ್ಛೆಯಿಂದ ನೀಡಿದ ಯಾವುದೇ ಮೊತ್ತದ ವಂತಿಗೆಯನ್ನು ಸ್ವೀಕರಿಸಬಹುದು:

ಪರಂತು, ಯಾವುದೇ ರಾಜಕೀಯ ಪಕ್ಷವು, ವಿದೇಶಿ ವಂತಿಗೆ (ನಿಯಂತ್ರಣ) ಅಧಿನಿಯಮ, ೧೯೭೬ರ (೧೯೭೬ರ ೪೬) ೨ನೇ ಪ್ರಕರಣದ (ಇ) ಖಂಡದ ಅಡಿಯಲ್ಲಿ ಪರಿಭಾಷಿಸಿದಂತೆ ಯಾವುದೇ ವಿದೇಶಿ ಮೂಲದಿಂದ ಯಾವುದೇ ವಂತಿಗೆಯನ್ನು ಸ್ವೀಕರಿಸಲು ಅರ್ಹವಾಗಿರತಕ್ಕದ್ದಲ್ಲ.

ವಿವರಣೆ:- ಈ ಪ್ರಕರಣದ ಮತ್ತು ೨೯ಸಿ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ''ಕಂಪನಿ" ಎಂದರೆ ೩ನೇ ಪ್ರಕರಣದಲ್ಲಿ ಪರಿಭಾಷಿಸಿರುವ ಕಂಪನಿ;

(ಬಿ) ''ಸರ್ಕಾರಿ ಕಂಪನಿ" ಎಂದರೆ ೬೧೭ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ಕಂಪನಿ; ಮತ್ತು

(ಸಿ) ''ವಂತಿಗೆ"ಯು ಕಂಪನಿಗಳ ಅಧಿನಿಯಮ, ೧೯೫೬ರ (೧೯೫೬ರ ೧) ೨೯೩ಎ ಪ್ರಕರಣದ ಅಡಿಯಲ್ಲಿ ಅದಕ್ಕೆ ನೀಡಿದ ಅರ್ಥವನ್ನು ಹೊಂದಿರುತ್ತದೆ ಮತ್ತು ರಾಜಕೀಯ ಪಕ್ಷಕ್ಕೆ ಯಾರೇ ವ್ಯಕ್ತಿಯು ನೀಡಿದ ಯಾವುದೇ ದೇಣಿಗೆ ಅಥವಾ ಚಂದಾವನ್ನು ಒಳಗೊಳ್ಳುತ್ತದೆ; ಮತ್ತು

(ಡಿ) ''ವ್ಯಕ್ತಿ" ಎಂಬ ಪದವು ಆದಾಯ ತೆರಿಗೆ ಅಧಿನಿಯಮ, ೧೯೬೧ರ (೧೯೬೧ರ ೪೩) ೨ನೇ ಪ್ರಕರಣದ (೩೧)ನೇ ಖಂಡದ ಅಡಿಯಲ್ಲಿ ಅದಕ್ಕೆ ನೀಡಲಾದ ಅರ್ಥವನ್ನು ಹೊಂದಿರುತ್ತದೆ, ಆದರೆ ಸರ್ಕಾರಿ ಕಂಪನಿ, ಸ್ಥಳೀಯ ಪ್ರಾಧಿಕಾರ ಮತ್ತು ಸರ್ಕಾರದಿಂದ ಪೂರ್ಣವಾಗಿ ಅಥವಾ ಭಾಗಶಃ ನಿಧಿಯನ್ನು ಪಡೆಯುವ ಪ್ರತಿಯೊಬ್ಬ ಕೃತಕ ನ್ಯಾಯಿಕ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

೨೯ಸಿ. ರಾಜಕೀಯ ಪಕ್ಷಗಳು ಸ್ವೀಕರಿಸಿದ ದೇಣಿಗೆಯ ಘೋಷಣೆ:- (೧) ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು, ಪ್ರತಿ ಹಣಕಾಸು ವರ್ಷದಲ್ಲಿ, ಈ ಮುಂದಿನವುಗಳಿಗೆ ಸಂಬಂಧಿಸಿದಂತೆ ವರದಿಯನ್ನು ತಯಾರಿಸತಕ್ಕದ್ದು, ಎಂದರೆ:-

(ಎ) ಆ ಹಣಕಾಸು ವರ್ಷದಲ್ಲಿ ಯಾರೇ ವ್ಯಕ್ತಿಯಿಂದ ಅಂಥ ರಾಜಕೀಯ ಪಕ್ಷವು ಸ್ವೀಕರಿಸಿದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೀರಿದ ವಂತಿಗೆ;

(ಬಿ) ಆ ಹಣಕಾಸು ವರ್ಷದಲ್ಲಿ ಸರ್ಕಾರಿ ಕಂಪನಿಗಳನ್ನು ಹೊರತುಪಡಿಸಿ ಇತರ ಕಂಪನಿಗಳಿಂದ ಅಂಥ ರಾಜಕೀಯ ಪಕ್ಷವು ಸ್ವೀಕರಿಸಿದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಮೀರಿದ ವಂತಿಗೆ.

(೨) (೧)ನೇ ಉಪಪ್ರಕರಣದ ಅಡಿಯಲ್ಲಿ ವರದಿಯು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು.

(೩) (೧)ನೇ ಉಪಪ್ರಕರಣದ ಅಡಿಯಲ್ಲಿ ಹಣಕಾಸು ವರ್ಷದ ವರದಿಯನ್ನು, ಆದಾಯ ತೆರಿಗೆ ಅಧಿನಿಯಮ, ೧೯೬೧ರ (೧೯೬೧ರ ೪೩) ೧೩೯ನೇ ಪ್ರಕರಣದ ಅಡಿಯಲ್ಲಿ ಆ ಹಣಕಾಸು ವರ್ಷದ ತನ್ನ ಆದಾಯದ ವಿವರಪಟ್ಟಿಕೆಯನ್ನು ಒದಗಿಸುವುದಕ್ಕೆ ನಿಗದಿತ ದಿನಾಂಕಕ್ಕೆ ಮುಂಚೆ ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

(೪) ಯಾವುದೇ ರಾಜಕೀಯ ಪಕ್ಷದ ಖಜಾಂಚಿ ಅಥವಾ ಈ ಬಗ್ಗೆ ರಾಜಕೀಯ ಪಕ್ಷದಿಂದ ಅಧಿಕೃತಗೊಂಡ ಯಾರೇ ಇತರ ವ್ಯಕ್ತಿಯು (೩)ನೇ ಉಪಪ್ರಕರಣದ ಅಡಿಯಲ್ಲಿ ವರದಿಯನ್ನು ಸಲ್ಲಿಸಲು ವಿಫಲನಾದಲ್ಲಿ, ತದನಂತರ, ಆದಾಯ ತೆರಿಗೆ ಅಧಿನಿಯಮ, ೧೯೬೧ ರಲ್ಲಿ (೧೯೬೧ರ ೪೩) ಏನೇ ಇದ್ದರೂ, ಅಂಥ ರಾಜಕೀಯ ಪಕ್ಷವು ಆ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ವಿನಾಯಿತಿ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

ಭಾಗ - V

ಚುನಾವಣೆಗಳನ್ನು ನಡೆಸುವುದು

ಅಧ್ಯಾಯ I - ಅಭ್ಯರ್ಥಿಗಳ ನಾಮ ನಿರ್ದೇಶನ

೩೦. ನಾಮ ನಿರ್ದೇಶನ ಪತ್ರಗಳು, ಇತ್ಯಾದಿಗಳಿಗಾಗಿ ದಿನಾಂಕಗಳನ್ನು ಗೊತ್ತುಪಡಿಸುವುದು:- ಸದಸ್ಯನನ್ನು ಅಥವಾ ಸದಸ್ಯರನ್ನು ಆಯ್ಕೆ ಮಾಡುವುದಕ್ಕೆ ಚುನಾವಣಾ ಕ್ಷೇತ್ರಗಳನ್ನು ಕೇಳಿಕೊಳ್ಳುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ -

(ಎ) ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು. ಆ ದಿನಾಂಕವು ಮೊದಲು ಹೇಳಿದ ಅಧಿಸೂಚನೆಯ ಪ್ರಕಟಣೆಯ

ದಿನಾಂಕದ ತರುವಾಯದ ಏಳನೆಯ ದಿವಸವಾಗಿರತಕ್ಕುದು, ಅಥವಾ ಆ ದಿವಸವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾದಿನವಲ್ಲದ, ತರುವಾಯ ಬರುವ ದಿವಸವಾಗಿರತಕ್ಕುದು;

(ಬಿ) ನಾಮ ನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ದಿನಾಂಕವನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ನಾಮ ನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿವಸವಾಗಿರತಕ್ಕುದು ಅಥವಾ, ಆ ದಿವಸವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು;

(ಸಿ) ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು. ಈ ದಿನಾಂಕವು ನಾಮ ನಿರ್ದೇಶನ ಪತ್ರದ ಪರಿಶೀಲನೆಗಾಗಿನ ದಿನಾಂಕದ ತರುವಾಯದ ಎರಡನೆಯ ದಿವಸವಾಗಿರತಕ್ಕುದು ಅಥವಾ, ಆ ದಿವಸವು ಸಾರ್ವಜನಿಕ ರಜೆ ದಿವಸವಾಗಿದ್ದರೆ, ಸಾರ್ವತ್ರಿಕ ರಜಾ ದಿವಸವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು;

(ಡಿ) ಅವಶ್ಯವಾದರೆ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ಅಥವಾ ಅದರ ಮೊದಲನೆಯ ದಿನಾಂಕವು ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕದ ತರುವಾಯದ ಹದಿನಾಲ್ಕನೆಯ ದಿವಸಕ್ಕಿಂತ ಮುಂಚಿತವಾದುದಾಗಿರತಕ್ಕುದಲ್ಲ; ಮತ್ತು

(ಇ) ಯಾವ ದಿನಾಂಕಕ್ಕೆ ಮುಂಚೆ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕುದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕುದು.

೩೧. ಚುನಾವಣೆಯ ಬಗ್ಗೆ ಸಾರ್ವಜನಿಕ ನೋಟೀಸು:- ೩೦ನೇ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಮೇಲೆ, ಚುನಾವಣಾ ಅಧಿಕಾರಿಯು ಉದ್ದೇಶಿತ ಚುನಾವಣೆಗಾಗಿ ಅಭ್ಯರ್ಥಿಗಳ ನಾಮ ನಿರ್ದೇಶನ ಪತ್ರಗಳನ್ನು ಆಹ್ವಾನಿಸಿ ಮತ್ತು ಆ ನಾಮನಿರ್ದೇಶನ ಪತ್ರಗಳನ್ನು ಒಪ್ಪಿಸಬೇಕಾದ ಸ್ಥಳವನ್ನು ನಿರ್ದಿಷ್ಟಪಡಿಸಿ, ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಅಂಥ ಚುನಾವಣೆ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕುದು.

೩೨. ಚುನಾವಣೆಗಾಗಿ ಅಭ್ಯರ್ಥಿಗಳ ನಾಮನಿರ್ದೇಶನ:- ಯಾವನೇ ವ್ಯಕ್ತಿಯು, ಸಂವಿಧಾನದ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಸಂದರ್ಭಾನುಸಾರ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, ೧೯೬೩ (೧೯೬೩ರ ೨೦)ರ ಮೇರೆಗೆ ಒಂದು ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು

ಅರ್ಹನಾಗಿದ್ದರೆ ಅವನನ್ನು ಆ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಗಾಗಿ ಒಬ್ಬ ಅಭ್ಯರ್ಥಿಯೆಂದು ನಾಮನಿರ್ದೇಶನ ಮಾಡಬಹುದು.

೩೩. ನಾಮನಿರ್ದೇಶನ ಪತ್ರವನ್ನು ಸಲ್ಲಿಸುವುದು ಮತ್ತು ಕಾನೂನು ಮಾನ್ಯ ನಾಮನಿರ್ದೇಶನ ಪತ್ರಕ್ಕಾಗಿನ ಅಗತ್ಯತೆಗಳು:- (೧) ೩೦ನೇ ಪ್ರಕರಣದ (ಎ) ಖಂಡದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ಅಥವಾ ಅವನ ಸೂಚಕನ ಮೂಲಕ ಪೂರ್ವಾಹ್ನ ೧೧ ಗಂಟೆಯ ಮತ್ತು ಅಪರಾಹ್ನ ೩ ಗಂಟೆಯ ನಡುವಣ ಸಮಯದಲ್ಲಿ, ಗೊತ್ತುಪಡಿಸಿದ ನಮೂನೆಯಲ್ಲಿ ಭರ್ತಿ ಮಾಡಿರುವ ಮತ್ತು ಅಭ್ಯರ್ಥಿ ಮತ್ತು ಆ ಚುನಾವಣಾ ಕ್ಷೇತ್ರದ ಮತದಾರನು ಸೂಚಕನೆಂದು ಸಹಿ ಮಾಡಿದ ನಾಮನಿರ್ದೇಶನ ಪತ್ರವನ್ನು ೩೧ನೇ ಪ್ರಕರಣದ ಮೇರೆಗೆ ಹೊರಡಿಸಿದ ನೋಟೀಸಿನಲ್ಲಿ ಈ ಬಗ್ಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಚುನಾವಣಾಧಿಕಾರಿಗೆ ಒಪ್ಪಿಸತಕ್ಕುದು:

ಪರಂತು, ಮಾನ್ಯತೆ ಪಡೆದ ಒಂದು ರಾಜಕೀಯ ಪಕ್ಷವು ನಿಲ್ಲಿಸಿರದ ಅಭ್ಯರ್ಥಿಯು, ಒಂದು ಚುನಾವಣಾ ಕ್ಷೇತ್ರದ ಮತದಾರರಾಗಿರುವ ಹತ್ತು ಜನ ಸೂಚಕರು ನಾಮನಿರ್ದೇಶನ ಪತ್ರಕ್ಕೆ ರುಜು ಮಾಡಿದ್ದ ಹೊರತು ಅವನು ಆ ಚುನಾವಣಾ ಕ್ಷೇತ್ರದಿಂದ ಚುನಾವಣೆಗಾಗಿ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿದ್ದಾನೆಂದು ಭಾವಿಸತಕ್ಕದ್ದಲ್ಲ:

ಮತ್ತೂ ಪರಂತು, ಸಾರ್ವಜನಿಕ ರಜಾ ದಿನದಂದು ಯಾವುದೇ ನಾಮನಿರ್ದೇಶನ ಪತ್ರವನ್ನು ರಿಟರ್ನಿಂಗ್ ಆಫೀಸರನಿಗೆ ಒಪ್ಪಿಸತಕ್ಕದ್ದಲ್ಲ:

ಅದೂ ಅಲ್ಲದೆ, ಸ್ಥಳೀಯ ಪ್ರಾಧಿಕಾರಗಳ ಚುನಾವಣಾ ಕ್ಷೇತ್ರ, ಪದವೀಧರರ ಚುನಾವಣಾ ಕ್ಷೇತ್ರ ಅಥವಾ ಶಿಕ್ಷಕರ ಚುನಾವಣಾ ಕ್ಷೇತ್ರಗಳ ಸಂದರ್ಭದಲ್ಲಿ "ಸೂಚಕನಾಗಿ ಚುನಾವಣಾ ಕ್ಷೇತ್ರದ ಮತದಾರ" ಎಂಬುದಕ್ಕೆ ಮಾಡಿದ ಉಲ್ಲೇಖವನ್ನು "ಸೂಚಕರಾಗಿ ಚುನಾವಣಾ ಕ್ಷೇತ್ರದ ಮತದಾರರ ಪೈಕಿ ಶೇಕಡಾ ಹತ್ತರಷ್ಟು ಮತದಾರರು ಅಥವಾ ಐವತ್ತು ಮತದಾರರು - ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು" ಎಂಬುದಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(೧ಎ) (೧)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಿಕ್ಕಿಂ ವಿಧಾನ ಸಭೆಯ ಚುನಾವಣೆಗಾಗಿ (ಸಂವಿಧಾನದ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಆ ರಾಜ್ಯದ ವಿಧಾನ ಸಭೆಯಾಗಿರುವುದಾಗಿ ಭಾವಿಸಲಾಗಿದೆ) ಚುನಾವಣಾ ಅಧಿಕಾರಿಗೆ ಒಪ್ಪಿಸಬೇಕಾದ ನಾಮ ನಿರ್ದೇಶನ ಪತ್ರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಇರತಕ್ಕುದು:

ಪರಂತು, ಸದರಿ ನಾಮಪತ್ರಕ್ಕೆ ಆ ನಾಮಪತ್ರವನ್ನು ಸಮ್ಮತಿಸಿರುವ ಅಭ್ಯರ್ಥಿಯ; ಮತ್ತು

(ಎ) ಭೂಟಿಯಾ - ಲಿಪ್ಚಾ ಮೂಲದ ಸಿಕ್ಕಿಮೀಯರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಸಹ ಸೂಚಕರೆಂದು ಮತ್ತು ಆ ಚುನಾವಣಾ ಕ್ಷೇತ್ರದ ಇಪ್ಪತ್ತು ಸದಸ್ಯರು ಅನುಮೋದಕರೆಂದು;

(ಬಿ) ಸಂಘ ಜನರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಆ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಸಹ ಸೂಚಕರೆಂದು ಮತ್ತು ಆ ಚುನಾವಣಾ ಕ್ಷೇತ್ರದ ಕನಿಷ್ಠ ಇಪ್ಪತ್ತು ಮತದಾರರು ಅನುಮೋದಕರೆಂದು;

(ಸಿ) ನೇಪಾಳಿ ಮೂಲದ ಸಿಕ್ಕಿಮೀಯರಿಗಾಗಿ ಮೀಸಲಿಟ್ಟ ಸ್ಥಾನದ ಸಂದರ್ಭದಲ್ಲಿ ಚುನಾವಣಾ ಕ್ಷೇತ್ರದ ಒಬ್ಬ ಮತದಾರನು ಸೂಚಕನೆಂದು ಸಹಿ ಹಾಕಿರತಕ್ಕುದು:

ಮತ್ತೂ ಪರಂತು, ಯಾವುದೇ ನಾಮನಿರ್ದೇಶನದ ಪತ್ರವನ್ನು ಚುನಾವಣಾ ಅಧಿಕಾರಿಗೆ ಸಾರ್ವಜನಿಕ ರಜಾ ದಿವಸವಾಗಿರುವ ದಿನದಂದು ಒಪ್ಪಿಸತಕ್ಕುದಲ್ಲ.

(೨) ಯಾವುದೇ ಸ್ಥಾನವನ್ನು ಮೀಸಲಿಟ್ಟಿರುವ ಚುನಾವಣಾ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯು ತಾನು ಸದಸ್ಯನಾಗಿರುವ ನಿರ್ದಿಷ್ಟ ಜಾತಿ ಅಥವಾ ಬುಡಕಟ್ಟನ್ನು ಮತ್ತು ಯಾವ ಪ್ರದೇಶದ ಸಂಬಂಧದಲ್ಲಿ ಆ ಜಾತಿ ಅಥವಾ ಬುಡಕಟ್ಟು, ಸಂದರ್ಭಾನುಸಾರ ಆ ರಾಜ್ಯದ ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟು ಆಗಿದೆಯೋ ಆ ಪ್ರದೇಶವನ್ನು ನಿರ್ದಿಷ್ಟಪಡಿಸುವ ಅವನ ಘೋಷಣೆಯನ್ನು ಅವನ ನಾಮನಿರ್ದೇಶನ ಪತ್ರವು ಒಳಗೊಂಡಿರುವ ಹೊರತು, ಆ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಯಾಗಲು ಅವನು ಅರ್ಹನಾಗಿರುವುದಾಗಿ ಭಾವಿಸತಕ್ಕುದಲ್ಲ.

(೩) ಅಭ್ಯರ್ಥಿಯು ೯ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಪದ ಧಾರಣ ಮಾಡಿದ್ದು ವಜಾ ಆಗಿರುವ ವ್ಯಕ್ತಿಯಾಗಿರುವಲ್ಲಿ ಮತ್ತು ಹಾಗೆ ವಜಾ ಆದಂದಿನಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾಗಿಲ್ಲದಿರುವಲ್ಲಿ ಅಂಥ ವ್ಯಕ್ತಿಯ ನಾಮನಿರ್ದೇಶನದ ಪತ್ರವು ಅವನನ್ನು ಭ್ರಷ್ಟಾಚಾರಕ್ಕಾಗಿ ಅಥವಾ ರಾಜ ದ್ರೋಹಕ್ಕಾಗಿ ವಜಾ ಮಾಡಿಲ್ಲವೆಂಬುದಾಗಿ ಚುನಾವಣಾ ಆಯೋಗವು ನಿಯಮಿಸಿದ ರೀತಿಯಲ್ಲಿ ನೀಡಿರುವ ಪ್ರಮಾಣ ಪತ್ರದೊಂದಿಗೆ ಕೂಡಿರುವ ಹೊರತು, ಅಂಥ ವ್ಯಕ್ತಿಯನ್ನು ಕ್ರಮಬದ್ಧವಾಗಿ ಅಭ್ಯರ್ಥಿಯೆಂದು ನಾಮನಿರ್ದೇಶನ ಮಾಡಿರುವುದಾಗಿ ಭಾವಿಸತಕ್ಕುದಲ್ಲ.

(೪) ನಾಮನಿರ್ದೇಶನ ಪತ್ರವನ್ನು ಸಲ್ಲಿಸಿದ ತರುವಾಯ ಆ ನಾಮನಿರ್ದೇಶನ ಪತ್ರದಲ್ಲಿ ನಮೂದಿಸಿರುವ ಆ ಅಭ್ಯರ್ಥಿಯ ಮತ್ತು ಅವನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಆ ಮತದಾರರ ಪಟ್ಟಿಗಳಲ್ಲಿ ನಮೂದು ಮಾಡಿರುವಂತಹವೇ ಆಗಿವೆ ಎಂಬುದಾಗಿ ಚುನಾವಣಾ ಅಧಿಕಾರಿಯು ಮನವರಿಕೆ ಮಾಡಿಕೊಳ್ಳತಕ್ಕುದು:

ಪರಂತು, ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದಲ್ಲಿ ನಮೂದಿಸಿರುವ ಅಭ್ಯರ್ಥಿಯ ಅಥವಾ ಅವನ ಸೂಚಕನ ಅಥವಾ ಯಾವನೇ ಇತರೆ ವ್ಯಕ್ತಿಯ ಹೆಸರಿನ ಸಂಬಂಧದಲ್ಲಿನ ಅಥವಾ ಯಾವುದೇ ಸ್ಥಳದ ಸಂಬಂಧದಲ್ಲಿನ ತಪ್ಪು ಹೆಸರು ಅಥವಾ ಅನಿಷ್ಟ ೃಷ್ಟ ವರ್ಣನೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು ಮತ್ತು ಆ ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದಲ್ಲಿನ ಯಾವನೇ ಅಂಥ ವ್ಯಕ್ತಿಯ ಮತದಾರರ ಪಟ್ಟಿಯ ಸಂಖ್ಯೆಗಳ ಸಂಬಂಧದಲ್ಲಿನ ಯಾವುದೇ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು, ಆ ವ್ಯಕ್ತಿಯ ಅಥವಾ ಸ್ಥಳದ ಹೆಸರಿಗೆ ಸಂಬಂಧಪಟ್ಟಂತಹ ವರ್ಣನೆಯನ್ನು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವಂತಹುದು ಆಗಿರುವ ಯಾವುದೇ ಸಂದರ್ಭದಲ್ಲಿ ಅಂಥ ವ್ಯಕ್ತಿ ಅಥವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಆ ಮತದಾರರ ಪಟ್ಟಿ ಅಥವಾ ನಾಮನಿರ್ದೇಶನ ಪತ್ರದ ಪೂರ್ಣ ಜಾರಿಗೆ ಬಾಧಕವಾಗತಕ್ಕುದಲ್ಲ; ಮತ್ತು ಚುನಾವಣಾ ಅಧಿಕಾರಿಯು ಅಂಥ ಯಾವುದೇ ತಪ್ಪು ಹೆಸರು ಅಥವಾ ಅನಿಷ್ಟ ೃಷ್ಟ ವರ್ಣನೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವನ್ನು ಸರಿಪಡಿಸಲು ಅವಕಾಶ ನೀಡತಕ್ಕುದು ಮತ್ತು ಅವಶ್ಯವಿರುವಲ್ಲಿ ಮತದಾರರ ಪಟ್ಟಿಯಲ್ಲಿನ ಅಥವಾ ನಾಮಪತ್ರದಲ್ಲಿನ ಅಂಥ ಯಾವುದೇ ತಪ್ಪು ಹೆಸರು, ಅನಿಷ್ಟ ೃಷ್ಟ ವರ್ಣನೆ, ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವನ್ನು ಗಮನಿಸಕೂಡದೆಂದು ನಿರ್ದೇಶಿಸತಕ್ಕುದು.

(೫) ಅಭ್ಯರ್ಥಿಯು ಬೇರೆ ಚುನಾವಣಾ ಕ್ಷೇತ್ರದ ಮತದಾರನಾಗಿರುವಲ್ಲಿ, ಆ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯ ಅಥವಾ ಅದರ ಸುಸಂಬದ್ಧ ಭಾಗದ ಒಂದು ಪ್ರತಿಯನ್ನು ಅಥವಾ ಅಂಥ ಪಟ್ಟಿಯಲ್ಲಿನ ಸುಸಂಬದ್ಧ ನಮೂದುಗಳ ಒಂದು ಪ್ರಮಾಣೀಕೃತ ಪ್ರತಿಯನ್ನು ನಾಮನಿರ್ದೇಶನ ಪತ್ರದ ಜೊತೆಗೆ ದಾಖಲು ಮಾಡಿರದಿದ್ದರೆ, ಅದನ್ನು ಪರಿಶೀಲನೆಯ ಸಮಯದಲ್ಲಿ ಚುನಾವಣಾ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕುದು.

(೬) ಈ ಪ್ರಕರಣದಲ್ಲಿರುವುದು ಯಾವುದೂ, ಯಾವನೇ ಅಭ್ಯರ್ಥಿಯನ್ನು ಒಂದಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರಗಳ ಮೂಲಕ ನಾಮನಿರ್ದೇಶನ ಮಾಡುವುದಕ್ಕೆ ಪ್ರತಿಬಂಧಕವಾಗತಕ್ಕುದಲ್ಲ:

ಪರಂತು, ಒಂದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಗಾಗಿ ಯಾವನೇ ಅಭ್ಯರ್ಥಿಯು ಅಥವಾ ಅವನ ಪರವಾಗಿ ನಾಲ್ಕಕ್ಕಿಂತ ಹೆಚ್ಚು ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸತಕ್ಕುದಲ್ಲ ಅಥವಾ ಚುನಾವಣಾ ಅಧಿಕಾರಿಯು ಅವುಗಳನ್ನು ಅಂಗೀಕರಿಸತಕ್ಕುದಲ್ಲ.

(೭) (೬)ನೇ ಉಪ-ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುವೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ ಒಬ್ಬ ವ್ಯಕ್ತಿಯು,-

(ಎ) ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ (ಎಲ್ಲ ಸಂಸದೀಯ ಚುನಾವಣಾ ಕ್ಷೇತ್ರಗಳಿಗೆ ಚುನಾವಣೆಯು ಏಕ ಕಾಲಕ್ಕೆ ನಡೆಯಲಿ ಅಥವಾ ನಡೆಯದಿರಲಿ) ಸಂದರ್ಭದಲ್ಲಿ ಎರಡಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ;

(ಬಿ) ರಾಜ್ಯದ ವಿಧಾನಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ (ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಯಲಿ ಅಥವಾ ನಡೆಯದಿರಲಿ), ಆ ರಾಜ್ಯದ ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ;

(ಸಿ) ವಿಧಾನ ಪರಿಷತ್ತನ್ನು ಹೊಂದಿರುವಂಥ ರಾಜ್ಯದಲ್ಲಿ ಅಂಥ ಪರಿಷತ್ತಿಗೆ ನಡೆಯುವ ದ್ವೆ Êವಾರ್ಷಿಕ ಚುನಾವಣೆಯ ಸಂದರ್ಭದಲ್ಲಿ, ಆ ರಾಜ್ಯದಲ್ಲಿನ ಎರಡಕ್ಕಿಂತ ಹೆಚ್ಚು ಪರಿಷತ್ ಚುನಾವಣಾ ಕ್ಷೇತ್ರಗಳಿಂದ;

(ಡಿ) ಒಂದು ರಾಜ್ಯಕ್ಕೆ ಹಂಚಿಕೆ ಮಾಡಲಾದ ಎರಡು ಅಥವಾ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ರಾಜ್ಯಸಭೆಗೆ ನಡೆಯುವ ದ್ವೈವಾರ್ಷಿಕ ಚುನಾವಣೆಯ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ;

(ಇ) ಏಕ ಕಾಲಕ್ಕೆ ಎರಡು ಅಥವಾ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ ಲೋಕಸಭೆಗೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳಿಂದ;

(ಎಫ್) ಏಕ ಕಾಲಕ್ಕೆ ಎರಡು ಅಥವಾ ಅದಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ ವಿಧಾನಸಭೆಗೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ವಿಧಾನಸಭಾ ಕ್ಷೇತ್ರಗಳಿಂದ;

(ಜಿ) ಒಂದು ರಾಜ್ಯಕ್ಕೆ ಹಂಚಿಕೆ ಮಾಡಲಾದ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಸಭಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ ಏಕ ಕಾಲಕ್ಕೆ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ, ಅಂಥ ಎರಡಕ್ಕಿಂತ ಹೆಚ್ಚು ಸ್ಥಾನಗಳನ್ನು ಭರ್ತಿ ಮಾಡುವುದಕ್ಕಾಗಿ;

(ಹೆಚ್) ವಿಧಾನ ಪರಿಷತ್ತನ್ನು ಹೊಂದಿರುವಂಥ ರಾಜ್ಯದ ಎರಡು ಅಥವಾ ಹೆಚ್ಚು ಪರಿಷತ್ ಚುನಾವಣಾ ಕ್ಷೇತ್ರಗಳಿಗೆ ಏಕ ಕಾಲದಲ್ಲಿ ನಡೆಯುವ ಉಪ ಚುನಾವಣೆಗಳ ಸಂದರ್ಭದಲ್ಲಿ ಅಂಥ ಎರಡಕ್ಕಿಂತ ಹೆಚ್ಚು ವಿಧಾನ ಪರಿಷತ್ ಚುನಾವಣಾ ಕ್ಷೇತ್ರಗಳಿಂದ

- ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶಿತನಾಗತಕ್ಕದ್ದಲ್ಲ.

ವಿವರಣೆ:- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಚುನಾವಣಾ ಆಯೋಗವು, ೧೪೭, ೧೪೯, ೧೫೦ನೇ ಪ್ರಕರಣ ಅಥವಾ ಸಂದರ್ಭಾನುಸಾರ ೧೫೧ನೇ ಪ್ರಕರಣದ ಮೇರೆಗೆ ಉಪ-ಚುನಾವಣೆಗೆ ಕರೆ ನೀಡುವ ಅಧಿಸೂಚನೆಯನ್ನು ಒಂದೇ ದಿನಾಂಕದಂದು

ಹೊರಡಿಸಿದ್ದರೆ ಎರಡು ಅಥವಾ ಹೆಚ್ಚು ಉಪ-ಚುನಾವಣೆಗಳು ಏಕ ಕಾಲದಲ್ಲಿ ನಡೆಯುತ್ತವೆಂದು ಭಾವಿಸತಕ್ಕುದು.

೩೩ಎ. ಮಾಹಿತಿ ಪಡೆಯುವ ಹಕ್ಕು:- (೧) ಅಭ್ಯರ್ಥಿಯು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಿದ ನಾಮನಿರ್ದೇಶನ ಪತ್ರದಲ್ಲಿ ಅಗತ್ಯವಾಗಿ ಒದಗಿಸಬೇಕಾದಂಥ ಯಾವುದೇ ಮಾಹಿತಿಯಲ್ಲದೆ, ಈ ಕೆಳಕಂಡ ಮಾಹಿತಿಯನ್ನು ಸಹ ಒದಗಿಸತಕ್ಕದ್ದು,-

(i) ಅವನು ಇತ್ಯರ್ಥದಲ್ಲಿರುವ ಮೊಕದ್ದಮೆಯಲ್ಲಿ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಿಂದ ರೂಪಿಸಲಾದ ಆಪಾದನೆಯಿಂದಾಗಿ ಇತ್ಯರ್ಥದಲ್ಲಿರುವ ಮೊಕದ್ದಮೆಯಲ್ಲಿ ಎರಡು ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ಶಿಕ್ಷಾರ್ಹವಾದ ಯಾವುದೇ ಅಪರಾಧದ ಆರೋಪಿಯಾಗಿದ್ದಾನೆಯೇ;

(ii) ಅವನು [(೧)ನೇ ಉಪಪ್ರಕರಣದಲ್ಲಿ ಅಥವಾ (೨)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ, ಅಥವಾ ೮ನೇ ಪ್ರಕರಣದ (೩)ನೇ ಉಪಪ್ರಕರಣದಲ್ಲಿ ಒಳಗೊಂಡ ಯಾವುದೇ ಅಪರಾಧವನ್ನು ಹೊರತುಪಡಿಸಿ] ಅಪರಾಧದ ಅಪರಾಧ ನಿರ್ಣೇತನಾಗಿ ಮತ್ತು ಒಂದು ವರ್ಷ ಅಥವಾ ಹೆಚ್ಚಿನ ಅವಧಿಯ ಕಾರಾವಾಸದ ಶಿಕ್ಷೆಯ ಆದೇಶಕ್ಕೆ ಗುರಿಯಾಗಿರುವನೆ.

(೨) ಅಭ್ಯರ್ಥಿಯಾಗಲಿ ಅಥವಾ ಸಂದರ್ಭಾನುಸಾರ ಅವನ ಸೂಚಕನಾಗಲಿ, ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನ ಪತ್ರವನ್ನು ಚುನಾವಣಾ ಅಧಿಕಾರಿಗೆ ಒಪ್ಪಿಸುವ ಸಮಯದಲ್ಲಿ (೧)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾಹಿತಿಯನ್ನು ಪರಿಶೀಲಿಸಿದ ಬಗ್ಗೆ ನಿಯಮಿಸಲಾದ ನಮೂನೆಯಲ್ಲಿ ಅಭ್ಯರ್ಥಿಯು ಮಾಡಿರುವ ಶಪಥ ಪತ್ರವನ್ನು ಸಹ ಅವನಿಗೆ ಒಪ್ಪಿಸತಕ್ಕದ್ದು.

(೩) (೧)ನೇ ಉಪಪ್ರಕರಣದ ಮೇರೆಗೆ ಮಾಹಿತಿಯನ್ನು ತನಗೆ ಒದಗಿಸಿದ ನಂತರ ಆದಷ್ಟು ಬೇಗನೇ, ಚುನಾವಣಾ ಅಧಿಕಾರಿಯು, ನಾಮನಿರ್ದೇಶನ ಪತ್ರವನ್ನು ಯಾವ ಚುನಾವಣಾ ಕ್ಷೇತ್ರಕ್ಕೆ ಸಲ್ಲಿಸಲಾಗಿದೆಯೋ ಆ ಕ್ಷೇತ್ರಕ್ಕೆ ಸಂಬಂಧಿಸಿದ ಮತದಾರರ ಮಾಹಿತಿಗಾಗಿ ತನ್ನ ಕಛೇರಿಯಲ್ಲಿ ಎದ್ದು ಕಾಣುವಂಥ ಸ್ಥಳದಲ್ಲಿ (೨)ನೇ ಉಪಪ್ರಕರಣದ ಮೇರೆಗೆ, ಒಪ್ಪಿಸಲಾದ ಶಪಥ ಪತ್ರದ ಪ್ರತಿಯನ್ನು ಅಂಟಿಸುವ ಮೂಲಕ ಮೇಲೆ ಹೇಳಿದ ಮಾಹಿತಿಯನ್ನು ಪ್ರದರ್ಶಿಸತಕ್ಕದ್ದು.

೩೩ಬಿ. ಅಭ್ಯರ್ಥಿಯು ಅಧಿನಿಯಮ ಮತ್ತು ನಿಯಮಗಳ ಮೇರೆಗೆ ಮಾತ್ರ ಮಾಹಿತಿಯನ್ನು ಒದಗಿಸುವುದು:- ಯಾವುದೇ ನ್ಯಾಯಾಲಯದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಅಥವಾ ಚುನಾವಣಾ ಆಯೋಗವು ನೀಡಿದ ಯಾವುದೇ ನಿರ್ದೇಶನದಲ್ಲಿ, ಆದೇಶದಲ್ಲಿ ಅಥವಾ ಯಾವುದೇ ಇತರೆ

ಸೂಚನೆಯಲ್ಲಿ ಏನೇ ಇದ್ದರೂ, ಯಾವ ಅಭ್ಯರ್ಥಿಯು ಅವನ ಚುನಾವಣಾ ಸಂಬಂಧದಲ್ಲಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಬಹಿರಂಗಪಡಿಸಬೇಕಾಗಿಲ್ಲದ ಅಥವಾ ಒದಗಿಸಬೇಕಾಗಿಲ್ಲದ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಲು ಅಥವಾ ಒದಗಿಸಲು ಬದ್ಧನಾಗಿರತಕ್ಕದ್ದಲ್ಲ.

೩೪. ಠೇವಣಿಗಳು:- (೧) ಒಬ್ಬ ಅಭ್ಯರ್ಥಿಯು,-

(ಎ) ಸಂಸದೀಯ ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳ ಮೊತ್ತವನ್ನು ಅಥವಾ ಅಭ್ಯರ್ಥಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವಲ್ಲಿ, ಐದು ಸಾವಿರ ರೂಪಾಯಿ ಮೊತ್ತವನ್ನು; ಮತ್ತು

(ಬಿ) ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಯ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳ ಮೊತ್ತವನ್ನು ಅಥವಾ ಅಭ್ಯರ್ಥಿಯು ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿನ ಸದಸ್ಯನಾಗಿರುವಲ್ಲಿ ಎರಡು ಸಾವಿರದ ಐದು ನೂರು ರೂಪಾಯಿ ಮೊತ್ತವನ್ನು

- ಠೇವಣಿ ಇಟ್ಟ ಹೊರತು ಅಥವಾ ಇಡುವ ವ್ಯವಸ್ಥೆ ಮಾಡಿದ ಹೊರತು ಅವನು ಒಂದು ಚುನಾವಣಾ ಕ್ಷೇತ್ರದಿಂದ ನಡೆಯುವ ಚುನಾವಣೆಗೆ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುವನೆಂದು ಭಾವಿಸತಕ್ಕುದಲ್ಲ:

ಪರಂತು, ಒಂದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಗೆ ಒಬ್ಬ ಅಭ್ಯರ್ಥಿಯನ್ನು ಒಂದಕ್ಕಿಂತ ಹೆಚ್ಚು ನಾಮಪತ್ರಗಳ ಮೂಲಕ ನಾಮನಿರ್ದೇಶನ ಮಾಡಿರುವಲ್ಲಿ, ಈ ಉಪಪ್ರಕರಣದ ಮೇರೆಗೆ ಒಂದಕ್ಕಿಂತ ಹೆಚ್ಚು ಠೇವಣಿಯನ್ನು ಇಡುವುದು ಅಗತ್ಯವಾಗತಕ್ಕುದಲ್ಲ.

(೨) (೧)ನೇ ಉಪಪ್ರಕರಣದ ಮೇರೆಗೆ ಠೇವಣಿ ಇಡಲು ಅಗತ್ಯಪಡಿಸಿರುವ ಯಾವುದೇ ಮೊತ್ತವನ್ನು, ಸಂದರ್ಭಾನುಸಾರ, ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಅಥವಾ (೧ಎ) ಉಪಪ್ರಕರಣದ ಮೇರೆಗೆ ನಾಮಪತ್ರವನ್ನು ಸಲ್ಲಿಸುವ ಕಾಲದಲ್ಲಿ ಅಭ್ಯರ್ಥಿಯು ಅಂಥ ಮೊತ್ತವನ್ನು ನಗದು ರೂಪದಲ್ಲಿ ಚುನಾವಣಾ ಅಧಿಕಾರಿಯ ಬಳಿ ಠೇವಣಿ ಇಟ್ಟಿರುವ ಅಥವಾ ಇಡುವಂತೆ ಮಾಡಿರುವ ಹೊರತು ಅಥವಾ ಸದರಿ ಮೊತ್ತವನ್ನು ಅವನು ಅಥವಾ ಅವನ ಪರವಾಗಿ ಭಾರತದ ರಿಸರ್ವ್ ಬ್ಯಾಂಕ್‌ನಲ್ಲಿ ಅಥವಾ ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಟ್ಟಿರುವ ಬಗ್ಗೆ ರಸೀತಿಯನ್ನು ನಾಮನಿರ್ದೇಶನ ಪತ್ರದ ಜೊತೆಗೆ ಲಗತ್ತಿಸಿರುವ ಹೊರತು, ಆ ಉಪಪ್ರಕರಣದ ಮೇರೆಗೆ ಠೇವಣಿ ಇಡಲಾಗಿದೆಯೆಂಬುದಾಗಿ ಭಾವಿಸತಕ್ಕುದಲ್ಲ.

೩೫. ನಾಮನಿರ್ದೇಶನ ಪತ್ರಗಳು ಮತ್ತು ಅವುಗಳ ಪರಿಶೀಲನೆಯ ಕಾಲ ಮತ್ತು ಸ್ಥಳದ ಬಗ್ಗೆ ನೋಟೀಸು:- ಚುನಾವಣಾ ಅಧಿಕಾರಿಯು ಸಂದರ್ಭಾನುಸಾರ, ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಅಥವಾ (೧ಎ) ಉಪಪ್ರಕರಣದ ಮೇರೆಗೆ

ನಾಮನಿರ್ದೇಶನ ಪತ್ರವನ್ನು ಸ್ವೀಕರಿಸಿದ ತರುವಾಯ, ಅದನ್ನು ಒಪ್ಪಿಸುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಲಾದ ದಿನಾಂಕ, ಕಾಲ ಮತ್ತು ಸ್ಥಳವನ್ನು ತಿಳಿಸತಕ್ಕುದು ಮತ್ತು ಆ ನಾಮನಿರ್ದೇಶನ ಪತ್ರದ ಮೇಲೆ ಅದರ ಕ್ರಮಸಂಖ್ಯೆಯನ್ನು ನಮೂದು ಮಾಡತಕ್ಕುದು ಮತ್ತು ಆ ನಾಮನಿರ್ದೇಶನ ಪತ್ರವನ್ನು ತನಗೆ ಒಪ್ಪಿಸಿರುವ ದಿನಾಂಕ ಮತ್ತು ಸಮಯವನ್ನು ವಿವರಿಸುವಂಥ ಪ್ರಮಾಣ ಪತ್ರಕ್ಕೆ ಸಹಿ ಹಾಕತಕ್ಕುದು; ಮತ್ತು ಆ ತರುವಾಯ ಆದಷ್ಟು ಬೇಗನೆ, ಆ ಅಭ್ಯರ್ಥಿ ಮತ್ತು ಸೂಚಕ ಇವರಿಬ್ಬರ ಬಗ್ಗೆ ಆ ನಾಮನಿರ್ದೇಶನ ಪತ್ರದಲ್ಲಿ ಒಳಗೊಂಡಿರುವಂಥವೇ ವಿವರಗಳನ್ನು ಒಳಗೊಂಡಿರುವ ನಾಮನಿರ್ದೇಶನ ಪತ್ರದ ನೋಟೀಸನ್ನು ತನ್ನ ಕಚೇರಿಯಲ್ಲಿ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕುದು.

೩೬. ನಾಮನಿರ್ದೇಶನ ಪತ್ರಗಳ ಪರಿಶೀಲನೆ:- (೧) ೩೦ನೇ ಪ್ರಕರಣದ ಮೇರೆಗೆ ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು, ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರು, ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಸೂಚಕನು, ಮತ್ತು ಪ್ರತಿಯೊಬ್ಬ ಅಭ್ಯರ್ಥಿಯು ಲಿಖಿತದಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಳಿಸಿರುವ ಒಬ್ಬ ಇತರ ವ್ಯಕ್ತಿಯು, ಚುನಾವಣಾ ಅಧಿಕಾರಿಯು ಗೊತ್ತುಪಡಿಸಬಹುದಾದಂಥ ಕಾಲ ಮತ್ತು ಸ್ಥಳದಲ್ಲಿ ಹಾಜರಾಗಬಹುದು, ಆದರೆ ಇತರ ಯಾವ ವ್ಯಕ್ತಿಯೂ ಅಲ್ಲ, ಮತ್ತು ಚುನಾವಣಾ ಅಧಿಕಾರಿಯು, ೩೩ನೇ ಪ್ರಕರಣದಲ್ಲಿ ವಿಧಿಸಿರುವ ಕಾಲದೊಳಗೆ ಮತ್ತು ರೀತಿಯಲ್ಲಿ ಒಪ್ಪಿಸಲಾಗಿರುವ ಎಲ್ಲ ಅಭ್ಯರ್ಥಿಗಳ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸುವುದಕ್ಕಾಗಿ ಅವರಿಗೆ ಎಲ್ಲ ಯುಕ್ತ ಸೌಲಭ್ಯಗಳನ್ನು ನೀಡತಕ್ಕುದು.

(೨) ಚುನಾವಣಾ ಅಧಿಕಾರಿಯು ಆ ತರುವಾಯ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸತಕ್ಕುದು ಮತ್ತು ಯಾವುದೇ ನಾಮನಿರ್ದೇಶನ ಪತ್ರದ ಬಗ್ಗೆ ಮಾಡಬಹುದಾದ ಎಲ್ಲ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕುದು ಮತ್ತು, ಅಂಥ ಆಕ್ಷೇಪಣೆಯ ಮೇಲೆ ಅಥವಾ ತಾನಾಗಿಯೇ ಅವನು ಅವಶ್ಯವೆಂದು ಯೋಚಿಸಬಹುದಾದಂಥ ಕ್ಷಿಪ್ರ ವಿಚಾರಣೆಯು ಯಾವುದಾದರೂ ಇದ್ದರೆ ಅದರ ತರುವಾಯ, ಈ ಕೆಳಕಂಡ ಯಾವುದೇ ಆಧಾರದ ಮೇಲೆ ಯಾವುದೇ ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸಬಹುದು:-

(ಎ) ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಯು, ಅನ್ವಯವಾಗಬಹುದಾದ ಈ ಕೆಳಕಂಡ ಯಾವುದೇ ಉಪಬಂಧದ ಮೇರೆಗೆ ಆ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆಗೊಳ್ಳುವುದಕ್ಕೆ ಅರ್ಹನಾಗಿಲ್ಲ ಅಥವಾ ಅನರ್ಹನಾಗಿದ್ದಾನೆ, ಎಂದರೆ:-

ಅನುಚ್ಛೇದಗಳು ೪೪, ೧೦೨, ೧೭೩ ಮತ್ತು ೧೯೧ (* * *)

ಆ ಅಧಿನಿಯಮದ IIನೇ ಭಾಗ, ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, ೧೯೬೩ (೧೯೬೩ರ ೨೦)ರ ೪ ಮತ್ತು ೧೪ನೇ ಪ್ರಕರಣಗಳು; ಅಥವಾ

(ಬಿ) ೩೩ನೇ ಪ್ರಕರಣ ಅಥವಾ ೩೪ನೇ ಪ್ರಕರಣದ ಯಾವುವೇ ಉಪಬಂಧಗಳನ್ನು ಪಾಲಿಸಲು ತಪ್ಪಿರುವುದು; ಅಥವಾ

(ಸಿ) ನಾಮನಿರ್ದೇಶನ ಪತ್ರದ ಮೇಲೆ ಇರುವ ಅಭ್ಯರ್ಥಿಯ ಅಥವಾ ಸೂಚಕನ ಸಹಿಯು ನೈಜವಾಗಿಲ್ಲದಿರುವುದು;

(೩) (೨)ನೆಯ ಉಪಪ್ರಕರಣದ (ಬಿ) ಅಥವಾ (ಸಿ) ಖಂಡದಲ್ಲಿ ಅಡಕವಾಗಿರುವುದು ಯಾವುದೂ, ಯಾವ ನಾಮ ನಿರ್ದೇಶನ ಪತ್ರದ ಸಂಬಂಧದಲ್ಲಿ ಯಾವುದೇ ಅಕ್ರಮವು ನಡೆದಿಲ್ಲವೋ ಆ ಇನ್ನೊಂದು ನಾಮ ನಿರ್ದೇಶನ ಪತ್ರದ ಮೂಲಕ, ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿದ್ದರೆ, ಆ ಅಭ್ಯರ್ಥಿಯ ಆ ನಾಮನಿರ್ದೇಶನ ಪತ್ರವನ್ನು, ಆ ನಾಮನಿರ್ದೇಶನ ಪತ್ರದ ಸಂಬಂಧದಲ್ಲಿನ ಯಾವುದೇ ಅಕ್ರಮದ ಆಧಾರದ ಮೇಲೆ ತಿರಸ್ಕರಿಸುವುದನ್ನು ಅಧಿಕೃತಗೊಳಿಸುತ್ತದೆ ಎಂದು ಭಾವಿಸತಕ್ಕುದಲ್ಲ.

(೪) ಚುನಾವಣಾ ಅಧಿಕಾರಿಯು ಯಾವುದೇ ನಾಮನಿರ್ದೇಶನ ಪತ್ರವನ್ನು ಗಣನೀಯ ಸ್ವರೂಪದ್ದಾಗಿರದ ಯಾವುದೇ ದೋಷದ ಆಧಾರದ ಮೇಲೆ ತಿರಸ್ಕರಿಸತಕ್ಕುದಲ್ಲ.

(೫) ಚುನಾವಣಾ ಅಧಿಕಾರಿಯು, ೩೦ನೇ ಪ್ರಕರಣದ (ಬಿ) ಖಂಡದ ಮೇರೆಗೆ ಈ ಬಗ್ಗೆ ಗೊತ್ತುಪಡಿಸಿದ ದಿನಾಂಕದಂದು ಪರಿಶೀಲನೆಯನ್ನು ನಡೆಸತಕ್ಕುದು ಮತ್ತು ಅವನು ದೊಂಬಿ ಅಥವಾ ಬಹಿರಂಗ ಹಿಂಸೆಯ ಮೂಲಕ ಅಥವಾ ತನ್ನ ನಿಯಂತ್ರಣವನ್ನು ಮೀರಿದ ಕಾರಣಗಳ ಮೂಲಕ ವ್ಯವಹರಣೆಗಳಿಗೆ ಅಡ್ಡಿ ಅಥವಾ ತಡೆ ಉಂಟಾಗಿರುವಾಗ ಹೊರತು ಅಂಥ ವ್ಯವಹರಣೆಗಳ ಯಾವುದೇ ಮೂಂದೂಡಿಕೆಗೆ ಅವಕಾಶ ನೀಡತಕ್ಕುದಲ್ಲ:

ಪರಂತು, ಚುನಾವಣಾ ಅಧಿಕಾರಿ ಅಥವಾ ಯಾವನೇ ಇತರ ವ್ಯಕ್ತಿಯು ಆಕ್ಷೇಪಣೆಯನ್ನು ಎತ್ತಿದರೆ ಅಥವಾ ಮಾಡಿದರೆ, ಸಂಬಂಧಪಟ್ಟ ಅಭ್ಯರ್ಥಿಗೆ ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದ ಮುಂಬರುವ ದಿವಸವನ್ನು ಬಿಟ್ಟು ತರುವಾಯದ ದಿವಸಕ್ಕಿಂತ ತಡವಾಗಿ ಅಲ್ಲದೆ ಅದನ್ನು ಖಂಡಿಸಲು ಕಾಲಾವಕಾಶವನ್ನು ನೀಡಬಹುದು ಮತ್ತು ಚುನಾವಣಾ ಅಧಿಕಾರಿಯು, ವ್ಯವಹರಣೆಗಳನ್ನು ಮುಂದೂಡಲಾದ ದಿನಾಂಕದಂದು ತನ್ನ ತೀರ್ಮಾನವನ್ನು ದಾಖಲು ಮಾಡತಕ್ಕುದು.

(೬) ಚುನಾವಣಾ ಅಧಿಕಾರಿಯು, ಪ್ರತಿಯೊಂದು ನಾಮನಿರ್ದೇಶನ ಪತ್ರದ ಮೇಲೆ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತನ್ನ ತೀರ್ಮಾನವನ್ನು ಹಿಂಬರಹ ಮಾಡತಕ್ಕುದು ಮತ್ತು ನಾಮನಿರ್ದೇಶನ ಪತ್ರವನ್ನು ತಿರಸ್ಕರಿಸಿದರೆ, ಅಂಥ ತಿರಸ್ಕಾರದ

ಬಗೆಗಿನ ತನ್ನ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕುದು.

(೭) ಈ ಪ್ರಕರಣದ ಉದ್ದೇಶಗಳಿಗಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿರುವ ಒಂದು ನಮೂದಿನ ಪ್ರಮಾಣಿತ ಪ್ರತಿಯು, ಆ ನಮೂದಿನಲ್ಲಿ ಉಲ್ಲೇಖಿತನಾದ ವ್ಯಕ್ತಿಯು ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೧೬ನೇ ಪ್ರಕರಣದಲ್ಲಿ ಸೂಚಿಸಿರುವ ಅನರ್ಹತೆಗೆ ಒಳಪಟ್ಟಿದ್ದಾನೆ ಎಂದು ರುಜುವಾತು ಆಗುವ ಹೊರತು, ಅವನು ಆ ಚುನಾವಣಾ ಕ್ಷೇತ್ರಕ್ಕಾಗಿ ಮತದಾರನಾಗಿದ್ದಾನೆಂಬ ಸಂಗತಿಯ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕುದು.

(೮) ಎಲ್ಲ ನಾಮನಿರ್ದೇಶನ ಪತ್ರಗಳನ್ನು ಪರಿಶೀಲಿಸಿದ ಮತ್ತು ಅವುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತೀರ್ಮಾನಗಳನ್ನು ದಾಖಲಿಸಿದ ತರುವಾಯ, ಕೂಡಲೆ ಚುನಾವಣಾ ಅಧಿಕಾರಿಯು ಕಾನೂನು ಮಾನ್ಯವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ, ಎಂದರೆ ಯಾವ ಅಭ್ಯರ್ಥಿಗಳ ನಾಮನಿರ್ದೇಶನ ಪತ್ರಗಳು ಕಾನೂನು ಮಾನ್ಯವಾಗಿವೆ ಎಂದು ಕಂಡುಬಂದಿವೆಯೋ ಆ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಅದನ್ನು ತನ್ನ ಸೂಚನಾ ಫಲಕದ ಮೇಲೆ ಅಂಟಿಸತಕ್ಕುದು.

೩೭. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು:- (೧) ಯಾವನೇ ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಲಿಖಿತ ನೋಟೀಸಿನ ಮೂಲಕ ಹಿಂತೆಗೆದುಕೊಳ್ಳಬಹುದು. ಈ ನೋಟೀಸು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕುದು ಮತ್ತು ಅವನು ಅದಕ್ಕೆ ಸಹಿ ಹಾಕಿರತಕ್ಕುದು. ಮತ್ತು ಅದನ್ನು ೩೦ನೇ ಪ್ರಕರಣದ (ಸಿ) ಖಂಡದ ಮೇರೆಗೆ ನಿಗದಿಪಡಿಸಿದ ದಿನದಂದು ಅಪರಾಹ್ನ ೩ ಗಂಟೆಗೆ ಮುಂಚೆ ಅಂಥ ಅಭ್ಯರ್ಥಿಯು ಖುದ್ದಾಗಿ ಅಥವಾ ಅವನ ಸೂಚಕನು ಅಥವಾ ಅಂಥ ಅಭ್ಯರ್ಥಿಯು ಲಿಖಿತದಲ್ಲಿ ಈ ಬಗ್ಗೆ ಅಧಿಕೃತಗೊಳಿಸಿರುವ ಚುನಾವಣಾ ಏಜೆಂಟನು ಚುನಾವಣಾ ಅಧಿಕಾರಿಗೆ ಒಪ್ಪಿಸತಕ್ಕುದು.

(೨) (೧)ನೇ ಉಪಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಗೆ ಆ ನೋಟೀಸನ್ನು ರದ್ದುಪಡಿಸಲು ಅವಕಾಶ ನೀಡತಕ್ಕುದಲ್ಲ.

(೩) ಚುನಾವಣಾ ಅಧಿಕಾರಿಯು, ಹಿಂತೆಗೆದುಕೊಳ್ಳುವ ನೋಟೀಸಿನ ನೈಜತೆಯ ಬಗ್ಗೆ ಮತ್ತು (೧)ನೇ ಉಪಪ್ರಕರಣದ ಮೇರೆಗೆ ಅದನ್ನು ಒಪ್ಪಿಸಿರುವ ವ್ಯಕ್ತಿಯ ಗುರುತಿನ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಅಂಥ ನೋಟೀಸನ್ನು ತನ್ನ ಕಚೇರಿಯಲ್ಲಿ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕುದು.

೩೮. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ:- (೧) ೩೭ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಬಹುದಾದ

ಅವಧಿಯು ಮುಕ್ತಾಯಗೊಂಡ ತರುವಾಯ, ಕೂಡಲೇ, ಚುನಾವಣಾ ಅಧಿಕಾರಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಎಂದರೆ, ಕಾನೂನು ಮಾನ್ಯವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿರುವ ಮತ್ತು ಸದರಿ ಅವಧಿಯೊಳಗೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರದ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸತಕ್ಕುದು ಮತ್ತು ಪ್ರಕಟಿಸತಕ್ಕುದು.

(೨) (೧)ನೇ ಉಪ-ಪ್ರಕರಣದ ಮೇರೆಗೆ ಹೆಸರುಗಳ ಪಟ್ಟಿ ಮಾಡುವ ಉದ್ದೇಶಕ್ಕಾಗಿ, ಅಭ್ಯರ್ಥಿಗಳನ್ನು ಈ ಕೆಳಕಂಡಂತೆ ವರ್ಗೀಕರಿಸತಕ್ಕದ್ದು, ಎಂದರೆ:-

(i) ಮನ್ನಣೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು;

(ii) (i)ನೇ ಖಂಡದಲ್ಲಿ ನಮೂದಿಸಲಾಗಿರುವ ನೋಂದಾಯಿತ ರಾಜಕೀಯ ಪಕ್ಷಗಳನ್ನು ಹೊರತುಪಡಿಸಿ ಇತರ ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು.

(iii) ಇತರ ಅಭ್ಯರ್ಥಿಗಳು.

(೩) (೨)ನೇ ಉಪ-ಪ್ರಕರಣದಲ್ಲಿ ನಮೂದಿಸಲಾದ ಪ್ರವರ್ಗಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಲಾದ ಕ್ರಮದಲ್ಲಿ ವ್ಯವಸ್ಥೆಗೊಳಿಸತಕ್ಕದ್ದು ಮತ್ತು ಪ್ರತಿಯೊಂದು ಪ್ರವರ್ಗದ ಅಭ್ಯರ್ಥಿಗಳ ಹೆಸರುಗಳನ್ನು ಅಕ್ಷರಾನುಕ್ರಮದಲ್ಲಿ ಮತ್ತು ನಿಯಮಿಸಬಹುದಾದಂಥ ಇತರ ವಿವರಗಳೊಂದಿಗೆ ನಾಮನಿರ್ದೇಶನ ಪತ್ರದಲ್ಲಿ ಕೊಟ್ಟಿರುವ ಸ್ಪರ್ಧಿಸುವ ಅಭ್ಯರ್ಥಿಗಳ ವಿಳಾಸಗಳನ್ನು ವ್ಯವಸ್ಥೆಗೊಳಿಸತಕ್ಕದ್ದು.

೩೯. ಇತರ ಚುನಾವಣೆಗಳಲ್ಲಿ ಅಭ್ಯರ್ಥಿಗಳ ನಾಮ ನಿರ್ದೇಶನ:- (೧) ಒಬ್ಬ ಸದಸ್ಯನನ್ನು ಅಥವಾ ಸದಸ್ಯರನ್ನು ಆಯ್ಕೆ ಮಾಡಲು ರಾಜ್ಯದ ವಿಧಾನ ಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸದಸ್ಯರನ್ನು ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರನ್ನು ಆಹ್ವಾನಿಸುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ ಆದಷ್ಟು ಬೇಗನೆ ಚುನಾವಣಾ ಆಯೋಗವು ರಾಜಪತ್ರದಲ್ಲಿನ ಅಧಿಸೂಚನೆಯ ಮೂಲಕ -

(ಎ) ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ಮೊದಲು ಹೇಳಿದ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯದ ಏಳನೆಯ ದಿವಸವಾಗಿರತಕ್ಕುದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು;

(ಬಿ) ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ನಾಮನಿರ್ದೇಶನ ಪತ್ರಗಳನ್ನು ಸಲ್ಲಿಸುವುದಕ್ಕಾಗಿನ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿವಸವಾಗಿರತಕ್ಕುದು,

ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು;

(ಸಿ) ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕುದು, ಈ ದಿನಾಂಕವು ನಾಮನಿರ್ದೇಶನ ಪತ್ರಗಳ ಪರಿಶೀಲನೆಗಾಗಿನ ದಿನಾಂಕದ ತರುವಾಯದ ಎರಡನೇ ದಿವಸವಾಗಿರತಕ್ಕುದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವಜನಿಕ ರಜಾ ದಿನವಲ್ಲದ ತರುವಾಯ ಬರುವ ದಿವಸವಾಗಿರತಕ್ಕುದು;

(ಡಿ) ಅವಶ್ಯವಾದರೆ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳನ್ನು ಗೊತ್ತು ಮಾಡತಕ್ಕುದು, ಈ ದಿನಾಂಕವು ಅಥವಾ ಅದರ ಮೊದಲನೆಯ ದಿನಾಂಕವು ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವ ಕೊನೆಯ ದಿನಾಂಕದ ತರುವಾಯದ ಏಳನೆಯ ದಿವಸಕ್ಕಿಂತ ಮುಂಚಿತವಾದುದಾಗಿರತಕ್ಕುದಲ್ಲ;

(ಇ) ಚುನಾವಣೆಯು ಪೂರ್ಣಗೊಳ್ಳಬೇಕಾದ ದಿನಾಂಕವನ್ನು ಗೊತ್ತುಪಡಿಸತಕ್ಕುದು.

(೨) ೩೩ನೇ ಪ್ರಕರಣದ (೨) ಮತ್ತು (೫)ನೇ ಉಪಪ್ರಕರಣಗಳನ್ನು ಮತ್ತು ೪೪ನೇ ಪ್ರಕರಣದ (೧)ನೇ ಉಪಪ್ರಕರಣದ (ಎ) ಖಂಡವನ್ನು ಹೊರತುಪಡಿಸಿ ೩೧ ರಿಂದ ೪೮ರವರೆಗಿನ ಪ್ರಕರಣಗಳ ಉಪಬಂಧಗಳು, ಯಾವುದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯ ಸಂಬಂಧದಲ್ಲಿ ಅನ್ವಯವಾಗುವಂತೆಯೇ ಯಾವುದೇ ಅಂಥ ಚುನಾವಣೆಯ ಸಂಬಂಧದಲ್ಲಿಯೂ ಅನ್ವಯವಾಗತಕ್ಕುದು:

ಪರಂತು-

(ಎ) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯ ಬಗ್ಗೆ ಸದರಿ ಉಪಬಂಧಗಳಲ್ಲಿರುವ ಯಾವುದೇ ಉಲ್ಲೇಖಗಳನ್ನು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ರಾಜ್ಯದ ವಿಧಾನ ಸಭೆಯ ಸದಸ್ಯರ ಅಥವಾ ಚುನಾಯಿತ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ, ೧೫೨ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ, ಸಂದರ್ಭಾನುಸಾರ, ಆ ವಿಧಾನ ಸಭೆಯ ಚುನಾಯಿತ ಸದಸ್ಯರ ಪಟ್ಟಿಯ ಬಗೆಗಿನ ಉಲ್ಲೇಖಗಳೆಂದು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ, ಆ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗೆ ಇಟ್ಟುಕೊಂಡು ಬಂದಿರುವ ಅಂಥ ಚುನಾಯಕ ಗಣದ ಸದಸ್ಯರ ಪಟ್ಟಿಯ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕುದು;

(ಎಎ) ''ಚುನಾವಣಾ ಕ್ಷೇತ್ರದ ಮತದಾರನು ಸೂಚಕನೆಂದು" ಎಂಬ ಬಗ್ಗೆ ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಪ್ರಾರಂಭದ ಪ್ಯಾರಾದಲ್ಲಿರುವ ಉಲ್ಲೇಖವನ್ನು, ''ಸಂದರ್ಭಾನುಸಾರ ಚುನಾಯಿತ ಸದಸ್ಯರ ಅಥವಾ ರಾಜ್ಯದ ವಿಧಾನಸಭೆಯ

ಚುನಾಯಿತ ಸದಸ್ಯರ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಶೇಕಡಾ ಹತ್ತರಷ್ಟು ಸದಸ್ಯರು ಅಥವಾ ಸಂಬಂಧಪಟ್ಟ ಹತ್ತು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಸದಸ್ಯರು ಸೂಚಕರೆಂದು" ಎಂಬ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕುದು:

ಪರಂತು, ಈ ಖಂಡದಲ್ಲಿ ಉಲ್ಲೇಖಿಸಿರುವ ಶೇಕಡಾವಾರನ್ನು ಲೆಕ್ಕ ಹಾಕುವುದರ ಪರಿಣಾಮವಾಗಿ ಬರುವ ಸದಸ್ಯರ ಸಂಖ್ಯೆಯು ಅಪೂರ್ಣಾಂಕವಾಗಿರುವಲ್ಲಿ ಮತ್ತು ಹಾಗೆ ಬಂದಿರುವ ಅಪೂರ್ಣಾಂಕವು ಅರ್ಧಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಒಂದು ಎಂದು ಲೆಕ್ಕ ಹಾಕತಕ್ಕುದು, ಮತ್ತು ಹಾಗೆ ಬಂದಿರುವ ಅಪೂರ್ಣಾಂಕವು ಅರ್ಧಕ್ಕಿಂತ ಕಡಿಮೆ ಇದ್ದರೆ ಅದನ್ನು ಉಪೇಕ್ಷಿಸತಕ್ಕುದು;

(ಎಬಿ) ರಾಜ್ಯದ ವಿಧಾನ ಪರಿಷತ್ತಿಗೆ ಆ ರಾಜ್ಯದ ವಿಧಾನ ಸಭಾ ಸದಸ್ಯರ ಮೂಲಕ ನಡೆಯುವ ಚುನಾವಣೆಯ ಸಂದರ್ಭದಲ್ಲಿ ೩೬ನೇ ಪ್ರಕರಣದ (೨)ನೇ ಉಪಪ್ರಕರಣದ (ಎ) ಖಂಡವನ್ನು ೧೭೧ನೇ ಅನುಚ್ಛೇದದ (೩)ನೇ ಖಂಡದ (ಡಿ) ಉಪಖಂಡದ ಬಗೆಗಿನ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕುದು;

(ಬಿ) ೩೦ನೇ ಪ್ರಕರಣದ ಬಗೆಗೆ ಸದರಿ ಉಪಬಂಧಗಳಲ್ಲಿರುವ ಯಾವುವೇ ಉಲ್ಲೇಖಗಳನ್ನು, ಈ ಪ್ರಕರಣದ (೧)ನೇ ಉಪಪ್ರಕರಣದ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕುದು; ಮತ್ತು

(ಸಿ) ನಾಮನಿರ್ದೇಶನ ಪತ್ರವನ್ನು ಒಪ್ಪಿಸುವ ಸಮಯದಲ್ಲಿ, ಚುನಾವಣಾ ಅಧಿಕಾರಿಯು, ಅದನ್ನು ಒಪ್ಪಿಸುವ ವ್ಯಕ್ತಿಯನ್ನು, ಅಭ್ಯರ್ಥಿಯ ಹೆಸರನ್ನು ಒಳಗೊಂಡಿರುವ ಮತದಾರರ ಪಟ್ಟಿಯ ಅಥವಾ ಆ ಮತದಾರರ ಪಟ್ಟಿಯ ಭಾಗದ ಒಂದು ಪ್ರತಿಯನ್ನು ಅಥವಾ ಅಂಥ ಪಟ್ಟಿಯಲ್ಲಿನ ಸಂಬಂಧಪಟ್ಟ ನಮೂದುಗಳ ಒಂದು ಪ್ರಮಾಣಿತ ಪ್ರತಿಯನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು.

೬೯ಎ. ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆ:- (೧) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಚುನಾವಣಾ ಆಯೋಗವು, ಚುನಾವಣೆಗಳ ಸಮಯದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷದ ಹಿಂದಿನ ಸಾಧನೆಯ ಆಧಾರದ ಮೇಲೆ ಯಾವುದೇ ಚುನಾವಣಾ ವಿಷಯವನ್ನು ಪ್ರದರ್ಶಿಸಲು ಅಥವಾ ಪ್ರಸಾರ ಮಾಡಲು ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡಲು ನಿಯಮಿಸಬಹುದಾದಂಥ ವಿಧಾನದಲ್ಲಿ ಕೇಬಲ್ ದೂರದರ್ಶನ ಜಾಲದಲ್ಲಿ ಮತ್ತು ಇತರ ವಿದ್ಯುನ್ಮಾನ ಮಾಧ್ಯಮದಲ್ಲಿ ಸಮಯದಲ್ಲಿ ನ್ಯಾಯಸಮ್ಮತ ಭಾಗದ ಹಂಚಿಕೆಗೆ ಮಾಡತಕ್ಕದ್ದು.

(೨) ಚುನಾವಣೆಗಾಗಿ ೪೮ನೇ ಪ್ರಕರಣದ ಅಡಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ ನಂತರ ಚುನಾವಣೆಗೆ ಸಂಬಂಧಿಸಿದಂತೆ (೧)ನೇ ಉಪಪ್ರಕರಣದ

ಮೇರೆಗೆ ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆಯನ್ನು ಮಾಡತಕ್ಕದ್ದು ಮತ್ತು ಅಂಥ ಚುನಾವಣೆಯ ಮತದಾನಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ನಲವತ್ತೆಂಟು ಗಂಟೆಗಳಿಗೆ ಮುಂಚಿನವರೆಗೆ ಸಿಂಧುವಾಗಿರತಕ್ಕದ್ದು.

(೩) (೧)ನೇ ಉಪಪ್ರಕರಣದ ಅಡಿಯಲ್ಲಿ ಸಮಯದ ನ್ಯಾಯಸಮ್ಮತ ಭಾಗದ ಹಂಚಿಕೆಗೆ ಸಂಬಂಧಪಟ್ಟ ಎಲ್ಲ ರಾಜಕೀಯ ಪಕ್ಷಗಳು ಬದ್ಧವಾಗಿರತಕ್ಕದ್ದು.

(೪) ಚುನಾವಣಾ ಆಯೋಗವು, ಈ ಪ್ರಕರಣದ ಉದ್ದೇಶಗಳಿಗಾಗಿ, ಕೇಬಲ್ ಆಪರೇಟರುಗಳು ಮತ್ತು ವಿದ್ಯುನ್ಮಾನ ಮಾಧ್ಯಮದವರಿಗಾಗಿ ನೀತಿ ಸಂಹಿತೆಯನ್ನು ರೂಪಿಸಬಹುದು ಮತ್ತು ವಿದ್ಯುನ್ಮಾನ ಮಾಧ್ಯಮವನ್ನು ವ್ಯವಸ್ಥಾಪನೆ ಮಾಡುವ ಅಥವಾ ಅದರ ವ್ಯವಸ್ಥಾಪನೆಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ನೀತಿ ಸಂಹಿತೆಯನ್ನು ಅನುಸರಿಸತಕ್ಕದ್ದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ''ವಿದ್ಯುನ್ಮಾನ ಮಾಧ್ಯಮ"ವು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ರೇಡಿಯೋ ಮತ್ತು ಯಾವುದೇ ಇತರ ಪ್ರಸಾರಣ ಮಾದ್ಯಮವನ್ನು ಒಳಗೊಳ್ಳುತ್ತದೆ;

(ಬಿ) ''ಕೇಬಲ್ ದೂರದರ್ಶನ ಜಾಲ" ಮತ್ತು ''ಕೇಬಲ್ ಆಪರೇಟರ್" ಎಂಬುದು ಕೇಬಲ್ ದೂರದರ್ಶನ ಜಾಲಗಳ (ವಿನಿಯಮನ) ಅಧಿನಿಯಮ, ೧೯೯೫ರ (೧೯೯೫ರ ೭) ಮೇರೆಗೆ ಅವುಗಳಿಗೆ ನೀಡಿದ ಅರ್ಥಗಳನ್ನೇ ಅನುಕ್ರಮವಾಗಿ ಹೊಂದಿರುತ್ತವೆ.

ಅಧ್ಯಾಯ - II
ಅಭ್ಯರ್ಥಿಗಳು ಮತ್ತು ಅವರ ಏಜೆಂಟರು

೪೦. ಚುನಾವಣಾ ಏಜೆಂಟರು:- ಚುನಾವಣಾ ಅಭ್ಯರ್ಥಿಯು, ತನ್ನನ್ನು ಬಿಟ್ಟು ಇತರ ಯಾವನೇ ವ್ಯಕ್ತಿಯನ್ನು ತನ್ನ ಚುನಾವಣಾ ಏಜೆಂಟನಾಗಿರಲು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಿಕೊಳ್ಳಬಹುದು ಮತ್ತು ಅಂಥ ಯಾವುದೇ ನೇಮಕಾತಿಯನ್ನು ಮಾಡಿದಾಗ ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

೪೧. ಚುನಾವಣಾ ಏಜೆಂಟನಾಗಿರಲು ಅನರ್ಹತೆ:- ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಅಥವಾ ರಾಜ್ಯ ವಿಧಾನ ಮಂಡಲ ಸದನದ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನಾಗಿರಲು ಅಥವಾ ಚುನಾವಣೆಗಳಲ್ಲಿ ಮತ ಚಲಾಯಿಸಲು ಸಂವಿಧಾನದ ಮೇರೆಗೆ ಅಥವಾ ಅಧಿನಿಯಮದ ಮೇರೆಗೆ ತತ್ಕಾಲದಲ್ಲಿ ಅನರ್ಹನಾಗಿರುವ ಯಾವನೇ ವ್ಯಕ್ತಿಯು, ಆ ಅನರ್ಹತೆಯು ಅಸ್ತಿತ್ವದಲ್ಲಿರುವವರೆಗೆ ಯಾವುದೇ ಚುನಾವಣೆಯಲ್ಲಿ ಚುನಾವಣಾ ಏಜೆಂಟನಾಗಿರಲು ಸಹ ಅರ್ಹನಾಗಿರತಕ್ಕುದಲ್ಲ.

೪೨. ಚುನಾವಣಾ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ:- (೧) ಚುನಾವಣಾ ಏಜೆಂಟನ ನೇಮಕದ ಯಾವುದೇ ರದ್ದಿಯಾತಿಗೆ ಅಭ್ಯರ್ಥಿಯು ಸಹಿ

ಹಾಕಿರತಕ್ಕುದು ಮತ್ತು ಅದನ್ನು ಚುನಾವಣಾ ಅಧಿಕಾರಿಯ ಹತ್ತಿರ ದಾಖಲು ಮಾಡಿದ ದಿನಾಂಕದಿಂದ ಅದು ಜಾರಿಗೆ ಬರತಕ್ಕುದು.

(೨) ಅಂಥ ರದ್ದಿಯಾತಿಯ ಅಥವಾ ಚುನಾವಣಾ ಏಜೆಂಟನ ಮರಣದ ಸಂದರ್ಭದಲ್ಲಿ, ಆ ಸಂದರ್ಭವು ಚುನಾವಣೆಗೆ ಮುಂಚೆ ಅಥವಾ ಚುನಾವಣೆ ನಡೆಯುವ ಸಮಯದಲ್ಲಿ ಅಥವಾ ಆ ಚುನಾವಣೆಯ ತರುವಾಯ ಸಂಭವಿಸಿದಲ್ಲಿ, ಆದರೆ ಒಲನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಅಭ್ಯರ್ಥಿಯ ಚುನಾವಣಾ ವೆಚ್ಚಗಳ ಲೆಕ್ಕವನ್ನು ದಾಖಲು ಮಾಡಿರುವುದಕ್ಕೆ ಮೊದಲು, ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯನ್ನು ಅವನ ಚುನಾವಣಾ ಏಜೆಂಟನಾಗಿರಲು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಬಹುದು ಮತ್ತು ಅಂಥ ನೇಮಕಾತಿಯನ್ನು ಮಾಡಿದಾಗ, ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

೪೩. (ನಿರಸನಗೊಳಿಸಲಾಗಿದೆ).

೪೪. (ನಿರಸನಗೊಳಿಸಲಾಗಿದೆ).

೪೫. ಚುನಾವಣಾ ಏಜೆಂಟರ ಪ್ರಕಾರ್ಯಗಳು:- ಚುನಾವಣೆಯ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಒಬ್ಬ ಚುನಾವಣಾ ಏಜೆಂಟನು ನಿರ್ವಹಿಸಲು ಅಧಿಕೃತಗೊಳಿಸಲಾಗಿರುವಂಥ ಪ್ರಕಾರ್ಯಗಳನ್ನು ಅವನು ನಿರ್ವಹಿಸಬಹುದು.

೪೬. ಮತದಾನ ಏಜೆಂಟರ ನೇಮಕ:- ಸ್ಪರ್ಧಿಸಿರುವ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು, ೨೫ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಲಾದ ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಅಥವಾ ೨೯ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳದಲ್ಲಿ ಅಂಥ ಅಭ್ಯರ್ಥಿಯ ಮತದಾನ ಏಜೆಂಟನಾಗಿ ಕಾರ್ಯ ನಿರ್ವಹಿಸಲು ನಿಯಮಿಸಲಾದ ರೀತಿಯಲ್ಲಿ ನಿಯಮಿಸಬಹುದಾದಂಥ ಸಂಖ್ಯೆಯ ಏಜೆಂಟರು ಮತ್ತು ಬದಲಿ ಏಜೆಂಟರನ್ನು ನೇಮಕ ಮಾಡಬಹುದು.

೪೭. ಎಣಿಕೆ ಏಜೆಂಟರ ನೇಮಕ:- ಸ್ಪರ್ಧಿಸಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು, ಮತಗಳನ್ನು ಎಣಿಕೆ ಮಾಡುವಾಗ ಅವನ ಎಣಿಕೆ ಏಜೆಂಟನಾಗಿ ಅಥವಾ ಏಜೆಂಟರಾಗಿ ಹಾಜರಿರಲು ನಿಯಮಿಸಲಾದ ರೀತಿಯಲ್ಲಿ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು, ಆದರೆ ನಿಯಮಿಸಬಹುದಾದಂಥ ಸಂಖ್ಯೆಯನ್ನು ಮೀರದಂತೆ ನೇಮಕ ಮಾಡಬಹುದು ಮತ್ತು ಯಾವುದೇ ಅಂಥ ನೇಮಕಾತಿಯನ್ನು ಮಾಡಿದಾಗ ಆ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ಕೊಡತಕ್ಕುದು.

೪೮. ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನ ನೇಮಕದ ರದ್ದಿಯಾತಿ ಅಥವಾ ಅವನ ಮರಣ:- (೧) ಮತದಾನ ಏಜೆಂಟನ ನೇಮಕಾತಿಯ ಯಾವುದೇ

ರದ್ದಿಯಾತಿಗೆ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಸಹಿ ಹಾಕತಕ್ಕುದು ಮತ್ತು ಅದನ್ನು ನಿಯಮಿಸಬಹುದಾದಂಥ ಅಧಿಕಾರಿಯ ಬಳಿ ದಾಖಲು ಮಾಡುವ ದಿನಾಂಕದಿಂದ ಅದು ಜಾರಿಗೆ ಬರತಕ್ಕುದು ಮತ್ತು ಮತದಾನವು ಮುಕ್ತಾಯವಾಗುವುದಕ್ಕೆ ಮುಂಚೆ ಅಂಥ ರದ್ದಿಯಾತಿಯ ಅಥವಾ ಮತದಾನ ಏಜೆಂಟನ ಮರಣ ಸಂದರ್ಭದಲ್ಲಿ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತದಾನವು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತ್ತೊಬ್ಬ ಮತದಾನ ಏಜೆಂಟನನ್ನು ನಿಯಮಿಸಲಾದ ರೀತಿಯಲ್ಲಿ ನೇಮಕ ಮಾಡಬಹುದು ಮತ್ತು ಅವನು ಅಂಥ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ನಿಯಮಿಸಬಹುದಾದಂಥ ಅಧಿಕಾರಿಗೆ ತಕ್ಷಣವೇ ಕೊಡತಕ್ಕುದು.

(೨) ಎಣಿಕೆ ಏಜೆಂಟನ ನೇಮಕಾತಿಯ ಯಾವುದೇ ರದ್ದಿಯಾತಿಗೆ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಸಹಿ ಹಾಕತಕ್ಕುದು ಮತ್ತು ಅದನ್ನು ಚುನಾವಣಾ ಅಧಿಕಾರಿ ಬಳಿ ದಾಖಲು ಮಾಡುವ ದಿನಾಂಕದಂದು ಅದು ಜಾರಿಗೆ ಬರತಕ್ಕುದು ಮತ್ತು ಮತಗಳ ಎಣಿಕೆ ಪ್ರಾರಂಭವಾಗುವುದಕ್ಕೆ ಮುಂಚೆ ಅಂಥ ರದ್ದಿಯಾತಿಯ ಅಥವಾ ಎಣಿಕೆ ಏಜೆಂಟನ ಮರಣದ ಸಂದರ್ಭದಲ್ಲಿ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತಗಳ ಎಣಿಕೆ ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ನಿಯಮಿಸಲಾದ ರೀತಿಯಲ್ಲಿ ಮತ್ತೊಬ್ಬ ಎಣಿಕೆ ಏಜೆಂಟನನ್ನು ನೇಮಕ ಮಾಡಬಹುದು ಮತ್ತು ಅವನು ಅಂಥ ನೇಮಕಾತಿಯ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಚುನಾವಣಾ ಅಧಿಕಾರಿಗೆ ತಕ್ಷಣವೇ ಕೊಡತಕ್ಕುದು.

೪೯. ಮತದಾನ ಏಜೆಂಟರ ಮತ್ತು ಎಣಿಕೆ ಏಜೆಂಟರ ಪ್ರಕಾರ್ಯಗಳು:- (೧) ಮತದಾನ ಏಜೆಂಟ್ ಮತದಾನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಒಬ್ಬ ಮತದಾನ ಏಜೆಂಟನು ನಿರ್ವಹಿಸಬೇಕೆಂದು ಅಧಿಕೃತಗೊಳಿಸಲಾದಂಥ ಪ್ರಕಾರ್ಯಗಳನ್ನು ಮತದಾನ ಏಜೆಂಟನು ನಿರ್ವಹಿಸಬಹುದು.

(೨) ಮತಗಳ ಎಣಿಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಒಬ್ಬ ಎಣಿಕೆ ಏಜೆಂಟನು ನಿರ್ವಹಿಸಲು ಅಧಿಕೃತಗೊಳಿಸಲಾಗಿರುವಂಥ ಪ್ರಕಾರ್ಯಗಳನ್ನು ಎಣಿಕೆ ಏಜೆಂಟನು ನಿರ್ವಹಿಸಬಹುದು.

೫೦. ಸ್ಪರ್ಧಿಸಿರುವ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಮತದಾನ ಕೇಂದ್ರಗಳಲ್ಲಿ ಹಾಜರಿರುವುದು ಮತ್ತು ಅವನು ಮತದಾನ ಏಜೆಂಟನ ಅಥವಾ ಎಣಿಕೆ ಏಜೆಂಟನ ಪ್ರಕಾರ್ಯಗಳನ್ನು ನಿರ್ವಹಿಸುವುದು:- (೧) ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ, ಅಂಥ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿ ಮತ್ತು ಅವನ ಚುನಾವಣಾ ಏಜೆಂಟನು ಮತದಾನ ನಡೆಸಲು ೨೫ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಿರುವ ಯಾವುದೇ ಮತದಾನ ಕೇಂದ್ರದಲ್ಲಿ

ಅಥವಾ ಆ ಮತದಾನಕ್ಕಾಗಿ ೨೯ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿರುವ ಸ್ಥಳದಲ್ಲಿ ಹಾಜರಿರುವ ಹಕ್ಕನ್ನು ಹೊಂದಿರತಕ್ಕುದು.

(೨) ಸ್ಪರ್ಧಿಸಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು, ಹಾಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಯಾವನೇ ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನನ್ನು ನೇಮಕ ಮಾಡಿದ್ದಿದ್ದರೆ ಅವನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮಾಡಲು ಅಧಿಕೃತವಾಗಿದ್ದಿರಬಹುದಾದ ಯಾವುದೇ ಕಾರ್ಯ ಅಥವಾ ಕೃತ್ಯವನ್ನು ಸ್ವತಃ ಮಾಡಬಹುದು ಅಥವಾ ಯಾವುದೇ ಅಂಥ ಕಾರ್ಯ ಅಥವಾ ಕೆಲಸವನ್ನು ಮಾಡುವಲ್ಲಿ ಸ್ಪರ್ಧಿಸಿರುವ ಅಂಥ ಅಭ್ಯರ್ಥಿಯ ಯಾವನೇ ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟನಿಗೆ ಸಹಾಯ ಮಾಡಬಹುದು.

೫೧. ಮತದಾನ ಅಥವಾ ಎಣಿಕೆ ಏಜೆಂಟರ ಗೈರುಹಾಜರಿ:- ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮತದಾನ ಅಥವಾ ಎಣಿಕೆ ಏಜೆಂಟರ ಸಮ್ಮುಖದಲ್ಲಿ ಯಾವುದೇ ಕಾರ್ಯ ಅಥವಾ ಕೃತ್ಯವನ್ನು ಮಾಡಲು ಅಗತ್ಯಪಡಿಸಿರುವಲ್ಲಿ ಅಥವಾ ಅಧಿಕೃತಗೊಳಿಸಿರುವಲ್ಲಿ ಈ ಉದ್ದೇಶಕ್ಕಾಗಿ ಗೊತ್ತುಪಡಿಸಿದ ಸಮಯ ಮತ್ತು ಸ್ಥಳದಲ್ಲಿ ಯಾವನೇ ಅಂಥ ಏಜೆಂಟನ ಅಥವಾ ಏಜೆಂಟರ ಗೈರು ಹಾಜರಿಯು ಆ ಕಾರ್ಯ ಅಥವಾ ಕೃತ್ಯವನ್ನು ಅನ್ಯಥಾ ಕ್ರಮಬದ್ಧವಾಗಿ ಮಾಡಿದ್ದರೆ, ಮಾಡಿರುವ ಆ ಕಾರ್ಯ ಅಥವಾ ಕೃತ್ಯವನ್ನು ಅಸಿಂಧುಗೊಳಿಸತಕ್ಕುದಲ್ಲ.

ಅಧ್ಯಾಯ - III

ಚುನಾವಣೆಗಳಲ್ಲಿ ಸಾಮಾನ್ಯ ಪ್ರಕ್ರಿಯೆ

೫೨. ಮತದಾನಕ್ಕೆ ಮುಂಚೆ ಮನ್ನಣೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯ ಮರಣ:- (೧) ಮನ್ನಣೆ ಪಡೆದ ರಾಜಕೀಯ ಪಕ್ಷವು ನಿಲ್ಲಿಸಿದ ಒಬ್ಬ ಅಭ್ಯರ್ಥಿಯು,-

(ಎ) ನಾಮ ನಿರ್ದೇಶನ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದಂದು ಪೂರ್ವಾಹ್ನ ೧೧ ಗಂಟೆಯ ತರುವಾಯ ಯಾವುದೇ ಸಮಯದಲ್ಲಿ ಮೃತನಾದರೆ ಮತ್ತು ೩೬ನೇ ಪ್ರಕರಣದ ಮೇರೆಗೆ ನಡೆಸಿದ ಪರಿಶೀಲನೆಯ ತರುವಾಯ ಅವನ ನಾಮನಿರ್ದೇಶನ ಪತ್ರವು ಸಿಂಧುವಾಗಿದೆಯೆಂದು ಕಂಡುಬಂದರೆ; ಅಥವಾ

(ಬಿ) ಯಾರ ನಾಮನಿರ್ದೇಶನ ಪತ್ರವು ೩೬ನೇ ಪ್ರಕರಣದ ಮೇರೆಗಿನ ಪರಿಶೀಲನೆಯ ತರುವಾಯ ಸಿಂಧುವಾಗಿದೆ ಎಂದು ಕಂಡುಬಂದಿದೆಯೋ ಮತ್ತು ಯಾರು ೩೭ನೇ ಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿಲ್ಲವೋ ಆ ಅಭ್ಯರ್ಥಿಯು ಮೃತನಾದರೆ ಮತ್ತು ಈ ಎರಡೂ ಸಂದರ್ಭಗಳಲ್ಲಿ ೩೮ನೇ ಪ್ರಕರಣದ ಮೇರೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಗೆ ಮುಂಚೆ ಯಾವುದೇ ಸಮಯದಲ್ಲಿ ಅವನ ಮರಣದ ವರದಿ ಬಂದರೆ; ಅಥವಾ

(ಸಿ) ಸ್ಪರ್ಧಿಸಿರುವ ಅಭ್ಯರ್ಥಿಯು ಮರಣ ಹೊಂದಿದರೆ ಮತ್ತು ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಅವನ ಮರಣದ ವರದಿ ಬಂದರೆ;

- ರಿಟರ್ನಿಂಗ್ ಆಫೀಸರನು ಆ ಅಭ್ಯರ್ಥಿಯ ಮರಣದ ಸಂಗತಿಯ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಆದೇಶ ಹೊರಡಿಸಿ ಆ ತರುವಾಯ ಅಧಿಸೂಚಿಸಲಾಗುವಂಥ ದಿನಾಂಕಕ್ಕೆ ಮತದಾನವನ್ನು ಮುಂದೂಡುವ ಬಗ್ಗೆ ಪ್ರಕಟಿಸತಕ್ಕದ್ದು ಮತ್ತು ಆ ಸಂಗತಿಯನ್ನು ಚುನಾವಣಾ ಆಯೋಗಕ್ಕೆ ಮತ್ತು ಸಮುಚಿತ ಪ್ರಾಧಿಕಾರಕ್ಕೆ ಸಹ ವರದಿ ಮಾಡತಕ್ಕುದು:

ಪರಂತು, ಮರಣ ಹೊಂದಿದ ಅಭ್ಯರ್ಥಿಯ ನಾಮ ನಿರ್ದೇಶನ ಪತ್ರವೂ ಸೇರಿದಂತೆ ಎಲ್ಲ ನಾಮ ನಿರ್ದೇಶನ ಪತ್ರಗಳ ಪರಿಶೀಲನೆ ಮಾಡಿದ ತರುವಾಯ ಹೊರತು (ಎ) ಖಂಡದಲ್ಲಿ ಉಲ್ಲೇಖಿಸಲಾದ ಪ್ರಕರಣದಲ್ಲಿ ಮತದಾನವನ್ನು ಮುಂದೂಡುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(೨) ಚುನಾವಣಾ ಆಯೋಗವು, (೧)ನೇ ಉಪ-ಪ್ರಕರಣದ ಮೇರೆಗೆ ರಿಟರ್ನಿಂಗ್ ಆಫೀಸರನಿಂದ ವರದಿ ಬಂದ ಮೇಲೆ, ಮನ್ನಣೆ ಪಡೆದ ಯಾವ ರಾಜಕೀಯ ಪಕ್ಷದ ಅಭ್ಯರ್ಥಿಯು ಮೃತನಾಗಿರುವನೋ ಆ ರಾಜಕೀಯ ಪಕ್ಷಕ್ಕೆ ಅಂಥ ನೋಟೀಸನ್ನು ನೀಡಿದ ಏಳು ದಿನಗಳ ಒಳಗಾಗಿ ಸದರಿ ಚುನಾವಣೆಗೆ ಇನ್ನೊಬ್ಬ ಅಭ್ಯರ್ಥಿಯನ್ನು ನಾಮನಿರ್ದೇಶಿಸುವಂತೆ ಕೇಳತಕ್ಕದ್ದು ಮತ್ತು ೪೦ ರಿಂದ ೪೭ ರ ವರೆಗಿನ ಪ್ರಕರಣಗಳ ಉಪಬಂಧಗಳು ಇತರ ನಾಮನಿರ್ದೇಶನಗಳಿಗೆ ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಅಂಥ ನಾಮನಿರ್ದೇಶನಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು:

ಪರಂತು, ಮತದಾನವನ್ನು ಮುಂದೂಡುವುದಕ್ಕೆ ಮುಂಚೆ ೪೭ನೇ ಪ್ರಕರಣದ (೧)ನೇ ಉಪ-ಪ್ರಕರಣದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡ ನೋಟೀಸನ್ನು ನೀಡಿದ ಯಾರೇ ವ್ಯಕ್ತಿಯು ಅಂಥ ಮುಂದೂಡಿಕೆಯ ತರುವಾಯ ಚುನಾವಣಾ ಅಭ್ಯರ್ಥಿಯಾಗಿ ನಾಮನಿರ್ದೇಶನ ಹೊಂದಲು ಅನರ್ಹನಾಗತಕ್ಕದ್ದಲ್ಲ.

(೩) (೧)ನೇ ಉಪ-ಪ್ರಕರಣದ ಮೇರೆಗೆ ಮತದಾನವನ್ನು ಮುಂದೂಡುವುದಕ್ಕೆ ಮುಂಚೆ ೪೮ನೇ ಪ್ರಕರಣದ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿರುವಲ್ಲಿ, ರಿಟರ್ನಿಂಗ್ ಆಫೀಸರನು (೨)ನೇ ಉಪ ಪ್ರಕರಣದ ಮೇರೆಗೆ ಸಿಂಧುವಾಗಿ ನಾಮನಿರ್ದೇಶಿತನಾಗಿರುವ ಅಭ್ಯರ್ಥಿಯ ಹೆಸರೂ ಸೇರುವ ಹಾಗೆ ಆ ಪ್ರಕರಣದ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಹೊಸ ಪಟ್ಟಿಯನ್ನು ಮತ್ತೊಮ್ಮೆ ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

ವಿವರಣೆ:- ಈ ಪ್ರಕರಣ ಮತ್ತು ೪೩ ಹಾಗೂ ೪೮ನೇ ಪ್ರಕರಣಗಳ ಉದ್ದೇಶಗಳಿಗಾಗಿ "ಮನ್ನಣೆ ಪಡೆದ ರಾಜಕೀಯ ಪಕ್ಷ" ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, ೧೯೬೮ ರ ಮೇರೆಗೆ ಚುನಾವಣಾ ಆಯೋಗದಿಂದ ಮನ್ನಣೆ ಪಡೆದ ಒಂದು ರಾಜಕೀಯ ಪಕ್ಷ.

೫೩. ಸ್ಪರ್ಧೆ ಇರುವ ಮತ್ತು ಸ್ಪರ್ಧೆ ಇಲ್ಲದ ಚುನಾವಣೆಗಳಲ್ಲಿ ಪ್ರಕ್ರಿಯೆ:- (೧) ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯು, ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಮತದಾನವನ್ನು ನಡೆಸತಕ್ಕುದು.

(೨) ಅಂಥ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮನಾಗಿದ್ದರೆ ಚುನಾವಣಾ ಅಧಿಕಾರಿಯು ಆ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಎಲ್ಲ ಅಂಥ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂಬುದಾಗಿ ತಕ್ಷಣವೇ ಘೋಷಿಸತಕ್ಕುದು.

(೩) ಅಂಥ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಕಡಿಮೆ ಇದ್ದರೆ ಚುನಾವಣಾಧಿಕಾರಿಯು ಎಲ್ಲ ಅಂಥ ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆಂದು ತಕ್ಷಣವೇ ಘೋಷಿಸತಕ್ಕುದು ಮತ್ತು ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಉಳಿದ ಸ್ಥಾನವನ್ನು ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಒಬ್ಬ ವ್ಯಕ್ತಿ ಅಥವಾ ಹೆಚ್ಚು ವ್ಯಕ್ತಿಗಳನ್ನು ಆಯ್ಕೆ ಮಾಡಲು ಸಂದರ್ಭಾನುಸಾರ, ರಾಜ್ಯ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಅದರ ಚುನಾಯಿತ ಸದಸ್ಯರು ಅಥವಾ ಸದಸ್ಯರನ್ನು ಅಥವಾ ಸಂಬಂಧಪಟ್ಟ ಚುನಾಯಕ ಗಣದ ಸದಸ್ಯರನ್ನು ಕೇಳಿಕೊಳ್ಳತಕ್ಕದ್ದು:

ಪರಂತು, ರಾಜ್ಯ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಅದರ ಚುನಾಯಿತ ಸದಸ್ಯರು ಅಥವಾ ಸದಸ್ಯರನ್ನು ಅಥವಾ ಚುನಾಯಕ ಗಣದ ಸದಸ್ಯರನ್ನು, ಈ ಉಪಪ್ರಕರಣದ ಮೇರೆಗೆ ಈಗಾಗಲೇ ಕೇಳಿಕೊಳ್ಳಲಾಗಿದ್ದು ಅದು ಅಥವಾ ಅವರು ಆ ಖಾಲಿ ಸ್ಥಾನ ಅಥವಾ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಸಂದರ್ಭಾನುಸಾರ ಒಬ್ಬ ವ್ಯಕ್ತಿಯನ್ನು ಅಥವಾ ಅಗತ್ಯ ಸಂಖ್ಯೆಯ ವ್ಯಕ್ತಿಗಳನ್ನು ಆಯ್ಕೆ ಮಾಡಲು ತಪ್ಪಿರುವಲ್ಲಿ, ಚುನಾವಣಾ ಆಯೋಗವು, ಅಂಥ ಸದಸ್ಯರ ಚುನಾವಣಾ ಕ್ಷೇತ್ರವನ್ನು ಪುನಃ ಕೇಳಿಕೊಂಡರೆ ಅದರ ಕಡೆಯಿಂದ ಯಾವುದೇ ವಿಫಲತೆಯುಂಟಾಗದೆಂದು ಮನದಟ್ಟು ಮಾಡಿಕೊಳ್ಳುವವರೆಗೆ, ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಆಯ್ಕೆ ಮಾಡಲು ಆ ಚುನಾವಣಾ ಕ್ಷೇತ್ರ ಅಥವಾ ಅಂಥ ಸದಸ್ಯರನ್ನು ಪುನಃ ಕೇಳಿಕೊಳ್ಳಲು ಅದು ಬದ್ಧವಾಗಿರತಕ್ಕುದಲ್ಲ.

೫೪. (ನಿರಸನಗೊಳಿಸಲಾಗಿದೆ).

೫೫. ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯರು ಆ ಜಾತಿಗಳು ಅಥವಾ ಬುಡಕಟ್ಟುಗಳಿಗಾಗಿ ಮೀಸಲಿರಿಸದ ಸ್ಥಾನಗಳನ್ನು ಹೊಂದಲು ಅರ್ಹತೆ:- ಸಂದೇಹದ ನಿವಾರಣೆಗಾಗಿ, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳ ಸದಸ್ಯನು ಆ ಜಾತಿಗಳ ಅಥವಾ ಬುಡಕಟ್ಟುಗಳ ಸದಸ್ಯರಿಗಾಗಿ ಮೀಸಲಿರಿಸದ ಸ್ಥಾನವನ್ನು ಹೊಂದಲು ಅವನು ಸಂದರ್ಭಾನುಸಾರ ಸಂವಿಧಾನದ ಮತ್ತು ಈ ಅಧಿನಿಯಮದ ಮೇರೆಗೆ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, ೧೯೬೩ (೧೯೬೩ರ ೨೦)ರ ಮೇರೆಗೆ ಅಂಥ ಸ್ಥಾನಗಳನ್ನು

ಹೊಂದಲು ಅನ್ಯಥಾ ಅರ್ಹನಾಗಿದ್ದರೆ, ಅನರ್ಹನಾಗತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

೫೫ಎ. (ನಿರಸನಗೊಳಿಸಲಾಗಿದೆ).

ಅಧ್ಯಾಯ IV - ಮತದಾನ

೫೬. ಮತದಾನಕ್ಕಾಗಿ ಕಾಲವನ್ನು ನಿಗದಿಪಡಿಸುವುದು:- ಚುನಾವಣಾ ಆಯೋಗವು, ಮತದಾನ ನಡೆಯುವ ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕುದು:

ಪರಂತು, ಸಂಸದೀಯ ಅಥವಾ ವಿಧಾನಸಭೆಯ ಚುನಾವಣಾ ಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕಾಗಿ ಯಾವುದೇ ಒಂದು ದಿನದಂದು ಹಂಚಿಕೆಯಾದ ಒಟ್ಟು ಅವಧಿಯು ಎಂಟು ಗಂಟೆಗಳಿಗಿಂತ ಕಡಿಮೆ ಇರತಕ್ಕುದಲ್ಲ.

೫೭. ತುರ್ತು ಪರಿಸ್ಥಿತಿಗಳಲ್ಲಿ ಮತದಾನದ ಮುಂದೂಡಿಕೆ:- (೧) ಚುನಾವಣೆಯಲ್ಲಿ ೨೫ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಲಾದ ಯಾವುದೇ ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ೨೯ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿರುವ ಸ್ಥಳದಲ್ಲಿ ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸೆಯ ಮೂಲಕ ವ್ಯವಹರಣೆಗಳಿಗೆ ಅಡ್ಡಿ ಅಥವಾ ತಡೆಯುಂಟಾದರೆ, ಅಥವಾ ಚುನಾವಣೆಯಲ್ಲಿ ಯಾವುದೇ ನೈಸರ್ಗಿಕ ವಿಪತ್ತು ಅಥವಾ ಯಾವುದೇ ಇತರ ಸಾಕಷ್ಟು ಕಾರಣದಿಂದ ಯಾವುದೇ ಮತದಾನ ಕೇಂದ್ರ ಅಥವಾ ಅಂಥ ಸ್ಥಳದಲ್ಲಿ ಮತದಾನವನ್ನು ನಡೆಸಲು ಸಾಧ್ಯವಾಗದಿದ್ದರೆ, ಸಂದರ್ಭಾನುಸಾರ ಅಂಥ ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿ ಅಥವಾ ಅಂಥ ಸ್ಥಳದ ಆಧಿಪತ್ಯವನ್ನು ಹೊಂದಿರುವ ಚುನಾವಣಾಧಿಕಾರಿಯು ಅನಂತರ ಅಧಿಸೂಚಿಸಲಾಗುವ ದಿನಾಂಕಕ್ಕೆ ಆ ಮತದಾನದ ಮುಂದೂಡುವಿಕೆಯನ್ನು ಪ್ರಕಟಿಸತಕ್ಕುದು ಮತ್ತು ಪೀಠಾಸೀನ ಅಧಿಕಾರಿಯು ಆ ಮತದಾನವನ್ನು ಹಾಗೆ ಮುಂದಕ್ಕೆ ಹಾಕಿರುವಲ್ಲಿ ಅವನು ಸಂಬಂಧಪಟ್ಟ ಚುನಾವಣಾಧಿಕಾರಿಗೆ ತಕ್ಷಣ ಅದನ್ನು ತಿಳಿಸತಕ್ಕುದು.

(೨) (೧)ನೇ ಉಪಪ್ರಕರಣದ ಮೇರೆಗೆ ಮತದಾನವನ್ನು ಮುಂದೂಡಿದಾಗಲೆಲ್ಲಾ, ಚುನಾವಣಾಧಿಕಾರಿಯು ಸಮುಚಿತ ಪ್ರಾಧಿಕಾರ ಮತ್ತು ಚುನಾವಣಾ ಆಯೋಗಕ್ಕೆ ಸನ್ನಿವೇಶಗಳನ್ನು ತಕ್ಷಣವೇ ವರದಿ ಮಾಡತಕ್ಕುದು ಮತ್ತು ಸಾಧ್ಯವಾದಷ್ಟು ಬೇಗನೆ ಚುನಾವಣಾ ಆಯೋಗದ ಪೂರ್ವಾನುಮೋದನೆಯನ್ನು ಪಡೆದು ಮತದಾನವು ಪುನರಾರಂಭವಾಗತಕ್ಕ ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ಮತದಾನ ನಡೆಯುವ ಮತದಾನ ಕೇಂದ್ರ ಅಥವಾ ಸ್ಥಳ ಮತ್ತು ಸಮಯವನ್ನು ನಿಗದಿಪಡಿಸತಕ್ಕುದು ಮತ್ತು ಅಂಥ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳನ್ನು ಅಂಥ ಮುಂದೂಡಲಾದ ಮತದಾನವು ಪೂರ್ಣವಾಗುವವರೆಗೆ ಎಣಿಕೆ ಮಾಡತಕ್ಕುದಲ್ಲ.

(೩) ಮೇಲೆ ಹೇಳಿರುವಂಥ ಪ್ರತಿಯೊಂದು ಸಂದರ್ಭದಲ್ಲಿ ಚುನಾವಣಾಧಿಕಾರಿಯು, ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ (೨)ನೇ ಉಪಪ್ರಕರಣದ

ಮೇರೆಗೆ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು ಅಧಿಸೂಚಿಸತಕ್ಕುದು.

೫೮. ಮತಪೆಟ್ಟಿಗೆಗಳ ನಾಶ, ಇತ್ಯಾದಿ ಸಂದರ್ಭದಲ್ಲಿ ಹೊಸ ಮತದಾನ:- (೧) ಯಾವುದೇ ಚುನಾವಣೆಯಲ್ಲಿ -

(ಎ) ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಉಪಯೋಗಿಸಲಾದ ಯಾವುದೇ ಮತಪೆಟ್ಟಿಗೆಯನ್ನು ಪೀಠಾಸೀನ ಅಧಿಕಾರಿಯ ಅಥವಾ ಚುನಾವಣಾಧಿಕಾರಿಯ ಅಭಿರಕ್ಷೆಯಿಂದ ಹೊರಗೆ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ನಷ್ಟಗೊಳಿಸಿದರೆ ಅಥವಾ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಷ್ಟು ಅದನ್ನು ಹಾನಿಗೊಳಿಸಿದರೆ ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡಿದರೆ; ಅಥವಾ

(ಎಎ) ಮತಗಳನ್ನು ದಾಖಲು ಮಾಡುವ ಕ್ರಮದಲ್ಲಿ ಯಾವುದೇ ಮತದಾನ ಯಂತ್ರದಲ್ಲಿ ಯಾಂತ್ರಿಕ ದೋಷ ಉಂಟಾದರೆ; ಅಥವಾ

(ಬಿ) ಮತದಾನವನ್ನು ನಿರರ್ಥಕಗೊಳಿಸುವ ಸಂಭವವಿರುವ ಪ್ರಕ್ರಿಯೆಯಲ್ಲಿನ ಅಂಥ ದೋಷ ಅಥವಾ ಅಕ್ರಮವನ್ನು ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಮಾಡಿದರೆ ,

- ಚುನಾವಣಾಧಿಕಾರಿಯು, ಚುನಾವಣಾ ಆಯೋಗಕ್ಕೆ ಆ ವಿಷಯವನ್ನು ತತ್‌ಕ್ಷಣವೇ ವರದಿ ಮಾಡತಕ್ಕುದು.

(೨) ಆ ತರುವಾಯ, ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು-

(ಎ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು, ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು; ಅಥವಾ

(ಬಿ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಹೊಸ ಮತದಾನದ ಫಲಿತಾಂಶವು ಚುನಾವಣೆಯ ಫಲಿತಾಂಶದ ಮೇಲೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲವೆಂದು ಅಥವಾ ಮತದಾನ ಯಂತ್ರದ ಯಾಂತ್ರಿಕ ದೋಷವು ಅಥವಾ ಪ್ರಕ್ರಿಯೆಯಲ್ಲಿನ ಆ ದೋಷ ಅಥವಾ ಅಕ್ರಮವು ಮುಖ್ಯವಾಗಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಅದು ಆ ಚುನಾವಣೆಯನ್ನು ಮುಂದುವರೆಸಲು ಮತ್ತು

ಪೂರ್ಣಗೊಳಿಸಲು ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಚುನಾವಣಾಧಿಕಾರಿಗೆ ನೀಡತಕ್ಕುದು.

(೩) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಅಥವಾ ಆದೇಶಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯವಾಗುವಂತೆಯೇ ಅಂಥ ಪ್ರತಿಯೊಂದು ಹೊಸ ಮತದಾನಕ್ಕೂ ಅನ್ವಯವಾಗತಕ್ಕುದು.

೫೮ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಆಧಾರದ ಮೇಲೆ ಮತದಾನವನ್ನು ಮುಂದೂಡುವುದು ಅಥವಾ ಚುನಾವಣೆಯನ್ನು ಪ್ರತ್ಯಾದೇಶಿಸುವುದು:- (೧) ಯಾವುದೇ ಚುನಾವಣೆಯಲ್ಲಿ,-

(ಎ) ಮತದಾನ ಕೇಂದ್ರದ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದ (ಇನ್ನು ಮುಂದೆ ಈ ಪ್ರಕರಣದಲ್ಲಿ ಸ್ಥಳವೆಂದು ಉಲ್ಲೇಖಿಸಲಾಗಿದೆ) ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಂಥ ರೀತಿಯಲ್ಲಿ ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು ಸಂಭವಿಸಿದರೆ; ಅಥವಾ

(ಬಿ) ಮತ ಎಣಿಕೆಯ ಸ್ಥಳದಲ್ಲಿ ಎಣಿಕೆಯ ಫಲಿತಾಂಶವನ್ನು ನಿಶ್ಚಿತಗೊಳಿಸಲಾದಂಥ ರೀತಿಯಲ್ಲಿ ಆ ಯಾವುದೇ ಸ್ಥಳದಲ್ಲಿ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು ಸಂಭವಿಸಿದರೆ

- ಚುನಾವಣಾಧಿಕಾರಿಯು ಚುನಾವಣಾ ಆಯೋಗಕ್ಕೆ ಆ ವಿಷಯವನ್ನು ತಕ್ಷಣವೇ ವರದಿ ಮಾಡತಕ್ಕುದು.

(೨) ಚುನಾವಣಾ ಆಯೋಗವು, (೧)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅಧಿಕಾರಿಯಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಮತ್ತು ಎಲ್ಲ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ,-

(ಎ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕುದು; ಅಥವಾ

(ಬಿ) ಅಧಿಕ ಸಂಖ್ಯೆಯ ಮತದಾನ ಕೇಂದ್ರಗಳು ಅಥವಾ ಸ್ಥಳಗಳು ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಗೆ ಒಳಗಾಗಿರುವ ಕಾರಣದಿಂದ ಆ ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಂಭವವಿದೆಯೆಂದು, ಅಥವಾ ಆ ಮತಗಟ್ಟೆಯ ವಶಪಡಿಸಿಕೊಳ್ಳುವಿಕೆಯು, ಚುನಾವಣೆಯ ಫಲಿತಾಂಶದ ಮೇಲೆ ಪರಿಣಾಮ ಬೀರುವಂಥ

ರೀತಿಯಲ್ಲಿ ಮತಗಳ ಎಣಿಕೆಯ ಮೇಲೆ ಪ್ರಭಾವ ಬೀರಿದ್ದಿತು ಎಂದು ಅದಕ್ಕೆ ಮನದಟ್ಟಾದರೆ, ಆ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯನ್ನು ಪ್ರತ್ಯಾದೇಶಿಸತಕ್ಕುದು.

ವಿವರಣೆ:- ಈ ಪ್ರಕರಣದಲ್ಲಿ ''ಮತಗಟ್ಟೆ ವಶಪಡಿಸಿಕೊಳ್ಳುವಿಕೆ" ಎಂಬುದು ೧೩೫ಎ ಪ್ರಕರಣದಲ್ಲಿ ಇರುವಂಥ ಅರ್ಥವನ್ನೇ ಹೊಂದಿರತಕ್ಕುದು.

೫೯. ಚುನಾವಣೆಗಳಲ್ಲಿ ಮತ ನೀಡುವ ವಿಧಾನ:- ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತಪತ್ರದ ಮೂಲಕ ಮತಗಳನ್ನು ನೀಡತಕ್ಕುದು ಮತ್ತು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಯಾವ ಮತಗಳನ್ನೂ ಪ್ರತಿನಿಧಿ ಮತಗಳ ಮೂಲಕ ಪಡೆಯತಕ್ಕುದಲ್ಲ:

ಪರಂತು, ರಾಜ್ಯಸಭೆಯ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿಮಾಡಲು ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮುಕ್ತ ಮತದಾನದ ಮೂಲಕ ನೀಡತಕ್ಕದ್ದು.

೬೦. ಕೆಲವು ವರ್ಗಗಳ ವ್ಯಕ್ತಿಗಳು ಮತದಾನ ಮಾಡುವುದಕ್ಕೆ ವಿಶೇಷ ಕಾರ್ಯವಿಧಾನ:- ೫೯ನೇ ಪ್ರಕರಣದಲ್ಲಿ ಅಡಕವಾಗಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ,-

(ಎ) ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ರ (೧೯೫೦ರ ೪೩) (ಈ ಪ್ರಕರಣದಲ್ಲಿ ಇನ್ನು ಮುಂದೆ ೧೯೫೦ರ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ೨೦ನೇ ಪ್ರಕರಣದ (೮)ನೇ ಉಪಪ್ರಕರಣದ (ಎ) ಖಂಡ ಅಥವಾ (ಬಿ) ಖಂಡದಲ್ಲಿ ಉಲ್ಲೇಖಿತವಾದ ಯಾರೇ ವ್ಯಕ್ತಿಯು ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿ ತನ್ನ ಮತವನ್ನು ತಾನೇ ಖುದ್ದಾಗಿ ಅಥವಾ ಅಂಚೆ ಮತಪತ್ರದ ಮೂಲಕ ಅಥವಾ ಪ್ರತಿನಿಧಿ ಮತದ ಮೂಲಕ ಮತ್ತು ಯಾವುದೇ ಇತರ ವಿಧಾನದಲ್ಲಿ ಅಲ್ಲದೆ ಮತ ನೀಡಲು ಸಾಧ್ಯವಾಗುವಂತೆ;

(ಬಿ) ಮತದಾನ ನಡೆಯುವ ಒಂದು ಚುನಾವಣಾ ಕ್ಷೇತ್ರದಲ್ಲಿ ಈ ಮುಂದಿನ ವ್ಯಕ್ತಿಗಳ ಪೈಕಿ ಯಾರೇ ವ್ಯಕ್ತಿಯು ತನ್ನ ಮತವನ್ನು ಖುದ್ದಾಗಿ ಅಥವಾ ಅಂಚೆ ಮತಪತ್ರದ ಮೂಲಕ ಮತ್ತು ಯಾವುದೇ ಇತರ ವಿಧಾನದಲ್ಲಿ ಅಲ್ಲದೆ ನೀಡಲು ಸಾಧ್ಯವಾಗುವಂತೆ, ಎಂದರೆ:-

(i) ೧೯೫೦ರ ಅಧಿನಿಯಮದ ೨೦ನೇ ಪ್ರಕರಣದ (೮)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಅಥವಾ (ಡಿ) ಖಂಡದಲ್ಲಿ ಉಲ್ಲೇಖಿತನಾದ ಯಾವನೇ ವ್ಯಕ್ತಿಯು;

(ii) ೧೯೫೦ರ ಅಧಿನಿಯಮದ ೨೦ನೇ ಪ್ರಕರಣದ (೩)ನೇ ಉಪಪ್ರಕರಣದ ಉಪಬಂಧಗಳು ಯಾರಿಗೆ ಅನ್ವಯವಾಗುತ್ತವೆಯೋ ಅಂಥ ಯಾರೇ ವ್ಯಕ್ತಿಯ ಹೆಂಡತಿ ಮತ್ತು ಆ ಪ್ರಕರಣದ (೬)ನೇ ಉಪಪ್ರಕರಣಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯೊಂದಿಗೆ ಸಾಮಾನ್ಯವಾಗಿ ವಾಸಿಸುತ್ತಿರುವ ಅಂಥ ಹೆಂಡತಿ;

(ಸಿ) ಚುನಾವಣಾ ಆಯೋಗವು, ಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚಿಸಿದ ವ್ಯಕ್ತಿಗಳ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು, ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಗತ್ಯತೆಗಳ ಈಡೇರಿಕೆಗೆ ಒಳಪಟ್ಟು, ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ತನ್ನ ಮತವನ್ನು ಅಂಚೆ ಮತಪತ್ರದ ಮೂಲಕ, ಆದರೆ ಬೇರೆ ಯಾವುದೇ ವಿಧಾನದಲ್ಲಿ ಅಲ್ಲದೆ ನೀಡಲು ಸಾಧ್ಯವಾಗುವಂತೆ;

(ಡಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ಯಾರೇ ವ್ಯಕ್ತಿಯು, ಆ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಗತ್ಯತೆಗಳ ಈಡೇರಿಕೆಗೆ ಒಳಪಟ್ಟು, ಮತದಾನ ನಡೆಯುವ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ತನ್ನ ಮತವನ್ನು ಅಂಚೆ ಮತಪತ್ರದ ಮೂಲಕ, ಆದರೆ ಬೇರೆ ಯಾವುದೇ ವಿಧಾನದಲ್ಲಿ ಅಲ್ಲದೆ, ನೀಡಲು ಸಾಧ್ಯವಾಗುವಂತೆ

- ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

೬೧. ಮತದಾರರಂತೆ ನಟಿಸುವವರನ್ನು ತಡೆಗಟ್ಟುವುದಕ್ಕಾಗಿ ವಿಶೇಷ ಪ್ರಕ್ರಿಯೆ:- ಮತದಾರರಂತೆ ನಟಿಸುವವರನ್ನು ತಡೆಗಟ್ಟುವ ದೃಷ್ಟಿಯಿಂದ -

(ಎ) ಮತದಾನ ಕೇಂದ್ರದಲ್ಲಿ ಮತ ನೀಡುವ ಉದ್ದೇಶಕ್ಕಾಗಿ ಮತಪತ್ರ ಅಥವಾ ಮತಪತ್ರಗಳನ್ನು ಕೋರುವ ಪ್ರತಿಯೊಬ್ಬ ಮತದಾರನಿಗೆ ಅಂಥ ಪತ್ರ ಅಥವಾ ಪತ್ರಗಳನ್ನು ನೀಡುವುದಕ್ಕೆ ಮೊದಲು ಅವನ ಹೆಬ್ಬೆರಳು ಅಥವಾ ಯಾವುದೇ ಇತರ ಬೆರಳಿನ ಮೇಲೆ ಅಳಿಸಲಾಗದ ಮಸಿಯಿಂದ ಗುರುತು ಮಾಡುವುದಕ್ಕಾಗಿ;

(ಬಿ) ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ ರ ೪೩)ರ ಮೇರೆಗೆ ಈ ಬಗ್ಗೆ ರಚಿಸಲಾದ ನಿಯಮಗಳ ಮೇರೆಗೆ ಮತದಾನ ಕೇಂದ್ರವಿರುವ ಚುನಾವಣಾ ಕ್ಷೇತ್ರದ ಮತದಾರರಿಗೆ ಅವರವರ ಭಾವಚಿತ್ರಗಳು ಲಗತ್ತಾದ ಅಥವಾ ಲಗತ್ತಾಗದೇ ಇರುವ ಗುರುತು ಚೀಟಿಗಳನ್ನು ಸರಬರಾಜು ಮಾಡಲಾಗಿದ್ದರೆ ಮೇಲೆ ಹೇಳಿರುವ ಪ್ರತಿಯೊಬ್ಬ ಅಂಥ ಮತದಾರನಿಗೆ ಮತಪತ್ರ ಅಥವಾ ಮತಪತ್ರಗಳನ್ನು ನೀಡುವುದಕ್ಕೆ ಮೊದಲು ಅವನು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಅಥವಾ ಮತದಾನಾಧಿಕಾರಿಯ ಮುಂದೆ ತನ್ನ ಗುರುತು ಚೀಟಿಯನ್ನು ಹಾಜರುಪಡಿಸುವುದಕ್ಕಾಗಿ; ಮತ್ತು

(ಸಿ) ಯಾವನೇ ವ್ಯಕ್ತಿಯು ಯಾವುದೇ ಮತಪತ್ರವನ್ನು ಕೋರುವ ಸಮಯದಲ್ಲಿ ಅವನ ಹೆಬ್ಬೆರಳಿನ ಅಥವಾ ಯಾವುದೇ ಇತರ ಬೆರಳಿನ ಮೇಲೆ ಈಗಾಗಲೇ ಅಂಥ ಗುರುತನ್ನು ಹೊಂದಿದ್ದರೆ ಅಥವಾ ಕೇಳಿದಾಗ ತನ್ನ ಗುರುತಿನ ಚೀಟಿಯನ್ನು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯ ಅಥವಾ ಮತದಾನ ಅಧಿಕಾರಿಯ ಮುಂದೆ ಹಾಜರುಪಡಿಸದಿದ್ದರೆ, ಮತದಾನ ಕೇಂದ್ರದಲ್ಲಿ ಮತ ನೀಡಲು ಅಂಥ ವ್ಯಕ್ತಿಗೆ ಅಂಥ ಪತ್ರ ನೀಡುವುದನ್ನು ನಿಷೇಧಿಸುವುದಕ್ಕಾಗಿ

- ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬಹುದು.

೬೧ಎ. ಚುನಾವಣೆಗಳಲ್ಲಿ ಮತದಾನ ಯಂತ್ರಗಳು:- ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮದಲ್ಲಿ ಏನೇ ಅಡಕವಾಗಿದ್ದರೂ, ಚುನಾವಣಾ ಆಯೋಗವು ಪ್ರತಿಯೊಂದು ಸಂದರ್ಭದ ಸನ್ನಿವೇಶಗಳನ್ನು ಗಮನಿಸಿ ನಿರ್ದಿಷ್ಟಪಡಿಸಬಹುದಾದಂಥ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತದಾನ ಯಂತ್ರಗಳ ಮೂಲಕ ಮತ ನೀಡುವುದನ್ನು ಮತ್ತು ದಾಖಲಿಸುವುದನ್ನು ಅಂಗೀಕರಿಸಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ "ಮತದಾನ ಯಂತ್ರ" ಎಂದರೆ ಮತಗಳನ್ನು ನೀಡಲು ಅಥವಾ ದಾಖಲಿಸಲು ಎಲೆಕ್ಟ್ರಾನಿಕ್ ಚಾಲಿತ ಅಥವಾ ಇತರೆ ರೀತಿಯಲ್ಲಿ ಉಪಯೋಗಿಸುವ ಯಾವುದೇ ಯಂತ್ರ ಅಥವಾ ಸಲಕರಣೆ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಮತಪೆಟ್ಟಿಗೆ ಅಥವಾ ಮತಪತ್ರ ಕುರಿತ ಯಾವುದೇ ಉಲ್ಲೇಖವನ್ನು ಅನ್ಯಥಾ ಉಪಬಂಧಿಸಿದುದನ್ನುಳಿದು, ಯಾವುದೇ ಚುನಾವಣೆಯಲ್ಲಿ ಅಂಥ ಮತದಾನ ಯಂತ್ರವನ್ನು ಉಪಯೋಗಿಸಿದಲ್ಲೆಲ್ಲ ಅಂಥ ಮತದಾನ ಯಂತ್ರವನ್ನು ಕುರಿತ ಉಲ್ಲೇಖವನ್ನು ಒಳಗೊಂಡಿರುವುದಾಗಿ ಅರ್ಥೈಸತಕ್ಕುದು.

೬೨. ಮತ ನೀಡುವ ಹಕ್ಕು:- (೧) ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತತ್ಕಾಲದಲ್ಲಿ ನಮೂದಾಗಿರದ ಯಾವನೇ ವ್ಯಕ್ತಿಯು ಆ ಚುನಾವಣಾ ಕ್ಷೇತ್ರದಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕುದಲ್ಲ ಮತ್ತು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಉಪಬಂಧಿಸಿರುವ ಹೊರತು, ಹಾಗೆ ನಮೂದಾಗಿರುವ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕುದು.

(೨) ಯಾವನೇ ವ್ಯಕ್ತಿ ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ (೧೯೫೦ರ ೪೩)ರ ೧೬ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿದ್ದರೆ, ಅವನು ಯಾವುದೇ ಚುನಾವಣಾ ಕ್ಷೇತ್ರದಲ್ಲಿನ ಚುನಾವಣೆಯಲ್ಲಿ ಮತ ನೀಡತಕ್ಕುದಲ್ಲ.

(೩) ಯಾವನೇ ವ್ಯಕ್ತಿಯು ಸಾರ್ವತ್ರಿಕ ಚುನಾವಣೆಯಲ್ಲಿ ಒಂದೇ ವರ್ಗದ ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಲ್ಲಿ ಮತ ನೀಡತಕ್ಕುದಲ್ಲ ಮತ್ತು ಒಬ್ಬ ವ್ಯಕ್ತಿಯು ಅಂಥ ಒಂದಕ್ಕಿಂತ ಹೆಚ್ಚಿನ ಚುನಾವಣಾ ಕ್ಷೇತ್ರಗಳಲ್ಲಿ ಮತ ನೀಡಿದರೆ ಅಂಥ ಎಲ್ಲ ಚುನಾವಣಾ ಕ್ಷೇತ್ರಗಳಲ್ಲಿನ ಅವನ ಮತಗಳು ಶೂನ್ಯವಾಗತಕ್ಕುದು.

(೪) ಯಾವನೇ ವ್ಯಕ್ತಿಯ ಹೆಸರು ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ನೋಂದಾಯಿತವಾಗಿರಬಹುದಾದಾಗ್ಯೂ ಅವನು ಯಾವುದೇ ಚುನಾವಣೆಯಲ್ಲಿ ಅದೇ ಚುನಾವಣಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಸಲ ಮತ ನೀಡತಕ್ಕುದಲ್ಲ ಮತ್ತು ಅವನು ಹಾಗೆ ಮತ ನೀಡಿದ್ದೇ ಆದರೆ ಆ ಕ್ಷೇತ್ರದಲ್ಲಿನ ಅವನ ಎಲ್ಲಾ ಮತಗಳು ಶೂನ್ಯವಾಗತಕ್ಕುದು.

(೫) ಯಾವನೇ ವ್ಯಕ್ತಿಯು ಕಾರಾವಾಸದ ಅಥವಾ ಗಡಿಪಾರು ಶಿಕ್ಷೆಯ ಮೇರೆಗೆ ಅಥವಾ ಅನ್ಯಥಾ ಕಾರಾಗೃಹದಲ್ಲಿ ಬಂಧಿತನಾಗಿದ್ದರೆ ಅಥವಾ ಪೊಲೀಸರ ಕಾನೂನು ಸಮ್ಮತ ಅಭಿರಕ್ಷೆಯಲ್ಲಿದ್ದರೆ ಅವನು ಯಾವುದೇ ಚುನಾವಣೆಯಲ್ಲಿ ಮತ ನೀಡತಕ್ಕುದಲ್ಲ:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟಿರುವ ವ್ಯಕ್ತಿಗೆ ಅನ್ವಯವಾಗತಕ್ಕುದಲ್ಲ.

(೬) (೩) ಮತ್ತು (೪)ನೇ ಉಪಪ್ರಕರಣಗಳಲ್ಲಿರುವುದು ಯಾವುದೂ, ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಮತದಾರನಿಗೆ ಪ್ರತಿನಿಧಿ ಮತವೆಂದು ಮತನೀಡುವಷ್ಟು ಮಟ್ಟಿಗೆ ಅಂಥ ಮತದಾರನಿಗಾಗಿ ಪ್ರತಿನಿಧಿ ಮತವೆಂದು ಮತ ಚಲಾಯಿಸಲು ಅಧಿಕೃತನಾದ ಒಬ್ಬ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

೬೩. (ನಿರಸನಗೊಳಿಸಲಾಗಿದೆ).

ಅಧ್ಯಾಯ - V

ಮತಗಳ ಎಣಿಕೆ

೬೪. ಮತಗಳ ಎಣಿಕೆ:- ಮತದಾನ ನಡೆದಿರುವ ಪ್ರತಿಯೊಂದು ಚುನಾವಣೆಯಲ್ಲಿ ಚುನಾವಣಾಧಿಕಾರಿಯ ಮೂಲಕ, ಅಥವಾ ಅವನ ಮೇಲ್ವಿಚಾರಣೆ ಮತ್ತು ನಿರ್ದೇಶನದ ಮೇರೆಗೆ ಮತಗಳನ್ನು ಎಣಿಕೆ ಮಾಡತಕ್ಕುದು, ಮತ್ತು ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿ, ಅವನ ಚುನಾವಣಾ ಏಜೆಂಟ್ ಮತ್ತು ಅವನ ಎಣಿಕೆ ಏಜೆಂಟರು ಎಣಿಕೆ ಸಮಯದಲ್ಲಿ ಹಾಜರಿರುವ ಹಕ್ಕನ್ನು ಹೊಂದಿರತಕ್ಕುದು.

೬೪ಎ. ಎಣಿಕೆ ಸಮಯದಲ್ಲಿ ಮತಪತ್ರಗಳ ನಾಶ, ನಷ್ಟ, ಇತ್ಯಾದಿ:- (೧) ಮತಪತ್ರಗಳ ಎಣಿಕೆಯು ಪೂರ್ಣಗೊಳ್ಳುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳದಲ್ಲಿ ಉಪಯೋಗಿಸಿದ ಯಾವುವೇ ಮತಪತ್ರಗಳನ್ನು ಚುನಾವಣಾಧಿಕಾರಿಯ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ಹೊರಕ್ಕೆ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಗೊಳಿಸಿದರೆ ಅಥವಾ ನಷ್ಟಗೊಳಿಸಿದರೆ ಅಥವಾ ಆ ಮತದಾನ ಕೇಂದ್ರದಲ್ಲಿನ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ನಿಶ್ಚಿತಗೊಳಿಸಲಾಗದಷ್ಟು ಹಾನಿಗೊಳಿಸಿದರೆ ಅಥವಾ ಅದರೊಂದಿಗೆ ಹಸ್ತಕ್ಷೇಪ ಮಾಡಿದರೆ ಚುನಾವಣಾಧಿಕಾರಿಯು ಆ ವಿಷಯವನ್ನು ತಕ್ಷಣವೇ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕುದು.

(೨) ಆ ತರುವಾಯ, ಚುನಾವಣಾ ಆಯೋಗವು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು,-

(ಎ) ಮತಗಳ ಎಣಿಕೆಯನ್ನು ನಿಲ್ಲಿಸುವಂತೆ ನಿರ್ದೇಶಿಸತಕ್ಕುದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕುದು, ಆ

ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸ ಮತದಾನವನ್ನು ನಡೆಸುವುದಕ್ಕಾಗಿ ಒಂದು ದಿನವನ್ನು ಗೊತ್ತುಪಡಿಸತಕ್ಕುದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕುದು ಮತ್ತು ಹಾಗೆ ಗೊತ್ತುಪಡಿಸಿದ ದಿನವನ್ನು ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ತಾನು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಅಧಿಸೂಚಿಸತಕ್ಕುದು; ಅಥವಾ

(ಬಿ) ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಹೊಸ ಮತದಾನದ ಫಲಿತಾಂಶವು ಯಾವುದೇ ರೀತಿಯಲ್ಲಿ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವುದಿಲ್ಲವೆಂದು ಅದಕ್ಕೆ ಮನದಟ್ಟಾದರೆ, ಮತಗಳ ಎಣಿಕೆಯ ಪುನರಾರಂಭ ಮತ್ತು ಪೂರ್ಣಗೊಳಿಸುವುದಕ್ಕಾಗಿ ಮತ್ತು ಯಾವ ಚುನಾವಣೆಗೆ ಸಂಬಂಧಿಸಿದಂತೆ ಮತಗಳನ್ನು ಎಣಿಕೆ ಮಾಡಲಾಗಿದೆಯೋ ಆ ಚುನಾವಣೆಯನ್ನು ಮುಂದುವರಿಸುವುದಕ್ಕಾಗಿ ಮತ್ತು ಪೂರ್ಣಗೊಳಿಸುವುದಕ್ಕಾಗಿ ಅದು ಯುಕ್ತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಚುನಾವಣಾಧಿಕಾರಿಗೆ ನೀಡತಕ್ಕುದು.

(೩) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಅಥವಾ ಆದೇಶಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯಿಸುವಂತೆ ಪ್ರತಿ ಹೊಸ ಮತದಾನಕ್ಕೆ ಅನ್ವಯವಾಗತಕ್ಕುದು.

೬೫. ಸಮಾನ ಮತಗಳು:- ಮತಗಳ ಎಣಿಕೆಯು ಪೂರ್ಣಗೊಂಡ ತರುವಾಯ ಯಾರೇ ಅಭ್ಯರ್ಥಿಗಳ ನಡುವೆ ಮತಗಳು ಸಮಾನವಿರುವುದಾಗಿ ಕಂಡುಬಂದರೆ, ಮತ್ತು ಒಂದು ಮತದ ಸೇರ್ಪಡೆಯಿಂದ ಆ ಅಭ್ಯರ್ಥಿಗಳ ಪೈಕಿ ಯಾವನಾದರೂ ಚುನಾಯಿತನೆಂದು ಘೋಷಿತನಾಗಲು ಹಕ್ಕುಳ್ಳವನಾಗುವುದಾದರೆ ಚುನಾವಣಾ ಅಧಿಕಾರಿಯು, ಆ ಅಭ್ಯರ್ಥಿಗಳ ನಡುವೆ ಚೀಟಿ ಎತ್ತುವುದರ ಮೂಲಕ ಫಲಿತಾಂಶವನ್ನು ತಕ್ಷಣವೇ ನಿರ್ಧರಿಸತಕ್ಕುದು, ಮತ್ತು ಚೀಟಿ ಯಾವ ಅಭ್ಯರ್ಥಿಯ ಪರ ಬರುವುದೋ ಆ ಅಭ್ಯರ್ಥಿಯು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಮುಂದುವರೆಯತಕ್ಕುದು.

೬೬. ಫಲಿತಾಂಶಗಳ ಘೋಷಣೆ:- ಮತಗಳ ಎಣಿಕೆಯು ಪೂರ್ಣಗೊಂಡಾಗ ಚುನಾವಣಾ ಅಧಿಕಾರಿಯು, ಚುನಾವಣಾ ಆಯೋಗದಿಂದ ತದ್ವಿರುದ್ಧವಾದ ಯಾವುದೇ ನಿರ್ದೇಶನ ಇಲ್ಲದಿರುವಲ್ಲಿ, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿರುವ ನಿಯಮಗಳ ಮೂಲಕ ಉಪಬಂಧಿತವಾಗಿರುವ ರೀತಿಯಲ್ಲಿ ಚುನಾವಣೆಯ ಫಲಿತಾಂಶವನ್ನು ತಕ್ಷಣವೇ ಘೋಷಿಸತಕ್ಕುದು.

೬೭. ಫಲಿತಾಂಶದ ವರದಿ:- ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ ಆದಷ್ಟು ಬೇಗನೆ, ಚುನಾವಣಾಧಿಕಾರಿಯು ಸಮುಚಿತ ಪ್ರಾಧಿಕಾರ ಮತ್ತು ಚುನಾವಣಾ ಆಯೋಗಕ್ಕೆ ಮತ್ತು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದ ಚುನಾವಣೆಯ ಸಂದರ್ಭದಲ್ಲಿ ಆ ಸದನದ ಕಾರ್ಯದರ್ಶಿಗೆ ಸಹ ಫಲಿತಾಂಶವನ್ನು ವರದಿ ಮಾಡತಕ್ಕುದು, ಮತ್ತು ಸಮುಚಿತ ಪ್ರಾಧಿಕಾರವು

ಚುನಾಯಿತರಾದ ಅಭ್ಯರ್ಥಿಗಳ ಹೆಸರುಗಳನ್ನೊಳಗೊಂಡಿರುವ ಘೋಷಣೆಗಳನ್ನು ರಾಜಪತ್ರದಲ್ಲಿ ಪ್ರಕಟಿಸುವಂತೆ ಮಾಡತಕ್ಕುದು.

೬೭ಎ. ಅಭ್ಯರ್ಥಿಯು ಆಯ್ಕೆಯಾದ ದಿನಾಂಕ:- ಈ ಅಧಿನಿಯಮದ ಉದ್ದೇಶಗಳಿಗಾಗಿ, ೫೩ನೇ ಪ್ರಕರಣದ ಅಥವಾ ೬೬ನೇ ಪ್ರಕರಣದ ಉಪಬಂಧಗಳ ಮೇರೆಗೆ ಚುನಾವಣಾ ಅಧಿಕಾರಿಯು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಸದನಕ್ಕೆ ಒಬ್ಬ ಅಭ್ಯರ್ಥಿಯು ಆಯ್ಕೆಗೊಂಡಿರುವನೆಂದು ಘೋಷಿಸುವ ದಿನಾಂಕವು ಆ ಅಭ್ಯರ್ಥಿಯು ಆಯ್ಕೆಯಾದ ದಿನಾಂಕವಾಗಿರತಕ್ಕುದು.

ಅಧ್ಯಾಯ - VI

ಬಹುಪದೀಯ ಚುನಾವಣೆ

೬೮. ಸಂಸತ್ತಿನ ಉಭಯ ಸದನಗಳಿಗೆ ಆಯ್ಕೆಯಾದಾಗ ಸ್ಥಾನಗಳನ್ನು ತೆರವು ಮಾಡುವುದು:- (೧) ಲೋಕಸಭೆ ಮತ್ತು ರಾಜ್ಯ ಸಭೆಯ ಎರಡೂ ಸದನಗಳಿಗೆ ಸದಸ್ಯನೆಂದು ಚುನಾಯಿತನಾಗಿರುವ ಮತ್ತು ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರದ ಯಾವನೇ ವ್ಯಕ್ತಿಯು ಲಿಖಿತ ನೋಟೀಸಿಗೆ ಸಹಿ ಹಾಕಿ ಮತ್ತು ಅವನು ಹಾಗೆ ಆಯ್ಕೆಗೊಂಡ ದಿನಾಂಕ ಅಥವಾ ದಿನಾಂಕಗಳ ತರುವಾಯದ ದಿನಾಂಕದಿಂದ ಹತ್ತು ದಿವಸಗಳೊಳಗಾಗಿ ಚುನಾವಣಾ ಆಯೋಗದ ಕಾರ್ಯದರ್ಶಿಗೆ ಅದನ್ನು ಒಪ್ಪಿಸಿ ಅವನು ಆ ಸದನಗಳ ಪೈಕಿ ಯಾವುದರಲ್ಲಿ ಸೇವೆ ಸಲ್ಲಿಸಲು ಇಚ್ಛಿಸುತ್ತಾನೋ ಅದನ್ನು ತಿಳಿಸಬಹುದು, ಮತ್ತು ಆ ತರುವಾಯ ಅವನು ಸೇವೆ ಸಲ್ಲಿಸಲು ಇಚ್ಛಿಸದ ಸದನದಲ್ಲಿನ ಅವನ ಸ್ಥಾನವು ತೆರವಾಗತಕ್ಕುದು.

(೨) ಮೇಲೆ ಹೇಳಿದ ಅವಧಿಯೊಳಗಾಗಿ ಹಾಗೆ ತಿಳಿಸಲು ತಪ್ಪಿದಲ್ಲಿ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಆ ಅವಧಿಯು ಮುಕ್ತಾಯಗೊಂಡ ತರುವಾಯ ತೆರವಾಗತಕ್ಕುದು.

(೩) (೧)ನೇ ಉಪಪ್ರಕರಣದ ಮೇರೆಗೆ ನೀಡಿದ ಯಾವುದೇ ನೋಟೀಸು ಅಂತಿಮವಾದುದು ಮತ್ತು ಹಿಂತೆಗೆದುಕೊಳ್ಳಲಿಕ್ಕಾಗದಂತಹುದಾಗಿರತಕ್ಕುದು.

(೪) ಈ ಪ್ರಕರಣ ಮತ್ತು ೬೯ನೇ ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿ ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದ ಸದಸ್ಯನೆಂದು ಆಯ್ಕೆಗೊಂಡಿರುವ ದಿನಾಂಕವು, ಚುನಾಯಿತ ಸದಸ್ಯನ ಸಂದರ್ಭದಲ್ಲಿ ಅವನು ಚುನಾಯಿತನಾದ ದಿನಾಂಕವು ಮತ್ತು ನಾಮನಿರ್ದೇಶಿತ ಸದಸ್ಯನ ಸಂದರ್ಭದಲ್ಲಿ ಭಾರತ ರಾಜಪತ್ರದಲ್ಲಿ ಅವನ ನಾಮನಿರ್ದೇಶನದ ಮೊದಲ ಪ್ರಕಟಣೆ ದಿನಾಂಕವು ಆಗಿರತಕ್ಕುದು.

೬೯. ಈಗಾಗಲೇ ಒಂದು ಸದನದ ಸದಸ್ಯರಾಗಿರುವ ವ್ಯಕ್ತಿಗಳು ಸಂಸತ್ತಿನ ಇನ್ನೊಂದು ಸದನಕ್ಕೆ ಚುನಾಯಿತರಾದಾಗ ಸ್ಥಾನಗಳನ್ನು ತೆರವು ಮಾಡುವುದು:- (೧) ಈಗಾಗಲೇ ಲೋಕಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ರಾಜ್ಯ ಸಭೆಯ ಸದಸ್ಯನಾಗಿ

ಆಯ್ಕೆಗೊಂಡರೆ ಲೋಕಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕುದು.

(೨) ಈಗಾಗಲೇ ರಾಜ್ಯ ಸಭೆಯ ಸದಸ್ಯನಾಗಿರುವ ಮತ್ತು ಅಂಥ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ಒಬ್ಬ ವ್ಯಕ್ತಿಯು ಲೋಕಸಭೆಯ ಸದಸ್ಯನಾಗಿ ಆಯ್ಕೆಯಾದರೆ, ರಾಜ್ಯ ಸಭೆಯಲ್ಲಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಯಾದ ದಿನಾಂಕದಂದು ತೆರವಾಗತಕ್ಕುದು.

೭೦. ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಎರಡು ಸದನಗಳ ಪೈಕಿ ಯಾವುದೇ ಸದನದಲ್ಲಿನ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಗೊಳ್ಳುವುದು:- ಒಬ್ಬ ವ್ಯಕ್ತಿಯು ಸಂಸತ್ತಿನ ಉಭಯ ಸದನಗಳ ಪೈಕಿ ಯಾವುದೇ ಸದನದಲ್ಲಿನ ಅಥವಾ ರಾಜ್ಯ ವಿಧಾನ ಮಂಡಲದ ಸದನದಲ್ಲಿನ ಅಥವಾ ಉಭಯ ಸದನಗಳ ಪೈಕಿ ಯಾವುದೇ ಸದನದ ಒಂದಕ್ಕಿಂತ ಹೆಚ್ಚು ಸ್ಥಾನಗಳಿಗೆ ಆಯ್ಕೆಯಾಗಿದ್ದರೆ, ಆಗ ಸಂದರ್ಭಾನುಸಾರ, ಅಧ್ಯಕ್ಷ ಅಥವಾ ಸಭಾಪತಿಗೆ ಅಥವಾ ನಿಯಮಿಸಬಹುದಾದಂಥ ಇತರ ಪ್ರಾಧಿಕಾರ ಅಥವಾ ಅಧಿಕಾರಿಗೆ ತನ್ನ ಹಸ್ತಾಕ್ಷರದೊಡನೆ ಬರೆಯುವ ಮೂಲಕ ಆ ಸ್ಥಾನಗಳ ಪೈಕಿ ಒಂದನ್ನು ಉಳಿದು ಎಲ್ಲವುಗಳಿಗೆ ನಿಯಮಿಸಿದ ಕಾಲದೊಳಗೆ ಅವನು ರಾಜೀನಾಮೆ ನೀಡುವ ಹೊರತು, ಎಲ್ಲ ಸ್ಥಾನಗಳು ತೆರವಾಗತಕ್ಕುದು.

ಅಧ್ಯಾಯ - VII
ಚುನಾವಣಾ ಫಲಿತಾಂಶಗಳು ಮತ್ತು ನಾಮನಿರ್ದೇಶನಗಳ ಪ್ರಕಟಣೆ

೭೧. ರಾಜ್ಯಸಭೆಯ ಚುನಾವಣೆಗಳ ಫಲಿತಾಂಶಗಳು ಮತ್ತು ರಾಷ್ಟ್ರಪತಿಯು ನಾಮನಿರ್ದೇಶನ ಮಾಡಿದ ವ್ಯಕ್ತಿಗಳ ಹೆಸರುಗಳ ಪ್ರಕಟಣೆ:- ೧೨ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗಳಿಗೆ ಅನುಸಾರವಾಗಿ ಯಾವುದೇ ವರ್ಷದಲ್ಲಿ ಚುನಾವಣೆಗಳನ್ನು ನಡೆಸಿದ ತರುವಾಯ ಸದರಿ ಚುನಾವಣೆಗಳಲ್ಲಿ ರಾಜ್ಯ ವಿಧಾನ ಸಭೆಗಳ ಚುನಾಯಿತ ಸದಸ್ಯರು ಮತ್ತು ವಿವಿಧ ಒಕ್ಕೂಟ ರಾಜ್ಯ ಕ್ಷೇತ್ರಗಳಿಗಾಗಿನ ಚುನಾಯಕ ಗಣಗಳ ಸದಸ್ಯರು ಚುನಾಯಿಸಿರುವ ಸದಸ್ಯರ ಹೆಸರುಗಳನ್ನು ಆಂನೇ ಅನುಚ್ಛೇದದ (೧)ನೇ ಖಂಡದ (ಎ) ಉಪಖಂಡದ ಮೇರೆಗೆ ಅಥವಾ ಯಾವುದೇ ಇತರ ಉಪಬಂಧಗಳ ಮೇರೆಗೆ ರಾಷ್ಟ್ರಪತಿಯು ರಾಜ್ಯ ಸಭೆಗೆ ನಾಮನಿರ್ದೇಶನ ಮಾಡಿರುವ ಯಾರೇ ವ್ಯಕ್ತಿಗಳ ಹೆಸರುಗಳೊಂದಿಗೆ ರಾಜಪತ್ರದಲ್ಲಿ ಸಮುಚಿತ ಪ್ರಾಧಿಕಾರವು ಅಧಿಸೂಚಿಸತಕ್ಕುದು.

೭೨. (ನಿರಸನಗೊಳಿಸಲಾಗಿದೆ).

೭೩. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಸಾರ್ವತ್ರಿಕ ಚುನಾವಣಾ ಫಲಿತಾಂಶಗಳ ಪ್ರಕಟಣೆ:- ಹೊಸ ಲೋಕಸಭೆ ಅಥವಾ ಹೊಸ ರಾಜ್ಯ ವಿಧಾನಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಗಳು ನಡೆದಿರುವಲ್ಲಿ (೭೦ನೇ ಪ್ರಕರಣದ (ಡಿ) ಖಂಡದ ಮೇರೆಗೆ ಮೂಲತಃ ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕಾಗಿ ಮತದಾನವು ನಡೆಯದೇ ಇರತಕ್ಕಂಥ ಅಥವಾ ೧೫೪ನೇ

ಪ್ರಕರಣದ ಉಪಬಂಧಗಳ ಮೇರೆಗೆ ಚುನಾವಣೆ ಪೂರ್ಣಗೊಳಿಸುವ ಕಾಲವನ್ನು ವಿಸ್ತರಿಸಲಾಗಿರುವಂಥ ಚುನಾವಣಾ ಕ್ಷೇತ್ರಗಳನ್ನು ಹೊರತುಪಡಿಸಿ) ಇತರ ಎಲ್ಲ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣಾ ಫಲಿತಾಂಶಗಳನ್ನು ಚುನಾವಣಾಧಿಕಾರಿಯು ಸಂದರ್ಭಾನುಸಾರ ೫೩ನೇ ಪ್ರಕರಣ ಅಥವಾ ೬೬ನೇ ಪ್ರಕರಣದ ಉಪಬಂಧಗಳ ಮೇರೆಗೆ ಘೋಷಿಸಿದ ತರುವಾಯ ಚುನಾವಣಾ ಆಯೋಗವು ಸಾಧ್ಯವಾದಷ್ಟು ಬೇಗನೆ ರಾಜಪತ್ರದಲ್ಲಿ ಆ ಚುನಾವಣಾ ಕ್ಷೇತ್ರಗಳಿಗಾಗಿ ಚುನಾಯಿತರಾಗಿರುವ ಸದಸ್ಯರ ಹೆಸರುಗಳನ್ನು ಅಧಿಸೂಚಿಸತಕ್ಕುದು ಮತ್ತು ಅಂಥ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ಆ ಲೋಕ ಸಭೆ ಅಥವಾ ವಿಧಾನಸಭೆಯನ್ನು ಕ್ರಮಬದ್ಧವಾಗಿ ರಚಿಸಲಾಗಿದೆ ಎಂದು ಭಾವಿಸತಕ್ಕುದು:

ಪರಂತು, ಅಂಥ ಅಧಿಸೂಚನೆಯ ಹೊರಡಿಸುವಿಕೆಯು -

(ಎ) (i) ೩೦ನೇ ಪ್ರಕರಣದ (ಡಿ) ಖಂಡದ ಮೇರೆಗೆ ಮೂಲತಃ ನಿಗದಿಪಡಿಸಿದ ದಿನಾಂಕದಂದು ಯಾವುದೇ ಕಾರಣಕ್ಕಾಗಿ ಮತದಾನವು ನಡೆಯದಿರತಕ್ಕಂಥ ಯಾವುದೇ ಸಂಸದೀಯ ಅಥವಾ ವಿಧಾನಸಭೆಯ ಚುನಾವಣಾ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿ ಮತದಾನ ನಡೆಸುವುದನ್ನು ಮತ್ತು ಚುನಾವಣೆ ಪೂರ್ಣಗೊಳಿಸುವುದನ್ನು; ಅಥವಾ

(ii) ೧೫೩ನೇ ಪ್ರಕರಣದ ಉಪಬಂಧಗಳ ಮೇರೆಗೆ ಕಾಲವನ್ನು ವಿಸ್ತರಿಸಿದ ಯಾವುದೇ ಸಂಸದೀಯ ಅಥವಾ ವಿಧಾನ ಸಭೆ ಚುನಾವಣಾ ಕ್ಷೇತ್ರ ಅಥವಾ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣೆ ಪೂರ್ಣಗೊಳ್ಳುವುದನ್ನು

- ಪ್ರತಿವಾರಿಸುವುದಾಗಿ; ಅಥವಾ

(ಬಿ) ಸದರಿ ಅಧಿಸೂಚನೆಯನ್ನು ಹೊರಡಿಸುವ ನಿಕಟ ಪೂರ್ವದಲ್ಲಿ ಕಾರ್ಯನಿರ್ವಹಿಸುವ ಲೋಕಸಭೆ ಅಥವಾ ರಾಜ್ಯ ವಿಧಾನ ಸಭೆ, ಯಾವುದಾದರೂ ಇದ್ದರೆ ಅದರ ಅವಧಿಯ ಮೇಲೆ ಪರಿಣಾಮ ಬೀರುವುದಾಗಿ

- ಭಾವಿಸತಕ್ಕುದಲ್ಲ.

೭೩ಎ. ಕೆಲವು ಚುನಾವಣೆಗಳ ಬಗ್ಗೆ ವಿಶೇಷ ಉಪಬಂಧ:- ೭೩ನೇ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿ ಏನೇ ಇದ್ದಾಗ್ಯೂ, ಒಂಬತ್ತನೇ ಲೋಕಸಭೆಯನ್ನು ವಿಘಟಿಸಿದ ತರುವಾಯ ಹೊಸ ಲೋಕಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸಾರ್ವತ್ರಿಕ ಚುನಾವಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ,-

(ಎ) ೭೩ನೇ ಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ಸಂಸದೀಯ ಚುನಾವಣಾ ಕ್ಷೇತ್ರಗಳನ್ನು ಗಣನೆಗೆ ತೆಗೆದುಕೊಳ್ಳದೆ ಹೊರಡಿಸಬಹುದು; ಮತ್ತು

(ಬಿ) ಚುನಾವಣಾ ಆಯೋಗವು, ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ಸಂಸದೀಯ ಚುನಾವಣಾ ಕ್ಷೇತ್ರಗಳಿಂದ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ

ಮತ್ತು ಅದು ಸಮುಚಿತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ದಿನಾಂಕಗಳಂದು ಕ್ರಮಗಳನ್ನು ಕೈಗೊಳ್ಳಬಹುದು.

೭೪. ರಾಜ್ಯ ವಿಧಾನಪರಿಷತ್ತುಗಳ ಚುನಾವಣೆಗಳ ಫಲಿತಾಂಶಗಳನ್ನು ಮತ್ತು ಅಂಥ ಪರಿಷತ್ತುಗಳಿಗೆ ನಾಮನಿರ್ದೇಶಿತರಾದ ವ್ಯಕ್ತಿಗಳ ಹೆಸರುಗಳನ್ನು ಪ್ರಕಟಿಸುವುದು:- ೧೫೭ಎ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಗನುಸಾರವಾಗಿ ಅಥವಾ ೧೬ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಗಳಿಗನುಸಾರವಾಗಿ ಯಾವುದೇ ವರ್ಷದಲ್ಲಿ ನಡೆದ ಚುನಾವಣೆಗಳ ತರುವಾಯ ಸದರಿ ಚುನಾವಣೆಗಳಲ್ಲಿ ಪರಿಷತ್ತಿನ ವಿವಿಧ ಚುನಾವಣಾ ಕ್ಷೇತ್ರಗಳಿಗಾಗಿ ಆಯ್ಕೆಯಾದ ಮತ್ತು ರಾಜ್ಯ ವಿಧಾನ ಸಭೆಯ ಸದಸ್ಯರಿಂದ ಆಯ್ಕೆಯಾದ ಸದಸ್ಯರ ಹೆಸರುಗಳನ್ನು, ೧೭೧ನೇ ಅನುಚ್ಛೇದದ (೩)ನೇ ಖಂಡದ (ಇ) ಉಪಖಂಡದ ಮೇರೆಗೆ ರಾಜ್ಯಪಾಲನು ನಾಮನಿರ್ದೇಶನ ಮಾಡಿರುವ ಯಾರೇ ವ್ಯಕ್ತಿಗಳ ಹೆಸರುಗಳೊಂದಿಗೆ ಸಮುಚಿತ ಪ್ರಾಧಿಕಾರವು ರಾಜಪತ್ರದಲ್ಲಿ ಅಧಿಸೂಚಿಸತಕ್ಕುದು.

ಅಧ್ಯಾಯ - VIIಎ

ಆಸ್ತಿಗಳ ಮತ್ತು ಹೊಣೆಗಳ ಘೋಷಣೆ

೭೫ಎ. ಆಸ್ತಿಗಳ ಮತ್ತು ಹೊಣೆಗಳ ಘೋಷಣೆ:- (೧) ಸಂಸತ್ತಿನ ಒಂದು ಸದನಕ್ಕೆ ಚುನಾಯಿತನಾದ ಪ್ರತಿಯೊಬ್ಬ ಅಭ್ಯರ್ಥಿಯು, ಲೋಕಸಭೆಯ ಉಭಯ ಸದನಗಳಲ್ಲಿ ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಳ್ಳುವುದಕ್ಕಾಗಿ ಸಂವಿಧಾನದ ಮೂರನೆಯ ಅನುಸೂಚಿಯಲ್ಲಿ ಈ ಉದ್ದೇಶಕ್ಕಾಗಿ ನಿರೂಪಿಸಿರುವ ನಮೂನೆಗೆ ಅನುಸಾರವಾಗಿ ಅವನು ಪ್ರಮಾಣ ಅಥವಾ ಪ್ರತಿಜ್ಞೆ ಮಾಡಿ ಅದಕ್ಕೆ ಸಹಿ ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಈ ಕೆಳಕಂಡವುಗಳಿಗೆ ಸಂಬಂಧಿಸಿ ಮಾಹಿತಿಯನ್ನು ರಾಜ್ಯ ಸಭೆಯ ಅಧ್ಯಕ್ಷರಿಗೆ ಅಥವಾ ಸಂದರ್ಭಾನುಸಾರ ಲೋಕಸಭೆಯ ಅಧ್ಯಕ್ಷರಿಗೆ ಸಲ್ಲಿಸತಕ್ಕದ್ದು,-

(i) ಅವನಾಗಲಿ, ಅವನ ಪತ್ನಿಯಾಗಲಿ ಮತ್ತು ಅವನ ಅವಲಂಬಿತ ಮಕ್ಕಳಾಗಲಿ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಮಾಲೀಕರಾಗಿ ಅಥವಾ ಫಲಾನುಭವಿಗಳಾಗಿ ಹೊಂದಿರುವ ಚರ ಮತ್ತು ಸ್ಥಿರ ಸ್ವತ್ತು;

(ii) ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆಗೆ ಸಂಬಂಧಿಸಿದ ಅವನ ಹೊಣೆಗಾರಿಕೆಗಳು; ಮತ್ತು

(iii) ಕೇಂದ್ರ ಸರ್ಕಾರಕ್ಕೆ, ಅಥವಾ ರಾಜ್ಯ ಸರ್ಕಾರಕ್ಕೆ ಅವನ ಹೊಣೆಗಳು.

(೨) (೧)ನೇ ಉಪಪ್ರಕರಣದ ಮೇರೆಗಿನ ಮಾಹಿತಿಯನ್ನು (೩)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳಲ್ಲಿ ನಿಯಮಿಸಿಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒದಗಿಸತಕ್ಕದ್ದು.

(೩) ರಾಜ್ಯ ಸಭಾಧ್ಯಕ್ಷರಾಗಲಿ ಅಥವಾ ಸಂದರ್ಭಾನುಸಾರ ಲೋಕ ಸಭಾಧ್ಯಕ್ಷರಾಗಲಿ (೨)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ನಿಯಮಗಳನ್ನು ರಚಿಸಬಹುದು.

(೪) (೩)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸಭಾಧ್ಯಕ್ಷರು ಅಥವಾ ಲೋಕ ಸಭಾಧ್ಯಕ್ಷರು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ಸಭೆಯ ಮುಂದೆ ಅಥವಾ ಸಂದರ್ಭಾನುಸಾರ ಲೋಕ ಸಭೆಯ ಮುಂದೆ ಅದು ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ೩೦ ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ೩೦ ದಿನಗಳ ಸದರಿ ಅವಧಿಯು ಮುಕ್ತಾಯವಾದ ತರುವಾಯ, ರಾಜ್ಯ ಸಭೆಯು ಅಥವಾ ಲೋಕ ಸಭೆಯು ಆ ನಿಯಮದಲ್ಲಿ ಯಾವುವೇ ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಆದಷ್ಟು ಬೇಗನೆ ಅನುಮೋದಿಸಿದ ಅಥವಾ ಅನುಮೋದಿಸಿರದ ಹೊರತು ಹಾಗೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ಹಾಗೆ ಆ ನಿಯಮಗಳನ್ನು ಅನುಮೋದಿಸಿರುವಲ್ಲಿ, ಅವುಗಳನ್ನು ಹೇಗೆ ಮಂಡಿಸಲಾಗಿತ್ತೋ ಹಾಗೆ ಅಥವಾ ಸಂದರ್ಭಾನುಸಾರ, ಮಾರ್ಪಾಟಾದಂಥ ರೂಪದಲ್ಲಿ ಹಾಗೆ ಪರಿಣಾಮಕಾರಿಯಾಗತಕ್ಕದ್ದು ಮತ್ತು ನಿಯಮಗಳನ್ನು ಅನುಮೋದಿಸಿರದಿದ್ದರೆ ಪರಿಣಾಮಕಾರಿಯಾಗತಕ್ಕದ್ದಲ್ಲ.

(೫) ರಾಜ್ಯಸಭೆಯ ಅಧ್ಯಕ್ಷರು ಅಥವಾ ಸಂದರ್ಭಾನುಸಾರ, ಲೋಕಸಭೆಯ ಅಧ್ಯಕ್ಷರು (೧)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಲೋಕಸಭೆಯ ಚುನಾಯಿತ ಅಭ್ಯರ್ಥಿಯು (೩)ನೆಯ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವ ಸಂದರ್ಭದಲ್ಲಿ ಅದನ್ನು, ರಾಜ್ಯಸಭೆಯ ಅಥವಾ ಸಂದರ್ಭಾನುಸಾರ, ಲೋಕಸಭೆಯ ವಿಶೇಷ ಅಧಿಕಾರದ ಉಲ್ಲಂಘನೆಯ ಸಂಬಂಧ ವ್ಯವಹರಿಸುವ ರೀತಿಯಲ್ಲಿಯೇ ವ್ಯವಹರಿಸಬಹುದೆಂದು ನಿರ್ದೇಶಿಸಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ,-

(i) ''ಸ್ಥಿರ ಸ್ವತ್ತು" ಎಂದರೆ ಜಮೀನು ಮತ್ತು ಅಂಥ ಜಮೀನಿಗೆ ಹೊಂದಿಕೊಂಡಿರುವಂಥ ಅಥವಾ ಶಾಶ್ವತವಾಗಿ ಜೋಡಿಸಿದ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣವೂ ಒಳಗೊಳ್ಳುತ್ತದೆ;

(ii) ''ಚರ ಸ್ವತ್ತು" ಎಂದರೆ ಸ್ಥಿರ ಸ್ವತ್ತು ಆಗಿರದ ಯಾವುದೇ ಇತರೆ ಸ್ವತ್ತು ಮತ್ತು ಪ್ರತಿಯೊಂದು ಮೂರ್ತ ಮತ್ತು ಅಮೂರ್ತ ಸ್ವತ್ತುಗಳೂ ಸೇರುತ್ತವೆ;

(iii) ''ಸಾರ್ವಜನಿಕ ಹಣಕಾಸು ಸಂಸ್ಥೆ" ಎಂದರೆ ಕಂಪನಿಗಳ ಅಧಿನಿಯಮ, ೧೯೫೬ (೧೯೫೬ರ ೧)ರ ೪೭ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಸಾರ್ವಜನಿಕ ಹಣಕಾಸು ಸಂಸ್ಥೆ ಮತ್ತು ಬ್ಯಾಂಕು ಒಳಗೊಳ್ಳುತ್ತದೆ;

(iv) (iii)ನೇ ಖಂಡದಲ್ಲಿ ಉಲ್ಲೇಖಿಸಿದ ''ಬ್ಯಾಂಕು" ಎಂದರೆ,-

(ಎ) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, ೧೯೫೫ (೧೯೫೫ರ ೨೩)ರ ೩ನೇ ಪ್ರಕರಣದ ಮೇರೆಗೆ ರಚಿತವಾದ ಭಾರತೀಯ ಸ್ಟೇಟ್ ಬ್ಯಾಂಕು;

(ಬಿ) ಸಹವರ್ತಿ ಬ್ಯಾಂಕ್ ಇದು, ಭಾರತೀಯ ಸ್ಟೇಟ್ ಬ್ಯಾಂಕ್ (ಸಹವರ್ತಿ ಬ್ಯಾಂಕುಗಳು) ಅಧಿನಿಯಮ, ೧೯೫೯ (೧೯೫೯ರ ೩೮)ರ ೨ನೇ ಪ್ರಕರಣದ (ಕೆ) ಖಂಡದಲ್ಲಿ ಗೊತ್ತುಪಡಿಸಿರುವಂಥ ಅರ್ಥವನ್ನೇ ಹೊಂದಿರುತ್ತದೆ;

(ಸಿ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧಿನಿಯಮ, ೧೯೭೬ (೧೯೭೬ರ ೨೧)ರ ೩ನೇ ಪ್ರಕರಣದ ಮೇರೆಗೆ ಸ್ಥಾಪಿಸಲಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕು;

(ಡಿ) ಸಂವಾದಿ ಹೊಸ ಬ್ಯಾಂಕು, ಇದು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, ೧೯೪೯ (೧೯೪೯ರ ೧೦)ರ ೫ನೇ ಪ್ರಕರಣದ (ಡಿಎ) ಖಂಡದಲ್ಲಿ ಗೊತ್ತುಪಡಿಸಿರುವ ಅರ್ಥವನ್ನೇ ಹೊಂದಿರುವಂಥ ಬ್ಯಾಂಕು; ಮತ್ತು

(ಇ) ಸಹಕಾರಿ ಬ್ಯಾಂಕು, ಇದು ಬ್ಯಾಂಕಿಂಗ್ ವಿನಿಯಮ ಅಧಿನಿಯಮ, ೧೯೪೯ರ ಆ ಅಧಿನಿಯಮದ ೫೬ನೇ ಪ್ರಕರಣದ (ಸಿ) ಖಂಡದ (i)ನೇ ಉಪಖಂಡದ ಮೂಲಕ ಮಾರ್ಪಡಿಸಲಾದಂತೆ ಆ ಅಧಿನಿಯಮದ ೫ನೇ ಪ್ರಕರಣದ (ಸಿಸಿಐ) ಖಂಡದಲ್ಲಿ ಗೊತ್ತುಪಡಿಸಿರುವ ಅರ್ಥವನ್ನೆ ಹೊಂದಿರುವಂಥ ಬ್ಯಾಂಕು; ಮತ್ತು

(v) ''ಅವಲಂಬಿತ ಮಕ್ಕಳು" ಎಂದರೆ ಪ್ರತ್ಯೇಕ ಸಂಪಾದನೆಯಿಲ್ಲದ ಮತ್ತು ತಮ್ಮ ಜೀವನೋಪಾಯಕ್ಕಾಗಿ (೧)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಚುನಾಯಿತ ಅಭ್ಯರ್ಥಿಯ ಮೇಲೆಯೇ ಸಂಪೂರ್ಣವಾಗಿ ಅವಲಂಬಿತರಾಗಿರುವ ಪುತ್ರರು ಮತ್ತು ಪುತ್ರಿಯರು.

ಅಧ್ಯಾಯ - VIII
ಚುನಾವಣಾ ವೆಚ್ಚಗಳು

೭೬. ಅಧ್ಯಾಯದ ಅನ್ವಯ:- ಈ ಅಧ್ಯಾಯವು ಲೋಕಸಭೆಯ ಮತ್ತು ರಾಜ್ಯ ವಿಧಾನ ಸಭೆಯ ಚುನಾವಣೆಗಳಿಗೆ ಮಾತ್ರ ಅನ್ವಯವಾಗತಕ್ಕುದು.

೭೭. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳು ಮತ್ತು ಅದರ ಪರಮಾವಧಿ:- (೧) ಪ್ರತಿಯೊಬ್ಬ ಚುನಾವಣಾ ಅಭ್ಯರ್ಥಿಯು, ಸ್ವತಃ ಅಥವಾ ತನ್ನ ಚುನಾವಣಾ ಏಜೆಂಟನ ಮೂಲಕ ಅವನನ್ನು ನಾಮನಿರ್ದೇಶನ ಮಾಡಲಾಗಿರುವ ದಿನಾಂಕ ಮತ್ತು ಚುನಾವಣಾ ಫಲಿತಾಂಶದ ಘೋಷಣೆಯ ದಿನಾಂಕ, ಇವೆರಡೂ ದಿನಾಂಕಗಳೂ ಸೇರಿದಂತೆ ಈ ನಡುವಿನ ಅವಧಿಯಲ್ಲಿ ಅಥವಾ ಚುನಾವಣೆಯ ಸಂಬಂಧದಲ್ಲಿ ಅವನು ಅಥವಾ ಅವನ ಚುನಾವಣಾ ಏಜೆಂಟನು ವಹಿಸಿರುವ ಅಥವಾ ಅಧಿಕೃತಗೊಳಿಸಿರುವ ಎಲ್ಲಾ ವೆಚ್ಚದ ಬಗ್ಗೆ ಪ್ರತ್ಯೇಕ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕುದು.

ವಿವರಣೆ ೧:- ಸಂದೇಹಗಳ ನಿವಾರಣೆಗಾಗಿ,-

(ಎ) ರಾಜಕೀಯ ಪಕ್ಷದ ಕಾರ್ಯಕ್ರಮದ ಪ್ರಚಾರಕ್ಕಾಗಿ ರಾಜಕೀಯ ಪಕ್ಷದ ಮುಖಂಡರು ವಿಮಾನದ ಮೂಲಕ ಅಥವಾ ಯಾವುದೇ ಇತರ ಸಾರಿಗೆ ಸಾಧನಗಳ ಮೂಲಕ ಕೈಗೊಂಡ ಪ್ರಯಾಣಕ್ಕೆ ಭರಿಸಿದ ವೆಚ್ಚವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಆ ರಾಜಕೀಯ ಪಕ್ಷದ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಚುನಾವಣೆಯ ಸಂಬಂಧದಲ್ಲಿ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ;

(ಬಿ) ಸರ್ಕಾರದ ಸೇವೆಯಲ್ಲಿರುವ ಮತ್ತು ೧೨೩ನೇ ಪ್ರಕರಣದ (೭) ಖಂಡದಲ್ಲಿ ನಮೂದಿಸಿರುವ ಯಾವುದೇ ವರ್ಗಕ್ಕೆ ಸೇರಿದ ಯಾರೇ ವ್ಯಕ್ತಿಯು, ಆ ಖಂಡದ ಪರಂತುಕದಲ್ಲಿ ನಮೂದಿಸಿರುವಂತೆ ತನ್ನ ಪದೀಯ ಕರ್ತವ್ಯವನ್ನು ನಿರ್ವಹಿಸುವಲ್ಲಿ ಅಥವಾ ನಿರ್ವಹಿಸುವನೆಂದು ತಾತ್ಪರ್ಯವಾಗುವಲ್ಲಿ, ಮಾಡಿದ ಯಾವುವೇ ಏರ್ಪಾಟುಗಳು, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಇತರ ಯಾವುದೇ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿರುವ ಯಾವುದೇ ವೆಚ್ಚವು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಆ ಚುನಾವಣೆಯ ಸಂಬಂಧದಲ್ಲಿ ಭರಿಸಿದ ಅಥವಾ ಅಧಿಕೃತಗೊಳಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ

- ಎಂದು ಈ ಮೂಲಕ ಘೋಷಿಸಲಾಗಿದೆ.

ವಿವರಣೆ ೨:- ವಿವರಣೆ-೧ರ (ಎ) ಖಂಡದ ಉದ್ದೇಶಗಳಿಗಾಗಿ, ಯಾವುದೇ ಚುನಾವಣೆಯ ಸಂಬಂಧದಲ್ಲಿ, ''ರಾಜಕೀಯ ಪಕ್ಷದ ಮುಖಂಡರು" ಎಂಬ ಪದಾವಳಿಗೆ,-

ಈ ಅಧಿನಿಯಮದ ಅಡಿಯಲ್ಲಿ ಭಾರತ ರಾಜಪತ್ರದಲ್ಲಿ ಅಥವಾ ಸಂದರ್ಭಾನುಸಾರ, ರಾಜ್ಯದ ರಾಜಪತ್ರದಲ್ಲಿ ಪ್ರಕಟಗೊಂಡ ಅಂಥ ಚುನಾವಣೆಯ ಅಧಿಸೂಚನೆಯ ದಿನಾಂಕದಿಂದ ಏಳು ದಿನಗಳ ಅವಧಿಯೊಳಗೆ, ಅಂಥ ಚುನಾವಣೆಯ ಉದ್ದೇಶಗಳಿಗಾಗಿ ಮುಖಂಡರೆಂಬುದಾಗಿ ರಾಜಕೀಯ ಪಕ್ಷವು ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಯಾರ ಹೆಸರುಗಳನ್ನು ತಿಳಿಸಲಾಗಿದೆಯೋ ಅಂಥ ಮುಂದಿನ ವ್ಯಕ್ತಿಗಳು ಎಂದರೆ,-

(i) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿದ್ದಲ್ಲಿ, ನಲವತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು; ಮತ್ತು

(ii) ಅಂಥ ರಾಜಕೀಯ ಪಕ್ಷವು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಹೊರತಾದ ಬೇರೆ ಪಕ್ಷವಾಗಿದ್ದಲ್ಲಿ, ಇಪ್ಪತ್ತನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು

- ಎಂದು ಅರ್ಥ:

ಪರಂತು, ಒಂದು ರಾಜಕೀಯ ಪಕ್ಷವು, (i)ನೇ ಖಂಡದಲ್ಲಿ ಅಥವಾ ಸಂದರ್ಭಾನುಸಾರ, (ii)ನೇ ಖಂಡದಲ್ಲಿ ಉಲ್ಲೇಖಿಸಿದ ಯಾರೇ ವ್ಯಕ್ತಿಯು ಮರಣ ಹೊಂದಿದ ಅಥವಾ ಅಂಥ ರಾಜಕೀಯ ಪಕ್ಷದ ಸದಸ್ಯನಾಗಿರುವುದು ನಿಂತುಹೋದ

ಸಂದರ್ಭದಲ್ಲಿ, ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸುವ ಮೂಲಕ, ಮರಣ ಹೊಂದಿದ ಅಥವಾ ಸದಸ್ಯನಾಗಿರುವುದ ನಿಂತುಹೋದ ಅಂಥ ವ್ಯಕ್ತಿಯ ಹೆಸರಿಗೆ ಬದಲಾಗಿ, ಅವನ ಸ್ಥಾನದಲ್ಲಿ ಹೊಸ ನಾಯಕನನ್ನು ನೇಮಕಮಾಡುವ ಉದ್ದೇಶಗಳಿಗಾಗಿ, ಅಂಥ ಚುನಾವಣೆಯ ಕೊನೆಯ ಮತದಾನವು ಮುಕ್ತಾಯಗೊಳ್ಳುವುದಕ್ಕೆ ನಿಗದಿಪಡಿಸಿದ ಸಮಯದ ಸಮಾಪ್ತಿಯ ನಲವತ್ತೆಂಟು ಗಂಟೆಗಳ ನಿಕಟಪೂರ್ವಕ್ಕೆ ಸಮಾಪ್ತವಾಗುವ ಅವಧಿಯಲ್ಲಿ ಹೊಸ ಹೆಸರನ್ನು ಪ್ರತಿಯೋಜಿಸಬಹುದು.

(೨) ಲೆಕ್ಕಪತ್ರವು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕುದು.

(೩) ಸದರಿ ವೆಚ್ಚದ ಒಟ್ಟು ಮೊತ್ತವು ನಿಯಮಿಸಬಹುದಾದಂಥ ಮೊಬಲಗನ್ನು ಮೀರತಕ್ಕುದಲ್ಲ.

೭೮. ಜಿಲ್ಲಾ ಚುನಾವಣಾ ಅಧಿಕಾರಿಯ ಬಳಿ ಲೆಕ್ಕಪತ್ರವನ್ನು ದಾಖಲು ಮಾಡುವುದು:- (೧) ಒಂದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಚುನಾಯಿತ ಅಭ್ಯರ್ಥಿಯ ಆಯ್ಕೆಯ ದಿನಾಂಕದಿಂದ ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಅವರ ಆಯ್ಕೆಯ ದಿನಾಂಕಗಳು ಬೇರೆ ಬೇರೆ ಇದ್ದರೆ, ಆ ಎರಡು ದಿನಾಂಕಗಳ ಪೈಕಿ ತರುವಾಯದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅವನ ಚುನಾವಣಾ ವೆಚ್ಚಗಳ ಲೆಕ್ಕಪತ್ರವನ್ನು ಜಿಲ್ಲಾ ಚುನಾವಣಾ ಅಧಿಕಾರಿಯ ಬಳಿ ದಾಖಲು ಮಾಡತಕ್ಕದ್ದು; ಆ ಲೆಕ್ಕಪತ್ರವು ೭೭ನೇ ಪ್ರಕರಣದ ಮೇರೆಗೆ ಅವನು ಅಥವಾ ಅವನ ಚುನಾವಣಾ ಏಜೆಂಟನು ಇಟ್ಟಿರುವ ಲೆಕ್ಕಪತ್ರದ ಯಥಾ ಪ್ರತಿಯಾಗಿರತಕ್ಕುದು.

ಭಾಗ - Vಎ

ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಕೆಲವು ಸಾಮಗ್ರಿಗಳ ಉಚಿತ ಸರಬರಾಜು

೭೯ಎ. ಮತದಾರ ಪಟ್ಟಿಗಳ ಪ್ರತಿಗಳ ಉಚಿತ ಪೂರೈಕೆ:- (೧) ಸರ್ಕಾರವು, ಲೋಕಸಭೆಯನ್ನು ಅಥವಾ ರಾಜ್ಯದ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ನಡೆಸಬೇಕಾದ ಯಾವುದೇ ಚುನಾವಣೆಯಲ್ಲಿ, ಜನತಾ ಪ್ರಾತಿನಿಧ್ಯ ಅಧಿನಿಯಮ, ೧೯೫೦ರ (೧೯೫೦ರ ೪೩) ಅಡಿಯಲ್ಲಿ ಅಂತಿಮವಾಗಿ ಪ್ರಕಟಗೊಂಡಿರುವಂತೆ, ಅಂಥ ಸಂಖ್ಯೆಯ ಮತದಾರ ಪಟ್ಟಿಯ ಪ್ರತಿಗಳನ್ನು ಮತ್ತು ನಿಯಮಿಸಬಹುದಾದ ಅಂಥ ಇತರ ಸಾಮಗ್ರಿಯನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಉಚಿತವಾಗಿ ಒದಗಿಸತಕ್ಕದ್ದು.

(೨) (೧)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಾಮಗ್ರಿಯನ್ನು,-

(i) ೭೭ನೇ ಪ್ರಕರಣದ ಮೂಲಕ ಅಭ್ಯರ್ಥಿಯು ಭರಿಸಬಹುದಾದ ಗರಿಷ್ಠ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಚುನಾವಣಾ

ಆಯೋಗದೊಂದಿಗೆ ಸಮಾಲೋಚಿಸಿ ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು; ಮತ್ತು

(ii) ಚುನಾವಣಾ ಆಯೋಗವು ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳಿಗನುಸಾರವಾಗಿ ಕಾರ್ಯನಿರ್ವಹಿಸತಕ್ಕ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಗಳ ಮೂಲಕ

- ಒದಗಿಸತಕ್ಕದ್ದು.

೭೮ಬಿ. ಅಭ್ಯರ್ಥಿಗಳಿಗೆ ಕೆಲವು ಬಾಬುಗಳನ್ನು ಒದಗಿಸುವುದು, ಇತ್ಯಾದಿ:- (೧) ಚುನಾವಣಾ ಆಯೋಗವು, ಲೋಕಸಭೆಯನ್ನು ಅಥವಾ ಒಂದು ರಾಜ್ಯದ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ಚುನಾವಣೆಯನ್ನು ಸಾರಿದ ಅಧಿಸೂಚನೆಯು ಪ್ರಕಟವಾದ ದಿನಾಂಕದ ಮತ್ತು ಮತದಾನವು ನಡೆಯುವ ದಿನಾಂಕದ ನಡುವಿನ ಯಾವುದೇ ಸಮಯದಲ್ಲಿ ಸಂಬಂಧಪಟ್ಟ ಚುನಾವಣಾ ಕ್ಷೇತ್ರದ ಮತದಾರರಿಗೆ ಅಥವಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ನಿಲ್ಲಿಸಿದ ಅಭ್ಯರ್ಥಿಗಳಿಗೆ, ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ, ಆದೇಶದ ಮೂಲಕ ನಿರ್ಧರಿಸಬಹುದಾದಂಥ ಬಾಬುಗಳನ್ನು ಒದಗಿಸತಕ್ಕದ್ದು ಅಥವಾ ಒದಗಿಸುವಂತೆ ಮಾಡತಕ್ಕದ್ದು.

(೨) ಚುನಾವಣಾ ಆಯೋಗವು (೧)ನೇ ಉಪಪ್ರಕರಣದ ಅಡಿಯಲ್ಲಿ ಅಭ್ಯರ್ಥಿಗಳಿಗೆ ಬಾಬುಗಳನ್ನು ಒದಗಿಸಿರುವಲ್ಲಿ, ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿ, ೭೭ನೇ ಪ್ರಕರಣದ ಅಡಿಯಲ್ಲಿ ಅಭ್ಯರ್ಥಿಯು ಭರಿಸಬಹುದಾದ ಗರಿಷ್ಠ ವೆಚ್ಚವನ್ನು ಕಡಿಮೆ ಮಾಡುವ ಸಂಬಂಧದಲ್ಲಿ ಷರತ್ತುಗಳನ್ನು ವಿಧಿಸಬಹುದು.

ವಿವರಣೆ:- ೩೯ಎ ಪ್ರಕರಣದ ಉದ್ದೇಶಕ್ಕಾಗಿ, ಈ ಅಧ್ಯಾಯದ ಮತ್ತು ೧೬೯ನೇ ಪ್ರಕರಣದ (೨)ನೇ ಉಪಪ್ರಕರಣದ (ಹೆಚ್‌ಹೆಚ್) ಖಂಡದ ಉದ್ದೇಶಗಳಿಗಾಗಿ, ''ಮಾನ್ಯತೆ ಪಡೆದ ರಾಜಕೀಯ ಪಕ್ಷ" ಎಂಬ ಪದಾವಳಿಯು, ಚುನಾವಣಾ ಚಿಹ್ನೆಗಳ (ಮೀಸಲಾತಿ ಮತ್ತು ಹಂಚಿಕೆ) ಆದೇಶ, ೧೯೬೮ ರಲ್ಲಿ ಅದಕ್ಕೆ ಗೊತ್ತುಪಡಿಸಿದ ಅರ್ಥವನ್ನೇ ಹೊಂದಿರುವುದು.

ಭಾಗ - VI
ಚುನಾವಣೆಗಳಿಗೆ ಸಂಬಂಧಿಸಿದ ವಿವಾದಗಳು
ಅಧ್ಯಾಯ - I
ಅರ್ಥ ವಿವರಣೆ

೭೯. ಪರಿಭಾಷೆಗಳು:- ಈ ಭಾಗದಲ್ಲಿ ಮತ್ತು VIIನೇ ಭಾಗದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಉಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಅಥವಾ ನ್ಯಾಯಾಧೀಶನನ್ನು ಕುರಿತ ಯಾವುದೇ ಉಲ್ಲೇಖವನ್ನು

ನ್ಯಾಯಿಕ ಕಮೀಷನರನ ನ್ಯಾಯಾಲಯ ಇರುವ ಒಂದು ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಸಂದರ್ಭಾನುಸಾರ ನ್ಯಾಯಿಕ ಕಮೀಷನರ್‌ನ ಸದರಿ ನ್ಯಾಯಾಲಯ ಅಥವಾ ನ್ಯಾಯಿಕ ಕಮೀಷನರ್ ಅಥವಾ ಯಾವನೇ ಅಡಿಷನಲ್ ನ್ಯಾಯಿಕ ಕಮೀಷನರ್‌ನನ್ನು ಕುರಿತ ಉಲ್ಲೇಖವೆಂದು ಅರ್ಥೈಸತಕ್ಕುದು;

(ಬಿ) ''ಅಭ್ಯರ್ಥಿ" ಎಂದರೆ ಯಾವುದೇ ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ನಾಮ ನಿರ್ದೇಶಿತನಾಗಿರುವ ಅಥವಾ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುವುದಾಗಿ ಕ್ಲೇಮು ಮಾಡುವ ಒಬ್ಬ ವ್ಯಕ್ತಿ;

(ಸಿ) ''ಖರ್ಚುಗಳು" ಎಂದರೆ, ಚುನಾವಣಾ ಅರ್ಜಿಯ ಅಧಿವಿಚಾರಣೆಯ ಅಥವಾ ಅದಕ್ಕೆ ಪ್ರಾಸಂಗಿಕವಾದ ಎಲ್ಲಾ ಖರ್ಚುಗಳು, ಚಾರ್ಜುಗಳು ಮತ್ತು ವೆಚ್ಚಗಳು;

(ಡಿ) ''ಚುನಾವಣಾ ಹಕ್ಕು" ಎಂದರೆ, ಒಬ್ಬ ವ್ಯಕ್ತಿಯು ಒಂದು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯಾಗಿ ಸ್ಪರ್ಧಿಸುವುದಕ್ಕೆ ಅಥವಾ ಸ್ಪರ್ಧಿಸದಿರುವ, ಅಥವಾ ಒಬ್ಬ ಅಭ್ಯರ್ಥಿಯಾಗಿರುವುದನ್ನು ವಾಪಸ್ಸು ತೆಗೆದುಕೊಳ್ಳುವ ಅಥವಾ ವಾಪಸ್ಸು ತೆಗೆದುಕೊಳ್ಳದಿರುವ ಅಥವಾ ಮತ ನೀಡುವ ಅಥವಾ ನೀಡದಿರುವ ಅವನ ಹಕ್ಕು;

(ಇ) ''ಉಚ್ಚ ನ್ಯಾಯಾಲಯ" ಎಂದರೆ, ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಚುನಾವಣಾ ಅರ್ಜಿಗೆ ಸಂಬಂಧಿಸಿದ ಚುನಾವಣೆಯನ್ನು ನಡೆಸಲಾಗಿದೆಯೋ ಆ ನ್ಯಾಯಾಲಯ;

(ಎಫ್) ''ಚುನಾಯಿತ ಅಭ್ಯರ್ಥಿ" ಎಂದರೆ ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಕೊನೇ ಪ್ರಕರಣದ ಮೇರೆಗೆ ಯಾವ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಲಾಗಿದೆಯೋ ಆ ಅಭ್ಯರ್ಥಿ.

ಅಧ್ಯಾಯ - II

ಉಚ್ಚ ನ್ಯಾಯಾಲಯಕ್ಕೆ ಚುನಾವಣಾ ಅರ್ಜಿಗಳನ್ನು ಸಲ್ಲಿಸುವುದು

೪೦. ಚುನಾವಣಾ ಅರ್ಜಿಗಳು:- ಈ ಭಾಗದ ಉಪಬಂಧಗಳಿಗನುಸಾರವಾಗಿ ಸಲ್ಲಿಸಿದ ಚುನಾವಣಾ ಅರ್ಜಿಯ ಮೂಲಕವಾಗಿ ಹೊರತು ಯಾವ ಚುನಾವಣೆಯನ್ನೂ ಪ್ರಶ್ನಿಸತಕ್ಕುದಲ್ಲ.

೪೦ಎ. ಉಚ್ಚ ನ್ಯಾಯಾಲಯವು ಚುನಾವಣಾ ಅರ್ಜಿಗಳನ್ನು ಅಧಿವಿಚಾರಣೆ ಮಾಡುವುದು:- (೧) ಚುನಾವಣಾ ಅರ್ಜಿಯನ್ನು ಅಧಿ ವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ ಹೊಂದಿರುವ ನ್ಯಾಯಾಲಯವು ಉಚ್ಚ ನ್ಯಾಯಾಲಯವಾಗಿರತಕ್ಕುದು.

(೨) ಅಂಥ ಅಧಿಕಾರ ವ್ಯಾಪ್ತಿಯನ್ನು ಸಾಮಾನ್ಯವಾಗಿ ಉಚ್ಚ ನ್ಯಾಯಾಲಯದ ಒಬ್ಬನೇ ನ್ಯಾಯಾಧೀಶನು ಚಲಾಯಿಸತಕ್ಕುದು ಮತ್ತು ಮುಖ್ಯ ನ್ಯಾಯಮೂರ್ತಿಯು ಆಗಿಂದಾಗ್ಗೆ, ಆ ಉದ್ದೇಶಕ್ಕಾಗಿ ಒಬ್ಬ ಅಥವಾ ಹೆಚ್ಚು ನ್ಯಾಯಾಧೀಶನನ್ನು ಗೊತ್ತುಪಡಿಸತಕ್ಕುದು:

ಪರಂತು, ಉಚ್ಚ ನ್ಯಾಯಾಲಯವು ಒಬ್ಬನೇ ನ್ಯಾಯಾಧೀಶನನ್ನು ಒಳಗೊಂಡಿರುವಲ್ಲಿ, ಆ ನ್ಯಾಯಾಲಯಕ್ಕೆ ಸಲ್ಲಿಸಿರುವ ಎಲ್ಲ ಚುನಾವಣಾ ಅರ್ಜಿಗಳನ್ನು ಅವನು ಅಧಿವಿಚಾರಣೆ ಮಾಡತಕ್ಕುದು.

(೩) ಉಚ್ಚ ನ್ಯಾಯಾಲಯವು, ತನ್ನ ವಿವೇಚನಾನುಸಾರ ನ್ಯಾಯೋದ್ದೇಶ ಅಥವಾ ಅನುಕೂಲದ ದೃಷ್ಟಿಯಿಂದ ಒಂದು ಚುನಾವಣಾ ಅರ್ಜಿಯ ಅಧಿವಿಚಾರಣೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಉಚ್ಚ ನ್ಯಾಯಾಲಯವು ಇರುವ ಸ್ಥಳವನ್ನು ಹೊರತುಪಡಿಸಿ ಬೇರೆ ಸ್ಥಳದಲ್ಲಿ ಸಹ ನಡೆಸಬಹುದು.

೮೧. ಅರ್ಜಿಗಳನ್ನು ಸಲ್ಲಿಸುವುದು:- (೧) ಯಾವುದೇ ಚುನಾವಣೆಯನ್ನು ಪ್ರಶ್ನಿಸುವ ಚುನಾವಣಾ ಅರ್ಜಿಯನ್ನು ಅಂಥ ಚುನಾವಣೆಯಲ್ಲಿನ ಯಾವನೇ ಅಭ್ಯರ್ಥಿಯು ಅಥವಾ ಯಾವನೇ ಮತದಾರನು ಚುನಾಯಿತ ಅಭ್ಯರ್ಥಿಯ ಆಯ್ಕೆಯ ದಿನಾಂಕದಿಂದ, ಆದರೆ ಅದಕ್ಕಿಂತ ಮೊದಲಲ್ಲದೆ, ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಚುನಾಯಿತ ಅಭ್ಯರ್ಥಿಗಳಿದ್ದರೆ ಮತ್ತು ಅವರ ಆಯ್ಕೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳ ಪೈಕಿ ತರುವಾಯದ ದಿನಾಂಕದಿಂದ ೪೫ ದಿವಸಗಳೊಳಗಾಗಿ, ೧೦೦ನೇ ಪ್ರಕರಣದ (೧)ನೇ ಉಪಪ್ರಕರಣದಲ್ಲಿ ಮತ್ತು ೧೦೧ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಹೆಚ್ಚು ಆಧಾರಗಳ ಮೇಲೆ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬಹುದು.

ವಿವರಣೆ:- ಈ ಉಪಪ್ರಕರಣದಲ್ಲಿ, 'ಮತದಾರ' ಎಂದರೆ ಚುನಾವಣಾ ಅರ್ಜಿಗೆ ಸಂಬಂಧಿಸಿದಂಥ ಚುನಾವಣೆಯಲ್ಲಿ ಮತ ನೀಡಲು ಹಕ್ಕುಳ್ಳವನಾಗಿದ್ದಂಥ ವ್ಯಕ್ತಿ - ಅವನು ಅಂಥ ಚುನಾವಣೆಯಲ್ಲಿ ಮತ ನೀಡಿರಲಿ ಅಥವಾ ನೀಡದಿರಲಿ.

(೨) (ಬಿಟ್ಟು ಬಿಡಲಾಗಿದೆ).

(೩) ಪ್ರತಿಯೊಂದು ಚುನಾವಣಾ ಅರ್ಜಿಯು, ಅರ್ಜಿಯಲ್ಲಿ ನಮೂದಿಸಿರುವ ಪ್ರತ್ಯರ್ಜಿದಾರರಷ್ಟು ಸಂಖ್ಯೆಯ ಆ ಅರ್ಜಿಯ ಪ್ರತಿಗಳನ್ನೊಳಗೊಂಡಿರತಕ್ಕುದು ಮತ್ತು ಅಂಥ ಪ್ರತಿಯೊಂದು ಪ್ರತಿಯು ಆ ಅರ್ಜಿಯ ಯಥಾ ಪ್ರತಿಯಾಗಿದೆಯೆಂದು ಅದಕ್ಕೆ ತನ್ನ ಸಹಿ ಹಾಕಿ ಅದನ್ನು ಅವನು ಅನುಪ್ರಮಾಣಿಸತಕ್ಕುದು.

೮೨. ಅರ್ಜಿಯ ಪಕ್ಷಕಾರರು:- ಒಬ್ಬ ಅರ್ಜಿದಾರನು -

(ಎ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ತಾನೇ ಸ್ವತಃ ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆ ಎಂದು ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡುವಲ್ಲಿ, ಆ ಅರ್ಜಿದಾರನನ್ನು ಹೊರತುಪಡಿಸಿ ಇತರ ಎಲ್ಲಾ ಸ್ಪರ್ಧಿಸಿರುವ ಅಭ್ಯರ್ಥಿಗಳನ್ನು ಮತ್ತು ಅಂಥ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡದಿರುವಲ್ಲಿ ಚುನಾಯಿತರಾದ ಎಲ್ಲ ಅಭ್ಯರ್ಥಿಗಳನ್ನು; ಮತ್ತು

(ಬಿ) ಯಾವ ಅಭ್ಯರ್ಥಿಯ ವಿರುದ್ಧ ಯಾವುದೇ ಭ್ರಷ್ಟಾಚಾರದ ಆಪಾದನೆಗಳನ್ನು ಮಾಡಲಾಗಿದೆಯೋ ಆ ಯಾವನೇ ಇತರ ಅಭ್ಯರ್ಥಿಯನ್ನು

- ತನ್ನ ಅರ್ಜಿಗೆ ಪ್ರತ್ಯರ್ಜಿದಾರರೆಂದು ಸೇರಿಸಿಕೊಳ್ಳತಕ್ಕುದು.

೮೩. ಅರ್ಜಿಯ ಒಳಾಂಶಗಳು:- (೧) ಚುನಾವಣಾ ಅರ್ಜಿಯು -

(ಎ) ಅರ್ಜಿದಾರನು ಅವಲಂಬಿಸಿರುವ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕುದು;

(ಬಿ) ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾರೆಂದು ಆಪಾದಿಸಲಾಗಿರುವ ಪಕ್ಷಕಾರರ ಹೆಸರುಗಳು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರ ಮಾಡಿದ ದಿನಾಂಕ ಮತ್ತು ಸ್ಥಳ ಇವುಗಳ ಬಗ್ಗೆ ಸಾಧ್ಯವಾದಷ್ಟು ಪೂರ್ಣ ನಿರೂಪಣೆ ಸೇರಿದಂತೆ ಅರ್ಜಿದಾರನು ಆಪಾದಿಸುವ ಯಾವುದೇ ಅಂಥ ಭ್ರಷ್ಟಾಚಾರದ ಪೂರ್ಣ ವಿವರಗಳನ್ನು ನಮೂದಿಸತಕ್ಕುದು; ಮತ್ತು

(ಸಿ) ಅರ್ಜಿದಾರನು ಅದಕ್ಕೆ ಸಹಿ ಹಾಕತಕ್ಕುದು ಮತ್ತು ವಾದ ಪ್ರತಿವಾದ ಪತ್ರಗಳ ಸತ್ಯಾಪನೆ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, ೧೯೦೮ (೧೯೦೮ರ ೫) ರಲ್ಲಿ ನಿರೂಪಿಸಿರುವ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕುದು:

ಪರಂತು, ಅರ್ಜಿದಾರನು ಯಾವುದೇ ಭ್ರಷ್ಟಾಚಾರದ ಆಪಾದನೆಯನ್ನು ಮಾಡಿರುವಲ್ಲಿ ಆ ಅರ್ಜಿಯ ಜೊತೆಗೆ ಅಂಥ ಭ್ರಷ್ಟಾಚಾರದ ಆಪಾದನೆ ಮತ್ತು ಅದರ ವಿವರಗಳ ಸಮರ್ಥನೆಗಾಗಿ ನಿಯಮಿಸಿದ ನಮೂನೆಯಲ್ಲಿರುವ ಒಂದು ಶಪಥ ಪತ್ರವು ಇರತಕ್ಕುದು.

(೨) ಅರ್ಜಿಯ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೆ ಸಹ ಅರ್ಜಿದಾರನು ಸಹಿ ಹಾಕಿರತಕ್ಕುದು ಮತ್ತು ಅದನ್ನು ಅರ್ಜಿಯಂತೆಯೇ ಅದೇ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕುದು.

೮೪. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ:- ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂಬ ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ಒಬ್ಬ ಅರ್ಜಿದಾರನು ತಾನೇ ಸ್ವತಃ ಅಥವಾ ಯಾವನೇ ಇತರ ಅಭ್ಯರ್ಥಿ ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆ ಎಂಬ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡಬಹುದು.

೮೫. (ನಿರಸನಗೊಳಿಸಲಾಗಿದೆ).

ಅಧ್ಯಾಯ - III
ಚುನಾವಣಾ ಅರ್ಜಿಗಳ ಅಧಿವಿಚಾರಣೆ

೮೬. ಚುನಾವಣಾ ಅರ್ಜಿಗಳ ಅಧಿವಿಚಾರಣೆ:- (೧) ಉಚ್ಚ ನ್ಯಾಯಾಲಯವು, ೮೦ನೇ ಪ್ರಕರಣದ ಅಥವಾ ೮೨ನೇ ಪ್ರಕರಣದ ಅಥವಾ ೧೧೭ನೇ ಪ್ರಕರಣದ ಉಪಬಂಧಗಳನ್ನು ಪಾಲಿಸದಿರುವ ಚುನಾವಣಾ ಅರ್ಜಿಯನ್ನು ವಜಾ ಮಾಡತಕ್ಕುದು.

ವಿವರಣೆ:- ಈ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಯನ್ನು ವಜಾ ಮಾಡುವ ಉಚ್ಚ ನ್ಯಾಯಾಲಯದ ಆದೇಶವು ೯೮ನೇ ಪ್ರಕರಣದ (ಎ) ಖಂಡದ ಮೇರೆಗೆ ಮಾಡಿದ ಆದೇಶವಾಗಿರುವುದೆಂದು ಭಾವಿಸತಕ್ಕುದು.

(೨) ಚುನಾವಣಾ ಅರ್ಜಿಯನ್ನು ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ತರುವಾಯ ಆದಷ್ಟು ಬೇಗನೆ ಲಂಎ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಗಳ ಅಧಿವಿಚಾರಣೆಗಾಗಿ ಮುಖ್ಯ ನ್ಯಾಯಾಧೀಶನು ಗೊತ್ತುಪಡಿಸಿರುವ ನ್ಯಾಯಾಧೀಶನಿಗೆ ಅಥವಾ ನ್ಯಾಯಾಧೀಶರಲ್ಲಿ ಒಬ್ಬನಿಗೆ ಅದನ್ನು ಕಳಿಸಿಕೊಡತಕ್ಕುದು.

(೩) ಒಂದೇ ಚುನಾವಣೆಯ ಸಂಬಂಧದಲ್ಲಿ ಉಚ್ಚ ನ್ಯಾಯಾಲಯಕ್ಕೆ ಒಂದಕ್ಕಿಂತ ಹೆಚ್ಚು ಚುನಾವಣಾ ಅರ್ಜಿಗಳನ್ನು ಸಲ್ಲಿಸಿರುವಲ್ಲಿ, ಅವೆಲ್ಲವುಗಳನ್ನು ಒಬ್ಬನೇ ನ್ಯಾಯಾಧೀಶನಿಗೆ ಕಳುಹಿಸತಕ್ಕುದು, ಅವನು ತನ್ನ ವಿವೇಚನೆಯ ಮೇರೆಗೆ ಅವುಗಳನ್ನು ಪ್ರತ್ಯೇಕವಾಗಿ ಅಥವಾ ಒಂದು ಅಥವಾ ಹೆಚ್ಚಿನ ಗುಂಪುಗಳಲ್ಲಿ ಅಧಿವಿಚಾರಣೆ ಮಾಡಬಹುದು.

(೪) ಈಗಾಗಲೇ ಪ್ರತ್ಯರ್ಜಿದಾರನಾಗಿರದ ಯಾವನೇ ಅಭ್ಯರ್ಥಿಯು ಅಧಿವಿಚಾರಣೆಯು ಪ್ರಾರಂಭವಾದ ದಿನಾಂಕದಿಂದ ೧೪ ದಿವಸಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಮತ್ತು ಉಚ್ಚ ನ್ಯಾಯಾಲಯವು ಖರ್ಚುಗಳಿಗಾಗಿ ಭದ್ರತೆ ಬಗ್ಗೆ ಮಾಡಬಹುದಾದ ಯಾವುದೇ ಆದೇಶಕ್ಕೆ ಒಳಪಟ್ಟು, ಪ್ರತ್ಯರ್ಜಿದಾರನೆಂದು ಸೇರಿಕೊಳ್ಳುವುದಕ್ಕೆ ಹಕ್ಕುಳ್ಳವನಾಗಿರತಕ್ಕುದು.

ವಿವರಣೆ:- ಈ ಉಪ ಪ್ರಕರಣದ ಮತ್ತು ೯೭ನೇ ಪ್ರಕರಣದ ಉದ್ದೇಶಗಳಿಗಾಗಿ ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಅರ್ಜಿಯಲ್ಲಿ ಮಾಡಲಾದ ಕ್ಲೇಮು ಅಥವಾ ಕ್ಲೇಮುಗಳಿಗೆ ಉತ್ತರಿಸಲು ಪ್ರತ್ಯರ್ಜಿದಾರರಿಗಾಗಿ ನಿಗದಿಪಡಿಸಿದ ದಿನಾಂಕದಂದು ಅರ್ಜಿಯ ಅಧಿವಿಚಾರಣೆಯು ಪ್ರಾರಂಭವಾಗುವುದೆಂದು ಭಾವಿಸತಕ್ಕುದು.

(೫) ಉಚ್ಚ ನ್ಯಾಯಾಲಯವು ಖರ್ಚುಗಳ ಬಗ್ಗೆ ಮತ್ತು ಅನ್ಯಥಾ ಅದು ಯುಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಅರ್ಜಿಯ ನ್ಯಾಯಸಮ್ಮತ ಮತ್ತು ಪರಿಣಾಮಕಾರಿ ಅಧಿವಿಚಾರಣೆಯನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಅದರ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದಂಥ ರೀತಿಯಲ್ಲಿ ಅರ್ಜಿಯಲ್ಲಿ ಆಪಾದಿಸಿರುವ ಯಾವುದೇ ಭ್ರಷ್ಟಾಚಾರದ ವಿವರಗಳನ್ನು ತಿದ್ದುಪಡಿ ಮಾಡಲು ಅಥವಾ ವಿಷದೀಕರಿಸಲು ಅನುಮತಿಸಬಹುದು, ಆದರೆ ಆ ಅರ್ಜಿಯಲ್ಲಿ ಈ ಹಿಂದೆ ಆಪಾದಿಸಿರದ ಯಾವುದೇ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವುಳ್ಳಂಥ ಅರ್ಜಿಯ ಯಾವುದೇ ತಿದ್ದುಪಡಿಯನ್ನು ಅನುಮತಿಸತಕ್ಕುದಲ್ಲ.

(೬) ಚುನಾವಣಾ ಅರ್ಜಿಯ ಅಧಿವಿಚಾರಣೆಯನ್ನು ಆ ಅಧಿವಿಚಾರಣೆಯ ಸಂಬಂಧದಲ್ಲಿ ನ್ಯಾಯೋದ್ದೇಶಗಳಿಗೆ ಸಂಗತವಾದ ಕಾರ್ಯಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಉಚ್ಚ ನ್ಯಾಯಾಲಯವು ಕಾರಣಗಳನ್ನು ದಾಖಲಿಸಿ ಆ ಅಧಿವಿಚಾರಣೆಯನ್ನು

ಮುಂದಿನ ದಿನದ ಆಚೆಗೆ ಮುಂದೂಡುವುದು ಅವಶ್ಯವೆಂದು ನ್ಯಾಯಾಲಯಕ್ಕೆ ಕಂಡುಬರುವ ಹೊರತು, ಅದು ಪೂರ್ಣಗೊಳ್ಳುವವರೆಗೆ ಪ್ರತಿ ದಿನ ಮುಂದುವರಿಸತಕ್ಕುದು.

(೭) ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಾಧ್ಯವಾದಷ್ಟು ಬೇಗ ಅಧಿವಿಚಾರಣೆ ಮಾಡತಕ್ಕುದು ಮತ್ತು ಚುನಾವಣಾ ಅರ್ಜಿಯನ್ನು ಅಧಿವಿಚಾರಣೆಗಾಗಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ದಿನಾಂಕದಿಂದ ಆರು ತಿಂಗಳೊಳಗಾಗಿ ಆ ಅಧಿವಿಚಾರಣೆಯನ್ನು ಮುಕ್ತಾಯ ಮಾಡಲು ಪ್ರಯತ್ನಿಸತಕ್ಕುದು.

೮೭. ಉಚ್ಚ ನ್ಯಾಯಾಲಯದಲ್ಲಿ ಪ್ರಕ್ರಿಯೆ:- (೧) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ಚುನಾವಣಾ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, ೧೯೦೮ (೧೯೦೮ರ ೫)ರ ಮೇರೆಗೆ ದಾವೆಗಳ ಅಧಿವಿಚಾರಣೆಗೆ ಅನ್ವಯವಾಗುವ ಪ್ರಕ್ರಿಯೆಗೆ ಅನುಸಾರವಾಗಿ ಆದಷ್ಟು ಮಟ್ಟಿಗೆ ಉಚ್ಚ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕುದು:

ಪರಂತು, ಅರ್ಜಿಯ ತೀರ್ಮಾನಕ್ಕಾಗಿ ಯಾವನೇ ಸಾಕ್ಷಿದಾರನ ಅಥವಾ ಸಾಕ್ಷಿದಾರರ ಸಾಕ್ಷ್ಯವು ಮುಖ್ಯವಲ್ಲವೆಂದು ಅಥವಾ ಅಂಥ ಸಾಕ್ಷಿದಾರ ಅಥವಾ ಸಾಕ್ಷಿದಾರರನ್ನು ಕರೆದಿರುವ ಪಕ್ಷಕಾರನು ಕ್ಷುಲ್ಲಕ ಆಧಾರಗಳ ಮೇಲೆ ಅಥವಾ ವ್ಯವಹರಣೆಗಳನ್ನು ವಿಳಂಬಗೊಳಿಸುವ ದೃಷ್ಟಿಯಿಂದ ಹಾಗೆ ಮಾಡುತ್ತಿದ್ದಾನೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟರೆ, ಅದು ಬರವಣಿಗೆಯಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅಂಥ ಸಾಕ್ಷಿದಾರ ಅಥವಾ ಸಾಕ್ಷಿದಾರರನ್ನು ಪರೀಕ್ಷಿಸಲು ನಿರಾಕರಿಸುವ ವಿವೇಚನಾಧಿಕಾರವನ್ನು ಹೊಂದಿರತಕ್ಕುದು.

(೨) ಭಾರತ ಸಾಕ್ಷ್ಯ ಅಧಿನಿಯಮ, ೧೮೭೨ (೧೮೭೨ರ ೧)ರ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚುನಾವಣಾ ಅರ್ಜಿಯ ಅಧಿವಿಚಾರಣೆಗೆ ಎಲ್ಲ ವಿಧದಲ್ಲಿಯೂ ಅನ್ವಯವಾಗುತ್ತದೆಂದು ಭಾವಿಸತಕ್ಕುದು.

೮೮-೮೯. (ನಿರಸಿತ).

೯೦. ದಸ್ತಾವೇಜೀಯ ಸಾಕ್ಷ್ಯ:- ಯಾವುದೇ ಅಧಿನಿಯಮಿತಿಯಲ್ಲಿ ತದ್ವಿರುದ್ಧವಾದುದು ಏನೇ ಇದ್ದಾಗ್ಯೂ, ಯಾವುದೇ ದಸ್ತಾವೇಜಿಗೆ ಕ್ರಮಬದ್ಧವಾಗಿ ಸ್ಟಾಂಪು ಅಂಟಿಸಿಲ್ಲವೆಂಬ ಅಥವಾ ಅದನ್ನು ನೋಂದಾಯಿಸಿಲ್ಲವೆಂಬ ಆಧಾರದ ಮೇಲೆ ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿನ ಸಾಕ್ಷ್ಯದಲ್ಲಿ ಅದು ಅಂಗೀಕಾರಾರ್ಹವಾಗದೇ ಇರತಕ್ಕುದಲ್ಲ.

೯೧. ಮತದಾನದ ರಹಸ್ಯವನ್ನು ಉಲ್ಲಂಘಿಸದಿರುವುದು:- ಯಾವನೇ ಸಾಕ್ಷಿದಾರನು ಅಥವಾ ಇತರ ವ್ಯಕ್ತಿಯು, ಚುನಾವಣೆಯಲ್ಲಿ ಅವನು ಯಾರ ಪರವಾಗಿ ಮತದಾನ ಮಾಡಿದ್ದಾನೆ ಎಂದು ಹೇಳಲು ಅವನನ್ನು ಅಗತ್ಯಪಡಿಸತಕ್ಕುದಲ್ಲ:

ಪರಂತು, ಈ ಪ್ರಕರಣವು ಮುಕ್ತ ಮತದಾನದ ಮೂಲಕ ಮತ ಚಲಾಯಿಸಿದ ಅಂಥ ಸಾಕ್ಷಿದಾರನಿಗೆ ಅಥವಾ ಇತರ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

೪೫. ಅಪರಾಧದಲ್ಲಿ ಸಿಕ್ಕಿಸುವ ಪ್ರಶ್ನೆಗಳನ್ನು ಉತ್ತರಿಸುವುದು ಮತ್ತು ನಷ್ಟಭರ್ತಿ ಪ್ರಮಾಣಪತ್ರ:- (೧) ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿ ವಾದಗ್ರಸ್ತವಾದ ವಿಷಯಕ್ಕೆ ಸುಸಂಬದ್ಧವಾದ ಯಾವುದೇ ವಿಷಯದ ಬಗೆಗಿನ ಯಾವುದೇ ಪ್ರಶ್ನೆಯ ಉತ್ತರವು ಯಾವನೇ ಸಾಕ್ಷಿದಾರನನ್ನು ಅಪರಾಧದಲ್ಲಿ ಸಿಕ್ಕಿಸಬಹುದು ಅಥವಾ ಅವನನ್ನು ಅಪರಾಧದಲ್ಲಿ ಸಿಕ್ಕಿಸಲು ಪ್ರವೃತ್ತವಾಗಬಹುದೆಂಬ ಅಥವಾ ಯಾವುದೇ ದಂಡ ಅಥವಾ ಮುಟ್ಟುಗೋಲಿಗೆ ಅವನನ್ನು ಗುರಿಪಡಿಸಬಹುದು ಅಥವಾ ಗುರಿಪಡಿಸಲು ಪ್ರವೃತ್ತವಾಗಬಹುದೆಂಬ ಆಧಾರದ ಮೇಲೆ ಅಂಥ ಯಾವುದೇ ಪ್ರಶ್ನೆಗೆ ಉತ್ತರ ಕೊಡದಿರಲು ಆ ಸಾಕ್ಷಿದಾರನಿಗೆ ವಿನಾಯಿತಿ ಇರತಕ್ಕುದಲ್ಲ:

ಪರಂತು,-

(ಎ) ಯಾವ ಪ್ರಶ್ನೆಗಳನ್ನು ಉತ್ತರಿಸಲು ಸಾಕ್ಷಿದಾರನನ್ನು ಅಗತ್ಯಪಡಿಸಲಾಗಿದೆಯೋ ಆ ಎಲ್ಲ ಪ್ರಶ್ನೆಗಳನ್ನು ಸರಿಯಾಗಿ ಉತ್ತರಿಸುವ ಸಾಕ್ಷಿದಾರನು ಉಚ್ಚ ನ್ಯಾಯಾಲಯದಿಂದ ನಷ್ಟಭರ್ತಿ ಪ್ರಮಾಣ ಪತ್ರವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕುದು; ಮತ್ತು

(ಬಿ) ಉಚ್ಚ ನ್ಯಾಯಾಲಯವು ಕೇಳುವ ಅಥವಾ ಅದರ ಮುಂದೆ ಕೇಳಲಾದ ಪ್ರಶ್ನೆಗೆ ಸಾಕ್ಷಿದಾರನು ಕೊಟ್ಟಿರುವ ಉತ್ತರವು, ಈ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ ಸುಳ್ಳು ಸಾಕ್ಷ್ಯಕ್ಕಾಗಿ ಯಾವುದೇ ಕ್ರಿಮಿನಲ್ ವ್ಯವಹರಣೆಯ ಸಂದರ್ಭದಲ್ಲಿ ಹೊರತು,

- ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ಅವನ ವಿರುದ್ಧ ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗತಕ್ಕುದಲ್ಲ.

(೨) ಯಾವನೇ ಸಾಕ್ಷಿದಾರನಿಗೆ ನಷ್ಟ ಭರ್ತಿ ಪ್ರಮಾಣಪತ್ರವನ್ನು ನೀಡಿರುವಾಗ, ಅವನು ಆ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಹೇಳಿಕೊಳ್ಳಬಹುದು ಮತ್ತು ಭಾರತ ದಂಡ ಸಂಹಿತೆ (೧೮೬೦ರ ೪೫)ರ IX ಎ ಅಧ್ಯಾಯದ ಅಥವಾ ಈ ಅಧಿನಿಯಮದ VIIನೆಯ ಭಾಗದ ಮೇರೆಗೆ, ಅಂಥ ಪ್ರಮಾಣಪತ್ರವು ಸಂಬಂಧಪಡುವಂಥ ವಿಷಯದಿಂದ ಉದ್ಭವಿಸುವ ಯಾವುದೇ ಆರೋಪಣೆಗೆ ಅಥವಾ ಆರೋಪಣೆ ಮೇಲೆ ಅದು ಪೂರ್ಣ ಮತ್ತು ಸಮಗ್ರ ಪ್ರತಿರಕ್ಷೆಯಾಗಿರತಕ್ಕುದು, ಆದರೆ ಈ ಅಧಿನಿಯಮ ಅಥವಾ ಯಾವುದೇ ಇತರೆ ಕಾನೂನಿನ ಮೂಲಕ ವಿಧಿಸಲಾದ ಚುನಾವಣಾ ಸಂಬಂಧದ ಯಾವುದೇ ಅನರ್ಹತೆಯಿಂದ ಅದು ಅವನನ್ನು ಮುಕ್ತಗೊಳಿಸುತ್ತದೆಂದು ಭಾವಿಸತಕ್ಕುದಲ್ಲ.

೪೬. ಸಾಕ್ಷಿದಾರರ ವೆಚ್ಚಗಳು:- ಸಾಕ್ಷ್ಯವನ್ನು ನೀಡಲು ಹಾಜರಾಗುವ ಯಾವನೇ ವ್ಯಕ್ತಿಯು ವಹಿಸಿದ ಯುಕ್ತ ವೆಚ್ಚಗಳನ್ನು, ಅಂಥ ವ್ಯಕ್ತಿಗೆ ಉಚ್ಚ ನ್ಯಾಯಾಲಯವು ಅನುಮತಿಸಬಹುದು ಮತ್ತು ಉಚ್ಚ ನ್ಯಾಯಾಲಯವು ಅನ್ಯಥಾ ನಿರ್ದೇಶಿಸುವ ಹೊರತು, ಅವುಗಳು ಖರ್ಚುಗಳ ಭಾಗವಾಗಿವೆ ಎಂದು ಭಾವಿಸತಕ್ಕುದು.

೯೭. ಸ್ಥಾನವನ್ನು ಕ್ಲೇಮು ಮಾಡಿದಾಗ ಪ್ರತ್ಯಾರೋಪ:- (೧) ಚುನಾಯಿತ ಅಭ್ಯರ್ಥಿಯನ್ನು ಹೊರತುಪಡಿಸಿ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂಬ ಘೋಷಣೆಯನ್ನು ಚುನಾವಣಾ ಅರ್ಜಿಯಲ್ಲಿ ಕ್ಲೇಮು ಮಾಡಿದಾಗ, ಅಂಥ ಅಭ್ಯರ್ಥಿಯು ಚುನಾಯಿತ ಅಭ್ಯರ್ಥಿಯಾಗಿದ್ದಿದ್ದರೆ ಮತ್ತು ಅವನ ಆಯ್ಕೆಯನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಿದ್ದಾಗಿದ್ದರೆ ಅಂಥ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಬಹುದಾಗಿದ್ದಿತು ಎಂದು ರುಜುವಾತುಪಡಿಸಲು ಚುನಾಯಿತ ಅಭ್ಯರ್ಥಿಯು ಅಥವಾ ಯಾವನೇ ಇತರೆ ಪಕ್ಷಕಾರನು ಸಾಕ್ಷ್ಯವನ್ನು ನೀಡಬಹುದು:

ಪರಂತು, ಚುನಾಯಿತ ಅಭ್ಯರ್ಥಿ ಅಥವಾ ಮೇಲೆ ಹೇಳಿದ ಅಂಥ ಇತರ ಪಕ್ಷಕಾರನು ಅಧಿವಿಚಾರಣೆ ಪ್ರಾರಂಭವಾಗುವ ದಿನಾಂಕದಿಂದ ೧೪ ದಿವಸಗಳೊಳಗಾಗಿ ಅಂಥ ಸಾಕ್ಷ್ಯವನ್ನು ನೀಡುವ ತನ್ನ ಉದ್ದೇಶದ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ನೋಟೀಸನ್ನು ಕೊಟ್ಟ ಹೊರತು ಮತ್ತು ಅನುಕ್ರಮವಾಗಿ ೧೧೭ನೇ ಪ್ರಕರಣ ಮತ್ತು ೧೧೮ನೇ ಪ್ರಕರಣಗಳಲ್ಲಿ ಉಲ್ಲೇಖಿಸಿರುವ ಭದ್ರತೆ ಮತ್ತು ಹೆಚ್ಚಿನ ಭದ್ರತೆಯನ್ನು ಸಹ ನೀಡಿರುವ ಹೊರತು ಹಾಗೆ ಮಾಡಲು ಹಕ್ಕುಳ್ಳವನಾಗತಕ್ಕುದಲ್ಲ.

(೨) (೧)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ನೋಟೀಸಿನೊಂದಿಗೆ ಚುನಾವಣಾ ಅರ್ಜಿಯ ಸಂದರ್ಭದಲ್ಲಿ ಲಖನೇ ಪ್ರಕರಣದ ಮೂಲಕ ಅಗತ್ಯಪಡಿಸಿದ ಹೇಳಿಕೆ ಮತ್ತು ವಿವರಗಳು ಇರತಕ್ಕುದು ಮತ್ತು ಆ ನೋಟೀಸಿಗೆ ಅಗತ್ಯಪಡಿಸಿದ ರೀತಿಯಲ್ಲಿ ಸಹಿ ಹಾಕತಕ್ಕುದು ಮತ್ತು ಅದನ್ನು ಸತ್ಯಾಪನೆ ಮಾಡತಕ್ಕುದು.

೯೮. ಉಚ್ಚ ನ್ಯಾಯಾಲಯದ ತೀರ್ಮಾನ:- ಚುನಾವಣಾ ಅರ್ಜಿಯ ಅಧಿವಿಚಾರಣೆಯು ಮುಕ್ತಾಯವಾದ ಮೇಲೆ ಉಚ್ಚ ನ್ಯಾಯಾಲಯವು,-

(ಎ) ಚುನಾವಣಾ ಅರ್ಜಿಯನ್ನು ವಜಾ ಮಾಡಿ; ಅಥವಾ

(ಬಿ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿಸಿ; ಅಥವಾ

(ಸಿ) ಎಲ್ಲ ಅಥವಾ ಯಾರೇ ಚುನಾಯಿತ ಅಭ್ಯರ್ಥಿಗಳ ಆಯ್ಕೆಯು ಶೂನ್ಯವಾಗಿದೆಯೆಂದು ಮತ್ತು ಅರ್ಜಿದಾರನು ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂದು ಘೋಷಿಸಿ

- ಆದೇಶವನ್ನು ಮಾಡತಕ್ಕುದು.

೯೯. ಉಚ್ಚ ನ್ಯಾಯಾಲಯವು ಮಾಡಬೇಕಾದ ಇತರೆ ಆದೇಶಗಳು:- (೧) ೯೮ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಕಾಲದಲ್ಲಿ ಉಚ್ಚ ನ್ಯಾಯಾಲಯವು -

(ಎ) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರವನ್ನು ಮಾಡಲಾಗಿದೆ ಎಂದು ಅರ್ಜಿಯಲ್ಲಿ ಯಾವುದೇ ಆರೋಪವನ್ನು ಮಾಡಿರುವಲ್ಲಿ,-

(i) ಆ ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ಮಾಡಿರುವುದನ್ನು ರುಜುವಾತುಪಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತೀರ್ಮಾನವನ್ನು, ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು; ಮತ್ತು

(ii) ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥರೆಂದು ಅಧಿವಿಚಾರಣೆಯಲ್ಲಿ ರುಜುವಾತುಪಡಿಸಲಾಗಿರುವ ವ್ಯಕ್ತಿಗಳು ಯಾರಾದರೂ ಇದ್ದರೆ, ಆ ಎಲ್ಲ ವ್ಯಕ್ತಿಗಳ ಹೆಸರುಗಳು ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು ದಾಖಲಿಸಿ ಸಹ; ಮತ್ತು

(ಬಿ) ಸಂದಾಯವಾಗಬೇಕಾದ ಖರ್ಚುಗಳ ಒಟ್ಟು ಮೊಬಲಗನ್ನು ನಿಗದಿಪಡಿಸಿ ಮತ್ತು ಯಾವ ವ್ಯಕ್ತಿಗಳು ಮತ್ತು ಯಾರಿಗೆ ಆ ಖರ್ಚುಗಳನ್ನು ಸಂದಾಯ ಮಾಡಬೇಕೋ ಆ ವ್ಯಕ್ತಿಗಳನ್ನು ನಿರ್ದಿಷ್ಟಪಡಿಸಿ ಸಹ

- ಆ ಆದೇಶವನ್ನು ಮಾಡತಕ್ಕುದು:

ಪರಂತು, ಅರ್ಜಿಗೆ ಪಕ್ಷಕಾರನಾಗಿರದ ವ್ಯಕ್ತಿಗೆ -

(ಎ) ಉಚ್ಚ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಅವನನ್ನು ಏಕೆ ಹೆಸರಿಸಬಾರದೆಂಬುದಕ್ಕೆ ಕಾರಣವನ್ನು ತೋರಿಸಲು ನೋಟೀಸನ್ನು ಕೊಟ್ಟಿರುವ ಹೊರತು; ಮತ್ತು

(ಬಿ) ಆ ನೋಟೀಸಿಗನುಸಾರವಾಗಿ ಅವನು ಹಾಜರಾದರೆ, ಉಚ್ಚ ನ್ಯಾಯಾಲಯವು ಈಗಾಗಲೇ ಪರೀಕ್ಷಿಸಿರುವ ಯಾವ ಸಾಕ್ಷಿದಾರನು ತನ್ನ ವಿರುದ್ಧ ಸಾಕ್ಷ್ಯವನ್ನು ಕೊಟ್ಟಿರುವನೋ ಆ ಯಾವನೇ ಸಾಕ್ಷಿದಾರನನ್ನು ಪಾಟೀ ಸವಾಲು ಮಾಡಲು ತನ್ನ ಪ್ರತಿರಕ್ಷೆಯಲ್ಲಿ ಸಾಕ್ಷ್ಯವನ್ನು ಕರೆಯಲು ಮತ್ತು ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಅವಕಾಶವನ್ನು ನೀಡಿದ ಹೊರತು

- (ಎ) ಖಂಡದ (ii)ನೇ ಉಪಖಂಡದ ಮೇರೆಗಿನ ಆದೇಶದಲ್ಲಿ ಅವನನ್ನು ಹಾಗೆ ಹೆಸರಿಸತಕ್ಕುದಲ್ಲ.

(೨) ಈ ಪ್ರಕರಣದಲ್ಲಿ ಮತ್ತು ೧೦೦ನೇ ಪ್ರಕರಣದಲ್ಲಿ 'ಏಜೆಂಟ್' ಎಂಬ ಪದವು ೧೨೩ನೇ ಪ್ರಕರಣದಲ್ಲಿರುವಂಥದೇ ಅರ್ಥವನ್ನು ಹೊಂದಿರತಕ್ಕುದು.

೧೦೦. ಚುನಾವಣೆಯನ್ನು ಶೂನ್ಯವೆಂದು ಘೋಷಿಸಲು ಆಧಾರಗಳು:- (೧) (೨)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಉಚ್ಚ ನ್ಯಾಯಾಲಯವು-

(ಎ) ಚುನಾಯಿತ ಅಭ್ಯರ್ಥಿಯು ತನ್ನ ಚುನಾವಣಾ ದಿನಾಂಕದಂದು, ಸಂವಿಧಾನದ ಅಥವಾ ಈ ಅಧಿನಿಯಮದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, ೧೯೬೩ (೧೯೬೩ರ ೨೦)ರ ಮೇರೆಗೆ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹನಾಗಿದ್ದನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಅಥವಾ ಚುನಾಯಿತ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರೆ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾನೆಂದು;

(ಸಿ) ಯಾವುದೇ ನಾಮನಿರ್ದೇಶನ ಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆ ಎಂದು ಅಭಿಪ್ರಾಯಪಟ್ಟರೆ; ಅಥವಾ

(ಡಿ) ಚುನಾವಣೆಯ ಫಲಿತಾಂಶವು, ಚುನಾಯಿತ ಅಭ್ಯರ್ಥಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಅದು-

(i) ಯಾವುದೇ ನಾಮನಿರ್ದೇಶನ ಪತ್ರದ ಅನುಚಿತ ಅಂಗೀಕಾರದ ಮೂಲಕ; ಅಥವಾ

(ii) ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ ಇತರ ಯಾವನೇ ಏಜೆಂಟನು ಚುನಾಯಿತ ಅಭ್ಯರ್ಥಿಯ ಹಿತಾಸಕ್ತಿಯನ್ನು ಮಾಡಿರುವ ಯಾವುದೇ ಭ್ರಷ್ಟಾಚಾರದ ಮೂಲಕ; ಅಥವಾ

(iii) ಯಾವುದೇ ಮತದ ಅನುಚಿತ ಸ್ವೀಕಾರ, ನಿರಾಕರಣೆ ಅಥವಾ ತಿರಸ್ಕರಣೆಯ ಅಥವಾ ಶೂನ್ಯವಾಗಿರುವ ಯಾವುದೇ ಮತದ ಸ್ವೀಕಾರದ ಮೂಲಕ; ಅಥವಾ

(iv) ಸಂವಿಧಾನದ ಅಥವಾ ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳು ಅಥವಾ ಆದೇಶಗಳ ಉಪಬಂಧಗಳ ಯಾವುದೇ ಅನನುಪಾಲನೆಯ ಮೂಲಕ ವಸ್ತುತಃ ಬಾಧಿತವಾಗಿದೆ ಎಂದು ಅಭಿಪ್ರಾಯಪಟ್ಟರೆ,

- ಉಚ್ಚ ನ್ಯಾಯಾಲಯವು ಅಂಥ ಚುನಾಯಿತ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸತಕ್ಕುದು.

(೨) ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಒಬ್ಬ ಚುನಾಯಿತ ಅಭ್ಯರ್ಥಿಯು ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ ಇತರ ಯಾವನೇ ಏಜೆಂಟನ ಮೂಲಕ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಆದರೆ ಉಚ್ಚ ನ್ಯಾಯಾಲಯಕ್ಕೆ-

(ಎ) ಆ ಅಭ್ಯರ್ಥಿಯು ಅಥವಾ ಚುನಾವಣಾ ಏಜೆಂಟನು ಚುನಾವಣೆಯಲ್ಲಿ ಯಾವುದೇ ಅಂಥ ಭ್ರಷ್ಟಾಚಾರವನ್ನು ಮಾಡಿಲ್ಲವೆಂದು, ಮತ್ತು ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಆದೇಶಗಳಿಗೆ ವಿರುದ್ಧವಾಗಿ ಮತ್ತು ಅವರ ಸಮ್ಮತಿಯಿಲ್ಲದೆ ಅಂಥ ಪ್ರತಿಯೊಂದು ಭ್ರಷ್ಟಾಚಾರವನ್ನು ಮಾಡಲಾಗಿದೆಯೆಂದು;

(ಬಿ) (ಲೋಪಿಸಲಾಗಿದೆ).

(ಸಿ) ಚುನಾವಣೆಯಲ್ಲಿ ಭ್ರಷ್ಟಾಚಾರಗಳು ನಡೆಯುವುದನ್ನು ತಡೆಯಲು ಅಭ್ಯರ್ಥಿ ಮತ್ತು ಅವನ ಚುನಾವಣಾ ಏಜೆಂಟನು ಎಲ್ಲ ಯುಕ್ತ ಕ್ರಮಗಳನ್ನು ಕೈಗೊಂಡಿದ್ದರೆಂದು; ಮತ್ತು

(ಡಿ) ಎಲ್ಲ ಇತರ ವಿಧದಲ್ಲಿಯೂ ಚುನಾವಣೆಯು ಅಭ್ಯರ್ಥಿಯ ಅಥವಾ ಯಾವನೇ ಅವನ ಏಜೆಂಟನ ಕಡೆಯಿಂದ ಯಾವುದೇ ಭ್ರಷ್ಟಾಚಾರದಿಂದ ಮುಕ್ತವಾಗಿತ್ತೆಂದು,

- ಮನವರಿಕೆಯಾದರೆ ಆಗ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಿಲ್ಲವೆಂದು ತೀರ್ಮಾನಿಸಬಹುದು.

೧೦೧. ಚುನಾಯಿತ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದ ಆಧಾರಗಳು:- ಅರ್ಜಿಯನ್ನು ಸಲ್ಲಿಸಿರುವ ಯಾವನೇ ವ್ಯಕ್ತಿಯು ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಪ್ರಶ್ನಿಸುವುದರ ಜೊತೆಗೆ ತಾನೇ ಸ್ವತಃ ಅಥವಾ ಯಾವನೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದರೆ, ಮತ್ತು ಉಚ್ಚ ನ್ಯಾಯಾಲಯವು -

(ಎ) ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ವಾಸ್ತವವಾಗಿ ಸಿಂಧುವಾದ ಅಧಿಕ ಸಂಖ್ಯೆಯ ಮತಗಳನ್ನು ಪಡೆದಿದ್ದನೆಂದು; ಅಥವಾ

(ಬಿ) ಚುನಾಯಿತ ಅಭ್ಯರ್ಥಿಯು ಭ್ರಷ್ಟಾಚಾರದ ಮೂಲಕ ಮತಗಳನ್ನು ಪಡೆದಿರದಿದ್ದರೆ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಅಧಿಕ ಸಂಖ್ಯೆಯ ಮತಗಳನ್ನು ಪಡೆದುಕೊಳ್ಳಬಹುದಾಗಿದ್ದಿತೆಂದು

- ಅಭಿಪ್ರಾಯಪಟ್ಟರೆ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿಸಿದ ಬಳಿಕ, ಸಂದರ್ಭಾನುಸಾರ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು, ಕ್ರಮಬದ್ಧವಾಗಿ ಆಯ್ಕೆಯಾಗಿದ್ದಾನೆಂದು ಘೋಷಿಸತಕ್ಕುದು.

೧೦೨. ಸಮಾನ ಮತಗಳ ಸಂದರ್ಭದಲ್ಲಿ ಪ್ರಕ್ರಿಯೆ:- ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕಾಲದಲ್ಲಿ, ಆ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಗಳ ನಡುವೆ ಮತಗಳು ಸಮಾನವಾಗಿವೆಯೆಂದು ಮತ್ತು ಒಂದು ಮತದ ಸೇರ್ಪಡೆಯಿಂದ ಅಭ್ಯರ್ಥಿಗಳ ಪೈಕಿ ಯಾವೊಬ್ಬನು ಚುನಾಯಿತನೆಂದು ಘೋಷಿಸುವುದಕ್ಕೆ ಹಕ್ಕುಳ್ಳವನಾಗಬಹುದೆಂದು ಕಂಡುಬಂದರೆ, ಆಗ-

(ಎ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಚುನಾವಣಾ ಅಧಿಕಾರಿಯು ಮಾಡಿದ ಯಾವುದೇ ತೀರ್ಮಾನವು, ಆ ಅಭ್ಯರ್ಥಿಗಳ ನಡುವಣ ಪ್ರಶ್ನೆಯನ್ನು ನಿರ್ಧರಿಸುವಷ್ಟರ ಮಟ್ಟಿಗೆ, ಅರ್ಜಿಯ ಉದ್ದೇಶಗಳಿಗಾಗಿ ಸಹ ಪರಿಣಾಮಕಾರಿಯಾಗತಕ್ಕುದು; ಮತ್ತು

(ಬಿ) ಅಂಥ ತೀರ್ಮಾನವು ಆ ಪ್ರಶ್ನೆಯನ್ನು ನಿರ್ಧರಿಸದಿರುವಷ್ಟರ ಮಟ್ಟಿಗೆ ಉಚ್ಚ ನ್ಯಾಯಾಲಯವು ಅವರಿಬ್ಬರ ನಡುವಿನ ಪ್ರಶ್ನೆಯನ್ನು ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕುದು ಮತ್ತು ಚೀಟಿ ಯಾರ ಪರವಾಗಿ ಬಂದಿದೆಯೋ ಅವನು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಕ್ರಮವನ್ನು ಜರುಗಿಸತಕ್ಕುದು.

೧೦೩. ಉಚ್ಚ ನ್ಯಾಯಾಲಯದ ಆದೇಶಗಳನ್ನು ತಿಳಿಸುವುದು:- ಉಚ್ಚ ನ್ಯಾಯಾಲಯವು, ಚುನಾವಣಾ ಅರ್ಜಿಯ ಅಧಿವಿಚಾರಣೆಯ ಮುಕ್ತಾಯದ ತರುವಾಯ ಆದಷ್ಟು ಬೇಗನೆ, ತೀರ್ಮಾನದ ಸಾರಾಂಶವನ್ನು ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ತಿಳಿಸತಕ್ಕುದು ಮತ್ತು, ಆ ತರುವಾಯ ಆದಷ್ಟು ಬೇಗನೆ ಚುನಾವಣಾ ಆಯೋಗಕ್ಕೆ ಆ ತೀರ್ಮಾನದ ಅಧಿಪ್ರಮಾಣಿತ ಪ್ರತಿಯನ್ನು ಕಳುಹಿಸತಕ್ಕುದು.

೧೦೪. (ನಿರಸನಗೊಳಿಸಲಾಗಿದೆ).

೧೦೫. (ನಿರಸನಗೊಳಿಸಲಾಗಿದೆ).

೧೦೬. ಸಮುಚಿತ ಪ್ರಾಧಿಕಾರ ಮುಂತಾದವುಗಳಿಗೆ ಆದೇಶದ ರವಾನೆ ಮತ್ತು ಅದರ ಪ್ರಕಟಣೆ:- ೯೮ನೇ ಪ್ರಕರಣದ ಅಥವಾ ೯೯ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಯಾವುದೇ ಆದೇಶವನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಚುನಾವಣಾ ಆಯೋಗವು ಆ ಆದೇಶದ ಪ್ರತಿಗಳನ್ನು ಸಮುಚಿತ ಪ್ರಾಧಿಕಾರಕ್ಕೆ, ಮತ್ತು ಸಂಸತ್ತಿನ ಸದನದ ಚುನಾವಣೆಗೆ ಅಥವಾ ರಾಜ್ಯದ ವಿಧಾನ ಮಂಡಲದ ಸದನದ ಅಥವಾ ಒಂದು ಸದನದ ಚುನಾವಣೆಗೆ ಸಂಬಂಧಪಡುವಂಥ ಆದೇಶವು ಇರುವ ಸಂದರ್ಭದಲ್ಲಿ ಸಂದರ್ಭಾನುಸಾರ ಸಂಬಂಧಪಟ್ಟ ಸದನದ ಅಧ್ಯಕ್ಷ ಅಥವಾ ಸಭಾಪತಿಗೆ ಸಹ ಕಳುಹಿಸತಕ್ಕುದು ಮತ್ತು ಅಂಥ ಆದೇಶವನ್ನು,-

(ಎ) ಆ ಆದೇಶವು ಸಂಸತ್ತಿನ ಒಂದು ಸದನದ ಚುನಾವಣೆಗೆ ಸಂಬಂಧಿಸಿರುವಲ್ಲಿ ಭಾರತದ ರಾಜಪತ್ರದಲ್ಲಿ ಹಾಗೂ ಸಂಬಂಧಪಟ್ಟ ರಾಜ್ಯದ ರಾಜಪತ್ರದಲ್ಲಿ; ಮತ್ತು

(ಬಿ) ಆ ಆದೇಶವು ರಾಜ್ಯ ವಿಧಾನ ಮಂಡಲದ ಸದನದ ಅಥವಾ ಒಂದು ಸದನದ ಚುನಾವಣೆಗೆ ಸಂಬಂಧಿಸಿರುವಲ್ಲಿ ರಾಜ್ಯದ ರಾಜಪತ್ರದಲ್ಲಿ

- ಪ್ರಕಟಿಸುವಂತೆ ಮಾಡತಕ್ಕುದು.

೧೦೭. ಉಚ್ಚ ನ್ಯಾಯಾಲಯದ ಆದೇಶಗಳ ಜಾರಿ:- (೧) ೯೮ನೇ ಪ್ರಕರಣ ಅಥವಾ ೯೯ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಆದೇಶದ ಜಾರಿಯ ತಡೆಗೆ ಸಂಬಂಧಿಸಿದಂತೆ IVಎ ಅಧ್ಯಾಯದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಉಚ್ಚ ನ್ಯಾಯಾಲಯವು ಅಂಥ ಪ್ರತಿಯೊಂದು ಆದೇಶವನ್ನು ನೀಡಿದ ಕೂಡಲೇ ಅದು ಜಾರಿಗೆ ಬರತಕ್ಕುದು.

(೨) ೯೮ನೇ ಪ್ರಕರಣದ ಮೇರೆಗಿನ ಆದೇಶದ ಮೂಲಕ ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಶೂನ್ಯವೆಂದು ಘೋಷಿಸಿರುವಲ್ಲಿ, ಆ ಚುನಾಯಿತ ಅಭ್ಯರ್ಥಿಯು ಆ

ಆದೇಶದ ದಿನಾಂಕಕ್ಕೆ ಮುಂಚೆ ಸಂಸತ್ತಿನ ಸದಸ್ಯನಾಗಿ ಅಥವಾ ರಾಜ್ಯದ ವಿಧಾನ ಮಂಡಲದ ಸದಸ್ಯನಾಗಿ ಭಾಗವಹಿಸಿರುವ ಕಾರ್ಯಗಳು ಮತ್ತು ವ್ಯವಹರಣೆಗಳು ಆ ಆದೇಶದ ಕಾರಣದಿಂದಾಗಿ ಅಸಿಂಧುಗೊಳ್ಳತಕ್ಕುದಲ್ಲ, ಮತ್ತು ಅಂಥ ಅಭ್ಯರ್ಥಿಯನ್ನು ಹಾಗೆ ಭಾಗವಹಿಸಿರುವ ಆಧಾರದ ಮೇಲೆ ಯಾವುದೇ ಹೊಣೆಗಾರಿಕೆ ಅಥವಾ ದಂಡನೆಗೆ ಗುರಿಪಡಿಸತಕ್ಕುದಲ್ಲ.

ಅಧ್ಯಾಯ - IV

ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವಿಕೆ ಮತ್ತು ಕೊನೆಗೊಳ್ಳುವಿಕೆ

೧೦೮. (ನಿರಸನಗೊಳಿಸಲಾಗಿದೆ).

೧೦೯. ಚುನಾವಣಾ ಅರ್ಜಿಗಳ ಹಿಂತೆಗೆದುಕೊಳ್ಳುವಿಕೆ:- (೧) ಚುನಾವಣಾ ಅರ್ಜಿಯನ್ನು ಉಚ್ಚ ನ್ಯಾಯಾಲಯದ ಅನುಮತಿಯಿಂದ ಮಾತ್ರವೇ ಹಿಂತೆಗೆದುಕೊಳ್ಳಬಹುದು.

(೨) (೧)ನೇ ಉಪಪ್ರಕರಣದ ಮೇರೆಗೆ ಹಿಂತೆಗೆದುಕೊಳ್ಳುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಆ ಅರ್ಜಿಯ ಸುನಾವಣೆಗಾಗಿ ದಿನಾಂಕವನ್ನು ನಿಗದಿಪಡಿಸಿ ಅದರ ನೋಟೀಸನ್ನು ಆ ಅರ್ಜಿಯ ಎಲ್ಲ ಇತರ ಪಕ್ಷಕಾರರಿಗೆ ಕೊಡತಕ್ಕುದು ಮತ್ತು ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

೧೧೦. ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಪ್ರಕ್ರಿಯೆ:- (೧) ಒಬ್ಬನಿಗಿಂತ ಹೆಚ್ಚು ಅರ್ಜಿದಾರರಿದ್ದರೆ, ಎಲ್ಲ ಅರ್ಜಿದಾರರ ಸಮ್ಮತಿಯಿಂದ ಹೊರತು ಚುನಾವಣಾ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಯಾವುದೇ ಆವೇದನವನ್ನು ಸಲ್ಲಿಸತಕ್ಕುದಲ್ಲ.

(೨) ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಹಿಂತೆಗೆದುಕೊಳ್ಳುವುದಕ್ಕಾಗಿನ ಅಂಥ ಅರ್ಜಿಯು ಅನುಮತಿಸಕೂಡದಂಥ ಯಾವುದೇ ಚೌಕಾಸಿ ಅಥವಾ ಪ್ರತಿಫಲದಿಂದ ಪ್ರೇರೇಪಿತವಾಗಿದ್ದರೆ, ಈ ಅರ್ಜಿಯನ್ನು ಮಂಜೂರು ಮಾಡತಕ್ಕುದಲ್ಲ.

(೩) ಅರ್ಜಿಯನ್ನು ಮಂಜೂರು ಮಾಡಿದರೆ,-

(ಎ) ಆವರೆಗೆ ವಹಿಸಲಾದ ಪ್ರತ್ಯರ್ಜಿದಾರರ ಖರ್ಚುಗಳನ್ನು ಅಥವಾ ಉಚ್ಚ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ಅದರ ಭಾಗವನ್ನು ಸಂದಾಯ ಮಾಡಲು ಅರ್ಜಿದಾರನಿಗೆ ಆದೇಶಿಸತಕ್ಕುದು;

(ಬಿ) ಉಚ್ಚ ನ್ಯಾಯಾಲಯವು ಹಿಂತೆಗೆದುಕೊಳ್ಳುವಿಕೆಯ ನೋಟೀಸನ್ನು ರಾಜಪತ್ರದಲ್ಲಿ ಮತ್ತು ಅದು ನಿರ್ದಿಷ್ಟಪಡಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸತಕ್ಕುದೆಂದು ನಿರ್ದೇಶಿಸತಕ್ಕುದು ಮತ್ತು ಆಮೇಲೆ ಆ ನೋಟೀಸನ್ನು ತದನುಸಾರವಾಗಿ ಪ್ರಕಟಿಸತಕ್ಕುದು;

(ಸಿ) ತಾನೇ ಸ್ವತಃ ಅರ್ಜಿದಾರನಾಗಬಹುದಾಗಿದ್ದ ಒಬ್ಬ ವ್ಯಕ್ತಿಯು ಅಂಥ ಪ್ರಕಟಣೆಯ ೧೪ ದಿವಸಗಳೊಳಗಾಗಿ, ಹಿಂತೆಗೆದುಕೊಳ್ಳುವ ಪಕ್ಷಕಾರನ ಸ್ಥಾನದಲ್ಲಿ

ಅರ್ಜಿದಾರನೆಂದು ಸೇರಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಭದ್ರತೆಯ ಬಗ್ಗೆ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಪಾಲಿಸಿದ ತರುವಾಯ ಹಾಗೆ ಸೇರಿಸಿಕೊಳ್ಳಲು ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

೧೧೧. ಉಚ್ಚ ನ್ಯಾಯಾಲಯವು ಹಿಂತೆಗೆದುಕೊಳ್ಳುವಿಕೆಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡುವುದು:- ಹಿಂತೆಗೆದುಕೊಳ್ಳುವಿಕೆಯ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಮಂಜೂರು ಮಾಡಿದಾಗ ಮತ್ತು ಹಿಂತೆಗೆದುಕೊಳ್ಳುವ ಪಕ್ಷಕಾರನ ಸ್ಥಾನದಲ್ಲಿ ೧೧೦ನೇ ಪ್ರಕರಣದ (೩)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅರ್ಜಿದಾರನೆಂದು ಯಾವನೇ ವ್ಯಕ್ತಿಯನ್ನು ಸೇರಿಸದಿರುವಾಗ ಉಚ್ಚ ನ್ಯಾಯಾಲಯವು ಆ ಸಂಗತಿಯನ್ನು ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕುದು ಮತ್ತು ಆ ತರುವಾಯ ಚುನಾವಣಾ ಆಯೋಗವು ಆ ವರದಿಯನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

೧೧೨. ಚುನಾವಣಾ ಅರ್ಜಿಗಳ ಕೊನೆಗೊಳಿಸುವಿಕೆ:- (೧) ಒಂದು ಚುನಾವಣಾ ಅರ್ಜಿಯು ಏಕೈಕ ಅರ್ಜಿದಾರನ ಅಥವಾ ಅನೇಕ ಅರ್ಜಿದಾರರ ಪೈಕಿ ಉತ್ತರ ಜೀವಿಯ ಮರಣದ ತರುವಾಯ ಮಾತ್ರವೇ ಕೊನೆಗೊಳ್ಳತಕ್ಕುದು.

(೨) (೧)ನೇ ಉಪಪ್ರಕರಣದ ಮೇರೆಗೆ ಚುನಾವಣಾ ಅರ್ಜಿಯು ಕೊನೆಗೊಂಡಿರುವಲ್ಲಿ, ಉಚ್ಚ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಆ ಸಂಗತಿಯನ್ನು ಪ್ರಕಟಿಸುವಂತೆ ಮಾಡತಕ್ಕುದು.

(೩) ತಾನೇ ಸ್ವತಃ ಅರ್ಜಿದಾರನಾಗಬಹುದಾಗಿದ್ದ ಯಾವನೇ ವ್ಯಕ್ತಿಯು ಅಂಥ ಪ್ರಕಟಣೆಯ ಹದಿನಾಲ್ಕು ದಿವಸಗಳೊಳಗಾಗಿ, ಅರ್ಜಿದಾರನೆಂದು ಸೇರಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಭದ್ರತೆಯ ಬಗ್ಗೆ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಪಾಲಿಸಿದ ತರುವಾಯ ಹಾಗೆ ಸೇರಿಸಿಕೊಳ್ಳಲು ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮೇಲೆ ಆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

೧೧೩-೧೧೫. (ನಿರಸನಗೊಳಿಸಲಾಗಿದೆ).

೧೧೬. ಪ್ರತ್ಯರ್ಜಿದಾರನ ಮರಣದ ತರುವಾಯ ಕೊನೆಗೊಳ್ಳುವಿಕೆ ಅಥವಾ ಪ್ರತ್ಯಾಯೋಜನೆ:- ಚುನಾವಣಾ ಅರ್ಜಿಯ ಅಧಿವಿಚಾರಣೆಯು ಮುಕ್ತಾಯವಾಗುವುದಕ್ಕೆ ಮುಂಚೆ ಏಕೈಕ ಪ್ರತ್ಯರ್ಜಿದಾರನು ಮರಣ ಹೊಂದಿದರೆ ಅಥವಾ ಅರ್ಜಿಯನ್ನು ವಿರೋಧಿಸಲು ಉದ್ದೇಶಿಸಿಲ್ಲವೆಂದು ಅವನು ನೋಟೀಸು ನೀಡಿದರೆ ಅಥವಾ ಯಾವನೇ ಪ್ರತ್ಯರ್ಜಿದಾರನು ಮರಣ ಹೊಂದಿದರೆ ಅಥವಾ ಅಂಥ ನೋಟೀಸನ್ನು ನೀಡಿದರೆ ಮತ್ತು ಅರ್ಜಿಯನ್ನು ವಿರೋಧಿಸುವ ಇತರ ಯಾವನೇ ಪ್ರತ್ಯರ್ಜಿದಾರನು ಇಲ್ಲದಿದ್ದರೆ, ಉಚ್ಚ ನ್ಯಾಯಾಲಯವು, ಅಂಥ ಸಂಗತಿಯ ಬಗ್ಗೆ ನೋಟೀಸನ್ನು ರಾಜಪತ್ರದಲ್ಲಿ

ಪ್ರಕಟಿಸುವಂತೆ ಮಾಡತಕ್ಕುದು ಮತ್ತು ಆ ತರುವಾಯ ಅರ್ಜಿದಾರನಾಗಬಹುದಾಗಿದ್ದ ಯಾವನೇ ವ್ಯಕ್ತಿಯು, ಅಂಥ ಪ್ರಕಟಣೆಯ ಹದಿನಾಲ್ಕು ದಿವಸಗಳೊಳಗಾಗಿ ಅರ್ಜಿಯನ್ನು ವಿರೋಧಿಸಲು ಅಂಥ ಪ್ರತ್ಯರ್ಜಿದಾರನ ಸ್ಥಾನದಲ್ಲಿ ಸೇರಿಕೊಳ್ಳಲು ಅರ್ಜಿಯನ್ನು ಸಲ್ಲಿಸಬಹುದು, ಮತ್ತು ಉಚ್ಚ ನ್ಯಾಯಾಲಯವು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳ ಮೇಲೆ ವ್ಯವಹರಣೆಗಳನ್ನು ಮುಂದುವರಿಸಲು ಅವನು ಹಕ್ಕುಳ್ಳವನಾಗಿರತಕ್ಕುದು.

ಅಧ್ಯಾಯ - IVಎ
ಅಪೀಲುಗಳು

೧೧೬ಎ. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲುಗಳು:- (೧) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ೯೮ನೇ ಪ್ರಕರಣ ಅಥವಾ ೯೯ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಪ್ರತಿಯೊಂದು ಆದೇಶದ ಬಗ್ಗೆ ಯಾವುದೇ ಪ್ರಶ್ನೆಯ (ಅದು ಕಾನೂನಿನದಾಗಿರಲಿ, ಅಥವಾ ಸಂಗತಿಯದಾಗಿರಲಿ) ಮೇಲೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದು.

(೨) ಈ ಅಧ್ಯಾಯದ ಮೇರೆಗಿನ ಪ್ರತಿಯೊಂದು ಅಪೀಲನ್ನು ೯೮ನೇ ಪ್ರಕರಣ ಅಥವಾ ೯೯ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗಾಗಿ ಸಲ್ಲಿಸತಕ್ಕುದು:

ಪರಂತು, ೩೦ ದಿವಸಗಳ ಅಂಥ ಅವಧಿಯೊಳಗೆ ಅಪೀಲನ್ನು ಸಲ್ಲಿಸದಿರಲು ಅಪೀಲುದಾರನಿಗೆ ಸಾಕಷ್ಟು ಕಾರಣ ಇದ್ದಿತೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ಅವಧಿಯ ಮುಕ್ತಾಯದ ತರುವಾಯ ಅಪೀಲನ್ನು ಪುರಸ್ಕರಿಸಬಹುದು.

೧೧೬ಬಿ. ಉಚ್ಚ ನ್ಯಾಯಾಲಯದ ಆದೇಶದ ಜಾರಿಯ ತಡೆ:- (೧) ೯೮ನೇ ಪ್ರಕರಣ ಅಥವಾ ೯೯ನೇ ಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯವು ಮಾಡಿದ ಆದೇಶದ ಜಾರಿಯ ತಡೆಗಾಗಿ, ಆ ಆದೇಶದ ಬಗ್ಗೆ ಅಪೀಲು ಸಲ್ಲಿಸಲು ಅನುಮತಿಸಲಾದ ಕಾಲವು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಉಚ್ಚ ನ್ಯಾಯಾಲಯವು, ಸಾಕಷ್ಟು ಕಾರಣವನ್ನು ತೋರಿಸಿದ ಮೇಲೆ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ಆ ಆದೇಶದ ಜಾರಿಯನ್ನು ತಡೆ ಹಿಡಿಯಬಹುದು; ಆದರೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಿದ ತರುವಾಯ ಉಚ್ಚ ನ್ಯಾಯಾಲಯಕ್ಕೆ ತಡೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸತಕ್ಕುದಲ್ಲ.

(೨) ೯೮ನೇ ಪ್ರಕರಣ ಅಥವಾ ೯೯ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿರುವಲ್ಲಿ, ಸರ್ವೋಚ್ಚ ನ್ಯಾಯಾಲಯವು, ಸಾಕಷ್ಟು

ಕಾರಣವನ್ನು ತೋರಿಸಿದ ಮೇಲೆ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(೩) ಆದೇಶದ ಜಾರಿಯನ್ನು, ಸಂದರ್ಭಾನುಸಾರ, ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು ತಡೆ ಹಿಡಿದಿರುವಾಗ, ಆ ಆದೇಶವು ೧೦೭ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಯಾವತ್ತೂ ಜಾರಿಗೆ ಬಂದಿಲ್ಲವೆಂಬುದಾಗಿ ಭಾವಿಸತಕ್ಕುದು, ಮತ್ತು ತಡೆ ಆದೇಶದ ಒಂದು ಪ್ರತಿಯನ್ನು ಸಂದರ್ಭಾನುಸಾರ ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು, ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ಕೂಡಲೇ ಕಳುಹಿಸಿಕೊಡತಕ್ಕುದು.

೧೧೬ಸಿ. ಅಪೀಲಿನ ಪ್ರಕ್ರಿಯೆ:- (೧) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಯಾವುವಾದರೂ ಇದ್ದರೆ, ಅವುಗಳ ಉಪಬಂಧಗಳಿಗೆ ಒಳಪಟ್ಟು ಪ್ರತಿಯೊಂದು ಅಪೀಲನ್ನು, ಉಚ್ಚ ನ್ಯಾಯಾಲಯವು ತನ್ನ ಮೂಲ ಸಿವಿಲ್ ಅಧಿಕಾರ ವ್ಯಾಪ್ತಿಯ ಚಲಾವಣೆಯಲ್ಲಿ ಹೊರಡಿಸಿದ ಯಾವುದೇ ಅಂತಿಮ ಆದೇಶದ ಬಗೆಗಿನ ಅಪೀಲಿನ ಸುನಾವಣೆ ಮತ್ತು ನಿರ್ಧಾರಣೆಗೆ ಅನ್ವಯವಾಗುವ ಪ್ರಕ್ರಿಯೆಗೆ ಅನುಸಾರವಾಗಿ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವು ಪ್ರತಿಯೊಂದು ಅಪೀಲನ್ನು ಸುನಾವಣೆ ಮಾಡತಕ್ಕುದು ಮತ್ತು ನಿರ್ಧರಿಸತಕ್ಕುದು; ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, ೧೯೦೮ (೧೯೦೮ರ ೫)ರ ಎಲ್ಲ ಉಪಬಂಧಗಳು ಮತ್ತು ನ್ಯಾಯಾಲಯದ ನಿಯಮಗಳು (ಭದ್ರತೆಯನ್ನು ಒದಗಿಸುವುದು ಮತ್ತು ನ್ಯಾಯಾಲಯದ ಯಾವುದೇ ಆದೇಶದ ಅಮಲ್ದಾರಿ ಇವುಗಳ ಬಗೆಗಿನ ಉಪಬಂಧಗಳನ್ನು ಸೇರಿಸಿ) ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅಂಥ ಅಪೀಲಿಗೆ ಸಂಬಂಧಿಸಿದಂತೆ ಅನ್ವಯಿಸತಕ್ಕುದು.

(೨) ಅಪೀಲನ್ನು ತೀರ್ಮಾನಿಸಿದ ಕೂಡಲೆ, ಸರ್ವೋಚ್ಚ ನ್ಯಾಯಾಲಯವು ಆ ತೀರ್ಮಾನದ ಸಾರಾಂಶವನ್ನು ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಥವಾ ಸಂಬಂಧಪಟ್ಟ ರಾಜ್ಯ ವಿಧಾನ ಮಂಡಲದ ಅಧ್ಯಕ್ಷ ಅಥವಾ ಸಭಾಪತಿಗೆ ತಿಳಿಸತಕ್ಕುದು ಮತ್ತು ತದನಂತರ ಸಾಧ್ಯವಾದಷ್ಟು ಬೇಗನೆ ತೀರ್ಮಾನದ ಅಧಿಪ್ರಮಾಣಿತ ಪ್ರತಿಯನ್ನು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡತಕ್ಕುದು; ಮತ್ತು ಅದನ್ನು ಸ್ವೀಕರಿಸಿದ ಮೇಲೆ ಚುನಾವಣಾ ಆಯೋಗವು-

(ಎ) ೧೦೭ನೇ ಪ್ರಕರಣದ ಮೇರೆಗೆ ಕಳುಹಿಸಲಾಗಿದ್ದ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳನ್ನು ಯಾವ ಪ್ರಾಧಿಕಾರಗಳಿಗೆ ಕಳುಹಿಸಲಾಗಿದ್ದಿತೋ ಆ ಪ್ರಾಧಿಕಾರಗಳಿಗೆ ಅದರ ಪ್ರತಿಗಳನ್ನು ಕಳುಹಿಸತಕ್ಕುದು; ಮತ್ತು

(ಬಿ) ಆ ಆದೇಶವನ್ನು ಸದರಿ ಪ್ರಕರಣದ ಮೇರೆಗೆ ಯಾವ ರಾಜಪತ್ರ ಅಥವಾ ರಾಜಪತ್ರಗಳಲ್ಲಿ ಪ್ರಕಟಿಸಲಾಗಿದ್ದಿತೋ ಅದರಲ್ಲಿ ಅಥವಾ ಅವುಗಳಲ್ಲಿ ಆ ತೀರ್ಮಾನವನ್ನು ಪ್ರಕಟಿಸುವಂತೆ ಮಾಡತಕ್ಕುದು.

ಅಧ್ಯಾಯ - V

ಖರ್ಚುಗಳು ಮತ್ತು ಖರ್ಚುಗಳಿಗಾಗಿ ಭದ್ರತೆ

೧೧೭. ಖರ್ಚುಗಳಿಗಾಗಿ ಭದ್ರತೆ:- (೧) ಚುನಾವಣಾ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ, ಅರ್ಜಿದಾರನು ಉಚ್ಚ ನ್ಯಾಯಾಲಯದ ನಿಯಮಗಳಿಗನುಸಾರವಾಗಿ ಅರ್ಜಿಯ ಖರ್ಚುಗಳಿಗಾಗಿ ಭದ್ರತೆಯೆಂದು ಎರಡು ಸಾವಿರ ರೂಪಾಯಿಗಳ ಮೊತ್ತವನ್ನು ಉಚ್ಚ ನ್ಯಾಯಾಲಯದಲ್ಲಿ ಠೇವಣಿ ಇಡತಕ್ಕುದು.

(೨) ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕ್ರಮದಲ್ಲಿ, ಉಚ್ಚ ನ್ಯಾಯಾಲಯವು, ಯಾವುದೇ ಸಮಯದಲ್ಲಿ, ಅದು ನಿರ್ದೇಶಿಸಬಹುದಾದಂಥ ಖರ್ಚುಗಳಿಗಾಗಿ ಹೆಚ್ಚಿನ ಭದ್ರತೆಯನ್ನು ನೀಡಲು ಅರ್ಜಿದಾರನನ್ನು ಕೇಳಬಹುದು.

೧೧೮. ಖರ್ಚುಗಳಿಗಾಗಿ ಪ್ರತ್ಯರ್ಜಿದಾರನಿಂದ ಭದ್ರತೆ:- ಯಾವನೇ ವ್ಯಕ್ತಿಯು ಖರ್ಚುಗಳ ಬಗ್ಗೆ ಉಚ್ಚ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ಭದ್ರತೆಯನ್ನು ನೀಡಿದ ಹೊರತು, ೬೬ನೇ ಪ್ರಕರಣದ (೪)ನೇ ಉಪಪ್ರಕರಣದ ಮೇರೆಗೆ ಪ್ರತ್ಯರ್ಜಿದಾರನೆಂದು ಸೇರಿಸಲ್ಪಡಲು ಹಕ್ಕುಳ್ಳವನಾಗತಕ್ಕುದಲ್ಲ.

೧೧೯. ಖರ್ಚುಗಳು:- ಖರ್ಚುಗಳು ಉಚ್ಚ ನ್ಯಾಯಾಲಯದ ವಿವೇಚನೆಗೆ ಅನುಸಾರವಾಗಿರತಕ್ಕುದು:

ಪರಂತು, ೯೮ನೇ ಪ್ರಕರಣದ (ಎ) ಖಂಡದ ಮೇರೆಗೆ ಅರ್ಜಿಯನ್ನು ವಜಾ ಮಾಡಿರುವ ಚುನಾಯಿತ ಅಭ್ಯರ್ಥಿಯು, ಆ ಅರ್ಜಿಯನ್ನು ವಿರೋಧಿಸುವಲ್ಲಿ ಅವನು ವಹಿಸಿರುವ ಖರ್ಚುಗಳನ್ನು ಪಡೆಯಲು ಹಕ್ಕುಳ್ಳವನಾಗತಕ್ಕುದು ಮತ್ತು ತದನುಸಾರವಾಗಿ ಉಚ್ಚ ನ್ಯಾಯಾಲಯವು ಚುನಾಯಿತ ಅಭ್ಯರ್ಥಿಯ ಪರವಾಗಿ ಖರ್ಚುಗಳ ಬಗ್ಗೆ ಆದೇಶವನ್ನು ಮಾಡತಕ್ಕುದು.

೧೨೦. (ನಿರಸನಗೊಳಿಸಲಾಗಿದೆ).

೧೨೧. ಭದ್ರತಾ ಠೇವಣಿಗಳಿಂದ ಖರ್ಚುಗಳ ಸಂದಾಯ ಮತ್ತು ಅಂಥ ಠೇವಣಿಗಳ ವಾಪಸಾತಿ:- (೧) ಈ ಭಾಗದ ಉಪಬಂಧಗಳ ಮೇರೆಗೆ ಖರ್ಚುಗಳ ಬಗ್ಗೆ ಯಾವುದೇ ಆದೇಶದಲ್ಲಿ ಯಾವನೇ ವ್ಯಕ್ತಿಗೆ ಯಾವನೇ ಪಕ್ಷಕಾರನು ಖರ್ಚುಗಳನ್ನು ಸಂದಾಯ ಮಾಡಲು ನಿರ್ದೇಶನವಿದ್ದರೆ, ಅಂಥ ಖರ್ಚುಗಳನ್ನು, ಈಗಾಗಲೇ ಸಂದಾಯ ಮಾಡಿರದಿದ್ದರೆ ಅವುಗಳನ್ನು ಯಾರ ಪರವಾಗಿ ಅಂಥ ಖರ್ಚುಗಳನ್ನು ನೀಡಲು ಆದೇಶಿಸಲಾಗಿದೆಯೋ ಆ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಆ ಬಗ್ಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಈ ಭಾಗದ ಮೇರೆಗೆ ಅಂಥ ಪಕ್ಷಕಾರನು ಕೊಟ್ಟಿರುವ ಭದ್ರತಾ ಠೇವಣಿ

ಮತ್ತು ಹೆಚ್ಚಿನ ಭದ್ರತಾ ಠೇವಣಿ ಯಾವುದಾದರೂ ಇದ್ದರೆ ಅದು - ಇವುಗಳಿಂದ ಪೂರ್ಣವಾಗಿ ಅಥವಾ ಸಾಧ್ಯವಾದಷ್ಟು ಸಂದಾಯ ಮಾಡತಕ್ಕುದು.

(೨) (೧)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಖರ್ಚುಗಳನ್ನು ಆ ಉಪಪ್ರಕರಣದ ಮೇರೆಗೆ ಸಂದಾಯ ಮಾಡಿದ ತರುವಾಯ ಸದರಿ ಭದ್ರತಾ ಠೇವಣಿಗಳ ಪೈಕಿ ಯಾವುದರಲ್ಲಾದರೂ ಯಾವುದೇ ಶಿಲ್ಕು ಉಳಿದಿದ್ದರೆ, ಅಂಥ ಶಿಲ್ಕನ್ನು ಅಥವಾ ಯಾವುವೇ ಖರ್ಚುಗಳನ್ನು ಕೊಡಲು ಆದೇಶಿಸಿರದಿರುವಲ್ಲಿ ಅಥವಾ ಮೇಲೆ ಹೇಳಿದಂತೆ ಒಂದು ವರ್ಷದ ಸದರಿ ಅವಧಿಯೊಳಗೆ ಯಾವುದೇ ಅರ್ಜಿಯನ್ನು ಸಲ್ಲಿಸದಿರುವಲ್ಲಿ ಸದರಿ ಭದ್ರತಾ ಠೇವಣಿಗಳನ್ನು ಪೂರ್ಣವಾಗಿ ಠೇವಣಿಗಳನ್ನು ಇಟ್ಟಿರುವ ವ್ಯಕ್ತಿಯು ಅಥವಾ ಅಂಥ ಠೇವಣಿಗಳನ್ನು ಇಟ್ಟ ತರುವಾಯ ಅಂಥ ವ್ಯಕ್ತಿಯು ಮರಣ ಹೊಂದಿದರೆ, ಅಂಥ ವ್ಯಕ್ತಿಯ ಕಾನೂನು ಸಮ್ಮತ ಪ್ರತಿನಿಧಿಯು ಉಚ್ಚ ನ್ಯಾಯಾಲಯಕ್ಕೆ ಈ ಬಗ್ಗೆ ಬರಹದಲ್ಲಿ ಅರ್ಜಿಯನ್ನು ಸಲ್ಲಿಸಿದ ಮೇಲೆ ಸಂದರ್ಭಾನುಸಾರ ಸದರಿ ವ್ಯಕ್ತಿಗೆ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ಹಿಂತಿರುಗಿಸತಕ್ಕುದು.

೧೨೨. ಖರ್ಚುಗಳ ಬಗೆಗಿನ ಆದೇಶಗಳ ಅಮಲ್ದಾರಿ:- ಈ ಭಾಗದ ಉಪಬಂಧಗಳ ಮೇರೆಗೆ ಖರ್ಚುಗಳ ಬಗೆಗಿನ ಯಾವುದೇ ಆದೇಶವನ್ನು ಮೂಲ ಅಧಿಕಾರ ವ್ಯಾಪ್ತಿಯುಳ್ಳ ಯಾವ ಪ್ರಧಾನ ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಯಾವುದೇ ಹಣದ ಮೊತ್ತವನ್ನು ಸಂದಾಯ ಮಾಡಲು ಅಂಥ ಆದೇಶದ ಮೂಲಕ ನಿರ್ದೇಶಿತನಾಗಿರುವ ಯಾವನೇ ವ್ಯಕ್ತಿಯು ವಾಸಸ್ಥಳವನ್ನು ಅಥವಾ ವ್ಯವಹಾರದ ಸ್ಥಳವನ್ನು ಹೊಂದಿರುತ್ತಾನೋ ಆ ನ್ಯಾಯಾಲಯದ ಮುಂದೆ, ಅಥವಾ ಅಂಥ ಸ್ಥಳವು ಪ್ರೆಸಿಡೆನ್ಸಿ ಪಟ್ಟಣದೊಳಗಿರುವಲ್ಲಿ, ಅಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲಘು ವ್ಯಾಜ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಬಹುದು ಮತ್ತು ಅಂಥ ನ್ಯಾಯಾಲಯವು ದಾವೆಯಲ್ಲಿ ಅದೇ ಸ್ವತಃ ಹಣದ ಸಂದಾಯಕ್ಕೆ ಡಿಕ್ರಿಯನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ಅಂಥದೇ ರೀತಿಯಲ್ಲಿ ಮತ್ತು ಅಂಥದೇ ಪ್ರಕ್ರಿಯೆ ಮೂಲಕ ಆ ಆದೇಶವನ್ನು ಅಮಲ್ದಾರಿಗೊಳಿಸತಕ್ಕುದು ಅಥವಾ ಅಮಲ್ದಾರಿಗೊಳಿಸುವಂತೆ ಮಾಡತಕ್ಕುದು:

ಪರಂತು, ಯಾವುದೇ ಅಂಥ ಖರ್ಚುಗಳು ಅಥವಾ ಅವುಗಳ ಯಾವುದೇ ಭಾಗವನ್ನು ೧೨೧ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಮೂಲಕ ವಸೂಲಿ ಮಾಡಬಹುದಾಗಿರುವಲ್ಲಿ, ಆ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸಿದ ತರುವಾಯ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಭದ್ರತಾ ಠೇವಣಿಗಳ ಮೊಬಲಗು ಸಾಕಷ್ಟಿಲ್ಲದಿರುವ ಕಾರಣದಿಂದ ವಸೂಲಾಗದೆ ಉಳಿದಿರುವ ಯಾವುವೇ ಖರ್ಚುಗಳ ಶಿಲ್ಕಿನ ವಸೂಲಾತಿಗಾಗಿ ಅರ್ಜಿ ಇರುವ ಹೊರತು, ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಈ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಲು ಅವಕಾಶ ಇರತಕ್ಕುದಲ್ಲ.

ಭಾಗ - VII

ಭ್ರಷ್ಟಾಚಾರಗಳು ಮತ್ತು ಚುನಾವಣಾ ಅಪರಾಧಗಳು

ಅಧ್ಯಾಯ - I

ಭ್ರಷ್ಟಾಚಾರಗಳು

೧೨೩. ಭ್ರಷ್ಟಾಚಾರಗಳು:- ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕುದು:-

(೧) ''ಲಂಚಗುಳಿತನ" ಎಂದರೆ,-

ಎ. ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಯಾವನೇ ವ್ಯಕ್ತಿಗಾಗಲೀ,-

(ಎ) ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದಿರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂದಕ್ಕೆ ತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಒಬ್ಬ ವ್ಯಕ್ತಿಯನ್ನು, ಅಥವಾ

(ಬಿ) ಚುನಾವಣೆಯಲ್ಲಿ ಮತದಾನ ಮಾಡಲು ಅಥವಾ ಮತದಾನ ಮಾಡದೇ ಇರಲು, ಅಥವಾ

(i) ಹಾಗೆ ನಿಂತಿರುವುದಕ್ಕಾಗಿ ಅಥವಾ ನಿಲ್ಲದಿರುವುದಕ್ಕಾಗಿ ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರುವುದಕ್ಕಾಗಿ ಅಥವಾ ಹಿಂತೆಗೆದುಕೊಳ್ಳದಿರುವುದಕ್ಕಾಗಿ ಒಬ್ಬ ವ್ಯಕ್ತಿಗೆ; ಅಥವಾ

(ii) ಮತದಾನ ಮಾಡಿರುವುದಕ್ಕಾಗಿ ಅಥವಾ ಮಾಡದೇ ಇರುವುದಕ್ಕಾಗಿ, ಒಬ್ಬ ಮತದಾರನಿಗೆ ಬಹುಮಾನವೆಂದು, ಒಬ್ಬ ಮತದಾರನನ್ನು, ಪರೋಕ್ಷವಾಗಿ ಅಥವಾ ಅಪರೋಕ್ಷವಾಗಿ ಪ್ರೇರಿಸುವ ಉದ್ದೇಶದಿಂದ ಕೊಡುವ ಯಾವುದೇ ಪರಿತೋಷದ ಯಾವುದೇ ದಾನ, ಅದನ್ನು ಕೊಡುವುದಾಗಿ ಹೇಳುವುದು ಅಥವಾ ಅದರ ಯಾವುದೇ ಆಶ್ವಾಸನೆ;

ಬಿ. ಪ್ರೇರಣೆಯ ರೂಪದಲ್ಲಾಗಲಿ, ಬಹುಮಾನದ ರೂಪದಲ್ಲಾಗಲಿ,-

(ಎ) ಒಬ್ಬ ಅಭ್ಯರ್ಥಿಯಾಗಿ ನಿಲ್ಲಲು ಅಥವಾ ನಿಲ್ಲದೆ ಇರಲು ಅಥವಾ ಅಭ್ಯರ್ಥಿಯಾಗಿ ಇರುವುದನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಒಬ್ಬ ವ್ಯಕ್ತಿಯು; ಅಥವಾ

(ಬಿ) ಮತದಾನ ಮಾಡುವುದಕ್ಕಾಗಿ ಅಥವಾ ಮತದಾನ ಮಾಡದೆ ಇರುವುದಕ್ಕಾಗಿ, ಅಥವಾ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಯಾವನೇ ಮತದಾರನನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು, ಅಥವಾ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಅಥವಾ ಹಿಂತೆಗೆದುಕೊಳ್ಳದಿರಲು ಯಾವನೇ ಅಭ್ಯರ್ಥಿಯನ್ನು ಪ್ರೇರಿಸಲು ಅಥವಾ ಪ್ರೇರಿಸುವಂತೆ ಪ್ರಯತ್ನಿಸಲು ತನಗೋಸ್ಕರ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವೊಬ್ಬ ವ್ಯಕ್ತಿಯು

- ಯಾವುದೇ ಪರಿತೋಷವನ್ನು ಸ್ವೀಕರಿಸುವುದು ಅಥವಾ ಸ್ವೀಕರಿಸಲು ಒಪ್ಪಿಕೊಳ್ಳುವುದು.

ವಿವರಣೆ:- ಈ ಖಂಡದ ಉದ್ದೇಶಗಳಿಗಾಗಿ 'ಪರಿತೋಷ' ಎಂಬ ಪದವು, ಆರ್ಥಿಕ ಪರಿತೋಷಗಳು ಅಥವಾ ಹಣದ ರೂಪದಲ್ಲಿ ಅಂದಾಜು ಮಾಡಬಹುದಾದ ಪರಿತೋಷಗಳಿಗೆ ಪರಿಮಿತವಾಗಿರುವುದಿಲ್ಲ ಮತ್ತು ಅದು ಬಹುಮಾನಕ್ಕಾಗಿ ಮನರಂಜನೆಯ ಎಲ್ಲ ಬಗೆಗಳನ್ನು ಮತ್ತು ನಿಯೋಜನೆಯ ಎಲ್ಲ ಬಗೆಗಳನ್ನು ಒಳಗೊಳ್ಳುತ್ತದೆ. ಆದರೆ ಯಾವುದೇ ಚುನಾವಣೆಯಲ್ಲಿ ಅಥವಾ ಅದರ ಉದ್ದೇಶಕ್ಕಾಗಿ ವಾಸ್ತವವಾಗಿ ಮಾಡಿರುವ ಮತ್ತು ಒಲನೇ ಪ್ರಕರಣದಲ್ಲಿ ಉಲ್ಲೇಖಿಸಿದ ಚುನಾವಣಾ ವೆಚ್ಚಗಳ ಲೆಕ್ಕದಲ್ಲಿ ಕ್ರಮಬದ್ಧವಾಗಿ ನಮೂದು ಮಾಡಿದ ಯಾವುವೇ ವೆಚ್ಚಗಳ ಸಂದಾಯವನ್ನು ಒಳಗೊಳ್ಳುವುದಿಲ್ಲ.

(ಬ) ಅನುಚಿತ ಪ್ರಭಾವ, ಎಂದರೆ ಅಭ್ಯರ್ಥಿಯ ಅಥವಾ ಅವನ ಏಜೆಂಟನ, ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರೆ ವ್ಯಕ್ತಿಯ ಕಡೆಯಿಂದ ಯಾವುದೇ ಚುನಾವಣಾ ಹಕ್ಕಿನ ಅನಿರ್ಬಂಧಿತ ಚಲಾವಣೆಯಲ್ಲಿ ಯಾವುದೇ ಪ್ರತ್ಯಕ್ಷ ಅಥವಾ ಪರೋಕ್ಷ ಹಸ್ತಕ್ಷೇಪ ಅಥವಾ ಹಸ್ತಕ್ಷೇಪಿಸಲು ಪ್ರಯತ್ನ:

ಪರಂತು,-

(ಎ) ಈ ಖಂಡದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅದರಲ್ಲಿ ಉಲ್ಲೇಖಿಸಲಾದ ಅಂಥ ಯಾವ ವ್ಯಕ್ತಿಯು -

(i) ಯಾವನೇ ಅಭ್ಯರ್ಥಿಗೆ, ಅಥವಾ ಯಾವನೇ ಮತದಾರನಿಗೆ, ಅಥವಾ ಅಭ್ಯರ್ಥಿಯು ಅಥವಾ ಮತದಾರನು ಹಿತಾಸಕ್ತನಾಗಿರುವ ಯಾವನೇ ವ್ಯಕ್ತಿಗೆ ಸಾಮಾಜಿಕ ಬಹಿಷ್ಕಾರ ಮತ್ತು ಜಾತಿ ಬಹಿಷ್ಕಾರ ಅಥವಾ ಯಾವುದೇ ಜಾತಿ ಅಥವಾ ಸಮುದಾಯದಿಂದ ಹೊರದೂಡುವುದು - ಇವುಗಳನ್ನು ಒಳಗೊಂಡು ಯಾವುದೇ ಬಗೆಯ ಕ್ಷತಿ ಉಂಟು ಮಾಡುವ ಬೆದರಿಕೆ ಹಾಕುತ್ತಾನೋ; ಅಥವಾ

(ii) ಒಬ್ಬ ಅಭ್ಯರ್ಥಿಗೆ ಅಥವಾ ಮತದಾರನಿಗೆ ಅವನು ಅಥವಾ ಅವನು ಆಸಕ್ತನಾಗಿರುವ ಯಾವನೇ ವ್ಯಕ್ತಿಯು ದೈವಾಗ್ರಹಕ್ಕೆ ಅಥವಾ ದೈವಿಕ ಆಕ್ಷೇಪಣೆಗೆ ಗುರಿಯಾಗುವನೆಂದು ಅಥವಾ ಗುರಿಪಡಿಸುವಂತೆ ಮಾಡಲಾಗುವುದು ಎಂದು ನಂಬುವಂತೆ ಪ್ರೇರಿಸುತ್ತಾನೋ ಅಥವಾ ಪ್ರೇರಿಸಲು ಪ್ರಯತ್ನಿಸುತ್ತಾನೋ ಆ ವ್ಯಕ್ತಿಯು

- ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಅಂಥ ಅಭ್ಯರ್ಥಿಯ ಅಥವಾ ಮತದಾರನ ಚುನಾವಣಾ ಹಕ್ಕಿನ ಅನಿರ್ಬಂಧಿತ ಚಲಾವಣೆಯಲ್ಲಿ ಹಸ್ತಕ್ಷೇಪಿಸುತ್ತಾನೆಂದು ಭಾವಿಸತಕ್ಕುದು.

(ಬಿ) ಸಾರ್ವಜನಿಕ ಕಾರ್ಯ ನೀತಿಯ ಘೋಷಣೆ, ಅಥವಾ ಸಾರ್ವಜನಿಕ ಕ್ರಮದ ಆಶ್ವಾಸನೆ ಅಥವಾ ಚುನಾವಣಾ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುವ ಉದ್ದೇಶ ಇಲ್ಲದೆ

ಕಾನೂನು ಸಮ್ಮತ ಹಕ್ಕನ್ನು ಮಾತ್ರ ಚಲಾಯಿಸುವುದು ಈ ಖಂಡದ ಅರ್ಥ ವ್ಯಾಪ್ತಿಯೊಳಗೆ ಹಸ್ತಕ್ಷೇಪ ಮಾಡಿಲ್ಲವೆಂದು ಭಾವಿಸತಕ್ಕುದಲ್ಲ.

(೩) ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಯಾವನೇ ವ್ಯಕ್ತಿಯ ಧರ್ಮ, ಮೂಲ ವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಆ ವ್ಯಕ್ತಿಗಾಗಿ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಮಾಡಿಕೊಳ್ಳುವ ಮನವಿ, ಅಥವಾ ಧಾರ್ಮಿಕ ಚಿಹ್ನೆಗಳ ಉಪಯೋಗ ಅಥವಾ ಅವುಗಳತ್ತ ಮನಸೆಳೆಯುವಿಕೆ, ಅಥವಾ ರಾಷ್ಟ್ರೀಯ ಧ್ವಜ ಅಥವಾ ರಾಷ್ಟ್ರೀಯ ಲಾಂಛನ ಮುಂತಾದ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅವುಗಳತ್ತ ಮನಸೆಳೆಯುವುದು:

ಪರಂತು, ಈ ಅಧಿನಿಯಮದ ಮೇರೆಗೆ ಒಬ್ಬ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಈ ಖಂಡದ ಉದ್ದೇಶಗಳಿಗಾಗಿ ಧಾರ್ಮಿಕ ಚಿಹ್ನೆ ಅಥವಾ ರಾಷ್ಟ್ರೀಯ ಚಿಹ್ನೆ ಎಂದು ಭಾವಿಸತಕ್ಕುದಲ್ಲ.

(೩ಎ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರಗಳ ಮೇಲೆ ಆ ವ್ಯಕ್ತಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನದ ಅಥವಾ ದ್ವೇಷದ ಭಾವನೆಗಳನ್ನು ಬೆಳೆಸುವುದು ಅಥವಾ ಬೆಳೆಸಲು ಪ್ರಯತ್ನಿಸುವುದು.

(೩ಬಿ) ಒಬ್ಬ ಅಭ್ಯರ್ಥಿಯ ಚುನಾವಣಾ ಭವಿತವ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಸತಿ ಆಚರಣೆ ಅಥವಾ ಸತಿ ಹೋಗುವಿಕೆಯನ್ನು ಅಥವಾ ಅದರ ವೈಭವೀಕರಣವನ್ನು ಪ್ರಸಾರಗೊಳಿಸುವುದು.

ವಿವರಣೆ:- ಈ ಖಂಡದ ಉದ್ದೇಶಗಳಿಗಾಗಿ ಸತಿಗೆ ಸಂಬಂಧಿಸಿದಂತೆ ''ಸತಿ" ಮತ್ತು ''ವೈಭವೀಕರಣ" ಎಂಬವುಗಳು, ಸತಿಸಹಗಮನ (ಪ್ರತಿಬಂಧ) ಅಧಿನಿಯಮ, ೧೯೮೭

(೧೯೮೮ರ ೩)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿರುವ ಅರ್ಥಗಳನ್ನೇ ಹೊಂದಿರತಕ್ಕುದು.

(೪) ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡವಳಿಕೆಯ ಸಂಬಂಧದಲ್ಲಿ ಅಥವಾ ಯಾವನೇ ಅಭ್ಯರ್ಥಿಯ ಉಮೇದುವಾರಿಕೆ ಅಥವಾ ಹಿಂತೆಗೆದುಕೊಳ್ಳುವಿಕೆಯ ಸಂಬಂಧದಲ್ಲಿ ಸುಳ್ಳಾದ ಅಥವಾ ಅದು ಸುಳ್ಳು ಎಂದು ತಾನು ನಂಬುವ ಅಥವಾ ಅದು ನಿಜವೆಂದು ತಾನು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರಲು ಯುಕ್ತವಾಗಿ ಉದ್ದೇಶಿಸಿರುವ ಸಂಗತಿಯ ಯಾವುದೇ ನಿರೂಪಣೆಯನ್ನು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಪ್ರಕಟಿಸುವುದು.

(೫) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು, ೨೫ನೇ ಪ್ರಕರಣದ ಮೇರೆಗೆ ವ್ಯವಸ್ಥೆ ಮಾಡಿದ ಯಾವುದೇ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ೨೯ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಸ್ಥಳಕ್ಕೆ (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾವನೇ ಮತದಾರನನ್ನು ಉಚಿತವಾಗಿ ಕರೆದೊಯ್ಯಲು ಅಥವಾ ಅಲ್ಲಿಂದ ಕರೆತರಲು ಯಾವುದೇ ವಾಹನ ಅಥವಾ ದೋಣಿಯನ್ನು ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಅಥವಾ ಅಂಥ ವಾಹನ ಅಥವಾ ದೋಣಿಯನ್ನು ಬಳಸುವುದು:

ಪರಂತು, ಯಾವುದೇ ಅಂಥ ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಕರೆದೊಯ್ಯುವ ಮತ್ತು ಅಲ್ಲಿಂದ ಕರೆತರುವ ಉದ್ದೇಶಕ್ಕಾಗಿ ಒಬ್ಬ ಮತದಾರನು ಅಥವಾ ಅನೇಕ ಮತದಾರರು ಅವರ ಒಟ್ಟು ಖರ್ಚಿನಲ್ಲಿ ಒಂದು ವಾಹನವನ್ನು ಅಥವಾ ದೋಣಿಯನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆ ಪಡೆದ ವಾಹನವು ಅಥವಾ ದೋಣಿಯು ಯಂತ್ರಚಾಲಿತ ವಾಹನ ಅಥವಾ ದೋಣಿ ಆಗಿರದಿದ್ದರೆ, ಈ ಖಂಡದ ಮೇರೆಗೆ ಭ್ರಷ್ಟಾಚಾರವಾಗಿರುವುದೆಂದು ಭಾವಿಸತಕ್ಕುದಲ್ಲ:

ಮತ್ತೂ ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗುವುದು ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾವನೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ, ವಾಹನ ಅಥವಾ ದೋಣಿ ಅಥವಾ ಯಾವುದೇ ಟ್ರಾಮ್‌ಕಾರನ್ನು ಅಥವಾ ರೈಲು ಬೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಾಚಾರವೆಂದು ಭಾವಿಸತಕ್ಕುದಲ್ಲ.

ವಿವರಣೆ:- ಈ ಖಂಡದಲ್ಲಿ ''ವಾಹನ" ಎಂಬ ಪದಕ್ಕೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ

ಎಂದು ಅರ್ಥ; ಆ ವಾಹನವು ಯಂತ್ರ ಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು; ಮತ್ತು ಅದು ಇತರ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವಂತಹದಾಗಿರಬಹುದು.

(೬) ೭೭ನೇ ಪ್ರಕರಣವನ್ನು ಉಲ್ಲಂಘಿಸಿ ವೆಚ್ಚವನ್ನು ವಹಿಸಿಕೊಳ್ಳುವುದು ಅಥವಾ ಅಧಿಕೃತಗೊಳಿಸುವುದು.

(೭) ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು, ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಹಮತಿಯಿಂದ ಯಾವನೇ ಇತರೆ ವ್ಯಕ್ತಿಯು ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಸರ್ಕಾರಿ ಸೇವೆಯಲ್ಲಿರುವ ಮತ್ತು ಈ ಕೆಳಕಂಡ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯಿಂದ (ಮತ ನೀಡುವುದನ್ನು ಹೊರತುಪಡಿಸಿ) ಯಾವುದೇ ಸಹಾಯವನ್ನು ಪಡೆದುಕೊಳ್ಳುವುದು ಅಥವಾ ದೊರಕಿಸಿಕೊಳ್ಳುವುದು ಅಥವಾ ಪಡೆದುಕೊಳ್ಳಲು ಅಥವಾ ದೊರಕಿಸಿಕೊಳ್ಳಲು ದುಷ್ಪ್ರೇರಿಸುವುದು ಅಥವಾ ಪ್ರಯತ್ನಿಸುವುದು, ಎಂದರೆ:-

(ಎ) ಗೆಜೆಟೆಡ್ ಅಧಿಕಾರಿಗಳು;

(ಬಿ) ಸ್ಟೈಪಂಡರಿ ನ್ಯಾಯಾಧೀಶರು ಮತ್ತು ಮ್ಯಾಜಿಸ್ಟ್ರೇಟರು;

(ಸಿ) ಒಕ್ಕೂಟ ಸಶಸ್ತ್ರ ಬಲಗಳ ಸದಸ್ಯರು;

(ಡಿ) ಪೊಲೀಸ್ ಪಡೆಗಳ ಸದಸ್ಯರು;

(ಇ) ಅಬ್ಕಾರಿ ಅಧಿಕಾರಿಗಳು;

(ಎಫ್) ಭೂಕಂದಾಯವನ್ನು ಸಂಗ್ರಹಿಸುವುದು ಯಾರ ಕರ್ತವ್ಯವಾಗಿದೆಯೋ ಮತ್ತು ಅವರು ಸಂಗ್ರಹಿಸಿರುವ ಭೂಕಂದಾಯದ ಮೊಬಲಗಿನಲ್ಲಿ ಪಾಲು ಪಡೆಯುವ ಮೂಲಕ ಅಥವಾ ಅದರ ಮೇಲೆ ಕಮೀಷನ್ ಪಡೆಯುವ ಮೂಲಕ ಯಾರಿಗೆ ಪರಿಶ್ರಮ ಧನವನ್ನು ಕೊಡಲಾಗುತ್ತಿದೆಯೋ ಆದರೆ ಯಾರು ಯಾವುವೇ ಪೊಲೀಸ್ ಪ್ರಕಾರ್ಯಗಳನ್ನು ನಿರ್ವಹಿಸುತ್ತಿಲ್ಲವೋ ಮತ್ತು ಲಂಬಾರ್‌ದಾರರು; ಮಾಲ್‌ಗುಜಾರರು, ಪಟೇಲರು, ದೇಶಮುಖರು ಅಥವಾ ಇತರ ಯಾವುದೇ ಹೆಸರಿನಿಂದ ಯಾರನ್ನು ಕರೆಯಲಾಗುತ್ತಿದೆಯೋ ಆ ಗ್ರಾಮ ಕಂದಾಯ ಅಧಿಕಾರಿಗಳನ್ನು ಹೊರತುಪಡಿಸಿದ ಕಂದಾಯ ಅಧಿಕಾರಿಗಳು;

(ಜಿ) ನಿಯಮಿಸಬಹುದಾದಂಥ ಸರ್ಕಾರದ ಸೇವೆಯಲ್ಲಿರುವ ಇತರ ವರ್ಗದ ವ್ಯಕ್ತಿಗಳು:

ಪರಂತು, ಸರ್ಕಾರದ ಸೇವೆಯಲ್ಲಿರುವ ಮತ್ತು ಮೇಲೆ ಹೇಳಿದ ಯಾವುದೇ ವರ್ಗಕ್ಕೆ ಸೇರಿದ ಯಾವನೇ ವ್ಯಕ್ತಿಯು ತನ್ನ ಪದೀಯ ಕರ್ತವ್ಯದ ನಿರ್ವಹಣೆಯಲ್ಲಿ ಅಥವಾ ಹಾಗೆ ನಿರ್ವಹಿಸುವುದಾಗಿ ತಾತ್ಪರ್ಯವಾಗುವಲ್ಲಿ ಯಾವನೇ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಆ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ

ಸಹಮತಿಯಿಂದ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಇತರೆ ವ್ಯಕ್ತಿ ಇವರಿಗಾಗಿ, ಇವರಿಗೆ ಅಥವಾ ಅವರ ಸಂಬಂಧದಲ್ಲಿ (ಆ ಅಭ್ಯರ್ಥಿಯು ಧಾರಣ ಮಾಡಿದ ಪದದ ಕಾರಣದಿಂದಾಗಿ ಅಥವಾ ಯಾವುದೇ ಇತರ ಕಾರಣಕ್ಕಾಗಿ) ಯಾವುವೇ ಏರ್ಪಾಟುಗಳನ್ನು ಮಾಡುವಲ್ಲಿ ಅಥವಾ ಯಾವುವೇ ಸೌಲಭ್ಯಗಳನ್ನು ಒದಗಿಸುವಲ್ಲಿ ಅಥವಾ ಯಾವುದೇ ಇತರ ಕಾರ್ಯ ಅಥವಾ ಕೃತ್ಯವನ್ನು ಮಾಡುವಲ್ಲಿ ಅಂಥ ಏರ್ಪಾಟುಗಳು, ಸೌಲಭ್ಯಗಳು ಅಥವಾ ಕಾರ್ಯ ಅಥವಾ ಕೃತ್ಯವನ್ನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಗಾಗಿ ಮಾಡಿದ ಸಹಾಯವೆಂದು ಭಾವಿಸತಕ್ಕುದಲ್ಲ.

(ಆ) ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಇತರ ವ್ಯಕ್ತಿಯು ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು.

ವಿವರಣೆ:- (೧) ಈ ಪ್ರಕರಣದಲ್ಲಿ 'ಏಜೆಂಟ್' ಎಂಬ ಪದವು, ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಮತ್ತು ಅಭ್ಯರ್ಥಿಯ ಸಮ್ಮತಿಯಿಂದ ಚುನಾವಣೆಯ ಸಂಬಂಧದಲ್ಲಿ ಏಜೆಂಟನೆಂದು ಕಾರ್ಯ ನಿರ್ವಹಿಸಿರುವುದಾಗಿ ತೀರ್ಮಾನಿಸಲಾಗಿರುವ ಯಾವನೇ ವ್ಯಕ್ತಿ - ಇವರನ್ನು ಒಳಗೊಳ್ಳುತ್ತದೆ.

(೨) (೭)ನೇ ಖಂಡದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಯು ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟನೆಂದು ಕಾರ್ಯ ನಿರ್ವಹಿಸಿದರೆ, ಅವನು ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಅಭಿವೃದ್ಧಿಯಲ್ಲಿ ಸಹಾಯ ಮಾಡುವನೆಂದು ಭಾವಿಸತಕ್ಕುದು.

(೩) (೭)ನೇ ಖಂಡದ ಉದ್ದೇಶಗಳಿಗಾಗಿ, ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕೇಂದ್ರ ಸರ್ಕಾರದ (ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತದ ಸಂಬಂಧದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯೂ ಸೇರಿದಂತೆ) ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು ಇವುಗಳ ಬಗ್ಗೆ ರಾಜಪತ್ರದಲ್ಲಿನ ಪ್ರಕಟಣೆಯು -

(i) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಇವುಗಳ ಬಗ್ಗೆ, ಮತ್ತು

(ii) ಸಂದರ್ಭಾನುಸಾರ ಅಂಥ ನೇಮಕಾತಿ, ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದುಹಾಕುವುದು, ಇವು ಜಾರಿಗೆ ಬರುವ ದಿನಾಂಕವನ್ನು ಅಂಥ ಪ್ರಕಟಣೆಯಲ್ಲಿ ನಿರೂಪಿಸುವಲ್ಲಿ ಅಂಥ ವ್ಯಕ್ತಿಯನ್ನು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದಿತು, ಅಥವಾ ರಾಜೀನಾಮೆ, ಸೇವಾ ಮುಕ್ತಾಯ, ಸೇವೆಯಿಂದ ವಜಾ ಮಾಡುವುದು ಅಥವಾ ತೆಗೆದು ಹಾಕುವುದು ಈ ಸಂದರ್ಭದಲ್ಲಿ ಅಂಥ ವ್ಯಕ್ತಿಯು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಸೇವೆಯಲ್ಲಿ ಇರುವುದು ಮುಕ್ತಾಯಗೊಂಡಿದ್ದಿತು ಎಂಬ ಸಂಗತಿಯ ಬಗ್ಗೆ ಸಹ -

- ನಿರ್ಣಾಯಕ ರುಜುವಾತಾಗಿರತಕ್ಕುದು.

(೪) ಲನೇ ಖಂಡದ ಉದ್ದೇಶಗಳಿಗಾಗಿ, ''ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು ೧೩೫ಎ ಪ್ರಕರಣದಲ್ಲಿ ಇರುವಂಥದೇ ಅರ್ಥವನ್ನು ಹೊಂದಿರತಕ್ಕುದು.

೧೨೪. (ನಿರಸನಗೊಳಿಸಲಾಗಿದೆ)

ಅಧ್ಯಾಯ - III

ಚುನಾವಣಾ ಅಪರಾಧಗಳು

೧೨೫. ಚುನಾವಣಾ ಸಂಬಂಧದಲ್ಲಿ ವರ್ಗಗಳ ನಡುವೆ ಹಗೆತನವನ್ನು ಬೆಳೆಸುವುದು:- ಈ ಅಧಿನಿಯಮದ ಮೇರೆಗೆ ಚುನಾವಣೆಯ ಸಂಬಂಧದಲ್ಲಿ ಯಾವನೇ ವ್ಯಕ್ತಿಯು, ಧರ್ಮ, ಮೂಲವಂಶ, ಜಾತಿ, ಸಮುದಾಯ ಅಥವಾ ಭಾಷೆ ಇವುಗಳ ಆಧಾರದ ಮೇಲೆ ಭಾರತದ ನಾಗರಿಕರ ಭಿನ್ನ ಭಿನ್ನ ವರ್ಗಗಳ ನಡುವೆ ಹಗೆತನ ಅಥವಾ ದ್ವೇಷ ಭಾವನೆಗಳನ್ನು ಬೆಳೆಸುವ ಅಥವಾ ಬೆಳೆಸಲು ಪ್ರಯತ್ನಿಸುವ ಯಾವನೇ ವ್ಯಕ್ತಿಯು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

೧೨೫ಎ. ಸುಳ್ಳು ಶಪಥಪತ್ರ ಇತ್ಯಾದಿಗಳನ್ನು ಸಲ್ಲಿಸಿದ್ದಕ್ಕಾಗಿ ದಂಡ:- ಅಭ್ಯರ್ಥಿಯು ಚುನಾವಣೆಯಲ್ಲಿ ಚುನಾಯಿತನಾಗಬೇಕೆಂಬ ಉದ್ದೇಶದಿಂದ ತಾನಾಗಿಯೇ ಆಗಲಿ ಅಥವಾ ಸಂದರ್ಭಾನುಸಾರ ಅವನ ಸೂಚಕನ ಮೂಲಕವಾಗಲಿ ೩೩ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಿದ ಅವನ ನಾಮನಿರ್ದೇಶನ ಪತ್ರದಲ್ಲಿ ಅಥವಾ ೩೩ಎ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಬೇಕೆಂದು ಅಗತ್ಯಪಡಿಸಿದ ಅವನ ಶಪಥಪತ್ರದಲ್ಲಿ,-

(i) ೩೩ಎ ಪ್ರಕರಣದ (೧)ನೇ ಉಪಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಲು ವಿಫಲನಾದರೆ; ಅಥವಾ

(ii) ಅವನಿಗೆ ಸುಳ್ಳು ಎಂದು ಗೊತ್ತಿದ್ದು ಅಥವಾ ಸುಳ್ಳು ಎಂದು ನಂಬಲು ಕಾರಣಗಳನ್ನು ಹೊಂದಿದ್ದು, ಸುಳ್ಳು ಮಾಹಿತಿಯನ್ನು ನೀಡಿದರೆ;

(iii) ಯಾವುವೇ ಮಾಹಿತಿಯನ್ನು ಬಚ್ಚಿಟ್ಟರೆ,

- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

೧೨೬. ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯಕ್ಕೆ ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಸಾರ್ವಜನಿಕ ಸಭೆಗಳ ನಿಷೇಧ:- (೧) ಯಾರೇ ವ್ಯಕ್ತಿಯು, ಯಾವುದೇ ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಯಾವುದೇ ಮತದಾನದ ಪ್ರದೇಶದಲ್ಲಿ -

(ಎ) ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಸಾರ್ವಜನಿಕ ಸಭೆಯನ್ನು ಅಥವಾ ಮೆರವಣಿಗೆಯನ್ನು ಕರೆಯತಕ್ಕದ್ದಲ್ಲ, ನಡೆಸತಕ್ಕದ್ದಲ್ಲ, ಅದರಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಸೇರತಕ್ಕದ್ದಲ್ಲ ಅಥವಾ ಅದನ್ನು ಉದ್ದೇಶಿಸಿ ಭಾಷಣ ಮಾಡತಕ್ಕದ್ದಲ್ಲ; ಅಥವಾ

(ಬಿ) ಚಲನಚಿತ್ರ ದರ್ಶಕ, ದೂರದರ್ಶನ ಅಥವಾ ಅಂಥದ್ದೇ ಇತರ ಪರಿಕರಗಳ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಸಿ) ಚುನಾವಣಾ ವಿಷಯದ ಬಗ್ಗೆ ಸಾರ್ವಜನಿಕರ ಗಮನವನ್ನು ಸೆಳೆಯುವ ದೃಷ್ಟಿಯಿಂದ ಯಾವುದೇ ಸಂಗೀತ ಗೋಷ್ಠಿಯನ್ನು ಅಥವಾ ಯಾವುದೇ ನಾಟಕ ಪ್ರದರ್ಶನವನ್ನು ಅಥವಾ ಯಾವುದೇ ಇತರ ಮನರಂಜನೆ ಅಥವಾ ವಿನೋದ ಕಾರ್ಯಕ್ರಮವನ್ನು ನಡೆಸುವ ಮೂಲಕ ಅಥವಾ ನಡೆಯುವಂತೆ ವ್ಯವಸ್ಥೆ ಮಾಡುವ ಮೂಲಕ ಸಾರ್ವಜನಿಕರಿಗೆ ಯಾವುದೇ ಚುನಾವಣಾ ವಿಷಯವನ್ನು ಪ್ರಚಾರ ಮಾಡತಕ್ಕದ್ದಲ್ಲ.

(೨) (೧)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(೩) ಈ ಪ್ರಕರಣದಲ್ಲಿ "ಚುನಾವಣಾ ವಿಷಯ" ಎಂಬ ಪದಾವಳಿಗೆ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಅಥವಾ ಪರಿಣಾಮ ಉಂಟು ಮಾಡುವ ಆಶಯವಿರುವ ಅಥವಾ ಉದ್ದೇಶವಿರುವ ಯಾವುದೇ ವಿಷಯ ಎಂದು ಅರ್ಥ.

೧೨೭. ಚುನಾವಣಾ ಸಭೆಗಳಲ್ಲಿ ಗಲಭೆ:- (೧) ಈ ಪ್ರಕರಣವು ಅನ್ವಯಿಸುವ ಸಾರ್ವಜನಿಕ ಸಭೆಯಲ್ಲಿ, ಆ ಸಭೆಯನ್ನು ಯಾವ ಕಾರ್ಯ ನಿರ್ವಹಣೆಗಾಗಿ ಕರೆಯಲಾಗಿದ್ದಿತೋ ಅದನ್ನು ತಡೆಯುವ ಉದ್ದೇಶಕ್ಕಾಗಿ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸುವಂತೆ ಇತರರನ್ನು ಚಿತಾವಣೆ ಮಾಡುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೧ಎ) (೧)ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

(೨) ಒಬ್ಬ ಸದಸ್ಯ ಅಥವಾ ಸದಸ್ಯರನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರಕ್ಕೆ ಕರೆ ನೀಡಿ ಈ ಅಧಿನಿಯಮದ ಮೇರೆಗೆ ಹೊರಡಿಸಿರುವ ಅಧಿಸೂಚನೆಯ ದಿನಾಂಕ ಮತ್ತು ಅಂಥ ಚುನಾವಣೆಯನ್ನು ನಡೆಸಲಾಗುವ ದಿನಾಂಕ ಇವುಗಳ

ನಡುವಿನ ಅವಧಿಯಲ್ಲಿ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ನಡೆಯುವ ರಾಜಕೀಯ ಸ್ವರೂಪದ ಯಾವುದೇ ಸಾರ್ವಜನಿಕ ಸಭೆಗೆ ಈ ಪ್ರಕರಣವು ಅನ್ವಯಿಸುತ್ತದೆ.

(೩) (೧)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ಮಾಡುತ್ತಿದ್ದಾನೆಂದು ಯಾವನೇ ವ್ಯಕ್ತಿಯ ಬಗ್ಗೆ ಯಾವನೇ ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಪಟ್ಟರೆ ಆ ಪೊಲೀಸ್ ಅಧಿಕಾರಿಯು, ಸಭೆಯ ಅಧ್ಯಕ್ಷನು ಹಾಗೆ ಮಾಡಲು ಕೋರಿದರೆ, ಕೂಡಲೇ ಅವನ ಹೆಸರು ಮತ್ತು ವಿಳಾಸವನ್ನು ತನ್ನ ಮುಂದೆ ಘೋಷಿಸುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಹಾಗೆ ಘೋಷಿಸಲು ತಿರಸ್ಕರಿಸಿದರೆ ಅಥವಾ ತಪ್ಪಿದರೆ, ಅಥವಾ ಸುಳ್ಳು ಹೆಸರು ಅಥವಾ ವಿಳಾಸವನ್ನು ನೀಡಿದ್ದಾನೆಂದು ಅವನ ಬಗ್ಗೆ ಆ ಪೊಲೀಸ್ ಅಧಿಕಾರಿಯು ಯುಕ್ತವಾಗಿ ಸಂದೇಹಪಟ್ಟರೆ, ಆ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು.

೧೨೭ಎ. ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು, ಮುಂತಾದವುಗಳ ಮುದ್ರಣದ ಮೇಲೆ ನಿರ್ಬಂಧಗಳು:- (೧) ಯಾವ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರದ ಮೇಲೆ ಅದರ ಮುದ್ರಕ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸಗಳು ಇರುವುದಿಲ್ಲವೋ ಅವುಗಳನ್ನು ಯಾವನೇ ವ್ಯಕ್ತಿಯು ಮುದ್ರಿಸತಕ್ಕುದಲ್ಲ ಅಥವಾ ಪ್ರಕಟಿಸತಕ್ಕುದಲ್ಲ, ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕುದಲ್ಲ.

(೨) ಯಾವನೇ ವ್ಯಕ್ತಿಯು -

(ಎ) ಯಾವುದೇ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರದ ಪ್ರಕಾಶಕನ ಗುರುತಿನ ಬಗ್ಗೆ ಅವನು ಸಹಿ ಹಾಕಿದ ಮತ್ತು ಅವನಿಗೆ ವೈಯಕ್ತಿಕವಾಗಿ ಗೊತ್ತಿರುವ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಅವನು ದ್ವಿಪ್ರತಿಯಲ್ಲಿ ಮುದ್ರಕನಿಗೆ ಕೊಟ್ಟಿರುವ ಹೊರತು; ಮತ್ತು

(ಬಿ) ಆ ದಸ್ತಾವೇಜನ್ನು ಮುದ್ರಿಸಿದ ತರುವಾಯ ಯುಕ್ತ ಕಾಲದೊಳಗೆ ಮುದ್ರಕನು, ಘೋಷಣೆಯ ಒಂದು ಪ್ರತಿಯನ್ನು, ದಸ್ತಾವೇಜಿನ ಒಂದು ಪ್ರತಿಯೊಂದಿಗೆ,-

(i) ಅದು ರಾಜ್ಯದ ರಾಜಧಾನಿಯಲ್ಲಿ ಮುದ್ರಿತವಾಗಿರುವಲ್ಲಿ, ಮುಖ್ಯ ಚುನಾವಣಾ ಅಧಿಕಾರಿಗೆ, ಮತ್ತು

(ii) ಇತರೆ ಯಾವುದೇ ಸಂದರ್ಭದಲ್ಲಿ, ಅದು ಯಾವ ಜಿಲ್ಲೆಯಲ್ಲಿ ಮುದ್ರಿತವಾಗಿರುತ್ತದೋ, ಆ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿರುವ ಹೊರತು, ಯಾವುದೇ ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರವನ್ನು ಮುದ್ರಿಸತಕ್ಕುದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕುದಲ್ಲ.

(೩) ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ದಸ್ತಾವೇಜನ್ನು ಕೈಯಿಂದ ಪ್ರತಿ ಮಾಡುವುದನ್ನು ಹೊರತುಪಡಿಸಿ, ಅದರ ಬಹುಪ್ರತಿಗಳನ್ನು ತೆಗೆಯುವ ಯಾವುದೇ ಕಾರ್ಯ ವಿಧಾನವನ್ನು ಮುದ್ರಣವೆಂದು ಭಾವಿಸತಕ್ಕುದು ಮತ್ತು ''ಮುದ್ರಕ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕುದು; ಮತ್ತು

(ಬಿ) ''ಚುನಾವಣೆ ಕಿರುಹೊತ್ತಿಗೆ ಅಥವಾ ಭಿತ್ತಿ ಪತ್ರ" ಎಂದರೆ ಒಬ್ಬ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಗುಂಪಿನ ಚುನಾವಣೆಯನ್ನು ಅಭಿವೃದ್ಧಿಗೊಳಿಸುವ ಅಥವಾ ಅದರ ಮೇಲೆ ಪ್ರತಿಕೂಲ ಪ್ರಭಾವ ಬೀರುವ ಉದ್ದೇಶಕ್ಕಾಗಿ ಹಂಚಲಾದ ಯಾವುದೇ ಮುದ್ರಿತ ಕಿರುಹೊತ್ತಿಗೆ, ಕರಪತ್ರ ಅಥವಾ ಇತರ ದಸ್ತಾವೇಜು ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಪ್ರಕಟಣೆ ಪತ್ರ ಅಥವಾ ಭಿತ್ತಿಪತ್ರ, ಆದರೆ ಅದು ಒಂದು ಚುನಾವಣಾ ಸಭೆಯ ದಿನಾಂಕ, ಕಾಲ, ಸ್ಥಳ ಮತ್ತು ಇತರ ವಿವರಗಳನ್ನು ಅಥವಾ ಚುನಾವಣಾ ಏಜೆಂಟರು ಅಥವಾ ಕಾರ್ಯಕರ್ತರಿಗೆ ನೀಡುವ ಮಾಮೂಲು ಅನುದೇಶಗಳನ್ನು ಮಾತ್ರವೇ ಪ್ರಕಟಿಸುವ ಯಾವುದೇ ಕರಪತ್ರ, ಪ್ರಕಟಣ ಪತ್ರ ಅಥವಾ ಭಿತ್ತಿಪತ್ರಗಳನ್ನು ಒಳಗೊಳ್ಳುವುದಿಲ್ಲ.

(೪) (೧)ನೇ ಉಪಪ್ರಕರಣದ ಅಥವಾ (೨)ನೇ ಉಪಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

೧೨೮. ಮತದಾನದ ರಹಸ್ಯವನ್ನು ಕಾಪಾಡುವುದು:- (೧) ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕುದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗತಕ್ಕುದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕುದಲ್ಲ:

ಪರಂತು, ಈ ಉಪಪ್ರಕರಣದ ಉಪಬಂಧಗಳು, ರಾಜ್ಯ ಸಭೆಯ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ನಡೆಸುವ ಚುನಾವಣೆಯಲ್ಲಿ ಅಂಥ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಅಂಥ ಅಧಿಕಾರಿಗೆ, ಗುಮಾಸ್ತನಿಗೆ ಏಜೆಂಟ್‌ಗೆ ಅಥವಾ ಇತರ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

(೨) (೧)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

೧೨೯. ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯ ನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು:- (೧) ಚುನಾವಣೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಅಥವಾ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿ ಅಥವಾ ಮತದಾನ ಅಧಿಕಾರಿ, ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಲು ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿಯಿಂದ ನೇಮಕಗೊಂಡಿರುವ ಒಬ್ಬ ಅಧಿಕಾರಿ ಅಥವಾ ಗುಮಾಸ್ತನಾಗಿರುವ ಯಾವನೇ ವ್ಯಕ್ತಿಯು ಚುನಾವಣೆ ನಡೆಸುವಲ್ಲಿ ಅಥವಾ ಅವರ ವ್ಯವಸ್ಥೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯವನ್ನು ಅಭಿವೃದ್ಧಿಪಡಿಸುವುದಕ್ಕಾಗಿ (ಮತ ನೀಡುವುದರ ಹೊರತಾಗಿ) ಯಾವುದೇ ಕಾರ್ಯವನ್ನು ಮಾಡತಕ್ಕುದಲ್ಲ.

(೨) ಮೇಲೆ ಹೇಳಲಾದಂಥ ಯಾವನೇ ವ್ಯಕ್ತಿಯು, ಮತ್ತು ಪೊಲೀಸ್ ಪಡೆಯ ಯಾವನೇ ಸದಸ್ಯನು -

(ಎ) ಚುನಾವಣೆಯಲ್ಲಿ ತನ್ನ ಮತವನ್ನು ನೀಡುವಂತೆ ಯಾವನೇ ವ್ಯಕ್ತಿಯನ್ನು ಪ್ರೇರೇಪಿಸಲು; ಅಥವಾ

(ಬಿ) ಚುನಾವಣೆಯಲ್ಲಿ ತನ್ನ ಮತವನ್ನು ನೀಡದಿರುವಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಸಿ) ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಯಾವನೇ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಬೀರಲು

- ಪ್ರಯತ್ನಿಸತಕ್ಕುದಲ್ಲ.

(೩) (೧)ನೇ ಉಪಪ್ರಕರಣದ ಅಥವಾ (೨)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೪) (೩)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

೧೩೦. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ:- (೧) ಯಾವುವೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದ ಒಂದು ನೂರು ಮೀಟರ್

ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕುದಲ್ಲ, ಎಂದರೆ:-

(ಎ) ಮತಗಳ ಕೋರಿಕೆ; ಅಥವಾ

(ಬಿ) ಯಾವನೇ ಮತದಾರನ ಮತವನ್ನು ಯಾಚಿಸುವುದು; ಅಥವಾ

(ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದು; ಅಥವಾ

(ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾವನೇ ಮತದಾರನನ್ನು ಪ್ರೇರಿಸುವುದು; ಅಥವಾ

(ಇ) ಚುನಾವಣೆಗೆ ಸಂಬಂಧಿಸಿದ (ಅಧಿಕೃತ ನೋಟೀಸಿನ ಹೊರತು) ಯಾವುದೇ ನೋಟೀಸು ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(೨) (೧)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

(೩) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

೧೩೧. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ:- (೧) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಂದು ಯಾವನೇ ವ್ಯಕ್ತಿಯು,-

ಮತದಾನ ಮಾಡಲು ಮತದಾನ ಕೇಂದ್ರಕ್ಕೆ ಭೇಟಿ ನೀಡುವ ಯಾವನೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರತರಾಗಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟಾಗುವಂತೆ,-

(ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾನವ ಧ್ವನಿಯನ್ನು ವರ್ಧಿಸುವುದಕ್ಕಾಗಿ ಅಥವಾ ಪುನರುಚ್ಚರಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂತಹ ಯಾವುದೇ ಸಲಕರಣೆಯನ್ನು ಬಳಸತಕ್ಕುದಲ್ಲ ಅಥವಾ ನಡೆಸತಕ್ಕುದಲ್ಲ; ಅಥವಾ

(ಬಿ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗತಕ್ಕುದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕುದಲ್ಲ.

(೨) (೧)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಂಥ ಉಲ್ಲಂಘನೆಗೆ ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು

ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೩) ಯಾವನೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿದ್ದಾನೆ ಅಥವಾ ಮಾಡಿದ್ದಾನೆ ಎಂದು ನಂಬಲು ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯು ಕಾರಣವನ್ನು ಹೊಂದಿದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅವನು ಯಾವನೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅನಂತರ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕುದು.

(೪) ಯಾವನೇ ಪೊಲೀಸ್ ಅಧಿಕಾರಿಯು (೧)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವೆನಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಬಳಸಿದ ಯಾವುದೇ ಸಲಕರಣೆಯನ್ನು ಅಭಿಗ್ರಹಿಸಬಹುದು.

೧೩೨. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ:- (೧) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಸ್ವತಃ ದುರ್ವರ್ತಿಸುವ ಅಥವಾ ಪೀಠಾಸೀನ ಅಧಿಕಾರಿಯ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ಯಾವನೇ ವ್ಯಕ್ತಿಯನ್ನು ಪೀಠಾಸೀನ ಅಧಿಕಾರಿಯು ಅಥವಾ ಕರ್ತವ್ಯನಿರತ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಅಂಥ ಪೀಠಾಸೀನ ಅಧಿಕಾರಿಯು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಹಾಕಬಹುದು.

(೨) (೧)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾವನೇ ಮತದಾರನಿಗೆ ಆ ಕೇಂದ್ರದಲ್ಲಿ ಮತದಾನ ಮಾಡುವ ಅವಕಾಶವಿಲ್ಲದ ಹಾಗೆ ಅವನನ್ನು ತಡೆಗಟ್ಟುವಂತೆ ಚಲಾಯಿಸತಕ್ಕುದಲ್ಲ.

(೩) ಒಂದು ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾವನೇ ವ್ಯಕ್ತಿಯು, ಪೀಠಾಸೀನ ಅಧಿಕಾರಿಯ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೪) (೩)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

೧೩೨ಎ. ಮತದಾನದ ಪ್ರಕ್ರಿಯೆಯನ್ನು ಪಾಲಿಸದಿರುವುದಕ್ಕೆ ದಂಡ:- ಯಾವ ಮತದಾರನಿಗೆ ಮತಪತ್ರವನ್ನು ನೀಡಲಾಗಿದೆಯೋ ಆ ಯಾವನೇ ಮತದಾರನು

ಮತದಾನಕ್ಕಾಗಿ ನಿಯಮಿಸಲಾಗಿರುವ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ, ಅವನಿಗೆ ನೀಡಿದ ಮತಪತ್ರವು ರದ್ದಿಯಾತಿಗೆ ಗುರಿಯಾಗತಕ್ಕುದು.

೧೩೩. ಚುನಾವಣೆಗಳಲ್ಲಿ ವಾಹನಗಳನ್ನು ಕಾನೂನುಬಾಹಿರವಾಗಿ ಬಾಡಿಗೆಗೆ ತೆಗೆದುಕೊಳ್ಳುವುದಕ್ಕೆ ಅಥವಾ ದೊರಕಿಸಿಕೊಳ್ಳುವುದಕ್ಕೆ ದಂಡ:- ಯಾರೇ ವ್ಯಕ್ತಿಯು ಚುನಾವಣೆಯಲ್ಲಿ ಅಥವಾ ಅದರ ಸಂಬಂಧದಲ್ಲಿ ೧೨೩ನೇ ಪ್ರಕರಣದ (೫)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವಂಥ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ದಂಡನೀಯನಾಗತಕ್ಕುದು.

೧೩೪. ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು:- (೧) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕಾರ್ಯ ಅಥವಾ ಲೋಪದ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅವನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜಲ್ಮಾನೆಯಿಂದ ದಂಡನೀಯನಾಗತಕ್ಕುದು.

(೧ಎ) (೧)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

(೨) ಮೇಲೆ ಹೇಳಿರುವ ಯಾವುದೇ ಅಂಥ ಕೃತ್ಯ ಅಥವಾ ಲೋಪದ ಸಂಬಂಧದಲ್ಲಿ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕುದಲ್ಲ.

(೩) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ ಜಿಲ್ಲಾ ಚುನಾವಣಾಧಿಕಾರಿಗಳು, ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಪೀಠಾಸೀನ ಅಧಿಕಾರಿಗಳು, ಮತದಾನ ಅಧಿಕಾರಿಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರ ಅಥವಾ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವುದು, ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಅಥವಾ ಎಣಿಕೆ ಮಾಡುವುದು ಇವುಗಳಿಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾವನೇ ಇತರ ವ್ಯಕ್ತಿ; ಮತ್ತು "ಪದೀಯ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕುದು, ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕುದಲ್ಲ.

೧೩೪ಎ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟ್ ಎಂದು ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರಿಗೆ ದಂಡ:- ಸರ್ಕಾರದ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅಥವಾ ಮತದಾನದ ಏಜೆಂಟ್ ಅಥವಾ ಎಣಿಕೆ ಏಜೆಂಟ್

ಎಂದು ಕಾರ್ಯ ನಿರ್ವಹಿಸಿದರೆ ಮೂರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

೧೩೪ಬಿ. ಮತದಾನ ಕೇಂದ್ರಕ್ಕೆ ಅಥವಾ ಅದರ ಸಮೀಪಕ್ಕೆ ಆಯುಧ ಸಮೇತ ಹೋಗುವುದರ ನಿಷೇಧ:- (೧) ರಿಟರ್ನಿಂಗ್ ಆಫೀಸರ್, ಪೀಠಾಸೀನಾಧಿಕಾರಿ, ಮತದಾನ ಕೇಂದ್ರದಲ್ಲಿ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿ ಅಥವಾ ಆ ಮತದಾನ ಕೇಂದ್ರದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ನೇಮಕಗೊಂಡ ಯಾರೇ ಇತರ ವ್ಯಕ್ತಿಯ ಹೊರತು ಯಾರೇ ಇತರ ವ್ಯಕ್ತಿಯು ಮತದಾನದ ದಿನದಂದು ಆಯುಧಗಳ ಅಧಿನಿಯಮ, ೧೯೫೯ (೧೯೫೯ ರ ೫೪) - ಇದರಲ್ಲಿ ಪರಿಭಾಷಿಸಲಾದ ಯಾವುದೇ ವಿಧದ ಆಯುಧಗಳೊಂದಿಗೆ ಮತದಾನ ಕೇಂದ್ರದ ಸುತ್ತಮುತ್ತ ಹೋಗತಕ್ಕದ್ದಲ್ಲ.

(೨) ಯಾರೇ ವ್ಯಕ್ತಿಯು (೧)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(೩) ಆಯುಧಗಳ ಅಧಿನಿಯಮ, ೧೯೫೯ (೧೯೫೯ ರ ೫೪) ರಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವಲ್ಲಿ, ಸದರಿ ಅಧಿನಿಯಮದಲ್ಲಿ ಪರಿಭಾಷಿಸಲಾಗಿರುವ ಆಯುಧಗಳು ಅವನ ಸ್ವಾಧೀನದಲ್ಲಿರುವುದು ಕಂಡುಬಂದರೆ ಅವು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅಂಥ ಆಯುಧಗಳಿಗೆ ಸಂಬಂಧಪಟ್ಟಂತೆ ನೀಡಲಾದ ಲೈಸೆನ್ಸನ್ನು ಆ ಅಧಿನಿಯಮದ ೧೭ನೇ ಪ್ರಕರಣದ ಮೇರೆಗೆ ರದ್ದುಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(೪) (೨)ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

೧೩೫. ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ:- (೧) ಯಾವುದೇ ಚುನಾವಣೆಯಲ್ಲಿ ಮತದಾನ ಕೇಂದ್ರದಿಂದ ಮತಪತ್ರವನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುವ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸುವ ಯಾವುದೇ ಅಂಥ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾವನೇ ವ್ಯಕ್ತಿಯು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೨) ಮತದಾನ ಕೇಂದ್ರದ ಪೀಠಾಸೀನ ಅಧಿಕಾರಿಯು, (೧)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಯಾವನೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವನ್ನು ಹೊಂದಿದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಆ ಮತದಾನ ಕೇಂದ್ರವನ್ನು ಬಿಡುವ ಮೊದಲು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಅವನನ್ನು ಪೊಲೀಸ್ ಅಧಿಕಾರಿಯು ಶೋಧನೆ ಮಾಡುವಂತೆ ಮಾಡಬಹುದು:

ಪರಂತು, ಒಬ್ಬ ಮಹಿಳೆಯನ್ನು ಶೋಧನೆ ಮಾಡುವುದು ಅವಶ್ಯವಿರುವಾಗ ಮತ್ತೊಬ್ಬ ಮಹಿಳೆಯಿಂದ ಶೋಧನೆಯನ್ನು ಕಟ್ಟುನಿಟ್ಟಾಗಿ ಸಭ್ಯತೆಯಿಂದ ನಡೆಸತಕ್ಕುದು.

(೩) ಶೋಧನೆಯ ಬಳಿಕ ದಸ್ತಗಿರಿಯಾದ ವ್ಯಕ್ತಿಯ ಬಳಿ ಕಂಡುಬಂದ ಯಾವುದೇ ಮತಪತ್ರವನ್ನು, ಪೀಠಾಸೀನ ಅಧಿಕಾರಿಯು ಒಬ್ಬ ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕುದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿರುವಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕುದು.

(೪) (೧)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕುದು.

೧೩೫ಎ. ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧ:- (೧) ಯಾವನೇ ವ್ಯಕ್ತಿಯು ಮತಗಟ್ಟೆ ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡಿದ್ದರೆ, ಅವನು ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ, ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಮತ್ತು ಅಂಥ ಅಪರಾಧವನ್ನು ಸರ್ಕಾರಿ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯು ಮಾಡಿದರೆ, ಅವನು ಮೂರು ವರ್ಷಗಳಿಗೆ ಕಡಿಮೆ ಇಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

ವಿವರಣೆ:- ಈ ಉಪ ಪ್ರಕರಣದ ಮತ್ತು ೨೦ ಬಿ ಪ್ರಕರಣದ ಉದ್ದೇಶಗಳಿಗಾಗಿ ‘‘ಮತಗಟ್ಟೆ ವಶಪಡಿಸಿಕೊಳ್ಳುವುದು" ಎಂಬುದು, ಇತರ ವಿಷಯಗಳ ಜೊತೆಗೆ, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ:-

(ಎ) ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ, ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಚುನಾವಣೆಗಳನ್ನು ಕ್ರಮಬದ್ಧವಾಗಿ ನಡೆಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಇತರ ಕಾರ್ಯ ಮಾಡುವುದು;

(ಬಿ) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಆ ವ್ಯಕ್ತಿಯ ಅಥವಾ ವ್ಯಕ್ತಿಗಳ ಸ್ವಂತ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸುವುದು ಮತ್ತು ಇತರರು ತಮ್ಮ ಮತದಾನದ ಹಕ್ಕನ್ನು ಮುಕ್ತವಾಗಿ ಚಲಾಯಿಸದಂತೆ ತಡೆಯುವುದು;

(ಸಿ) ಯಾವನೇ ಮತದಾರನನ್ನು ಬಲಪ್ರಯೋಗಿಸುವುದು ಅಥವಾ ಭಯ ಹುಟ್ಟಿಸುವುದು ಅಥವಾ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆದರಿಸುವುದು ಮತ್ತು ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(ಡಿ) ಎಣಿಕೆ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಿಟ್ಟುಕೊಡುವಂತೆ ಮಾಡಿ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆಯ ಸ್ಥಳವನ್ನು ಅಭಿಗ್ರಹಿಸುವುದು ಮತ್ತು ಮತಗಳನ್ನು ಕ್ರಮಬದ್ಧವಾಗಿ ಎಣಿಸುವುದರ ಮೇಲೆ ಪರಿಣಾಮ ಬೀರುವ ಯಾವುದೇ ಕಾರ್ಯವನ್ನು ಮಾಡುವುದು;

(ಇ) ಸರ್ಕಾರಿ ಸೇವೆಯಲ್ಲಿರುವ ಯಾವನೇ ವ್ಯಕ್ತಿಯು, ಒಬ್ಬ ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ಅಭಿವೃದ್ಧಿಗಾಗಿ ಮೇಲೆ ಹೇಳಿದ ಎಲ್ಲ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಯಾವುವೇ ಅಂಥ ಚಟುವಟಿಕೆಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

(೨) (೧)ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

೧೩೫ಬಿ. ಮತದಾನದ ದಿನದಂದು ನೌಕರರಿಗೆ ಸಂಬಳ ಸಹಿತ ರಜೆ ನೀಡುವುದು:- (೧) ಯಾವುದೇ ವ್ಯವಹಾರ, ವ್ಯಾಪಾರ, ಕೈಗಾರಿಕೋದ್ಯಮ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವ ಮತ್ತು ಲೋಕಸಭೆಗೆ ಅಥವಾ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಮತ ಹಾಕಲು ಹಕ್ಕು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಗೆ ಮತದಾನದ ದಿನದಂದು ರಜೆ ನೀಡತಕ್ಕದ್ದು.

(೨) (೧)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಒಂದು ದಿನದ ರಜೆಯನ್ನು ಮಂಜೂರು ಮಾಡಿರುವ ಕಾರಣ ಅಂಥ ಯಾರೇ ವ್ಯಕ್ತಿಯ ಮಜೂರಿಯಲ್ಲಿ ಯಾವುದೇ ಕಡಿತವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ನಿಲ್ಲಿಸತಕ್ಕದ್ದಲ್ಲ ಮತ್ತು ಅಂಥ ದಿನಕ್ಕಾಗಿ ಅವನು ಸಾಮಾನ್ಯವಾಗಿ ಮಜೂರಿ ಪಡೆಯುವುದಿಲ್ಲ ಎಂಬ ಆಧಾರದ ಮೇಲೆ ಅಂಥ ವ್ಯಕ್ತಿಯನ್ನು ನಿಯೋಜಿಸಿಕೊಂಡಿದ್ದಾಗ್ಯೂ, ಅವನಿಗೆ ಆ ದಿವಸ ಒಂದು ದಿನದ ರಜೆಯನ್ನು ಮಂಜೂರು ಮಾಡಿರದಿದ್ದರೆ ಅವನು ಪಡೆಯಬಹುದಾಗಿದ್ದ ಮಜೂರಿಯನ್ನು ಅವನಿಗೆ ಸಂದಾಯ ಮಾಡತಕ್ಕದ್ದು.

(ಖ) ನಿಯೋಜಕನು (೧)ನೇ ಉಪ-ಪ್ರಕರಣದ ಅಥವಾ (೨)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಅಂಥ ನಿಯೋಜಕನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(೪) ಮತದಾರನು ನಿರತನಾಗಿರುವಂಥ ಉದ್ಯೋಗಕ್ಕೆ ಸಂಬಂಧಪಟ್ಟಂತೆ ಅವನ ಗೈರುಹಾಜರಿಯಿಂದ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಂಭವವಿದ್ದರೆ ಅಂಥ ಯಾರೇ ಮತದಾರನಿಗೆ ಈ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

೧೩೫ಸಿ. ಮತದಾನದ ದಿನದಂದು ಮದ್ಯವನ್ನು ಮಾರಾಟ ಮಾಡದಿರುವುದು, ನೀಡದಿರುವುದು ಅಥವಾ ವಿತರಿಸದಿರುವುದು:- (೧) ಯಾವುದೇ ಮದ್ಯಸಾರಯುಕ್ತವಾದ, ಹುಳಿ ಹಿಡಿಸಿದ ಅಥವಾ ಮಾದಕ ಪಾನೀಯಗಳನ್ನು ಅಥವಾ ಅಂಥದೇ ಸ್ವರೂಪದ ಇತರ ದ್ರವ್ಯಗಳನ್ನು ಮತದಾನ ಪ್ರದೇಶದಲ್ಲಿನ ಯಾವುದೇ ಚುನಾವಣೆಗಾಗಿ ಮತದಾನದ ಮುಕ್ತಾಯಕ್ಕಾಗಿ ನಿಗದಿಪಡಿಸಿದ ಸಮಯವು ಕೊನೆಗೊಳ್ಳುವ ನಲವತ್ತೆಂಟು ಗಂಟೆಗಳ ಅವಧಿಯಲ್ಲಿ ಆ ಮತದಾನ ಪ್ರದೇಶದಲ್ಲಿನ ಹೋಟೆಲು, ಆಹಾರ ಸೇವನಾ ಗೃಹಗಳು, ತಿಂಡಿ ತೀರ್ಥದ ಅಂಗಡಿ ಅಥವಾ ಯಾವುದೇ ಇತರ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾರಾಟ ಮಾಡತಕ್ಕದ್ದಲ್ಲ, ನೀಡತಕ್ಕದ್ದಲ್ಲ ಅಥವಾ ವಿತರಿಸತಕ್ಕದ್ದಲ್ಲ.

(೨) (೧)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(೩) ಒಬ್ಬ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ನಿರ್ಣೀತ ಅಪರಾಧಿಯಾಗಿರುವಲ್ಲಿ, ಅವನ ಸ್ವಾಧೀನದಲ್ಲಿ ಕಂಡುಬಂದ ಮದ್ಯಸಾರಯುಕ್ತವಾದ, ಹುಳಿ ಬರಿಸಿದ ಅಥವಾ ಮಾದಕ ಪಾನೀಯಗಳು ಅಥವಾ ಅಂಥದ್ದೇ ಸ್ವರೂಪದ ಇತರ ದ್ರವ್ಯಗಳು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

೧೩೬. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು:- (೧) ಯಾವುದೇ ಚುನಾವಣೆಯಲ್ಲಿ ಒಬ್ಬ ವ್ಯಕ್ತಿಯು,-

(ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಬಿ) ಒಬ್ಬ ಚುನಾವಣಾಧಿಕಾರಿಯ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಸಿ) ಯಾವುದೇ ಮತಪತ್ರ ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಚಿಹ್ನೆ ಅಥವಾ ಗುರುತಿನ ಯಾವುದೇ ಫೋಷಣೆ ಅಥವಾ ಅಂಚೆ ಮತಪತ್ರದ ಮೂಲಕ ಮತದಾನ ಮಾಡುವುದಕ್ಕೆ ಸಂಬಂಧಿಸಿದಂತೆ ಉಪಯೋಗಿಸಿರುವ ಅಧಿಕೃತ ಲಕೋಟೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಡಿ) ಯುಕ್ತ ಪ್ರಾಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಯಿಂದ ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ; ಅಥವಾ

(ಇ) ಕಾನೂನಿನ ಮೂಲಕ ತಾನು ಹಾಗೆ ಹಾಕಲು ಅಧಿಕೃತನಾಗಿರುವ ಮತಪತ್ರವನ್ನು ಹೊರತುಪಡಿಸಿ ಇತರ ಯಾವುದೇ ವಸ್ತುವನ್ನು ಯಾವುದೇ ಮತಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ; ಅಥವಾ

(ಎಫ್) ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ಯುಕ್ತ ಪ್ರಾಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

(ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಯುಕ್ತ ಪ್ರಾಧಿಕಾರವಿಲ್ಲದೆ ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುವೇ ಅಂಥ ಕೃತ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ಅದನ್ನು ದುಷ್ಪ್ರೇರಿಸಿದರೆ

- ಅವನು ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕುದು.

(೨) ಈ ಪ್ರಕರಣದ ಮೇರೆಗಿನ ಚುನಾವಣಾ ಅಪರಾಧದ ಬಗ್ಗೆ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು,-

(ಎ) ಮತದಾನ ಕೇಂದ್ರದಲ್ಲಿ ಚುನಾವಣಾಧಿಕಾರಿ, ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಪೀಠಾಸೀನ ಅಧಿಕಾರಿ ಅಥವಾ ಚುನಾವಣೆಗೆ ಸಂಬಂಧಿಸಿದ ಪದೀಯ ಕರ್ತವ್ಯದ ಮೇಲೆ ನಿಯೋಜಿತನಾಗಿರುವ ಯಾವನೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು;

(ಬಿ) ಯಾವನೇ ಇತರ ವ್ಯಕ್ತಿಯಾಗಿದ್ದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(೩) ಈ ಪ್ರಕರಣದ ಉದ್ದೇಶಗಳಿಗಾಗಿ ಮತಗಳ ಎಣಿಕೆಯೂ ಸೇರಿದಂತೆ ಚುನಾವಣೆ ನಡೆಸುವುದರಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಭಾಗವಹಿಸುವುದು ಒಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದರೆ, ಅವನು ಪದೀಯ ಕರ್ತವ್ಯದ ಮೇಲಿರುವನೆಂದು ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಉಪಯೋಗಿಸಿದ್ದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯ ಜವಾಬ್ದಾರನಾಗಿರುವನೆಂದು ಭಾವಿಸತಕ್ಕುದು, ಆದರೆ ''ಪದೀಯ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಂಡಿರತಕ್ಕುದಲ್ಲ.

(೪) (೨)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕುದು.

೧೩೭. (ನಿರಸನಗೊಳಿಸಲಾಗಿದೆ).

೧೩೮. (ನಿರಸನಗೊಳಿಸಲಾಗಿದೆ).

ಭಾಗ - VIII

ಅನರ್ಹತೆಗಳು

೧೩೯-೧೪೫. (ಅಧ್ಯಾಯಗಳು I ರಿಂದ III - ಇವುಗಳನ್ನು ನಿರಸನಗೊಳಿಸಲಾಗಿದೆ).

ಅಧ್ಯಾಯ - IV - ಸದಸ್ಯರ ಅನರ್ಹತೆಗಳ ಬಗ್ಗೆ ವಿಚಾರಣೆಗಳನ್ನು ನಡೆಸುವ ಸಂಬಂಧದಲ್ಲಿ ಚುನಾವಣಾ ಆಯೋಗದ ಅಧಿಕಾರಗಳು.

೧೪೬. ಚುನಾವಣಾ ಆಯೋಗದ ಅಧಿಕಾರಗಳು:- (೧) ೧೦೩ನೇ ಅನುಚ್ಛೇದದ ಮೇರೆಗೆ ಅಥವಾ, ಸಂದರ್ಭಾನುಸಾರ, ಒಕ್ಕೂಟ ರಾಜ್ಯ ಕ್ಷೇತ್ರಗಳ ಸರ್ಕಾರದ ಅಧಿನಿಯಮ, ೧೯೬೩ (೧೯೬೩ರ ೨೦)ರ ೧೪ನೇ ಪ್ರಕರಣದ (೪)ನೇ ಉಪಪ್ರಕರಣದ ಮೇರೆಗೆ ರಾಷ್ಟ್ರಪತಿಗೆ, ಅಥವಾ ೧೯೨ನೇ ಅನುಚ್ಛೇದದ ಮೇರೆಗೆ ರಾಜ್ಯಪಾಲನಿಗೆ ಯಾವುದೇ ಅಭಿಪ್ರಾಯವನ್ನು ನೀಡುವ ಸಂಬಂಧದಲ್ಲಿ, ಚುನಾವಣಾ ಆಯೋಗವು ಒಂದು ವಿಚಾರಣೆಯನ್ನು ನಡೆಸುವುದು ಅವಶ್ಯ ಅಥವಾ ಸರಿಯಾದುದೆಂದು ಪರ್ಯಾಲೋಚಿಸುವಲ್ಲಿ ಮತ್ತು ಸಂಬಂಧಪಟ್ಟ ಪಕ್ಷಕಾರರು ಅಂಥ ವಿಚಾರಣೆಯಲ್ಲಿ ಸ್ವಪ್ರೇರಣೆಯಿಂದ ದಾಖಲು ಮಾಡಿರುವ ಶಪಥಪತ್ರಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳ ಆಧಾರದ ಮೇಲೆ ವಿಚಾರಣೆ ನಡೆಸುತ್ತಿರುವ ವಿಷಯದ ಬಗ್ಗೆ ಚುನಾವಣಾ ಆಯೋಗವು ನಿರ್ಣಾಯಕ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗುವುದಿಲ್ಲವೆಂದು ಅದಕ್ಕೆ ಮನದಟ್ಟಾಗುವಲ್ಲಿ, ಆಯೋಗವು, ಅಂಥ ವಿಚಾರಣೆಯ ಉದ್ದೇಶಗಳಿಗಾಗಿ, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, ೧೯೦೮ (೧೯೦೮ರ ೫)ರ ಮೇರೆಗೆ ದಾವೆಯನ್ನು ಅಧಿವಿಚಾರಿಸುವಾಗ ಹೊಂದಿರುವ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನೇ ಹೊಂದಿರತಕ್ಕುದು, ಎಂದರೆ:-

(ಎ) ಯಾವನೇ ವ್ಯಕ್ತಿಗೆ ಸಮನು ನೀಡುವುದು ಮತ್ತು ಹಾಜರಾತಿಯನ್ನು ಒತ್ತಾಯಿಸುವುದು, ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ಸಾಕ್ಷ್ಯವಾಗಿ ಹಾಜರುಪಡಿಸಬಹುದಾದ ಯಾವುದೇ ದಸ್ತಾವೇಜು ಅಥವಾ ಇತರ ಮುಖ್ಯ ವಸ್ತುವನ್ನು ಪ್ರಕಟಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಗೊಳಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು.

(೨) ಆಯೋಗವು, ಯಾವನೇ ವ್ಯಕ್ತಿಯನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ, ಆ ವ್ಯಕ್ತಿಯು ಕ್ಲೇಮು ಮಾಡಬಹುದಾದ ಯಾವುದೇ ವಿಶೇಷಾಧಿಕಾರಕ್ಕೆ ಒಳಪಟ್ಟು, ಆಯೋಗದ ಅಭಿಪ್ರಾಯದಲ್ಲಿ ಆ ವಿಚಾರಣೆಯ ವಸ್ತು ವಿಷಯಕ್ಕೆ ಉಪಯುಕ್ತವಾಗಬಹುದಾದ ಅಥವಾ ಸುಸಂಗತವಾಗಬಹುದಾದಂಥ ಸಂಗತಿಗಳು ಅಥವಾ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಅಗತ್ಯಪಡಿಸುವ ಅಧಿಕಾರವನ್ನು ಸಹ ಹೊಂದಿರತಕ್ಕುದು.

(೩) ಆಯೋಗವನ್ನು ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕುದು ಮತ್ತು ಭಾರತ ದಂಡ ಸಂಹಿತೆ (೧೮೬೦ರ ೪೫)ಯ ೧೭೫ನೇ ಪ್ರಕರಣ, ೧೭೮ನೇ ಪ್ರಕರಣ, ೧೭೯ನೇ ಪ್ರಕರಣ, ೧೮೦ನೇ ಪ್ರಕರಣ ಅಥವಾ ೨೨೮ನೇ ಪ್ರಕರಣದಲ್ಲಿ ವಿವರಿಸಲಾದಂತೆ ಯಾವುದೇ ಅಂಥ ಅಪರಾಧವನ್ನು ಆಯೋಗದ ಎದುರಿನಲ್ಲಿ ಅಥವಾ ಸಮ್ಮುಖದಲ್ಲಿ ಮಾಡಿದಾಗ, ಆಯೋಗವು ದಂಡ ಪ್ರಕ್ರಿಯಾ ಸಂಹಿತೆ, ೧೯೭೪ (೧೯೭೪ರ ೨) ರಲ್ಲಿ ಉಪಬಂಧಿಸಿರುವಂತೆ ಅಪರಾಧ ಘಟಿಸುವ ಸಂಗತಿಗಳನ್ನು ಮತ್ತು ಆಪಾದಿತನ ಹೇಳಿಕೆಯನ್ನು ದಾಖಲು ಮಾಡಿದ ತರುವಾಯ ಆ ಪ್ರಕರಣವನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಒಬ್ಬ ಮ್ಯಾಜಿಸ್ಟ್ರೇಟನಿಗೆ ಅದನ್ನು ಕಳುಹಿಸಿ ಕೊಡಬಹುದು ಮತ್ತು ಯಾವ ಮ್ಯಾಜಿಸ್ಟ್ರೇಟನಿಗೆ ಈ ಯಾವುದೇ ಅಂಥ ಪ್ರಕರಣವನ್ನು ಕಳುಹಿಸಲಾಗಿದೆಯೋ ಅವನು, ದಂಡ ಪ್ರಕ್ರಿಯಾ ಸಂಹಿತೆ, ೧೯೭೪ (೧೯೭೪ರ ೨)ರ ೪೬೨ನೇ ಪ್ರಕರಣದ ಮೇರೆಗೆ ತನಗೆ ಆ ಪ್ರಕರಣವನ್ನು ಕಳುಹಿಸಲಾಗಿದ್ದಿದ್ದರೆ ಹೇಗೋ ಹಾಗೆ ಆಪಾದಿತನ ವಿರುದ್ಧ ದೂರನ್ನು ಸುನಾವಣೆ ಮಾಡಲು ಮುಂದುವರಿಯತಕ್ಕುದು.

(೪) ಆಯೋಗದ ಮುಂದಿರುವ ಯಾವುದೇ ವ್ಯವಹರಣೆಯನ್ನು ಭಾರತ ದಂಡ ಸಂಹಿತೆ, ೧೮೬೦ (೧೮೬೦ರ ೪೫)ರ ೧೯೩ನೇ ಪ್ರಕರಣ ಮತ್ತು ೨೨೮ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂಬುದಾಗಿ ಭಾವಿಸತಕ್ಕುದು.

೧೪೬ಎ. ಚುನಾವಣಾ ಆಯೋಗಕ್ಕೆ ವ್ಯಕ್ತಿಗಳು ನೀಡಿದ ಹೇಳಿಕೆಗಳು:- ಚುನಾವಣಾ ಆಯೋಗದ ಮುಂದೆ ಸಾಕ್ಷ್ಯವನ್ನು ಕೊಡುವ ಕ್ರಮದಲ್ಲಿ ಒಬ್ಬ ವ್ಯಕ್ತಿಯು ನೀಡಿದ ಯಾವುದೇ ಹೇಳಿಕೆಯು, ಅಂಥ ಹೇಳಿಕೆಯ ಮೂಲಕ ಸುಳ್ಳು ಸಾಕ್ಷ್ಯವನ್ನು ನೀಡಿರುವುದಕ್ಕಾಗಿನ ಪ್ರಾಸಿಕ್ಯೂಷನ್ ಹೊರತು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಅವನನ್ನು ಗುರಿಪಡಿಸತಕ್ಕುದಲ್ಲ ಅಥವಾ ಆ ವ್ಯವಹರಣೆಯಲ್ಲಿ ಅದನ್ನು ಅವನ ವಿರುದ್ಧ ಉಪಯೋಗಿಸತಕ್ಕುದಲ್ಲ:

ಪರಂತು, ಆ ಹೇಳಿಕೆಯು -

(ಎ) ಉತ್ತರಿಸುವಂತೆ ಆಯೋಗವು ಅವನನ್ನು ಅಗತ್ಯಪಡಿಸಿರುವ ಪ್ರಶ್ನೆಗೆ ಉತ್ತರವಾಗಿ ನೀಡಿದುದಾಗಿರಬೇಕು; ಅಥವಾ

(ಬಿ) ವಿಚಾರಣೆಯ ವಸ್ತು ವಿಷಯಕ್ಕೆ ಸುಸಂಗತವಾಗಿರಬೇಕು.

೧೪೬ಬಿ. ಚುನಾವಣಾ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ:- ಚುನಾವಣಾ ಆಯೋಗವು, (ಅದರ ಉಪವೇಶನಗಳ ಸ್ಥಳಗಳು ಮತ್ತು ಸಮಯವನ್ನು ನಿಗದಿಪಡಿಸುವುದು ಮತ್ತು ಉಪವೇಶನವು ಬಹಿರಂಗವಾಗಿರಬೇಕೆ ಅಥವಾ ಏಕಾಂತವಾಗಿರಬೇಕೆ ಎಂಬುದನ್ನು ತೀರ್ಮಾನಿಸುವುದೂ ಸೇರಿದಂತೆ) ಅದರ ಸ್ವಂತ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರವನ್ನು ಹೊಂದಿರತಕ್ಕುದು.

೧೪೬ಸಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ:- ಈ ಅಧ್ಯಾಯದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಆದೇಶದ ಹಿಂದೆ ಹೇಳಿದ ಉಪಬಂಧಗಳ ಅನುಸಾರವಾಗಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಅಥವಾ ಆಯೋಗವು ಸಂದರ್ಭಾನುಸಾರ ರಾಷ್ಟ್ರಪತಿಗೆ ಅಥವಾ ರಾಜ್ಯಪಾಲನಿಗೆ ಯಾವುದೇ ಅಭಿಪ್ರಾಯವನ್ನು ನೀಡಿರುವ ಸಂಬಂಧದಲ್ಲಿ ಅಥವಾ ಅಂಥ ಯಾವುದೇ ಅಭಿಪ್ರಾಯ, ಕಾಗದಪತ್ರ ಅಥವಾ ವ್ಯವಹರಣೆಗಳನ್ನು ಆಯೋಗದ ಪ್ರಾಧಿಕಾರದ ಮೂಲಕ ಅಥವಾ ಮೇರೆಗೆ ಪ್ರಕಟಿಸುವುದರ ಸಂಬಂಧದಲ್ಲಿ ಆಯೋಗದ ಅಥವಾ ಆಯೋಗದ ನಿರ್ದೇಶನಗಳ ಮೇರೆಗೆ ಕಾರ್ಯ ಮಾಡುತ್ತಿರುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ಇರತಕ್ಕುದಲ್ಲ.

ಭಾಗ - IX

ಉಪ ಚುನಾವಣೆಗಳು

೧೪೭. ರಾಜ್ಯಸಭೆಯಲ್ಲಿ ಆಕಸ್ಮಿಕ ಖಾಲಿ ಸ್ಥಾನಗಳು:- (೧) ರಾಜ್ಯಸಭೆಗೆ ಆಯ್ಕೆಯಾದ ಸದಸ್ಯನ ಪದಾವಧಿಯು ಮುಕ್ತಾಯಗೊಳ್ಳುವ ಮುಂಚೆ ಅವನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆಯೆಂಬುದಾಗಿ ಘೋಷಿಸಿದಾಗ ಅಥವಾ ರಾಜ್ಯ ಸಭೆಗೆ ಅವನ ಆಯ್ಕೆಯು ಶೂನ್ಯವೆಂದು ಘೋಷಿತವಾದಾಗ, ಚುನಾವಣಾ ಆಯೋಗವು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ

ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು, ಸಂದರ್ಭಾನುಸಾರ ವಿಧಾನಸಭೆಯ ಚುನಾಯಿತ ಸದಸ್ಯರನ್ನು ಅಥವಾ ಸಂಬಂಧಪಟ್ಟ ಚುನಾಯಕ ಗಣದ ಸದಸ್ಯರನ್ನು ಕೇಳಿಕೊಳ್ಳಬಹುದು ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ವಿನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(೨) ಸಂವಿಧಾನದ (ಏಳನೆಯ ತಿದ್ದುಪಡಿ) ಅಧಿನಿಯಮ, ೧೯೫೬ರ ಪ್ರಾರಂಭದ ದಿನಾಂಕದ ತರುವಾಯ, ಆದಷ್ಟು ಬೇಗನೆ ಅಸ್ಸಾಂ, ಒರಿಸ್ಸಾ ಮತ್ತು ಉತ್ತರಪ್ರದೇಶ ರಾಜ್ಯಗಳಿಗೆ ಮತ್ತು ದೆಹಲಿ, ಹಿಮಾಚಲ ಪ್ರದೇಶ ಮತ್ತು ಮಣಿಪುರ ಒಕ್ಕೂಟ ರಾಜ್ಯಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಸ್ಥಾನಗಳಲ್ಲಿ ಆ ದಿನಾಂಕದಂದು ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಉಪ ಚುನಾವಣೆಗಳನ್ನು ನಡೆಸತಕ್ಕುದು.

೧೪೮. (ನಿರಸನಗೊಳಿಸಲಾಗಿದೆ).

೧೪೯. ಲೋಕಸಭೆಯಲ್ಲಿನ ಆಕಸ್ಮಿಕ ಖಾಲಿಸ್ಥಾನಗಳು:- (೧) ಲೋಕಸಭೆಗೆ ಆಯ್ಕೆಯಾದ ಒಬ್ಬ ಸದಸ್ಯನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆಯೆಂದು ಘೋಷಿಸಿದಾಗ ಅಥವಾ ಲೋಕಸಭೆಗೆ ಅವನ ಆಯ್ಕೆಯು ಶೂನ್ಯವಾಗಿದೆಯೆಂದು ಘೋಷಿತವಾದಾಗ, ಚುನಾವಣಾ ಆಯೋಗವು, (೨)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂಬಂಧಪಟ್ಟ ಸಂಸದೀಯ ಚುನಾವಣಾ ಕ್ಷೇತ್ರವನ್ನು ಕೇಳಿಕೊಳ್ಳತಕ್ಕುದು, ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(೨) ಹಾಗೆ ಉಂಟಾದ ಖಾಲಿ ಸ್ಥಾನವು, ಅನುಸೂಚಿತ ಜಾತಿಗಳಿಗಾಗಿನ ಅಥವಾ ಯಾವುದೇ ಅನುಸೂಚಿತ ಬುಡಕಟ್ಟುಗಳಿಗಾಗಿನ ಯಾವುದೇ ಅಂಥ ಚುನಾವಣಾ ಕ್ಷೇತ್ರದಲ್ಲಿ ಮೀಸಲಿಟ್ಟಿರುವ ಖಾಲಿ ಸ್ಥಾನವಾಗಿದ್ದರೆ, (೧)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಆ ಸ್ಥಾನಕ್ಕೆ ಆಯ್ಕೆಗೊಳ್ಳುವ ವ್ಯಕ್ತಿಯು ಸಂದರ್ಭಾನುಸಾರ ಅನುಸೂಚಿತ ಜಾತಿಗಳು ಅಥವಾ ಅಂಥ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವನಾಗಿರಲೇಬೇಕೆಂದು ನಿರ್ದಿಷ್ಟಪಡಿಸತಕ್ಕುದು.

೧೫೦. ರಾಜ್ಯ ವಿಧಾನಸಭೆಗಳಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು:- (೧) ರಾಜ್ಯ ವಿಧಾನಸಭೆಗೆ ಆಯ್ಕೆಯಾದ ಸದಸ್ಯನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆ ಎಂದು ಘೋಷಿಸಿದಾಗ ಅಥವಾ ವಿಧಾನಸಭೆಗೆ ಅವನು ಆಯ್ಕೆಯಾದುದು ಶೂನ್ಯವೆಂದು

ಘೋಷಿಸಿದಾಗ, ಚುನಾವಣಾ ಆಯೋಗವು, (೨)ನೇ ಉಪಪ್ರಕರಣಕ್ಕೊಳಪಟ್ಟು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂಬಂಧಪಟ್ಟ ವಿಧಾನಸಭಾ ಚುನಾವಣಾ ಕ್ಷೇತ್ರವನ್ನು ಕೇಳಿಕೊಳ್ಳತಕ್ಕುದು, ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

(೨) ಹಾಗೆ ಉಂಟಾದ ಖಾಲಿ ಸ್ಥಾನವು ಅನುಸೂಚಿತ ಜಾತಿಗಳಿಗಾಗಿನ ಅಥವಾ ಯಾವುದೇ ಅನುಸೂಚಿತ ಬುಡಕಟ್ಟುಗಳಿಗಾಗಿನ ಅಂಥ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ಮೀಸಲಿಟ್ಟಿರುವ ಖಾಲಿ ಸ್ಥಾನವಾಗಿದ್ದರೆ (೧)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯು ಆ ಸ್ಥಾನಕ್ಕೆ ಆಯ್ಕೆಗೊಳ್ಳುವ ವ್ಯಕ್ತಿಯು ಸಂದರ್ಭಾನುಸಾರ ಅನುಸೂಚಿತ ಜಾತಿ ಅಥವಾ ಅಂಥ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವನಾಗಿರಲೇಬೇಕೆಂದು ನಿರ್ದಿಷ್ಟಪಡಿಸತಕ್ಕುದು.

೧೫೧. ರಾಜ್ಯ ವಿಧಾನಪರಿಷತ್ತಿನಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳು:- ರಾಜ್ಯ ವಿಧಾನ ಪರಿಷತ್ತಿಗೆ ಆಯ್ಕೆಯಾದ ಒಬ್ಬ ಸದಸ್ಯನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅವನ ಸ್ಥಾನವು ಖಾಲಿಯಾದಾಗ ಅಥವಾ ಖಾಲಿಯಾಗಿದೆ ಎಂದು ಘೋಷಿಸಿದಾಗ ಅಥವಾ ವಿಧಾನ ಪರಿಷತ್ತಿಗೆ ಅವನು ಆಯ್ಕೆಯಾದುದು ಶೂನ್ಯವೆಂದು ಘೋಷಿಸಿದಾಗ, ಚುನಾವಣಾ ಆಯೋಗವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕಕ್ಕೆ ಮುಂಚೆ ಹಾಗೆ ಉಂಟಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಲು ಸಂದರ್ಭಾನುಸಾರ ಸಂಬಂಧಪಟ್ಟ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರವನ್ನು ಅಥವಾ ರಾಜ್ಯ ವಿಧಾನಸಭೆಯ ಸದಸ್ಯರನ್ನು ಕೇಳಿಕೊಳ್ಳತಕ್ಕುದು; ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಆದೇಶಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನ ಆಯ್ಕೆಯ ಸಂಬಂಧದಲ್ಲಿ ಅನ್ವಯವಾಗತಕ್ಕುದು.

೧೫೧ಎ. ೧೪೭, ೧೪೯, ೧೫೦ ಮತ್ತು ೧೫೧ನೇ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಕಾಲ ಪರಿಮಿತಿ:- ೧೪೭ನೇ ಪ್ರಕರಣ, ೧೪೯ನೇ ಪ್ರಕರಣ, ೧೫೦ನೇ ಪ್ರಕರಣ ಮತ್ತು ೧೫೧ನೇ ಪ್ರಕರಣದಲ್ಲಿ ಏನೇ ಇದ್ದರೂ, ಸದರಿ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವ ಸಲುವಾಗಿ ನಡೆಸುವ ಉಪ-ಚುನಾವಣೆಯು ಆ ಖಾಲಿ ಸ್ಥಾನವು ಉಂಟಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ನಡೆಯತಕ್ಕದ್ದು:

ಪರಂತು ,-

(ಎ) ಖಾಲಿ ಸ್ಥಾನಕ್ಕೆ ಸಂಬಂಧಪಟ್ಟಂತೆ ಸದಸ್ಯನ ಉಳಿದ ಪದಾವಧಿಯು ಒಂದು ವರ್ಷಕ್ಕಿಂತ ಕಡಿಮೆ ಇದ್ದರೆ; ಅಥವಾ

(ಬಿ) ಚುನಾವಣಾ ಆಯೋಗವು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಉಪ-ಚುನಾವಣೆಯನ್ನು ಸದರಿ ಅವಧಿಯೊಳಗೆ ನಡೆಸುವುದು ಕಷ್ಟವೆಂದು ಪ್ರಮಾಣೀಕರಿಸಿದರೆ

- ಈ ಪ್ರಕರಣದಲ್ಲಿ ಇರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

ಭಾಗ - X

ಸಂಕೀರ್ಣ

೧೫೨. ಸಂಬಂಧಪಟ್ಟ ಚುನಾವಣಾಧಿಕಾರಿಗಳು ರಾಜ್ಯ ವಿಧಾನಸಭೆಗಳ ಮತ್ತು ಚುನಾಯಕ ಗಣಗಳ ಸದಸ್ಯರ ಪಟ್ಟಿಯನ್ನು ಇಟ್ಟುಕೊಂಡು ಬರುವುದು:- (೧) ರಾಜ್ಯ ಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಚುನಾಯಿತ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಅಥವಾ ರಾಜ್ಯ ವಿಧಾನ ಪರಿಷತ್ತಿನಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಚುನಾವಣಾಧಿಕಾರಿಯು ಅಂಥ ಚುನಾವಣೆಯ ಉದ್ದೇಶಗಳಿಗಾಗಿ, ಸಂದರ್ಭಾನುಸಾರ, ಆ ವಿಧಾನಸಭೆಯ ಚುನಾಯಿತ ಸದಸ್ಯರ ಪಟ್ಟಿಯನ್ನು ಅಥವಾ ಸದಸ್ಯರ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ತನ್ನ ಕಚೇರಿಯಲ್ಲಿ ಇಟ್ಟುಕೊಂಡು ಬರತಕ್ಕುದು.

(೨) ರಾಜ್ಯಸಭೆಯಲ್ಲಿನ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಒಕ್ಕೂಟ ರಾಜ್ಯ ಕ್ಷೇತ್ರದ ಚುನಾಯಕ ಗಣದ ಸದಸ್ಯರ ಮೂಲಕ ನಡೆಯುವ ಚುನಾವಣೆಗಾಗಿನ ಚುನಾವಣಾಧಿಕಾರಿಯು ಅಂಥ ಚುನಾವಣೆಯ ಉದ್ದೇಶಗಳಿಗಾಗಿ ಆ ಚುನಾಯಕ ಗಣದ ಸದಸ್ಯರ ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ತನ್ನ ಕಚೇರಿಯಲ್ಲಿ ಇಟ್ಟುಕೊಂಡು ಬರತಕ್ಕುದು.

(೩) (೧) ಮತ್ತು (೨)ನೇ ಉಪ ಪ್ರಕರಣಗಳಲ್ಲಿ ಉಲ್ಲೇಖಿಸಿದ ಪಟ್ಟಿಗಳ ಪ್ರತಿಗಳು ಮಾರಾಟಕ್ಕೆ ದೊರೆಯುವಂತೆ ಮಾಡತಕ್ಕುದು.

೧೫೩. ಚುನಾವಣೆಯನ್ನು ಪೂರ್ಣಗೊಳಿಸಲು ಸಮಯದ ವಿಸ್ತರಣೆ:- ಚುನಾವಣಾ ಆಯೋಗವು ತಾನು ಸಾಕಷ್ಟು ಎಂದು ಪರ್ಯಾಲೋಚಿಸುವ ಕಾರಣಗಳಿಗಾಗಿ ಯಾವುದೇ ಚುನಾವಣೆಯನ್ನು ಪೂರ್ಣಗೊಳಿಸುವುದಕ್ಕಾಗಿನ ಸಮಯವನ್ನು ೪೦ನೇ ಪ್ರಕರಣದ ಅಥವಾ ೪೯ನೇ ಪ್ರಕರಣದ (೧)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಮಾಡುವುದರ ಮೂಲಕ ವಿಸ್ತರಿಸಲು ಸಕ್ಷಮವಾಗಿರತಕ್ಕುದು.

೧೫೪. ರಾಜ್ಯಸಭೆಯ ಸದಸ್ಯರ ಪದಾವಧಿ:- (೧) (೨) ಮತ್ತು (೨ಎ) ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗಿರುವ ಸದಸ್ಯನನ್ನು ಹೊರತುಪಡಿಸಿ, ರಾಜ್ಯ ಸಭೆಯ ಒಬ್ಬ ಸದಸ್ಯನ ಪದಾವಧಿಯು ಆರು ವರ್ಷಗಳಾಗಿರತಕ್ಕುದು.

(೨) ರಾಜ್ಯಸಭೆಯ ಮೊದಲ ರಚನೆಯಾದ ಮೇಲೆ, ರಾಷ್ಟ್ರಪತಿಯು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಪ್ರತಿ ವರ್ಗದ ಸ್ಥಾನಗಳನ್ನು ಧಾರಣ ಮಾಡಿರುವ ಸದಸ್ಯರಲ್ಲಿ ಮೂರನೇ ಒಂದು ಭಾಗದಷ್ಟು ಸದಸ್ಯರು ಆ ತರುವಾಯ ಪ್ರತಿ ಎರಡನೆಯ ವರ್ಷದಲ್ಲಿ ನಿವೃತ್ತರಾಗುವಂತೆ ಆಗ ಆಯ್ಕೆಗೊಂಡಿರುವ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸಲು ತಾನು ಯುಕ್ತವೆಂದು ಯೋಚಿಸುವಂಥ ಉಪಬಂಧವನ್ನು ಆದೇಶದ ಮೂಲಕ ಮಾಡತಕ್ಕುದು.

(೨ಎ) ಆದಷ್ಟು ಮಟ್ಟಿಗೆ, ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುವಂತೆ, ಮತ್ತು ಅನಂತರ ಪ್ರತಿ ಎರಡನೇ ವರ್ಷವು ಮುಕ್ತಾಯಗೊಂಡ ಮೇಲೆ, ರಾಷ್ಟ್ರಪತಿಯು, ಸಂವಿಧಾನದ (ಏಳನೆಯ ತಿದ್ದುಪಡಿ) ಅಧಿನಿಯಮ, ೧೯೫೬ ಇದರ ಪ್ರಾರಂಭದ ನಂತರ ಆದಷ್ಟು ಬೇಗನೆ ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ, ೧೪೭ನೇ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗೆ ಆಯ್ಕೆಯಾದ ಸದಸ್ಯರ ಪದಾವಧಿಗಳ ಸಂಬಂಧದಲ್ಲಿ ಅವನು ಸೂಕ್ತವೆಂದು ಯೋಚಿಸುವಂಥ ಉಪಬಂಧಗಳನ್ನು ಆದೇಶದ ಮೂಲಕ ಮಾಡತಕ್ಕುದು.

(೩) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗುವ ಸದಸ್ಯನು ಅವನ ಪೂರ್ವಾಧಿಕಾರಿಯ ಉಳಿದ ಪದಾವಧಿಗಾಗಿ ಸೇವೆ ಸಲ್ಲಿಸಲು ಆಯ್ಕೆಯಾಗತಕ್ಕುದು.

೧೫೫. ರಾಜ್ಯಸಭೆಯ ಸದಸ್ಯರ ಪದಾವಧಿಯ ಪ್ರಾರಂಭ:- (೧) ರಾಜ್ಯಸಭೆಯ ಯಾವ ಸದಸ್ಯನ ಹೆಸರನ್ನು ೭೧ನೇ ಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಅಧಿಸೂಚಿಸಲು ಅಗತ್ಯಪಡಿಸಲಾಗಿದೆಯೋ ಆ ಸದಸ್ಯನ ಪದಾವಧಿಯು ಅಧಿಸೂಚನೆಯ ದಿನಾಂಕದಂದು ಪ್ರಾರಂಭವಾಗತಕ್ಕುದು.

(೨) ರಾಜ್ಯಸಭೆಯ ಯಾವ ಸದಸ್ಯನ ಹೆಸರನ್ನು ೭೧ನೇ ಪ್ರಕರಣದ ಮೇರೆಗೆ ಅಧಿಸೂಚಿಸಬೇಕಾದ ಅಗತ್ಯವಿಲ್ಲವೋ ಅಂಥ ಸದಸ್ಯನ ಪದಾವಧಿಯು ೬೭ನೇ ಪ್ರಕರಣದ ಮೇರೆಗೆ ಚುನಾಯಿತನೆಂದು ಅಂಥ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಘೋಷಣೆಯನ್ನು ಅಥವಾ ರಾಜ್ಯಸಭೆಗೆ ಅಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ ಸಂದರ್ಭಾನುಸಾರ ಅಂತೆ ಅನುಚ್ಛೇದದ (೧)ನೇ ಖಂಡದ (ಎ) ಉಪಖಂಡದ ಮೇರೆಗೆ ಅಥವಾ ಯಾವುದೇ ಇತರ ಉಪಬಂಧದ ಮೇರೆಗೆ ಹೊರಡಿಸಿರುವ ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಪ್ರಾರಂಭಿಸತಕ್ಕುದು.

೧೫೬. ರಾಜ್ಯ ವಿಧಾನಪರಿಷತ್ತಿನ ಸದಸ್ಯರ ಪದಾವಧಿ:- (೧) ಆಕಸ್ಮಿಕ ಖಾಲಿಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾದ ಸದಸ್ಯನನ್ನು ಹೊರತುಪಡಿಸಿ, ರಾಜ್ಯ ವಿಧಾನ ಪರಿಷತ್ತಿನ ಸದಸ್ಯರ ಪದಾವಧಿಯು ಆರು ವರ್ಷಗಳಾಗಿರತಕ್ಕುದು, ಆದರೆ ಪರಿಷತ್ತು ಮೊದಲ ಸಲ ರಚನೆಯಾದ ಮೇಲೆ, ರಾಜ್ಯಪಾಲನು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ಪ್ರತಿ ವರ್ಗದಲ್ಲಿಯೂ ಸ್ಥಾನಗಳನ್ನು ಹೊಂದಿರುವ ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಪ್ರತಿ ಎರಡನೇ ವರ್ಷದಲ್ಲಿ ನಿವೃತ್ತರಾಗುವಂತೆ ಆಯ್ಕೆಯಾದ ಕೆಲವು ಸದಸ್ಯರ ಪದಾವಧಿಯನ್ನು ಮೊಟಕುಗೊಳಿಸುವುದಕ್ಕಾಗಿ ತಾನು ಸೂಕ್ತವೆಂದು ಯೋಚಿಸುವಂಥ ಉಪಬಂಧವನ್ನು ಆದೇಶದ ಮೂಲಕ ಮಾಡತಕ್ಕುದು.

(೨) ಆಕಸ್ಮಿಕ ಖಾಲಿ ಸ್ಥಾನವನ್ನು ತುಂಬುವುದಕ್ಕೆ ಆಯ್ಕೆಯಾಗುವ ಸದಸ್ಯನು ಅವನ ಪೂರ್ವಾಧಿಕಾರಿಯ ಉಳಿದ ಪದಾವಧಿಗಾಗಿ ಸೇವೆ ಸಲ್ಲಿಸಲು ಆಯ್ಕೆಯಾಗತಕ್ಕುದು.

೧೫೭. ವಿಧಾನಪರಿಷತ್ತುಗಳ ಸದಸ್ಯರ ಪದಾವಧಿಯ ಪ್ರಾರಂಭ:- (೧) ರಾಜ್ಯದ ವಿಧಾನ ಪರಿಷತ್ತಿನ ಯಾವ ಸದಸ್ಯನ ಹೆಸರನ್ನು ೭ನೇ ಪ್ರಕರಣದ ಮೇರೆಗೆ ರಾಜಪತ್ರದಲ್ಲಿ ಅಧಿಸೂಚಿಸಲು ಅಗತ್ಯಪಡಿಸಲಾಗಿದೆಯೋ ಆ ಸದಸ್ಯನ ಪದಾವಧಿಯು ಅಧಿಸೂಚನೆಯ ದಿನಾಂಕದಂದು ಪ್ರಾರಂಭವಾಗತಕ್ಕುದು.

(೨) ವಿಧಾನಪರಿಷತ್ತಿನ ಯಾವ ಸದಸ್ಯನ ಹೆಸರನ್ನು ೭ನೇ ಪ್ರಕರಣದ ಮೇರೆಗೆ ಅಧಿಸೂಚಿಸಬೇಕಾದ ಅಗತ್ಯವಿಲ್ಲವೋ ಅಂಥ ಸದಸ್ಯನ ಪದಾವಧಿಯು, ೬ನೇ ಪ್ರಕರಣದ ಮೇರೆಗೆ ಚುನಾಯಿತನಾಗಿದ್ದಾನೆಂದು ಅಂಥ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಘೋಷಣೆಯನ್ನು ಅಥವಾ ಸಂದರ್ಭಾನುಸಾರ ಪರಿಷತ್ತಿಗೆ ಅಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿ ೧೭ನೇ ಅನುಚ್ಛೇದದ (೩)ನೇ ಖಂಡದ (೫) ಉಪಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯನ್ನು ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಂದು ಪ್ರಾರಂಭವಾಗತಕ್ಕುದು.

೧೫೮. ಅಭ್ಯರ್ಥಿಯ ಠೇವಣಿಯ ವಾಪಸಾತಿ ಅಥವಾ ಮಟ್ಟುಗೋಲು:- (೧) ೩೪ನೇ ಪ್ರಕರಣದ ಮೇರೆಗೆ ಅಥವಾ ೩೯ನೇ ಪ್ರಕರಣದ (೨)ನೇ ಉಪಪ್ರಕರಣದೊಂದಿಗೆ ಓದಿಕೊಳ್ಳಲಾದ ಆ ಪ್ರಕರಣದ ಮೇರೆಗೆ ಇಟ್ಟಿರುವ ಠೇವಣಿಯನ್ನು, ಅದನ್ನು ಇಟ್ಟ ವ್ಯಕ್ತಿಗೆ ಅಥವಾ ಅವನ ಕಾನೂನು ಸಮ್ಮತ ಪ್ರತಿನಿಧಿಗೆ ವಾಪಸ್ಸು ಮಾಡತಕ್ಕುದು ಅಥವಾ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸಮುಚಿತ ಪ್ರಾಧಿಕಾರವು ಅದನ್ನು ಮಟ್ಟುಗೋಲು ಹಾಕಿಕೊಳ್ಳತಕ್ಕುದು.

(೨) ಈ ಪ್ರಕರಣದಲ್ಲಿ ಇನ್ನು ಮುಂದೆ ನಮೂದಿಸಿರುವ ಸಂದರ್ಭಗಳಲ್ಲಿ ಹೊರತು, ಠೇವಣಿಯನ್ನು, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ನಂತರ ಕಾರ್ಯ ಸಾಧ್ಯವಾದಷ್ಟು ಬೇಗ ವಾಪಸು ಮಾಡತಕ್ಕುದು.

(೩) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಕಾಣಿಸದಿದ್ದರೆ, ಅಥವಾ ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಅವನು ಮರಣ ಹೊಂದಿದರೆ, ಪಟ್ಟಿಯನ್ನು ಪ್ರಕಟಿಸಿದ ನಂತರ ಅಥವಾ ಸಂದರ್ಭಾನುಸಾರ ಅವನ ಮರಣದ ನಂತರ, ಕಾರ್ಯ ಸಾಧ್ಯವಾದಷ್ಟು ಬೇಗ ಠೇವಣಿಯನ್ನು ವಾಪಸು ಮಾಡತಕ್ಕುದು.

(೪) (೩)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಮತದಾನ ನಡೆದಿರುವ ಒಂದು ಚುನಾವಣೆಯಲ್ಲಿ ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಮತ್ತು ಅವನಿಗೆ ದೊರೆತಿರುವ ಸಿಂಧುವಾದ ಮತಗಳ ಸಂಖ್ಯೆಯು, ಎಲ್ಲ ಅಭ್ಯರ್ಥಿಗಳಿಗೆ ದೊರೆತಿರುವ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯ ೧/೬ ಭಾಗವನ್ನು ಅಥವಾ ಆ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚು ಸದಸ್ಯರನ್ನು ಚುನಾಯಿಸಬೇಕಾದ ಸಂದರ್ಭದಲ್ಲಿ, ಹಾಗೆ ಚಲಾಯಿಸಿದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯಿಂದ ವಿಭಾಗಿಸಿದಾಗ ಬರುವ ಭಾಗಲಬ್ಧದ ೧/೬ ಭಾಗವನ್ನು ಮೀರದಿದ್ದರೆ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು:

ಪರಂತು, ಏಕ ವರ್ಗಾವಣೀಯ ಮತದ ಮೂಲಕ ಅನುಪಾತೀ ಪ್ರಾತಿನಿಧ್ಯ ಪದ್ಧತಿಗನುಸಾರವಾಗಿ ನಡೆದಿರುವ ಒಂದು ಚುನಾವಣೆಯಲ್ಲಿ ಅಭ್ಯರ್ಥಿಯು ಚುನಾಯಿತನಾಗದಿರುವಲ್ಲಿ, ಒಬ್ಬ ಅಭ್ಯರ್ಥಿಯ ಆಯ್ಕೆಯನ್ನು ಸುನಿಶ್ಚಿತಗೊಳಿಸಲು ಸಾಕಷ್ಟು ಎಂದು ಈ ಬಗ್ಗೆ ನಿಯಮಿಸಿದ ಮತಗಳ ಸಂಖ್ಯೆಯ ೧/೬ ಭಾಗಕ್ಕಿಂತ ಹೆಚ್ಚು ಮತಗಳನ್ನು ಅವನು ಪಡೆಯದಿದ್ದರೆ ಅವನು ಇಟ್ಟಿರುವ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು.

(೫) (೨), (೩) ಮತ್ತು (೪)ನೇ ಉಪಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,-

(ಎ) ಸಾರ್ವತ್ರಿಕ ಚುನಾವಣೆಯಲ್ಲಿ, ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಸಂಸದೀಯ ಚುನಾವಣಾ ಕ್ಷೇತ್ರಗಳ ಅಥವಾ ಒಂದಕ್ಕಿಂತ ಹೆಚ್ಚು ವಿಧಾನಸಭಾ ಚುನಾವಣಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯಾಗಿದ್ದರೆ, ಒಂದಕ್ಕಿಂತ ಹೆಚ್ಚು ಠೇವಣಿಗಳನ್ನು ವಾಪಸ್ಸು ಮಾಡತಕ್ಕುದಲ್ಲ, ಮತ್ತು ಉಳಿದವುಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು;

(ಬಿ) ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ವಿಧಾನಪರಿಷತ್ ಚುನಾವಣಾ ಕ್ಷೇತ್ರಗಳಲ್ಲಿನ ಚುನಾವಣೆಯಲ್ಲಿ ಅಥವಾ ವಿಧಾನ ಪರಿಷತ್ತಿನ ಚುನಾವಣಾ ಕ್ಷೇತ್ರದಲ್ಲಿನ ಒಂದು ಚುನಾವಣೆಯಲ್ಲಿ ಮತ್ತು ವಿಧಾನ ಪರಿಷತ್ತಿನ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ರಾಜ್ಯ ವಿಧಾನಸಭೆಯ ಸದಸ್ಯರ ಮೂಲಕ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಯಾಗಿದ್ದರೆ, ಒಂದಕ್ಕಿಂತ ಹೆಚ್ಚು ಠೇವಣಿಯನ್ನು ವಾಪಸು ಮಾಡತಕ್ಕುದಲ್ಲ, ಮತ್ತು ಉಳಿದವುಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕುದು.

೧೫೯. ಚುನಾವಣಾ ಕೆಲಸಕ್ಕಾಗಿ ನಿರ್ದಿಷ್ಟ ಪ್ರಾಧಿಕಾರಗಳ ಸಿಬ್ಬಂದಿಯನ್ನು ಒದಗಿಸುವುದು:- (೧) ಚುನಾವಣೆಗೆ ಸಂಬಂಧಿಸಿದ ಯಾವುವೇ ಕರ್ತವ್ಯಗಳನ್ನು ನಿರ್ವಹಿಸಲು ಅವಶ್ಯವಿರಬಹುದಾದಂಥ ಸಿಬ್ಬಂದಿಯನ್ನು ಯಾರೇ ರಿಟರ್ನಿಂಗ್ ಆಫೀಸರನಿಗೆ ಒದಗಿಸುವಂತೆ ೩೨ಳನೇ ಅನುಚ್ಛೇದದ (೪)ನೇ ಖಂಡದ ಮೇರೆಗೆ ನೇಮಕಗೊಂಡ ಪ್ರಾದೇಶಿಕ ಕಮೀಷನರು ಅಥವಾ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯು (೨)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳನ್ನು ಕೋರಿದಾಗ ಅವು ಹಾಗೆ ಒದಗಿಸತಕ್ಕದ್ದು.

(೨) (೧)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳು ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:-

(i) ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(ii) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ನಿಗಮಿತವಾದ ಪ್ರತಿಯೊಂದು ವಿಶ್ವವಿದ್ಯಾನಿಲಯ.

(iii) ಕಂಪನಿಗಳ ಅಧಿನಿಯಮ, ೧೯೫೬ (೧೯೫೬ ರ ೧) ರ ೬೧೭ನೇ ಪ್ರಕರಣದಲ್ಲಿ ಪರಿಭಾಷಿಸಲಾದ ಸರ್ಕಾರಿ ಕಂಪನಿ;

(iv) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ನಿಯಂತ್ರಣಗೊಂಡ, ಅಥವಾ ಅವು ಒದಗಿಸಿದ ನಿಧಿಯಿಂದ ಪೂರ್ಣವಾಗಿ ಅಥವಾ ಗಣನಾರ್ಹವಾಗಿ ಹಣಕಾಸಿನ ನೆರವು ಪಡೆಯುತ್ತಿರುವ ಯಾವುದೇ ಇತರ ಸಂಸ್ಥೆ, ವ್ಯಾಪಾರ ಸಂಸ್ಥೆ ಅಥವಾ ಉದ್ಯಮ.

೧೬೦. ಚುನಾವಣಾ ಉದ್ದೇಶಗಳಿಗಾಗಿ ಸ್ಥಳಾವಕಾಶಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು:- (೧) ರಾಜ್ಯದೊಳಗೆ ನಡೆಯುವ ಚುನಾವಣೆಯ ಸಂಬಂಧದಲ್ಲಿ,-

(ಎ) ಮತದಾನ ಕೇಂದ್ರವಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಅಥವಾ ಮತದಾನ ನಡೆದ ತರುವಾಯ ಮತಪೆಟ್ಟಿಗೆಗಳನ್ನು ಶೇಖರಿಸಿ ಇಡುವುದಕ್ಕಾಗಿ ಯಾವುವೇ ಸ್ಥಳಾವರಣಗಳ ಅಗತ್ಯ ಇದೆ ಎಂದು ಅಥವಾ ಅಗತ್ಯವಾಗುವ ಸಂಭವವಿದೆ ಎಂದು; ಅಥವಾ

(ಬಿ) ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಕೇಂದ್ರದಿಂದ ಮತಪೆಟ್ಟಿಗೆಗಳ ಸಾಗಣೆಯ ಅಥವಾ ಅಂಥ ಚುನಾವಣೆಯನ್ನು ನಡೆಸುವ ಕಾಲದಲ್ಲಿ ಸುವ್ಯವಸ್ಥೆಯನ್ನು ಪಾಲಿಸುವುದಕ್ಕಾಗಿ ಪೊಲೀಸ್ ಪಡೆಯ ಸದಸ್ಯರ ಸಾಗಣೆಯ, ಅಥವಾ ಅಂಥ ಚುನಾವಣೆಯ ಸಂಬಂಧದಲ್ಲಿ ಯಾವುವೇ ಕರ್ತವ್ಯಗಳ ನಿರ್ವಹಣೆಗಾಗಿ ಯಾವನೇ

ಅಧಿಕಾರಿ ಅಥವಾ ಇತರ ವ್ಯಕ್ತಿಯ ಸಾಗಣೆಯ ಉದ್ದೇಶಕ್ಕಾಗಿ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯು ಅಗತ್ಯವಾಗಿದೆಯೆಂದು ಅಥವಾ ಅಗತ್ಯವಾಗುವ ಸಂಭವವಿದೆಯೆಂದು ರಾಜ್ಯ ಸರ್ಕಾರಕ್ಕೆ ಕಂಡುಬಂದರೆ

- ಸರ್ಕಾರವು, ಸಂದರ್ಭಾನುಸಾರ, ಸ್ಥಳಾವರಣಗಳನ್ನು ಅಥವಾ ವಾಹನವನ್ನು ಅಥವಾ ದೋಣಿಯನ್ನು ಅಥವಾ ಪ್ರಾಣಿಯನ್ನು ಲಿಖಿತ ಆದೇಶದ ಮೂಲಕ ಕಡ್ಡಾಯವಾಗಿ ಕೋರಬಹುದು ಮತ್ತು ಅಂಥ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಒಬ್ಬ ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಕಾನೂನುಸಮ್ಮತವಾಗಿ ಉಪಯೋಗಿಸುತ್ತಿರುವ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯನ್ನು ಅಂಥ ಚುನಾವಣೆಯಲ್ಲಿನ ಮತದಾನವು ಪೂರ್ಣವಾಗುವವರೆಗೆ ಈ ಉಪಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರತಕ್ಕುದಲ್ಲ.

(೨) ಸ್ವತ್ತಿನ ಮಾಲೀಕನೆಂದು ಅಥವಾ ಸ್ವತ್ತಿನ ಸ್ವಾಧೀನತೆ ಹೊಂದಿರುವ ವ್ಯಕ್ತಿಯೆಂದು ರಾಜ್ಯ ಸರ್ಕಾರವು ಭಾವಿಸುವಂಥ ವ್ಯಕ್ತಿಯನ್ನು ಸಂಬೋಧಿಸಿ ಲಿಖಿತ ಆದೇಶದ ಮೂಲಕ ಕಡ್ಡಾಯ ಕೋರಿಕೆಯನ್ನು ಕಾರ್ಯಗತಗೊಳಿಸತಕ್ಕುದು ಮತ್ತು ಅಂಥ ಆದೇಶವನ್ನು ಯಾರಿಗೆ ಅದನ್ನು ಸಂಬೋಧಿಸಲಾಗಿದೆಯೋ ಆ ವ್ಯಕ್ತಿಗೆ ನಿಯಮಿಸಿದ ರೀತಿಯಲ್ಲಿ ಜಾರಿಗೊಳಿಸತಕ್ಕುದು.

(೩) (೧)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿರುವಾಗ ಅಂಥ ಕಡ್ಡಾಯ ಕೋರಿಕೆಯ ಅವಧಿಯು ಅಂಥ ಸ್ವತ್ತು ಆ ಉಪಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಉದ್ದೇಶಕ್ಕಾಗಿ ಯಾವ ಅವಧಿಗಾಗಿ ಬೇಕಾಗಿದೆಯೋ ಆ ಅವಧಿಯನ್ನು ಮೀರತಕ್ಕುದಲ್ಲ.

(೪) ಈ ಪ್ರಕರಣದಲ್ಲಿ -

(ಎ) ''ಸ್ಥಳಾವರಣಗಳು" ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ಗುಡಿಸಲು, ಶೆಡ್ ಅಥವಾ ಇತರೆ ನಿರ್ಮಾಣ ಅಥವಾ ಅದರ ಯಾವುದೇ ಭಾಗವನ್ನು ಒಳಗೊಳ್ಳುತ್ತದೆ;

(ಬಿ) ''ವಾಹನ" ಎಂದರೆ ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ, ಅದು ಯಂತ್ರಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು.

೧೬೧. ನಷ್ಟಪರಿಹಾರದ ಸಂದಾಯ:- (೧) ೧೬೦ನೇ ಪ್ರಕರಣಕ್ಕನುಸಾರವಾಗಿ ರಾಜ್ಯ ಸರ್ಕಾರವು ಯಾವುವೇ ಸ್ಥಳಾವರಣಗಳನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲ ಹಿತಾಸಕ್ತರಾದ ವ್ಯಕ್ತಿಗಳಿಗೆ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕುದು. ಆ

ನಷ್ಟಪರಿಹಾರದ ಮೊತ್ತವನ್ನು ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸತಕ್ಕುದು, ಎಂದರೆ:-

(i) ಆ ಸ್ಥಳಾವರಣಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಹಾಗೆ ಸಂದಾಯ ಮಾಡಬೇಕಾಗಿಲ್ಲದಿದ್ದರೆ ಆ ಜಾಗದಲ್ಲಿರುವ ಅಂಥವೇ ಸ್ಥಳಾವರಣಗಳಿಗಾಗಿ ಸಂದಾಯ ಮಾಡಬೇಕಾದ ಬಾಡಿಗೆ;

(ii) ಸ್ಥಳಾವರಣಗಳ ಕಡ್ಡಾಯ ಕೋರಿಕೆಯ ಪರಿಣಾಮವಾಗಿ ಹಿತಾಸಕ್ತ ವ್ಯಕ್ತಿಯು ತನ್ನ ವಾಸಸ್ಥಳ ಅಥವಾ ವ್ಯವಹಾರ ಸ್ಥಳವನ್ನು ಬದಲಾಯಿಸಲೇಬೇಕಾದರೆ ಅಂಥ ಬದಲಾವಣೆಗೆ ಸಂಬಂಧಿಸಿದಂತೆ ಯುಕ್ತ ಪ್ರಾಸಂಗಿಕ ವೆಚ್ಚಗಳೇನಾದರೂ ಇದ್ದರೆ ಅವು:

ಪರಂತು, ಹಾಗೆ ನಿರ್ಧರಿಸಿದ ನಷ್ಟಪರಿಹಾರದ ಮೊಬಲಗಿನಿಂದ ಬಾಧಿತಗೊಂಡಿರುವ ಯಾವನೇ ಹಿತಾಸಕ್ತ ವ್ಯಕ್ತಿಯು ಆ ವಿಷಯವನ್ನು ಒಬ್ಬ ಮಧ್ಯಸ್ಥನಿಗೆ ವಹಿಸಿಕೊಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಿದಲ್ಲಿ, ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗು ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿರುವ ಮಧ್ಯಸ್ಥನು ನಿರ್ಧರಿಸಬಹುದಾದಷ್ಟು ಆಗಿರತಕ್ಕುದು:

ಮತ್ತೂ ಪರಂತು, ನಷ್ಟಪರಿಹಾರವನ್ನು ಸ್ವೀಕರಿಸಲು ಸ್ವಾಮ್ಯದ ಬಗ್ಗೆ ಅಥವಾ ನಷ್ಟಪರಿಹಾರದ ಮೊಬಲಗಿನ ಹಂಚಿಕೆಯ ಬಗ್ಗೆ ಯಾವುದೇ ವಿವಾದ ಇರುವಲ್ಲಿ, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥನಿಗೆ ಆ ವಿಷಯವನ್ನು ನಿರ್ಧರಣೆಗಾಗಿ ಆ ಸರ್ಕಾರವು ಕಳಿಸತಕ್ಕುದು ಮತ್ತು ಅದನ್ನು ಅಂಥ ಮಧ್ಯಸ್ಥನ ತೀರ್ಮಾನಕ್ಕನುಸಾರವಾಗಿ ನಿರ್ಧರಿಸತಕ್ಕುದು.

ವಿವರಣೆ:- ಈ ಉಪಪ್ರಕರಣದಲ್ಲಿ 'ಹಿತಾಸಕ್ತನಾದ ವ್ಯಕ್ತಿ' ಎಂದರೆ ಕಡ್ಡಾಯ ಕೋರಿಕೆಗೆ ನಿಕಟ ಪೂರ್ವದಲ್ಲಿ ೧೬೦ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾಗಿರುವ ಸ್ಥಳಾವರಣಗಳ ವಾಸ್ತವಿಕ ಸ್ವಾಧೀನ ಹೊಂದಿದ್ದ ವ್ಯಕ್ತಿ ಅಥವಾ ಅಂಥ ವಾಸ್ತವಿಕ ಸ್ವಾಧೀನವನ್ನು ಹೊಂದಿದ್ದ ಯಾವನೇ ವ್ಯಕ್ತಿಯು ಇಲ್ಲದಿದ್ದಲ್ಲಿ, ಅಂಥ ಸ್ಥಳಾವರಣಗಳ ಮಾಲೀಕ.

(೨) ೧೬೦ನೇ ಪ್ರಕರಣದ ಅನುಸಾರವಾಗಿ ರಾಜ್ಯ ಸರ್ಕಾರವು ಯಾವುದೇ ವಾಹನ, ದೋಣಿ, ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲ, ಅದರ ಮಾಲೀಕನಿಗೆ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕುದು; ಆ ಮೊಬಲಗನ್ನು ಅಂಥ ವಾಹನ, ದೋಣಿ ಅಥವಾ ಪ್ರಾಣಿಯ ಬಾಡಿಗೆಯ ಬಗ್ಗೆ ಆ ಪ್ರದೇಶದಲ್ಲಿ ಪ್ರಚಲಿತವಿರುವ ಬಾಡಿಗೆ ಅಥವಾ ದರಗಳ ಆಧಾರದ ಮೇಲೆ ರಾಜ್ಯ ಸರ್ಕಾರವು ನಿರ್ಧರಿಸತಕ್ಕುದು:

ಪರಂತು, ಹಾಗೆ ನಿರ್ಧರಿಸಲಾದ ನಷ್ಟಪರಿಹಾರದ ಮೊಬಲಗಿನಿಂದ ಬಾಧಿತನಾಗಿರುವ ಅಂಥ ವಾಹನ, ದೋಣಿ ಅಥವಾ ಪ್ರಾಣಿಯ ಮಾಲೀಕನು ಆ ವಿಷಯವನ್ನು ಒಬ್ಬ ಮಧ್ಯಸ್ಥನಿಗೆ ಕಳುಹಿಸಿಕೊಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ಸಮಯದೊಳಗಾಗಿ ಒಂದು ಅರ್ಜಿಯನ್ನು ಸಲ್ಲಿಸಿದಲ್ಲಿ, ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗು, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿರುವ ಮಧ್ಯಸ್ಥನು ನಿರ್ಧರಿಸಬಹುದಾದಷ್ಟು ಆಗಿರತಕ್ಕುದು:

ಮತ್ತೂ ಪರಂತು, ಕಡ್ಡಾಯ ಕೋರಿಕೆಗೆ ನಿಕಟ ಪೂರ್ವದಲ್ಲಿ ಆ ವಾಹನ ಅಥವಾ ದೋಣಿಯು ಕಂತು ಖರೀದಿ ಒಪ್ಪಂದದ ಕಾರಣದಿಂದ ಮಾಲೀಕನಲ್ಲದ ಇತರ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ ಆ ಕಡ್ಡಾಯ ಕೋರಿಕೆಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ

ಒಟ್ಟು ನಷ್ಟಪರಿಹಾರವೆಂದು ಈ ಉಪಪ್ರಕರಣದ ಮೇರೆಗೆ ನಿರ್ಧರಿಸಲಾದ ಮೊಬಲಗನ್ನು ಆ ವ್ಯಕ್ತಿ ಮತ್ತು ಮಾಲೀಕನು ಒಪ್ಪಿಕೊಳ್ಳಬಹುದಾದಂಥ ರೀತಿಯಲ್ಲಿ ಮತ್ತು ಒಪ್ಪಂದವು ಇಲ್ಲದಿರುವಲ್ಲಿ, ರಾಜ್ಯ ಸರ್ಕಾರವು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥನು ತೀರ್ಮಾನಿಸಬಹುದಾದ ರೀತಿಯಲ್ಲಿ ಅವರ ನಡುವೆ ಹಂಚಿಕೆ ಮಾಡತಕ್ಕುದು.

೧೬೨. ಮಾಹಿತಿಯನ್ನು ಪಡೆಯುವ ಅಧಿಕಾರ:- ರಾಜ್ಯ ಸರ್ಕಾರವು, ೧೬೦ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ ೧೬೧ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ ಆದೇಶದ ಮೂಲಕ, ಯಾವನೇ ವ್ಯಕ್ತಿಯನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯ ಸ್ವಾಧೀನದಲ್ಲಿರುವ ಮಾಹಿತಿಯನ್ನು ಒದಗಿಸುವಂತೆ ಆ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

೧೬೩. ಸ್ಥಳಾವರಣಗಳು, ಮುಂತಾದವುಗಳನ್ನು ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರಗಳು:- (೧) ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು, ಯಾವುವೇ ಸ್ಥಳಾವರಣಗಳು, ವಾಹನ, ದೋಣಿ ಅಥವಾ ಪ್ರಾಣಿ ಇವುಗಳಿಗೆ ಸಂಬಂಧಿಸಿದಂತೆ ೧೬೦ನೇ ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಬೇಕೆ ಹೇಗೆ ಮತ್ತು ಹೊರಡಿಸದಿದ್ದರೆ ಯಾವ ರೀತಿಯಲ್ಲಿ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅಥವಾ ಆ ಪ್ರಕರಣದ ಮೇರೆಗೆ ಹೊರಡಿಸಿರುವ ಯಾವುದೇ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ದೃಷ್ಟಿಯಿಂದ ಅಂಥ ಸ್ಥಳಾವರಣಗಳನ್ನು ಪ್ರವೇಶಿಸಬಹುದು ಮತ್ತು ಅಂಥ ಸ್ಥಳಾವರಣಗಳನ್ನು ಮತ್ತು ಅಲ್ಲಿರುವ ಯಾವುದೇ ವಾಹನ, ದೋಣಿ ಅಥವಾ ಪ್ರಾಣಿಯನ್ನು ಪರಿಶೀಲಿಸಬಹುದು.

(೨) ಈ ಪ್ರಕರಣದಲ್ಲಿ 'ಸ್ಥಳಾವರಣಗಳು' ಮತ್ತು 'ವಾಹನ' ಎಂಬ ಪದಗಳು ೧೬೦ನೇ ಪ್ರಕರಣದಲ್ಲಿರುವ ಅರ್ಥಗಳನ್ನೇ ಹೊಂದಿರುತ್ತವೆ.

೧೬೪. ಕಡ್ಡಾಯವಾಗಿ ಕೋರಿದ ಸ್ಥಳಾವರಣಗಳಿಂದ ಹೊರಹಾಕುವಿಕೆ:- (೧) ೧೬೦ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಕಡ್ಡಾಯವಾಗಿ ಕೋರಿದ ಯಾವುದೇ ಸ್ಥಳಾವರಣದ ಸ್ವಾಧೀನವನ್ನು ಇಟ್ಟುಕೊಂಡಿರುವ ಯಾವನೇ ವ್ಯಕ್ತಿಯನ್ನು ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಯಾವನೇ ಅಧಿಕಾರಿಯು ಕ್ಷಿಪ್ರವಾಗಿ ಹೊರಹಾಕಬಹುದು.

(೨) ಹಾಗೆ ಅಧಿಕೃತನಾದ ಯಾವನೇ ಅಧಿಕಾರಿಯು, ಬಹಿರಂಗವಾಗಿ ಕಾಣಿಸಿಕೊಳ್ಳದ ಯಾರೇ ಮಹಿಳೆಗೆ ಯುಕ್ತ ಎಚ್ಚರಿಕೆ ನೀಡಿ ಮತ್ತು ಹಿಂದೆ ಸರಿದುಕೊಳ್ಳಲು ಯುಕ್ತ ಸೌಲಭ್ಯವನ್ನು ಒದಗಿಸಿದ ತರುವಾಯ, ಯಾವುದೇ ಕಟ್ಟಡದ ಯಾವುದೇ ಬಾಗಿಲಿನ ಯಾವುದೇ ಬೀಗ ಅಥವಾ ಬೋಲ್ಟನ್ನು ಕಿತ್ತು ಹಾಕಬಹುದು ಅಥವಾ ತೆರೆಯಬಹುದು ಅಥವಾ ಬಾಗಿಲನ್ನು ಮುರಿದು ತೆಗೆಯಬಹುದು ಅಥವಾ ಹಾಗೆ ಹೊರಹಾಕುವುದನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

೧೬೫. ಸ್ಥಳಾವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡುವುದು:- (೧) ೧೬೦ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದ ಯಾವುವೇ ಸ್ಥಳಾವರಣಗಳನ್ನು ಬಿಡುಗಡೆ ಮಾಡಬೇಕಾಗಿರುವಾಗ ಅವುಗಳ ಸ್ವಾಧೀನವನ್ನು, ಆ ಸ್ಥಳಾವರಣಗಳನ್ನು ಕಡ್ಡಾಯವಾಗಿ ಕೋರಿದ್ದ ಸಮಯದಲ್ಲಿ ಯಾರಿಂದ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದ್ದಿತೋ ಆ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿ ಇರದಿದ್ದರೆ, ಅಂಥ ಸ್ಥಳಾವರಣಗಳ ಮಾಲೀಕನೆಂದು ರಾಜ್ಯ ಸರ್ಕಾರವು ಭಾವಿಸುವ ವ್ಯಕ್ತಿಗೆ ಒಪ್ಪಿಸತಕ್ಕುದು ಮತ್ತು ಹಾಗೆ ಸ್ವಾಧೀನತೆಯನ್ನು ಒಪ್ಪಿಸುವ ಮೂಲಕ, ರಾಜ್ಯ ಸರ್ಕಾರವು ಅಂಥ

ಒಪ್ಪಿಸುವಿಕೆಯ ಸಂಬಂಧದಲ್ಲಿನ ಎಲ್ಲ ಹೊಣೆಗಳಿಂದ ಪೂರ್ಣವಾಗಿ ಮುಕ್ತಗೊಳ್ಳತಕ್ಕುದು, ಆದರೆ ಆ ಸ್ಥಳಾವರಣಗಳ ಸ್ವಾಧೀನತೆಯನ್ನು ಯಾರಿಗೆ ಒಪ್ಪಿಸಲಾಗಿದ್ದಿತೋ ಆ ವ್ಯಕ್ತಿಯ ವಿರುದ್ಧ ಕಾನೂನಿನ ಯುಕ್ತ ಕ್ರಮದ ಮೂಲಕ ಆ ಸ್ಥಳಾವರಣಗಳ ಸಂಬಂಧದಲ್ಲಿ ಯಾವನೇ ಇತರ ವ್ಯಕ್ತಿಯು ಜಾರಿಗೊಳಿಸಬಹುದಾದಂಥ ಯಾವುವೇ ಹಕ್ಕುಗಳಿಗೆ ಇದು ಬಾಧಕವಾಗತಕ್ಕುದಲ್ಲ.

(೨) ೧೬೦ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾಗಿರುವ ಯಾವುವೇ ಸ್ಥಳಾವರಣಗಳ ಸ್ವಾಧೀನವನ್ನು (೧)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಒಪ್ಪಿಸಬೇಕಾಗಿದೆಯೋ ಆ ವ್ಯಕ್ತಿಯು ದೊರೆಯದಿದ್ದಲ್ಲಿ ಅಥವಾ ಅವನನ್ನು ಕೂಡಲೇ ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಅಥವಾ ಅವನ ಪರವಾಗಿ ಸ್ವಾಧೀನತೆಯನ್ನು ಸ್ವೀಕರಿಸಲು ಅಧಿಕೃತನಾದ ಯಾವನೇ ಏಜೆಂಟನು ಅಥವಾ ಯಾವನೇ ಇತರ ವ್ಯಕ್ತಿಯು ಇಲ್ಲದಿರುವಲ್ಲಿ, ರಾಜ್ಯ ಸರ್ಕಾರವು ಅಂಥ ಸ್ಥಳಾವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಿದೆ ಎಂದು ಘೋಷಿಸುವ ನೋಟೀಸನ್ನು ಅಂಥ ಸ್ಥಳಾವರಣಗಳ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಟಿಸುವಂತೆ ಮಾಡತಕ್ಕುದು ಮತ್ತು ಆ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

(೩) (೨)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ಥಳಾವರಣಗಳು ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ದಿನಾಂಕದಿಂದ ಕಡ್ಡಾಯ ಕೋರಿಕೆಗೊಳಪಟ್ಟಿರುವುದು ನಿಂತು ಹೋಗತಕ್ಕುದು ಮತ್ತು ಅವುಗಳ ಸ್ವಾಧೀನತೆಗೆ ಹಕ್ಕುಳ್ಳ ವ್ಯಕ್ತಿಗೆ ಅವುಗಳನ್ನು ಒಪ್ಪಿಸಲಾಗಿದೆಯೆಂಬುದಾಗಿ ಭಾವಿಸತಕ್ಕುದು ಮತ್ತು ರಾಜ್ಯ ಸರ್ಕಾರವು ಸದರಿ ದಿನಾಂಕದ ತರುವಾಯ ಯಾವುದೇ ಅವಧಿಗಾಗಿ ಅಂಥ ಸ್ಥಳಾವರಣಗಳ ಸಂಬಂಧದಲ್ಲಿನ ಯಾವುದೇ ನಷ್ಟಪರಿಹಾರ ಅಥವಾ ಇತರ ಕ್ಲೇಮಿಗೆ ಹೊಣೆಯಾಗತಕ್ಕುದಲ್ಲ.

೧೬೬. ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪ್ರಕಾರ್ಯಗಳ ಪ್ರತ್ಯಾಯೋಜನೆ:- ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಹಿತವಾದ ಯಾವುವೇ ಅಧಿಕಾರಗಳನ್ನು ಅಥವಾ ೧೬೦ ರಿಂದ ೧೬೫ನೇ ಪ್ರಕರಣಗಳವರೆಗಿನ ಯಾವುವೇ ಉಪಬಂಧಗಳ ಮೂಲಕ ಆ ಸರ್ಕಾರಕ್ಕೆ ಪ್ರದಾನ ಮಾಡಲಾದ ಯಾವುವೇ ಅಧಿಕಾರಗಳನ್ನು ಅಥವಾ ವಿಧಿಸಲಾದ ಯಾವುದೇ ಕರ್ತವ್ಯವನ್ನು, ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿ ಅಥವಾ ಅಧಿಕಾರಿಗಳ ವರ್ಗವು ಚಲಾಯಿಸತಕ್ಕುದೆಂದು ಅಥವಾ ನಿರ್ವಹಿಸತಕ್ಕುದೆಂದು ನಿರ್ದೇಶಿಸಬಹುದು.

೧೬೭. ಕಡ್ಡಾಯ ಕೋರಿಕೆಗೆ ಸಂಬಂಧಿಸಿದ ಯಾವುದೇ ಆದೇಶದ ಉಲ್ಲಂಘನೆಗೆ ದಂಡನೆ:- ಯಾವನೇ ವ್ಯಕ್ತಿಯು ೧೬೦ನೇ ಪ್ರಕರಣ ಅಥವಾ ೧೬೨ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

೧೬೮. (ನಿರಸನಗೊಳಿಸಲಾಗಿದೆ).

ಭಾಗ - XI
ಸಾಮಾನ್ಯ

೧೬೯. ನಿಯಮ ರಚನಾಧಿಕಾರ:- (೧) ಕೇಂದ್ರ ಸರ್ಕಾರವು, ಚುನಾವಣಾ ಆಯೋಗದೊಂದಿಗೆ ಸಮಾಲೋಚಿಸಿದ ತರುವಾಯ ರಾಜಪತ್ರದಲ್ಲಿ ಅಧಿಸೂಚನೆಯ

ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(೨) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ:-

(ಎ) ೩೩ಎ ಪ್ರಕರಣದ (೨)ನೇ ಉಪಪ್ರಕರಣದ ಮೇರೆಗಿನ ಶಪಥಪತ್ರದ ನಮೂನೆ;

(ಎಎ) ಮತದಾನ ಕೇಂದ್ರಗಳಲ್ಲಿ ಪೀಠಾಸೀನ ಅಧಿಕಾರಿಗಳ ಮತ್ತು ಮತದಾನ ಅಧಿಕಾರಿಗಳ ಕರ್ತವ್ಯಗಳು;

(ಎಎಎ) ವಂತಿಗೆ ವರದಿಯ ನಮೂನೆ;

(ಬಿ) ಮತದಾರರ ಪಟ್ಟಿಗನುಸಾರವಾಗಿ ಮತದಾರರನ್ನು ತನಿಖೆ ಮಾಡುವುದು;

(ಬಿಬಿ) ಕೇಬಲ್ ದೂರದರ್ಶನ ಜಾಲ ಮತ್ತು ಇತರ ವಿದ್ಯುನ್ಮಾನ ಮಾಧ್ಯಮದಲ್ಲಿ ಕಾಲವನ್ನು ಸಮಾನವಾಗಿ ಹಂಚಿಕೆ ಮಾಡುವ ವಿಧಾನ;

(ಸಿ) ಸಾಮಾನ್ಯವಾಗಿ ಮತ್ತು ಅನಕ್ಷರಸ್ಥ ಮತದಾರರ ಅಥವಾ ದೈಹಿಕ ಅಥವಾ ಇತರ ಅಸಮರ್ಥತೆಗೆ ಒಳಗಾಗಿರುವ ಮತದಾರರ ಸಂದರ್ಭದಲ್ಲಿ ಮತ ನೀಡುವ ರೀತಿ;

(ಡಿ) ಒಂದು ಚುನಾವಣಾ ಕ್ಷೇತ್ರದ ಒಬ್ಬ ಮತದಾರನಾಗಿದ್ದು ಮತದಾನ ಮಾಡಲು ಹಕ್ಕುಳ್ಳವನಾಗಿರದ ಮತದಾನ ಕೇಂದ್ರಗಳಲ್ಲಿ ಕರ್ತವ್ಯಕ್ಕಾಗಿ ಅಧಿಕೃತನಾದ ಅಥವಾ ನೇಮಕಗೊಂಡ ಪೀಠಾಸೀನ ಅಧಿಕಾರಿ, ಮತದಾನ ಅಧಿಕಾರಿ, ಮತದಾನ ಏಜೆಂಟ್ ಅಥವಾ ಯಾವನೇ ಇತರ ವ್ಯಕ್ತಿಯು ಮತ ನೀಡುವ ರೀತಿ;

(ಇ) ಒಬ್ಬ ವ್ಯಕ್ತಿಯು ಮತದಾರನೆಂದು ಮತದಾನ ಮಾಡಿದ ತರುವಾಯ ಮತ್ತೊಬ್ಬ ವ್ಯಕ್ತಿಯು ತಾನೇ ಅಂಥ ಮತದಾರನೆಂದು ಪ್ರತಿನಿಧಿಸಿ ನೀಡುವ ಮತದಾನದ ಸಂಬಂಧದಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಇಇ) ಮತದಾನ ಯಂತ್ರಗಳ ಮೂಲಕ ಮತ ನೀಡುವ ಮತ್ತು ದಾಖಲಿಸುವ ರೀತಿ ಮತ್ತು ಅಂಥ ಯಂತ್ರಗಳನ್ನು ಉಪಯೋಗಿಸಲಾಗುವ ಮತದಾನ ಕೇಂದ್ರಗಳಲ್ಲಿ ಮತದಾನದ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ;

(ಎಫ್) ಏಕ ವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯದ ಪದ್ಧತಿಗನುಸಾರವಾಗಿ ನಡೆಸುವ ಚುನಾವಣೆಗಳಲ್ಲಿ ಮತದಾನದ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ;

(ಜಿ) ಚುನಾವಣಾ ಫಲಿತಾಂಶದ ಘೋಷಣೆಗೆ ಮುಂಚೆ ಮತಗಳ ಮರು ಎಣಿಕೆ ಮಾಡಬಹುದಾದಂಥ ಸಂದರ್ಭಗಳೂ ಸೇರಿದಂತೆ ಮತಗಳ ಪರಿಶೀಲನೆ ಮತ್ತು ಎಣಿಕೆ;

(ಜಿಜಿ) ಮತದಾನ ಯಂತ್ರಗಳ ಮೂಲಕ ದಾಖಲಿಸಿದ ಮತಗಳ ಎಣಿಕೆಯ ಬಗೆಗಿನ ಪ್ರಕ್ರಿಯೆ;

(ಹೆಚ್) ಮತಪೆಟ್ಟಿಗೆಗಳು, ಮತದಾನ ಯಂತ್ರ, ಮತಪತ್ರಗಳು ಮತ್ತು ಇತರ ಚುನಾವಣಾ ಕಾಗದ ಪತ್ರಗಳ ಸುರಕ್ಷಿತ ಅಭಿರಕ್ಷೆ, ಅಂಥ ಕಾಗದ ಪತ್ರಗಳನ್ನು ಪರಿರಕ್ಷಿಸಿಡಬೇಕಾದ ಅವಧಿ ಮತ್ತು ಅಂಥ ಕಾಗದ ಪತ್ರಗಳ ಪರಿಶೀಲಿಸುವಿಕೆ ಮತ್ತು ಹಾಜರುಪಡಿಸುವಿಕೆ;

(ಹೆಚ್‌ಹೆಚ್) ಲೋಕಸಭೆಯನ್ನು ಅಥವಾ ಒಂದು ರಾಜ್ಯ ವಿಧಾನಸಭೆಯನ್ನು ರಚಿಸುವ ಉದ್ದೇಶಗಳಿಗಾಗಿ ನಡೆಸಬೇಕಾದ ಯಾವುದೇ ಚುನಾವಣೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ಸರ್ಕಾರವು ಒದಗಿಸಬೇಕಾದ ಸಾಮಗ್ರಿ;

(ಐ) ಈ ಅಧಿನಿಯಮದ ಮೂಲಕ ನಿಯಮಿಸಬೇಕೆಂದು ಅಗತ್ಯಪಡಿಸಲಾದ ಯಾವುವೇ ಇತರ ವಿಷಯ.

(೩) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ೩೦ ದಿನಗಳ ಅವಧಿಯವರೆಗೆ ಇರಿಸತಕ್ಕುದು, ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕುದು.

೧೭೦. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ:- ಯಾವುದೇ ಸಿವಿಲ್ ನ್ಯಾಯಾಲಯವು ಚುನಾವಣಾಧಿಕಾರಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವನೇ ಇತರ ವ್ಯಕ್ತಿಯು ಚುನಾವಣೆಯ ಸಂಬಂಧದಲ್ಲಿ ಕೈಗೊಂಡಿರುವ ಯಾವುದೇ ಕ್ರಮದ ಅಥವಾ ನೀಡಿದ ಯಾವುದೇ ತೀರ್ಮಾನದ ಕಾನೂನು ಸಮ್ಮತತೆಯನ್ನು ಪ್ರಶ್ನಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕುದಲ್ಲ.

೧೭೧. (ನಿರಸನಗೊಳಿಸಲಾಗಿದೆ).

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

ಕರ್ನಾಟಕ ಶಾಸಕರ ನಿವೃತ್ತಿ ವೇತನಗಳ ನಿಯಮಗಳು, 1979

ಅಧಿಸೂಚನೆ ಸಂ: ಎಲ್‌ಎಡಬ್ಲ್ಯೂ:43:ಎಲ್‌ಜಿಆರ್:79, ಬೆಂಗಳೂರು, ದಿನಾಂಕ: 12ನೇ ಏಪ್ರಿಲ್ 1979

ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ: 2) 11ಎ ಪ್ರಕರಣದೊಂದಿಗೆ ಓದಲಾಗುವ 15ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸಿದೆ:–

1. ಚಿಕ್ಕ ಹೆಸರು ಮತ್ತು ಪ್ರಾರಂಭ:– ಈ ನಿಯಮಗಳನ್ನು, ಕರ್ನಾಟಕ ಶಾಸಕರ ನಿವೃತ್ತಿ ವೇತನಗಳ ನಿಯಮಗಳು, 1979 ಎಂದು ಕರೆಯತಕ್ಕದ್ದು.

(2) ಅವು 26ನೇ ಡಿಸೆಂಬರ್, 1978ರಂದು ಜಾರಿಗೆ ಬಂದಿವೆಯೆಂದು ಭಾವಿಸತಕ್ಕದ್ದು.

2. **ಪರಿಭಾಷೆಗಳು**:– ಈ ನಿಯಮಗಳು, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956, (1957ರ ಕರ್ನಾಟಕ ಅಧಿನಿಯಮ ಸಂಖ್ಯೆ:2);

(ಬಿ) **"ಪರಿಷತ್ತು"** ಎಂದರೆ,
ಕರ್ನಾಟಕ ವಿಧಾನ ಪರಿಷತ್ತು;

(ಸಿ) **"ನಮೂನೆ"** ಎಂದರೆ, ಈ ನಿಯಮಗಳಿಗೆ ಅನುಬಂಧಿಸಿದ ನಮೂನೆ;

(ಡಿ) **"ಸದನ"** ಎಂದರೆ, ಕರ್ನಾಟಕ ವಿಧಾನ ಪರಿಷತ್ತು;

(ಇ) **"ಪಿಂಚಣಿದಾರ"** ಎಂದರೆ, ಅಧಿನಿಯಮದ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹನಾಗಿರುವ ವ್ಯಕ್ತಿ;

(ಎಫ್) **"ನಿಯಮಗಳು"** ಎಂದರೆ, ಕರ್ನಾಟಕ ಶಾಸಕರ ನಿವೃತ್ತಿ ವೇತನ ನಿಯಮಗಳು, 1979, ಮತ್ತು

(ಜಿ) **"ಕಾರ್ಯದರ್ಶಿ"** ಎಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಅಧೀನ ಕಾರ್ಯದರ್ಶಿ (ಲೆಕ್ಕಪತ್ರ) ಇವರನ್ನು ಒಳಗೊಳ್ಳುತ್ತದೆ;

3. ಮಂಜೂರಾತಿ ಪ್ರಾಧಿಕಾರ:– ಕಾರ್ಯದರ್ಶಿಯು, ಅಧಿನಿಯಮದ ಮೇರೆಗೆ ಅರ್ಹರಾದ ವ್ಯಕ್ತಿಗಳಿಗೆ ನಿವೃತ್ತಿ ವೇತನ ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

4. ಅರ್ಜಿ:– ಈ ನಿಯಮಗಳ ಮೇರೆಗೆ ನಿವೃತ್ತಿ ವೇತನ ಅಥವಾ ಕುಟುಂಬ ನಿವೃತ್ತಿ ವೇತನದ ಮಂಜೂರಾತಿಗಾಗಿ ಅರ್ಜಿಯನ್ನು ಸಂದರ್ಭಾನುಸಾರ, ನಮೂನೆ I ಅಥವಾ II ರಲ್ಲಿ ಕಾರ್ಯದರ್ಶಿಗೆ

ಸಲ್ಲಿಸತಕ್ಕದ್ದು. ಅರ್ಜಿಯೊಂದಿಗೆ ಅರ್ಜಿದಾರನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದ ಮೂರು ಪ್ರತಿಗಳನ್ನು ಮತ್ತು ರಾಜ್ಯ ಸರ್ಕಾರದ ಪತ್ರಾಂಕಿತ ಅಧಿಕಾರಿಯು ಯುಕ್ತವಾಗಿ ದೃಢೀಕರಿಸಿದ ಆತನ ಅಥವಾ ಆಕೆಯ ಮಾದರಿ ಹಸ್ತಾಕ್ಷರದ ನಾಲ್ಕು ಸೆಟ್ಟುಗಳನ್ನು ಲಗತ್ತಿಸಿರತಕ್ಕದ್ದು.

5. ನಿವೃತ್ತಿ ವೇತನದ ಮಂಜೂರಾತಿ:– ಅರ್ಜಿಯನ್ನು ಸ್ವೀಕರಿಸಿದ ನಂತರ ಮತ್ತು ಅಧಿನಿಯಮದ 11ಎ ಪ್ರಕರಣ ಅಥವಾ 11ಬಿ ಪ್ರಕರಣಕ್ಕೆ ಅನುಸಾರವಾಗಿ ನಿವೃತ್ತಿ ವೇತನಕ್ಕಾಗಿನ ಅರ್ಜಿಯ ಅರ್ಹತೆಯ ಬಗ್ಗೆ ಮನವರಿಕೆ ಮಾಡಿಕೊಂಡ ತರುವಾಯ, ಕಾರ್ಯದರ್ಶಿಯು, ನಿವೃತ್ತಿ ವೇತನ ಅಥವಾ ಕುಟುಂಬ ನಿವೃತ್ತಿ ವೇತನವನ್ನು ಮಂಜೂರು ಮಾಡಿ ನಮೂನೆ–III ಅಥವಾ IVರಲ್ಲಿ ಆದೇಶವನ್ನು ಹೊರಡಿಸಿ, ಸಂಬಂಧಪಟ್ಟ ವ್ಯಕ್ತಿಗೆ ಮತ್ತು ಅಕೌಂಟೆಂಟ್ ಜನರಲ್, ಕರ್ನಾಟಕ ಇವರಿಗೆ ಕಳುಹಿಸತಕ್ಕದ್ದು.

6. ನಿವೃತ್ತಿ ವೇತನದ ಕ್ಲೇಮು ಮತ್ತು ಸಂದಾಯ:– ನಿವೃತ್ತಿ ವೇತನ ಅಥವಾ ಕುಟುಂಬ ನಿವೃತ್ತಿ ವೇತನವನ್ನು ನಮೂನೆ–V ಮತ್ತು VIರಲ್ಲಿ ಕ್ಲೇಮು ಮಾಡತಕ್ಕದ್ದು ಮತ್ತು ಅದನ್ನು ಕಾರ್ಯದರ್ಶಿಯು ಚೆಕ್ ಮೂಲಕ ಅಥವಾ ಪಿಂಚಣಿದಾರನ ಬ್ಯಾಂಕ್ ಖಾತೆಗೆ ಆತನು ಹಾಗೆ ಇಚ್ಛಿಸಿದರೆ ಜಮೆ ಮಾಡುವ ಮೂಲಕ ಸಂದಾಯ ಮಾಡತಕ್ಕದ್ದು.

7. ವಿಳಾಸ ಬದಲಾವಣೆ:– ಪಿಂಚಣಿದಾರನು ವಿಳಾಸದಲ್ಲಿನ ಬದಲಾವಣೆ ಯಾವುದಾದರೂ ಇದ್ದರೆ, ಅದನ್ನು ಮೂರು ತಿಂಗಳುಗಳಿಗಿಂತ ಹೆಚ್ಚಾಗಿ ವಾಸವಾಗಿರುವ ತನ್ನ ನಿವಾಸದ ವಿಳಾಸವನ್ನು ತಿಳಿಸುವುದು ಆತನ ಕರ್ತವ್ಯವಾಗಿರತಕ್ಕದ್ದು.

8. ನಿವೃತ್ತಿ ವೇತನದ ಸಂದಾಯದ ದಿನಾಂಕ:– ಈ ನಿಯಮಗಳ ಮೇರೆಗೆ ಸಂದಾಯ ಮಾಡಿದ ನಿವೃತ್ತಿ ವೇತನವು ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಸಂದಾಯನೀಯವಾಗಿರತಕ್ಕದ್ದು ಮತ್ತು ಅದನ್ನು ಇಡಿಗಂಟಾಗಿ ಪರಿವರ್ತಿಸತಕ್ಕದ್ದಲ್ಲ. ನಿವೃತ್ತಿ ವೇತನವು ಯಾವ ತಿಂಗಳಿಗೆ ಅದು ಸಂಬಂಧಿಸಿದೆಯೋ ಆ ತಿಂಗಳು ಕೊನೆಗೊಂಡ ನಂತರ ಯಾವುದೇ ಸಂದಾಯಕ್ಕಾಗಿ ಬಾಕಿ ಇರತಕ್ಕದ್ದು.

9. ಪಿಂಚಣಿದಾರನ ಮರಣ:– ಪಿಂಚಣಿದಾರನು ಮರಣ ಹೊಂದಿದ ಸಂದರ್ಭದಲ್ಲಿ, ಆತನ ಕಾನೂನುಬದ್ಧ ವಾರಸುದಾರನು, ಸಂದಾಯವಾಗದ ಬಾಕಿಗಳನ್ನು ಒಳಗೊಂಡು ಆತನ ಮರಣದ ದಿನಾಂಕದವರೆಗೆ ನಿವೃತ್ತಿ ವೇತನದ ಬಾಕಿ ಮೊತ್ತವನ್ನು ಪಡೆಯಲು ಅರ್ಹನಾಗಿರತಕ್ಕದ್ದು.

10. ನಿವೃತ್ತಿ ವೇತನದ ಅವಧಿಯನ್ನು ಲೆಕ್ಕಹಾಕುವಲ್ಲಿ ತಪ್ಪು:– ಈ ನಿಯಮಗಳ ಮೇರೆಗೆ ಯಾರೇ ವ್ಯಕ್ತಿಗೆ ಮಂಜೂರಾದ ನಿವೃತ್ತಿ ವೇತನವು, ನಿವೃತ್ತಿ ವೇತನದ ಮಂಜೂರಾತಿಗಾಗಿ ಆತನ ಅರ್ಹತೆಯ ಅವಧಿಯ ಮೌಲ್ಯಾಂಕಣದಲ್ಲಿ ಯಾವುದೇ ತಪ್ಪು ಇರುವುದೆಂದು ಕಂಡು ಬಂದರೆ ಅದು ರದ್ದುಪಡಿಸಲು ಅಥವಾ ಮಾರ್ಪಾಡಿಸುವುದಕ್ಕೆ ಗುರಿಯಾಗುತ್ತದೆ.

11. ಅಧಿಕ ಸಂದಾಯ ಅಥವಾ ಅನಿಯಮಿತ ಸಂದಾಯ, ಇತ್ಯಾದಿ:– ಯಾವುದೇ ಅಧಿಕ ಸಂದಾಯ ಮಾಡಿದರೆ, ಹಾಗೇ ಅಧಿಕ ಸಂದಾಯ ಮಾಡಿದ ಮೊತ್ತವನ್ನು ತರುವಾಯದ ಸಂದಾಯಗಳಲ್ಲಿ ಸರಿಹೊಂದಿಸತಕ್ಕದ್ದು ಅಥವಾ ಭೂ ಕಂದಾಯ ಬಾಕಿ ಎಂದು ವಸೂಲು ಮಾಡತಕ್ಕದ್ದು.

12. ಯಾವುದೇ ಬಾಕಿಗಳಿದ್ದರೆ ಅವುಗಳ ವಸೂಲಾತಿ:– ಮನೆ ಬಾಡಿಗೆ, ಅಥಿತಿ ಶುಲ್ಕಗಳು, ದೂರವಾಣಿ ಶುಲ್ಕಗಳು, ಕಾರುಬಾಡಿಗೆ ಶುಲ್ಕಗಳು, ಗ್ರಂಥಾಲಯ ಪುಸ್ತಕಗಳ ನಷ್ಟ ಅಥವಾ ಪಿಂಚಣಿದಾರನು ಸದನದ ಸದಸ್ಯನಾಗಿದ್ದಾಗ ಆತನಿಂದ ವಿಧಾನಮಂಡಲ ಸಚಿವಾಲಯಕ್ಕೆ ಬರಬೇಕಾದ ಯಾವುದೇ ಇತರ ಬಾಕಿಗಳು ಇದ್ದರೆ ಅವುಗಳನ್ನು ಯಾವುದೇ ಕಾನೂನಿನ ಮೇರೆಗೆ ಅನುಮತಿಸಬಹುದಾದ ವಸೂಲಾತಿಯ ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ ಆತನಿಗೆ ಸಂದಾಯ ಮಾಡಬೇಕಾದ ನಿವೃತ್ತಿ ವೇತನದಿಂದ ವಸೂಲಿ ಮಾಡತಕ್ಕದ್ದು.

13. ಕಾರ್ಯದರ್ಶಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:–ಈ ನಿಯಮಗಳಿಗೆ ಒಳಪಡುವ ಎಲ್ಲ ವಿಷಯಗಳ ಮೇಲೆ ಕಾರ್ಯದರ್ಶಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

ಕರ್ನಾಟಕ ಸರ್ಕಾರದ ವ್ಯವಹರಣೆಗಳು

ವಿಷಯ: ಕರ್ನಾಟಕದಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಶಾಸಕರ ನಿವೃತ್ತಿ ವೇತನಗಳ ಸಂದಾಯ.

ಓದಲಾಗಿದೆ:
1) ಕಾರ್ಯದರ್ಶಿ, ಕರ್ನಾಟಕ ವಿಧಾನಮಂಡಲ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:ಎಸ್ಇಸಿವೈ: ಕೆಎಲ್ಎಸ್–174/90, ದಿನಾಂಕ: 26.11.1990 ರೊಂದಿಗೆ ಮಾಡಿದ ಪತ್ರ ವ್ಯವಹಾರ.
2) ಚೀಫ್ ಅಕೌಂಟೆಂಟ್, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬಾಂಬೆ ಇವರ ಪತ್ರ ಸಂಖ್ಯೆ:ಜಿಎ/ಎನ್ಬಿ/ನಂ–476/ಸಿಎ–164 (II) (20–ಎಂಎಲ್ಎ) 90–91, ದಿನಾಂಕ: 20.08.1990.
3) ಅಕೌಂಟೆಂಟ್ ಜನರಲ್, ಬೆಂಗಳೂರು ಇವರ ಪತ್ರ ಸಂ: ಪಿಎಂ/ಜಿ– III/117, ದಿನಾಂಕ: 22.11.1990.

ಪ್ರಸ್ತಾವನೆ:

ಪ್ರಸ್ತುತ ಇರುವ ಪ್ರಕ್ರಿಯೆ ಮೇರೆಗೆ, ಶಾಸಕರ ನಿವೃತ್ತಿ ವೇತನವನ್ನು, ವಿಧಾನಸಭೆ ಸಚಿವಾಲಯವು ರಿಸರ್ವ್ ಬ್ಯಾಂಕ್ ಬರೆದ ಚೆಕ್ಕುಗಳ ಮೂಲಕ ಸಂದಾಯ ಮಾಡಲಾಗುವುದು. ಪಿಂಚಣಿದಾರರು ಪ್ರತಿ ತಿಂಗಳು ಬಿಲ್ಲನ್ನು ಹಾಜರುಪಡಿಸಿ ಅದರ ಕ್ಲೇಮುಗಳನ್ನು ಮಾಡಬೇಕು ಮತ್ತು ಬಿಲ್ಲನ್ನು ಅಂಗೀಕರಿಸಿದ ತರುವಾಯ ಚೆಕ್ಕುಗಳನ್ನು ಬರೆಯಲಾಗುವುದು. ಚೆಕ್ಕುಗಳನ್ನು ಪಿಂಚಣಿದಾರರು ಇಚ್ಛಿಸಿದಂಥ ಆಯಾಯ ಬ್ಯಾಂಕುಗಳಿಗೆ ಕಳುಹಿಸಲಾಗುವುದು. ಶಾಸಕರು ರಾಜ್ಯದ ಎಲ್ಲಾ ಭಾಗಗಳಲ್ಲಿ ಮತ್ತು ಅವರಲ್ಲಿ ಕೆಲವರು ರಾಜ್ಯದ ಹೊರಗೂ ಸಹ ವಾಸಿಸುತ್ತಿರುವುದರಿಂದ, ಅವರು ನಿವೃತ್ತಿ ವೇತನ ಪಡೆಯಲು ಬಹಳ ವಿಳಂಬವಾಗುತ್ತಿದೆ. ಆದುದರಿಂದ, ಅವರು ಸಂಸತ್ತಿನ ಮಾಜಿ ಸದಸ್ಯರ ನಿವೃತ್ತಿ ವೇತನಗಳು ಮತ್ತು ಸೇವಾ ನಿವೃತ್ತಿ ವೇತನಗಳ ಸಂದರ್ಭದಲ್ಲಿ ಮಾಡಲಾಗುತ್ತಿರುವಂತೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಂದಾಯ ಮಾಡುವ ಯೋಜನೆಯನ್ನು ಪರಿಚಯಿಸಲು ನಿರಂತರವಾಗಿ ಕೋರುತ್ತಿದ್ದಾರೆ. ಈ ಪ್ರಸ್ತಾವವನ್ನು ಅಕೌಂಟೆಂಟ್ ಜನರಲ್, ಕರ್ನಾಟಕ, ಬೆಂಗಳೂರು ಇವರೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗಿದೆ ಮತ್ತು ಭಾರತದ ರಿಸರ್ವ್ ಬ್ಯಾಂಕು ಮತ್ತು ಅಕೌಂಟೆಂಟ್ ಜನರಲ್ (ಎ&ಇ) ಕರ್ನಾಟಕ, ಬೆಂಗಳೂರು ಇವರ ಅನುಮೋದನೆಯೊಂದಿಗೆ ಈ ಮುಂದಿನ ಯೋಜನೆಯನ್ನು ಸಿದ್ಧಪಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಎಫ್ಡಿ/2/ಟಿಟಿಸಿ/89, ಬೆಂಗಳೂರು, ದಿನಾಂಕ: 01.04.1991

ಮೇಲೆ ವಿವರಿಸಿದ ಸಂದರ್ಭಗಳಲ್ಲಿ, ಸರ್ಕಾರವು, ಕರ್ನಾಟಕ ರಾಜ್ಯದಲ್ಲಿ ಮಾಜಿ ಶಾಸಕರಿಗೆ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ನಿವೃತ್ತಿ ವೇತನ ಸಂದಾಯ ಮಾಡುವ ಯೋಜನೆಯನ್ನು ಪರಿಚಯಿಸಲು ಹರ್ಷಿಸುತ್ತದೆ. ಯೋಜನೆಯು 1ನೇ ಜೂನ್ 1991ರಿಂದ ಜಾರಿಗೆ ಬರತಕ್ಕದ್ದು.

1. ವ್ಯಾಪ್ತಿ ಮತ್ತು ಅನ್ವಯ:

(i) ಯೋಜನೆಯು ರಾಜ್ಯ ವಿಧಾನಮಂಡಲದ ಎಲ್ಲಾ ಪಿಂಚಣಿದಾರರನ್ನು ಮತ್ತು ವಿಧಾನಮಂಡಲದ ಮೃತ ಹಾಲಿ ಸದಸ್ಯರ ಕುಟುಂಬಗಳಿಗೆ ಸಂದಾಯ ಮಾಡಬೇಕಾದ ಕುಟುಂಬ ವೇತನವನ್ನು ಒಳಗೊಳ್ಳುತ್ತದೆ. ಭಾರತೀಯ ಸ್ಟೇಟ್ ಬ್ಯಾಂಕ್ ಮತ್ತು ಅದರ ಸಹಾಯಕ ಬ್ಯಾಂಕುಗಳು ಮತ್ತು ಬೆಂಗಳೂರು ಮಹಾನಗರದಲ್ಲಿನ ಎಲ್ಲಾ 20 ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಮತ್ತು ಕರ್ನಾಟಕದಲ್ಲಿನ ಉಳಿದ ಭಾರತೀಯ ಸ್ಟೇಟ್ ಬ್ಯಾಂಕು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯ, ಇಂಡಿಯನ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ವಿಜಯಾ ಬ್ಯಾಂಕ್ ಮತ್ತು ಕಾರ್ಪೋರೇಷನ್ ಬ್ಯಾಂಕುಗಳ ಶಾಖೆಗಳ ಮೂಲಕ ಯೋಜನೆಯನ್ನು ನಿರ್ವಹಿಸಲಾಗುವುದು.

(ii) ನಿವೃತ್ತಿ ವೇತನವನ್ನು ಪಿಂಚಣಿದಾರರಿಗೆ ಅವರು ಆಯ್ಕೆ ಮಾಡಿಕೊಳ್ಳುವ ಉಳಿತಾಯ/ ಚಾಲ್ತಿ ಖಾತೆಗೆ ಜಮೆ ಮಾಡುವ ಮೂಲಕ ಸಂದಾಯ ಮಾಡಲಾಗುವುದು. ನಿವೃತ್ತಿ ವೇತನವನ್ನು, ಕರ್ನಾಟಕ ಶಾಸಕರ ನಿವೃತ್ತಿ ವೇತನ ನಿಯಮಗಳು, 1979ರ 8ನೇ ನಿಯಮದ ಮೇರೆಗೆ, ನಿವೃತ್ತಿ ವೇತನವು ಅದು ಸಂಬಂಧಿಸಿದ ತಿಂಗಳ ಮುಕ್ತಾಯದ ನಂತರ ಮಾತ್ರವೇ ಸಂದಾಯಕ್ಕೆ ಬಾಕಿ ಇರುವುದರಿಂದ, ತಿಂಗಳಿನ ಕೊನೆಯ ಮುಂಬರುವ ದಿನಾಂಕದ ನಂತರ ಪಿಂಚಣಿದಾರರ ಲೆಕ್ಕಖಾತೆಗೆ ಜಮೆ ಮಾಡಲಾಗುವುದು. ಕೆಲವು ಅಸಾಧಾರಣ ಸಂದರ್ಭಗಳಲ್ಲಿ, ಯಾವುದೇ ಕಾರಣಗಳಿಂದಾಗಿ ಮುಂಬರುವ ತಿಂಗಳ ಮೊದಲ ಕೆಲಸದ ದಿನದಂದು ನಿವೃತ್ತಿ ವೇತನವನ್ನು ಜಮೆ ಮಾಡಲಾಗದಿದ್ದರೆ, ಅದರ ತರುವಾಯ ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲೂ, ನಿವೃತ್ತಿ ವೇತನ ಬಾಕಿ ಇರುವ ತರುವಾಯದ ತಿಂಗಳಿನ 7ನೇ ದಿನಾಂಕಕ್ಕೆ ಮೊದಲು ಜಮೆ ಮಾಡಲಾಗುವುದೆಂದು ಖಚಿತಪಡಿಸತಕ್ಕದ್ದು. ಈ ಉದ್ದೇಶಕ್ಕಾಗಿ, ಯಾವುದೇ ಬಿಲ್ಲುಗಳನ್ನು ಸಲ್ಲಿಸುವ ಅಗತ್ಯತೆ ಇರುವುದಿಲ್ಲ. ಈ ಸೌಲಭ್ಯವನ್ನು ಪಡೆಯುವ ಪ್ರತಿಯೊಬ್ಬ ಪಿಂಚಣಿದಾರನು, ಈಗಾಗಲೇ ತನ್ನ ಹೆಸರಿನಲ್ಲಿ ಒಂದು ಉಳಿತಾಯ/ ಚಾಲ್ತಿ ಖಾತೆಯನ್ನು ಹೊಂದಿದ್ದರ ಹೊರತು ಖಾತೆಯನ್ನು ತೆರೆಯುವುದು. ಜಂಟಿ ಖಾತೆಗೆ ಜಮೆಯನ್ನು ಅನುಮತಿಸಲಾಗಿಲ್ಲ. ನಿವೃತ್ತಿ ವೇತನವನ್ನು ನಗದು ರೂಪದಲ್ಲಿ ಅಥವಾ ಜಂಟಿಯಾಗಿ ಅಥವಾ ಎರಡು ರೀತಿಯಲ್ಲಾಗಲಿ ಅಥವಾ ವಾರಸುದಾರರ (ಸರ್ವೈವರ್) ಖಾತೆಯಲ್ಲಾಗಲಿ ಸಂದಾಯ ಮಾಡುವುದಿಲ್ಲ. ಪಿಂಚಣಿದಾರನ ಯಾವ ಖಾತೆಗೆ ನಿವೃತ್ತಿ ವೇತನವನ್ನು ಜಮೆ ಮಾಡಲಾಗುವುದೋ ಆ ಖಾತೆಯನ್ನು ಆತನ ಪರವಾಗಿ ಮುಖ್ತ್ಯಾರ್‌ನಾಮೆ (ಪವರ್ ಆಫ್ ಅಟಾರ್ನಿ) ಹೊಂದಿರುವವನು ನಿರ್ವಹಿಸಲು ಅನುಮತಿಸಲಾಗುವುದಿಲ್ಲ.

2. **ಬ್ಯಾಂಕುಗಳಿಗೆ ನಿವೃತ್ತಿ ವೇತನದ ವರ್ಗಾವಣೆ ಕೆಲಸಕ್ಕಾಗಿ ಮತ್ತು ಈ ಯೋಜನೆಯಡಿ ನಿವೃತ್ತಿ ವೇತನವನ್ನು ಲೆಕ್ಕಹಾಕುವುದಕ್ಕಾಗಿ ಅನುಸರಿಸಬೇಕಾದ ಸವಿವರ ಕಾರ್ಯವಿಧಾನವನ್ನು ಈ ಕೆಳಗೆ ರೂಪಿಸಲಾಗಿದೆ:**

(i) ನಿವೃತ್ತಿ ವೇತನ ಸಂದಾಯ ಆದೇಶವನ್ನು (ಎರಡೂ ಅರ್ಧಗಳು) ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಸಿದ್ದಪಡಿಸಿ, ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸಂಬಂಧಪಟ್ಟ ಜಿಲ್ಲಾ ಖಜಾನೆಗಳಿಗೆ ಸಂದಾಯಕ್ಕೆ ಏರ್ಪಾಡು ಮಾಡಲು ಕಳುಹಿಸುವುದು. ಅಕೌಂಟಂಟ್ ಜನರಲ್ (ಎ ಮತ್ತು ಇ), ಕರ್ನಾಟಕ– ಇವರು, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ಕಳುಹಿಸಿದ ನಿವೃತ್ತಿ ವೇತನ ಸಂದಾಯ ಆದೇಶಗಳಿಗೆ ಮನ್ನಣೆ ನೀಡಲು ಜಿಲ್ಲಾ ಖಜಾನೆಗಳಿಗೆ ಅಧಿಕಾರ ನೀಡುವುದು. ಪ್ರತಿಯೊಂದು ಸಾರ್ವಜನಿಕ ವಲಯದ ಬ್ಯಾಂಕು, ಜಿಲ್ಲೆಯಲ್ಲಿರುವ ಅವುಗಳ ವಿವಿಧ ಶಾಖೆಗಳ ಮೂಲಕ ನಿವೃತ್ತಿ ವೇತನಗಳ ವಿತರಣೆ ಮತ್ತು ಲೆಕ್ಕಹಾಕುವುದಕ್ಕೆ ಸಂಬಂಧಿಸಿದ ಕೆಲಸವನ್ನು ಸಮನ್ವಯಗೊಳಿಸಲು ಪ್ರತಿಯೊಂದು ಜಿಲ್ಲೆಯ ಕೇಂದ್ರ ಕಾರ್ಯಸ್ಥಾನಗಳಲ್ಲಿ ಸಂಯೋಜಕ ಶಾಖೆಗಳನ್ನು ನಾಮನಿರ್ದೇಶಿಸತಕ್ಕದ್ದು/ ಹೆಸರಿಸತಕ್ಕದ್ದು. ಸಂಯೋಜಕ ಶಾಖೆಯ ಹೆಸರುಗಳು ಮತ್ತು ವಿಳಾಸಗಳನ್ನು ಸಂಬಂಧಪಟ್ಟ ಜಿಲ್ಲಾ ಖಜಾನೆ ಅಧಿಕಾರಿ; ಅಕೌಂಟಂಟ್ ಜನರಲ್ (ಎ & ಇ), ಕರ್ನಾಟಕ; ಖಜಾನೆಗಳ ನಿರ್ದೇಶಕರು, ಬೆಂಗಳೂರು; ಕಾರ್ಯದರ್ಶಿ, ಕರ್ನಾಟಕ ವಿಧಾನ

ಪರಿಷತು–ಇವರುಗಳಿಗೆ ಜಿಲ್ಲೆಯಲ್ಲಿನ ಇತರ ಶಾಖೆಗಳ ಸಂಪೂರ್ಣ ಪಟ್ಟಿ ಮತ್ತು ಅವರ ವಿಳಾಸ ಸಹಿತವಾಗಿ ಕಳುಹಿಸತಕ್ಕದ್ದು.

(ii) ಮೇಲೆ ನಿರ್ದಿಷ್ಟಪಡಿಸಿದ ಮಾಹಿತಿಯನ್ನು ಸ್ವೀಕರಿಸಿದ ನಂತರ, ಖಜಾನೆ ಅಧಿಕಾರಿಯು, ವ್ಯವಸ್ಥಾಪಕರು, ಭಾರತೀಯ ರಿಸರ್ವ್ ಬ್ಯಾಂಕು/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಕೇಂದ್ರದಲ್ಲಿ ಸರ್ಕಾರಿ ವ್ಯವಹರಣೆಗಳನ್ನು ನಡೆಸುವ ಅದರ ಸಹಾಯಕ ಬ್ಯಾಂಕುಗಳು– ಇವು ಮೇಲು ರುಜು ಮಾಡಿದ ಅವರ ಮಾದರಿ ಹಸ್ತಾಕ್ಷರದೊಂದಿಗೆ ಖಜಾನೆಯ ವಿಶೇಷ ಮೊಹರಿನ ಪ್ರತಿಯನ್ನು, ನೋಂದಾಯಿತ ಕವರಿನಲ್ಲಿ ಪ್ರತಿಯೊಂದು ಬ್ಯಾಂಕಿನ ಸಂಯೋಜಕ ಶಾಖೆಯ ವ್ಯವಸ್ಥಾಪಕನಿಗೆ/ಏಜಂಟನಿಗೆ ಕಳುಹಿಸುವರು. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ಜಿಲ್ಲಾ ಖಜಾನೆ ಅಧಿಕಾರಿಯಿಂದ ಸ್ವೀಕರಿಸಿದ ನಿವೃತ್ತಿ ವೇತನ ಸಂದಾಯ ಆದೇಶಗಳನ್ನು (ಎರಡು ಅರ್ಧಗಳು) ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ ಸಚಿವಾಲಯ ಮತ್ತು ಅಕೌಂಟಂಟ್ ಜನರಲ್ (ಎ & ಇ), ಕರ್ನಾಟಕ ಮತ್ತು ಖಜಾನೆಗಳ ನಿರ್ದೇಶಕರು, ಬೆಂಗಳೂರು ಇವರ ಸೂಚನೆ ಮೇರೆಗೆ ಸಾರ್ವಜನಿಕ ವಲಯ ಬ್ಯಾಂಕುಗಳ ನಾಮನಿರ್ದೇಶಿತ ಸಂಯೋಜಕ ಶಾಖೆಗಳಿಗೆ ಅವರ ವಿಶೇಷ ಮೊಹರಿನಡಿ ಅವರಿಗೆ ಕಳುಹಿಸತಕ್ಕದ್ದು. ದಸ್ತಾವೇಜುಗಳನ್ನು ಸಂದೇಶ ಅಥವಾ ನೋಂದಾಯಿತ ಅಂಚೆ ಮೂಲಕ ಸಂಯೋಜಕ ಶಾಖೆಗೆ ಕಳುಹಿಸಲಾಗುವುದು. ಪಿಂಚಣಿದಾರನಿಗೆ, ಭವಿಷ್ಯದ ನಿವೃತ್ತಿ ವೇತನ ಸಂದಾಯಗಳನ್ನು ಸ್ವೀಕರಿಸಲು ಆತನು ನಿರ್ದಿಷ್ಟಪಡಿಸಿದ ಬ್ಯಾಂಕನ್ನು ಸಂಪರ್ಕಿಸಲು ಸಲಹೆ ನೀಡಲಾಗಿದೆ.

(iii) ಮೇಲಿನ ದಸ್ತಾವೇಜುಗಳನ್ನು ಕಳುಹಿಸುವಾಗ, **ಕರ್ನಾಟಕ ವಿಧಾನಸಭೆ ಸಚಿವಾಲಯವು,** ಸಂದಾಯ ಮಾಡಲಾಗಿರುವ ನಿವೃತ್ತಿ ವೇತನವನ್ನು ಯಾವ ತಿಂಗಳಿನವರೆಗೆ ಸಂದಾಯ ಮಾಡಲಾಗಿದೆಯೋ ಅದನ್ನು ಮತ್ತು ಯಾವ ತಿಂಗಳಿನಿಂದ ನಿವೃತ್ತಿ ವೇತನವನ್ನು ಸಂಬಂಧಪಟ್ಟ ಸಾರ್ವಜನಿಕ ವಲಯ ಬ್ಯಾಂಕುಗಳ ಶಾಖೆಗಳು ವ್ಯವಸ್ಥೆ ಮಾಡಿರುವವೋ ಅದನ್ನು ಸ್ಪಷ್ಟವಾಗಿ ಸೂಚಿಸುವುದು. ತಿಂಗಳಿನ 15ನೇ ದಿನಾಂಕದವರೆಗೆ ಜಿಲ್ಲಾ ಖಜಾನೆಯು ಸ್ವೀಕರಿಸಿದ ನಿವೃತ್ತಿ ವೇತನ ಆದೇಶಗಳನ್ನು ಜಿಲ್ಲಾ ಖಜಾನೆಯು ಬರುವ ತಿಂಗಳಿನ ಮೊದಲ ದಿನಾಂಕದಂದು ಸಾರ್ವಜನಿಕ ವಲಯ ಬ್ಯಾಂಕುಗಳ ಸಂದಾಯ ಮಾಡುವ ಶಾಖೆಗಳ ಮೂಲಕ ನಿವೃತ್ತಿ ವೇತನ ಪ್ರಾರಂಭವಾಗುವುದಕ್ಕೆ ಸೌಲಭ್ಯ ಕಲ್ಪಿಸಲು ತಿಂಗಳಿನ 25ನೇ ದಿನಾಂಕದ ವೇಳೆಗೆ ಸಂಬಂಧಪಟ್ಟ ಸಾರ್ವಜನಿಕ ವಲಯ ಬ್ಯಾಂಕುಗಳ ಸಂಯೋಜಕ ಶಾಖೆಗೆ ಕಳುಹಿಸುವುದು.

(iv) ಪ್ರತಿಯೊಂದು ಜಿಲ್ಲಾ ಖಜಾನೆಯು, ಸಾರ್ವಜನಿಕ ವಲಯ ಬ್ಯಾಂಕುಗಳ ಸಂಯೋಜಕ ಶಾಖೆಗಳಿಗೆ ಅದು ಕಳುಹಿಸಿದ ಎಲ್ಲಾ ನಿವೃತ್ತಿ ವೇತನ ಆದೇಶಗಳ ದಾಖಲೆಗಳನ್ನು ನಿರ್ವಹಿಸುವುದು. ಕರ್ನಾಟಕ **ವಿಧಾನಸಭೆ** ಸಚಿವಾಲಯವು ಕಳುಹಿಸಿದ ಜ್ಞಾಪನ ಪತ್ರಗಳ ನಕಲು ಪ್ರತಿಯನ್ನು ಜಿಲ್ಲಾ ಖಜಾನೆಯಲ್ಲಿ ಇಡಲಾಗುತ್ತದೆ.

3. **ಸಂಯೋಜಕ ಶಾಖೆಯಿಂದ ಸಂದಾಯ ಮಾಡುವ ಬ್ಯಾಂಕಿಗೆ ನಿವೃತ್ತಿ ವೇತನ ಆದೇಶಗಳ ರವಾನೆ:–**

(i) ಬ್ಯಾಂಕುಗಳು, ಅವುಗಳ ಸಂಯೋಜಕ ಶಾಖೆಗಳಲ್ಲಿ ಸಾರ್ವಜನಿಕ ವಲಯ ಬ್ಯಾಂಕುಗಳ ಮೂಲಕ ಸಂದಾಯ ಮಾಡಬೇಕಾದ ಅಧಿಕೃತ ನಿವೃತ್ತಿ ವೇತನಗಳ ಸೂಚಿಯಾಗಿ ನೀಡಲು ಅನುಬಂಧ–ಎ ಯಲ್ಲಿನ ನಿಗದಿತ ನಮೂನೆಯಲ್ಲಿ ಒಂದು ರಿಜಿಸ್ಟರನ್ನು ನಿರ್ವಹಿಸುವುದು.

(ii) ಸಂಯೋಜಕ ಶಾಖೆಯು, ಅದರ ಬಳಿ ಇರುವ ವಿಶೇಷ ಮೊಹರು ಮತ್ತು ಮಾದರಿ ಹಸ್ತಾಕ್ಷರದ ದಾಖಲೆಯೊಂದಿಗೆ ನಿವೃತ್ತಿ ವೇತನ ಆದೇಶವನ್ನು ಕಳುಹಿಸುವ ಖಜಾನೆ ಅಧಿಕಾರಿಯ ವಿಶೇಷ ಮೊಹರು ಮತ್ತು ಸಹಿಯನ್ನು ಪರಿಶೀಲಿಸುವುದು. ನಿವೃತ್ತಿ ವೇತನ ಆದೇಶಗಳನ್ನು (ಎರಡು ಅರ್ಧಗಳು) ಮತ್ತು ಖಜಾನೆಯು ಸ್ವೀಕರಿಸಿದ ಯಾವುದೇ ಇತರ ದಸ್ತಾವೇಜುಗಳನ್ನು ತದನಂತರ ಸಂಯೋಜಕ ಶಾಖೆಯು 3 ದಿನಗಳ ಒಳಗಾಗಿ

ಸಂದಾಯ ಮಾಡುವ ಶಾಖೆಯಾಗಿ ಇನ್ನು ಮುಂದೆ ಹೆಸರಿಸಿದ ಪಿಂಚಣಿದಾರನು ಆಯ್ಕೆ ಮಾಡಿದ ಶಾಖೆಗೆ ಕಳುಹಿಸಲಾಗುವುದು.

4. **ಸಂದಾಯ ಮಾಡುವ ಶಾಖೆಯ ಪ್ರಕಾರ್ಯಗಳು:**

ಮೇಲೆ ಸೂಚಿಸಲಾದಂತೆ ಸಂಯೋಜಕ ಶಾಖೆಯಿಂದ ದಸ್ತಾವೇಜುಗಳನ್ನು ಸ್ವೀಕರಿಸಿದ ನಂತರ ಮತ್ತು ನಿವೃತ್ತಿ ವೇತನ ಸಂದಾಯ ಮಾಡುವುದನ್ನು ಪ್ರಾರಂಭಿಸುವ ಮೊದಲು, ಸಂದಾಯ ಮಾಡುವ ಶಾಖೆಯು,–

(i) ಪಿಂಚಣಿದಾರನನ್ನು ಗುರುತಿಸಲು ಶಾಖೆಗೆ ಹಾಜರಾಗುವಂತೆ ಅನುಬಂಧ–ಡಿ ಯಲ್ಲಿರುವಂಥ ನಮೂನೆಯಲ್ಲಿ ಪತ್ರದ ಮೂಲಕ ಆತನಿಗೆ ಸಲಹೆ ನೀಡುವುದು;

(ii) ಯಾವುದೇ ಮುಖ್ಯ ಮಾಹಿತಿಯ ಸ್ವೀಕೃತಿಯಲ್ಲಿನ ವಿಳಂಬದ ಅಥವಾ ಯಾವುದೇ ಪ್ರಾಮಾಣಿಕ ತಪ್ಪಿನ ಕಾರಣದಿಂದ ಆತನಿಗೆ/ ಆಕೆಗೆ ಜಮೆಯಾದ ಹೆಚ್ಚಿನ ಸಂದಾಯವನ್ನು ಮತ್ತು ಕರ್ನಾಟಕ ವಿಧಾನಮಂಡಲಕ್ಕೆ ಬರಬೇಕಾದ ಯಾವುದೇ ಬಾಕಿಯನ್ನು ಬ್ಯಾಂಕು ವಸೂಲು ಮಾಡಿಕೊಳ್ಳಬಹುದೆಂದು ಅನುಬಂಧ–ಇ ಯಲ್ಲಿರುವಂಥ ನಮೂನೆಯಲ್ಲಿ ಪಿಂಚಣಿದಾರನಿಂದ ವಚನಬಂಧವನ್ನು ಪಡೆದುಕೊಳ್ಳುವುದು;

(iii) ಹೊಸ ಪಿಂಚಣಿದಾರನ ಸಂದರ್ಭದಲ್ಲಿ, ಸಂದರ್ಭಾನುಸಾರ ಮಾದರಿ ಹಸ್ತಾಕ್ಷರ ಅಥವಾ ಹೆಬ್ಬೆರಳಿನ ಗುರುತನ್ನು ನಿವೃತ್ತಿ ವೇತನ ಸಂದಾಯ ಆದೇಶದ ಬಟವಾಡೆದಾರನ ಭಾಗದಲ್ಲಿ ಈ ಉದ್ದೇಶಕ್ಕಾಗಿ ಒದಗಿಸಿದ ಸ್ಥಳದಲ್ಲಿ ಪಡೆದುಕೊಳ್ಳುವುದು;

(iv) ಗುರುತಿಸುವ ಪ್ರಕ್ರಿಯೆಯು ನಿವೃತ್ತಿ ವೇತನ ಆದೇಶ ಪಡೆದುಕೊಂಡಂಥ ಪಿಂಚಣಿದಾರರ ಸಹಿಗಳನ್ನು ಮತ್ತು ಭಾವಚಿತ್ರಗಳನ್ನು ಪರಿಶೀಲಿಸುವುದನ್ನು ಒಳಗೊಂಡಿರುತ್ತದೆ. ಪಿಂಚಣಿದಾರನು ಸಹ, ನಿವೃತ್ತಿ ವೇತನದ ಆದೇಶವನ್ನು ಕಳುಹಿಸಿ ಕಾರ್ಯದರ್ಶಿ, ಕರ್ನಾಟಕ **ವಿಧಾನಸಭೆ** ಇವರು ಬರೆದ ಪತ್ರದ ತನ್ನ ವೈಯಕ್ತಿಕ ಪ್ರತಿಯನ್ನು ಹಾಜರುಪಡಿಸಬೇಕು. ಹಿಂದಿನ ಕಂಡಿಕೆಯಲ್ಲಿ ನಿಗದಿಪಡಿಸಲಾದಂತೆ ನಿವೃತ್ತಿ ವೇತನವನ್ನು ಮೊದಲ ಬಾರಿಗೆ ಸಂದಾಯ ಮಾಡುವಾಗ ಮಾತ್ರ ಪಿಂಚಣಿದಾರನನ್ನು ವೈಯಕ್ತಿಕವಾಗಿ ಗುರುತಿಸುವುದನ್ನು ಸಂದಾಯ ಮಾಡುವ ಶಾಖೆಯಲ್ಲಿ ಮಾಡಲಾಗುತ್ತದೆ. ಪಿಂಚಣಿದಾರನ ದೈಹಿಕ ಅನಾರೋಗ್ಯ ಅಥವಾ ದುರ್ಬಲತೆಯ ಪರಿಣಾಮವಾಗಿ ವೈಯಕ್ತಿಕವಾಗಿ ಹಾಜರಾಗಲು ತಾತ್ಕಾಲಿಕ ಅಸಮರ್ಥತೆಯ ಸಂದರ್ಭಗಳಲ್ಲಿ ಪರಿಶೀಲನೆಯನ್ನು, ಪಿಂಚಣಿದಾರನು ಅನಾರೋಗ್ಯದಿಂದ ಚೇತರಿಸಿಕೊಂಡ ನಂತರ ಸಾಧ್ಯವಾದಷ್ಟು ಬೇಗನೆ ನಡೆಸಬಹುದು. ಬಟವಾಡೆದಾರನ ಭಾಗದಲ್ಲಿ ಭಾವಚಿತ್ರ ಲಭ್ಯವಿಲ್ಲದ ಸಂದರ್ಭದಲ್ಲಿ, ಸಂದಾಯ ಮಾಡುವ ಶಾಖೆಯು ಪಿಂಚಣಿದಾರನಿಂದ ಹೊಸ ಭಾವಚಿತ್ರವನ್ನು ಯುಕ್ತ ಕಾಲಾವಧಿಯಲ್ಲಿ ಪಡೆದುಕೊಳ್ಳುವುದು (ಅದನ್ನು ಭಾರತದ ರಿಸರ್ವ್ ಬ್ಯಾಂಕ್ ಅಥವಾ ಸಾರ್ವಜನಿಕ ವಲಯ ಬ್ಯಾಂಕಿನ ಯಾರೇ ಅಧಿಕಾರಿಯು ದೃಢೀಕರಿಸಬಹುದಾಗಿರುತ್ತದೆ) ಮತ್ತು ಬಟವಾಡೆದಾರನ ಭಾಗವನ್ನು ಪೂರ್ಣಗೊಳಿಸುವುದು;

(v) ಬ್ಯಾಂಕಿನಿಂದ ನಿವೃತ್ತಿ ವೇತನ ಪಡೆದುಕೊಳ್ಳಲು ಪಿಂಚಣಿದಾರನು ಯಾವುದೇ ಬಿಲ್ಲುಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ, ತೆರಿಗೆಯನ್ನು ಕಡಿತಗೊಳಿಸಿದ ತರುವಾಯ ನಿವೃತ್ತಿ ವೇತನದ ಸಂದಾಯವನ್ನು, ನಿವೃತ್ತಿ ವೇತನವು ಯಾವ ತಿಂಗಳಿಗೆ ಸಂಬಂಧಿಸಿದೆಯೋ ಆ ಹಿಂದಿನ ತಿಂಗಳ ಕೊನೆಯ ಕೆಲಸದ ದಿನದ ನಂತರದ ಮೊದಲ ಕೆಲಸದ ದಿನದಂದು ಪಿಂಚಣಿದಾರನ ಉಳಿತಾಯ/ಚಾಲ್ತಿ ಖಾತೆಗೆ ಬ್ಯಾಂಕು ಜಮೆ ಮಾಡುವುದು. ವಿಶೇಷ ಸಂದರ್ಭಗಳಲ್ಲಿ ತರುವಾಯದ ತಿಂಗಳಿನ ಮೊದಲ ಕೆಲಸದ ದಿನದಂದು ನಿವೃತ್ತಿ ವೇತನವನ್ನು ಜಮೆ

ಮಾಡಲಾಗದಿದ್ದರೆ, ಅದನ್ನು ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲೂ, ನಿವೃತ್ತಿ ವೇತನ ಬಾಕಿ ಇರುವ ತರುವಾಯದ ತಿಂಗಳಿನ 7ನೇ ದಿನಾಂಕಕ್ಕಿಂತ ತಡವಾಗದಂತೆ ಜಮೆ ಮಾಡಲಾಗುವುದೆಂಬುದನ್ನು ಖಚಿತಪಡಿಸತಕ್ಕದ್ದು;

(vi) ಸಂದಾಯ ಮಾಡುವ ಶಾಖೆಯು, ಕಾಲಕಾಲಕ್ಕೆ ನಿಗದಿಪಡಿಸಿದ ದರಗಳಿಗನುಸಾರವಾಗಿ ನಿವೃತ್ತಿ ವೇತನ ಸಂದಾಯಗಳ ಮೂಲಗಳಿಂದ ಆದಾಯ ತೆರಿಗೆ ಕಡಿತಗೊಳಿಸಲು ಹೊಣೆಯುಳ್ಳದ್ದಾಗಿರತಕ್ಕದ್ದು. ಯಾರ ನಿವೃತ್ತಿ ವೇತನದಿಂದ ಹಾಗೆ ಆದಾಯ ತೆರಿಗೆಯನ್ನು ಕಡಿತಗೊಳಿಸಲಾಗಿದೆಯೋ ಆ ಪಿಂಚಣಿದಾರನ ಸಂದರ್ಭದಲ್ಲಿ, ಸಂದಾಯ ಮಾಡುವ ಶಾಖೆಯು, ಆದಾಯ ತೆರಿಗೆ ನಿಯಮಗಳಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಕಡಿತಗೊಳಿಸಿದ ಬಗ್ಗೆ ತೆರಿಗೆ ಪ್ರಮಾಣ ಪತ್ರವನ್ನು ಪ್ರತಿ ವರ್ಷ ಏಪ್ರಿಲ್‌ನಲ್ಲಿ ನೀಡುವುದು;

(vii) ಸಂದಾಯ ಮಾಡುವ ಶಾಖೆಯು, ಅನುಬಂಧ–ಬಿಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಕಾಲಕಾಲಕ್ಕೆ ಅದು ಮಾಡಿದ ನಿವೃತ್ತಿ ವೇತನ ಸಂದಾಯಗಳ ಸವಿವರ ದಾಖಲೆಯನ್ನು ನಿರ್ವಹಿಸತಕ್ಕದ್ದು. ಪ್ರತಿಯೊಂದು ಸಂದಾಯವನ್ನು ನಿವೃತ್ತಿ ವೇತನ ಆದೇಶದ ಬಟವಾಡೆದಾರರ ಭಾಗದಲ್ಲಿ ನಮೂದಿಸುವುದು ಮತ್ತು ಸಂದಾಯ ಮಾಡುವ ಶಾಖೆಯ ಅಧಿಕೃತ ಅಧಿಕಾರಿಯು ದೃಢೀಕರಿಸುವುದು;

(viii) ಪ್ರತಿಯೊಂದು ಸಂದಾಯ ಮಾಡುವ ಶಾಖೆಯು, ನಿವೃತ್ತಿ ವೇತನ ಸಂದಾಯಗಳ ಸಲಹೆಯನ್ನು ಆ ತಿಂಗಳಿನ 10ನೇ ದಿನಾಂಕದೊಳಗೆ ಅದರ ಸಂಯೋಜಕ ಶಾಖೆಗೆ ಕಳುಹಿಸುವುದು. ಕಳುಹಿಸಿದ ಸಲಹೆಯಲ್ಲಿ ಸಂದಾಯದ ಪ್ರಮಾಣಪತ್ರವನ್ನು ದಾಖಲಿಸುವುದು. ಸಂದಾಯ ಮಾಡುವ ಶಾಖೆಯು ನಾಲ್ಕು ಪ್ರತಿಗಳಲ್ಲಿ (ಅನುಬಂಧ–ಬಿ ಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ) ಒಂದು ಪಟ್ಟಿಯನ್ನು ಸಿದ್ದಪಡಿಸುವುದು. ಸಂಯೋಜಕ ಶಾಖೆ ಮತ್ತು ಸಂದಾಯ ಮಾಡುವ ಶಾಖೆ ಒಂದೇ ಆಗಿರುವಲ್ಲಿ, ಸಂದಾಯ ಪಟ್ಟಿಗಳನ್ನು ಮೂರು ಪ್ರತಿಗಳಲ್ಲಿ ಸಿದ್ದಪಡಿಸುವುದು. ತನ್ನ ಸ್ವಂತ ದಾಖಲೆಗಳಿಗಾಗಿ ಪಟ್ಟಿಯ ಒಂದು ಪ್ರತಿಯನ್ನು ಇರಿಸಿಕೊಂಡು, ಸಂದಾಯ ಮಾಡುವ ಶಾಖೆಯು ಪಟ್ಟಿಯ ಇತರ ಪ್ರತಿಗಳನ್ನು ಸಲಹೆಯೊಂದಿಗೆ ಕಳುಹಿಸುವುದು. ಸಲಹೆಗೆ ನಿವೃತ್ತಿ ವೇತನದಾರರು ಸಲ್ಲಿಸಿದ ಅವಶ್ಯಕ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

ಟಿಪ್ಪಣಿ: ನಿವೃತ್ತಿ ವೇತನವನ್ನು ಪ್ರತ್ಯೇಕ ಪಟ್ಟಿಯಲ್ಲಿ ಸಂದಾಯ ಮಾಡಿದಾಗ, **"ಮಾಜಿ ಶಾಸಕರಿಗೆ ನಿವೃತ್ತಿ"** ಎಂದು ಮೇಲ್ಬರಹ ಸಿದ್ದಪಡಿಸಬಹುದು ಮತ್ತು ಕಳುಹಿಸಬಹುದು.

5. ಸಂಯೋಜಕ ಶಾಖೆಯ ಪ್ರಕಾರ್ಯಗಳು:

ಸಂದಾಯ ಮಾಡುವ ಶಾಖೆಗಳಿಂದ ಪೂರಕ ದಾಖಲೆಗಳೊಂದಿಗೆ ಸಲಹೆ ಮತ್ತು ವಿವರಪಟ್ಟಿಗಳನ್ನು ಸ್ವೀಕರಿಸಿದ ಬಳಿಕ ಸಂಯೋಜಕ ಶಾಖೆಯು ಅವುಗಳನ್ನು ಕ್ರೋಢೀಕರಿಸುವುದು. ಸಂಕ್ಷಿಪ್ತ ಪತ್ರದೊಂದಿಗೆ ಪಟ್ಟಿಯ ಎರಡು ಪ್ರತಿಗಳನ್ನು ಸಂಯೋಜಕ ಶಾಖೆಯು ಪ್ರತಿ ತಿಂಗಳ 15ನೇ ತಾರೀಖಿನೊಳಗೆ ಜಿಲ್ಲಾ ಕೇಂದ್ರಸ್ಥಾನಗಳಲ್ಲಿ ರಾಜ್ಯ ಸರ್ಕಾರಿ ವ್ಯವಹಾರಗಳನ್ನು ನಡೆಸುವ ಭಾರತದ ರಿಸರ್ವ್ ಬ್ಯಾಂಕು/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಅದರ ಸಹಾಯಕ ಬ್ಯಾಂಕುಗಳಿಗೆ ಕಳುಹಿಸುವುದು.

6. ಬ್ಯಾಂಕುಗಳಿಗೆ ಹಣ ತುಂಬಿಕೊಡುವುದು:

(i) ರಾಜ್ಯ ಸರ್ಕಾರದ ವ್ಯವಹಾರಗಳನ್ನು ನಡೆಸುವ ಸಾರ್ವಜನಿಕ ವಲಯ ಬ್ಯಾಂಕು, ಭಾರತದ ರಿಸರ್ವ್ ಬ್ಯಾಂಕು/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಅದರ ಸಹಾಯಕ ಬ್ಯಾಂಕುಗಳಿಂದ ಪಟ್ಟಿ, ಇತ್ಯಾದಿಗಳನ್ನು ಸ್ವೀಕರಿಸಿದ ನಂತರ, ಪಟ್ಟಿಗಳು ಎಲ್ಲಾ ರೀತಿಯಿಂದಲೂ ಪೂರ್ಣವಾಗಿವೆ ಮತ್ತು ಅದರಲ್ಲಿರುವ ಪ್ರತಿಯೊಂದು ಸಂದಾಯದಲ್ಲಿ ಸುಸಂಗತ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅದನ್ನು ಪರಿಶೀಲಿಸತಕ್ಕದ್ದು. ತದನಂತರ, ಸಾರ್ವಜನಿಕ ವಲಯ ಬ್ಯಾಂಕು, ಬಟವಾಡೆ ಮಾಡಿದ ನಿವೃತ್ತಿ ವೇತನಗಳ ನಿವ್ವಳ ಮೊತ್ತವನ್ನು ಭಾರತೀಯ ರಿಸರ್ವ್ ಬ್ಯಾಂಕ್/ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಅದರ ಸಹಾಯಕ ಬ್ಯಾಂಕು ರಾಜ್ಯ ಸರ್ಕಾರದ ಖಾತೆಗೆ ಋಣವಾಗಿ ತುಂಬಿಕೊಡುವುದು. ಪಟ್ಟಿಯ ಮತ್ತು ಬ್ಯಾಂಕುಗಳಿಂದ ಸ್ವೀಕರಿಸಲಾಗುವ ಇತರ ಪೂರಕ ದಸ್ತಾವೇಜುಗಳ ಎರಡೂ ಪ್ರತಿಗಳೊಂದಿಗೆ ಋಣ ಸೂಚನೆಯ ಒಂದು ಪ್ರತಿಯನ್ನು ಖಜಾನೆ ಅಧಿಕಾರಿಗೆ ಕಳುಹಿಸಲಾಗುವುದು.

(ii) ಸಂದಾಯ ಮಾಡುವ/ಹಣ ತುಂಬಿಕೊಡುವ ಬ್ಯಾಂಕು ಹೆಚ್ಚಿನ ಹಣ ಭರ್ತಿಯನ್ನು ಕ್ಲೇಮು ಮಾಡಿಲ್ಲ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ಆದಾಗ್ಯೂ, ಯಾವುದೇ ಕಾರಣದಿಂದ ಸಂದಾಯ ಮಾಡುವ ಬ್ಯಾಂಕು ಹೆಚ್ಚಿನ ಹಣವನ್ನು ತುಂಬಿಕೊಟ್ಟಿದ್ದರೆ ಮತ್ತು ಹಾಗೆ ನೀಡಿದ ಹಣವು ರೂ.1000/–ಕ್ಕಿಂತ ಕಡಿಮೆ ಇದ್ದರೆ, ಅದನ್ನು, ಅದಕ್ಕಾಗಿ ಸೂಕ್ತ ಷರಾದೊಂದಿಗೆ ಹಾಗೆ ನೀಡಿದ ಹೆಚ್ಚಿನ ಮೊತ್ತದ ವ್ಯಾಪ್ತಿಯಷ್ಟರ ಮಟ್ಟಿಗೆ ಚಿಕ್ಕ ಕ್ಲೇಮನ್ನು ಮಾಡಿ ಸಂದಾಯ ಮಾಡುವ ಬ್ಯಾಂಕು ಮುಂಬರುವ ತಿಂಗಳಿನ ನಿವೃತ್ತಿ ವೇತನ ಪಟ್ಟಿಯ ಮುಖಾಂತರ ಸರಿಹೊಂದಿಸಬಹುದು. ಹೆಚ್ಚಾಗಿ ತುಂಬಿಕೊಟ್ಟ ಮೊತ್ತವು ರೂ.1000/– ಅಥವಾ ಹೆಚ್ಚಾಗಿದ್ದಾಗ, ಹಣ ತುಂಬಿಕೊಡುವ ಬ್ಯಾಂಕು, ಸರ್ಕಾರಿ ಖಾತೆಗೆ ಹೆಚ್ಚಿನ ಹಣವನ್ನು ಜಮೆ ಮಾಡುವುದಕ್ಕಾಗಿ ಆ ಮೊತ್ತಕ್ಕೆ ಒಂದು ಪ್ರಮಾದ ಪಟ್ಟಿಯನ್ನು ಕೂಡಲೇ ಸಿದ್ದಪಡಿಸಿ, ಹೆಚ್ಚಿನ ಹಣ ತುಂಬಿಕೊಟ್ಟಿರುವ ಬ್ಯಾಂಕಿನಿಂದ ಅದನ್ನು ವಸೂಲು ಮಾಡಿಕೊಳ್ಳಬಹುದು.

(iii) ಖಜಾನೆ ಅಧಿಕಾರಿಯು ಒಟ್ಟು ಮೊತ್ತಗಳ ಸರಿತನವನ್ನು ಪರಿಶೀಲಿಸಿ, ತದನಂತರ ಪಟ್ಟಿಯ ಮೂಲಪ್ರತಿಯೊಂದಿಗೆ ಅಕೌಂಟೆಂಟ್ ಜನರಲ್‌ರವರಿಗೆ ಸಲ್ಲಿಸಬೇಕಾದ ಆತನ ಲೆಕ್ಕಗಳಲ್ಲಿನ ವ್ಯವಹರಣೆಗಳನ್ನು ಮತ್ತು ತತ್ಸಂಬಂಧಿ ದಸ್ತಾವೇಜುಗಳನ್ನು ಸೇರಿಸುವುದು. ಪಟ್ಟಿಯ ದ್ವಿಪ್ರತಿಯನ್ನು ಖಜಾನೆಯಲ್ಲಿ ಉಳಿಸಿಕೊಳ್ಳಲಾಗುವುದು.

ಟಿಪ್ಪಣಿ: ನಿವೃತ್ತಿ ವೇತನವನ್ನು ಸಂದಾಯ ಮಾಡಿದಾಗ, ಪ್ರತ್ಯೇಕ ಪಟ್ಟಿಯನ್ನು ಸಿದ್ಧಪಡಿಸಿ **"ಮಾಜಿ ಶಾಸಕರಿಗೆ ನಿವೃತ್ತಿ ವೇತನ"** ಎಂದು ಮೇಲ್ಬರಹವನ್ನು ಕಳುಹಿಸಬಹುದು.

(iv) ಖಜಾನೆ ಅಧಿಕಾರಿಯು ಒಟ್ಟು ನಿವೃತ್ತಿ ವೇತನ ಲೆಕ್ಕಹಾಕುವುದಕ್ಕೆ ಮತ್ತು ಅಕೌಂಟೆಂಟ್ ಜನರೆಲ್‌ರಿಗೆ ಖಜಾನೆ ಲೆಕ್ಕಪತ್ರಗಳನ್ನು ಸಲ್ಲಿಸುವಾಗ ಆದಾಯ ತೆರಿಗೆ ಕಡಿತ ಮಾಡಲು ಹೊಣೆಗಾರರಾಗಿರುತ್ತಾರೆ.

(v) ಖಜಾನೆ ಲೆಕ್ಕಪತ್ರಗಳನ್ನು ಸ್ವೀಕರಿಸಿದ ನಂತರ, ಅಕೌಂಟೆಂಟ್ ಜನರಲ್‌ರು ಸಾಮಾನ್ಯ ರೀತಿಯಲ್ಲಿ ವ್ಯವಹರಣೆಯನ್ನು ಸರಿಹೊಂದಿಸುವುದು.

7. ಪಿಂಚಣಿದಾರನು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು:

1. ಜೀವಿತ ಪ್ರಮಾಣ ಪತ್ರ:

ಪಿಂಚಣಿದಾರನು ಅನುಬಂಧ–ಸಿ ಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ನವೆಂಬರ್ ತಿಂಗಳಿನಲ್ಲಿ ವರ್ಷಕ್ಕೊಮ್ಮೆ ಜೀವಿತ ಪ್ರಮಾಣಪತ್ರ ಸಲ್ಲಿಸುವುದು ಅಗತ್ಯವಾಗಿದೆ. ಭಾರತದ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು

ಈ ಉದ್ದೇಶಕ್ಕಾಗಿ ಜೀವಿತ ಪ್ರಮಾಣ ಪತ್ರಗಳನ್ನು ನೀಡಲು ಅಧಿಕೃತರಾಗಿರುತ್ತಾರೆ. ಗಂಭೀರ ಅನಾರೋಗ್ಯ/ಅಸಮರ್ಥತೆ, ಇತ್ಯಾದಿಯ ಕಾರಣದಿಂದ ಅಧಿಕೃತ ಸಾರ್ವಜನಿಕ ವಲಯ ಬ್ಯಾಂಕಿನ ಅಧಿಕಾರಿಯಿಂದ ಜೀವಿತ ಪ್ರಮಾಣಪತ್ರಗಳನ್ನು ಪಡೆಯಲು ಸಾಧ್ಯವಾಗದ ಪಿಂಚಣಿದಾರನ ಸಂದರ್ಭದಲ್ಲಿ, ಹಾಗೆಂದು ವೈಯಕ್ತಿಕವಾಗಿ ಹಾಜರಾಗಲು ಆತನ/ಆಕೆಯ ಅಸಮರ್ಥತೆ ಬಗ್ಗೆ ನೋಂದಾಯಿತ ವೈದ್ಯಕೀಯ ವೃತ್ತಿಯಲ್ಲಿರುವವರಿಂದ ಪಡೆದ ವೈದ್ಯಕೀಯ ಪ್ರಮಾಣಪತ್ರದಿಂದ ಈ ಬಗ್ಗೆ ಸಮರ್ಥಿತವಾದ ಒಂದು ಸೂಚನೆಯನ್ನು ಜೀವಿತ ಪ್ರಮಾಣಪತ್ರ ದಾಖಲಿಸುವ ಉದ್ದೇಶಕ್ಕಾಗಿ ಆತನ/ಆಕೆಯ ನಿವಾಸದಲ್ಲಿ/ಆಸ್ಪತ್ರೆಯಲ್ಲಿ ಪಿಂಚಣಿದಾರನನ್ನು ಭೇಟಿ ಮಾಡಲು ಒಬ್ಬ ಅಧಿಕಾರಿಯನ್ನು ಆತನು ನಾಮನಿರ್ದೇಶಿಸಲು ಆತನು/ಆಕೆಯು ಸಂದಾಯ ಮಾಡುವ ಶಾಖೆಯ ಪ್ರಭಾರಿ ಅಧಿಕಾರಿಗೆ ಕಳುಹಿಸಬಹುದು.

8. ಪಿಂಚಣಿದಾರರು ಸಲ್ಲಿಸಬೇಕಾದ ಘೋಷಣೆ:

(i) ಅನುಬಂಧ–I ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಒಂದು ಘೋಷಣೆಯನ್ನು, ಪ್ರತಿ ವರ್ಷದ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್‌ನ ಅವಧಿಯಲ್ಲಿ ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಸಲ್ಲಿಸತಕ್ಕದ್ದು.

(ii) ಕುಟುಂಬ ನಿವೃತ್ತಿ ವೇತನ ಸ್ವೀಕರಿಸುವ ವಿಧವೆ/ವಿಧುರನ ಸಂದರ್ಭದಲ್ಲಿ, ಆಕೆ/ಆತನು ಮರು–ವಿವಾಹವಾಗದಿರುವ ಬಗ್ಗೆ ಯಾವುದೇ ಪ್ರಮಾಣಪತ್ರ ಒದಗಿಸುವ ಅಗತ್ಯವಿರುವುದಿಲ್ಲ. ಆದಾಗ್ಯೂ, ಆಕೆಯ/ಆತನ ಮರುವಿವಾಹದ ಸಂದರ್ಭದಲ್ಲಿ, ಆಕೆಯ/ಆತನು ನಿವೃತ್ತಿ ಬಟವಾಡೆ ಅಧಿಕಾರಿಗೆ ತ್ವರಿತವಾಗಿ ಮರು–ವಿವಾಹದ ಸಂಗತಿಯನ್ನು ವರದಿ ಮಾಡುವುದಾಗಿ, ಹಾಗೆಂದು ನಿವೃತ್ತಿ ವೇತನದ ಪ್ರಾರಂಭದ ಸಮಯದಲ್ಲಿ ವಿಧವೆ/ವಿಧುರನಿಂದ ಒಂದು ವಚನಬಂಧವನ್ನು ಪಡೆದುಕೊಳ್ಳಲಾಗುವುದು. ಕುಟುಂಬ ನಿವೃತ್ತಿ ವೇತನವನ್ನು ಸ್ವೀಕರಿಸುವ ಇತರರು ಎಂದರೆ, ಅಪ್ರಾಪ್ತ ಗಂಡು ಮಕ್ಕಳ ಮತ್ತು ಅವಿವಾಹಿತ ಅಪ್ರಾಪ್ತ ಹೆಣ್ಣು ಮಕ್ಕಳ ಸಂದರ್ಭದಲ್ಲಿ, ವಿವಾಹವಾಗದಿರುವ/ಪ್ರಾಪ್ತ ವಯಸ್ಕನಾಗದಿರುವ ಬಗ್ಗೆ ಒಂದು ಪ್ರಮಾಣಪತ್ರವನ್ನು, ವಾರ್ಷಿಕವಾಗಿ ಎಂದರೆ, ನವೆಂಬರ್ ತಿಂಗಳಿಗಾಗಿ ನಿವೃತ್ತಿ ವೇತನ ಪಡೆಯುವುದಕ್ಕಾಗಿ ಅಗತ್ಯವಿರುತ್ತದೆ. ಸಂದಾಯ ಮಾಡುವ ಶಾಖೆಯು ಸಂಯೋಜಕ ಶಾಖೆಗೆ ಕಳುಹಿಸಿದ ಪಟ್ಟಿಯ ಆಧಾರದ ಮೇಲೆ ಈ ಅಗತ್ಯತೆಗಳನ್ನು ಪೂರೈಸುವ ಕುರಿತು ಸೂಚನೆ ನೀಡುವುದು.

9. ನಿವೃತ್ತಿ ವೇತನಗಳ ವರ್ಗಾವಣೆ:

(i) ನಿವೃತ್ತಿ ವೇತನದ ವರ್ಗಾವಣೆಗಾಗಿ ಅರ್ಜಿಯು ಈ ಮುಂದಿನ ಯಾವುದೇ ಪ್ರವರ್ಗಗಳಲ್ಲಿ ಬರಬಹುದು.

1. ಒಂದೇ ಕೇಂದ್ರದಲ್ಲಿನ ಅಥವಾ ಅದೇ ಜಿಲ್ಲೆಯ ಒಂದೇ ಸಾರ್ವಜನಿಕ ವಲಯ ಬ್ಯಾಂಕಿನ, ಒಂದು ಸಂದಾಯ ಮಾಡುವ ಶಾಖೆಯಿಂದ ಇನ್ನೊಂದು ಶಾಖೆಗೆ ವರ್ಗಾವಣೆ; ಅಥವಾ
2. ಒಂದೇ ಕೇಂದ್ರದಲ್ಲಿನ ಒಂದು ಸಾರ್ವಜನಿಕ ವಲಯ ಬ್ಯಾಂಕಿನಿಂದ ಇನ್ನೊಂದಕ್ಕೆ ವರ್ಗಾವಣೆ (ಅಂಥ ವರ್ಗಾವಣೆಯನ್ನು ಒಂದು ಹಣಕಾಸು ವರ್ಷದಲ್ಲಿ ಒಂದು ಬಾರಿ ಮಾತ್ರ ಅನುಮತಿಸಲಾಗುವುದು); ಅಥವಾ
3. ಬೇರೆ ಬೇರೆ ಜಿಲ್ಲೆಗಳಲ್ಲಿನ ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕೆ ವರ್ಗಾವಣೆ; ಅಥವಾ
4. ಒಂದು ರಾಜ್ಯದಿಂದ ಇನ್ನೊಂದಕ್ಕೆ ನಿವೃತ್ತಿ ವೇತನ ಆದೇಶಗಳ ವರ್ಗಾವಣೆ.

(ii) ಮೇಲಿನ ಪ್ರವರ್ಗ– I ರಡಿ ಬರುವ ಕೋರಿಕೆಗಳನ್ನು ಸ್ವತ: ಸಾರ್ವಜನಿಕ ವಲಯ ಬ್ಯಾಂಕು ಸ್ವೀಕರಿಸಬಹುದು. ಸಂದಾಯ ಮಾಡುವ ಶಾಖೆಯು, ಸಂದಾಯ ಮಾಡಿರುವ ತಿಂಗಳಿನ ನಿವೃತ್ತಿ ವೇತನ ಸಂದಾಯ ಆದೇಶದ ಬಟವಾಡೆದಾರನ ಭಾಗದಲ್ಲಿ ಸೂಚಿಸುವುದು. ತದನಂತರ ಸಂಯೋಜಕ ಶಾಖೆಗೆ ನಿವೃತ್ತಿ ವೇತನ ಸಂದಾಯ ಆದೇಶದ ಬಟವಾಡೆದಾರನ ಭಾಗವನ್ನು ಹಿಂದಿರುಗಿಸಲಾಗುವುದು. ಸ್ವೀಕರಿಸಿದ ನಂತರ, ಸಂಯೋಜಕ ಶಾಖೆಯು, ಅನುಬಂಧ–ಎ ಯಲ್ಲಿನ ನಮೂನೆಯಲ್ಲಿ ಅದು ನಿರ್ವಹಿಸಿದ ರಿಜಿಸ್ಟರಿನಲ್ಲಿ ಅವಶ್ಯಕ

ನಮೂದುಗಳನ್ನು ಮಾಡುವುದು ಮತ್ತು ಭವಿಷ್ಯದ ನಿವೃತ್ತಿ ವೇತನ ಸಂದಾಯಗಳನ್ನು ಮಾಡುವುದಕ್ಕಾಗಿ ಇತರ ಸಂದಾಯ ಮಾಡುವ ಶಾಖೆಗೆ ನಿವೃತ್ತಿ ವೇತನ ಸಂದಾಯ ಆದೇಶವನ್ನು (ಬಟವಾಡೆದಾರನ ಭಾಗ) ಕಳುಹಿಸುವುದು ಮತ್ತು ಬದಲಾವಣೆ ಬಗ್ಗೆ ಜಿಲ್ಲಾ ಖಜಾನೆಗೆ ತಿಳಿಸುವುದು.

(iii) ಮೇಲಿನ 2 ಮತ್ತು 3ನೇ ಪ್ರವರ್ಗಗಳಡಿ ಬರುವ ಪ್ರಕರಣದ ಸಂದರ್ಭದಲ್ಲಿ, ಸಂದಾಯ ಮಾಡುವ ಶಾಖೆಯು, ಯಾವ ತಿಂಗಳವರೆಗೆ ಸಂದಾಯ ಮಾಡಲಾಗಿದೆಯೋ ಆ ತಿಂಗಳನ್ನು ಸೂಚಿಸಿ, ಜಿಲ್ಲಾ ಖಜಾನೆ ಅಧಿಕಾರಿಗೆ ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ ಭಾಗಗಳನ್ನು ಅದರ ಸಂಯೋಜಕ ಶಾಖೆಗೆ ಹಿಂದಿರುಗಿಸುವುದು. ಅದನ್ನು ಸ್ವೀಕರಿಸಿದ ನಂತರ, ಜಿಲ್ಲಾ ಖಜಾನೆ ಅಧಿಕಾರಿಯು, ಪಿಂಚಣಿದಾರರ ಕೋರಿಕೆಯಂತೆ ಸಾರ್ವಜನಿಕ ವಲಯ ಬ್ಯಾಂಕಿನ ಶಾಖೆಯಲ್ಲಿ ನಿವೃತ್ತಿ ವೇತನದ ಸಂದಾಯಕ್ಕಾಗಿ ಅವಶ್ಯಕ ಕ್ರಮ ತೆಗೆದುಕೊಳ್ಳುವರು.

(iv) ಪ್ರವರ್ಗ–4ರಡಿ ಬರುವ ಸಂದರ್ಭದಲ್ಲಿ, ಸಂದಾಯ ಶಾಖೆಯು ಯಾವ ತಿಂಗಳವರೆಗೆ ನಿವೃತ್ತಿ ವೇತನ ಸಂದಾಯ ಮಾಡಿದೆಯೋ ಅದನ್ನು ಸೂಚಿಸಿ ಜಿಲ್ಲಾ ಖಜಾನೆ ಅಧಿಕಾರಿಗೆ ನಿವೃತ್ತಿ ವೇತನ ಸಂದಾಯ ಆದೇಶದ ಎರಡು ಭಾಗಗಳನ್ನು ಅದರ ಸಂಯೋಜಕ ಶಾಖೆಯ ಮೂಲಕ ಹಿಂದಿರುಗಿಸುವುದು. ಅದನ್ನು ಸ್ವೀಕರಿಸಿದ ನಂತರ, ಜಿಲ್ಲಾ ಖಜಾನೆ ಅಧಿಕಾರಿಯು, ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿಗೆ ಮುಂದಿನ ಕ್ರಮ ತೆಗೆದುಕೊಳ್ಳಲು ನಿವೃತ್ತಿ ವೇತನ ಆದೇಶಗಳ ಎರಡೂ ಭಾಗಗಳನ್ನು ಹಿಂದಿರುಗಿಸಲು ಅವಶ್ಯಕ ಕ್ರಮ ತೆಗೆದುಕೊಳ್ಳುವರು.

(v) ವರ್ಗಾವಣೆ ಸಮಯದಲ್ಲಿ ಹೆಚ್ಚಿನ ಸಂದಾಯದ ಸಂಭವವನ್ನು ತಪ್ಪಿಸಲು ಸಾರ್ವಜನಿಕ ವಲಯ ಬ್ಯಾಂಕಿನ ಸಂದಾಯ ಶಾಖೆಯು, ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ ಭಾಗಗಳಲ್ಲಿ **"––––––** ಕೊನೆಯವರೆಗಿನ ನಿವೃತ್ತಿ ವೇತನವನ್ನು ಸಂದಾಯ ಮಾಡಲಾಗಿದೆ ಎಂದು ಮತ್ತು ಈ ನಿವೃತ್ತಿ ವೇತನ ಸಂದಾಯ ಆದೇಶವು ––––– ಬಟವಾಡೆಗಳನ್ನು ದಾಖಲಿಸುವುದಕ್ಕಾಗಿ ಮುಂದುವರಿದ ಹಾಳೆಗಳನ್ನು ಒಳಗೊಂಡಿದೆ ಎಂದು ಪ್ರಮಾಣೀಕರಿಸಲಾಗಿದೆ**"** ಎಂಬ ಪ್ರಮಾಣಪತ್ರವನ್ನು ದಾಖಲಿಸತಕ್ಕದ್ದು.

(vi) ಮೇಲೆ ಹೇಳಿದ ಕಾರಣಗಳನ್ನು ಹೊರತುಪಡಿಸಿ ಒಂದು ಸಂದಾಯ ಕೇಂದ್ರದಿಂದ ಇನ್ನೊಂದಕ್ಕೆ ನಿವೃತ್ತಿ ವೇತನ ಸಂದಾಯದ ವರ್ಗಾವಣೆಯನ್ನು ಸಾಮಾನ್ಯವಾಗಿ ಅನುಮತಿಸಲಾಗುವುದಿಲ್ಲ.

10. ಪಿಂಚಣಿದಾರರ ಮರಣದ ನಂತರ ನಿವೃತ್ತಿ ವೇತನದ ಬಾಕಿಗಳು:

ಪಿಂಚಣಿದಾರನ ಮರಣದ ದಿನಾಂಕಕ್ಕೆ ನಿವೃತ್ತಿ ವೇತನವನ್ನು ಪಡೆದುಕೊಳ್ಳಬಹುದು, ಪಿಂಚಣಿದಾರನ ಮರಣದ ನಂತರ, ಸಂದಾಯ ಮಾಡುವ ಶಾಖೆಯು ಪಿಂಚಣಿದಾರನ ಮರಣ ಪ್ರಮಾಣಪತ್ರವನ್ನು ಸ್ವೀಕರಿಸುವುದು ಮತ್ತು ಮೃತನಿಂದ ಬರಬೇಕಾದ ಯಾವುದೇ ಬಾಕಿಗಳ ಅಥವಾ ಆತನಿಗೆ ಮಾಡಿದ ಹೆಚ್ಚಿನ ಸಂದಾಯ ಯಾವುದಾದರೂ ಇದ್ದರೆ ಅದನ್ನು ಲೆಕ್ಕಹಾಕತಕ್ಕದ್ದು. ಮೃತನ ಯಾವ ಖಾತೆಗಾಗಿ ಪಿಂಚಣಿದಾರನಿಂದ ಬ್ಯಾಂಕುಗಳು ವಚನಬಂಧ ಪಡೆಯಬೇಕಾಗಿದೆಯೋ (ಮೇಲಿನ 4(ii) ಕಂಡಿಕೆಯಲ್ಲಿ ಉಪಬಂಧಿಸಲಾದಂತೆ) ಆ ಖಾತೆಯಿಂದ ಅದು ಹೆಚ್ಚಿನ ಸಂದಾಯಗಳನ್ನು ವಸೂಲು ಮಾಡಲು ಕೂಡಲೇ ಕ್ರಮ ಕೈಗೊಳ್ಳುವುದು. ಮೃತ ಪಿಂಚಣಿದಾರನ ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮಾಡುವ ಸಂದಾಯ ಬಾಕಿ ಯಾವುದಾದರೂ ಇದ್ದರೆ, ಮೃತ ಪಿಂಚಣಿದಾರನಿಂದ ಸಿಂಧುವಾದ ನಿರ್ದೇಶನ ಇದ್ದ ಸಂದರ್ಭದಲ್ಲಿ, ಸಂದಾಯವನ್ನು ನಾಮನಿರ್ದೇಶನದ ಪ್ರಕಾರ ನಾಮನಿರ್ದೇಶಿತನಿಗೆ ಮಾಡಲಾಗುವುದು ಮತ್ತು ಮೃತ ಪಿಂಚಣಿದಾರನು ಯಾವುದೇ ನಾಮನಿರ್ದೇಶನವನ್ನು ಸಲ್ಲಿಸದಿದ್ದರೆ, ಬ್ಯಾಂಕುಗಳು, ಪಿಂಚಣಿದಾರನ ಮರಣದ ದಿನಾಂಕಕ್ಕೆ ಮೃತ ಪಿಂಚಣಿದಾರನ ಸಂಬಂಧವಾಗಿ ಬಾಕಿ ಇರುವ ಮೊತ್ತಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಸಂದಾಯ ಕ್ಲೇಮು ಮಾಡುವ ಕ್ಲೇಮುದಾರರ ಮತ್ತು ಯಾವುದೇ ಪ್ರಾಧಿಕಾರವು ಯಾವ ಆಧಾರದ ಮೇಲೆ ತಮ್ಮ

ಕ್ಲೇಮುಗಳನ್ನು ಕ್ಲೇಮು ಮಾಡುತ್ತಿರುವರೋ ಅದರ ವಿವರಗಳನ್ನು ಜಿಲ್ಲಾ ಖಜಾನೆ ಅಧಿಕಾರಿಯ ಮುಖಾಂತರ ಒದಗಿಸಿ, ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಸಲಹೆಯನ್ನು ಕೋರುವರು.

11. ನಿವೃತ್ತಿ ವೇತನದ ಪರಿಷ್ಕರಣೆ:

ಕೆಲವು ಕಾರಣಗಳಿಗಾಗಿ ನಿವೃತ್ತಿ ವೇತನದ ಮೊತ್ತವನ್ನು ಪರಿಷ್ಕರಿಸಬೇಕಾದ ಸಂದರ್ಭಗಳಲ್ಲಿ, ಪರಿಷ್ಕೃತ ದರದಲ್ಲಿ ಸಂದಾಯಗಳನ್ನು, ಯಾವುದೇ ಬಾಕಿಗಳಿದ್ದರೆ, ಅವುಗಳ ಸಮೇತ ಈ ಮುಂದಿನ ರೀತಿಯಲ್ಲಿ ಏರ್ಪಾಡು ಮಾಡಬಹುದು:

ಎ) (i) ನಿವೃತ್ತಿ ವೇತನದ ಪರಿಷ್ಕೃತ ದರವನ್ನು (ii) ಯಾವ ದಿನಾಂಕದಿಂದ (ಗಳಿಂದ) ಪರಿಷ್ಕೃತ ದರ ಜಾರಿಗೆ ಬರುವುದೋ ಆ ದಿನಾಂಕವನ್ನು (ಗಳನ್ನು) ಸೂಚಿಸಿ (ಖಜಾನೆ ಅಧಿಕಾರಿ ಮುಖಾಂತರ) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ಇವರಿಂದ ಒಂದು ತಿದ್ದುಪಡಿ ಪತ್ರವನ್ನು ಸ್ವೀಕರಿಸಿದ ಬಳಿಕ, ಸಂಬಂಧಪಟ್ಟ ಸಾರ್ವಜನಿಕ ವಲಯ ಬ್ಯಾಂಕಿನ ಸಂಯೋಜಕ ಶಾಖೆಯ ಅಗತ್ಯ ಪರಿಶೀಲನೆಗೆ ತಿದ್ದುಪಡಿ ಪತ್ರವನ್ನು ಒಳಪಡಿಸಿದ ತರುವಾಯ ಮತ್ತು ಸಂಯೋಜಕ ಶಾಖೆಯು ನಿರ್ವಹಿಸಿದ ನಿವೃತ್ತಿ ವೇತನ ಸಂದಾಯಗಳ ವಿಷಯಸೂಚಿ ರಿಜಿಸ್ಟರಿನಲ್ಲಿ (ಅನುಬಂಧ–ಎ) ಅವಶ್ಯಕ ತಿದ್ದುಪಡಿಗಳನ್ನು ಮಾಡಿದ ತರುವಾಯ ಪಿಂಚಣಿದಾರನಿಗೆ ಸೂಚನೆ ನೀಡಿ ಸಂಬಂಧಪಟ್ಟ ಸಂದಾಯ ಮಾಡುವ ಶಾಖೆಗೆ ತುರ್ತಾಗಿ ಆ ಪತ್ರವನ್ನು ರವಾನಿಸುವುದು. ಸಂದಾಯ ಮಾಡುವ ಬ್ಯಾಂಕು, ತಿದ್ದುಪಡಿ ಪತ್ರವನ್ನು ಸ್ವೀಕರಿಸಿದ ನಂತರ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ಇವರ ಪತ್ರ ಮತ್ತು ಖಜಾನೆ ಅಧಿಕಾರಿಯು ನೀಡಿದ ಹಿಂಬರಹದ ಮೇರೆಗೆ ದೊರೆತ ಅಧಿಕಾರವೆಂದು ಅದರ ಮೇಲೆ ನಮೂದಿಸಿ, ಶಾಖಾ ವ್ಯವಸ್ಥಾಪಕ ಅಥವಾ ಪ್ರಭಾರಿಯ ದೃಢೀಕರಣದ ಮೇರೆಗೆ, ಜಾರಿಯಾದ ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ ಬದಿಗಳ ಮೇಲೆ ಅಗತ್ಯ ತಿದ್ದುಪಡಿಗಳನ್ನು ಮಾಡುವುದು. ಅದೇ ಕಾಲದಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಮಾಡಲಾಗಿದೆ ಎಂದು ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ ಅರ್ಧ ಭಾಗಗಳಲ್ಲಿ ಒಂದು ಟಿಪ್ಪಣಿಯನ್ನು ತಿದ್ದುಪಡಿ ಪತ್ರದಲ್ಲು ಸಹ ಮಾಡುವುದು.

ಬಿ) ಸಂದಾಯ ಮಾಡುವ ಮೊದಲು, ಸಂದಾಯ ಮಾಡುವ ಶಾಖೆಯು ಅನುಬಂಧ–ಎಫ್‌ನ ನಮೂನೆಯಲ್ಲಿರುವಂತೆ ನಿವೃತ್ತಿ ವೇತನ ಬಾಕಿ ಹಿಂಪಡೆ ಪಟ್ಟಿಯನ್ನು ಬರೆಯುವುದು. ಬಾಕಿ ಯಾವುದಾದರೂ ಇದ್ದರೆ ಅದರ ಸಮೇತ ಪರಿಷ್ಕರಣೆ ಜಾರಿಯಾದ ದಿನಾಂಕದಿಂದ ತಿದ್ದುಪಡಿ ನಿವೃತ್ತಿ ವೇತನ ಸಂದಾಯ ಆದೇಶವನ್ನಾಧರಿಸಿ ಪರಿಷ್ಕೃತ ದರಗಳಲ್ಲಿ ನಿವೃತ್ತಿ ವೇತನ ಸಂದಾಯ ಮಾಡಲು ಮುಂದಿನ ಕ್ರಮವನ್ನು ನಂತರ ಸಂದಾಯ ಮಾಡುವ ಶಾಖೆಯು ತೆಗೆದುಕೊಳ್ಳುವುದು. ಆದಾಗ್ಯೂ, ಸಂದಾಯಕ್ಕಾಗಿ ಇರುವ ಬಾಕಿಗಳ ಅಥವಾ ಪೂರ್ವ ಪರಿಶೀಲನೆಗಾಗಿ ಖಜಾನೆ ಅಧಿಕಾರಿಗೆ ಉಲ್ಲೇಖಿಸಿದ ವಸೂಲಾತಿಗಾಗಿ ಬಾಕಿ ಇರುವ ಹೆಚ್ಚಿನ ಸಂದಾಯದ ಮೊತ್ತದ ವಿವರಪಟ್ಟಿಗಳಿರುವ ಸಂದರ್ಭಗಳಲ್ಲಿ, ಸಂದಾಯ ಮಾಡುವ ಶಾಖೆಯು ತಿದ್ದುಪಡಿ ಪತ್ರದಲ್ಲಿ ಸೂಚಿಸಿರುವಂತೆ ಪರಿಷ್ಕೃತ ದರಗಳಲ್ಲಿ ನಿವೃತ್ತಿ ವೇತನ ಸಂದಾಯಗಳನ್ನು ಪ್ರಾರಂಭಿಸಬಹುದು. ಸಂದಾಯ ಮಾಡುವ ಶಾಖೆಯು, ಬಾಕಿ ಮತ್ತು ಪಡೆದ ಮೊತ್ತಗಳ ವಿವರಪಟ್ಟಿಗಳನ್ನು ತ್ವರಿತವಾಗಿ ಖಜಾನೆ ಅಧಿಕಾರಿಗಳಿಂದ ಹಿಂಪಡೆಯಲಾಗಿದೆ ಎಂದು ಖಚಿತಪಡಿಸಿಕೊಳ್ಳುವುದು ಮತ್ತು ಅವುಗಳನ್ನು ಸ್ವೀಕರಿಸಿದ ನಂತರ ಬಾಕಿಗಳುಮ ಇತ್ಯಾದಿಗಳ ಸಂದಾಯ ಅಥವಾ ಹೆಚ್ಚಾಗಿ ಸಂದಾಯ ಮಾಡಿದ ಮೊತ್ತಗಳ ವಸೂಲಾತಿ, ಯಾವುದಾದರೂ ಇದ್ದರೆ ಅದನ್ನು ಶೀಘ್ರವಾಗಿ ಮಾಡುವುದು.

ಸಿ) ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಬರಬೇಕಾದ ಬಾಕಿಗಳಿಗೆ ಸಂಬಂಧಿಸಿದಂತೆ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ಇವರ ಸಲಹೆ/ಸೂಚನೆಯ ಆಧಾರದ

ಮೇಲೆ ವಸೂಲಿಗಳ ಒಂದು ಖಾತೆಯನ್ನು ನಿವೃತ್ತಿ ವೇತನ ಸಂದಾಯದ ರಿಜಿಸ್ಟರಿನ **"ಷರಾ"** ಅಂಕಣದಲ್ಲಿ ನಿರ್ವಹಿಸುವುದು (ಅನುಬಂಧ–ಬಿ).

ಡಿ) ಖಜಾನೆ ಅಧಿಕಾರಿಯು ಯುಕ್ತವಾಗಿ ಪರಿಶೀಲಿಸಿದ ಬಾಕಿ ಮತ್ತು ಪಡೆದ ಮೊತ್ತದ ವಿವರಪಟ್ಟಿಯ ಒಂದು ಪ್ರತಿಯನ್ನು, ಎಲ್ಲ ಸಂದರ್ಭಗಳಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ವಸೂಲಾತಿಯನ್ನು ಗಮನಿಸಲು ಸಾಧ್ಯವಾಗುವಂತೆ ಒಂದು ಪತ್ರವನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ನೋಂದಾಯಿತ ಅಂಚೆ ಪತ್ರದಲ್ಲಿ ಸ್ವೀಕೃತಿ ಬಾಕಿಯೊಂದಿಗೆ ಖಜಾನೆ ಅಧಿಕಾರಿಯು ಒದಗಿಸುವುದು.

12. ಕುಟುಂಬ ನಿವೃತ್ತಿ ವೇತನಗಳು:

(i) ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956ನ್ನು ತಿದ್ದಪಡಿ ಮಾಡಿದಂತೆ 11(ಬಿ) ನಿಯಮದ ಮೇರೆಗೆ, ಸದಸ್ಯನು ಆತನ ಪದಾವಧಿ ಕೊನೆಗೊಳ್ಳುವ ಮೊದಲೇ ಮೃತನಾದಲ್ಲಿ, ಆತನು ಮರಣ ಹೊಂದಿರದಿದ್ದರೆ ಸದಸ್ಯನಾಗಿ ಮುಂದುವರಿಯುತ್ತಿದ್ದಂಥ ಉಳಿದ ಅವಧಿಯವರೆಗೆ ಪ್ರತಿ ತಿಂಗಳು ರೂ.500/–ಗಳ ದರದಲ್ಲಿ ಕುಟುಂಬ ನಿವೃತ್ತಿ ವೇತನವನ್ನು ಆತನ ಕುಟುಂಬಕ್ಕೆ ಸಂದಾಯ ಮಾಡತಕ್ಕದ್ದು. ಈ ಉಪಬಂಧದ ಕಾರಣದಿಂದ, ಯಾರಿಗೆ ನಿವೃತ್ತಿ ವೇತನವನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯನ್ನು ಸೂಚಿಸಿ ಮತ್ತು ಯಾವ ಅವಧಿಯವರೆಗೆ ಸಂದಾಯ ಮಾಡಬೇಕಾಗಿದೆಯೋ ಆ ಅವಧಿವರೆಗೆ ಪ್ರತ್ಯೇಕ ನಿವೃತ್ತಿ ವೇತನ ಸಂದಾಯ ಆದೇಶವನ್ನು ವಿಧಾನ ಪರಿಷತ್ತಿನ ಸಚಿವಾಲಯವು ಹೊರಡಿಸುವುದು. ಖಜಾನೆಯಲ್ಲಿ ಮತ್ತು ಬ್ಯಾಂಕಿನಲ್ಲಿ ಮೇಲೆ ವಿವರಿಸಿದ ಶಾಸಕರ ನಿವೃತ್ತಿ ವೇತನಗಳ ಸಂದಾಯಕ್ಕಾಗಿ ನಿಗದಿಪಡಿಸಲಾದಂತಹುದೇ ಆಗಿರುತ್ತದೆ.

(ii) ಕುಟುಂಬ ನಿವೃತ್ತಿ ವೇತನದ ಸಂದಾಯವನ್ನು ಸ್ವೀಕರ್ತನ ಉಳಿತಾಯ/ಚಾಲ್ತಿ ಖಾತೆಗೆ ಜಮೆ ಮಾಡುವುದು (ಜಂಟಿ ಅಥವಾ ಇಬ್ಬರಲ್ಲಿ ಒಬ್ಬರ ಅಥವಾ ಉತ್ತರಾಧಿಕಾರಿಯ ಖಾತೆಗಳಿಗೆ ಅಲ್ಲ). ಸ್ವೀಕರ್ತನು ಈಗಾಗಲೇ ಅಂಥ ಒಂದು ಖಾತೆಯನ್ನು ಹೊಂದಿಲ್ಲದಿದ್ದರೆ, ಅದನ್ನು ತೆರೆಯಬಹುದು. ಹೆಚ್ಚುವರಿಯಾಗಿ ಮೇಲೆ ಉಲ್ಲೇಖಿಸಿದಂಥಹುದೇ ವಚನಬಂಧವನ್ನು, ಕುಟುಂಬ ವೇತನವನ್ನು ಸಂದಾಯ ಮಾಡುವ ಮುಂಚೆ ಸ್ವೀಕರ್ತನಿಂದ ಸಂದಾಯ ಮಾಡುವ ಶಾಖೆಯು ಪಡೆಯುವುದು.

(iii) ಸಂದಾಯ ಮಾಡುವ ಶಾಖೆಯು, ಅನುಬಂಧ–ಜಿಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಸ್ವೀಕರ್ತನಿಂದ ವಿವಾಹವಾಗದಿದ್ದ/ ಮರು–ವಿವಾಹವಾಗದಿದ್ದ ಬಗ್ಗೆ ಪ್ರಮಾಣಪತ್ರವನ್ನು ಪಡೆಯುವುದಕ್ಕೆ ಹೊಣೆಗಾರನಾಗಿರುವನು. ಕುಟುಂಬ ಪಿಂಚಣಿದಾರರು, ಅನುಬಂಧ–ಸಿಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ನವೆಂಬರ್ ತಿಂಗಳಲ್ಲಿ ವರ್ಷಕ್ಕೊಮ್ಮೆ ಜೀವಿತ ಪ್ರಮಾಣಪತ್ರ ಸಲ್ಲಿಸುವುದು ಅಗತ್ಯವಾಗಿರುತ್ತದೆ. ಭಾರತದ ರಿಸರ್ವ್ ಬ್ಯಾಂಕಿನ ಮತ್ತು ಸಾರ್ವಜನಿಕ ವಲಯ ಬ್ಯಾಂಕುಗಳ ಅಧಿಕಾರಿಗಳು ಈ ಉದ್ದೇಶಕ್ಕಾಗಿ ಜೀವಿತ ಪ್ರಮಾಣಪತ್ರ ನೀಡಲು ಅಧಿಕೃತರಾಗಿರುತ್ತಾರೆ. ಕುಟುಂಬ ಪಿಂಚಣಿದಾರನು ಗಂಭೀರ ಅನಾರೋಗ್ಯ, ಅಸಾಮರ್ಥ್ಯತೆ, ಇತ್ಯಾದಿಯ ಕಾರಣದಿಂದ, ಅಧಿಕೃತ ಸಾರ್ವಜನಿಕ ವಲಯ ಬ್ಯಾಂಕ್ ಅಧಿಕಾರಿಯಿಂದ ಜೀವಿತ ಪ್ರಮಾಣಪತ್ರ ಪಡೆಯಲು ಸಾಧ್ಯವಾಗದಿರುವ ಸಂದರ್ಭದಲ್ಲಿ, ಈ ಪರಿಣಾಮಕ್ಕೆ ವೈಯಕ್ತಿಕವಾಗಿ ಹಾಜರಾಗಲು ಆತನ/ಆಕೆಯ ಅಸಾಮರ್ಥ್ಯತೆ ಬಗ್ಗೆ ನೋಂದಾಯಿತ ವೈದ್ಯನಿಂದ ವೈದ್ಯಕೀಯ ಪ್ರಮಾಣಪತ್ರ ಲಗತ್ತಿಸಿ ಒಂದು ತಿಳುವಳಿಕೆ ಪತ್ರವನ್ನು, ಸಂದಾಯ ಮಾಡುವ ಶಾಖೆಗೆ, ಜೀವಿತ ಪ್ರಮಾಣಪತ್ರವನ್ನು ದಾಖಲಿಸುವ ಉದ್ದೇಶಕ್ಕಾಗಿ ಪಿಂಚಣಿದಾರನ ನಿವಾಸಕ್ಕೆ/ಆಸ್ಪತ್ರೆಗೆ ಆತನನ್ನು/ಆಕೆಯನ್ನು ಭೇಟಿ ಮಾಡಲು ಒಬ್ಬ ಅಧಿಕಾರಿಯನ್ನು ನಾಮನಿರ್ದೇಶಿಸಲು ಸಂದಾಯ ಬ್ಯಾಂಕಿನ ಪ್ರಭಾರಿ ಅಧಿಕಾರಿಗೆ ಆತನು/ಆಕೆಯು ಕಳುಹಿಸಬಹುದು.

(iv) ಕುಟುಂಬ ನಿವೃತ್ತಿ ವೇತನವನ್ನು ಮಂಜೂರು ಮಾಡಲಾಗಿರುವ/ಪಿಂಚಣಿದಾರನ ಮರಣ ಇತ್ಯಾದಿಯ ನಂತರದ ಅವಧಿಯ ಮುಕ್ತಾಯದ ತರುವಾಯ, ಪಿಂಚಣಿದಾರನಿಗೆ ಕುಟುಂಬ ನಿವೃತ್ತಿಯ

ಸ್ವೀಕರ್ತನಿಗೆ ಸಂದಾಯ ಮಾಡಬೇಕಾದ ನಿವೃತ್ತಿ ವೇತನವು ಕೊನೆಗೊಂಡಾಗ ಸಂದಾಯ ಮಾಡುವ ಶಾಖೆಯು ನಿವೃತ್ತಿ ವೇತನ ಸಂದಾಯದ ಆದೇಶದಲ್ಲಿ ಮತ್ತು ಅದರ ದಾಖಲೆಗಳಲ್ಲಿ ಅವಶ್ಯಕ ನಮೂದುಗಳನ್ನು ಮಾಡುವುದು ಮತ್ತು ಮುಂದಿನ ಕ್ರಮಕ್ಕಾಗಿ ಸಂಯೋಜಕ ಶಾಖೆಯ ಮೂಲಕ ಜಿಲ್ಲಾ ಖಜಾನೆ ಅಧಿಕಾರಿಗೆ ಅದನ್ನು ಹಿಂದಿರುಗಿಸುವುದು.

13. ಸಂಕೀರ್ಣ:

(i) ನಿವೃತ್ತಿ ವೇತನ ಸಂದಾಯ ಆದೇಶದ ಬಟವಾಡೆದಾರನ/ಪಿಂಚಣಿದಾರನ ಭಾಗದಲ್ಲಿ ಮಾಸಿಕ ಸಂದಾಯಗಳನ್ನು ನಮೂದಿಸುವುದಕ್ಕಾಗಿ ಎಲ್ಲಾ ಪುಟಗಳನ್ನು ಸಂಪೂರ್ಣವಾಗಿ ಬಳಸಲಾಗಿದ್ದರೆ, ಸಂದಾಯ ಮಾಡುವ ಶಾಖೆಯು ಮುಂದಿನ ಸಂದಾಯಗಳನ್ನು ಟಿಪ್ಪಣಿ ಮಾಡಲು ಅಂತಹುವೇ ಅಂಕಣಗಳಿರುವ ಹೆಚ್ಚುವರಿ ಹಾಳೆಯನ್ನು ಲಗತ್ತಿಸಬಹುದು. ಮುಂದುವರಿದ ಹಾಳೆಯನ್ನು ಸೇರಿಸಿದಾಗಲೆಲ್ಲ ಹಾಳೆಯ ಮೇಲೆ ಪುಟಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸಿ, ನಿವೃತ್ತಿ ವೇತನ ಸಂದಾಯ ಆದೇಶದ (ಬಟವಾಡೆದಾರನ/ಪಿಂಚಣಿದಾರನ ಭಾಗದ) ಮೇಲೆ ಸಂದಾಯ ಮಾಡುವ ಶಾಖೆಯು ಸೂಕ್ತ ನಮೂದನ್ನು ಮಾಡುವುದು.

(ii) ಪಿಂಚಣಿದಾರರಿಗೆ ತಪ್ಪಾಗಿ ಅಥವಾ ಹೆಚ್ಚಾಗಿ ಮಾಡಿದ ಯಾವುದೇ ಸಂದಾಯಕ್ಕಾಗಿ ಬ್ಯಾಂಕುಗಳು ಸರ್ಕಾರಕ್ಕೆ ನಷ್ಟಭರ್ತಿ ಮಾಡಿಕೊಡುವವು ಮತ್ತು ಅನುಬಂಧ–II ರಲ್ಲಿರುವಂತಹ ನಮೂನೆಯಲ್ಲಿ ಅವಶ್ಯಕ ನಷ್ಟಭರ್ತಿ ಬಂಧಪತ್ರವನ್ನು ಬರೆದುಕೊಡುವವು. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಬ್ಯಾಂಕುಗಳು, ಅನುಬಂಧ–ಇ ನಲ್ಲಿರುವ ನಮೂನೆಯಲ್ಲಿ ಪಿಂಚಣಿದಾರರ ಖಾತೆಗೆ ಜಮೆ ಮಾಡಲಾದ ಹೆಚ್ಚುವರಿ ಸಂದಾಯವನ್ನು ಬ್ಯಾಂಕು ವಸೂಲು ಮಾಡಿಕೊಳ್ಳಬಹುದೆಂದು ಪಿಂಚಣಿದಾರನಿಂದ ಒಂದು ವಚನಬಂಧವನ್ನು ಪಡೆದುಕೊಳ್ಳಬಹುದು.

(iii) ನಿವೃತ್ತಿ ವೇತನ ಸಂದಾಯಗಳನ್ನು ಮಾಡುವ ಬ್ಯಾಂಕುಗಳ ಶಾಖೆಗಳಲ್ಲಿ ಮತ್ತು ಸಂಯೋಜಕ ಶಾಖೆಯಲ್ಲಿ ಸಹ ನಿರ್ವಹಿಸಲಾಗುವ ಲೆಕ್ಕಪತ್ರಗಳು, ದಾಖಲೆ ಮತ್ತು ರಿಜಿಸ್ಟರು ಭಾರತದ ಮಹಾಲೇಖಪಾಲರು ಮತ್ತು ಮಹಾಲೆಕ್ಕಪರಿಶೋಧಕರು ಅಥವಾ ಅವರಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಲೆಕ್ಕಪರಿಶೋಧನೆ ಮಾಡಲು ಮುಕ್ತವಾಗಿರತಕ್ಕದ್ದು.

(iv) ಪ್ರವಾಹ ಮತ್ತಿತ್ತ ಕಾರಣಗಳಿಂದ ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ ಅರ್ಧ ಭಾಗಗಳು, ರವಾನೆಯ ಸಂದರ್ಭದಲ್ಲಿ ನಿವೃತ್ತಿ ವೇತನ ಸಂದಾಯ ಪ್ರಾರಂಭವಾಗುವ ಮುಂಚೆ ಕಳೆದು ಹೋದವೆಂದು ವರದಿಯಾದರೆ, ಯಾವ ಬ್ಯಾಂಕಿಗೆ ವಿಷಯವನ್ನು ವರದಿ ಮಾಡಲಾಗಿದೆಯೋ ಆ ಸಂದಾಯ ಮಾಡುವ ಶಾಖೆಯು, ಸಾಮಾನ್ಯ ಸಂಪರ್ಕ ಮಾರ್ಗದಿಂದ ಎಂದರೆ, ಸಂಯೋಜಕ ಶಾಖೆ, ಖಜಾನೆ ಮೂಲಕ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಇವರಿಗೆ ಸಂಬಂಧಪಟ್ಟ ಪಿಂಚಣಿದಾರನ ಪರವಾಗಿ ಇನ್ನೊಂದು ನಿವೃತ್ತಿ ವೇತನ ಸಂದಾಯದ ಇನ್ನೊಂದು ಪ್ರತಿಯನ್ನು ನೀಡಲು ಕೋರಿ ಒಂದು ಪತ್ರ ಬರೆಯುವುದು. ಆದಗ್ಯೂ, ಈ ಬಗ್ಗೆ ಕ್ರಮ ಪ್ರಾರಂಭಿಸುವ ಮೊದಲು ಸಂದಾಯ ಮಾಡುವ ಶಾಖೆಯು, ನಿವೃತ್ತಿ ವೇತನ ಸಂದಾಯ ರಿಜಿಸ್ಟರಿನಿಂದ (ಅನುಬಂಧ–ಬಿ) ಪಿಂಚಣಿದಾರನಿಗೆ ಈಗಾಗಲೇ ನಿವೃತ್ತಿ ವೇತನ ಸಂದಾಯ ಮಾಡಿರುವುದಿಲ್ಲ ಎಂದು ಪರಿಶೀಲಿಸುವುದು ಮತ್ತು ನಿವೃತ್ತಿ ವೇತನ ಸಂದಾಯ ಆದೇಶದ ಇನ್ನೊಂದು ಪ್ರತಿಗೆ ಬರೆಯುವಾಗ ಜಿಲ್ಲಾ ಖಜಾನೆ ಅಧಿಕಾರಿಗೆ ಈ ಸಂಗತಿಯನ್ನು ದೃಢಪಡಿಸುವುದು. ಸಂದಾಯ ಮಾಡುವ ಶಾಖೆಯು ನಿವೃತ್ತಿ ವೇತನ ಸಂದಾಯ ಆದೇಶದ ಇನ್ನೊಂದು ಪ್ರತಿಯನ್ನು ಸ್ವೀಕರಿಸಿದ ನಂತರ ಅಂಥ ಪ್ರಕರಣಗಳಲ್ಲಿ ಸಂದಾಯ ಪ್ರಾರಂಭಿಸುವ ಮೊದಲು ಈ ಕೆಳಗಿನ ಕ್ರಮವನ್ನು ಸಹ ತೆಗೆದುಕೊಳ್ಳುವುದು.

(v) ನಿವೃತ್ತಿ ವೇತನ ಸಂದಾಯ ಆದೇಶದ ಪಿಂಚಣಿದಾರರ ಭಾಗವು ಕಳೆದುಹೋದ, ಅಳಿಸಿಹೋದ ಅಥವಾ ಹರಿದುಹೋದ ಸಂದರ್ಭಗಳಲ್ಲಿ ಮತ್ತು ಅದನ್ನು ನವೀಕರಿಸಬೇಕಾಗಿದ್ದರೆ, ಸಂದಾಯ ಮಾಡುವ ಶಾಖೆಯು ಬಟವಾಡೆ ಭಾಗ/ಸಂದರ್ಭಾನುಸಾರ ನಿವೃತ್ತಿ ವೇತನ ಸಂದಾಯ ಆದೇಶದ ಎರಡೂ

ಭಾಗಗಳೊಂದಿಗೆ ಪಿಂಚಣಿದಾರನ ಕೋರಿಕೆಯನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ ಇವರು ನವೀಕರಿಸಲು ಸಂಯೋಜಕ ಶಾಖೆಯ ಮುಖಾಂತರ ಸಂಬಂಧಪಟ್ಟ ಖಜಾನೆ ಅಧಿಕಾರಿಗೆ ಕಳುಹಿಸುವುದು. ನಿವೃತ್ತಿ ವೇತನ ಸಂದಾಯವು ಅನಾವಶ್ಯಕವಾಗಿ ವಿಳಂಬವಾಗದಂತಿರಲು, ಅಂಥ ಸಂದರ್ಭಗಳಲ್ಲಿ ನಿವೃತ್ತಿ ವೇತನ ಸಂದಾಯದ ಬಟವಾಡೆ ಭಾಗ ಇಲ್ಲದಿರುವಲ್ಲಿ ತಿಂಗಳ ಸಂದಾಯವನ್ನು ಮಾಡಿದ ಕೂಡಲೇ ಖಜಾನೆ ಅಧಿಕಾರಿಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸಾಕಷ್ಟು ಸಮಯಾವಕಾಶ ಇರುವ ಹಾಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಕಳುಹಿಸಲು ಕಾಳಜಿ ವಹಿಸಬೇಕು ಮತ್ತು ಮುಂದಿನ ತಿಂಗಳು ಇರುವ ಬಾಕಿಗಳನ್ನು ಸಂದಾಯ ಮಾಡುವ ಸಮಯಕ್ಕೆ ದಸ್ತಾವೇಜುಗಳನ್ನು ಹಿಂದಿರುಗಿಸಬೇಕು. ದಸ್ತಾವೇಜುಗಳ ಹಿಂತಿರುಗಿಸುವಲ್ಲಿ ಅನಾವಶ್ಯಕ ವಿಳಂಬ ಮಾಡಿದಲ್ಲಿ ಸಂದಾಯ ಮಾಡುವ ಶಾಖೆಯು ಖಜಾನೆ ಅಧಿಕಾರಿಗೂ ಸಹ ನೆನಪು ಮಾಡಿಕೊಸಲಾಗುವುದು.

ಎ) ನಿವೃತ್ತಿ ವೇತನ ಸಂದಾಯ ರಿಜಿಸ್ಟರಿನ (ಅನುಬಂಧ–ಬಿ) ಷರಾ ಅಂಕಣದಲ್ಲಿ ನಕಲು ನಿವೃತ್ತಿ ವೇತನ ಆದೇಶದ ವಿವರಗಳ ಟಿಪ್ಪಣಿಯನ್ನು ಯಥಾವತ್ತಾಗಿ ನಮೂದು ಮಾಡದಿದ್ದಾಗ ಮೂಲ ನಿವೃತ್ತಿ ವೇತನ ಆದೇಶದ ಯಾವುದೇ ಸಂದಾಯ ಮಾಡಲಾಗುವುದಿಲ್ಲವೆಂಬ ಸಂಗತಿಯನ್ನು ನೆನಪು ಮಾಡಿಕೊಡುವುದು.

ಬಿ) ಪಿಂಚಣಿದಾರನು, ಮೂಲ ನಿವೃತ್ತಿ ವೇತನ ಸಂದಾಯ ಆದೇಶದ ಮೇಲೆ ಯಾವುದೇ ಸಂದಾಯವನ್ನು ಈಗಾಗಲೇ ಸ್ವೀಕರಿಸಿಲ್ಲವೆಂಬ ಬಗ್ಗೆ ಪಿಂಚಣಿದಾರನಿಂದ ಒಂದು ಘೋಷಣೆಯನ್ನು ಮತ್ತು ಮೂಲ ನಿವೃತ್ತಿ ವೇತನ ಸಂದಾಯ ಆದೇಶವು ತದನಂತರ ಪತ್ತೆಯಾದರೆ ಅದನ್ನು ಸಂದಾಯ ಮಾಡುವ ಶಾಖೆಗೆ ಆತನು ಒಪ್ಪಿಸುವನೆಂದು ಹಾಗೂ ಅದರ ಬಲದಿಂದ ಯಾವುದೇ ಸಂದಾಯವನ್ನು ಕ್ಲೇಮು ಮಾಡುವುದಿಲ್ಲವೆಂದು ಆತನಿಂದ ಒಂದು ವಚನಬಂಧವನ್ನು ಪಡೆದುಕೊಂಡು ದಾಖಲೆಯಲ್ಲಿರಿಸಿಕೊಳ್ಳುವುದೇ ಮತ್ತು ಜಿಲ್ಲಾ ಖಜಾನೆ ಅಧಿಕಾರಿಗೆ ಮಾಡಿದ ವರದಿಯನ್ನನುಸರಿಸಿ ಆ ಕಾಲಾವಧಿಯಲ್ಲಿ ಮೂಲ ನಿವೃತ್ತಿ ವೇತನ ಆದೇಶವು ನಷ್ಟವಾಗಿರುವುದಾಗಿ ವರದಿ ಮಾಡಿದಂತೆ ಅದರ ಆಧಾರದ ಮೇಲೆ ಪಿಂಚಣಿದಾರನಿಗೆ ಯಾವುದೇ ಆದೇಶವನ್ನು ಮಾಡಲಾಗಿಲ್ಲವೆಂದು ಅದು ಖಚಿತಪಡಿಸುವುದು.

14. ಶಾಸಕರ ನಿವೃತ್ತಿ ವೇತನದ ವಿಶೇಷತೆಗಳು:

(i) ನಿವೃತ್ತಿ ವೇತನದ ಮೇಲೆ ತುಟ್ಟಿ ಭತ್ಯೆ/ತಾತ್ಕಾಲಿಕ ಹೆಚ್ಚಳ ಅಂಗೀಕಾರಾರ್ಹವಲ್ಲ.

(ii)ನಿವೃತ್ತಿ ವೇತನದ ಯಾವುದೇ ಭಾಗವನ್ನು ಪರಿವರ್ತಿಸಲಾಗುವುದಿಲ್ಲ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

(ಆರ್. ಶ್ರೀಧರನ್)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ ಇವರಿಗೆ ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಮತ್ತು ಖಜಾನೆ ಮತ್ತು ಲೆಕ್ಕಪತ್ರಗಳ ನಿಯಮಗಳ ಶಾಖೆ (ಕೊಠಡಿ ಸಂ:249–ಬಿ), ಆರ್ಥಿಕ ಇಲಾಖೆ ಇವರಿಗೆ 2000 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಲಾಗಿದೆ.

ಪ್ರತಿಗಳು:

1. ಲೆಕ್ಕಪತ್ರ ಮಹಾನಿಯಂತ್ರಕರು, ಆರ್ಥಿಕ ಮಂತ್ರಾಲಯ, ಭಾರತ ಸರ್ಕಾರ, 7ನೇ ಮಹಡಿ, ಲೋಕನಾಯಕ್ ಭವನ, ಖಾನ್ ಮಾರ್ಕೆಟ್, ನವದೆಹಲಿ–110 003.
2. ಭಾರತ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಮಂತ್ರಾಲಯ (ವೆಚ್ಚ ಇಲಾಖೆ), ನವದೆಹಲಿ.
3. ಚೀಫ್ ಅಕೌಂಟಂಟ್, ಭಾರತ ರಿಜರ್ವ್ ಬ್ಯಾಂಕ್, ಸೆಂಟ್ರಲ್ ಆಫೀಸರ್, ಸರ್ಕಾರದ ಮತ್ತು ಬ್ಯಾಂಕು ಖಾತೆಗಳ ಇಲಾಖೆ, ಸಿ–7, ಬಾಂದ್ರಾ–ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಈಸ್ಟ್, ಬಾಂಬೆ–400 051 (100 ಪ್ರತಿಗಳೊಂದಿಗೆ).
4. ರಾಜ್ಯಪಾಲರ ಕಾರ್ಯದರ್ಶಿ, ಕರ್ನಾಟಕ ಸರ್ಕಾರ.
5. ಮುಖ್ಯಮಂತ್ರಿಗಳ ಕಾರ್ಯದರ್ಶಿ.
6. ಸರ್ಕಾರದ ಮುಖ್ಯ ಕಾರ್ಯದರ್ಶಿ/ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ.
7. ಕಾರ್ಯದರ್ಶಿ, ಕರ್ನಾಟಕ ವಿಧಾನಮಂಡಲ (1000 ಪ್ರತಿಗಳೊಂದಿಗೆ).
8. ಮಹಾಲೇಖಪಾಲರು (ಲೆಕ್ಕಪತ್ರಗಳು), ಕರ್ನಾಟಕ, ಬೆಂಗಳೂರು.
9. ಮಹಾಲೇಖಪಾಲರು (ಲೆಕ್ಕಪರಿಶೋಧನೆ–I ಮತ್ತು II) ಕರ್ನಾಟಕ, ಬೆಂಗಳೂರು.
10. ಖಜಾನೆಗಳ ನಿರ್ದೇಶಕರು, ಬೆಂಗಳೂರು.
11. ಜಿಲ್ಲಾ ಖಜಾನೆ ಅಧಿಕಾರಿಗಳು/ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ವ್ಯವಸ್ಥಾಪಕರು, ಭಾರತದ ರಿಸರ್ವ್ ಬ್ಯಾಂಕು, ನೃಪತುಂಗ ರಸ್ತೆ, ಬೆಂಗಳೂರು.

ಅನುಬಂಧ– I

ಘೋಷಣೆ

ಎ) ನಾನು ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಮಾಲೀಕತ್ವದ ಅಥವಾ ನಿಯಂತ್ರಣದ ಯಾವುದೇ ನಿಗಮದಿಂದ ಯಾವುದೇ ವೇತನ/ಪರಿಶ್ರಮ ಧನವನ್ನು ಸ್ವೀಕರಿಸಿರುವುದಿಲ್ಲವೆಂದು ಘೋಷಿಸುತ್ತೇನೆ.

ಬಿ) ನಾನು ಸಂಸತ್ತಿಗೆ ಅಥವಾ ಕರ್ನಾಟಕ ರಾಜ್ಯ ವಿಧಾನಮಂಡಲಕ್ಕೆ ಮರು–ಆಯ್ಕೆಯಾಗಿರುವುದಿಲ್ಲ ಮತ್ತು ನಾನು ಸಂಸತ್ತಿನ ಅಥವಾ ಕರ್ನಾಟಕ ವಿಧಾನಸಭೆ/ಪರಿಷತ್ತಿನ ಅಥವಾ ಯಾವುದೇ ಇತರ ರಾಜ್ಯ ವಿಧಾನಮಂಡಲದ ಹಾಲಿ ಸದಸ್ಯನಲ್ಲವೆಂದು ಘೋಷಿಸುತ್ತೇನೆ.

ಅನುಬಂಧ–ಎ

ಬ್ಯಾಂಕುಗಳ ಶಾಖೆಗಳ ಮುಖಾಂತರ ಅಧಿಕೃತವಾದ ನಿವೃತ್ತಿ ವೇತನ ಸಂದಾಯಗಳ ವಿಷಯಸೂಚಿ ರಿಜಿಸ್ಟರ್

ಉಲ್ಲೇಖ: ಕಂಡಿಕೆ 3(1)

ಪಿಂಚಣಿದಾರರ ಹೆಸರು	ನಿವೃತ್ತಿ ವೇತನ ಸಂದಾಯ ಆದೇಶದ (ಪಿ.ಪಿ.ಓ) ಸಂಖ್ಯೆ	ನಿವೃತ್ತಿ ವೇತನದ ಮಾಸಿಕ ಮೊತ್ತ	ಸಂದಾಯ ಮಾಡಲಾಗುವ ಶಾಖೆಯ ಹೆಸರು	ನಿವೃತ್ತಿ ವೇತನ ಪ್ರಾರಂಭವಾಗುವ ದಿನಾಂಕ	ಷರಾ
1	2	3	4	5	6
1.					
2.					
3.					
4.					
5.					

ಟಿಪ್ಪಣಿ: 1) ಪ್ರತಿಯೊಂದು ನಮೂದನ್ನು ಬ್ಯಾಂಕುಗಳ ಸಂಯೋಜಕ ಶಾಖೆಯ ನಾಮನಿರ್ದೇಶಿತ ಅಧಿಕಾರಿಯು ದೃಢೀಕರಿಸಬೇಕು.

2) ರಿಸರ್ವ್ ಬ್ಯಾಂಕಿನ ಸೂಚನೆಗಳ ಮೇರೆಗೆ ಹೆಚ್ಚುವರಿ ನಮೂದುಗಳಿಗೆ ಅವಕಾಶ ಕಲ್ಪಿಸಬಹುದು.

ಅನುಬಂಧ–ಬಿ

ನಿವೃತ್ತಿ ವೇತನ ಸಂದಾಯದ ರಿಜಿಸ್ಟರ್

ಉಲ್ಲೇಖ: ಕಂಡಿಕೆ 4(1)

ಪಿಂಚಣಿದಾರರ ಹೆಸರು	ನಿವೃತ್ತಿ ವೇತನ ಸಂದಾಯ ಆದೇಶದ (ಪಿ.ಪಿ.ಓ) ಸಂಖ್ಯೆ	ನಿವೃತ್ತಿ ವೇತನ ಸಂದಾಯ ಮಾಡಲಾಗುವ ಅವಧಿ	ನಿವೃತ್ತಿ ವೇತನದ ಮೊತ್ತ	ಹೆಚ್ಚಿನ ಸಂದಾಯವಿದ್ದಲ್ಲಿ ಅದರ ವಸೂಲಾತಿ	ಆದಾಯ ತೆರಿಗೆ ಕಡಿತಗಳು	ಪಿ.ಪಿ.ಒನಲ್ಲಿ ಸಂದಾಯ ಮಾಡಿದ ನಿವ್ವಳ ಮೊತ್ತ	ಸೂಚಿಸಲಾದಂತೆ ನಿವೃತ್ತಿ ವೇತನದ ಹಂಚಿಕೆ	ಷರಾ
1	2	3	4	5	6	7	8	9

ಟಿಪ್ಪಣಿ: 1) ಪ್ರತಿಯೊಂದು ನಮೂದನ್ನು ಸಂದಾಯ ಮಾಡುವ ಶಾಖೆಯ ನಾಮನಿರ್ದೇಶಿತ ಅಧಿಕಾರಿಯು ದೃಢೀಕರಿಸಬೇಕು.

2) ಹೆಚ್ಚುವರಿ ನಮೂದುಗಳನ್ನು ರಿಜರ್ವ್ ಬ್ಯಾಂಕ್ ಸೂಚನೆಗಳ ಮೇರೆಗೆ ಒದಗಿಸಬಹುದು.

ಅನುಬಂಧ–ಸಿ

ಉಲ್ಲೇಖ: ಕಂಡಿಕೆ 7(1)

ಪಿಂಚಣಿದಾರನು ಸಲ್ಲಿಸಬೇಕಾದ ಪ್ರಮಾಣಪತ್ರ

I. ಜೀವಿತ ಪ್ರಮಾಣ ಪತ್ರ:

ನಾನು ––––––––––(ಪಿಂಚಣಿದಾರನ ಹೆಸರು) –––––––––– ನಿವೃತ್ತಿ ವೇತನ ಆದೇಶ ಸಂಖ್ಯೆಯ ಧಾರಕ –––––––––– ಪಿಂಚಣಿದಾರನನ್ನು ನೋಡಿದ್ದೇನೆಂದು ಮತ್ತು ಈ ದಿನಾಂಕದಂದು ಜೀವಂತವಾಗಿರುತ್ತಾನೆ ಎಂದು ಪ್ರಮಾಣೀಕರಿಸುತ್ತೇನೆ.

ಹೆಸರು

ಅಧಿಕೃತ ಅಧಿಕಾರಿಯ ಪದನಾಮ

ಸ್ಥಳ:

ದಿನಾಂಕ:

ಅನುಬಂಧ–ಡಿ

ಉಲ್ಲೇಖ: ಕಂಡಿಕೆ 4(1)

---------- ಬ್ಯಾಂಕು
---------- (ಶಾಖೆಯ ಹೆಸರು)
---------- ಸ್ಥಳ

ಸಂಖ್ಯೆ: ---------- ದಿನಾಂಕ:-------

ಇವರಿಗೆ,

ಶ್ರೀ/ಶ್ರೀಮತಿ ----------

ವಿಷಯ: ಸಾರ್ವಜನಿಕ ವಲಯ ಬ್ಯಾಂಕುಗಳ ಮುಖಾಂತರ ನಿವೃತ್ತಿ ವೇತನ ಸಂದಾಯ.

ಮಾನ್ಯರೇ,

ನಿವೃತ್ತಿ ವೇತನ ಸಂದಾಯ ಆದೇಶದ ಪಿಂಚಣಿದಾರನ ಭಾಗವನ್ನು ಒಳಗೊಂಡು ನಿಮ್ಮ ನಿವೃತ್ತಿ ವೇತನದ ದಾಖಲೆಗಳನ್ನು ಈ ಶಾಖೆಯಲ್ಲಿ ಸ್ವೀಕರಿಸಲಾಗಿದೆ. ನಿಮ್ಮನ್ನು ಈ ಕೂಡಲೇ ವೈಯಕ್ತಿಕ ಗುರುತಿಗಾಗಿ ಮತ್ತು ---------- ರಿಂದ ---------- ನಡುವೆ ಯಾವುದೇ ಕೆಲಸದ ದಿನದಂದು ಈ ಮುಂದಿನ ದಸ್ತಾವೇಜುಗಳನ್ನು ನಿಮ್ಮೊಂದಿಗೆ ತರಬೇಕೆಂದು ಕೋರಲಾಗಿದೆ:

(i) ನಿಮ್ಮ ನಿವೃತ್ತಿ ವೇತನ ಸಂದಾಯ ಆದೇಶವನ್ನು ಖಜಾನೆ ಅಧಿಕಾರಿಗೆ ಕಳುಹಿಸಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯವು ನೀಡಿದ ಪತ್ರದ ವೈಯಕ್ತಿಕ ಪ್ರತಿ;

(ii) ಲಗತ್ತಿಸಲಾದ ನಮೂನೆಯಲ್ಲಿ ಉದ್ಯೋಗವಿಲ್ಲದಿರುವ/ಮರು–ಆಯ್ಕೆಯಾಗದಿರುವ ಬಗ್ಗೆ ಪ್ರಮಾಣಪತ್ರ;

(iii) ಕುಟುಂಬ ಪಿಂಚಣಿದಾರರ ಪ್ರಮಾಣಪತ್ರದ ಸಂದರ್ಭದಲ್ಲಿ ವಿಧವೆ/ವಿಧುರನ ಮರು–ವಿವಾಹವಾಗದಿರುವ ಅಥವಾ 21 ವರ್ಷಗಳ ವಯಸ್ಸನ್ನು ತಲುಪದಿರುವ ಹೆಣ್ಣುಮಕ್ಕಳು ಮದುವೆಯಾಗದಿರುವ ಬಗ್ಗೆ ಪ್ರಮಾಣಪತ್ರ (ನಮೂನೆಯನ್ನು ಲಗತ್ತಿಸಲಾಗಿದೆ);

(iv) ಹೆಚ್ಚುವರಿ ಮೊತ್ತಗಳನ್ನು ಹೆಚ್ಚಾಗಿ ಸಂದಾಯ ಮಾಡಿದ (ಯಾವುದಾದರೂ ಇದ್ದರೆ) ಮೊತ್ತವನ್ನು ಮರುಪಾವತಿ ಮಾಡಿದ್ದಕ್ಕಾಗಿ ವಚನಬಂಧ (ನಮೂನೆಯನ್ನು ಲಗತ್ತಿಸಲಾಗಿದೆ);

(v)

(vi)

(vii)

2. ನಿವೃತ್ತಿ ವೇತನ ಸಂದಾಯ ಆದೇಶದೊಂದಿಗೆ ನಿಮ್ಮ ಭಾವಚಿತ್ರವನ್ನು ಸ್ವೀಕರಿಸಲಾಗಿಲ್ಲ. ನೀವು, ನಿಮ್ಮ ಮತ್ತು ನಿಮ್ಮ ಪತಿಯ/ಪತ್ನಿಯ ಪಾಸ್‌ಪೋರ್ಟ್ ಅಳತೆಯ ಜಂಟಿ ಭಾವಚಿತ್ರವನ್ನು ನಿಮ್ಮೊಂದಿಗೆ ತರಬೇಕೆಂದು ಕೋರಲಾಗಿದೆ.

3. ನೀವು ಈಗಾಗಲೇ ಖಾತೆ ಹೊಂದಿರದ ಹೊರತು, ಈ ಶಾಖೆಯಲ್ಲಿ ನಿಮ್ಮ ಹೆಸರಿನಲ್ಲಿ (ಜಂಟಿ ಅಥವಾ ಎರಡೂ ಅಥವಾ ಉತ್ತರಾಧಿಕಾರಿ ಖಾತೆಯಲ್ಲ) ಉಳಿತಾಯ/ ಚಾಲ್ತಿ ಖಾತೆ ತೆರೆಯುವುದು ಅಗತ್ಯವಾಗಿರುತ್ತದೆ.
ಹೊಸ ಖಾತೆಯನ್ನು ತೆರೆಯುವ ಉದ್ದೇಶಕ್ಕಾಗಿ ಅಗತ್ಯ ನಮೂನೆಗಳನ್ನು ಸಹ ಲಗತ್ತಿಸಲಾಗಿದೆ.

ನಿಮ್ಮ ವಿಶ್ವಾಸಿ,

(ವ್ಯವಸ್ಥಾಪಕರು/ಶಾಖಾ–ಪ್ರಭಾರಿ)

(ಅನ್ವಯವಾಗದ್ದನ್ನು ಹೊಡೆದುಹಾಕಿ)

ಅನುಬಂಧ–ಇ

(ವಚನಬಂಧ ಪತ್ರದ ಮಾದರಿ)

ಶಾಖಾ ವ್ಯವಸ್ಥಾಪಕರು, ಉಲ್ಲೇಖ: ಕಂಡಿಕೆ 4(ii)

---------- ಬ್ಯಾಂಕು (ಬ್ಯಾಂಕಿನ ಹೆಸರು)
---------- ಶಾಖೆ (ಶಾಖೆಯ ಹೆಸರು)

ಮಾನ್ಯರೇ,

ನಿವೃತ್ತಿ ವೇತನ ಸಂದಾಯ ಆದೇಶದ ಮೇರೆಗೆ ನಿವೃತ್ತಿ ವೇತನದ ಸಂದಾಯ
ಸಂಖ್ಯೆ. ---------- ನಿಮ್ಮ ಕಚೇರಿಯ ಮುಖಾಂತರ

*****

ನಿಮ್ಮಲ್ಲಿರುವ ನನ್ನ ಖಾತೆಗೆ ಜಮೆ ಮಾಡುವ ಮೂಲಕ ಪ್ರತಿ ತಿಂಗಳು ನನಗೆ ಬಾಕಿ ಇರುವ ನಿವೃತ್ತಿ ವೇತನ ಸಂದಾಯ ಮಾಡಲು ಒಪ್ಪಿ ನನ್ನ ಕೋರಿಕೆಯನ್ನು ನೀವು ಪರಿಗಣಿಸಿದ್ದು, ಕೆಳಗೆ ಸಹಿ ಮಾಡಿರುವ ನಾನು, ನಾನು ಹಕ್ಕುಳ್ಳದಿರುವ ಯಾವುದೇ ಮೊತ್ತವನ್ನು ಅಥವಾ ನಾನು ಹಕ್ಕುಳ್ಳ ಅಥವಾ ಹಕ್ಕುಳ್ಳವನಾಗಬಹುದಾದ ಮೊತ್ತಕ್ಕೆ ಹೆಚ್ಚುವರಿಯಾಗಿ ನನ್ನ ಖಾತೆಗೆ ಜಮೆ ಮಾಡಿರಬಹುದಾದ ಯಾವುದೇ ಮೊತ್ತವನ್ನು ಮತ್ತು ನನ್ನ ನಿವೃತ್ತಿ ವೇತನದಿಂದ ವಸೂಲು ಮಾಡಿಕೊಳ್ಳಬೇಕಾದ ಯಾವುದೇ ಬಾಕಿಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಮರುಪಾವತಿಸಲು ಅಥವಾ ತುಂಬಿಕೊಡಲು ನಾನು ಒಪ್ಪಿದ್ದೇನೆ ಮತ್ತು ವಚನಬದ್ಧನಾಗಿದ್ದೇನೆ. ಮುಂದುವರಿದು, ನಾನು ಈ ಸ್ಕೀಮಿನ ಅಡಿಯಲ್ಲಿ ನನ್ನ ಖಾತೆಗೆ ನನ್ನ ನಿವೃತ್ತಿ ವೇತನವನ್ನು ಹಾಗೆ ಜಮೆ ಮಾಡುವಲ್ಲಿ ಬ್ಯಾಂಕು ಅನುಭವಿಸಿದ ಅಥವಾ ಭರಿಸಿದ ಯಾವುದೇ ನಷ್ಟವನ್ನು ಬ್ಯಾಂಕಿಗೆ ನಷ್ಟಭರ್ತಿ ಮಾಡಿಕೊಡಲು ಮತ್ತು ತಕ್ಷಣವೇ ಅದನ್ನು ಬ್ಯಾಂಕಿಗೆ ಸಂದಾಯ ಮಾಡಲು ಮತ್ತು ನನ್ನ ಸದರಿ ಖಾತೆಗೆ/ನನಗೆ ಸೇರಿದ ಬ್ಯಾಂಕಿನ ಸ್ವಾಧೀನದಲ್ಲಿರುವ ಠೇವಣಿಗಳಿಗೆ ಜಮೆ ಮಾಡುವ ಮೂಲಕ ಬಾಕಿ ಮೊತ್ತವನ್ನು ವಸೂಲು ಮಾಡಿಕೊಳ್ಳಲು ಬ್ಯಾಂಕು ರದ್ದುಪಡಿಸಲಾಗದಂತೆ ಅಧಿಕೃತವಾಗಿರುವುದೆಂದು ಸಹ/ಸ್ವತ: ನಾನು ಮತ್ತು ನನ್ನ ವಾರಸುದಾರರು, ಉತ್ತರಾಧಿಕಾರಿಗಳು, ಕಾರ್ಯನಿರ್ವಾಹಕರು (executor) ಮತ್ತು ಆಡಳಿತಗಾರರು ಬದ್ಧರಾಗಿರುತ್ತೇವೆ ಎಂದು ಈ ಮೂಲಕ ವಚನಬದ್ಧರಾಗಿರುತ್ತೇವೆ ಮತ್ತು ಒಪ್ಪಿರುತ್ತೇವೆ.

ದಿನಾಂಕ: ತಮ್ಮ ವಿಶ್ವಾಸಿ
ಸಾಕ್ಷಿ: ಸಹಿ:
(i) ಸಹಿ: ಹೆಸರು:
ಹೆಸರು: ವಿಳಾಸ:
ವಿಳಾಸ:
(ii) ಸಹಿ:
ಹೆಸರು:
ವಿಳಾಸ:

ಅನುಬಂಧ– ಎಫ್

ಬಾಕಿ ಮತ್ತು ಹಿಂಪಡೆದ ವಿವರಪಟ್ಟಿ

ಪಿಂಚಣಿದಾರರ ಹೆಸರು:–––––––––––––– ಉಲ್ಲೇಖ: ಕಂಡಿಕೆ 11 (ಬಿ)

ತಿಂಗಳು	ಕ.ವಿ.ಪ.ಸ. ಖಜಾನೆ ಅಧಿಕಾರಿಗಳ ಪರಿಷ್ಕೃತ ನಿವೃತ್ತಿ ವೇತನ ಅಧಿಕಾರ ಪತ್ರದ ವಸೂಲಿ ಪ್ರಕಾರ ಬಾಕಿ ಇರುವ ಮೊತ್ತ	ನಿವೃತ್ತಿ ವೇತನದಿಂದ ಪಡೆದ ಮೊತ್ತ	ನಿವೃತ್ತಿ ವೇತನದಿಂದ ಸಂದಾಯ ಮಾಡಬೇಕಾದ ಬಾಕಿ (+) ವಸೂಲಿ ಮಾಡಿಕೊಳ್ಳಬೇಕಾದ ಮೊತ್ತ (–)
	ರೂ.	ರೂ.	ರೂ.
1	2	3	4
	ಒಟ್ಟು ವಸೂಲು ಮಾಡಿಕೊಳ್ಳಬೇಕಾದ ನಿವ್ವಳ ಮೊತ್ತ	ಎ ಬಿ ಎ–ಬಿ	

[ರೂ.–– ಮಾತ್ರ (ಅಕ್ಷರಗಳಲ್ಲಿ)]

ಪರಿಶೀಲಿಸಲಾಗಿ, ಸರಿ ಎಂದು ಕಂಡುಬಂದಿರುತ್ತದೆ ಶಾಖಾ ವ್ಯವಸ್ಥಾಪಕ (ಪ್ರಭಾರಿ)

ಖಜಾನೆ ಅಧಿಕಾರಿ

ಅನುಬಂಧ– ಜಿ

ಮರು–ವಿವಾಹವಾಗದಿರುವ/ವಿವಾಹವಾಗದಿರುವ ಕುರಿತು ಪ್ರಮಾಣಪತ್ರ

ನಾನು ವಿವಾಹವಾಗಿಲ್ಲವೆಂದು ಮತ್ತು ಕಳೆದ ವರ್ಷದ ಅವಧಿಯಲ್ಲಿ ವಿವಾಹವಾಗಿರುವುದಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಅಥವಾ

* ನಾನು ಮರು–ವಿವಾಹವಾಗಿರುವುದಿಲ್ಲವೆಂದು ಮತ್ತು ಅಂಥ ಒಂದು ಘಟನೆ ನಡೆದಲ್ಲಿ ತ್ವರಿತವಾಗಿ ಖಜಾನೆಗೆ/ಬ್ಯಾಂಕಿಗೆ ವರದಿ ಮಾಡುವುದಾಗಿ ವಚನಬದ್ಧನಾಗಿ/ಳಾಗಿರುತ್ತೇನೆಂದು ಈ ಮೂಲಕ ಘೋಷಿಸುತ್ತೇನೆ.

[* ಕುಟುಂಬ ನಿವೃತ್ತಿ ವೇತನದ ವಿಧವಾ/ವಿಧುರ ಸ್ವೀಕರ್ತೃವಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ಕೇವಲ ಒಂದು ಬಾರಿ ಮಾತ್ರ ಒದಗಿಸಬೇಕು]

ಸ್ಥಳ: ಸಹಿ

ದಿನಾಂಕ: ಪಿಂಚಣಿದಾರನ ಹೆಸರು

ನಿವೃತ್ತಿ ವೇತನ ಸಂದಾಯ ಆದೇಶ ಸಂಖ್ಯೆ

ನನಗೆ ತಿಳಿದಿರುವಷ್ಟರಮಟ್ಟಿಗೆ ಮೇಲಿನ ಘೋಷಣೆಯು ಸರಿಯಾಗಿರುವುದಾಗಿ ನಾನು ಪ್ರಮಾಣೀಕರಿಸುತ್ತೇನೆ.

ಸ್ಥಳ: ಜವಾಬ್ದಾರಿಯುತ ಅಧಿಕಾರಿಯ

ದಿನಾಂಕ: ಅಥವಾ ಸುಪರಿಚಿತ ವ್ಯಕ್ತಿಯ ಸಹಿ

ಹೆಸರು:

ಪದನಾಮ:

ಅನುಬಂಧ–ಎಚ್

(ಕಂಡಿಕೆ 13 (ii)ನ್ನು ನೋಡಿ)

ಕರ್ನಾಟಕ ಸರ್ಕಾರದ ಪರವಾಗಿ ನಿವೃತ್ತಿ ವೇತನಗಳ ಸಂದಾಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ವಲಯ ಬ್ಯಾಂಕುಗಳು ಬರೆದುಕೊಡಬೇಕಾದ ನಷ್ಟಭರ್ತಿ ಬಂಧಪತ್ರದ ನಮೂನೆಗಳು.

ಈ ನಷ್ಟಭರ್ತಿ ಬಂಧಪತ್ರವನ್ನು ---------- ಸ್ಥಾಪಿತ ಬ್ಯಾಂಕಿಂಗ್ ಕಂಪನಿಯು ಎರಡು ಸಾವಿರದ-- ------- ಇಸ್ವಿಯ ------- ತಿಂಗಳ ---------- ದಿನದಂದು --------- ನಲ್ಲಿ ಬರೆಯಲಾಗಿದೆ.

(ಬ್ಯಾಂಕುಗಳ ಹೆಸರು)

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಧಿನಿಯಮ, 1955/ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959/ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ಮತ್ತು ---------- ನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುವ (ಇಲ್ಲಿ ಇನ್ನು ಮುಂದೆ **"ಬ್ಯಾಂಕು"** ಎಂದು ಉಲ್ಲೇಖಿಸಲಾಗುವುದು, ಈ ಪದಗಳು ಸಂದರ್ಭಕ್ಕೆ ವಿರುದ್ದವಿದ್ದ ಹೊರತು ಅದರ ಉತ್ತರಾಧಿಕಾರಿಗಳನ್ನು ಮತ್ತು ವರ್ಗಾಯಿತರನ್ನು ಒಳಗೊಳ್ಳತಕ್ಕದ್ದು. ಅಂತಿಮವಾಗಿ ನಿವೃತ್ತಿ ವೇತನ ಸಂದಾಯಗಳಿಗೆ ಮಾಡಿದ ಯಾವುದೇ ತಪ್ಪು ಅಥವಾ ಹೆಚ್ಚಿನ ಸಂದಾಯಗಳಿಗಾಗಿ ಸರ್ಕಾರಕ್ಕೆ ಆದ ಯಾವುದೇ ನಷ್ಟಕ್ಕಾಗಿ ಕರ್ನಾಟಕದ ರಾಜ್ಯಪಾಲರ ಪರವಾಗಿ ಸ್ವತಃ ಅವರು ಬದ್ಧರಾಗಿರುತ್ತಾರೆ.

2. ಕರ್ನಾಟಕ ಸರ್ಕಾರವು (ಇಲ್ಲಿ ಇನ್ನು ಮುಂದೆ **"ಸರ್ಕಾರ"** ಎಂದು ಉಲ್ಲೇಖಿಸಲಾಗುವುದು) ಸರ್ಕಾರದ ಕೆಲವು ಪಿಂಚಣಿದಾರರಿಗೆ, ಕಾಲಕಾಲಕ್ಕೆ ಜಾರಿಯಲ್ಲಿರುವ, ಸರ್ಕಾರವು ಈ ಬಗ್ಗೆ ಹೊರಡಿಸಿದ ಆದೇಶಗಳ ನಿಬಂಧನೆಗಳಿಗನುಸಾರವಾಗಿ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಅವರ ನಿವೃತ್ತಿ ವೇತನವನ್ನು ಸ್ವೀಕರಿಸಲು ಸರ್ಕಾರದ ಕೆಲವು ಪಿಂಚಣಿದಾರರಿಗೆ ಸೌಲಭ್ಯ ಒದಗಿಸಲು ನಿರ್ಧರಿಸಿರುವುದರಿಂದ ಮತ್ತು ಬ್ಯಾಂಕು ಮಾಡಬಹುದಾದಂಥ, ತಪ್ಪಾದ ಅಥವಾ ಹೆಚ್ಚಿನ ಸಂದಾಯದಿಂದ ಸರ್ಕಾರಕ್ಕೆ ಉಂಟಾದ ಯಾವುದೇ ನಷ್ಟವನ್ನು ಕರ್ನಾಟಕದ ರಾಜ್ಯಪಾಲರಿಗೆ ತುಂಬಿಕೊಡಲು ಬ್ಯಾಂಕುಗಳು ಒಪ್ಪಿಕೊಂಡಿರುವುದಕ್ಕೆ ಒಳಪಟ್ಟಿರುವುದರಿಂದ;

3. ಮತ್ತು ಬ್ಯಾಂಕು ಅಂಥ ಪಿಂಚಣಿದಾರರಿಗೆ ಸರ್ಕಾರದ ಪರವಾಗಿ ಅವರ ಉಳಿತಾಯ/ಚಾಲ್ತಿ ಖಾತೆಗಳಿಗೆ ನಿವೃತ್ತಿ ವೇತನ ಜಮೆ ಮಾಡಲು ಏರ್ಪಾಡು ಮಾಡುವುದಾಗಿ ಮತ್ತು ಈ ನಷ್ಟಭರ್ತಿಯನ್ನು ಬರೆದುಕೊಡುವ ಮೂಲಕ ಸರ್ಕಾರಕ್ಕೆ ನಷ್ಟಭರ್ತಿ ಮಾಡಿಕೊಡಲು ಒಪ್ಪಿರುವುದರಿಂದ;

4. ಸದರಿ ಒಪ್ಪಂದದ ಅನುಸರಣೆಯಲ್ಲಿ, ಬ್ಯಾಂಕಿನ ಘಟಕಗಳಾಗಿರುವ ಸರ್ಕಾರದ ಸದರಿ ಪಿಂಚಣಿದಾರರಿಗೆ ಬಾಕಿ ಇರುವ ಅಥವಾ ಸಂದಾಯ ಮಾಡಿದ ನಿವೃತ್ತಿವೇತನಗಳ ಮೊತ್ತವನ್ನು ಕಾಲಕಾಲಕ್ಕೆ ಬ್ಯಾಂಕಿಗೆ ಸಂದಾಯ ಮಾಡುವುದಕ್ಕೆ ಒಪ್ಪಿ ಕರ್ನಾಟಕ ರಾಜ್ಯಪಾಲರಿಗೆ ಸಂಬಂಧಿಸಿದಂತೆ ಬ್ಯಾಂಕು, ಯಾವುದೇ ಕುಟುಂಬ ನಿವೃತ್ತಿ ವೇತನವೂ ಸೇರಿದಂತೆ ನಿವೃತ್ತಿವೇತನ ಬಾಕಿಯಿದ್ದ ಅಥವಾ ಬಾಕಿ ಇರುವ ದಿನಾಂಕವನ್ನು ಮೀರಿ ಅಥವಾ ತಪ್ಪಾಗಿ ಸಂದಾಯ ಮಾಡಲಾಗಿರುವ ಯಾವುದೇ ಮೊತ್ತವನ್ನು ಅಥವಾ ಕಾಲಕಾಲಕ್ಕೆ ಸರ್ಕಾರ ಅಥವಾ ಭಾರತೀಯ ರಿಸರ್ವ್ ಬ್ಯಾಂಕ್, ಬ್ಯಾಂಕಿಗೆ ನೀಡಿದ ಅಧಿಕಾರ ಮತ್ತು ಸೂಚನೆಗಳ ಹೊರತು ಅಥವಾ ಅದಕ್ಕಿಂತ ಹೆಚ್ಚಾಗಿ ಸಂದಾಯ ಮಾಡಲಾಗಿರುವ ಮೊತ್ತವನ್ನು ಮೀರಿ ಕುಟುಂಬ ನಿವೃತ್ತಿ ವೇತನವನ್ನು ಪಡೆಯುವ ಯಾರೇ

ವ್ಯಕ್ತಿಯು ಸೇರಿದಂತೆ ಪಿಂಚಣಿದಾರನಿಗೆ ಸಂದಾಯ ಮಾಡಲಾದ ಬ್ಯಾಂಕು ಅಥವಾ ಯಾವುದೇ ಮೊತ್ತವು, ಸಂಬಂಧಪಟ್ಟ ಪಿಂಚಣಿದಾರನಿಗೆ ಸಂಪೂರ್ಣವಾಗಿಯಾಗಲೀ ಅಥವಾ ಭಾಗಶಃವಾಗಿಯಾಗಲೀ ಸಂದಾಯ ಮಾಡಿಲ್ಲವೆಂದು ಕಂಡುಬಂದರೆ ಅಥವಾ ಸ್ಥಿರಪಟ್ಟರೆ ಕರ್ನಾಟಕ ರಾಜ್ಯಪಾಲರು ಬ್ಯಾಂಕಿಗೆ ಹಾಗೆ ಸಂದಾಯ ಮಾಡಿದ ಯಾವುದೇ ಹಣವನ್ನು ಬೇಡಿಕೆ ಮೇಲೆ ಅಥವಾ ಬೇಡಿಕೆಯಿಲ್ಲದೆ ಕರ್ನಾಟಕದ ರಾಜ್ಯಪಾಲರಿಗೆ ಮರುಸಂದಾಯ ಮಾಡಲು ಈ ಮೂಲಕ ಒಪ್ಪಿರುತ್ತದೆ ಮತ್ತು ವಚನಬದ್ಧವಾಗಿರುತ್ತದೆ ಎಂದು ಕರ್ನಾಟಕದ ರಾಜ್ಯಪಾಲರೊಂದಿಗೆ ಮತ್ತು ಅವರ ಕಚೇರಿಯ ಉತ್ತರಾಧಿಕಾರಿಗಳೊಂದಿಗೆ ಈ ಮೂಲಕ ಒಡಂಬಡಿಕೆ ಮಾಡಿಕೊಂಡಿರುತ್ತದೆ ಅಥವಾ ಅವರಿಗೆ ಬಂಧಪತ್ರವನ್ನು ನೀಡುತ್ತದೆಂಬುದಕ್ಕೆ ಈಗ ಈ ನಷ್ಟಭರ್ತಿ ಬಂಧಪತ್ರವು ಸಾಕ್ಷಿಯಾಗಿರುತ್ತದೆ.

5. ಬ್ಯಾಂಕು ಈ ಮೂಲಕ, ಮೇಲೆ ಹೇಳಿದ ಕಾರಣಕ್ಕಾಗಿ ಬ್ಯಾಂಕು ಸರ್ಕಾರಕ್ಕೆ ಬಾಕಿ ಮತ್ತು ಸಂದಾಯವನ್ನು ಬ್ಯಾಂಕಿನಿಂದ ಸಂದಾಯ ಮಾಡಬೇಕೆಂದು ಸರ್ಕಾರವು ಹೇಳಿದಾಗ, ಹಾಗೆ ಮರುಪಾವತಿ ಮಾಡಬೇಕಾದ/ ಮರುಸಂದಾಯ ಮಾಡಬೇಕಾದ ಮೊತ್ತವು ಬಾಕಿ ಮೊತ್ತಕ್ಕೆ ಸಂಬಂಧಿಸಿದ ಹಾಗೆ ನಿರ್ಣಾಯಕವಾಗಿರತಕ್ಕದ್ದು ಮತ್ತು ಸರ್ಕಾರಕ್ಕೆ ಸದರಿ ಮೊತ್ತವನ್ನು ಸಂದಾಯ ಮಾಡುವುದು ಬ್ಯಾಂಕಿನ ಹೊಣೆಗಾರಿಕೆಯಾಗಿರತಕ್ಕದ್ದು ಎಂಬುದನ್ನು ಈ ಮೂಲಕ ಬ್ಯಾಂಕು ಒಪ್ಪುತ್ತದೆ.

6. ಬ್ಯಾಂಕು, ತತ್ಕಾಲದಲ್ಲಿ ಜಾರಿಯಲ್ಲಿರಬಹುದಾಗಿರುವ ಯಾವುದೇ ಕಾನೂನಿನ ಉಪಬಂಧಗಳನ್ನು ಅಥವಾ ತನ್ನ ಗ್ರಾಹಕರ ಖಾತೆಗಳಿಗೆ ಸಂಬಂಧಿಸಿದ ಮಾಹಿತಿಯ ಗೌಪ್ಯತೆಗೆ ಸಂಬಂಧಪಟ್ಟಂತೆ ಬ್ಯಾಂಕರುಗಳ ನಡುವಿನ ಪದ್ಧತಿಗಳನ್ನು ಗಮನದಲ್ಲಿರಿಸಿಕೊಂಡು, ಕಾಲಕಾಲಕ್ಕೆ ಕರ್ನಾಟಕದ ರಾಜ್ಯಪಾಲರು ಈ ಬಗ್ಗೆ ನಿರ್ದಿಷ್ಟಪಡಿಸಿದ ಅಥವಾ ನಾಮನಿರ್ದೇಶಿಸಿದಂಥ ಪ್ರಾಧಿಕಾರಿಯು ಕೇಳಬಹುದಾದಂತೆ ಬ್ಯಾಂಕು ಸಂದಾಯ ಮಾಡಿ ವಿವಾದದಲ್ಲಿರುವ ನಿವೃತ್ತಿ ವೇತನಗಳಿಗೆ ಸಂಬಂಧಿಸಿದಂಥ ಮಾಹಿತಿಯನ್ನು ಅಂಥ ಪ್ರಾಧಿಕಾರಿಗೆ ಒದಗಿಸಲು ಈ ಮೂಲಕ ಒಪ್ಪುತ್ತದೆ ಮತ್ತು ಕರ್ನಾಟಕದ ರಾಜ್ಯಪಾಲರಿಗೆ ಮತ್ತು ಅವರ ಕಚೇರಿಯ ಉತ್ತರಾಧಿಕಾರಿಗೆ ವಚನಬದ್ಧವಾಗಿರುತ್ತದೆ.

7. ದಸ್ತಾವೇಜುಗಳಿಗೆ ಸಂದಾಯ ಮಾಡಬಹುದಾದ ಸ್ಟಾಂಪು ಸುಂಕವನ್ನು ಕರ್ನಾಟಕದ ರಾಜ್ಯಪಾಲರು ಸಂದಾಯ ಮಾಡುವರು.

ಅದರ ಸಾಕ್ಷಿಯಾಗಿ---------- ಬ್ಯಾಂಕು ಇಲ್ಲಿ ಈ ಮೊದಲು ಮೇಲೆ ಬರೆಯಲಾದ ದಿನಾಂಕ ಮತ್ತು ವರ್ಷದಂದು ಅದರ ಪರವಾಗಿ ಬರೆಯಬೇಕಾದ ಈ ಪ್ರಸ್ತುತಿಗಳನ್ನು ಮಾಡಿದೆ.

ಇವರ ಸಮಕ್ಷಮದಲ್ಲಿ, ---------- ಬ್ಯಾಂಕಿನ ಪರವಾಗಿ ---------- ರಂದು ಸಹಿ ಮಾಡಲಾಗಿದೆ ಮತ್ತು ರವಾನಿಸಲಾಗಿದೆ.

(1)

(2)

ಸಾಕ್ಷಿದಾರ

ನಮೂನೆ – I

(4ನೇ ನಿಯಮ ನೋಡಿ)

ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಶಾಸಕರಿಗೆ ನಿವೃತ್ತಿ ವೇತನ ಮಂಜೂರು ಮಾಡುವುದಕ್ಕಾಗಿ ಅರ್ಜಿ ನಮೂನೆ

1. ಅರ್ಜಿದಾರರ ಹೆಸರು (ದಪ್ಪ ಅಕ್ಷರಗಳಲ್ಲಿ)

2. ತಂದೆಯ ಹೆಸರು (ವಿವಾಹಿತ ಮಹಿಳೆಯ ಸಂದರ್ಭದಲ್ಲಿ ಪತಿಯ ಹೆಸರು)

3. ಗ್ರಾಮ ಮತ್ತು ಜಿಲ್ಲೆಯ ಸಹಿತ ಖಾಯಂ ನಿವಾಸದ ವಿಳಾಸ

4. 1ನೇ ಜನವರಿ, 1952ರ ತರುವಾಯ ಕರ್ನಾಟಕ ವಿಧಾನಮಂಡಲದ ಸದಸ್ಯರಾಗಿದ್ದ ಕಾಲಾವಧಿಯ ವಿವರಗಳು

ವಿಧಾನಸಭೆ:

---------- ರಿಂದ

---------- ರವರೆಗೆ

(1)

(2)

(3)

ವಿಧಾನ ಪರಿಷತ್ತು:

---------- ರಿಂದ

---------- ರವರೆಗೆ

(1)

(2)

(3)

5. ಗುರುತಿನ ಚಿಹ್ನೆಗಳು

(1)

(2)

6. ಭಾವಚಿತ್ರದ ಮೂರು ಪ್ರತಿಗಳನ್ನು ಲಗತ್ತಿಸಲಾಗಿದೆಯೇ?

7. ಯುಕ್ತವಾಗಿ ದೃಢೀಕರಿಸಿದ ನಾಲ್ಕು ಮಾದರಿ ಸಹಿಗಳನ್ನು ಲಗತ್ತಿಸಲಾಗಿದೆಯೇ?

8. ಅರ್ಜಿದಾರರು ನಿವೃತ್ತಿ ವೇತನವನ್ನು ಚೆಕ್ಕಿನ ಮೂಲಕ ಸಂದಾಯ ಮಾಡ ಬೇಕೆಂದು ಇಚ್ಚಿಸುತ್ತಾರೆಯೇ ಅಥವಾ ಬ್ಯಾಂಕಿನಲ್ಲಿರುವ ತನ್ನ ಖಾತೆಗೆ ಜಮೆ ಮಾಡಬೇಕೇ. ಹಾಗಿದ್ದಲ್ಲಿ ಬ್ಯಾಂಕಿನ ಹೆಸರು, ಸ್ಥಳ ಮತ್ತು ಖಾತೆ ಸಂಖ್ಯೆಯನ್ನು ನಿರ್ದಿಷ್ಟಪಡಿಸಬೇಕು.

ಮಾದರಿ ಸಹಿಯನ್ನು ರಾಜ್ಯ ಸರ್ಕಾರದ ಗೆಜೆಟೆಡ್ ಅಧಿಕಾರಿಯು ದೃಢೀಕರಿಸಬೇಕು.

9. ಅರ್ಜಿದಾರನು ಯಾವುದೇ ವೇತನ, ಸಂಭಾವನೆಯನ್ನು ಅಥವಾ ನಿವೃತ್ತಿ ವೇತನವನ್ನು ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಅಥವಾ

ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರವು ಮಾಲೀಕತ್ವ ಹೊಂದಿದ ಅಥವಾ ನಿಯಂತ್ರಣಕ್ಕೊಳಪಟ್ಟ ಯಾವುದೇ ನಿಗಮದಿಂದ ಪಡೆಯುತ್ತಿದ್ದಾನೆಯೇ?

ನಾನು, ಮೇಲೆ ಒದಗಿಸಿದ ಎಲ್ಲಾ ವಿವರಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾಗಿವೆ ಮತ್ತು ಸರಿಯಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ------ ಅರ್ಜಿದಾರನ ಸಹಿ

ದಿನಾಂಕ: ----------

ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನಸೌಧ,
ಬೆಂಗಳೂರು.

ಕುಟುಂಬ ನಿವೃತ್ತಿ ವೇತನದ ಅರ್ಜಿ

ನಿಯಮ 11(ಎ)

ಅರ್ಜಿದಾರರ
ಭಾವಚಿತ್ರ

1. ವಿಧಾನ ಪರಿಷತ್ತಿನ ದಿವಂಗತ ಮಾಜಿ ಸದಸ್ಯರ ಹೆಸರು :
2. ದಿವಂಗತ ಮಾಜಿ ಸದಸ್ಯರ ಪತಿ/ಪತ್ನಿಯ ಹೆಸರು :
3. ಮಾಜಿ ಸದಸ್ಯರು ನಿಧನ ಹೊಂದಿದ ದಿನಾಂಕ ಮತ್ತು ಸ್ಥಳ :
4. ಅರ್ಜಿದಾರರ 4 ಭಾವಚಿತ್ರ (ಪಾಸ್‌ಪೋರ್ಟ್ ಅಳತೆ) :
5. ಅರ್ಜಿದಾರರ 3 ಮಾದರಿ ಸಹಿ ಹಾಗೂ 2 ಗುರುತುಗಳು :
6. ಅರ್ಜಿದಾರರ ರಾಷ್ಟ್ರೀಕೃತ ಬ್ಯಾಂಕಿನ ಖಾತೆ ಸಂಖ್ಯೆ ಹಾಗೂ ವಿಳಾಸ :
7. ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಬೇಕಾದ ಇತರೆ ದಾಖಲಾತಿಗಳು :

ಎ. ದಿವಂಗತ ಮಾಜಿ ಸದಸ್ಯರು ಸದಸ್ಯರಾಗಿದ್ದ ಅವಧಿ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವುದು :

ಬಿ. ಮರಣ ದೃಢೀಕರಣ ಪತ್ರ (ಮೂಲ) :

ಸಿ. ಒಂದು ಭಾವಚಿತ್ರ, ಗುರುತುಗಳು ಹಾಗೂ ಮಾದರಿ ಸಹಿಯನ್ನು ತಹಶೀಲ್ದಾರ್‌ರವರಿಂದ ದೃಢೀಕರಿಸತಕ್ಕದ್ದು :

ಡಿ. ವಂಶವೃಕ್ಷ ಪ್ರಮಾಣ ಪತ್ರ :

ಇ. ಪಿಂಚಣಿ ನೀಡುವ ಸಂಬಂಧ ನಿರಾಕ್ಷೇಪಣಾ ಪ್ರಮಾಣಪತ್ರ :

ಘೋಷಣೆ

ಈ ಅರ್ಜಿಯಲ್ಲಿ ನಾನು ನೀಡಿರುವ ವಿವರಗಳು ನನಗೆ ತಿಳಿದಮಟ್ಟಿಗೆ ನನ್ನ ನಂಬಿಕೆಯಂತೆ ಸರಿಯಿದೆ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ: ಕುಟುಂಬ ಪಿಂಚಣಿದಾರರ ಸಹಿ

ಕುಟುಂಬ ಪಿಂಚಣಿದಾರರ ಹೆಸರು ಮತ್ತು ವಿಳಾಸ

ದಿನಾಂಕ:

ನಮೂನೆ – III

(ನಿಯಮ 5ನ್ನು ನೋಡಿ)

ಕರ್ನಾಟಕ ಶಾಸಕರ ನಿವೃತ್ತಿ ವೇತನ ನೀಡಿಕೆಯ ಆದೇಶ

---------- 20--------ರ ಎಲ್.ಎಫ್.ಪಿ.ಒ. ಸಂಖ್ಯೆ ----------

ಸಾರಾಂಶ: ಶ್ರೀ ----------
ಇವರ ಮಗನಾದ/ಹೆಂಡತಿಯಾದ
ಶ್ರೀ/ಶ್ರೀಮತಿ ---------- ಇವರಿಗೆ
ಶಾಸಕರ ನಿವೃತ್ತಿ ವೇತನದ ಅನುದಾನ ನೀಡಿಕೆ

ಉಲ್ಲೇಖ: ಶ್ರೀ/ಶ್ರೀಮತಿ ---------- ಇವರ ಅರ್ಜಿ, ದಿನಾಂಕ --------

ಆದೇಶ

ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನ ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ ಸಂ. 2) 11ಎ ಪ್ರಕರಣದ ಮೇರೆಗೆ, ----------ನಲ್ಲಿ ವಾಸಿಸುತ್ತಿರುವ ಶ್ರೀ/ಶ್ರೀಮತಿ ---------- ಇವರಿಗೆ -------- ದಿನಾಂಕದಿಂದ ಆಜೀವ ಪರ್ಯಂತ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಗಳಿಗೊಳಪಟ್ಟು ತಿಂಗಳಿಗೆ -------- ರೂ.ಗಳ (ರೂಪಾಯಿಗಳು ---------- ----------) ಶಾಸಕರ ನಿವೃತ್ತಿ ವೇತನವನ್ನು ಸಂದಾಯ ಮಾಡಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

2. ಪಿಂಚಣಿದಾರನು---------- ರಿಂದ ---------- ತನಕ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯನಾಗಿದ್ದನು.

3. ಪಿಂಚಣಿದಾರನ ಗುರುತಿನ ಚಿಹ್ನೆಗಳು ಹೀಗಿವೆ:

(1)

(2)

4. ಕಾರ್ಯದರ್ಶಿಯವರು ನಿವೃತ್ತಿ ವೇತನವನ್ನು ಚೆಕ್ ಮೂಲಕ ಸಂದಾಯ ಮಾಡಬೇಕು/ ನಿವೃತ್ತಿ ವೇತನವನ್ನು ---------- ನಲ್ಲಿರುವ ಆತನ ಖಾತೆಗೆ ಜಮೆ ಮಾಡಬೇಕು.

5. ವೆಚ್ಚವನ್ನು "--------" ಗೆ ಖರ್ಚು ಹಾಕಲಾಗುವುದು.

6. ಈ ಆದೇಶವು ನಿಯಮಾವಳಿಗಳ 10ನೇ ನಿಯಮದ ಮೇರೆಗೆ ರದ್ದಿಯಾತಿಗೆ ಅಥವಾ ಮಾರ್ಪಾಡಿಗೆ ಬದ್ದವಾಗಿರುತ್ತದೆ.

ಇವರಿಗೆ:

ಶ್ರೀ/ಶ್ರೀಮತಿ ----------

ಪ್ರತಿ:

ಮಹಾಲೇಖಪಾಲರು, (ಅಕೌಂಟೆಂಟ್ ಜನರಲ್), ಕರ್ನಾಟಕ, ಬೆಂಗಳೂರು

ನಮೂನೆ– IV

(ನಿಯಮ 5ನ್ನು ನೋಡಿ)

ಕರ್ನಾಟಕ ಶಾಸಕರ ಕುಟುಂಬ ನಿವೃತ್ತಿ ವೇತನ ನೀಡಿಕೆಯ ಆದೇಶ

19––––––––––ರ ಎಫ್‌ಪಿಪಿಒ ಸಂಖ್ಯೆ ––––––––––––––

ಸಾರಾಂಶ ಭಾಗ: ಶ್ರೀ/ಶ್ರೀಮತಿ ––––––––––ರ ಮಗ/ಹೆಂಡತಿ/ಮಗಳಾದ ಶ್ರೀ/ಶ್ರೀಮತಿ ––––––––– ಇವರಿಗೆ ಶಾಸಕರ ಕುಟುಂಬ ನಿವೃತ್ತಿ ವೇತನದ ಅನುದಾನ ನೀಡಿಕೆ

ಉಲ್ಲೇಖ: ಶ್ರೀ/ಶ್ರೀಮತಿ ––––––––– ಅವರ ಅರ್ಜಿ ದಿನಾಂಕ.

ಆದೇಶ

ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನ ಮತ್ತು ಭತ್ಯೆಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ ಸಂ.2) 11ಬಿ ಪ್ರಕರಣದ ಮೇರೆಗೆ, ––––––––– ನಲ್ಲಿ ವಾಸಿಸುತ್ತಿರುವ ಶ್ರೀ/ಶ್ರೀಮತಿ ––––––––– ಇವರಿಗೆ ––––––– ದಿನಾಂಕದಿಂದ ಆಜೀವ ಪರ್ಯಂತ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಗಳಿಗೊಳಪಟ್ಟು ತಿಂಗಳಿಗೆ ––––––– ರೂ.ಗಳ (ರೂಪಾಯಿಗಳು ––––––––– ––––––––) ಶಾಸಕರ ಕುಟುಂಬ ನಿವೃತ್ತಿ ವೇತನವನ್ನು ಸಂದಾಯ ಮಾಡಲು ಈ ಮೂಲಕ ಮಂಜೂರಾತಿ ನೀಡಲಾಗಿದೆ.

2. ಪಿಂಚಣಿದಾರನ ಹೆಂಡತಿ/ ಗಂಡ/ ತಂದೆ–ತಾಯಿಯು ––––––––––––––– ರಿಂದ ––––––––– ತನಕ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.

3. ಪಿಂಚಣಿದಾರನ ಗುರುತಿನ ಚಿಹ್ನೆಗಳು ಹೀಗಿವೆ:

(1)

(2)

4. ಕಾರ್ಯದರ್ಶಿಯವರು ನಿವೃತ್ತಿ ವೇತನವನ್ನು ಚೆಕ್ ಮೂಲಕ ಸಂದಾಯ ಮಾಡಬೇಕು/ನಿವೃತ್ತಿ ವೇತನವನ್ನು ––––––––––ನಲ್ಲಿರುವ ಆತನ ಖಾತೆಗೆ ಜಮೆ ಮಾಡಬೇಕು.

5. ವೆಚ್ಚವನ್ನು **"––––––––––"** ಗೆ ಖರ್ಚು ಹಾಕಲಾಗುವುದು.

6. ಈ ಆದೇಶವು ನಿಯಮಾವಳಿಗಳ 10ನೇ ನಿಯಮದ ಮೇರೆಗೆ ರದ್ದಯಾತಿಗೆ ಅಥವಾ ಮಾರ್ಪಾಡಿಗೆ ಬದ್ದವಾಗಿರುತ್ತದೆ.

ಇವರಿಗೆ:

ಶ್ರೀ/ಶ್ರೀಮತಿ ––––––––––

––––––––––

ಪ್ರತಿ:

ಮಹಾಲೇಖಪಾಲರು, (ಅಕೌಂಟಂಟ್ ಜನರಲ್), ಕರ್ನಾಟಕ, ಬೆಂಗಳೂರು

ನಮೂನೆ– V

(ನಿಯಮ 6ನ್ನು ನೋಡಿ)

ಶಾಸಕರ ನಿವೃತ್ತಿ ವೇತನ ಕ್ಲೇಮು ಮಾಡಲು ಅರ್ಜಿ ನಮೂನೆ

ಪಿಂಚಣಿದಾರನ ಹೆಸರು ––––––––––––––––

(ಮಾಜಿ ವಿಧಾನ ಪರಿಷತ್ ಸದಸ್ಯ)

(ದಪ್ಪ ಅಕ್ಷರಗಳಲ್ಲಿ)

ಖಾಯಂ ವಾಸದ ವಿಳಾಸ ––––––––––––––––

ನಿವೃತ್ತಿ ವೇತನ ಸಂದಾಯ ಆದೇಶ ಸಂಖ್ಯೆ ––––––––––––––––

(ಲೆಕ್ಕ ಶೀರ್ಷಿಕೆ)

ಪಿಂಚಣಿದಾರನ ಹೆಸರು

(ದಪ್ಪ ಅಕ್ಷರಗಳಲ್ಲಿ)

ಶಾಸಕರ ನಿವೃತ್ತಿ ವೇತನ ಆದೇಶ ಸಂಖ್ಯೆ––––––––ಕ್ಕನುಸಾರವಾಗಿ 20–––––– ರ ತಿಂಗಳಿಗೆ/ತಿಂಗಳುಗಳಿಗೆ ––––––––– ನನ್ನ ನಿವೃತ್ತಿ ವೇತನವಾಗಿರುವ ––––––––––– ರೂ.ಗಳ (–––––––––– ರೂ.ಗಳ) ಮೊತ್ತವನ್ನು ಸ್ವೀಕರಿಸಿರುತ್ತೇನೆ.

200––––––––ರ–––––––––––– ತಿಂಗಳಿಗಾಗಿ/ತಿಂಗಳುಗಳಿಗಾಗಿ ನಿವ್ವಳ ರೂ.ಗಳು––––––––––

ದಿನಾಂಕ:––––––––––ರ–––––––200––––––––––
––––––––––––ರೂ.ಗಳನ್ನು ಮಂಜೂರು ಮಾಡಲಾಗಿದೆ
–––––––––– ರೂ.ಗಳು

ಸಹಿ ಸ್ಟಾಂಪು

ಕಾರ್ಯದರ್ಶಿ
ವಿಧಾನ ಪರಿಷತ್ತಿನ ಸಚಿವಾಲಯ ಹೆಬ್ಬೆರಳಿನ ಗುರುತು

ಘೋಷಣೆ

ನಾನು, ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಇಲ್ಲವೇ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೊಳಪಟ್ಟ ಅಥವಾ ನಿಯಂತ್ರಣಕ್ಕೊಳಪಟ್ಟ ಯಾವುದೇ ನಿಗಮದಿಂದ ಯಾವುದೇ ವೇತನ/ಸಂಭಾವನೆಯನ್ನು ಸ್ವೀಕರಿಸುತ್ತಿಲ್ಲವೆಂದು ಘೋಷಿಸುತ್ತೇನೆ.

ನಾನು, ಸಂಸತ್ತಿಗೆ ಇಲ್ಲವೇ ಕರ್ನಾಟಕ ವಿಧಾನಸಭೆಗೆ/ಯಾವುದೇ ಇತರ ರಾಜ್ಯ ವಿಧಾನಮಂಡಲಕ್ಕೆ ಪುನರಾಯ್ಕೆಗೊಂಡಿಲ್ಲವೆಂದು ಮತ್ತು ನಾನು ಸಂಸತ್ತಿನ ಅಥವಾ ಕರ್ನಾಟಕ ವಿಧಾನಸಭೆಯ/ಪರಿಷತ್ತಿನ ಅಥವಾ ಯಾವುದೇ ಇತರ ರಾಜ್ಯದ ವಿಧಾನಮಂಡಲಗಳ ಹಾಲಿ ಸದಸ್ಯನಾಗಿರುವುದಿಲ್ಲವೆಂದು ಘೋಷಿಸುತ್ತೇನೆ.

ಪಿಂಚಣಿದಾರನ ಸಹಿ

ಅಧಿಕಾರ ಪತ್ರ

(ನಿವೃತ್ತಿ ವೇತನದ ಮೊತ್ತವನ್ನು ಬ್ಯಾಂಕಿನ ಖಾತೆಗೆ ಜಮಾ ಆಗುವಂತೆ ಬಯಸುವ ಪಿಂಚಣಿದಾರರ ಸಂಬಂಧದಲ್ಲಿ)

ದಯವಿಟ್ಟು---------- ಬ್ಯಾಂಕಿನ (ಶಾಖೆ) -------- ಖಾತೆ ಸಂಖ್ಯೆಗೆ ಸಂದಾಯ ಮಾಡಬೇಕೆಂದು ಕೋರುತ್ತೇನೆ.

ಪಿಂಚಣಿದಾರನ ಸಹಿ

ನಮೂನೆ– VI

(ನಿಯಮ 6ನ್ನು ನೋಡಿ)

ಶಾಸಕರ ಕುಟುಂಬ ನಿವೃತ್ತಿ ವೇತನವನ್ನು ಕ್ಲೇಮು ಮಾಡುವ ಅರ್ಜಿ

ನಿವೃತ್ತಿ ವೇತನದಾರನ ಹೆಸರು ––––––––––––––

(ವಿಧಾನ ಪರಿಷತಿನ ಮೃತ ಸದಸ್ಯರ ಅಥವಾ

ಸದಸ್ಯರ ಹೆಸರು ––––––––––––––

(ದಪ್ಪ ಅಕ್ಷರಗಳಲ್ಲಿ)

ಖಾಯಂ ವಾಸದ ವಿಳಾಸ ––––––––––––

ಕುಟುಂಬ ನಿವೃತ್ತಿ ವೇತನ ಸಂದಾಯದ ಆದೇಶ ಸಂಖ್ಯೆ ––––––––––––

(ಲೆಕ್ಕ ಶೀರ್ಷಿಕೆ)

..

ಪಿಂಚಣಿದಾರರ ಹೆಸರು–––––––––––––––––––– (ದಪ್ಪ ಅಕ್ಷರಗಳಲ್ಲಿ)

ಶಾಸಕರ ನಿವೃತ್ತಿ ವೇತನ 200–––––––––– ರ ಆದೇಶ ಸಂಖ್ಯೆ ––––––– ರ ಅನುಸಾರವಾಗಿ 200 –––––––––– ತಿಂಗಳು/ತಿಂಗಳುಗಳ ನನ್ನ ನಿವೃತ್ತಿ ವೇತನದ ರೂ.––––––––––– ಗಳ (––––– ರೂಪಾಯಿಗಳು ಮಾತ್ರ) ಮೊತ್ತವನ್ನು ಸ್ವೀಕರಿಸಿದ್ದೇನೆ.

ಒಟ್ಟು ರೂ.ಗಳು
––––––––––200––––––––––

ದಿನಾಂಕ:––––––––––––
––––––––––ರೂ.ಗಳಿಗೆ ಅಂಗೀಕೃತವಾಗಿದೆ
–––––––––– ರೂ.ಗಳು

ಸಹಿ/ ಸ್ಟಾಂಪು

ಕಾರ್ಯದರ್ಶಿ
ವಿಧಾನ ಪರಿಷತ್ತಿನ ಸಚಿವಾಲಯ ಹೆಬ್ಬೆರಳಿನ ಗುರುತು

ಘೋಷಣೆ

ನಾನು, ಪ್ರಾಪ್ತ ವಯಸ್ಕನಾಗಿಲ್ಲವೆಂದು ಘೋಷಿಸುತ್ತೇನೆ
ನಾನು ವಿವಾಹವಾಗಿಲ್ಲವೆಂದು ಘೋಷಿಸುತ್ತೇನೆ

ಪಿಂಚಣಿದಾರನ ಸಹಿ

ಅಧಿಕಾರ ಪತ್ರ

(ತನ್ನ ನಿವೃತ್ತಿ ವೇತನದ ಮೊತ್ತವನ್ನು ಬ್ಯಾಂಕಿನ ಖಾತೆಗೆ ಜಮೆ ಮಾಡಬೇಕೆಂದು ಬಯಸುವ ಪಿಂಚಣಿದಾರನ ಸಂದರ್ಭದಲ್ಲಿ)

ದಯವಿಟ್ಟು---------- ಬ್ಯಾಂಕಿನ ---------- ಶಾಖೆಯ ---------- ಸಂಖ್ಯೆಯ ಖಾತೆಗೆ ಸಂದಾಯ ಮಾಡಬೇಕೆಂದು ಕೋರುತ್ತೇನೆ.

ಪಿಂಚಣಿದಾರನ ಸಹಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ. ನೀಲಕಂಠಾರ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

ಕರ್ನಾಟಕ ವಿಧಾನಮಂಡಲ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಧಿನಿಯಮಗಳು 1/26/ಆರ್ಎ/2007, ಬೆಂಗಳೂರು, ದಿನಾಂಕ: 11ನೇ ಜುಲೈ, 2007

ಕರ್ನಾಟಕ ವಿಧಾನಮಂಡಲದ (ಪಿಂಚಣಿದಾರರ ವೈದ್ಯೋಪಚಾರ) ನಿಯಮಗಳು, 2007

ಕರ್ನಾಟಕ ವಿಧಾನಮಂಡಲದ ವಿಶೇಷ ಮಂಡಳಿಯು, ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 2)ರ 12(ಸಿ) ಪ್ರಕರಣದೊಂದಿಗೆ ಓದಲಾದ 15ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ;–

1. ಚಿಕ್ಕ ಹೆಸರು ಮತ್ತು ಪ್ರಾರಂಭ:–

(i) ಈ ನಿಯಮಗಳನ್ನು ಕರ್ನಾಟಕ ವಿಧಾನಮಂಡಲದ (ಪಿಂಚಣಿದಾರರ ವೈದ್ಯೋಪಚಾರ) ನಿಯಮಗಳು, 2007 ಎಂದು ಕರೆಯತಕ್ಕದ್ದು.

(ii) ಇವು 24ನೇ ಆಗಸ್ಟ್, 2005 ರಂದು ಜಾರಿಗೆ ಬಂದಿರುವುದೆಂದು ಭಾವಿಸತಕ್ಕದ್ದು.

2. ಪರಿಭಾಷೆಗಳು:– ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) **"ಅಧಿಕೃತ ವೈದ್ಯಕೀಯ ಚಿಕಿತ್ಸಕ"** ಎಂದರೆ,

(i) ಪಿಂಚಣಿದಾರರು ವಾಸ ಮಾಡುತ್ತಿರುವ ಸ್ಥಳಗಳಲ್ಲಿ ಸರ್ಕಾರಿ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳಿರುವ ಸಂದರ್ಭದಲ್ಲಿ, ಅಂಥ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳು, ಪ್ರಭಾರದಲ್ಲಿರುವ ವೈದ್ಯಾಧಿಕಾರಿಗಳು;

(ii) ಪಿಂಚಣಿದಾರರು ವಾಸ ಮಾಡುತ್ತಿರುವ ಸ್ಥಳಗಳಲ್ಲಿ ಸರ್ಕಾರಿ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳು ಇಲ್ಲದಿರುವ ಸಂದರ್ಭದಲ್ಲಿ, ಅಂಥ ಸ್ಥಳಗಳಲ್ಲಿನ ಸ್ಥಳೀಯ ನಿಧಿ ಚಿಕಿತ್ಸಾಲಯಗಳು, ಆರೋಗ್ಯ ಘಟಕಗಳು ಅಥವಾ ಆರೋಗ್ಯ ಕೇಂದ್ರಗಳ ಪ್ರಭಾರದಲ್ಲಿರುವ ಗೆಜೆಟೆಡ್ ಅಥವಾ ಗೆಜೆಟೆಡ್ ಅಲ್ಲದ ವೈದ್ಯಾಧಿಕಾರಿಗಳು; ಮತ್ತು

(iii) ಪಿಂಚಣಿದಾರರು ಕ್ಷಯ ರೋಗದಿಂದ ನರಳುತ್ತಿದ್ದು ಘಟಪ್ರಭಾದ ಕರ್ನಾಟಕ ಆರೋಗ್ಯ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಆ ಸಂಸ್ಥೆಯ ಮುಖ್ಯ ವೈದ್ಯಾಧಿಕಾರಿ;

ಪರಂತು, ಗೌರವ ವಿಶೇಷ ತಜ್ಞರು, ಗೌರವ ವೈದ್ಯಾಧಿಕಾರಿಗಳು, ಅರೆಕಾಲಿಕ ವಿಶೇಷ ತಜ್ಞರು ಮತ್ತು ಅರೆಕಾಲಿಕ ವೈದ್ಯಾಧಿಕಾರಿಗಳನ್ನು ಅಧಿಕೃತ ವೈದ್ಯಕೀಯ ಚಿಕಿತ್ಸಕ ಎಂದು ಭಾವಿಸತಕ್ಕದ್ದಲ್ಲ.

(ಬಿ) **"ವೈದ್ಯಕೀಯ ಚಿಕಿತ್ಸೆ"** ಎಂದರೆ, ರೋಗ ಪರೀಕ್ಷೆಯ ಉದ್ದೇಶಕ್ಕಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುವಂಥ ರೋಗಶಾಸ್ತ್ರ ವಿಜ್ಞಾನ, ವೈರಾಣು ವಿಜ್ಞಾನ (ಬ್ಯಾಕ್ಟೀರಿಯಲಾಜಿಕಲ್), ವಿಕಿರಣ ವಿಜ್ಞಾನ

(ರೇಡಿಯಲಾಜಿಕಲ್) ಅಥವಾ ರೋಗ ತಪಾಸಣೆಯ ಮತ್ತಿತರ ವಿಧಾನಗಳನ್ನು ಒಳಗೊಂಡ ಮತ್ತು ಅಧಿಕೃತ ವೈದ್ಯಕೀಯ ಶುಶ್ರೂಷಕನು ಮತ್ತು ರಾಜ್ಯದಲ್ಲಿ ಸರ್ಕಾರಿ ಉದ್ಯೋಗದಲ್ಲಿರುವ ತಜ್ಞನೊಂದಿಗಿನ ಅಥವಾ ಅಧಿಕೃತ ವೈದ್ಯಕೀಯ ಶುಶ್ರೂಷಕನಾಗಿ ಅಂಥ ವ್ಯಾಪ್ತಿಗೆ ಅಗತ್ಯವೆಂದು ಪ್ರಮಾಣೀಕರಿಸಿ, ರಾಜ್ಯದಲ್ಲಿ ಸರ್ಕಾರಿ ಉದ್ಯೋಗದಂತೆಯೇ ಉದ್ಯೋಗದಲ್ಲಿರುವ ಇತರ ವೈದ್ಯಕೀಯ ಅಧಿಕಾರಿಯೊಂದಿಗಿನ ಅಂಥ ಸಮಾಲೋಚನೆಯನ್ನು ಮತ್ತು ತಜ್ಞ ಅಥವಾ ವೈದ್ಯಕೀಯ ಅಧಿಕಾರಿಯು ಅಧಿಕೃತ ವೈದ್ಯಕೀಯ ಶುಶ್ರೂಷಕನ ಸಮಾಲೋಚನೆಯಲ್ಲಿ ನಿರ್ಧರಿಸಬಹುದಾದಂತಹ ರೀತಿಯನ್ನು ಅಗತ್ಯವೆಂದು ಪರಿಗಣಿಸುವ ಒಂದು ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯದಲ್ಲಿನ ಚಿಕಿತ್ಸೆ.

(ಸಿ) **"ಪಿಂಚಣಿದಾರ"** ಎಂದರೆ, ಕರ್ನಾಟಕ ವಿಧಾನಸಭೆ/ ಕರ್ನಾಟಕ ವಿಧಾನ ಪರಿಷತ್ತು/ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮಾಜಿ ಸದಸ್ಯ. ಅಲ್ಲದೆ, ಈ ನಿಯಮಗಳು ಅನ್ವಯವಾಗುವ ಮತ್ತು ಅನಾರೋಗ್ಯ ಪೀಡಿತರಾಗಿರುವ 'ಪಿಂಚಣಿದಾರ' ಎಂದು ಅರ್ಥ.

(ಡಿ) **"ಪ್ರಧಾನ ಕಾರ್ಯದರ್ಶಿ"** ಎಂದರೆ, ಕರ್ನಾಟಕ ವಿಧಾನಮಂಡಲದ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಕಾರ್ಯದರ್ಶಿ, ಕರ್ನಾಟಕದ ವಿಧಾನಸಭೆ/ವಿಧಾನ ಪರಿಷತ್ತಿನ ಉಪಕಾರ್ಯದರ್ಶಿ ಮತ್ತು ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಯಾರೇ ಅಧೀನ ಕಾರ್ಯದರ್ಶಿಯನ್ನು ಒಳಗೊಳ್ಳುತ್ತದೆ.

(ಇ) **"ಚಿಕಿತ್ಸೆ"** ಎಂದರೆ, ಪಿಂಚಣಿದಾರನು ಚಿಕಿತ್ಸೆ ಪಡೆದುಕೊಳ್ಳುವ ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ಔಷಧಾಲಯಗಳಲ್ಲಿ ಲಭ್ಯವಿರಬಹುದಾದ ಮೆಡಿಕಲ್, ಎಕ್ಸ್‌ರೇ, ಸರ್ಜಿಕಲ್ ಮತ್ತು ಇತರ ಶೋಧನಾ ಸೌಲಭ್ಯಗಳ ಬಳಕೆಯನ್ನು ಮತ್ತು

(i) ಅಧಿಕೃತ ವೈದ್ಯಕೀಯ ಚಿಕಿತ್ಸಕನು ಅವಶ್ಯಕವೆಂದು ಪರಿಗಣಿಸಲಾದ ಪ್ಯಾಥಲಾಜಿಕಲ್, ಬ್ಯಾಕ್ಟೀರಿಯಾಲಾಜಿಕಲ್, ರೇಡಿಯೋಲಾಜಿಕಲ್ ಅಥವಾ ಇತರ ವಿಧಾನಗಳನ್ನು;

(ii) ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಸಾಮಾನ್ಯವಾಗಿ ಲಭ್ಯವಿರುವಂತಹ ಔಷಧಿಗಳು, ಲಸಿಕೆಗಳು, ಸೀರಮ್ ಅಥವಾ ಇತರೆ ಗುಣಪಡಿಸುವ ಔಷಧಿಗಳ ಸರಬರಾಜು;

(iii) ಪಿಂಚಣಿದಾರನು ಆರೋಗ್ಯ ಸುಧಾರಣೆಗೆ ಅಥವಾ ಅವರ ದೈಹಿಕ ಕ್ಷೀಣತೆಯನ್ನು ತಡೆಗಟ್ಟಲು ಅಗತ್ಯವೆಂದು ಅಧಿಕೃತ ವೈದ್ಯಕೀಯ ಚಿಕಿತ್ಸಕನು ಬರವಣಿಗೆಯಲ್ಲಿ ಪ್ರಮಾಣೀಕರಿಸಬಹುದಾದ ಮತ್ತು ಅಧಿಕೃತ ವೈದ್ಯಕೀಯ ಚಿಕಿತ್ಸಕನಲ್ಲಿ ಸಾಮಾನ್ಯವಾಗಿ ಲಭ್ಯವಿರದ ಔಷಧಗಳು, ಲಸಿಕೆಗಳು, ಸೀರಮ್ ಅಥವಾ ಇತರ ಗುಣಪಡಿಸುವ ವಸ್ತುಗಳು;

(iv) ಪಿಂಚಣಿದಾರರ ಹೆರಿಗೆ ಸಂಬಂಧದ ಚಿಕಿತ್ಸಾ ವೆಚ್ಚಗಳನ್ನು;

(v) ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಒದಗಿಸುವಂತಹ ಸ್ಥಳಾವಕಾಶವನ್ನು ಮತ್ತು ರೋಗಿಯು ಆಸ್ಪತ್ರೆಗೆ ಸೇರುವ ಸಮಯದಲ್ಲಿ ಲಭ್ಯವಿರುವಂತಹ ಉನ್ನತ ದರ್ಜೆಯ ವಾರ್ಡ್ ಸೌಕರ್ಯ;

(vi) ಪಿಂಚಣಿದಾರನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಒದಗಿಸುವಂತಹ ಶುಶ್ರೂಷೆ ಮತ್ತು ಆಹಾರ– ಇವುಗಳನ್ನು ಒಳಗೊಳ್ಳುತ್ತವೆ.

ವಿವರಣೆ: (3)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ, ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಗುಣಪಡಿಸುವ ಸಮಾನಗುಣವುಳ್ಳ ಔಷಧಿಗಳು ಲಭ್ಯವಿರುವಾಗ ಪಿಂಚಣಿದಾರರ ಉಪಯೋಗಕ್ಕೆ ದುಬಾರಿ ಔಷಧಿಗಳು,

ಟಾನಿಕ್‌ಗಳು, ವಿರೇಚಕಗಳು ಅಥವಾ ಇತರೇ ಅತ್ಯುತ್ತಮ ಮತ್ತು ಸ್ವಂತ ಮಾರಾಟದ ಸನ್ನದು ಪಡೆದು ಔಷಧಗಳ ಸೂಚಿಪಟ್ಟಿಯನ್ನು ನಿಷೇಧಿಸಲಾಗಿದೆ.

3. ವೈದ್ಯಕೀಯ ಚಿಕಿತ್ಸೆಯ ವೆಚ್ಚಗಳು:– (i) ಪಿಂಚಣಿದಾರನು ಅಧಿಕೃತ ವೈದ್ಯಕೀಯ ಚಿಕಿತ್ಸಕನ ಮೂಲಕ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ಮತ್ತು ಉಪಚಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(ii) ಹಲ್ಲನ್ನು ಕೀಳಿಸುವುದಕ್ಕೆ ಅಥವಾ ವೈದ್ಯಕೀಯ ಚಿಕಿತ್ಸೆ ಮತ್ತು ಕನ್ನಡಕಗಳ ಅಗತ್ಯವಿರುವ ಕಣ್ಣು ರೋಗಿಗಳಿಗೆ ಸಂಬಂಧಿಸಿದಂತೆ ವೈದ್ಯ ನೀಡುವ ಚೀಟಿ ಇವುಗಳ ಹೊರತು ದಂತ ವೈದ್ಯರು ಅಥವಾ ನೇತ್ರತಜ್ಞರ ವೆಚ್ಚವನ್ನು ಮರುಭರ್ತಿ ಮಾಡಿಕೊಳ್ಳುವುದಕ್ಕೆ ಯಾರೇ ಪಿಂಚಣಿದಾರರು ಹಕ್ಕುಳ್ಳನಾಗಿರತಕ್ಕದ್ದಲ್ಲ. ಕನ್ನಡಕದ ದರವನ್ನು ಸರ್ಕಾರದಿಂದ ಭರಿಸತಕ್ಕದ್ದಲ್ಲ.

(iii) ಗುಹ್ಯರೋಗಗಳು ಅಥವಾ ತನ್ನ ಅತಿ ಕುಡಿತದಿಂದ ಉಂಟಾದ ರೋಗಗಳಿಗಾಗಿ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯಲು ಅಥವಾ ಅಂಥ ಚಿಕಿತ್ಸೆಗೆ ಯಾವುದೇ ಶುಲ್ಕ ವಿಧಿಸಿದ್ದರೆ ಅಂಥ ವೆಚ್ಚವನ್ನು ತುಂಬಿಕೊಡುವುದಕ್ಕೆ ಯಾವುದೇ ಪಿಂಚಣಿದಾರರು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(iv) ಪಿಂಚಣಿದಾರರಿಗೆ ಶಸ್ತ್ರಚಿಕಿತ್ಸೆಗಳನ್ನು ನಡೆಸಿದ ಸಂಬಂಧದಲ್ಲಿ ಉಪಯೋಗಿಸಲಾದ ಉಪಕರಣಗಳ ಶುದ್ಧೀಕರಣಕ್ಕಾಗಿ ವಿಧಿಸಿದ ಯಾವುದೇ ಶುಲ್ಕಗಳನ್ನು ಮರುಪಾವತಿಸತಕ್ಕದ್ದಲ್ಲ.

(v) **ರಾಜ್ಯ ಸರ್ಕಾರದ ಯಾವುದೇ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಅಥವಾ ಯಾವುದೇ ಅಧಿಸೂಚಿತ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಭರಿಸಿದ ವೆಚ್ಚಗಳ ಮರುಪಾವತಿ:–** ರಾಜ್ಯ ಸರ್ಕಾರದಿಂದ ನಿರ್ವಹಿಸಲಾಗುತ್ತಿರುವ ಯಾವುದೇ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಅಥವಾ ಯಾವುದೇ ಅಧಿಸೂಚಿತ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಪಿಂಚಣಿದಾರನು ಮತ್ತು ಅವನ ಕುಟುಂಬದ ಸದಸ್ಯರು ಪಡೆದ ವೈದ್ಯಕೀಯ ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಪಿಂಚಣಿದಾರನು ವೆಚ್ಚಗಳನ್ನು ಭರಿಸಿದಲ್ಲಿ, ಅವನು ಅಲ್ಲಿ ಭರಿಸಿದ ಶುಲ್ಕಗಳ ಮರುಪಾವತಿಗೆ ಹಕ್ಕುಳ್ಳವನಾಗಿರತಕ್ಕದ್ದು. ಈ ವೆಚ್ಚವು ಪಿಂಚಣಿದಾರನು ಅಂಥ ಚಿಕಿತ್ಸೆ ಪಡೆದ ಸ್ಥಳದಲ್ಲಿನ ವಸತಿ ಸೌಕರ್ಯದ ಶುಲ್ಕಗಳನ್ನು ಒಳಗೊಂಡಿರತಕ್ಕದ್ದು.

(vi) **ರಾಜ್ಯ ಸರ್ಕಾರದ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಮತ್ತು ಅಧಿಸೂಚಿತ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳನ್ನು ಹೊರತುಪಡಿಸಿ, ಬೇರೆ ಯಾವುದೇ ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಭರಿಸಲಾದ ವೆಚ್ಚಗಳನ್ನು ತುಂಬಿಕೊಡುವುದು:–** ರಾಜ್ಯ ಸರ್ಕಾರವು ನಡೆಸುತ್ತಿರುವ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಅಥವಾ ಅಧಿಸೂಚಿತ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಹೊರತುಪಡಿಸಿ ಇತರ ಯಾವುದೇ ಸ್ಥಳದಲ್ಲಿ ಪಿಂಚಣಿದಾರರು ಪಡೆದ ವೈದ್ಯಕೀಯ ಚಿಕಿತ್ಸೆ ಮತ್ತು ಶುಶ್ರೂಷೆಗಾಗಿ ಅವರು ವಹಿಸಿದ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆ ಮತ್ತು ಶುಶ್ರೂಷೆಗಾಗಿ ಅವರು ಭರಿಸಿದ ವೆಚ್ಚಗಳ ಮರುಭರ್ತಿಗಾಗಿ ಈ ನಿಯಮಗಳ ಮೇರೆಗೆ ಅರ್ಹರಾಗಿರುವಂತೆಯೇ ಬೇರೆ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಪಡೆದ ವೆಚ್ಚಗಳ ಮರುಪಾವತಿಗಾಗಿಯೂ ಅರ್ಹನಾಗಿರತಕ್ಕದ್ದು. ಈ ವೆಚ್ಚವು ಪಿಂಚಣಿದಾರನು ಅಂಥ ಚಿಕಿತ್ಸೆಯನ್ನು ತೆಗೆದುಕೊಂಡ ಸ್ಥಳದಲ್ಲಿನ ವಸತಿ ಸೌಕರ್ಯದ ವೆಚ್ಚಗಳನ್ನು ಒಳಗೊಂಡಿರತಕ್ಕದ್ದು.

ವಿವರಣೆ:– ಈ ನಿಯಮದ ಉದ್ದೇಶಕ್ಕಾಗಿ, **"ಕುಟುಂಬ ಸದಸ್ಯರು"** ಎಂದರೆ, ಗಂಡ ಅಥವಾ ಹೆಂಡತಿ, ಮಗ, ಅವಿವಾಹಿತ ಮಗಳು, ತಂದೆ ಮತ್ತು ತಾಯಿ ಮತ್ತು ಮಹಿಳಾ ಮಾಜಿ ಶಾಸಕರ ಸಂದರ್ಭದಲ್ಲಿ **"ಅತ್ತೆ/ಮಾವ"**.

ಟಿಪ್ಪಣಿ: ರೋಗಿಯು ದಂಪತಿಗಳಲ್ಲೊಬ್ಬರಾಗಿರದ ಸಂದರ್ಭದಲ್ಲಿ ಸೂಕ್ತ ಅವಲಂಬಿತ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

4. ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಸಂಬಂಧಿಸಿದ ಕ್ಲೇಮುಗಳು:– (1) ವಿಶೇಷ ಔಷಧಿಗಳ ಖರೀದಿಗಾಗಿ ಭರಿಸಿದ ವೆಚ್ಚಗಳ ಮರುಸಂದಾಯದ ಬಗೆಗಿನ ಎಲ್ಲಾ ಕ್ಲೇಮುಗಳು ಅಧಿಕೃತ ವೈದ್ಯಕೀಯ ಚಿಕಿತ್ಸಕನು 'ಎ' ನಮೂನೆಯಲ್ಲಿ ನೀಡಿದ **"ಅತ್ಯಾವಶ್ಯಕ ಪ್ರಮಾಣಪತ್ರ"** ವನ್ನು ಒಳಗೊಂಡಿರತಕ್ಕದ್ದು ಮತ್ತು ಆ ಪ್ರಮಾಣಪತ್ರಕ್ಕೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಅಥವಾ ಬಳ್ಳಾರಿಯಲ್ಲಿನ ಸರ್ಕಾರಿ ಆಸ್ಪತ್ರೆಗಳ ಪ್ರಭಾರದಲ್ಲಿರುವ ಸೂಪರಿಂಟೆಂಡೆಂಟ್ ಮತ್ತು ಜಿಲ್ಲಾ ಸರ್ಜನ್ ಅಥವಾ ಇತರ ಸ್ಥಳಗಳಲ್ಲಾದರೆ ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಿಂದ ಅಧಿಕೃತನಾದ ಯಾವನೇ ಇತರ ವೈದ್ಯಕೀಯ ಅಧಿಕಾರಿ ಮೇಲು ರುಜು ಹಾಕಿರತಕ್ಕದ್ದು. ಮೇಲು ರುಜು ಮಾಡುವ ಅಧಿಕಾರಿಯು, ಅಧಿಕೃತ ವೈದ್ಯಕೀಯ ಚಿಕಿತ್ಸಕನು ಈ ನಿಯಮಗಳನ್ನು ಪಾಲಿಸಿರುವನೆಂಬ ಬಗ್ಗೆ ಕಾಲಕಾಲಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರಿಂದ ನಿರ್ದಿಷ್ಟಪಡಿಸಲಾದ ಮರುಪಾವತಿಯಾಗದ ಔಷಧಿಗಳ ಪಟ್ಟಿಗಳೊಡನೆ ಈ ಔಷಧಿಗಳನ್ನು ಪರಿಶೀಲಿಸಲಾಗಿದೆ ಎಂಬ ಬಗ್ಗೆ ಮನದಟ್ಟು ಮಾಡಿಕೊಳ್ಳತಕ್ಕದ್ದು.

(2) ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ ಭರಿಸಿದ ವೆಚ್ಚಗಳನ್ನು ತುಂಬಿಕೊಡುವುದಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು ನಮೂನೆ 'ಬಿ' ಯಲ್ಲಿ ತುಂಬಿಸಿ ಒಂದು ವರ್ಷದ ಅವಧಿಯೊಳಗೆ ಪ್ರಧಾನ ಕಾರ್ಯದರ್ಶಿಯವರಿಗೆ ಕಳುಹಿಸತಕ್ಕದ್ದು. ಒಂದು ವರ್ಷದ ನಂತರ ವೈದ್ಯಕೀಯ ವೆಚ್ಚಗಳಿಗಾಗಿ ಕ್ಲೇಮು ಮಾಡಲು ಬಯಸಿದರೆ ಅದಕ್ಕೆ ಅವಕಾಶವಿರುವುದಿಲ್ಲ. ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದ ವೆಚ್ಚಗಳನ್ನು **"2011 ಸಂಸತ್ತು, ರಾಜ್ಯ/ಕೇಂದ್ರಾಡಳಿತ ಪ್ರದೇಶ ಶಾಸಕಾಂಗ–02, ರಾಜ್ಯ/ಕೇಂದ್ರಾಡಳಿತ ಪ್ರದೇಶ ಶಾಸಕಾಂಗ"** ಶೀರ್ಷಿಕೆಯಡಿಯಲ್ಲಿ ರಾಜ್ಯ ವಿಧಾನಮಂಡಲದ ಹಂಚಿಕೆಗೆ ಪ್ರತಿಯಾಗಿ ಖರ್ಚು ಹಾಕತಕ್ಕದ್ದು.

(3) ಕರ್ನಾಟಕ ಶಾಸಕರುಗಳ (ಪಿಂಚಣಿದಾರರ ವೈದ್ಯೋಪಚಾರ) ನಿಯಮಗಳು, 1990 ಈ ಮೂಲಕ ನಿರಸಿತಗೊಂಡಿದೆ.

ವಿಶೇಷ ಮಂಡಳಿಯ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

ಡಿ'ಸೋಜಾ ರಾಬಿನ್‌ಸನ್
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ವಿಧಾನಮಂಡಲ

ನಮೂನೆ – ಎ

ಮಾಜಿ ಸದಸ್ಯನಾದ/ಳಾದ ಶ್ರೀ/ ಶ್ರೀಮತಿ----------ಎಂಬುವವರು ---------- ರವರೆಗೆ ನನ್ನ ಆಸ್ಪತ್ರೆ/ ಡಿಸ್ಪೆನ್ಸರಿ ಸಲಹಾ ಕೊಠಡಿಯಲ್ಲಿ ನನ್ನ ಶುಶ್ರೂಷೆಯಲ್ಲಿದ್ದು, ಈ ರೋಗಿಯ ಚೇತರಿಕೆ/ ತೀವ್ರ ಖಾಯಿಲೆಯಿಂದ ಸುಧಾರಿಸಿಕೊಳ್ಳಲು ಕೆಳಕಂಡ ಔಷಧಿಗಳು ನನ್ನಿಂದ ನಿಗದಿಗೊಳಿಸಲಾಗಿದೆಯೆಂದು ಧೃಢೀಕರಿಸುತ್ತೇನೆ. ಈ ಔಷಧಿಗಳು---------- ಆಸ್ಪತ್ರೆ/ ಡಿಸ್ಪೆನ್ಸರಿಯಲ್ಲಿ ಖಾಸಗಿ ರೋಗಿಗಳಿಗೆ ಸರಬರಾಜು ವಸ್ತುಗಳು ಮತ್ತು ಸೋಂಕು ತಡೆ ವಸ್ತುಗಳಲ್ಲವೆಂದೂ, ಹಾಗೂ ಅಗ್ಗದ ದರದ ಪರ್ಯಾಯ ಔಷಧಿಗಳು ಇಲ್ಲದ ನಿಗದಿತ ಕಂಪನಿಗಳ ತಯಾರಿಕೆಗಳು ಈ ಔಷಧಿಗಳಲ್ಲಿ ಸೇರಿಲ್ಲವೆಂದೂ ದೃಢೀಕರಿಸುತ್ತೇನೆ.

ಕ್ರ. ಸಂ.	ಬಿಲ್ಲಿನ ಸಂಖ್ಯೆ ಮತ್ತು ದಿನಾಂಕ	ಔಷಧಿಗಳ ಹೆಸರು ದಪ್ಪ ಅಕ್ಷರಗಳಲ್ಲಿ	ಮೊತ್ತ	ಒಟ್ಟು ಮೊತ್ತ

ಅಧಿಕೃತ ವೈದ್ಯರ ಸಹಿ ಮತ್ತು ಆಸ್ಪತ್ರೆಯ ಮೊಹರು

ವೈದ್ಯಾಧಿಕಾರಿಗಳ ಮೇಲುರುಜು ಮತ್ತು ಹುದ್ದೆ

ಸೂಚನೆ: ಔಷಧಿಗಳ ಹೆಸರಿನ ಕಾಲಂ ಅನ್ನು ದಯಮಾಡಿ ತಪ್ಪದೇ ತುಂಬುವುದು.

ನಮೂನೆ – ಬಿ

ನಿಯಮ 4(2)

ಮಾಜಿ ಸದಸ್ಯರು ತಮ್ಮ ವೈದ್ಯಕೀಯ ವೆಚ್ಚದ ಮರುಪಾವತಿ ಕೋರಿ ಸಲ್ಲಿಸಬೇಕಾದ ಅರ್ಜಿಯ ನಮೂನೆ

1.	ಮಾನ್ಯ ಮಾಜಿ ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ)	
2.	ರೋಗಿಯ ಹೆಸರು	
	ವಯಸ್ಸು	
	ಮಾಜಿ ಶಾಸಕರೊಂದಿಗಿನ ಸಂಬಂಧ	
	ವಿವಾಹಿತರೆ/ಅವಿವಾಹಿತರೆ	
	ಸೂಚನೆ: ರೋಗಿಯು ಮಾಜಿ ಶಾಸಕರ ಪತಿ/ಪತ್ನಿ ಅಲ್ಲದಿದ್ದಲ್ಲಿ ಮಾಜಿ ಶಾಸಕರನ್ನು ಅವಲಂಬಿತರಾಗಿದ್ದಾರೆಂದು ದೃಢೀಕರಣ ತಪ್ಪದೇ ಲಗತ್ತಿಸುವುದು.	
3.	ಮನೆಯ ಪೂರ್ಣ ವಿಳಾಸ	
4.	ರೋಗಿಯು ಖಾಯಿಲೆ ಬಿದ್ದ ಸ್ಥಳ	
5.	ಖಾಯಿಲೆಯ ಸ್ವರೂಪ ಮತ್ತು ಅದರ ಅವಧಿ	
6.	ಮರುಪಾವತಿ ಕೋರಿದ ಮೊತ್ತದ ವಿವರ	
7.	ಮರುಪಾವತಿ ಕೋರಿದ ಒಟ್ಟು ಮೊತ್ತ	
8.	ಲಗತ್ತಿಸಿರುವ ಅಡಕಗಳ ಪಟ್ಟಿ	

ಮಾನ್ಯ ಸದಸ್ಯರಿಂದ ಸಹಿ ಮಾಡಿ ನೀಡಬೇಕಾದ ಘೋಷಣೆ

ಈ ಅರ್ಜಿಯಲ್ಲಿ ನಮೂದಿಸಿರುವ ರೋಗಿಯು ನನ್ನ ಕುಟುಂಬದ ಸದಸ್ಯರೆಂದು ಹಾಗೂ ನನ್ನನ್ನು ಸಂಪೂರ್ಣವಾಗಿ ಅವಲಂಬಿಸಿರುವುದಲ್ಲದೆ, ನನ್ನೊಡನೆ ವಾಸಿಸುತ್ತಿರುತ್ತಾರೆಂದು ದೃಢೀಕರಿಸುತ್ತೇನೆ ಮತ್ತು ಈ ಅರ್ಜಿಯಲ್ಲಿ ನಾನು ನೀಡಿರುವ ವಿವರಗಳು ನನಗೆ ತಿಳಿದಮಟ್ಟಿಗೆ ಹಾಗೂ ನನ್ನ ನಂಬಿಕೆಯಂತೆ ಸರಿ ಇದೆಯೆಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ: **ವಿಧಾನ ಪರಿಷತ್ತಿನ ಮಾಜಿ ಶಾಸಕರ ಸಹಿ**

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂ. ಸಿಆಸುಇ 3 ಕೆಎಲ್‌ಯು 84

ಬೆಂಗಳೂರು, ದಿನಾಂಕ 8ನೇ ಜುಲೈ 1985

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಅಧಿನಿಯಮ ಸಂಖ್ಯೆ 4) 23ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. ಶೀರ್ಷಿಕೆ ಮತ್ತು ಆರಂಭ:– (1) ಈ ನಿಯಮಗಳನ್ನು ಕರ್ನಾಟಕ ಲೋಕಾಯುಕ್ತ ನಿಯಮಗಳು, 1995 ಎಂದು ಕರೆಯತಕ್ಕದ್ದು.

(2) ಇದು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆ:– ಈ ನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.–

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4);

(ಬಿ) **"ಫಿರ್ಯಾದುದಾರ"** ಎಂದರೆ, ಈ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ದೂರನ್ನು ನೀಡಿದ ವ್ಯಕ್ತಿ ಎಂದರ್ಥ;

(ಸಿ) **"ನಮೂನೆ"** ಎಂದರೆ, ಈ ನಿಯಮಗಳಿಗೆ ಸೇರಿಸಲಾದ ನಮೂನೆ ಎಂದರ್ಥ;

(ಡಿ) **"ಪರಿಶಿಷ್ಟ"** (ಅನುಸೂಚಿ) ಎಂದರೆ, ಈ ನಿಯಮಗಳಿಗೆ ಸೇರಿಸಲಾದ ಪರಿಶಿಷ್ಟ (ಅನುಸೂಚಿ) ಎಂದರ್ಥ;

(ಇ) **"ಪ್ರಕರಣ"** ಎಂದರೆ, ಈ ಅಧಿನಿಯಮದ ಪ್ರಕರಣ ಎಂದರ್ಥ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಎಲ್ಲಾ ಇತರೆ ಶಬ್ದಗಳು ಮತ್ತು ಅರ್ಥಗಳು ಈ ಅಧಿನಿಯಮದಲ್ಲಿ ಅವುಗಳಿಗೆ ಕ್ರಮವಾಗಿ ಗೊತ್ತುಪಡಿಸಲಾದ ಒಂದೇ ರೀತಿಯ ಅರ್ಥವನ್ನು ಹೊಂದಿರತಕ್ಕದ್ದು.

3. ಸಕ್ಷಮ ಪ್ರಾಧಿಕಾರ:– ಅನುಸೂಚಿಯ 3ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಲಾದ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ 2ನೇ ಪ್ರಕರಣದ (4)ನೇ ಖಂಡದ (ಡಿ) ಉಪ–ಖಂಡದ ಉದ್ದೇಶಕ್ಕಾಗಿ, ಅನುಸೂಚಿಯ 2ನೇ ಕಾಲಂನಲ್ಲಿ ಸಂವಾದಿ ನಮೂನೆಯಲ್ಲಿ ನಿರ್ದಿಷ್ಟಪಡಿಸಿದ ನೇಮಕಾತಿ ಪ್ರಾಧಿಕಾರ ಅಥವಾ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರವಾಗಿರತಕ್ಕದ್ದು.

4. ಫಿರ್ಯಾದು/ದೂರು:– (1) ಪ್ರತಿಯೊಂದು ದೂರನ್ನು ದೂರುದಾರನು ನಮೂನೆ–Iರಲ್ಲಿ ಮಾಡತಕ್ಕದ್ದು ಮತ್ತು ಯಾರೇ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪಬ್ಲಿಕ್ ನೋಟರಿ ಅಥವಾ ಪ್ರಮಾಣ ವಚನ ಬೋಧಿಸುವುದಕ್ಕೆ ಯುಕ್ತವಾಗಿ ಅಧಿಕೃತಗೊಳಿಸಲಾದ ಯಾರೇ ಪತ್ರಾಂಕಿತ ಅಧಿಕಾರಿಯ ಮುಂದೆ ಯುಕ್ತವಾಗಿ ಪ್ರಮಾಣ ಮಾಡಿ ನಮೂನೆ–II ರಲ್ಲಿ ತನ್ನ ಅಫಿಡಾವಿಟ್‌ನೊಂದಿಗೆ ಸಲ್ಲಿಸತಕ್ಕದ್ದು.

(2) ದೂರನ್ನು ಕಾರ್ಯದರ್ಶಿ, ಲೋಕಾಯುಕ್ತ ಇವರಿಗೆ ಖುದ್ದಾಗಿ ಅಥವಾ ರಿಜಿಸ್ಟರ್ ಪೋಸ್ಟಿನ ಮೂಲಕ ಸಲ್ಲಿಸಬಹುದು.

5. ದೂರುಗಳ ಪರಿಷ್ಕರಣೆ ಮತ್ತು ನೋಂದಣಿ:– ಸಲ್ಲಿಸಿದ ದೂರನ್ನು ಸದರಿ ಉದ್ದೇಶಕ್ಕಾಗಿ ನಿರ್ವಹಿಸಬೇಕಾದ ರಿಜಿಸ್ಟರಿನಲ್ಲಿ ಪರಿಷ್ಕರಿಸಿ, ನೋಂದಣಿ ಮಾಡತಕ್ಕದ್ದು. ಲೋಕಾಯುಕ್ತ ಕಾರ್ಯದರ್ಶಿಯು, ದೂರು ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಅಥವಾ ನಿಯಮಕ್ಕನುಸಾರವಾಗಿ ಇಲ್ಲ ಅಥವಾ ಅದು ದೋಷಪೂರಿತವಾಗಿದೆಯೆಂದು ಅಭಿಪ್ರಾಯಪಟ್ಟರೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ದೋಷಗಳನ್ನು ಸರಿಪಡಿಸುವಂತೆ ನಮೂನೆ–IIIರಲ್ಲಿ ದೂರುದಾರನಿಗೆ ನೋಟೀಸನ್ನು ನೀಡತಕ್ಕದ್ದು. ಆದಾಗ್ಯೂ ಲೋಕಾಯುಕ್ತ ಇವರು ಸಮರ್ಪಕ ಕಾರಣಗಳಿಗಾಗಿ ಸದರಿ ಅವಧಿಯನ್ನು ವಿಸ್ತರಿಸಬಹುದಾಗಿದೆ. ಈ ದೂರುದಾರನು ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅಥವಾ ವಿಸ್ತರಿಸಲಾದ ಅವಧಿಯೊಳಗೆ ದೋಷಗಳನ್ನು ಸರಿಪಡಿಸದಿದ್ದರೆ, ದೂರನ್ನು ಸಂದರ್ಭಾನುಸಾರ ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತ ಇವರ ಮುಂದೆ ಇಡತಕ್ಕದ್ದು. ಅವರು ತಾವು ಸೂಕ್ತವೆಂದು ಭಾವಿಸಬಹುದಾದಂತೆ ಅದರ ಬಗ್ಗೆ ಆದೇಶಗಳನ್ನು ಹೊರಡಿಸಬಹುದು.

6. ಲೋಕಾಯುಕ್ತ ಮತ್ತು ಉಪ–ಲೋಕಾಯುಕ್ತರ ಭತ್ಯೆಗಳು ಮತ್ತು ಸೇವಾ ಷರತ್ತುಗಳು:– ಲೋಕಾಯುಕ್ತರ ಭತ್ಯೆಗಳು, ಪಿಂಚಣಿ ಮತ್ತು ಇತರೆ ಸೇವಾ ಷರತ್ತುಗಳು, ಭಾರತದ ಮುಖ್ಯ ನ್ಯಾಯಾಧೀಶರಿಗೆ ಅನ್ವಯವಾಗುವಂತಹುಗಳಿಗೆ ಸರಿಸಮಾನವಾಗಿರತಕ್ಕದ್ದು. ಉಪ–ಲೋಕಾಯುಕ್ತರ ಭತ್ಯೆಗಳು, ಪಿಂಚಣಿ ಮತ್ತು ಇತರೆ ಸೇವಾ ಷರತ್ತುಗಳು ಉಚ್ಚನ್ಯಾಯಾಲಯದ ನ್ಯಾಯಾಧೀಶರಿಗೆ ಅನ್ವಯವಾಗುವ ಭತ್ಯೆಗಳಿಗೆ ಸಮಾನವಾಗಿರತಕ್ಕದ್ದು.

7. ಆಸ್ತಿ ವಿವರ ಪಟ್ಟಿ:– 22ನೇ ಪ್ರಕರಣದಡಿಯಲ್ಲಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರಪಟ್ಟಿಯನ್ನು ನಮೂನೆ –IV ರಲ್ಲಿ ಸಲ್ಲಿಸತಕ್ಕದ್ದು.

ಅನುಸೂಚಿ

(ನಿಯಮ 3ನ್ನು ನೋಡಿ)

ಕ್ರ. ಸಂ.	ಸಕ್ಷಮ ಪ್ರಾಧಿಕಾರ	ಸಾರ್ವಜನಿಕ ನೌಕರ	
1	**2**		**3**
1	ಕುಲಾಧಿಪತಿ	1	ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಪರಿಗಣಿಸಲ್ಪಟ್ಟ ವಿಶ್ವವಿದ್ಯಾಲಯದ ಉಪಕುಲಪತಿ
2	ಕರ್ನಾಟಕ ಸರ್ಕಾರ	2(ಎ)	ಕರ್ನಾಟಕ ಪುರಸಭಾ ನಿಗಮಗಳ ಅಧಿನಿಯಮ, 1976 (1977 ರ ಕರ್ನಾಟಕ ಅಧಿನಿಯಮ ಸಂ. 14)ರ ಅಡಿಯಲ್ಲಿ ನಗರಕ್ಕಾಗಿ ಸ್ಥಾಪಿಸಲಾದ ಕಾರ್ಪೋರೇಷನ್ನಿನ ಮೇಯರ್, ಉಪ–ಮೇಯರ್
		(ಬಿ)	ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿಸಲಾದ ಶಾಸನಬದ್ಧ ನಿಕಾಯ ಅಥವಾ ಕಾರ್ಪೋರೇಷನ್ನಿನ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು (ಯಾವುದೇ ಹೆಸರಿನಿಂದ ಕರೆಯಲಿ)
3.	ವಿಭಾಗೀಯ ಆಯುಕ್ತರು	3(ಎ)	ನಗರಸಭೆಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು (ಯಾವುದೇ ಹೆಸರಿನಿಂದ ಕರೆಯಲಿ)
		3(ಬಿ)	ಸೇವೆಯಲ್ಲಿರುವ ಅಥವಾ ನಗರ ಸಭೆಯು ಪಾವತಿಸುವ ವ್ಯಕ್ತಿ
4.	ಉಪ–ಆಯುಕ್ತರು	4(ಎ)	ಪಟ್ಟಣ ಪುರಸಭೆಯ ಅಧ್ಯಕ್ಷರು ಅಥವಾ ಉಪಾಧ್ಯಕ್ಷರು (ಯಾವುದೇ ಹೆಸರಿನಿಂದ ಕರೆಯಲಿ)
		(ಬಿ)	ಸೇವೆಯಲ್ಲಿರುವ ಅಥವಾ ಪಟ್ಟಣ ಪುರಸಭೆಯು ಪಾವತಿಸುವ ವ್ಯಕ್ತಿ
5.	ವ್ಯವಸ್ಥಾಪಕ ನಿರ್ದೇಶಕ	5	ರಾಜ್ಯ ಸರ್ಕಾರವು ಶೇಕಡಾ ಐವತ್ತೊಂದಕ್ಕಿಂತ ಕಡಿಮೆಯಿಲ್ಲದಂತೆ ಸಂದಾಯಿತ ಷೇರು ಬಂಡವಾಳ ಹೊಂದಿರುವ ಕಂಪನಿಗಳ ಅಧಿನಿಯಮ, 1956ರಡಿ ನೋಂದಾಯಿತವಾದ ಕಂಪನಿ ಅಥವಾ ಅಂಥ ಕಂಪನಿಯ ಅಂಗಸಂಸ್ಥೆಯಾಗಿರುವ ಯಾವುದೇ ಕಂಪನಿಯ ಸೇವೆಯಲ್ಲಿರುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹೊರತುಪಡಿಸಿದ ವ್ಯಕ್ತಿ
6.	(ಎ) ಸ್ಥಳೀಯ ಪ್ರಾಧಿಕಾರವಲ್ಲದ ನಿಗಮದ ಮುಖ್ಯ	6(ಎ)	ಯಾವುದೇ ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಸರ್ಕಾರದ ಮೂಲಕ ನಿಯಂತ್ರಿಸಲ್ಪಟ್ಟಿರುವ ಸ್ಥಳೀಯ

	ಕಾರ್ಯ ನಿರ್ವಹಣಾಧಿಕಾರಿ		ಪ್ರಾಧಿಕಾರವಲ್ಲದ ಕಾರ್ಪೋರೇಷನ್ನಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯನ್ನು ಹೊರತುಪಡಿಸಿದ ವ್ಯಕ್ತಿ
	(ಬಿ) ಸದರಿ ಕಾರ್ಪೋರೇಷನ್ನಿನ ಅಧ್ಯಕ್ಷರು ಅಥವಾ ಚೇರ್ಮನ್ (ಯಾವುದೇ ಹೆಸರಿನಿಂದ ಕರೆಯಲಿ)	(ಬಿ)	ಸೇವೆಯಲ್ಲಿರುವ ಅಥವಾ ಸದರಿ ನಿಗಮದಿಂದ ನೇಮಕಗೊಂಡಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿ.
7.	ನೋಂದಣಿ ಮಹಾನಿರೀಕ್ಷಕ	(7)	ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿತವಾದ ಮತ್ತು 2ನೇ ಪ್ರಕರಣ (ii)ನೇ ಖಂಡದ (ಡಿ) ಬಾಬಿನಡಿಯಲ್ಲಿ ಅಧಿಸೂಚಿತವಾದ ಸಂಘಗಳ ಸೇವೆಯಲ್ಲಿರುವ ಅಥವಾ ಸಂಘವು ನೇಮಕ ಮಾಡಿಕೊಂಡ ವ್ಯಕ್ತಿ.
8(ಎ)	ಸಹಕಾರ ಸಂಘಗಳ ರಿಜಿಸ್ಟ್ರಾರ್	8(ಎ)	ಯಾವ ಸಹಕಾರ ಸಂಘಗಳ ಕಾರ್ಯಾಚರಣೆ ಜಿಲ್ಲಾ ವ್ಯಾಪ್ತಿಯನ್ನು ಮೀರಿದೆಯೋ ಅಂಥ ಸಹಕಾರ ಸಂಘಗಳಲ್ಲಿ ಸೇವೆಯಲ್ಲಿರುವ ಅಥವಾ ಸಹಕಾರ ಸಂಘವು ನೇಮಿಸಿಕೊಂಡ ವ್ಯಕ್ತಿ.
(ಬಿ)	ಸಹಕಾರ – ಸಂಘಗಳು	(ಬಿ)	ತನ್ನ ಕಾರ್ಯಕ್ಷೇತ್ರವನ್ನು ಒಂದು ಜಿಲ್ಲೆಯವರೆಗೆ ವಿಸ್ತರಿಸಿಕೊಂಡಿರುವ ಸಹಕಾರ ಸಂಘಗಳ ಸೇವೆಯಲ್ಲಿರುವ ವ್ಯಕ್ತಿಗಳು ಅಥವಾ ಸಹಕಾರ ಸಂಘವು ನೇಮಿಸಿಕೊಂಡ ವ್ಯಕ್ತಿಗಳು.
9.	ಸಹಕಾರ ಸಂಘಗಳ ಉಪರಿಜಿಸ್ಟ್ರಾರ್	9	ತಾಲೂಕುವ್ಯಾಪ್ತಿ ಮೀರಿರುವ ಆದರೆ ಜಿಲ್ಲೆಗೆ ಮಾತ್ರ ಸೀಮಿತವಾಗಿರುವ ಕಾರ್ಯಕ್ಷೇತ್ರ ಹೊಂದಿರುವ ಸಹಕಾರ ಸಂಘಗಳಲ್ಲಿ ಸೇವೆಯಲ್ಲಿರುವ ಅಥವಾ ಸಹಕಾರ ಸಂಘಗಳು ನೇಮಿಸಿಕೊಂಡ ವ್ಯಕ್ತಿಗಳು.
10.	ವಿಶ್ವವಿದ್ಯಾನಿಲಯದ ಉಪಕುಲಪತಿ	10	ರಿಜಿಸ್ಟ್ರಾರ್, ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ಸ್ ಮತ್ತು ಬರ್‌ಸಾರ್‌ರೂ ಸೇರಿದಂತೆ ಶಿಕ್ಷಕರ ಕಡೆಯಿಂದ ವಿಶ್ವವಿದ್ಯಾಲಯದಲ್ಲಿ ಸೇವೆಯಲ್ಲಿರುವ ಅಥವಾ ವಿಶ್ವವಿದ್ಯಾಲಯವು ನೇಮಕ ಮಾಡಿಕೊಂಡ ವ್ಯಕ್ತಿ.
11.	ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್	11	ಭೋದಕೇತರ ಕಡೆಯಿಂದ ಮತ್ತು ಇತರೆ ನೌಕರರ ಕಡೆಯಿಂದ ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವ ಅಥವಾ ವಿಶ್ವವಿದ್ಯಾಲಯವು ನೇಮಕ ಮಾಡಿಕೊಂಡ ವ್ಯಕ್ತಿ.
12.	ಅಧ್ಯಕ್ಷರು, ಕರ್ನಾಟಕ ಲೋಕ ಸೇವಾ ಆಯೋಗ	12	ಕಾರ್ಯದರ್ಶಿಯವರನ್ನು ಹೊರತುಪಡಿಸಿ ಕರ್ನಾಟಕ ಲೋಕ ಸೇವಾ ಆಯೋಗದ ಅಧಿಕಾರಿಗಳು ಮತ್ತು ನೌಕರರು.

ನಮೂನೆ ಸಂಖ್ಯೆ–1 (ದೂರು)

[(ನಿಯಮ 4(1)ನ್ನು ನೋಡಿ)]

ಕರ್ನಾಟಕದ ಲೋಕಾಯುಕ್ತ/ಉಪ–ಲೋಕಾಯುಕ್ತರ ಮುಂದೆ

1. ದೂರಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳಿಗಾಗಿ ದೂರುದಾರರ ಹೆಸರು ಮತ್ತು ವಿಳಾಸ;
2. ಯಾವ ಸರ್ಕಾರಿ ನೌಕರನ ವಿರುದ್ಧ ದೂರನ್ನು ನೀಡಲಾಗಿದೆಯೇ ಅವನ ಹೆಸರು ಮತ್ತು ವಿಳಾಸ;
3. ದೂರು ನೀಡಲಾದ ಕಾರ್ಯಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತ ಅಂಶಗಳು (ನಮೂನೆ – II ಯಲ್ಲಿರುವ ದೂರುದಾರರ ಅಫಿಡಾವತ್ತನ್ನು ಲಗತ್ತಿಸಬೇಕು);
4. ದೂರು ಅಥವಾ ವ್ಯಕ್ತಿಯು ಯಾವ ಕಾರಣಕ್ಕಾಗಿ ಬಾಧಿತನಾಗಿದ್ದಾನೋ ಅದರ ಸ್ವರೂಪವನ್ನು ನಿರ್ದಿಷ್ಟವಾಗಿ ನಮೂದಿಸತಕ್ಕದ್ದು;
5. ದೂರುದಾರನು ಆಪಾದನೆಗೆ ಬೆಂಬಲವಾಗಿ ಪರಿಶೀಲಿಸಲು ಅಪೇಕ್ಷಿಸಿದಾಗ ಸಾಕ್ಷಿದಾರನ ಹೆಸರು ಮತ್ತು ವಿಳಾಸ;
6. ಆಪಾದನೆಗೆ ಬೆಂಬಲವಾಗಿ ದೂರುದಾರನು ಆಧರಿಸಿರುವ ದಸ್ತಾವೇಜುಗಳ ವಿವರಗಳು;
7. ದೂರುದಾರನು ಆಧರಿಸಿರುವ ದಸ್ತಾವೇಜುಗಳು ಅಥವಾ ಅವುಗಳ ನೈಜ ಪ್ರತಿಗಳು ಆತನಿಗೆ ಲಭ್ಯವಿದ್ದರೆ, ಅವುಗಳನ್ನು ಲಗತ್ತಿಸತಕ್ಕದ್ದು ಮತ್ತು ಅದರ ವಿವರಗಳನ್ನು ಒದಗಿಸಬೇಕು;
8. ದೂರುದಾರನು ಅವಲಂಬಿಸಿರುವ ದಸ್ತಾವೇಜುಗಳು ಆತನ ಅಭಿರಕ್ಷೆಯಲ್ಲಿಲ್ಲದಿದ್ದರೆ ಅಥವಾ ಅವನು ಅವುಗಳನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ಅವುಗಳನ್ನು ಪಡೆದುಕೊಳ್ಳಬಹುದಾದ ಕಚೇರಿ;
9. ದೂರುದಾರನು (3)ನೇ ಅಂಕಣದಲ್ಲಿ ನಮೂದಿಸಿದ ಸಾರ್ವಜನಿಕ ನೌಕರನ ವಿರುದ್ಧ ಈಗ ನೀಡಲಾಗಿರುವ ದೂರಿನ ಕ್ರಮದ ಸಂಬಂಧದಲ್ಲಿ ತನ್ನ ಕುಂದುಕೊರತೆಯ ನಿವಾರಣೆಗಾಗಿ ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತ ಅಥವಾ ಯಾರೇ ಇತರ ಪ್ರಾಧಿಕಾರಿಯ ಮುಂದೆ ಈ ಹಿಂದೆ ದೂರನ್ನು ಸಲ್ಲಿಸಿದ್ದನೇ?
   [ಹಿಂದಿನ ದೂರಿನ ಫಲಿತಾಂಶದೊಂದಿಗೆ ವಿವರಗಳನ್ನು ಒದಗಿಸುವುದು]
10. ಷರಾಗಳು, ಯಾವುವಾದರೂ ಇದ್ದರೆ:

ಟಿಪ್ಪಣಿ:– ಅಫಿಡಾವತ್ತು ಮತ್ತು ದಸ್ತಾವೇಜುಗಳ ಪ್ರತಿಗಳನ್ನು ಎಷ್ಟು ಜನ ಸರ್ಕಾರಿ ನೌಕರರ ವಿರುದ್ಧ ದೂರು ನೀಡಲಾಗಿದೆಯೇ, ಅಷ್ಟು ಪ್ರತಿಗಳನ್ನು ದ್ವಿಪ್ರತಿಯಲ್ಲಿ ಕಛೇರಿ ಉಪಯೋಗಕ್ಕಾಗಿ ಲಗತ್ತಿಸತಕ್ಕದ್ದು.

ದೂರುದಾರನ ಸಹಿ ಅಥವಾ ಹೆಬ್ಬೆಟ್ಟಿನ ಮುದ್ರೆ

ಸ್ಥಳ:–
ದಿನಾಂಕ:–

ನಮೂನೆ ಸಂಖ್ಯೆ–II (ದೂರುದಾರನ ಅಫಿಡಾವಿತ್ತು)

(ನಿಯಮ 4(1)ನ್ನು ನೋಡಿ)

ಕರ್ನಾಟಕದ ಲೋಕಾಯುಕ್ತ/ಉಪ–ಲೋಕಾಯುಕ್ತರ ಸಮ್ಮುಖದಲ್ಲಿ

ಶ್ರೀ––––––––––––––ರ ಮಗನಾದ ––––––––––––– ಆದ ––––– ವಯಸ್ಸಿನ ––––––– ಉದ್ಯೋಗದಲ್ಲಿರುವ ––––––– ನಿವಾಸಿಯಾದ ––––––– ತಾಲೂಕು––––––– ಜಿಲ್ಲೆಯ ಪ್ರಸ್ತುತ ––––––– ತಾಲೂಕು ––––––––––––––ಜಿಲ್ಲೆಯಲ್ಲಿ ವಾಸವಾಗಿರುವ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಈ ಮುಂದಿನಂತೆ ನಿರೂಪಿಸುತ್ತೇನೆ:–

1. ನಾನು ಈ ಪ್ರಕರಣದಲ್ಲಿ ದೂರುದಾರನಾಗಿದ್ದೇನೆ.
2. ಶ್ರೀ/ ಶ್ರೀಮತಿ ––––––– ವಿರುದ್ಧ ಆಪಾದನೆಗಳನ್ನು ಮಾಡಿ ದೂರನ್ನು ಇದರೊಂದಿಗೆ ಲಗತ್ತಿಸಿರುತ್ತೇನೆ. ನನ್ನ ದೂರಿನ ಒಳಾಂಶಗಳನ್ನು ಅಫಿಡಾವಿತ್ತಿನ ಭಾಗವಾಗಿ ಓದಿಕೊಳ್ಳಬಹುದಾಗಿದೆ.
3. ಈ ದೂರು ಅರ್ಜಿಯ ವಿವರಗಳನ್ನು ನಾನು ಓದಿರುತ್ತೇನೆ/ ನನಗೆ ಓದಿ ಹೇಳಲಾಗಿದೆ ಮತ್ತು ನಾನು ಅರ್ಥಮಾಡಿಕೊಂಡಿರುತ್ತೇನೆ ಮತ್ತು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯ ಪ್ರಕಾರ ಈ ಮಾಹಿತಿಗಳು ಸತ್ಯವಾದುದಾಗಿವೆ ಎಂದು ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ದಿನಾಂಕ: ಸಾಕ್ಷಿದಾರನ ಸಹಿ

–––––––––––– ಸಮಯದಲ್ಲಿ ––––– ದಿನದಂದು ––––––––––– ವರ್ಷದಲ್ಲಿ ನನ್ನ ಮುಂದೆ ––––––– ಇವರು ಶ್ರದ್ಧಾಪೂರ್ವಕವಾಗಿ ದೃಢೀಕರಿಸಲಾಗಿದೆ.

ಸಹಿ

ನಮೂನೆ ಸಂಖ್ಯೆ–III

(ನಿಯಮ 5ನ್ನು ನೋಡಿ)

ಕರ್ನಾಟಕ ಲೋಕಾಯುಕ್ತ, ಉಪ–ಲೋಕಾಯುಕ್ತ, ಬೆಂಗಳೂರು ಇವರ ಸಮ್ಮುಖದಲ್ಲಿ

ಇವರಿಗೆ,

ಶ್ರೀ/ಶ್ರೀಮತಿ–––––––––––––––– (ದೂರುದಾರರು)

ಉಲ್ಲೇಖ:– ನಿಮ್ಮ ದಿನಾಂಕದ –––––ರ ದೂರು

ನೀವು ಸಲ್ಲಿಸಿದ ದೂರು ಈ ಮುಂದಿನ ದೋಷಗಳಿಂದಾಗಿ ದೋಷಪೂರಿತವಾಗಿದೆ:–

(ಎ)

(ಬಿ)

(ಸಿ)

(ಡಿ)

ದೋಷಗಳನ್ನು ಸರಿಪಡಿಸಿದ ಹೊರತು ನಿಮ್ಮ ದೂರನ್ನು ದಾಖಲಿಸಲಾಗುವುದಿಲ್ಲ. ಅದನ್ನು ––––– ದಿನಾಂಕದಂದು ಅಥವಾ ಅದಕ್ಕೆ ಮೊದಲು ಸರಿಪಡಿಸತಕ್ಕದ್ದು.

ತಮ್ಮ ವಿಶ್ವಾಸಿ.

ಲೋಕಾಯುಕ್ತ ಕಾರ್ಯದರ್ಶಿ
ಕರ್ನಾಟಕ, ಬೆಂಗಳೂರು

ಬೆಂಗಳೂರು:
ದಿನಾಂಕ:

ನಮೂನೆ ಸಂಖ್ಯೆ–IV

(ನಿಯಮ 7ನ್ನು ನೋಡಿ)

---------- ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿ

1. ಸರ್ಕಾರಿ ನೌಕರನ ಹೆಸರು
2. ಪ್ರಸ್ತುತ ಧಾರಣ ಮಾಡಿರುವ ಹುದ್ದೆ
3. ಪ್ರಸ್ತುತ ಮಾಸಿಕ ವರಮಾನ
4. **ನಗದು:**
   - (ಎ) ಯಾರ ಹೆಸರಿನಲ್ಲಿದೆ
   - (ಬಿ) ಯಾವ ರೂಪದಲ್ಲಿದೆ ಅಂದರೆ ಡಿಬೆಂಚರುಗಳು, ಬ್ಯಾಂಕ್ ಠೇವಣಿಗಳು
   - (ಸಿ) ಮೌಲ್ಯ
   - (ಡಿ) ಬ್ಯಾಂಕು ಅಥವಾ ಕಂಪನಿಯ ಹೆಸರು
5. **ಭೂಮಿ:**
   - (ಎ) ಭೂಮಿಯ ವಿಧ ಮತ್ತು ವಿಸ್ತೀರ್ಣ ಮತ್ತು ಸ್ಥಳ
   - (ಬಿ) ಸ್ಥಳ ಮತ್ತು ವಿಸ್ತೀರ್ಣದೊಂದಿಗೆ ಕಟ್ಟಡಗಳು ಮತ್ತು ನಿವೇಶನಗಳು
   - (ಸಿ) (ಎ) ಮತ್ತು (ಬಿ) ಯಿಂದ ವರಮಾನ
6. **ಚರಾಸ್ತಿಗಳು:**
   - (ಎ) ಚರಾಸ್ತಿಗಳ ವಿಧ
   - (ಬಿ) ಆರ್ಜಿಸಿದ ವಿಧಾನ
   - (ಸಿ) ಅಂದಾಜು ಮೌಲ್ಯ
7. **ಕುಟುಂಬದ ಸದಸ್ಯರ ಜೀವವಿಮಾ ಪಾಲಿಸಿಗಳು ಮತ್ತು ಭವಿಷ್ಯ ನಿಧಿಯ ವಿವರಗಳು:**
8. **ಹೊಣೆಗಾರಿಕೆಗಳು:**
   - (ಎ) ಹೊಣೆಗಾರಿಕೆಯ ವಿಧ
   - (ಬಿ) ಮೊತ್ತ
   - (ಸಿ) ಸಾಲದಾರನ ಹೆಸರು ಮತ್ತು ವಿಳಾಸ

ವಿಷಯಸೂಚಿ:– 4–8ರವರೆಗಿನ ಅಂಕಣಗಳ ಸಂಬಂಧದಲ್ಲಿನ ಮಾಹಿತಿಯನ್ನು ಸ್ವತಃ ಆತ ಮತ್ತು ಆತನ ಕುಟುಂಬದ ಸದಸ್ಯರ ಸಂಬಂಧದಲ್ಲಿ ಒದಗಿಸತಕ್ಕದ್ದು.

---------- ಆದ ನಾನು ಮೇಲೆ ಒದಗಿಸಿದ ಮಾಹಿತಿಯು ಸತ್ಯವಾಗಿದೆ ಮತ್ತು ನಿಜವಾಗಿದೆಯೆಂದು ಶ್ರದ್ಧಾಪೂರ್ವಕವಾಗಿ ಈ ಮೂಲಕ ಘೋಷಿಸುತ್ತೇನೆ.

ಸ್ಥಳ:–
ದಿನಾಂಕ:–

ಸರ್ಕಾರಿ ನೌಕರನ ಸಹಿ
ಪದನಾಮ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಜಿ.ಕೆ. ಸಂಗೋರಾಂ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಡಿಪಿಎಆರ್ 78 ಕೆಎಲ್‌ಯು 85

ಬೆಂಗಳೂರು, ದಿನಾಂಕ: 26ನೇ ಡಿಸೆಂಬರ್, 1985

ಕರ್ನಾಟಕ ಸರ್ಕಾರವು, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ರ 23ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ:–

1. ಹೆಸರು ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ನಿಯಮಗಳು, 1985 ಎಂದು ಕರೆಯತಕ್ಕದ್ದು.

(2). ಇವು ರಾಜ್ಯಪತ್ರದಲ್ಲಿ ಇವುಗಳು ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 6ನೇ ನಿಯಮದ ತಿದ್ದುಪಡಿ:– ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ರ 6ನೇ ನಿಯಮದಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), **"ಭತ್ಯೆಗಳು"** ಎಂಬ ಪದಗಳು ಎಲ್ಲೆಲ್ಲಿ ಬರುವುದೋ ಆ ಎರಡು ಸ್ಥಳಗಳಲ್ಲಿ **"ಭತ್ಯೆಗಳು"** ಎಂಬ ಪದಗಳ ತರುವಾಯ, **"ತುಟ್ಟಿ ಭತ್ಯೆಗಳನ್ನು ಹೊರತುಪಡಿಸಿ"** ಎಂಬ ಪದಗಳನ್ನು ಸೇರಿಸತಕ್ಕದ್ದು.

3. 6ಎ ಮತ್ತು 6ಬಿ ಹೊಸ ನಿಯಮಗಳನ್ನು ಸೇರಿಸುವುದು:– ಸದರಿ ನಿಯಮಗಳ 6ನೇ ನಿಯಮದ ತರುವಾಯ, ಈ ಮುಂದಿನ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

6ಎ. ಲೋಕಾಯುಕ್ತ ಮತ್ತು ಉಪ–ಲೋಕಾಯುಕ್ತರ ಅಧಿಕೃತ ನಿವಾಸ:

(1) ಲೋಕಾಯುಕ್ತ ಮತ್ತು ಉಪ–ಲೋಕಾಯುಕ್ತರು ತಮ್ಮ ಪದಾವಧಿಯಲ್ಲಿ ಉಚಿತವಾಗಿ ನೀಡಲಾದ ಅಧಿಕೃತ ನಿವಾಸವನ್ನು ಉಪಯೋಗಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು. ಮತ್ತು ಮುಂದಿನ ಒಂದು ತಿಂಗಳ ಅವಧಿಗಾಗಿ ಅಥವಾ ಎರಡು ತಿಂಗಳುಗಳು ಮೀರದಂತೆ ವಿಸ್ತರಿಸಿದ ಅವಧಿಗಾಗಿ ಸರ್ಕಾರವು ನಿರ್ಧರಿಸಬಹುದು.

(2) ಅಧಿಕೃತ ನಿವಾಸವನ್ನು ಸರ್ಕಾರವು ನಿರ್ವಹಿಸತಕ್ಕದ್ದು.

(3) ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತರು ಸೇವೆಯಲ್ಲಿರುವಾಗ ಮೃತರಾದರೆ, ತದನಂತರ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರ ಕುಟುಂಬದ ಸದಸ್ಯರು, ಅಂಥ ಮರಣದ ತರುವಾಯ ಮೂರು ತಿಂಗಳುಗಳ ಅವಧಿಯವರೆಗೆ ಅಧಿಕೃತ ನಿವಾಸವನ್ನು ಉಪಯೋಗಿಸಿಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.

(4) ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತರವರಿಗೆ ಆತನ ನೇಮಕಾತಿಯಲ್ಲಿ ತರುವಾಯ ಕೂಡಲೆ ಅಧಿಕೃತ ನಿವಾಸವನ್ನು ಒದಗಿಸದಿದ್ದರೆ, ಆತನು, ಯಾವುದಾದರೂ ವಾಸಸ್ಥಳಕ್ಕಾಗಿ ತಾನು ಸಂದಾಯ ಮಾಡಿದ ವಾಸ್ತವಿಕ ಬಾಡಿಗೆಯನ್ನು ತುಂಬಿಕೊಡಲು ಹಕ್ಕುಳ್ಳವನಾಗಿರತಕ್ಕದ್ದು, ಹಾಗೂ ಅಧಿಕೃತ ನಿವಾಸವನ್ನು ಪಡೆದುಕೊಳ್ಳುವ ದಿನಾಂಕದವರೆಗೆ ಆತನು ಭದ್ರನಾಗಿರತಕ್ಕದ್ದು.

ವಿವರಣೆ:– (1) ಈ ನಿಯಮ ಮತ್ತು 68ನೇ ನಿಯಮದ ಉದ್ದೇಶಕ್ಕಾಗಿ, **"**ಕುಟುಂಬ**"** ಎಂದರೆ, ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತರ ಪತ್ನಿ ಅಥವಾ ಪತಿ ಅಥವಾ ಅವರ ಅವಲಂಬಿತ ಮಕ್ಕಳು, ತಂದೆ–ತಾಯಿಗಳು, ಸಹೋದರರು ಮತ್ತು ಅವಿವಾಹಿತ ಸಹೋದರಿಯರು.

(2) **"**ಅಧಿಕೃತ ನಿವಾಸ**"** ಎಂದರೆ, ಸರ್ಕಾರವು ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತರಿಗೆ ಉಚಿತ ಬಾಡಿಗೆಗಾಗಿ ಹಂಚಿಕೆ ಮಾಡಲಾದ ಮಾಲೀಕತ್ವದ ಅಥವಾ ಕಡ್ಡಾಯ ಕೋರಿಕೆಯಿಂದ ಬಾಡಿಗೆಗೆ ತೆಗೆದುಕೊಂಡ ಅಥವಾ ಅನ್ಯಥಾ ಒಂದು ವಾಸಸ್ಥಳ.

(3) **"**ನಿರ್ವಹಣೆ**"** ಎಂದರೆ, ಸ್ಥಳೀಯ ತೆರಿಗೆಗಳ ಸಂದಾಯವನ್ನು ಒಳಗೊಂಡ ಆದರೆ ನೀರು ಮತ್ತು ವಿದ್ಯುತ್ ಅನ್ನು ಬಳಸಿಕೊಂಡ ಕಾರಣದಿಂದ ಭರಿಸಿದ ವೆಚ್ಚಗಳನ್ನು ಹೊರತುಪಡಿಸಿ ಅಧಿಕೃತ ನಿವಾಸದ ಸಂಬಂಧದಲ್ಲಿನ **"**ನಿರ್ವಹಣೆ**"**.

6ಬಿ. ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತ ಮೊದಲಾದವರು ಪದದಲ್ಲಿರುವುದು ನಿಂತುಹೋದ ತರುವಾಯವೂ ಅವಧಿ ಮೀರಿ ವಾಸವಿದ್ದ ಸಂದರ್ಭದಲ್ಲಿ ದಂಡ ರೂಪದ ಬಾಡಿಗೆ:– ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತ ಅಥವಾ ಆತನ ಕುಟುಂಬದ ಸದಸ್ಯರು 6ಎ ನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ಮೀರಿ ಅಧಿಕೃತ ನಿವಾಸದಲ್ಲಿ ಇರುವುದನ್ನು ಮುಂದುವರೆಸಿದರೆ, ಲೋಕಾಯುಕ್ತ ಅಥವಾ ಉಪ–ಲೋಕಾಯುಕ್ತರು ಆತನ ಪದದಲ್ಲಿ ಇದ್ದು ಸ್ವೀಕರಿಸಿದ ಸಂಬಳದ ಶೇಕಡಾ 50ರಷ್ಟು ದರದ ದಂಡ ರೂಪದ ಬಾಡಿಗೆಯನ್ನು ಅಂಥ ಅವಧಿ ಮೀರಿ ವಾಸವಿರುವ ಪ್ರತಿ ತಿಂಗಳಿಗೆ ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕೆ. ಜಯಶೀಲ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ
ಇಲಾಖೆ (ಸೇವಾ ನಿಯಮಗಳು–II).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಡಿಪಿಎಆರ್ 6 ಕೆಎಲ್‌ಯು 86

ಬೆಂಗಳೂರು, ದಿನಾಂಕ: 16ನೇ ಏಪ್ರಿಲ್, 1986

ಕರ್ನಾಟಕ ಸರ್ಕಾರವು, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ರ 23ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. ಹೆಸರು ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ನಿಯಮಗಳು, 1986 ಎಂದು ಕರೆಯತಕ್ಕದ್ದು.

2. ಇವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 2ನೇ ನಿಯಮದ ತಿದ್ದುಪಡಿ:– ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ರ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳು ಎಂದು ಉಲ್ಲೇಖಿಸಲಾಗಿದೆ) 2(1)ನೇ ಉಪ–ನಿಯಮದಲ್ಲಿ, ಖಂಡ (ಸಿ)ಯ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಸಿಸಿ) ನಿಬಂಧಕ**"** ಎಂದರೆ ಲೋಕಾಯುಕ್ತರ ನಿಬಂಧಕ ಮತ್ತು ಅಪರ–ನಿಬಂಧಕ, ಉಪ–ನಿಬಂಧಕ ಮತ್ತು ಸಹಾಯಕ ನಿಬಂಧಕನನ್ನು ಒಳಗೊಳ್ಳುತ್ತದೆ.**"**

3. 4ನೇ ನಿಯಮದ ತಿದ್ದುಪಡಿ:– ಸದರಿ ನಿಯಮಗಳ 4ನೇ ನಿಯಮದ (2)ನೇ ಉಪ–ನಿಯಮದ ಬದಲಾಗಿ ಈ ಮುಂದಿನ ಉಪ–ನಿಯಮವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(2) ದೂರನ್ನು ನಿಬಂಧಕರಿಗೆ ಖುದ್ದಾಗಿ ಸಲ್ಲಿಸಬಹುದು ಅಥವಾ ನೋಂದಣಿ ಅಂಚೆ ಮೂಲಕ ಕಳುಹಿಸಬಹುದು. ಅಂಥ ದೂರನ್ನು ಯಾರ ವಿರುದ್ಧ ಸಲ್ಲಿಸಲಾಗಿದೆಯೋ ಅಂಥ ಸರ್ಕಾರಿ ನೌಕರನ ಹೆಸರು ಮತ್ತು ಪದನಾಮವನ್ನು ನಿರ್ದಿಷ್ಟಪಡಿಸುವ ಮೂಲಕ ನಿಬಂಧಕನು ಅಂಥ ದೂರನ್ನು ಸ್ವೀಕರಿಸತಕ್ಕದ್ದು.

4. 5ನೇ ನಿಯಮದ ಪ್ರತ್ಯಾಯೋಜನೆ:– ಸದರಿ ನಿಯಮಗಳ 5ನೇ ನಿಯಮದ ಬದಲಾಗಿ, ಈ ಮುಂದಿನ ನಿಯಮವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"5. ದೂರುಗಳ ಪರಿಶೀಲನೆ ಮತ್ತು ನೋಂದಣಿ:–

(1) ದೂರನ್ನು ಸ್ವೀಕರಿಸಿದ ತರುವಾಯ, ನಮೂನೆ IIಎ ನಲ್ಲಿನ **"**ದೂರುಗಳ ರಿಜಿಸ್ಟರ್**"**ನಲ್ಲಿ ನಮೂದಿಸಬೇಕಾದ ಅದರ ವಿವರಗಳನ್ನು ಒಂದು ರಿಜಿಸ್ಟರಿನಲ್ಲಿ ದಾಖಲಿಸತಕ್ಕದ್ದು.

(2) ಯಾವುದೇ ಅಂಥ ದೂರು ಅಧಿನಿಯಮ ಅಥವಾ ನಿಯಮಗಳ ಉಪಬಂಧಗಳೊಂದಿಗೆ ಅನುರೂಪವಾಗಿಲ್ಲವೆಂದು ಅಥವಾ ಅನ್ಯಥಾ ದೋಷಪೂರ್ಣವಾಗಿದೆಯೆಂದು ನಿಬಂಧಕನು ಅಭಿಪ್ರಾಯಪಟ್ಟಲ್ಲಿ, ಆತನು, ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳುವಂತೆ ನಮೂನೆ ಸಂಖ್ಯೆ–IIIರಲ್ಲಿ ಫಿರ್ಯಾದಿಗೆ ನೋಟೀಸನ್ನು ಕೊಡತಕ್ಕದ್ದು.

ಪರಂತು, ನಿಬಂಧಕನು ಸಾಕಷ್ಟು ಕಾರಣಗಳಿಗಾಗಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯನ್ನು ವಿಸ್ತರಿಸಬಹುದು.

(3) ಎಲ್ಲ ದೂರುಗಳನ್ನು ಲೋಕಾಯುಕ್ತ ಅಥವಾ ಸಂದರ್ಭಾನುಸಾರ ಉಪ–ಲೋಕಾಯುಕ್ತರ ಮುಂದೆ ಆದೇಶಗಳಿಗಾಗಿ ಇಡತಕ್ಕದ್ದು ಆದರೆ, (2)ನೇ ಉಪ ನಿಯಮದ ಅಡಿಯಲ್ಲಿ ಕ್ರಮ ತೆಗೆದುಕೊಂಡ ಸಂಬಂಧದಲ್ಲಿನ ದೂರುಗಳನ್ನೂ, ನಿಬಂಧಕನು ತೋರಿಸಿದ/ಗುರುತಿಸಿದ ಯಾವುದೇ ದೋಷವನ್ನು ಸರಿಪಡಿಸಿರಲಿ ಅಥವಾ ಸರಿಪಡಿಸದಿರಲಿ, ವಿಸ್ತರಿತ ಅವಧಿಯ ನೋಟೀಸಿನಲ್ಲಿ ಗೊತ್ತುಪಡಿಸಿದ ಕಾಲಾವಧಿಯು ಮುಕ್ತಾಯವಾದ ತರುವಾಯ ಮಾತ್ರ ಇಡತಕ್ಕದ್ದು/ಮಂಡಿಸತಕ್ಕದ್ದು.

(4) (1)ನೇ ಉಪ–ನಿಯಮದ ಅಡಿಯಲ್ಲಿ ದೂರನ್ನು ಸಲ್ಲಿಸಿರುವ ಪ್ರತಿಯೊಬ್ಬ ವ್ಯಕ್ತಿಯು, ದೂರಿನ ಮೇಲೆ ಮುಂದಿನ ಕ್ರಮ ಕೈಗೊಂಡಿರದಿದ್ದರೆ, (3)ನೇ ಉಪ–ನಿಯಮದ ಅಡಿಯಲ್ಲಿ ಹೊರಡಿಸಲಾದ ಆದೇಶಗಳ ಮುಖ್ಯಾಂಶವನ್ನು ತಿಳಿಸತಕ್ಕದ್ದು.

5. ನಮೂನೆ ಸಂಖ್ಯೆ 1ರ ತಿದ್ದುಪಡಿ:– ಸದರಿ ನಿಯಮಗಳ ನಮೂನೆ ಸಂಖ್ಯೆ 1ರಲ್ಲಿ 9ನೇ ಬಾಬಿನ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"9. ಇತರ ನ್ಯಾಯಾಧೀಕರಣದ ಕಾನೂನಿನ ನ್ಯಾಯಾಲಯದ ಅಥವಾ ಸರ್ಕಾರಿ ಅಧಿಕಾರಿಯ ಮುಂದೆ ಯಾರಾದರೂ ಲೋಕಾಯುಕ್ತ ಅಥವಾ ಉಪಲೋಕಾಯುಕ್ತ ಅಥವಾ ಯಾವುದೇ ದಾವೆ / ಅರ್ಜಿ ಅಥವಾ ಇತರ ನಡವಳಿಗಳನ್ನು ಒಳಗೊಂಡು ಯಾವುದೇ ಪ್ರಾಧಿಕಾರಕ್ಕೆ ಯಾವುದೇ ಈ ಹಿಂದಿನ ದೂರಿನ ವಸ್ತು ವಿಷಯದ 3ನೇ ಬಾಬಿನಲ್ಲಿನ ಸಂಗತಿಗಳನ್ನು ವಿವರಿಸಲಾಗಿದ್ದರೆ, ಕೋರಲಾದ ಪರಿಹಾರೋಪಾಯದ ವಿವರಗಳನ್ನು ನೀಡಿ ಅಥವಾ ನೀಡುವುದು."

6. ಹೊಸ ನಮೂನೆ–IIಎ ಯ ಸೇರ್ಪಡೆ:– ಸದರಿ ನಿಯಮಗಳ ನಮೂನೆ–IIರ ತರುವಾಯ ಈ ಮುಂದಿನ ನಮೂನೆಯನ್ನು ಸೇರಿಸತಕ್ಕದ್ದು, ಎಂದರೆ:–

"ನಮೂನೆ ಸಂಖ್ಯೆ.–IIಎ

[(i)ನೇ ನಿಯಮವನ್ನು ನೋಡಿ]

XXX

7. **ನಮೂನೆ ಸಂಖ್ಯೆ IIIರ ಬದಲಾಗಿ ಹೊಸ ನಮೂನೆಯ ಪ್ರತ್ಯಾಯೋಜನೆ:–** ಸದರಿ ನಿಯಮಗಳ ನಮೂನೆ ಸಂಖ್ಯೆ IIರ ಬದಲಾಗಿ, ಈ ಮುಂದಿನ ನಮೂನೆಯನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

ನಮೂನೆ ಸಂಖ್ಯೆ. III

(5ನೇ ನಿಯಮವನ್ನು ನೋಡಿ)

ಕರ್ನಾಟಕ ಲೋಕಾಯುಕ್ತ/ಉಪ–ಲೋಕಾಯುಕ್ತ, ಬೆಂಗಳೂರು ಇವರ ಸಮ್ಮುಖದಲ್ಲಿ

ಇವರಿಗೆ,

ಶ್ರೀ/ಶ್ರೀಮತಿ––––––––––––––

ಮಾನ್ಯರೆ,

ವಿಷಯ: ತಮ್ಮ –––––––– ದಿನಾಂಕದ ಪತ್ರ ವ್ಯವಹಾರಕ್ಕೆ ಸಂಬಂಧಿಸಿದಂತೆ

– – –

ಮೇಲಿನ ವಿಷಯದ ಕುರಿತಾಗಿ, ಅದು ಈ ಮುಂದಿನ ಪರಿಣಾಮಗಳಿಂದ ಗುರಿಯಾಗುವುದೆಂದು ನಾನು ಹೇಳಬೇಕಾಗುತ್ತದೆ:–

(ಎ) ––––––––––––

(ಬಿ) ––––––––––––

(ಸಿ) ––––––––––––

(ಡಿ) ––––––––––––

ಮೇಲೆ ತೋರಿಸಲಾದ ದೋಷಗಳನ್ನು ತಾವು ಈ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ---------- ---------- ದಿನಗಳೊಳಗೆ, ಸರಿಪಡಿಸುವಂತೆ ನಿಮಗೆ ಈ ಮೂಲಕ ಅಗತ್ಯಪಡಿಸಲಾಗಿದೆ. ಇದಕ್ಕೆ ತಪ್ಪಿದ್ದಲ್ಲಿ ಸದರಿ ಪತ್ರ ವ್ಯವಹಾರವನ್ನು ಲೋಕಾಯುಕ್ತ/ಉಪ–ಲೋಕಾಯುಕ್ತ ಇವರ ಮುಂದೆ ಆದೇಶಗಳಿಗಾಗಿ ಇಡತಕ್ಕದ್ದು.

ತಮ್ಮ ವಿಶ್ವಾಸಿ,

ಬೆಂಗಳೂರು:
ದಿನಾಂಕ:

ಲೋಕಾಯುಕ್ತ ನಿಬಂಧಕ,
ಕರ್ನಾಟಕ, ಬೆಂಗಳೂರು.

8. ನಮೂನೆ–IV ರ ಬದಲಾಗಿ ಹೊಸ ನಮೂನೆಯ ಪ್ರತ್ಯಾಯೋಜನೆ:– ಸದರಿ ನಿಯಮಗಳ ನಮೂನೆ ಸಂಖ್ಯೆ–**IV** ರ ಬದಲಾಗಿ, ಈ ಮುಂದಿನ ನಮೂನೆಯನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

ನಮೂನೆ ಸಂಖ್ಯೆ–IV

(7ನೇ ನಿಯಮವನ್ನು ನೋಡಿ)

------- ವರ್ಷಕ್ಕಾಗಿ ---------- ನು (ಇಲ್ಲಿ ಸರ್ಕಾರಿ ನೌಕರನ ಹೆಸರು ಮತ್ತು ಪದನಾಮವನ್ನು ನಿರ್ದಿಷ್ಟಪಡಿಸಿ) ಸಲ್ಲಿಸಿದ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿ.

(ಸೂಚನೆ:– ಈ ನಮೂನೆಯಲ್ಲಿ ಕಂಡುಬರುವ ಪ್ರತಿಯೊಂದು ಅಂಕಣವನ್ನು ಗೆರೆಗಳಿಂದ ಮತ್ತು ಚುಕ್ಕೆಗಳಿಂದ ಭರ್ತಿ ಮಾಡದೇ ಪದಗಳಲ್ಲಿ ಭರ್ತಿ ಮಾಡಿ ಸಲ್ಲಿಸಬೇಕು)

1. ಸರ್ಕಾರಿ ನೌಕರನ ಖಾಯಂ ವಿಳಾಸ [ದೂರವಾಣಿ ಸಂಖ್ಯೆಯೊಂದಿಗೆ (ಯಾವುದಾದರೂ ಇದ್ದರೆ)]:
2. ಸರ್ಕಾರಿ ನೌಕರನ ಕುಟುಂಬದ ಸದಸ್ಯರ ಹೆಸರುಗಳು ಮತ್ತು ಆತನೊಂದಿಗಿನ ಪ್ರತಿಯೊಬ್ಬರ ಸಂಬಂಧ:
3. ಪ್ರಸ್ತುತ ಮಾಸಿಕ ಆದಾಯ:

ಎ. ಸರ್ಕಾರಿ ನೌಕರನ ಆಸ್ತಿ ಮತ್ತು ಹೊಣೆಗಾರಿಕೆಗಳ ವಿವರಪಟ್ಟಿ.

4. ನಗದು ಮತ್ತು ಇತರ ಚರಾಸ್ತಿಗಳು:

(ಎ) ನಗದು

(ಬಿ) ಬ್ಯಾಂಕ್ ಠೇವಣಿಗಳು

(ಸಿ) ಬ್ಯಾಂಕ್ ಖಾತೆಗಳು

(ಡಿ) ಅಂಚೆ ಕಚೇರಿಯ ಖಾತೆಗಳು

(ಎ) ಅಂಚೆ ಕಛೇರಿಯಿಂದ ಪಡೆದ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರಗಳು ಮತ್ತು ಇತರ ಪ್ರಮಾಣ ಪತ್ರಗಳು.

(ಎಫ್) ಯುನಿಟ್ ಟ್ರಸ್ಟ್ ಆಫ್ ಇಂಡಿಯಾದ ಯುನಿಟ್‌ಗಳು

(ಜಿ) ಸರ್ಕಾರಿ ಮತ್ತು ಇತರೆ ಭದ್ರತೆಗಳು

(ಹೆಚ್) ಕಂಪನಿಗಳಲ್ಲಿನ ಷೇರುಗಳು, ಡಿಬೆಂಚರುಗಳು ಮತ್ತು ಠೇವಣಿಗಳು

(ಐ) ಸಾಲವಾಗಿ ಇತರರಿಗೆ ಮುಂಗಡ ಕೊಡಲಾದ ಹಣ

(ಜೆ) ವಿಮಾ ಪಾಲಿಸಿಗಳು ಮತ್ತು ಭವಿಷ್ಯ ನಿಧಿಗಳು

(ಕೆ) ಸ್ಥಿರ ಸ್ವತ್ತಿನಲ್ಲಿ ಹೂಡದಿರುವ ಇತರ ಬಂಡವಾಳ

ಸೂಚನೆ: ಮೇಲಿನ ವಿವರಗಳು, ದಿನಾಂಕ, ವೆಚ್ಚ ಮತ್ತು ಆರ್ಜನೆಯ ಮೂಲವನ್ನು ಒಳಗೊಂಡ ಮತ್ತು ಅವರು ಆಸ್ತಿಯನ್ನು ಯಾರಲ್ಲಿ ಇಟ್ಟಿರುವರೋ ಆ ವ್ಯಕ್ತಿ ಅಥವಾ ಸ್ಥಳವನ್ನು ತೋರಿಸುವುದಕ್ಕೆ ಸಮರ್ಪಕವಾದ ಸ್ವತ್ತುಗಳ ವಿವರಗಳನ್ನು ಒಳಗೊಂಡ ಕೋಷ್ಟಕ ರೂಪದ ನಮೂನೆಯಲ್ಲಿರತಕ್ಕದ್ದು.

5. 4ನೇ ಬಾಬಿನಲ್ಲಿ ಒಳಗೊಂಡಿರುವುದನ್ನು ಹೊರತುಪಡಿಸಿದ ಚರಾಸ್ತಿ:–

(ಎ) ಆಭರಣ ಮತ್ತು ಚಿನ್ನದ ಅಥವಾ ಬೆಳ್ಳಿಯ ಗಟ್ಟಿ (ಬುಲಿಯನ್)

(ಬಿ) ವಾಹನಗಳು

(ಸಿ) ವಿಡಿಯೋ ಕ್ಯಾಸೆಟ್ ಪ್ಲೇಯರ್ಸ್

(ಡಿ) ರೆಫ್ರಿಜರೇಟರ್ಸ್

(ಇ) ಹವಾ ನಿಯಂತ್ರಕಗಳು (ಎರ್ ಕಂಡಿಷನರ್ಸ್)

(ಎಫ್) ಟೆಲಿವಿಷನ್ ಸೆಟ್ಟುಗಳು

(ಜಿ) ವಿಡಿಯೋ ಕ್ಯಾಸೆಟ್ ರೆಕಾರ್ಡರ್

(ಹೆಚ್) ಪುರಾತನ ಆಭರಣಗಳು – ವಸ್ತುಗಳು

(ಐ) ಬೆಳ್ಳಿ ಆಭರಣಗಳು – ವಸ್ತುಗಳು

(ಜೆ) ವ್ಯಾಪಾರ ಸಂಸ್ಥೆಗಳು

(ಕೆ) ಜಾನುವಾರುಗಳು

(ಎಲ್) 5000 ರೂ. ಗಳಿಗಿಂತ ಹೆಚ್ಚು ಬೆಲೆಬಾಳುವ ಪ್ರತಿಯೊಂದು ಪೀಠೋಪಕರಣವನ್ನು ಒಳಗೊಂಡಂತೆ ಇತರ ಗೃಹಪಯೋಗಿ ವಸ್ತುಗಳು.

6. ಸ್ಥಿರಾಸ್ತಿ

(ಎ) ಕೃಷಿ ಭೂಮಿಗಳು

(ಬಿ) ಸಾಗುವಳಿಗೊಳಪಡಿಸದ/ ಯಾವುದೇ ಕಟ್ಟಡವನ್ನು ನಿರ್ಮಿಸದ ಕೃಷಿಯೇತರ ಭೂಮಿಗಳು

(ಸಿ) ಕಟ್ಟಡಗಳು

(ಡಿ) ಇತರೆ ಸ್ಥಿರಾಸ್ತಿಗಳು.

ಸೂಚನೆ: ನೀಡಬೇಕಾದ ಮಾಹಿತಿಯು ಸ್ವತ್ತಿನ ಬೆಲೆಯನ್ನು ಆರ್ಜನೆಯ ದಿನಾಂಕ ಮತ್ತು ಮೂಲವನ್ನು ಹಾಗೂ ಸರ್ಕಾರಿ ನೌಕರನ ಹಿತಾಸಕ್ತಿಯಲ್ಲಿ ಅದರಲ್ಲಿನ ಅವರ ಸನ್ನಿವೇಶವನ್ನು ಮತ್ತು ಅದನ್ನು ಗುರುತಿಸಲು ಸಾಕಷ್ಟು ವಿವರಗಳನ್ನು ತಿಳಿಸುವ ಕೋಷ್ಟಕ ರೂಪದ ನಮೂನೆಯಲ್ಲಿರತಕ್ಕದ್ದು.

7. **ಹೊಣೆಗಾರಿಕೆಗಳು:**– (ಎ) ಹೊಣೆಯ ಸ್ವರೂಪ, ವ್ಯಾಪ್ತಿ ಮತ್ತು ಇತರ ವಿವರಗಳು ಮತ್ತು ಅದನ್ನು ವಹಿಸಿಕೊಂಡಿದ್ದಾಗಿನ ದಿನಾಂಕ.

(ಬಿ) ಯಾವ ವ್ಯಕ್ತಿಯ ಸಂಬಂಧದಲ್ಲಿ ಸರ್ಕಾರಿ ನೌಕರನು ಹೊಣೆಯಾಗಿರುವನೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ.

8. ಸರ್ಕಾರಿ ನೌಕರನ ಕುಟುಂಬದ ಸದಸ್ಯರ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಿವರಪಟ್ಟಿ:– (ಕುಟುಂಬದ ಪ್ರತಿಯೊಬ್ಬ ಸದಸ್ಯನು 4ರಿಂದ 7ನೇ ಬಾಬಿನಲ್ಲಿ ಅಗತ್ಯಪಡಿಸಿದಂತೆ ಪ್ರತ್ಯೇಕವಾಗಿ ಸ್ವತ್ತಿನ ವಿವರಗಳನ್ನು ಇಲ್ಲಿ ನೀಡುವುದು).

–––––––––––––– ಆದ ನಾನು, ಮೇಲೆ ನೀಡಲಾದ ಮಾಹಿತಿಯು ಸತ್ಯವೆಂದು ಮತ್ತು ಸಂಬಂಧಪಟ್ಟ ವಿವರಗಳಾವುವನ್ನೂ ಅದರಿಂದ ಬಿಟ್ಟುಬಿಡಲಾಗಿಲ್ಲವೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸ್ಥಳ:

ಸರ್ಕಾರಿ ನೌಕರನ ಸಹಿ
ಪದನಾಮ ––––––––

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸರ್ಕಾರದ ಜಂಟಿ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು)
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಅಧಿಸೂಚನೆ ಸಂಖ್ಯೆ. ಡಿಪಿಎಆರ್, 6 ಕೆಎಲ್ಓ, 86

ಬೆಂಗಳೂರು, ದಿನಾಂಕ: 19ನೇ ಜೂನ್, 1986

ಕರ್ನಾಟಕ ಸರ್ಕಾರವು, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 4) 23ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಲೋಕಾಯುಕ್ತ ನಿಯಮಗಳು, 1985ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಮುಂದಿನ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ:–

1. **ಹೆಸರು ಮತ್ತು ಪ್ರಾರಂಭ:**– (1) ಈ ನಿಯಮಗಳನ್ನು ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ನಿಯಮಗಳು, 1986 ಎಂದು ಕರೆಯತಕ್ಕದ್ದು.

2. ಇವು ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ನಮೂನೆ–IIಎ ಯ ಪ್ರತ್ಯಾಯೋಜನೆ:– ಕರ್ನಾಟಕ ಲೋಕಾಯುಕ್ತ ನಿಯಮಗಳು, 1986ರ ನಮೂನೆ–IIಎ ಯ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

ನಮೂನೆ ಸಂಖ್ಯೆ–IIಎ

(5(i)ನೇ ನಿಯಮವನ್ನು ನೋಡಿ)

ದೂರುಗಳ ನೋಂದಣಿ

1. ಕ್ರಮ ಸಂಖ್ಯೆ.
2. ದೂರನ್ನು ಸ್ವೀಕರಿಸಿದ ದಿನಾಂಕ
3. ಫಿರ್ಯಾದಿಯ ಹೆಸರು ಮತ್ತು ವಿಳಾಸ
4. ಸರ್ಕಾರಿ ನೌಕರನು ಯಾರ ವಿರುದ್ಧ ದೂರು ನೀಡಿರುವನೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ
5. ಸರ್ಕಾರಿ ನೌಕರನು ಒಬ್ಬ ಸರ್ಕಾರಿ ನೌಕರನ ವಿರುದ್ಧ ದೂರು ನೀಡಲಾಗಿದ್ದಲ್ಲಿ, ಅಂಥ ಸರ್ಕಾರಿ ನೌಕರನು ಯಾವ ಸೇವಾ ಗುಂಪಿಗೆ ಸೇರಿದವನಾಗಿರುತ್ತಾನೆ
6. ಫಿರ್ಯಾದು, ಆಪಾದನೆ ಅಥವಾ ಕುಂದುಕೊರತೆಯನ್ನು ಒಳಗೊಂಡಿದೆಯೇ
7. ಅಂತಿಮ ವಿಲೆವಾರಿಯ ದಿನಾಂಕ
8. ಪರಿಣಾಮ
9. ಅಂತಿಮ ಆದೇಶವನ್ನು ಅನುಷ್ಠಾನಗೊಳಿಸುವ ರೀತಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಎಂ. ಮೊಹಮ್ಮದ್ ಫೀರ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವಾ ನಿಯಮಗಳು –2) ಜಿಎಸ್ಆರ್ – 170

ಕರ್ನಾಟಕ ವಿಧಾನ ಪರಿಷತ್ತಿನ (ಪಕ್ಷಾಂತರದ ಕಾರಣದ ಮೇಲೆ ಸದಸ್ಯರ ಅನರ್ಹತೆ) ನಿಯಮಗಳು, 1986

ಭಾರತ ಸಂವಿಧಾನದ ಹತ್ತನೇ ಅನುಸೂಚಿಯ 8ನೇ ಕಂಡಿಕೆಯ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸಿರುತ್ತಾರೆ, ಎಂದರೆ:–

1. **ಚಿಕ್ಕ ಹೆಸರು.**– ಈ ನಿಯಮಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ (ಪಕ್ಷಾಂತರದ ಕಾರಣದ ಮೇಲೆ ಸದಸ್ಯರ ಅನರ್ಹತೆ) ನಿಯಮಗಳು, 1986 ಎಂದು ಕರೆಯತಕ್ಕದ್ದು.

2. **ಪರಿಭಾಷೆ.**– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

(ಎ) **"ಲಘು ಪ್ರಕಟಣೆ"** (ಬುಲೆಟಿನ್) ಎಂದರೆ, ವಿಧಾನ ಪರಿಷತ್ತಿನ ಲಘು ಪ್ರಕಟಣೆ;

(ಬಿ) **"ಸಮಿತಿ"** ಎಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ;

(ಸಿ) ಈ ನಿಯಮಗಳಿಗೆ ಸಂಬಂಧಿಸಿದಂತೆ **"ಪ್ರಾರಂಭದ ದಿನಾಂಕ"** ಎಂದರೆ, ಹತ್ತನೇ ಅನುಸೂಚಿಯ 8ನೇ ಕಂಡಿಕೆ (3)ನೇ ಉಪ–ಕಂಡಿಕೆಯ ಮೇರೆಗೆ ಈ ನಿಯಮಗಳು ಜಾರಿಗೆ ಬಂದ ದಿನಾಂಕ;

(ಡಿ) **"ನಮೂನೆ"** ಎಂದರೆ, ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;

(ಇ) **"ಸದನ"** ಎಂದರೆ, ಕರ್ನಾಟಕ ವಿಧಾನ ಪರಿಷತ್ತು;

(ಎಫ್) **"ಶಾಸಕಾಂಗ ಪಕ್ಷಕ್ಕೆ ಸಂಬಂಧಿಸಿದಂತೆ ನಾಯಕ"** ಎಂದರೆ, ಪಕ್ಷವು ತನ್ನ ನಾಯಕನನ್ನಾಗಿ ಆಯ್ಕೆ ಮಾಡಿದ ಪಕ್ಷದ ಸದಸ್ಯ ಮತ್ತು ಇದು ನಾಯಕನು ಗೈರುಹಾಜರಾದ ಸಂದರ್ಭದಲ್ಲಿ, ಈ ನಿಯಮಗಳ ಉದ್ದೇಶಕ್ಕಾಗಿ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುವುದಕ್ಕೆ ಅಥವಾ ಪಕ್ಷದ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಪಕ್ಷವು ಅಧಿಕಾರ ನೀಡಿದ ಪಕ್ಷದ ಯಾರೇ ಇತರೆ ಸದಸ್ಯರನ್ನು ಒಳಗೊಂಡಿರುತ್ತದೆ.

(ಜಿ) **"ಸದಸ್ಯ"** ಎಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯ;

(ಎಚ್) **"ಕಾರ್ಯದರ್ಶಿ"** ಎಂದರೆ, ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಕಾರ್ಯದರ್ಶಿ ಮತ್ತು ಕಾರ್ಯದರ್ಶಿಯ ಕರ್ತವ್ಯವನ್ನು ತಾತ್ಕಾಲಿಕವಾಗಿ ನಿರ್ವಹಿಸುವ ಯಾರೇ ವ್ಯಕ್ತಿಯನ್ನು ಒಳಗೊಂಡಿರುತ್ತದೆ;

(ಐ) **"ಹತ್ತನೆ ಅನುಸೂಚಿ"** ಎಂದರೆ, ಭಾರತ ಸಂವಿಧಾನದ ಹತ್ತನೆ ಅನುಸೂಚಿ.

3.1 ಶಾಸಕಾಂಗ ಪಕ್ಷದ ನಾಯಕನು ಒದಗಿಸಬೇಕಾದ ಮಾಹಿತಿ.– (1) ಪ್ರತಿಯೊಂದು ಶಾಸಕಾಂಗ ಪಕ್ಷದ ನಾಯಕನು (ಒಬ್ಬನೇ ಒಬ್ಬ ಸದಸ್ಯನನ್ನು ಒಳಗೊಂಡಿರುವ ಶಾಸಕಾಂಗ ಪಕ್ಷವನ್ನು ಹೊರತುಪಡಿಸಿ) ಪ್ರಥಮ ಉಪವೇಶನದ ತರುವಾಯ ಮೂವತ್ತು ದಿನಗಳ ಒಳಗಾಗಿ ಅದು ರಚನೆಗೊಂಡ ಮೂವತ್ತು ದಿನಗಳ ಒಳಗಾಗಿ ಅಥವಾ ಸಭಾಪತಿಯವರು ಅನುಮತಿಸಲು ಸಾಕಷ್ಟು ಕಾರಣಗಳಿರುವ ಸಂದರ್ಭದಲ್ಲಿ ಸಭಾಪತಿಯವರು ವಿಸ್ತರಿಸಬಹುದಾದ ಅಂತಹ ಅವಧಿಯ ಒಳಗಾಗಿ ಈ ಮುಂದಿನವುಗಳನ್ನು ಸಭಾಪತಿಯವರಿಗೆ ಒದಗಿಸತಕ್ಕದ್ದು, ಅವೆಂದರೆ:–

(ಎ) ನಮೂನೆ–1ರಲ್ಲಿರುವಂತೆ ಅಂಥ ಸದಸ್ಯರಿಗೆ ಸಂಬಂಧಿಸಿದ ಇತರ ವಿವರಗಳೊಂದಿಗೆ ಅಂಥ ಶಾಸಕಾಂಗ ಪಕ್ಷದ ಸದಸ್ಯರ ಹೆಸರುಗಳನ್ನು ಒಳಗೊಂಡಿರುವ (ಲಿಖಿತದಲ್ಲಿ) ಒಂದು ವಿವರಣಾಪತ್ರ ಮತ್ತು ಈ ನಿಯಮಗಳ ಉದ್ದೇಶಗಳಿಗಾಗಿ ಸಭಾಪತಿಯವರೊಂದಿಗೆ ವ್ಯವಹರಿಸುವುದಕ್ಕಾಗಿ ಆ ಪಕ್ಷದಿಂದ ಯಾರನ್ನು ಅಧಿಕೃತಗೊಳಿಸಲಾಗಿದೆಯೋ ಅಂಥ ಪಕ್ಷದ ಸದಸ್ಯರ ಹೆಸರುಗಳು ಮತ್ತು ಹುದ್ದೆಗಳ ವಿವರ;

(ಬಿ) ಸಂಬಂಧಪಟ್ಟ ರಾಜಕೀಯ ಪಕ್ಷದ (ಸಂವಿಧಾನ ಅಥವಾ ಯಾವುದೇ ಇತರ ಹೆಸರಿನಿಂದ ತಿಳಿಸಿರುವ ಅಂಥ) ನಿಯಮಗಳು ಮತ್ತು ವಿನಿಯಮಗಳ ಪ್ರತಿ; ಮತ್ತು

(ಸಿ) ಅಂಥ ಶಾಸಕಾಂಗ ಪಕ್ಷವು ಯಾವುದೇ ಪ್ರತ್ಯೇಕವಾದ ನಿಯಮಗಳು ಮತ್ತು ವಿನಿಯಮಗಳನ್ನು ಹೊಂದಿದ್ದಲ್ಲಿ (ಅದೇ ಹೆಸರಿನಲ್ಲಿ ಅಥವಾ ಸಂವಿಧಾನದ ಹೆಸರಿನಲ್ಲಿ ಅಥವಾ ಯಾವುದೇ ಇತರ ಹೆಸರಿನಿಂದ ಕರೆಯಬಹುದಾದ) ಅಂಥ ನಿಯಮಗಳು ಮತ್ತು ವಿನಿಯಮಗಳ ಪ್ರತಿಯನ್ನೂ ಸಹಾ ಒದಗಿಸುವುದು.

(2) ಯಾವುದೇ ಶಾಸಕಾಂಗ ಪಕ್ಷವು ಒಬ್ಬನೇ ಒಬ್ಬ ಸದಸ್ಯನನ್ನು ಒಳಗೊಂಡಿದ್ದಲ್ಲಿ ಅಂಥ ಸದಸ್ಯನು, (1)ನೇ ಉಪ–ನಿಯಮದ (ಬಿ) ಖಂಡದಲ್ಲಿ ನಮೂದಿಸಿರುವ ನಿಯಮಗಳು ಮತ್ತು ಉಪ–ನಿಯಮಗಳ ಪ್ರತಿಯನ್ನು ಸಭಾಪತಿಯವರಿಗೆ, ಸದನದ ಮೊದಲ ಉಪವೇಶನದ ತರುವಾಯ ಮೂವತ್ತು ದಿನಗಳ ಒಳಗಾಗಿ ಅಥವಾ ಆತನು ಸದನದ ಸದಸ್ಯನಾದ ಮೊದಲ ಉಪವೇಶನದ ತರುವಾಯ ಅಥವಾ ಸಾಕಷ್ಟು ಕಾರಣಗಳ ಸಂದರ್ಭದಲ್ಲಿ ಸಭಾಪತಿಯು ಅನುಮತಿಸಬಹುದಾದ ಮತ್ತಷ್ಟು ಅವಧಿಯ ಒಳಗಾಗಿ ಒದಗಿಸತಕ್ಕದ್ದು.

(3) ಒಬ್ಬನೇ ಒಬ್ಬ ಸದಸ್ಯನನ್ನು ಹೊಂದಿರುವ ಶಾಸಕಾಂಗ ಪಕ್ಷದ ಬಲ ಹೆಚ್ಚಾದ ಸಂದರ್ಭದಲ್ಲಿ ಅದರ ಬಲವು ಹೆಚ್ಚಾದ ಮೊದಲ ದಿನಾಂಕದಂದು ಅಂಥ ಶಾಸಕಾಂಗ ಪಕ್ಷವನ್ನು ರಚಿಸಿದಲ್ಲಿ ಅಂಥ ಶಾಸಕಾಂಗ ಪಕ್ಷದ ಸಂಬಂಧದಲ್ಲಿ ಉಪ–ನಿಯಮ(1)ರ ಉಪಬಂಧಗಳು ಅನ್ವಯವಾಗತಕ್ಕದ್ದು.

(4) (1)ನೇ ಉಪ–ನಿಯಮದ ಮೇರೆಗೆ ಶಾಸಕಾಂಗ ಪಕ್ಷದ ನಾಯಕನಿಂದ ಅಥವಾ (2)ನೇ ಉಪ–ನಿಯಮದ ಮೇರೆಗೆ ಯಾರೇ ಸದಸ್ಯನಿಂದ ಒದಗಿಸಲಾದ ಮಾಹಿತಿಯಲ್ಲಿ ಯಾವುದೇ ಬದಲಾವಣೆಗಳಾದಾಗ ಅವನು, ಅದರ ತರುವಾಯ ಮೂವತ್ತು ದಿನಗಳ ಒಳಗಾಗಿ ಅಥವಾ ಸಭಾಪತಿಯವರು ಸಾಕಷ್ಟು ಕಾರಣಗಳಿಗಾಗಿ

ಅನುಮತಿಸಬಹುದಾದ ಅಂಥ ಮತ್ತಷ್ಟು ಅವಧಿಯ ಒಳಗಾಗಿ ಅಂಥ ಬದಲಾವಣೆ ಸಂಬಂಧದಲ್ಲಿ ಸಭಾಪತಿಯವರಿಗೆ ಲಿಖಿತದಲ್ಲಿ ಮಾಹಿತಿಯನ್ನು ಒದಗಿಸತಕ್ಕದ್ದು.

(5) ಈ ನಿಯಮಗಳು ಪ್ರಾರಂಭಗೊಳ್ಳುವ ದಿನಾಂಕದಂದು ಸದನವು ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ (1) ಮತ್ತು (2)ನೇ ಉಪ–ನಿಯಮಗಳಲ್ಲಿ ಉಲ್ಲೇಖಿಸಿರುವ ಸದನದ ಪ್ರಥಮ ಉಪವೇಶನದ ದಿನಾಂಕ ಎಂಬುದಕ್ಕೆ ಈ ನಿಯಮಗಳು ಪ್ರಾರಂಭಗೊಂಡ ದಿನಾಂಕದಿಂದ ಎಂಬುದಾಗಿ ಅರ್ಥೈಸಿಕೊಳ್ಳತಕ್ಕದ್ದು.

(6) ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದ ಯಾರೇ ಸದಸ್ಯನು, ಆ ರಾಜಕೀಯ ಪಕ್ಷದಿಂದ ಅಥವಾ ಆ ರಾಜಕೀಯ ಪಕ್ಷದ ಪರವಾಗಿ ಅಧಿಕೃತಗೊಳಿಸಲಾದ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರದಿಂದ ನೀಡಲಾದ ಯಾವುದೇ ನಿರ್ದೇಶನಕ್ಕೆ ವ್ಯತಿರಿಕ್ತವಾಗಿ ಪರಿಷತ್ತಿನಲ್ಲಿ ಮತದಾನ ಮಾಡಿದಲ್ಲಿ ಅಥವಾ ಮತದಾನದಿಂದ ದೂರ ಉಳಿದಲ್ಲಿ, ಅಂಥ ರಾಜಕೀಯ ಪಕ್ಷದ, ವ್ಯಕ್ತಿಗಳ ಅಥವಾ ಪ್ರಾಧಿಕಾರದ, ಸಂಬಂಧಪಟ್ಟ ಶಾಸಕಾಂಗ ಪಕ್ಷದ ನಾಯಕನ ಅಥವಾ ಅಂಥ ನಾಯಕನಾಗಿರುವ ಸದಸ್ಯನ ಸಂದರ್ಭಾನುಸಾರ ಅಂಥ ಶಾಸಕಾಂಗ ಪಕ್ಷದ ಒಬ್ಬನೇ ಸದಸ್ಯನ ಪೂರ್ವಾನುಮತಿಯನ್ನು ಪಡೆದುಕೊಂಡಿಲ್ಲದ ಸಂದರ್ಭದಲ್ಲಿ ಅಂಥ ಸದಸ್ಯನು ಸಾಧ್ಯವಾದಷ್ಟು ಬೇಗನೆ, ಅಂಥ ಮತದಾನ ಮಾಡಿದ ಅಥವಾ ಮತದಾನದಿಂದ ದೂರ ಉಳಿದ ದಿನಾಂಕದಿಂದ ಹದಿನೈದು ದಿನಗಳ ನಂತರ ನಮೂನೆ–IIರಲ್ಲಿರುವಂತೆ ಅಂಥ ಮತದಾನ ಅಥವಾ ಅಂಥ ಮತದಾನ ತಿರಸ್ಕಾರವನ್ನು ಅಂಥ ರಾಜಕೀಯ ಪಕ್ಷ, ವ್ಯಕ್ತಿ ಅಥವಾ ಪ್ರಾಧಿಕಾರವು ಮನ್ನಾ ಮಾಡಿದೆಯೇ ಅಥವಾ ಮನ್ನಾ ಮಾಡಿಲ್ಲವೇ ಎಂಬ ಬಗ್ಗೆ ಸಭಾಪತಿಯವರಿಗೆ ಮಾಹಿತಿಯನ್ನು ಒದಗಿಸತಕ್ಕದ್ದು.

ವಿವರಣೆ:– ಯಾರೇ ಸದಸ್ಯನು, ತನ್ನ ಮತವನ್ನು ಚಲಾಯಿಸುವುದಕ್ಕೆ ಹಕ್ಕುಳ್ಳವನಾಗಿದ್ದರೂ ಮತದಾನದಿಂದ ಸ್ವ–ಇಚ್ಛೆಯಿಂದ ದೂರ ಉಳಿದಿದ್ದಾಗ ಮಾತ್ರ ಮತದಾನದಿಂದ ದೂರ ಉಳಿದಿದ್ದಾನೆಂದು ಪರಿಗಣಿಸಬಹುದು.

4. ಸದಸ್ಯರು ನೀಡಬೇಕಾದ ಮಾಹಿತಿ, ಇತ್ಯಾದಿ.– (1) ಈ ನಿಯಮಗಳು ಪ್ರಾರಂಭಗೊಳ್ಳುವ ದಿನಾಂಕಕ್ಕಿಂತ ಮುಂಚೆ ಸದನದಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡಿರುವ ಯಾರೇ ಪ್ರತಿಯೊಬ್ಬ ಸದಸ್ಯನು, ಅಂಥ ದಿನಾಂಕದಿಂದ 30 ದಿನಗಳ ಒಳಗಾಗಿ ಅಥವಾ ಸಭಾಪತಿಯು ಸಾಕಷ್ಟು ಕಾರಣಗಳಿಗಾಗಿ ಅನುಮತಿಸಬಹುದಾದ ಅಂಥ ಮತ್ತಷ್ಟು ಅವಧಿಯ ಒಳಗಾಗಿ ವಿವರಣಾ ಪತ್ರ ಹಾಗೂ IIIನೇ ನಮೂನೆಯಲ್ಲಿರುವಂತೆ ಘೋಷಣಾ ಪತ್ರವನ್ನು ಕಾರ್ಯದರ್ಶಿಯವರಿಗೆ ಒದಗಿಸತಕ್ಕದ್ದು.

(2) ಈ ನಿಯಮಗಳು ಪ್ರಾರಂಭವಾದ ತರುವಾಯ ಸದನದಲ್ಲಿ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುವ ಪ್ರತಿಯೊಬ್ಬ ಸದಸ್ಯನು ಸಂವಿಧಾನದ 188ನೇ ಅನುಚ್ಛೇದದ ಮೇರೆಗೆ ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸಿ ರುಜುಹಾಕುವುದಕ್ಕೆ ಮುಂಚೆ ಮತ್ತು ಸದನದಲ್ಲಿ ತನ್ನ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಮುಂಚೆ ತನ್ನ ಚುನಾವಣಾ ಪ್ರಮಾಣಪತ್ರ ಅಥವಾ ಸಂದರ್ಭಾನುಸಾರ ಆತನನ್ನು ಸದಸ್ಯನೆಂದು ನಾಮನಿರ್ದೇಶನ ಮಾಡಿರುವ ಅಧಿಸೂಚನೆಯ ದೃಢೀಕೃತ ಪ್ರತಿಯನ್ನು ಕಾರ್ಯದರ್ಶಿಯವರ ಬಳಿ ನೀಡತಕ್ಕದ್ದು

ಮತ್ತು ನಮೂನೆ IIIರಲ್ಲಿರುವಂತೆ ವಿವರಣಾಪತ್ರ ಮತ್ತು ಘೋಷಣೆಯ ಪತ್ರವನ್ನು ಸಹಾ ಕಾರ್ಯದರ್ಶಿಯವರಿಗೆ ಒದಗಿಸತಕ್ಕದ್ದು.

ವಿವರಣೆ.– "ಚುನಾವಣಾ ಪ್ರಮಾಣಪತ್ರ" ಎಂದರೆ, ಈ ಉಪ–ನಿಯಮದ ಉದ್ದೇಶಕ್ಕಾಗಿ, ಪ್ರಜಾ ಪ್ರಾತಿನಿದ್ಯ ಅಧಿನಿಯಮ, 1951ರ (1951ರ 43) ಅಡಿಯಲ್ಲಿ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ನೀಡಲಾದ ಚುನಾವಣಾ ಪ್ರಮಾಣಪತ್ರ.

(3) ಈ ನಿಯಮಗಳ ಅಡಿಯಲ್ಲಿ ಸದಸ್ಯರಿಂದ ನೀಡಲಾದ ಮಾಹಿತಿಯ ಸಾರಾಂಶವನ್ನು ಲಘು ಪ್ರಕಟಣೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸಭಾಪತಿಯವರ ಮನವರಿಕೆಗಾಗಿ ಅದರಲ್ಲಿ ಯಾವುದಾದರೂ ವ್ಯತ್ಯಾಸಗಳಿದ್ದರೆ ಅದನ್ನು ಗಮನಿಸಿ ಅಗತ್ಯವಾದ ಒಪ್ಪೋಲೆಯನ್ನು ಲಘು ಪ್ರಕಟಣೆಯಲ್ಲಿ ಪ್ರಕಟಿಸತಕ್ಕದ್ದು.

5. ಸದಸ್ಯರಿಗೆ ಸಂಬಂಧಿಸಿದ ಮಾಹಿತಿಯ ರಿಜಿಸ್ಟರು.– (1) ಕಾರ್ಯದರ್ಶಿಯವರು, ಸದಸ್ಯರಿಗೆ ಸಂಬಂಧಿಸಿದಂತೆ 3 ಮತ್ತು 4ನೇ ನಿಯಮಗಳ ಮೇರೆಗೆ ಒದಗಿಸಲಾದ ಮಾಹಿತಿ ಆಧಾರದ ಮೇಲೆ ಒಂದು ರಿಜಿಸ್ಟರನ್ನು ನಮೂನೆ–IVರಲ್ಲಿದ್ದಂತೆ ನಿರ್ವಹಿಸತಕ್ಕದ್ದು.

(2) ಪ್ರತಿಯೊಬ್ಬ ಸದಸ್ಯರಿಗೆ ಸಂಬಂಧಿಸಿದ ಮಾಹಿತಿಯನ್ನು ರಿಜಿಸ್ಟರಿನಲ್ಲಿ ಪ್ರತ್ಯೇಕ ಹಾಳೆಯಲ್ಲಿ ದಾಖಲಿಸತಕ್ಕದ್ದು.

6. ಅರ್ಜಿಯ ಮೂಲಕ ಕೇಳಲಾದ ಉಲ್ಲೇಖಗಳು.– (1) ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಸಲ್ಲಿಸಿದ ಅಂಥ ಸದಸ್ಯರ ಸಂಬಂಧದಲ್ಲಿ ಅರ್ಜಿಯ ಮೂಲಕ ಹೊರತಾಗಿ ಹತ್ತನೆ ಅನುಸೂಚಿಯ ಮೇರೆಗೆ ಸದಸ್ಯನು ಅನರ್ಹತೆಗೆ ಒಳಗಾಗಿದ್ದಾನೆಯೇ ಎಂಬುದಕ್ಕೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳ ಉಲ್ಲೇಖವನ್ನು ಮಾಡತಕ್ಕದ್ದಲ್ಲ.

(2) ಸದಸ್ಯರಿಗೆ ಸಂಬಂಧಿಸಿದ ಅರ್ಜಿಯನ್ನು ಯಾರೇ ಇತರೆ ಸದಸ್ಯರು ಸಭಾಪತಿಯವರಿಗೆ ಲಿಖಿತದಲ್ಲಿ ಸಲ್ಲಿಸಬಹುದು.

ಪರಂತು, ಸಭಾಪತಿಯವರಿಗೆ ಸಂಬಂಧಿಸಿದ ಅರ್ಜಿಯನ್ನು ಕಾರ್ಯದರ್ಶಿಗಳಿಗೆ ರವಾನಿಸತಕ್ಕದ್ದು.

(3) ಕಾರ್ಯದರ್ಶಿಯವರು,

(ಎ) 2ನೇ ಉಪ–ನಿಯಮದ ಪರಂತುಕದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗನೆ ಅದರ ಸಂಬಂಧದಲ್ಲಿನ ವರದಿಯನ್ನು ಸದನಕ್ಕೆ ಸಲ್ಲಿಸತಕ್ಕದ್ದು.

(ಬಿ) ಸದನವು, ಹತ್ತನೆ ಅನುಸೂಚಿಯ 6ನೇ ಕಂಡಿಕೆ (1)ನೇ ಉಪ–ಕಂಡಿಕೆಯ ಪರಂತುಕದ ಅನುಸಾರ ಸದಸ್ಯನನ್ನು ಚುನಾಯಿಸಿದ ನಂತರ, ಸಾಧ್ಯವಾದಷ್ಟು ಬೇಗನೆ ಅಂತಹ ಸದಸ್ಯರ ಮುಂದೆ ಅರ್ಜಿಯನ್ನು ಮಂಡಿಸತಕ್ಕದ್ದು.

(4) ಯಾರೇ ಸದಸ್ಯನಿಗೆ ಸಂಬಂಧಿಸಿದಂತೆ ಯಾವುದೇ ದೂರನ್ನು ನೀಡುವುದಕ್ಕೆ ಮೊದಲು, ಸದಸ್ಯರು ಹತ್ತನೇ ಅನುಸೂಚಿಯ ಮೇರೆಗೆ ಅನರ್ಹತೆಗೆ ಒಳಗಾಗಿದ್ದಾನೆಯೇ ಎಂಬ ಬಗ್ಗೆ ಪ್ರಶ್ನೆ ಉದ್ಭವಿಸಿದೆಯೆಂದು ನಂಬುವುದಕ್ಕೆ ಯುಕ್ತ ಕಾರಣಗಳಿವೆ ಎಂದು ಅರ್ಜಿದಾರರು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

(5) ಪ್ರತಿಯೊಂದು ಅರ್ಜಿಯು:–

(ಎ) ಅರ್ಜಿದಾರನು ಯಾವ ಮುಖ್ಯ ಸಂಗತಿಗಳನ್ನು ಅವಲಂಬಿಸಿರುತ್ತಾನೋ ಅಂಥ ಮುಖ್ಯ ಸಂಗತಿಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರತಕ್ಕದ್ದು: ಮತ್ತು

(ಬಿ) ಅರ್ಜಿದಾರನು ಅವಲಂಬಿಸಿರುವ ಯಾವುದೇ ದಸ್ತಾವೇಜೀಯ ಸಾಕ್ಷ್ಯಗಳಿದ್ದರೆ ಮತ್ತು ಅರ್ಜಿದಾರನು ಯಾರೇ ವ್ಯಕ್ತಿಯು ಆತನಿಗೆ ಒದಗಿಸಿದ ಯಾವುದೇ ಮಾಹಿತಿಯನ್ನು ಅವಲಂಬಿಸಿದಲ್ಲಿ ಅಂತಹ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ಒಳಗೊಂಡಿರುವ ವಿವರಣಪತ್ರವನ್ನು ಮತ್ತು ಅಂತಹ ಪ್ರತಿಯೊಬ್ಬ ವ್ಯಕ್ತಿಯು ಒದಗಿಸಿದಂತಹ ಅಂಥ ಮಾಹಿತಿಯ ಮುಖ್ಯಾಂಶಗಳನ್ನು ಒಳಗೊಂಡಿರತಕ್ಕದ್ದು.

(6) ಅರ್ಜಿದಾರನು ಪ್ರತಿಯೊಂದು ಅರ್ಜಿಗೆ ಸಹಿ ಮಾಡತಕ್ಕದ್ದು ಮತ್ತು ವಾದ ಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ಹೇಳಲಾದ ರೀತಿಯಲ್ಲಿ ಪರಿಶೀಲಿಸತಕ್ಕದ್ದು.

(7) ಅರ್ಜಿದಾರನು, ಅರ್ಜಿಗೆ ಸಂಬಂಧಿಸಿದ ಪ್ರತಿಯೊಂದು ಅನುಬಂಧಕ್ಕೆ ಸಹಿ ಮಾಡತಕ್ಕದ್ದು ಮತ್ತು ಅರ್ಜಿಗೆ ಮಾಡಿರುವ ರೀತಿಯಲ್ಲಿಯೇ ಅದನ್ನು ಪರಿಶೀಲಿಸತಕ್ಕದ್ದು.

7. **ಕಾರ್ಯವಿಧಾನ.**– (1) 6ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಸಭಾಪತಿಯವರು, ಅರ್ಜಿಯು ಆ ನಿಯಮದ ಅಗತ್ಯತೆಗಳನ್ನು ಪೂರೈಸಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

(2) ಅರ್ಜಿಯು 6ನೇ ನಿಯಮದ ಅಗತ್ಯತೆಗಳನ್ನು ಪೂರೈಸದಿದ್ದಲ್ಲಿ ಸಭಾಪತಿಯವರು ಅರ್ಜಿಯನ್ನು ವಜಾ ಮಾಡಿ, ತದನುಸಾರವಾಗಿ ಆ ವಿಷಯವನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

(3) ಅರ್ಜಿಯು 6ನೇ ನಿಯಮದ ಅಗತ್ಯತೆಗಳನ್ನು ಪೂರೈಸಿದ್ದಲ್ಲಿ, ಸಭಾಪತಿಯವರು ಅರ್ಜಿಯ ಹಾಗೂ ಅದರ ಅನುಬಂಧಗಳ ಪ್ರತಿಗಳನ್ನು ಮಾಡಿಸಿ ಈ ಮುಂದಿನವರಿಗೆ ರವಾನಿಸತಕ್ಕದ್ದು:–

(ಎ) ಯಾವ ಸದಸ್ಯರಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಸದಸ್ಯರಿಗೆ; ಮತ್ತು

(ಬಿ) ಅಂಥ ಸದಸ್ಯರು ಯಾವುದೇ ಶಾಸಕಾಂಗ ಪಕ್ಷಕ್ಕೆ ಸೇರಿದ್ದಲ್ಲಿ ಮತ್ತು ಅಂಥ ಅರ್ಜಿಯನ್ನು ಆ ಶಾಸಕಾಂಗ ಪಕ್ಷದ ನಾಯಕರು ಸಲ್ಲಿಸದಿದ್ದಲ್ಲಿ ಅಂಥ ನಾಯಕನಿಗೆ ಮತ್ತು

ಅಂಥ ಸದಸ್ಯ ಅಥವಾ ನಾಯಕನು, ಅಂಥ ಪ್ರತಿಗಳನ್ನು ಸ್ವೀಕರಿಸಿದ ಏಳು ದಿನಗಳೊಳಗೆ ಅಥವಾ ಸಭಾಪತಿಯವರು ಸಾಕಷ್ಟು ಕಾರಣಗಳಿಗಾಗಿ ನೀಡಬಹುದಾದ ಅಂಥ

ಅವಧಿಯೊಳಗಾಗಿ ಅದರ ಮೇಲಿನ ಅಭಿಪ್ರಾಯಗಳನ್ನು ಸಭಾಪತಿಯವರಿಗೆ ಲಿಖಿತದಲ್ಲಿ ಸಲ್ಲಿಸತಕ್ಕದ್ದು.

(4) ಅನುಮತಿಸಲಾದ ಅವಧಿಯೊಳಗೆ (3)ನೇ ಉಪ–ನಿಯಮದ ಮೇರೆಗೆ (ಆ ಉಪ–ನಿಯಮದ ಮೇರೆಗೆ ಮೂಲತ:ವಾಗಿರಲಿ ಅಥವಾ ವಿಸ್ತರಣೆ ಮೇರೆಗಿರಲಿ) ಸ್ವೀಕರಿಸಿದ ಅರ್ಜಿಯ ಸಂಬಂಧದಲ್ಲಿ ಯಾವುದಾದರೂ ಅಭಿಪ್ರಾಯಗಳಿದ್ದಲ್ಲಿ, ಅವುಗಳನ್ನು ಪರಿಶೀಲಿಸಿದ ನಂತರ ಸಭಾಪತಿಯವರು ವಿಷಯವನ್ನು ಇತ್ಯರ್ಥಪಡಿಸಲು ಮುಂದುವರೆಯಬಹುದು ಅಥವಾ ಪ್ರಕರಣದ ಸ್ವರೂಪ ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಹಾಗೆ ಮಾಡುವುದು ಅಗತ್ಯ ಅಥವಾ ಯುಕ್ತವೆಂದು ಅವರಿಗೆ ಮನವರಿಕೆಯಾದರೆ ಅವರು ಪ್ರಾಥಮಿಕ ವಿಚಾರಣೆ ಮಾಡಿ ತಮಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ಅರ್ಜಿಯನ್ನು ಸಮಿತಿಗೆ ಒಪ್ಪಿಸಬಹುದು.

(5) ಸಭಾಪತಿಯವರು ಸಾಧ್ಯವಾದಷ್ಟು ಬೇಗನೆ (4)ನೇ ಉಪ–ನಿಯಮದ ಮೇರೆಗೆ ಅರ್ಜಿಯನ್ನು ಒಪ್ಪಿಸಿದ ತರುವಾಯ, ಅದನ್ನು ಅರ್ಜಿದಾರರಿಗೆ ತಿಳಿಸತಕ್ಕದ್ದು ಮತ್ತು ಹಾಗೇ ಅರ್ಜಿಯನ್ನು ಸಮಿತಿಗೆ ಒಪ್ಪಿಸಿರುವುದಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಘೋಷಣೆಯನ್ನು ಮಾಡತಕ್ಕದ್ದು ಅಥವಾ ಆಗ ಸದನವು ಉಪವೇಶನದಲ್ಲಿಲ್ಲದಿದ್ದಲ್ಲಿ ಮಾಹಿತಿಯನ್ನು ಲಘು ಪ್ರಕಟಣೆಯಲ್ಲಿ (ಬುಲೆಟಿನ್) ಪ್ರಕಟಿಸುವಂತೆ ಮಾಡತಕ್ಕದ್ದು.

(6) ಸಭಾಪತಿಯವರು (4)ನೇ ಉಪ–ನಿಯಮದ ಮೇರೆಗೆ ಸಮಿತಿಗೆ ಉಲ್ಲೇಖವನ್ನು ಮಾಡಿದಲ್ಲಿ, ಅವರು ಸಮಿತಿಯಿಂದ ವರದಿಯನ್ನು ಸ್ವೀಕರಿಸಿದ ನಂತರ ಸಾಧ್ಯವಾದಷ್ಟು ಬೇಗ ವಿಷಯವನ್ನು ಇತ್ಯರ್ಥಪಡಿಸಲು ಮುಂದುವರೆಯತಕ್ಕದ್ದು.

(7) ಯಾವುದೇ ವಿಷಯವನ್ನು ಇತ್ಯರ್ಥಪಡಿಸುವುದಕ್ಕೆ ಸಭಾಪತಿಯವರು ಅನುಸರಿಸಬೇಕಾದ ಕಾರ್ಯವಿಧಾನ ಮತ್ತು (4)ನೇ ಉಪ–ನಿಯಮದ ಮೇರೆಗೆ ಪ್ರಾಥಮಿಕ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನವು ಸಾಧ್ಯವಾದ ಮಟ್ಟಿಗೆ ಸದಸ್ಯರೊಬ್ಬರು ಸದನದ ವಿಶೇಷಾಧಿಕಾರಗಳನ್ನು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಸಮಿತಿಯು ವಿಚಾರಣೆ ಮತ್ತು ಇತ್ಯರ್ಥಕ್ಕಾಗಿ ಅನುಸರಿಸುವಂತಹ ಕಾರ್ಯವಿಧಾನದಂತೆಯೇ ಇರತಕ್ಕದ್ದು ಮತ್ತು ಸಭಾಪತಿಯಾಗಲೀ ಅಥವಾ ಸಮಿತಿಯಾಗಲೀ ಅಂಥ ಸದಸ್ಯರು ತಮ್ಮ ಪ್ರಕರಣವನ್ನು ನಿವೇದಿಸಿಕೊಳ್ಳುವುದಕ್ಕೆ ಮತ್ತು ಖುದ್ದಾಗಿ ತಮ್ಮ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಯುಕ್ತ ಅವಕಾಶವನ್ನು ನೀಡದೆ, ಹತ್ತನೇ ಅನುಸೂಚಿಯ ಮೇರೆಗೆ ಆ ಸದಸ್ಯನನ್ನು ಅನರ್ಹತೆಗೆ ಒಳಪಡಿಸಲಾಗಿದೆಯೆಂಬ ಯಾವುದೇ ನಿರ್ಣಯಕ್ಕೆ ಬರತಕ್ಕದ್ದಲ್ಲ.

(8) ಅರ್ಜಿಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು.– (1) ಕೊನೆಯದಾಗಿ, ಯಾರೇ ಇತರ ಸದಸ್ಯರ ಸಂಬಂಧದಲ್ಲಿನ ಅರ್ಜಿಗೆ ಸಂಬಂಧಿಸಿದಂತೆ ಅವುಗಳನ್ನು ಅನ್ವಯಿಸುವಂತೆಯೇ ಸಭಾಪತಿಯವರ ಸಂಬಂಧದಲ್ಲಿನ ಅರ್ಜಿಗೆ ಸಂಬಂಧಿಸಿದಂತೆ ಮತ್ತು ಈ ಉದ್ದೇಶಕ್ಕಾಗಿ ಈ ಉಪ–ನಿಯಮಗಳ ಮೇರೆಗೆ ಸಭಾಪತಿಯವರಿಗೆ ಮಾಡಿದ ಉಲ್ಲೇಖಗಳು, ಹತ್ತನೇ ಅನುಸೂಚಿಯ 6ನೇ ಕಂಡಿಕೆ (1)ನೇ ಉಪಕಂಡಿಕೆಯ ಪರಂತುಕದ ಮೇರೆಗೆ ಸದನದ ಮೂಲಕ ಚುನಾಯಿತರಾದ ಸದಸ್ಯರಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಂಡಿರುತ್ತವೆಂದು ಅರ್ಥೈಸತಕ್ಕದ್ದು.

8. ಅರ್ಜಿಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದು.– (1) ಅರ್ಜಿಯ ಪರಿಗಣನೆಯ ಕೊನೆಯಲ್ಲಿ, ಸಭಾಪತಿಯವರು ಅಥವಾ ಸಂದರ್ಭಾನುಸಾರ ಹತ್ತನೇ ಅನುಸೂಚಿಯ 6ನೇ ಕಂಡಿಕೆ (1)ನೇ ಉಪ ಕಂಡಿಕೆಯ ಪರಂತುಕದ ಮೇರೆಗೆ ಚುನಾಯಿತನಾದ ಸದಸ್ಯನು:–

(ಎ) ಅರ್ಜಿಯನ್ನು ವಜಾ ಮಾಡುವಂತೆ ಲಿಖಿತದಲ್ಲಿ ಆದೇಶಿಸತಕ್ಕದ್ದು ಅಥವಾ

(ಬಿ) ಯಾವ ಸದಸ್ಯರಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಲಾಗಿದೆಯೋ ಅಂಥ ಸದಸ್ಯರು ಹತ್ತನೇ ಅನುಸೂಚಿಯ ಮೇರೆಗೆ ಅನರ್ಹತೆಗೆ ಒಳಗಾಗಿದ್ದಾರೆಂದು ಘೋಷಿಸತಕ್ಕದ್ದು ಮತ್ತು ಆ ಆದೇಶದ ಪ್ರತಿಗಳನ್ನು, ಅರ್ಜಿದಾರರಿಗೆ, ಯಾವ ಸದಸ್ಯರ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಸದಸ್ಯರಿಗೆ ಮತ್ತು ಆ ಶಾಸಕಾಂಗ ಪಕ್ಷದ ನಾಯಕರಿಗೆ; ಸಂಬಂಧಪಟ್ಟವರು ಯಾರಾದರೂ ಇದ್ದಲ್ಲಿ ಅವರಿಗೆ ನೀಡತಕ್ಕದ್ದು ಅಥವಾ ರವಾನಿಸತಕ್ಕದ್ದು.

(2) ಸದಸ್ಯರು ಹತ್ತನೇ ಅನುಸೂಚಿಯ ಮೇರೆಗೆ ಅನರ್ಹತೆಗೆ ಒಳಗಾಗುವರೆಂದು ಘೋಷಿಸುವ ಪ್ರತಿಯೊಂದು ನಿರ್ಣಯವನ್ನು, ಸದನವು ಉಪವೇಶನದಲ್ಲಿದ್ದರೆ ಅದಕ್ಕೆ ಕೂಡಲೇ ವರದಿ ಮಾಡತಕ್ಕದ್ದು ಮತ್ತು ಸದನವು ಉಪವೇಶನದಲ್ಲಿಲ್ಲದ ಪಕ್ಷದಲ್ಲಿ ಸದನವು ಮತ್ತೆ ಸಭೆ ಸೇರಿದ ಕೂಡಲೇ ಅದಕ್ಕೆ ವರದಿ ಮಾಡತಕ್ಕದ್ದು.

(3) (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ನಿರ್ಣಯವನ್ನು ಲಘು ಪ್ರಕಟಣೆಯಲ್ಲಿ (ಬುಲೆಟಿನ್) ಪ್ರಕಟಿಸತಕ್ಕದ್ದು ಮತ್ತು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸತಕ್ಕದ್ದು ಹಾಗೂ ಅಂಥ ನಿರ್ಣಯದ ಪ್ರತಿಗಳನ್ನು ಕಾರ್ಯದರ್ಶಿಯವರು ಭಾರತ ಚುನಾವಣಾ ಆಯೋಗಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ರವಾನಿಸತಕ್ಕದ್ದು.

9. ಈ ನಿಯಮಗಳ ವಿವರವಾದ ಕಾರ್ಯವಿಧಾನಕ್ಕೆ ಸಂಬಂಧಿಸಿದ ನಿರ್ದೇಶನಗಳು.– ಸಭಾಪತಿಯವರು, ಈ ನಿಯಮಗಳ ವಿವರವಾದ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ತಾವು ಅಗತ್ಯವೆಂದು ಪರಿಗಣಿಸಬಹುದಾದಂತಹ ನಿರ್ದೇಶನಗಳನ್ನು ಕಾಲಕಾಲಕ್ಕೆ ಹೊರಡಿಸಬಹುದು.

ನಮೂನೆ – I

(ನಿಯಮ 3(1) ನ್ನು ನೋಡಿ)

ಶಾಸಕಾಂಗ ಪಕ್ಷ		ಸಂವಾದಿ ರಾಜಕೀಯ ಪಕ್ಷದ ಹೆಸರು		
ಕ್ರ. ಸಂ.	ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ)	ತಂದೆ/ ಪತಿಯ ಹೆಸರು	ಖಾಯಂ ವಿಳಾಸ	ಚುನಾಯಿತರಾದ ಮತ ಕ್ಷೇತ್ರದ ಹೆಸರು
1	2	3	4	5

ಶಾಸಕಾಂಗ ಪಕ್ಷದ ನಾಯಕನ ಸಹಿ

ದಿನಾಂಕ:

ನಮೂನೆ – II

(ನಿಯಮ 3(5) ನ್ನು ನೋಡಿ)

ಇವರಿಗೆ,

ಸಭಾಪತಿಗಳು,
ಕರ್ನಾಟಕ ವಿಧಾನ ಪರಿಷತ್ತು.

ಮಾನ್ಯರೆ,

–––––––––––––– (ವಸ್ತು ವಿಷಯದ) ಮತದಾನ ಮಾಡುವ ಅವಧಿಯಲ್ಲಿ ––––––––––(ದಿನಾಂಕ)ರಂದು ನಡೆದ ಸದನದ ಉಪವೇಶನದಲ್ಲಿ

ಸದರಿ + ವ್ಯಕ್ತಿ/ ಪ್ರಾಧಿಕಾರಿ/ ಪಕ್ಷದ ಪೂರ್ವಾನುಮತಿಯನ್ನು ಪಡೆಯದೆ (+ವ್ಯಕ್ತಿ/ ಪ್ರಾಧಿಕಾರಿ/ ಪಕ್ಷವು ––––––––––– ಹೊರಡಿಸಿದ ನಿರ್ದೇಶನಕ್ಕೆ ವಿರುದ್ಧವಾಗಿ ಶ್ರೀ –––––––––––––– ವಿ.ಪ ಸದಸ್ಯರು (ವಿಭಾಗ ಸಂಖ್ಯೆ––––––––––) (ರಾಜಕೀಯ ಪಕ್ಷದ ಹೆಸರು) ––––––––––––––––ನ ಸದಸ್ಯರು ಮತ್ತು –––––––– –––––––––––––– –––––––––––––––––––––––– (ಶಾಸಕಾಂಗ ಪಕ್ಷದ ಹೆಸರು) ಸದಸ್ಯರು ಮತ ಚಲಾವಣೆ ಮಾಡಿದ್ದಾರೆ ಮತದಾನದಿಂದ ದೂರ ಉಳಿದಿದ್ದಾರೆ.	ನಾನು –––––––––––––– (ಸದಸ್ಯರ ಹೆಸರು ವಿಧಾನ ಪರಿಷತ್ತಿನ ಸದಸ್ಯರು) (ವಿಭಾಗ ಸಂಖ್ಯೆ ––––––––––––––) –––––––––––––––––– –––––––––––––––––– (ರಾಜಕೀಯ ಪಕ್ಷದ ಹೆಸರು) ಸದಸ್ಯರು ಮತ್ತು –––––––––––– (ಶಾಸಕಾಂಗ ಪಕ್ಷದ ಹೆಸರು) ನಾಯಕ/ ಏಕಮಾತ್ರ ಸದಸ್ಯ ಮತ ಚಲಾವಣೆ ಮಾಡಿರುತ್ತೇನೆ/ ಮತದಾನದಿಂದ ದೂರ ಉಳಿದಿರುತ್ತೇನೆ.

2. ದಿನಾಂಕ –––––––––– ದಂದು ಈ ಹಿಂದೆ ಹೇಳಲಾದ ವಿಷಯವನ್ನು ––––––––– (+ವ್ಯಕ್ತಿ/ ಪ್ರಾಧಿಕಾರ/ ಪಕ್ಷ) ಪರಿಶೀಲಿಸಿತು ಮತ್ತು ಅವರು *ಅದು ಮತ ಚಲಾವಣೆಯನ್ನು ಮಾಡಿದರು/ ಮತದಾನದಿಂದ ದೂರ ಉಳಿದರು.

ದಿನಾಂಕ:–

ತಮ್ಮ ವಿಶ್ವಾಸಿ,
(ಸಹಿ)

+ ಯುಕ್ತವಲ್ಲದ ಪದಗಳನ್ನು/ ಭಾಗಗಳನ್ನು ಹೊಡೆದುಹಾಕಿ.

* (ಇಲ್ಲಿ ಸಂದರ್ಭಾನುಸಾರವಾಗಿ ನಿರ್ದೇಶನವನ್ನು ಹೊರಡಿಸಿದ ವ್ಯಕ್ತಿ/ ಪ್ರಾಧಿಕಾರ/ ಪಕ್ಷದ ಹೆಸರನ್ನು ನಮೂದಿಸಿ)

ನಮೂನೆ – III

(ನಿಯಮ 4ನ್ನು ನೋಡಿ)

1. ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ):
2. ತಂದೆ/ ಪತಿಯ ಹೆಸರು:
3. ಖಾಯಂ ವಿಳಾಸ:
4. ಚುನಾವಣೆ/ನಾಮನಿರ್ದೇಶನದ ದಿನಾಂಕ:
5. ಬೆಂಗಳೂರು ವಿಳಾಸ:
6. ಪಕ್ಷ ಸಂಯೋಜನೆ:
   (i) ಚುನಾವಣೆ/ ನಾಮನಿರ್ದೇಶನದ ದಿನಾಂಕ
   (ii) 28ನೇ ಫೆಬ್ರವರಿ, 1985
   (iii) ಈ ನಮೂನೆಗೆ ಸಹಿ ಹಾಕಿದ ದಿನಾಂಕ

ಘೋಷಣೆ

–––––––––––––––––– ಹೆಸರಿನ ನಾನು ಮೇಲೆ ನೀಡಲಾದ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆಯೆಂದು ಈ ಮೂಲಕ ಘೋಷಿಸುತ್ತೇನೆ.

ಮೇಲೆ ನೀಡಲಾದ ಮಾಹಿತಿಯಲ್ಲಿ ಯಾವುದೇ ಬದಲಾವಣೆಗಳು ಆದ ಸಂದರ್ಭದಲ್ಲಿ ತಕ್ಷಣವೇ ಸಭಾಪತಿಗಳಿಗೆ ತಿಳಿಸಲು ಬದ್ಧನಾಗಿರುತ್ತೇನೆ.

ದಿನಾಂಕ: ಸದಸ್ಯರ ಸಹಿ/

ಹೆಬ್ಬೆಟ್ಟಿನ ಗುರುತು

––

ಸಂವಿಧಾನದ (52ನೇ ತಿದ್ದುಪಡಿ) ಅಧಿನಿಯಮ, 1985ರ ಆರಂಭವಾದ ದಿನಾಂಕವಾದ 1ನೇ ಮಾರ್ಚ್ 1985ಕ್ಕೆ ಮುಂಚಿತವಾಗಿ ಚುನಾಯಿತರಾದ ಅಥವಾ ನಾಮನಿರ್ದೇಶನ ಹೊಂದಿದ ಸದಸ್ಯರು ಮಾತ್ರ ಭರ್ತಿಮಾಡಬೇಕು.

ನಮೂನೆ – IV

(ನಿಯಮ 5(1) ನ್ನು ನೋಡಿ)

ಶಾಸಕಾಂಗ ಪಕ್ಷದ ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ)	ತಂದೆ/ ಪತಿಯ ಹೆಸರು	ಖಾಯಂ ವಿಳಾಸ	ಬೆಂಗಳೂರಿನ ವಿಳಾಸ	ಚುನಾವಣೆ/ ನಾಮ ನಿರ್ದೇಶನದ ದಿನಾಂಕ	ಪರಿಷತ್ತಿನಲ್ಲಿ ಪದಗ್ರಹಣ ಮಾಡಿದ ದಿನಾಂಕ	ಪದಾವಧಿ ಆರಂಭವಾದ ದಿನಾಂಕ	ಸದಸ್ಯರು ಸೇರಿದ ರಾಜಕೀಯ ಪಕ್ಷದ ಹೆಸರು	ಸದಸ್ಯರು ಸೇರಿದ ಶಾಸಕಾಂಗ ಪಕ್ಷದ ಹೆಸರು	ಷರಾ
01	02	03	04	05	06	07	08	09	10

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನಮಂಡಲದ (ಸದಸ್ಯರ ಪ್ರಯಾಣ ಭತ್ಯೆ) ನಿಯಮಗಳು, 1957

(1981ರ ಏಪ್ರಿಲ್ 9ರವರೆಗೆ ತಿದ್ದುಪಡಿಯಾದಂತೆ)

1956ರ ಕರ್ನಾಟಕ ವಿಧಾನಮಂಡಲದ ವೇತನಗಳ ಅಧಿನಿಯಮ, (1957ರ ಕರ್ನಾಟಕ ಅಧಿನಿಯಮ 2) 15ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಅಧಿಸೂಚನೆ ಸಂಖ್ಯೆ ಎಲ್‌ಡಿ 1333–ಎಲ್‌ಎ–86–56–1, ದಿನಾಂಕ 28ನೇ ಡಿಸೆಂಬರ್ 1956 ಮತ್ತು ಅಧಿಸೂಚನೆ ಸಂಖ್ಯೆ ಲಾ 31 ಎಲ್‌ಜಿಆರ್ 57, ದಿನಾಂಕ 17ನೇ ಜೂನ್ 1957ರಲ್ಲಿ ಪ್ರಕಟಿತವಾದ ನಿಯಮಗಳನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ:–

1. ಈ ನಿಯಮಗಳನ್ನು ಕರ್ನಾಟಕ ವಿಧಾನಮಂಡಲದ (ಸದಸ್ಯರ ಪ್ರಯಾಣ ಭತ್ಯೆ) ನಿಯಮಗಳು, 1957 ಎಂದು ಕರೆಯತಕ್ಕದ್ದು.

2. ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಪರಿಷತ್ತು"** ಎಂದರೆ, ಕರ್ನಾಟಕ ವಿಧಾನ ಪರಿಷತ್ತು;

(2) **"ಸಮಿತಿ"** ಎಂದರೆ, ಸಭೆ ಅಥವಾ ಪರಿಷತ್ತಿನ ಅಡಿಯಲ್ಲಿ ರಚಿಸಲಾದ ಯಾವುದೇ ಸಮಿತಿ ಅಥವಾ ಸಭಾಧ್ಯಕ್ಷ/ ಸಭಾಪತಿಯವರಿಂದ ನೇಮಕವಾದ ಸಮಿತಿ;

(3) **"ದಿನ"** ಎಂದರೆ, ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಮತ್ತು ಕೊನೆಯಾಗುವ ಒಂದು ಕ್ಯಾಲೆಂಡರ್ ದಿನ;

(4) **"ಸದನ"** ಎಂದರೆ, ಸಭೆ ನಡೆಯುವ ಕಟ್ಟಡ;

(5) **"ಸದಸ್ಯ"** ಎಂದರೆ, ಉಪ–ಸಭಾಧ್ಯಕ್ಷರು ಮತ್ತು ಉಪ–ಸಭಾಪತಿಯವರನ್ನು ಒಳಗೊಂಡ ಕರ್ನಾಟಕ ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯ;

(6) **"ಗ್ರಾಮಾಂತರ ಪ್ರದೇಶದ ಸದಸ್ಯ"** ಎಂದರೆ, ಒಂದು ಸಭೆಯು ನಡೆಯುವ ಸ್ಥಳದ ಪುರಸಭಾ ಸರಹದ್ದಿನಿಂದ ಹೊರಗೆ ಸಾಮಾನ್ಯ ನಿವಾಸ ಸ್ಥಳವನ್ನುಳ್ಳ ಒಬ್ಬ ಸದಸ್ಯ;

(7) **"ಸಾಮಾನ್ಯ ನಿವಾಸ ಸ್ಥಳ"** ಎಂದರೆ, ಸಾಮಾನ್ಯವಾಗಿ ಒಬ್ಬ ಸದಸ್ಯನು ವರ್ಷದಲ್ಲಿ ಕೊನೇ ಪಕ್ಷ ಆರು ತಿಂಗಳು (ರಾಜ್ಯದೊಳಗೆ) ವಾಸಿಸುವ ಸ್ಥಳ;

(8) **"ಕಾರ್ಯದರ್ಶಿ"** ಎಂದರೆ, ರಾಜ್ಯ ವಿಧಾನಮಂಡಲದ ಅಧೀನ ಕಾರ್ಯದರ್ಶಿಯೂ ಸೇರಿದಂತೆ ರಾಜ್ಯ ವಿಧಾನಮಂಡಲದ ಕಾರ್ಯದರ್ಶಿ;

(9) **"ಅಧಿವೇಶನ"** ಎಂದರೆ, ವಿಧಾನಸಭೆ ಅಥವಾ ಸಂದರ್ಭಾನುಸಾರ, ವಿಧಾನ ಪರಿಷತ್ತು ಸಭೆ ಸೇರಲು ಸಮನು ಮಾಡಿದ ದಿನ ಮತ್ತು ಅದು ಮುಕ್ತಾಯಗೊಂಡ ಅಥವಾ ಅನಿರ್ದಿಷ್ಟ ಕಾಲ ಮುಂದೂಡಲಾದ ದಿನವೂ ಸೇರಿದಂತೆ ಮತ್ತು ಅವುಗಳ ಮಧ್ಯೆ ಕಳೆದ ಪೂರ್ಣ ಅವಧಿ;

(10) ಇತರ ಎಲ್ಲಾ ಅಭಿವ್ಯಕ್ತಿಗಳು ಕರ್ನಾಟಕ ವಿಧಾನಮಂಡಲದ ವೇತನಗಳ ಅಧಿನಿಯಮ, 1956ರಲ್ಲಿ ಅವುಗಳಲ್ಲಿ ಕೊಟ್ಟಂಥ ಆಯಾಯಾ ಅರ್ಥಗಳನ್ನು ಹೊಂದಿರತಕ್ಕದ್ದು.

3. (1) ತರುವಾಯದಲ್ಲಿ ಬರುವ ನಿಯಮಗಳ ಉಪಬಂಧಗಳಿಗೊಳಪಟ್ಟು ಒಬ್ಬ ಸದಸ್ಯನು ಎಂದು ಸಭೆಗೆ ಹಾಜರಾದ ಯಾವುದೇ ದಿನಕ್ಕೆ ದಿನಭತ್ಯೆಯನ್ನು ಪಡೆಯಬಹುದು.

(2) (1)ನೇ ಉಪ–ನಿಯಮದ ಮೇರೆಗೆ ಸಭೆಗಳಲ್ಲಿ ಸದಸ್ಯರ ಹಾಜರಾತಿ ದಿನಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಕಾರ್ಯದರ್ಶಿಯು ಒಂದು ಹಾಜರಾತಿ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು. ರಿಜಿಸ್ಟರಿನಲ್ಲಿ ಪ್ರತಿಯೊಬ್ಬ ಸದಸ್ಯನು ತಾನು ಸಭೆಗೆ ಹಾಜರಾಗುವ ಪ್ರತಿದಿನವೂ ಸಹಿ ಹಾಕತಕ್ಕದ್ದು.

4. 8ನೇ ನಿಯಮದಲ್ಲಿ ಉಪಬಂಧಿಸಿದುದನ್ನು ಉಳಿದು, ಯಾರೇ ಪರಸ್ಥಳದ ಸದಸ್ಯನು ಒಂದು ಸಭೆಗೆ ಹಾಜರಾದ ದಿನಗಳಲ್ಲದೆ ಪ್ರಯಾಣ ಮಾಡಿದ ದಿನಕ್ಕೆ ಪ್ರಯಾಣಭತ್ಯೆಯ ಜೊತೆಗೆ ದಿನಭತ್ಯೆಯನ್ನು ಪಡೆಯತಕ್ಕದ್ದಲ್ಲ.

5. ಸಭೆ ನಡೆಯುವ ಸ್ಥಳದ ಪುರಸಭೆಯ ಸರಹದ್ದಿನೊಳಗೆ ಸಾಧಾರಣ ವಾಸಸ್ಥಳವನ್ನು ಹೊಂದಿರುವ ಸದಸ್ಯರು ಸಭೆಗೆ ಹಾಜರಾಗಲು ಪ್ರಯಾಣಭತ್ಯೆಯನ್ನು ಪಡೆಯತಕ್ಕದ್ದಲ್ಲ.

6. ಒಬ್ಬ ಪರಸ್ಥಳದ ಸದಸ್ಯನು ಯಾವುದೇ ಸಭೆಗೆ ಹಾಜರಾಗಲು ತನ್ನ ಸಾಮಾನ್ಯ ವಾಸಸ್ಥಾನದಿಂದ ಹೋಗಲು ಮತ್ತು ಹಿಂದಿರುಗಲು ಪ್ರಯಾಣಭತ್ಯೆಯನ್ನು ಪಡೆಯಲು ಅರ್ಹನಾಗಿರುತ್ತಾನೆ.

7. (1) ಸಭೆಯ ಮುಂದೂಡಿಕೆ ಅಥವಾ ರದ್ದಾಗಿರುವ ಬಗ್ಗೆ ಮಾಹಿತಿಯನ್ನು ಸ್ವೀಕರಿಸದ ಕಾರಣ ಒಬ್ಬ ಪರಸ್ಥಳದ ಸದಸ್ಯನು ಸಭೆ ನಡೆಯುವ ಸ್ಥಳಕ್ಕೆ ಪ್ರಯಾಣ ಮಾಡಿದರೆ, ನಿಯಮ 8ಕ್ಕನುಸಾರವಾಗಿ ಅವರ ಸಾಮಾನ್ಯ ನಿವಾಸ ಸ್ಥಾನದಿಂದ ಹೋಗಲು ಮತ್ತು ಹಿಂದಿರುಗಲು ಪ್ರಯಾಣಭತ್ಯೆ ಮತ್ತು ಒಂದು ದಿನದ ದಿನಭತ್ಯೆ ಪಡೆಯುವ ಹಕ್ಕನ್ನು ಹೊಂದಿರುತ್ತಾನೆ. ಆದರೆ ತನ್ನ ಸಾಮಾನ್ಯ ನಿವಾಸಸ್ಥಾನವನ್ನು ಬಿಡುವುದಕ್ಕೆ ಮುಂಚೆ ಸಭೆಯ ಮುಂದೂಡಿಕೆ ಅಥವಾ ರದ್ದು ಮಾಡಿದ ಬಗ್ಗೆ ತಾನು ಮಾಹಿತಿಯನ್ನು ಸ್ವೀಕರಿಸಲಿಲ್ಲವೆಂದು ಆ ಸದಸ್ಯನು ಸಭಾಪತಿಗೆ ಅಥವಾ ಸಂದರ್ಭಾನುಸಾರ ಸಭಾಧ್ಯಕ್ಷರಿಗೆ ಮನವರಿಕೆ ಮಾಡಿಕೊಡಬೇಕು.

(2) ಒಬ್ಬ ಪರಸ್ಥಳದ ಸದಸ್ಯನು ಸಭೆ ನಡೆಯುವ ಸ್ಥಳಕ್ಕೆ ಪ್ರಯಾಣ ಮಾಡಿ, ಕೋರಂ ಇಲ್ಲದ ಕಾರಣ ಸಭೆಯ ಮುಂದೂಡಿಕೆಯಿಂದ ಹಾಜರಾಗದಿದ್ದಾಗ 8ನೇ ನಿಯಮಗಳಿಗನುಸಾರವಾಗಿ ಅವನ ಸಾಮಾನ್ಯ ವಾಸಸ್ಥಳದಿಂದ ಹೋಗಲು ಮತ್ತು ಹಿಂದಿರುಗಲು ಪ್ರಯಾಣಭತ್ಯೆ ಮತ್ತು ಸಭೆ ನಡೆಯಬೇಕಾದ ದಿನಕ್ಕಾಗಿ ದಿನಭತ್ಯೆ ಪಡೆಯಲು ಅರ್ಹನಾಗತಕ್ಕದ್ದು. ಅಂಥ ಸಂದರ್ಭದಲ್ಲಿ ಕಾರ್ಯದರ್ಶಿಯು ಸಭೆ ನಡೆಯುವ ಸ್ಥಳದಲ್ಲಿ ಸದಸ್ಯರು ಹಾಜರಿದ್ದರು, ಆದರೆ ಕೋರಂ ಇಲ್ಲದಿದ್ದ ಕಾರಣ ಸಭೆ ನಡೆಯಲಿಲ್ಲವೆಂಬ ಬಗ್ಗೆ ಒಂದು ಪ್ರಮಾಣಪತ್ರವನ್ನು ನೀಡತಕ್ಕದ್ದು.

8. ಒಬ್ಬ ಪರಸ್ಥಳದ ಸದಸ್ಯನು ಸಭೆ ನಡೆಯುವ ದಿನಾಂಕಕ್ಕೆ ಮುಂಚಿನ ಎರಡು ದಿನಕ್ಕೆ ಮತ್ತು ಅನಂತರ ಎರಡು ದಿನಕ್ಕೆ ದಿನಭತ್ಯೆಯನ್ನು ಪಡೆಯಲು ಅರ್ಹನಾಗತಕ್ಕದ್ದು ಮತ್ತು ಸಭೆಯು ಒಂದು ದಿನಕ್ಕಿಂತ ಹೆಚ್ಚಾಗಿ ಮುಂದುವರಿದರೆ ಸಭೆ ಪ್ರಾರಂಭವಾಗುವ ದಿನಕ್ಕಿಂತ ಮೊದಲ ದಿನಕ್ಕೆ ಆದರೆ ಸಭೆಯು ಪ್ರಾರಂಭವಾಗುವ ದಿನಾಂಕದಂದು ಆ ಸದಸ್ಯನು ಹಾಜರಿದ್ದಲ್ಲಿ ಮತ್ತು ಸಭೆಯ ಕೊನೆ ದಿನಾಂಕದಿಂದ

ಆ ಸದಸ್ಯನು ಹಾಜರಿದ್ದರೆ ಸಭೆ ನಡೆಯುವ ಕೊನೆ ದಿನಕ್ಕೆ ಸಭೆ ನಡೆಯುವ ಸ್ಥಳಕ್ಕೆ ಬಂದ ಸಮಯ ಅಥವಾ ಸಭೆ ನಡೆಯುವ ಸ್ಥಳವನ್ನು ಬಿಟ್ಟ ಸಮಯವನ್ನು ಗಣನೆಗೆ ತೆಗೆದುಕೊಳ್ಳದೆ ದಿನಭತ್ಯೆಗಳಿಗೆ ಅರ್ಹರಾಗತಕ್ಕದ್ದು;

ಅಲ್ಲದೇ ಒಬ್ಬ ಸದಸ್ಯರು ಅನಾರೋಗ್ಯದಿಂದಾಗಲಿ ಅಥವಾ ಇತರ ಕಾರಣದಿಂದಾಗಲೀ ಸಭೆಯು ಪ್ರಾರಂಭವಾಗುವ ದಿನದಂದು ಅಥವಾ ಸಭೆಯು ಮುಕ್ತಾಯವಾಗುವ ದಿನದಂದು ಹಾಜರಾಗದಿದ್ದು ಸಭೆ ನಡೆಯುವ ದಿನಾಂಕದಂದು ಅದೇ ಸ್ಥಳದಲ್ಲಿದ್ದರೆ, ಸಭಾಧ್ಯಕ್ಷರಿಗಾಗಲೀ ಅಥವಾ ಸಂದರ್ಭಾನುಸಾರ ಸಭಾಪತಿಯವರಿಗಾಗಲಿ ತನ್ನ ಗೈರುಹಾಜರಿ ಬಗ್ಗೆ ಮನವರಿಕೆ ಮಾಡಿಕೊಟ್ಟರೆ ಇದೇ ನಿಯಮದ ಮೇರೆಗೆ ದಿನಭತ್ಯೆಗೆ ಅವರು ಅರ್ಹನಾಗತಕ್ಕದು.

9. ಸಭೆಯ ಅಥವಾ ಪರಿಷತ್ತಿಗೆ ಅಥವಾ ಒಂದು ಸಮಿತಿಯ ಯಾವುದೇ ಸಭೆಗೆ ಒಬ್ಬ ಪರಸ್ಥಳದ ಸದಸ್ಯನು,

(i) ಸಭೆಯು ನಡೆಯುವ ಸ್ಥಳದಲ್ಲಿ ಇದ್ದುಕೊಂಡು ಸಭೆ ನಡೆಯುವ ಪ್ರತಿಯೊಂದು ದಿನವೂ ಗೈರುಹಾಜರಾಗಿದ್ದರೆ, ಮತ್ತು

(ii) ಅವನು, ಅಂಥ ಗೈರುಹಾಜರಿಯ ಬಗ್ಗೆ ಸಭಾಧ್ಯಕ್ಷರು ಅಥವಾ ಸಂದರ್ಭಾನುಸಾರ ಸಭಾಪತಿಯವರಿಗೆ ಮನವರಿಕೆ ಮಾಡಿಕೊಟ್ಟರೆ,–

– ಅವನ ಗೈರುಹಾಜರಿಯ ದಿನಕ್ಕೆ ಅಥವಾ ದಿನಗಳಿಗೆ ದಿನಭತ್ಯೆಯನ್ನು ಪಡೆಯಬಹುದು.

ಆದರೆ, ಸಂದರ್ಭಾನುಸಾರ ಸಭಾಧ್ಯಕ್ಷರು ಅಥವಾ ಸಭಾಪತಿಯವರ ಅಧಿಕಾರಪತ್ರ ನೀಡಿಕೆ ಮೇರೆಗೆ ಗೈರುಹಾಜರಿಯ ದಿನಗಳಿಗೆ ಕೆಳಕಂಡ ದರಗಳಲ್ಲಿ ಭತ್ಯೆಯನ್ನು ಪಡೆಯತಕ್ಕದ್ದು.

(ಎ) ಒಂದು ಅಧಿವೇಶನದಲ್ಲಿನ ಆರು ದಿನಗಳ ಗೈರುಹಾಜರಿಗೆ ಪೂರ್ಣ ಮೊಬಲಗು;

(ಬಿ) ಒಂದು ಅಧಿವೇಶನದಲ್ಲಿನ ಮುಂದಿನ ಹನ್ನೆರಡು ದಿನಗಳ ಗೈರುಹಾಜರಿಗೆ ಅರ್ಧ ದರದಂತೆ;

(ಸಿ) ಒಂದು ಅಧಿವೇಶನಕ್ಕೆ ಹದಿನೆಂಟು ದಿನಗಳಿಗೂ ಮೀರಿ ಗೈರುಹಾಜರಾದರೆ ಭತ್ಯೆ ಇಲ್ಲ.

ಆದರೆ ಸಭೆ ಅಥವಾ ಪರಿಷತ್ತಿನ ಸೇವೆಯಿಂದ ಅಮಾನತುಗೊಳಿಸಿರುವ ಒಬ್ಬ ಸದಸ್ಯನಿಗೆ, ಅಮಾನತು ಒಂದು ನಿರ್ದಿಷ್ಟ ಅವಧಿಯವರೆಗಿದ್ದಾಗ ಹೊರತುಪಡಿಸಿ ಈ ನಿಯಮದಲ್ಲಿನ ಯಾವುದೂ ಅನ್ವಯಿಸತಕ್ಕದ್ದಲ್ಲ.

10. (1) ಸಭೆ ನಡೆಯುತ್ತಿರುವಾಗ ಮುಂದೂಡಿಕೆ ಅಥವಾ ಮಧ್ಯಂತರ ಅಥವಾ ಐದು ದಿನಗಳ ಅಥವಾ ಕಡಿಮೆ ಅವಧಿಯ ಸಭೆಯ ಮಧ್ಯೆ ರಜಾ ದಿನಗಳು ಬಂದ ಸಂದರ್ಭದಲ್ಲಿ ಒಬ್ಬ ಸದಸ್ಯನು ಸಭೆ ನಡೆಯುವ ಸ್ಥಳದಿಂದ ಹೊರಗೆ ಹೋದರೆ ಸಭೆ ಮುಂದೂಡಿದ ಅವಧಿಗಾಗಿ ಅಥವಾ ರಜಾದಿನಗಳ ಅವಧಿಗಾಗಿ 12ನೇ ಪ್ರಕರಣದ ಖಂಡ (ಬಿ) (1)ರ ಮೇರೆಗೆ ಅಂಗೀಕಾರಾರ್ಹವಾದ ದಿನಭತ್ಯೆ ಅಥವಾ 12ನೇ ಪ್ರಕರಣದ ಖಂಡ (ಎ) ಮೇರೆಗೆ ಅಂಗೀಕಾರಾರ್ಹವಾದ ಅವನ ವಾಸಸ್ಥಳದಿಂದ ಹೋಗಿಬರುವ ಪ್ರಯಾಣ ಭತ್ಯೆಯನ್ನು

ಯಾವುದು ಕಡಿಮೆಯೋ ಅದನ್ನು ಅವನು ಪಡೆಯಬಹುದು [ಮತ್ತು ಪರಸ್ಥಳದ ಸದಸ್ಯನಲ್ಲದ ಇತರೆ ಸದಸ್ಯರು ಸಭೆ ಮುಂದೂಡಿದ ಮಧ್ಯಂತರದ ಅಥವಾ ರಜಾದಿನಗಳ ಅವಧಿಗಾಗಿ 12ನೇ ಪ್ರಕರಣದ ಖಂಡ (ಬಿ) ಉಪ–ಖಂಡ (i)ರ ಮೇರೆಗೆ ಅನುಮತಿಸಬಹುದಾದ ದಿನಭತ್ಯೆಯನ್ನು ಪಡೆಯಬಹುದು.]

ಪರಂತು, ಅಂಥ ಪ್ರತಿಯೊಬ್ಬ ಸದಸ್ಯನೂ ಸಭೆ ಮುಂದೂಡಿದ ಮಧ್ಯಂತರ ಅಥವಾ ರಜಾದಿನಗಳ ಹಿಂದಿನ ದಿನ ಹಾಗೂ ಮರು ಸಮಾವೇಶಗೊಂಡ ದಿನಾಂಕದ ಉಪವೇಶನಗಳಲ್ಲಿ ಹಾಜರಿರಬೇಕು.

ಅಷ್ಟೇ ಅಲ್ಲದೆ ಒಬ್ಬ ಸದಸ್ಯನು ಅನಾರೋಗ್ಯದಿಂದಾಗಲೀ ಅಥವಾ ಇತರ ಕಾರಣದಿಂದಾಗಲೀ ಸಭೆಯು ಮುಂದೂಡುವ ಮಧ್ಯಂತರದ ಅಥವಾ ರಜಾದಿನಗಳ ಹಿಂದಿನ ದಿನ ಅಥವಾ ಮರು–ಸಮಾವೇಶಗೊಂಡ ದಿನಾಂಕದಂದು ಗೈರುಹಾಜರಾದರೆ, ಅಂಥ ದಿನಾಂಕಗಳಂದು ಸಭೆ ನಡೆಯುವ ಸ್ಥಳದಲ್ಲಿದ್ದು, ಸಭಾಧ್ಯಕ್ಷ ಅಥವಾ ಸಂದರ್ಭಾನುಸಾರ ಸಭಾಪತಿಯವರಿಗೆ ತನ್ನ ಗೈರುಹಾಜರಿಯ ಬಗ್ಗೆ ಮನವರಿಕೆ ಮಾಡಿಕೊಟ್ಟರೆ, ಈ ಉಪ–ನಿಯಮದ ಮೇರೆಗೆ ಭತ್ಯೆಯನ್ನು ಪಡೆಯಲು ಅರ್ಹನಾಗತಕ್ಕದ್ದು.

(2) ಸಭೆಯ ಮುಂದೂಡಿಕೆಗಳು ಅಥವಾ ಮಧ್ಯಂತರಗಳು ಅಥವಾ ಐದು ದಿನಗಳಿಗಿಂತ ಹೆಚ್ಚಿನ ದಿನಗಳು ಸಭೆಗಳ ಮಧ್ಯೆ ಬರುವ ರಜಾದಿನಗಳ ಸಂದರ್ಭದಲ್ಲಿ, ಒಬ್ಬ ಪರಸ್ಥಳದ ಸದಸ್ಯನು ಮಧ್ಯಂತರ ಅವಧಿಯಲ್ಲಿ ತನ್ನ ವಾಸಸ್ಥಳಕ್ಕೆ ಹಿಂದಿರುಗಬಹುದು ಮತ್ತು ಪ್ರಕರಣ (ಬಿ) (ii)ರ ಮೇರೆಗೆ ಅನುಮತಿಗೆ ಅರ್ಹವಾದ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಬಹುದು. ಅವನು ಸಭೆ ನಡೆಯುವ ಸ್ಥಳದಲ್ಲಿ ತಂಗಿದರೆ ಅವನು ದಿನಭತ್ಯೆಯನ್ನು ಪಡೆಯಬಹುದು. ಆದರೆ ಹಾಗೆ ಪಡೆದ ಭತ್ಯೆಯು ತನ್ನ ಸಾಮಾನ್ಯ ವಾಸಸ್ಥಳಕ್ಕೆ ವಾಪಸ್ಸು ಹೋಗಿ ಪ್ರಯಾಣಭತ್ಯೆಯನ್ನು ಪಡೆದಿದ್ದರೆ ಪಡೆಯಬಹುದಾದ ಮೊತ್ತ ಹಾಗೂ ಮುಂದೂಡಿದ ದಿನಾಂಕದಿಂದ ಎರಡು ದಿನಗಳಿಗೆ ಮತ್ತು ಸಭೆ ಮತ್ತೆ ಸಮಾವೇಶಗೊಳ್ಳುವ ದಿನಕ್ಕೆ ಮೊದಲು ಎರಡು ದಿನಗಳಿಗೆ ನಿಯಮ 8ರ ಮೇರೆಗೆ ಅಂಗೀಕಾರಾರ್ಹವಾದ ದಿನಭತ್ಯೆ ಎರಡನ್ನೂ ಸೇರಿಸಿದ ಮೊತ್ತದಷ್ಟನ್ನು ಮೀರತಕ್ಕದ್ದಲ್ಲ.

ವಿವರಣೆ:– ಈ ನಿಯಮದ ಉದ್ದೇಶಗಳಿಗಾಗಿ 'ಮಧ್ಯಂತರಗಳು ಅಥವಾ ಸಭೆ ನಡೆಯುವ ದಿನಗಳ ಮಧ್ಯೆ ಬರುವ ರಜಾದಿನಗಳು' ಎಂಬ ಅಭಿವ್ಯಕ್ತಿಯು,

i. ಸಭೆಯ ಅಥವಾ ಪರಿಷತ್ತಿನ ಒಂದು ಸಭೆ ಮತ್ತು ಅದರ ಒಂದು ಸಮಿತಿಯ ಸಭೆ ಅಥವಾ

ii. ಒಂದು ಸಮಿತಿಯ ಮತ್ತು ಅದೇ ಬಗೆಯ ಅಥವಾ ಬೇರೆ ಸಮಿತಿಯ ಅಥವಾ ವಿಧಾನಸಭೆಯ ಅಥವಾ ಪರಿಷತ್ತಿನ ಒಂದು ಸಭೆ.

– ಇವುಗಳ ಮಧ್ಯದಲ್ಲಿ ಬರುವ ಯಾವುದೇ ಮಧ್ಯಂತರ ಅಥವಾ ರಜಾದಿನಗಳನ್ನು ಒಳಗೊಳ್ಳುತ್ತದೆ.

11. ವಿಧಾನಸಭೆ ಅಥವಾ ಪರಿಷತ್ತಿನ ಅಥವಾ ಅದರ ಒಂದು ಸಮಿತಿಯ ಒಂದು ಸಭೆಯ ಪ್ರಾರಂಭ ಮತ್ತು ಮುಕ್ತಾಯಗಳ ಮಧ್ಯೆ ಮೂರು ದಿನ ಅಥವಾ ಕಡಿಮೆ ದಿನಗಳ ಮಧ್ಯಂತರವಿದ್ದ ಸಂದರ್ಭದಲ್ಲಿ ಮತ್ತು ಸಂದರ್ಭಾನುಸಾರ ರಾಜ್ಯ ಸರ್ಕಾರವು ರಚಿಸಿದ ಒಂದು ಸಮಿತಿಯ ಒಂದು ಸಭೆಯ ಪ್ರಾರಂಭ ಅಥವಾ ಮುಕ್ತಾಯಕ್ಕಾಗಲಿ ಹಾಜರಾತಿ ಇದ್ದರೆ ರಾಜ್ಯ ಸರ್ಕಾರದಿಂದ ಪ್ರಯಾಣಭತ್ಯೆ ಮತ್ತು ದಿನಭತ್ಯೆಯು ಸಂದಾಯವಾಗತಕ್ಕದ್ದಾದರೆ ಒಬ್ಬ ಪರಸ್ಥಳದ ಸದಸ್ಯನು ಆ ಅವಧಿಗಾಗಿ ದಿನಭತ್ಯೆಯನ್ನು ಪಡೆಯಬಹುದು. ಅವನು ತನ್ನ ಸಾಮಾನ್ಯ ವಾಸಸ್ಥಳಕ್ಕೆ ಹಿಂತಿರುಗಿದರೆ ಅವನು ಪ್ರಯಾಣಭತ್ಯೆಯನ್ನು ಪಡೆಯಬಹುದು. ಆದರೆ ಹಾಗೆ ಪಡೆದ ಮೊಬಲಗನ್ನು ರಾಜ್ಯ ಸರ್ಕಾರದಿಂದ ನೇಮಕವಾದ ಸಮಿತಿಗಳ ಸಭೆಗಳಿಗೆ ಚುನಾವಣೆಯಲ್ಲಿ ಆರಿಸಿ ಬಂದು ಸಭೆಯು ನಡೆಯುವ ಸ್ಥಳದಲ್ಲಿ ತಂಗಿದ್ದು ಸಭೆಗೆ ಹಾಜರಾಗಲು ಗೊತ್ತುಪಡಿಸಿದ ದರಗಳಲ್ಲಿ ದಿನಭತ್ಯೆ ಪಡೆಯಲು ಅಂಗೀಕಾರಾರ್ಹವಾಗಬಹುದಾಗಿದ್ದಂಥ ಮೊಬಲಗನ್ನು ಯಾವುದೇ ಸಂದರ್ಭದಲ್ಲಿಯೂ ಮೀರತಕ್ಕದ್ದಲ್ಲ.

12. ಇಪ್ಪತ್ತೊಂದು ದಿನಗಳಿಗೂ ಮೀರಿದ ಅವಧಿಯ ನಿರಂತರ ಸಭೆಗಳ ಮಧ್ಯೆ ಒಬ್ಬ ಪರಸ್ಥಳದ ಸದಸ್ಯನು ಸಭೆ ನಡೆಯುವ ಸ್ಥಳದಿಂದ ತನ್ನ ಸಾಮಾನ್ಯ ವಾಸಸ್ಥಾನಕ್ಕೆ ಹೋಗಲು ಪ್ರಯಾಣಭತ್ಯೆಯನ್ನು ಪಡೆಯಬಹುದು. ಆದರೆ ಮೇಲೆ ಹೇಳಿದ ಪ್ರಯಾಣವನ್ನು ವಾಸ್ತವಿಕವಾಗಿ ಮಾಡಿರಬೇಕು ಮತ್ತು ಅವನ ಸಾಮಾನ್ಯ ವಾಸಸ್ಥಳದಿಂದ ಹಿಂದಿರುಗಿದ ತರುವಾಯ ಅದೇ ಸಭೆಗೆ ಅದೇ ಅವಧಿಯ ದಿನಗಳಲ್ಲಿ ಹಾಜರಾಗಬೇಕು.

ಅಷ್ಟೇ ಅಲ್ಲದೆ ಈ ನಿಯಮದ ಮೇರೆಗೆ ಅಂಗೀಕಾರಾರ್ಹವಾದ ಪ್ರಯಾಣಭತ್ಯೆಯ ಮೊಬಲಗು, 7 ದಿನಗಳ ಅವಧಿಗೆ ಸಂದಾಯವಾಗಬಹುದಾದ ಒಟ್ಟು ದಿನಭತ್ಯೆ ಅಥವಾ ವಾಸ್ತವಿಕವಾಗಿ ಅವನು ಗೈರುಹಾಜರಾದ ದಿನಗಳ ಸಂಖ್ಯೆಯ ಒಟ್ಟು ಮೊತ್ತ, ಯಾವುದು ಕಡಿಮೆಯೋ ಅದನ್ನು ಮೀರತಕ್ಕದಲ್ಲ.

ವಿವರಣೆ:– ಈ ನಿಯಮದಲ್ಲಿ, 'ಸಭೆಗಳು ನಿರಂತರ' ಎಂದರೆ, ಏಳು ದಿನಗಳಿಗೂ ಮೀರಿದ ಮುಂದೂಡಿಕೆ ಅಥವಾ ಮಧ್ಯಂತರವಿಲ್ಲದ ನಿರಂತರ ಸಭೆಗಳು.

[ಆದರೆ 1959ನೇ ಫೆಬ್ರವರಿ 28ರಿಂದ 1959ನೇ ಮೇ 2ರ ಹಾಗೂ 1959ನೇ ಮಾರ್ಚ್ 19ರಿಂದ 1959ನೇ ಮಾರ್ಚ್ 30ರ ಮಧ್ಯಂತರಗಳುಳ್ಳ 1959ನೇ ಏಪ್ರಿಲ್ 4 ರಿಂದ 1959ನೇ ಏಪ್ರಿಲ್ 15ರವರೆಗೆ ನಡೆದ ವಿಧಾನ ಪರಿಷತ್ತಿನ ಸಭೆಗಳನ್ನು ಈ ನಿಯಮದ ಉದ್ದೇಶಗಳಿಗಾಗಿ ವಿಧಾನ ಪರಿಷತ್ತಿನ ನಿರಂತರ ಸಭೆಗಳೆಂದು ಭಾವಿಸತಕ್ಕದ್ದು ಮತ್ತು ಸದರಿ ಸಭೆಗಳ ಬಗ್ಗೆ ಸದಸ್ಯರಿಗೆ ಸಂದಾಯ ಮಾಡಲಾದ ಪ್ರಯಾಣ ಹಾಗೂ ದಿನಭತ್ಯೆಗಳನ್ನು ವಿಧಿಬದ್ಧವಾಗಿ ಸಂದಾಯ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.]

12ಎ. 12ನೇ ಪ್ರಕರಣದ ಖಂಡ (ಎ) ಮತ್ತು (ಡಿ)ಗಳ ಮೇರೆಗೆ ಒಬ್ಬ ಸದಸ್ಯನಿಗೆ ಒದಗಿಸಲಾದ ಸುಸಜ್ಜಿತವಾದ ಉಚಿತ ವಸತಿ ಎಂದರೆ ಕುರ್ಚಿ, ಮೇಜುಗಳು, ಜಮಖಾನೆಗಳು, ಮಂಚ, ಚಾಪೆ,

ಕಪಾಟುಗಳುಳ್ಳ ಒಂದು ದೊಡ್ಡ ಪೆಟ್ಟಿಗೆ ಮತ್ತು ನೀರು, ದೀಪದ ವ್ಯವಸ್ಥೆ, ಪಿಂಗಾಣಿ ಸಾಮಾನುಗಳು, ಚಾಕು ಮತ್ತು ಹಾಸಿಗೆ, ಬಟ್ಟೆ, ಮುಂತಾದ ಸೌಲಭ್ಯಗಳ ಸಹಿತ ವಸತಿಯ ಏರ್ಪಾಡು.

13. (1) ತರುವಾಯದ ಉಪ–ನಿಯಮಗಳ ಉಪಬಂಧಗಳಿಗೊಳಪಟ್ಟು ಸದಸ್ಯನೊಬ್ಬನಿಗೆ ಸಂದಾಯ ಮಾಡಬೇಕಾಗುವ ಪ್ರಯಾಣಭತ್ಯೆಯನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ ಎರಡೂ ಸ್ಥಳಗಳ ಮಧ್ಯದ ಒಂದು ಪ್ರಯಾಣವನ್ನು ಎರಡು ಅಥವಾ ಹೆಚ್ಚು ಅನುಕೂಲಕರ ರಸ್ತೆಗಳಲ್ಲಿನ ಒಂದು ಸಮೀಪದ ರಸ್ತೆಯಲ್ಲಿ ಅಥವಾ ಅವುಗಳಿಗೆ ಒಂದೇ ಅಂತರವಿದ್ದಲ್ಲಿ ಅಂಥ ರಸ್ತೆಗಳಲ್ಲಿ ಕಡಿಮೆ ದರದ ರಸ್ತೆಯಿಂದ ಪ್ರಯಾಣ ಮಾಡತಕ್ಕದ್ದು.

(2) ಪ್ರಯಾಣಿಕನು ಸಾಮಾನ್ಯ ರೀತಿಯ ಪ್ರಯಾಣದಿಂದ ತನ್ನ ಸ್ಥಳವನ್ನು ತ್ವರಿತವಾಗಿ ತಲುಪಲು ಸಾಧ್ಯವಾಗುವ ರಸ್ತೆಯೇ ಸಮೀಪದ ಅನುಕೂಲಕರ ರಸ್ತೆ. ಇದರ ಬಗ್ಗೆ ಸಂಶಯ ಬಂದಲ್ಲಿ ರಾಜ್ಯ ಸರ್ಕಾರವು ಸಭಾಧ್ಯಕ್ಷ ಅಥವಾ ಸಭಾಪತಿಯವರ ಸಲಹೆ ಮೇರೆಗೆ ಯಾವುದೇ ಎರಡು ಸ್ಥಳಗಳ ಮಧ್ಯೆ ಯಾವುದು ಹೆಚ್ಚು ಸಮೀಪದ ಅನುಕೂಲಕರ ರಸ್ತೆ ಎಂದು ಪರಿಗಣಿಸಬಹುದೆಂಬುದನ್ನು ಘೋಷಿಸತಕ್ಕದ್ದು.

(3) ಸಮೀಪವಲ್ಲದ ಆದರೆ ಸಮೀಪದ ದಾರಿಗಿಂತ ಕಡಿಮೆ ದರದ ದಾರಿಯ ಮೂಲಕ ಒಬ್ಬ ಸದಸ್ಯನು ಪ್ರಯಾಣ ಮಾಡಿದರೆ ಆ ಸದಸ್ಯನು ವಾಸ್ತವವಾಗಿ ಪ್ರಯಾಣ ಮಾಡಿದ ದಾರಿಯ ದರದಲ್ಲಿ ಪ್ರಯಾಣ ಭತ್ಯೆಯನ್ನು ಲೆಕ್ಕಹಾಕತಕ್ಕದ್ದು.

(4) ಒಬ್ಬ ಸದಸ್ಯನು ಪ್ರಯಾಣ ಮಾಡಬೇಕಾದ ಸ್ಥಳಕ್ಕೆ ಸ್ವಲ್ಪ ದೂರ ರೈಲು ಮತ್ತು ಸ್ವಲ್ಪ ದೂರ ಬಸ್ಸಿನಿಂದ ಪ್ರಯಾಣ ಮಾಡಬೇಕಾದಾಗ ಸದಸ್ಯನು ಅತಿ ವೇಗವಾಗಿ ಹೋಗುವ ವಾಹನದಲ್ಲಿ ಅಂದರೆ ರೈಲು ಮತ್ತು ರಸ್ತೆ ಎರಡರ ಮೂಲಕವಾಗಲೀ ಅಥವಾ ರಸ್ತೆ ಅಥವಾ ರೈಲಿನಿಂದಲೇ ಆಗಲಿ ತಾನು ಸೂಕ್ತವೆಂದು ಭಾವಿಸಿದ ರೀತಿಯಲ್ಲಿ ಪ್ರಯಾಣ ಮಾಡಬಹುದು. ಆದರೆ ರಸ್ತೆ ಇರುವ ದಾರಿಗೆ ರಸ್ತೆ ದರದಲ್ಲಿಯೇ ಮತ್ತು ರೈಲು ಇರುವ ದಾರಿಗೆ ರೈಲು ದರದಲ್ಲಿಯೇ ಪ್ರಯಾಣಭತ್ಯೆಯನ್ನು ಸೀಮಿತಗೊಳಿಸತಕ್ಕದ್ದು.

14. (1) ರಸ್ತೆ ಮೂಲಕ ಪ್ರಯಾಣ ಮಾಡುವಾಗ ಪ್ರಯಾಣವು ಯಾವುದೇ ರೀತಿಯಲ್ಲಾಗಿರಲಿ ಅದನ್ನು ಗಣನೆಗೆ ತೆಗೆದುಕೊಳ್ಳದೆ 12ನೇ ಪ್ರಕರಣ ಖಂಡ (ಎ)ನಲ್ಲಿ ಗೊತ್ತುಪಡಿಸಿರುವ ದರದಲ್ಲಿ ಒಬ್ಬ ಸದಸ್ಯನು ಪ್ರಯಾಣಭತ್ಯೆ ಪಡೆಯಲು ಅರ್ಹತೆ ಹೊಂದಿರುತ್ತಾನೆ.

(2) ರಸ್ತೆ ಮೂಲಕ ಮಾಡಿದ ಪ್ರಯಾಣದ ಬಗ್ಗೆ ಪ್ರಯಾಣಭತ್ಯೆಯನ್ನು ಲೆಕ್ಕ ಹಾಕುವಾಗ, ಒಂದು ಪ್ರಯಾಣಕ್ಕಾಗಿ ಒಟ್ಟು ಬಿಲ್ಲಿನಿಂದ ಒಂದಕ್ಕೂ ಕಡಿಮೆಯಿರುವ ಮೈಲಿಯನ್ನು ಬಿಟ್ಟುಬಿಡತಕ್ಕದ್ದು. ಆದರೆ ಬಿಲ್ಲಿನ ವಿವಿಧ ಬಾಬುಗಳಿಂದಲ್ಲ.

14ಎ. ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಅಥವಾ ಅವೆರಡರ ಯಾವುದೇ ಸಮಿತಿಯ ಅಧ್ಯಕ್ಷನಾದ ಒಬ್ಬ ಸದಸ್ಯನಿಗೆ ಭಾರತದೊಳಗೆ ಆದರೆ ರಾಜ್ಯದ ಹೊರಗೆ ನಡೆಯುವ ಅಂಥ ಸಮಿತಿಗಳ ಅಧ್ಯಕ್ಷರ ಸಮ್ಮೇಳನಕ್ಕೆ ಹಾಜರಾಗಲು,

(i) ಸಮ್ಮೇಳನ ನಡೆಯುವ ಸ್ಥಳದಲ್ಲಿ ಅವನು ಉಳಿದುಕೊಳ್ಳುವ ಪ್ರತಿಯೊಂದು ದಿನಕ್ಕೂ 50 ರೂ.ಗಳಂತೆ (ಐವತ್ತು ರೂಪಾಯಿಗಳು ಮಾತ್ರ) ಹೆಚ್ಚಿನ ಮೊತ್ತವನ್ನು ವಾಹನ ಸೌಕರ್ಯ ವೆಚ್ಚವೆಂದು ಸಂದಾಯ ಮಾಡತಕ್ಕದ್ದು.

ಮತ್ತು

(ii) ಸಮ್ಮೇಳನವು ದೆಹಲಿಯಲ್ಲಿ ನಡೆದರೆ ವಿಮಾನ ನಿಲ್ದಾಣದಿಂದ ಕರ್ನಾಟಕ ಭವನಕ್ಕೆ ಮತ್ತು ವಾಪಸು ಬರಲು 50 ರೂ.ಗಳ (ಐವತ್ತು ರೂ.ಗಳ ಮಾತ್ರ) ಹೆಚ್ಚಿನ ಮೊತ್ತವನ್ನು ವಾಹನ ಸೌಕರ್ಯ ವೆಚ್ಚವೆಂದು ಸಂದಾಯ ಮಾಡತಕ್ಕದ್ದು.

15 (1) ಒಬ್ಬ ಸದಸ್ಯನು ತನ್ನ ಸಾಮಾನ್ಯ ವಾಸ ಸ್ಥಳದಿಂದ ಸಭೆ ನಡೆಯುವ ಸ್ಥಳಕ್ಕೆ ಅಥವಾ ಸಭೆ ನಡೆಯುವ ಸ್ಥಳದಿಂದ ತನ್ನ ಸಾಮಾನ್ಯ ವಾಸಸ್ಥಳಕ್ಕೆ ಪ್ರಯಾಣ ಮಾಡುವಾಗ ಅದರ ಬಗ್ಗೆ ಪ್ರಯಾಣಭತ್ಯೆಯನ್ನು ಕೋರುವುದಕ್ಕೆ ಮುಂಚೆ ನಮೂನೆ 'ಬಿ' ಮತ್ತು 'ಸಿ' ಗಳನ್ನು ಭರ್ತಿ ಮಾಡಿ ಸಹಿಹಾಕಿ ಕಾರ್ಯದರ್ಶಿಯವರ ಕಚೇರಿಗೆ ರವಾನಿಸತಕ್ಕದ್ದು.

(2) ಒಬ್ಬ ಸದಸ್ಯನು ತಾನು ಇಚ್ಛಿಸಿದರೆ, ಕಾರ್ಯದರ್ಶಿಯವರ ಕಚೇರಿಯಲ್ಲಿ ತನ್ನ ಪ್ರಯಾಣಭತ್ಯೆಯ ಬಿಲ್ಲುಗಳನ್ನು ತಯಾರಿಸಬಹುದು.

(3) ಪ್ರಯಾಣ ಮತ್ತು ದಿನಭತ್ಯೆಗಳ ಎಲ್ಲಾ ಕ್ಲೇಮುಗಳ ಬಿಲ್ಲುಗಳನ್ನು ಅವುಗಳ ಬಾಕಿ ಇರುವ ದಿನಾಂಕದಿಂದ ಒಂದು ವರ್ಷ ಪೂರೈಸಿದ ತರುವಾಯ ತಯಾರಿಸಿದರೆ ಕಾಲ ಮೀರಿದ ಬಿಲ್ಲುಗಳೆಂದು ಪರಿಗಣಿಸಲಾಗುವುದು.

ಆದರೆ ಆ ಕ್ಲೇಮುಗಳನ್ನು ಸದರಿ ಅವಧಿಯಿಂದ ಒಂದು ವರ್ಷದೊಳಗೆ ಪಡೆಯದಿದ್ದುದಕ್ಕೆ ಕ್ಲೇಮು ಮಾಡುವ ಸದಸ್ಯನು ಕಾರ್ಯದರ್ಶಿಯವರಿಗೆ ಸಮಾಧಾನಕರ ಕಾರಣಗಳನ್ನು ಒದಗಿಸಿದರೆ ಅಂಥ ಭತ್ಯೆಗಳನ್ನು ಪಡೆಯಬಹುದು.

16. ಪ್ರವಾಸದಂಥ ವಿಶೇಷ ಸಂದರ್ಭಗಳಲ್ಲಿ ಅಂದಾಜು ಸಮಿತಿ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಿಗೆ ಅಂಥ ಮುಂಗಡಗಳನ್ನು ಸಮಿತಿಯ ಸದಸ್ಯರು ಪ್ರವಾಸವನ್ನು ಪೂರೈಸಿದ ತರುವಾಯ ಪೂರ್ಣವಾಗಿ ಸರಿ ಹೊಂದಾಣಿಕೆ ಮಾಡಬೇಕೆಂಬ ಷರತ್ತಿಗೊಳಪಟ್ಟು, ಪೂರ್ವ ಲೆಕ್ಕಪರಿಶೋಧನೆ ಮಾಡದೆ ಮುಂಗಡಗಳನ್ನು ಕಾರ್ಯದರ್ಶಿಯವರು ಮಂಜೂರು ಮಾಡಿ ಬಟವಾಡೆ ಮಾಡಬಹುದು. ಅಂಥ ಮುಂಗಡಗಳು, ಪ್ರವಾಸಗಳಿಗಾಗಿ ಮಂಜೂರು ಮಾಡಬಹುದಾದ ಪ್ರಯಾಣಭತ್ಯೆಯ ಶೇಕಡಾ ತೊಂಬತ್ತು ಭಾಗದಷ್ಟನ್ನು ಮೀರತಕ್ಕದ್ದಲ್ಲ.

17. ವಿಧಾನಮಂಡಲದ ಸದಸ್ಯರಿಗೆ ಪ್ರಯಾಣಭತ್ಯೆ/ದಿನಭತ್ಯೆಗಳ ಸಂದಾಯವನ್ನು ಕರ್ನಾಟಕ ವಿಧಾನಮಂಡಲದ ಕಾರ್ಯದರ್ಶಿಯವರು ನೀಡುವ ಚೆಕ್ಕುಗಳ ಮೂಲಕ ಮಾಡಲಾಗುವುದು. ವಿಧಾನಮಂಡಲದ ಸದಸ್ಯರು ಈ ಚೆಕ್ಕುಗಳನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮೂಲಕವಾಗಲೀ ಅಥವಾ ತಮ್ಮ ಬ್ಯಾಂಕುಗಳ ಮೂಲಕವಾಗಲೀ ನಗದು ರೂಪಕ್ಕೆ ಪರಿವರ್ತಿಸಿಕೊಳ್ಳಬಹುದು.

[ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 53, ಆರ್‌ಎಫ್‌ಸಿ 67, ದಿನಾಂಕ 20ನೇ ಜೂನ್ 1967ರ ಮೂಲಕ ಸೇರಿಸಲಾಗಿದೆ]

18. ಸದಸ್ಯರು, ಸಭೆ ನಡೆಯುವ ಸ್ಥಳಕ್ಕೆ ತಲುಪಿದ ಕೂಡಲೇ ಪ್ರಯಾಣಭತ್ಯೆ ಮತ್ತು ದಿನಭತ್ಯೆಯನ್ನು ಚೆಕ್ ಮೂಲಕ ಸಂದಾಯ ಮಾಡಬಹುದು. ಆನಂತರ, ಯಾವುದಾದರೂ ನಿರಂತರ ಸಭೆಗಳ, ಪ್ರತಿ ಹದಿನೈದು ದಿನಗಳ ಅವಧಿಯ ಅಂತರದಲ್ಲಿ, ಎರಡು ಅಥವಾ ಹೆಚ್ಚಿನ ಕಂತುಗಳಲ್ಲಿ ಮತ್ತು ಕೊನೆಯದನ್ನು ನಿರಂತರ ಸಭೆಗಳ ಕೊನೇ ದಿನದಂದು ಸಂದಾಯ ಮಾಡಬಹುದು.

19. ವಸತಿ ಗೃಹಗಳ ಬಾಡಿಗೆ, ಗ್ರಂಥಾಲಯ ಪುಸ್ತಕಗಳ ಬೆಲೆ, ದೂರವಾಣಿ ಕರೆ ವೆಚ್ಚಗಳು ಮತ್ತು ಭೋಜನ ಮುಂತಾದ ಸದಸ್ಯರಿಗೆ ಒದಗಿಸಲಾದ ಸೌಲಭ್ಯಗಳ ಬಗೆಗೆ ಸದಸ್ಯರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಯನ್ನು ಸಂದರ್ಭಾನುಸಾರ, ಸಭಾಧ್ಯಕ್ಷರ ಅಥವಾ ಸಭಾಪತಿಯವರ ಆದೇಶಗಳಿಗನುಸಾರವಾಗಿ, ಈ ನಿಯಮಗಳ ಮೇರೆಗೆ ಅಂಥ ಸದಸ್ಯರಿಗೆ ಸಂದಾಯ ಮಾಡಬೇಕಾದ ಮೊಬಲಗಿನಿಂದ ಕಳೆದುಕೊಳ್ಳಬಹುದು.

20. ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ 'ಎ' ನಲ್ಲಿ ಅವಶ್ಯವಿದ್ದರೆ ಸ್ಟಾಂಪನ್ನು ಅಂಟಿಸಿ, ಸಂಬಂಧಪಟ್ಟ ಸದಸ್ಯರು ಸಹಿ ಹಾಕಿ ಪ್ರಯಾಣಭತ್ಯೆಯ ಬಿಲ್ಲನ್ನು ಮೇಲು ರುಜುವಿಗಾಗಿ ಕರ್ನಾಟಕ ವಿಧಾನಮಂಡಲದ ಕಾರ್ಯದರ್ಶಿಯವರ ಕಚೇರಿಗೆ ರವಾನಿಸತಕ್ಕದ್ದು. ಹಾಗೆ ಒಪ್ಪಿಸಿದ ಪ್ರಯಾಣ ಭತ್ಯೆಯ ಬಿಲ್ಲುಗಳಿಗೆ 22ನೇ ನಿಯಮದ ಉಪಬಂಧಗಳಿಗೊಳಪಟ್ಟು, ಕಾರ್ಯದರ್ಶಿಯವರು ಮೇಲುರುಜು ಮಾಡತಕ್ಕದ್ದು.

21. ಒಬ್ಬ ಸದಸ್ಯನು, ತನ್ನ ಪ್ರಯಾಣಭತ್ಯೆಯ ಬಿಲ್ಲಿನಲ್ಲಿ ಪ್ರಯಾಣಭತ್ಯೆಗಾಗಿ ಮಾಡಲಾದ ಕ್ಲೇಮಿಗೆ ಸಂಬಂಧಿಸಿದಂತೆ, ತಾನು ವಾಸ್ತವವಾಗಿ ಪ್ರಯಾಣ ಮಾಡಿದುದಾಗಿಯೂ, ಅದೇ ದಿನಕ್ಕಾಗಿ ಪ್ರಯಾಣ ಭತ್ಯೆಯನ್ನು ಇತರ ಯಾವುದೇ ರೀತಿಯಿಂದ ಪಡೆದಿಲ್ಲವೆಂದು, ಒಂದು ಪ್ರಮಾಣಪತ್ರವನ್ನು ದಾಖಲು ಮಾಡತಕ್ಕದ್ದು.

22. ಕಾರ್ಯದರ್ಶಿಯವರು, ಸದಸ್ಯರ ಬಿಲ್ಲುಗಳಿಗೆ ಮೇಲುರುಜು ಮಾಡುವಾಗ, ಕ್ಲೇಮು ಮಾಡಿದ ಪ್ರಯಾಣದ ಬಗೆಗಿನ ವಿಷಯಗಳು ಸಮರ್ಪಕವಾಗಿದೆಯೆಂದು ಕಂಡುಬಂದರೆ ಸದಸ್ಯರು ಒದಗಿಸಿದ ಘೋಷಣೆ ಮತ್ತು ಪ್ರಮಾಣಪತ್ರಗಳನ್ನು ಒಪ್ಪಿಕೊಂಡು ಆ ಕ್ಲೇಮು, ಅಧಿನಿಯಮ ಮತ್ತು ಈ ನಿಯಮಗಳ ಉಪಬಂಧಗಳಿಗನುಸಾರವಾಗಿದೆಯೆಂದು ತನಗೆ ಮನವರಿಕೆಯಾದರೆ, ಈ ಅಧಿನಿಯಮ ಮತ್ತು ಈ

ನಿಯಮಗಳ ಮೇರೆಗೆ ಅಂಗೀಕಾರಾರ್ಹವಾದಷ್ಟು ಮೊಬಲಗಿನ ಸಂದಾಯಕ್ಕೆ ಅನುಮೋದನೆ ನೀಡಿ ಮೇಲುರುಜು ಹಾಕತಕ್ಕದ್ದು.

23. ಮೃತ ಸದಸ್ಯನಿಗೆ ಬಾಕಿ ಇರುವ ಪ್ರಯಾಣಭತ್ಯೆ ಮತ್ತು ದಿನಭತ್ಯೆಗಳನ್ನು, ಹಕ್ಕುಪತ್ರವನ್ನು (Legal Authority) ಒದಗಿಸದಿದ್ದರೂ ಮೃತ ಸದಸ್ಯನ ಹಕ್ಕುದಾರನಿಗೆ–

(ಎ) ಕ್ಲೇಮು ಮಾಡಿದ ಮೊಬಲಗು ಐದು ನೂರು ರೂ.ಗಳಿಗಿಂತ ಕಡಿಮೆ ಇದ್ದರೆ, ಸದಸ್ಯನ ಸಾಮಾನ್ಯ ವಾಸಸ್ಥಳ ಇರುವ ಜಿಲ್ಲೆಯ ಡೆಪ್ಯುಟಿ ಕಮೀಷನರು ಅಥವಾ ಕಲೆಕ್ಟರರು ಅವನ ಹಕ್ಕು ಸಮಾಧಾನಕರವೆಂದು ಭಾವಿಸಿದರೆ, ಅಂಥ ಸಂದಾಯವನ್ನು ಸ್ವೀಕರಿಸಲು ಅವನೇ ಸೂಕ್ತ ವ್ಯಕ್ತಿಯೆಂದು ಪ್ರಮಾಣೀಕರಿಸಿದರೆ, ಮತ್ತು

(ಬಿ) ಕ್ಲೇಮು ಮಾಡಿದ ಮೊಬಲಗು ಐದು ನೂರು ರೂ.ಗಳಿಗಿಂತ ಹೆಚ್ಚಿದ್ದರೆ, ರಾಜ್ಯ ಸರ್ಕಾರದ ಆದೇಶದ ಮೇರೆಗೆ ಅಗತ್ಯಪಡಿಸಬಹುದಾದಂಥ ಭದ್ರತೆಯೊಂದಿಗೆ ಒಂದು ನಷ್ಟಭರ್ತಿ ಪತ್ರವನ್ನು ಬರೆದುಕೊಟ್ಟು ಸಂದಾಯ ಮಾಡಬಹುದು.

24. 1956ರ ಕರ್ನಾಟಕ ವಿಧಾನಮಂಡಲದ ಸಂಬಳಗಳ ನಿಯಮಗಳ ಉಪಬಂಧಗಳಿಗನುಸಾರವಾಗಿ ಸಂದಾಯ ಮಾಡಿದ ಎಲ್ಲಾ ಪ್ರಯಾಣಭತ್ಯೆಗಳು ಮತ್ತು ಇತರ ಭತ್ಯೆಗಳು ಮತ್ತು ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮಗಳನ್ನು ಈ ನಿಯಮಗಳು ಪ್ರಾರಂಭವಾಗುವುದಕ್ಕೆ ಮೊದಲು 1956ರ ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿವೇತನಗಳ ಮತ್ತು ಭತ್ಯೆಗಳ ಅಧಿನಿಯಮದ ಉಪಬಂಧಗಳ ಮೇರೆಗೆ ಈ ನಿಯಮಗಳನ್ನು ಮೊದಲೇ ಮಾಡಿದಂತೆ ಸದರಿ ಕ್ರಮಗಳನ್ನು ವಿಧಿ ಸಮ್ಮತವಾಗಿ ಮಾಡಲಾಗಿದೆ ಅಥವಾ ಕೈಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರ ಪ್ರಯಾಣಭತ್ಯೆಯನ್ನು ಪಡೆಯುವುದರ ಸಲುವಾಗಿ

ನಮೂನೆ 'ಎ'

(ಕರ್ನಾಟಕ ವಿಧಾನಮಂಡಲದ ಸದಸ್ಯರ (ಪ್ರಯಾಣ ಭತ್ಯೆಗಳಿಗೆ ಸಂಬಂಧಪಟ್ಟ) 1957ನೆಯ ಇಸವಿಯ ನಿಬಂಧನೆಗಳ ಪೈಕಿ 20ನೇ ನಿಬಂಧನೆಯನ್ನು ನೋಡಿ)

ಸದಸ್ಯರ ಹೆಸರು — ಯಾವ ಅಧಿವೇಶನಕ್ಕೆ/ಉಪವೇಶನಕ್ಕೆ ಹಾಜರಾಗಲಾಯಿತು

ವಾಡಿಕೆಯಾಗಿ ವಾಸಮಾಡುವ ಸ್ಥಳ ––––––– ಉಪವೇಶನ ನಡೆದ ಸ್ಥಳ ದಿನಾಂಕ ––––– ರಿಂದ

ಲೆಕ್ಕ ಶೀರ್ಷಿಕೆ:

2011. ರಾಜ್ಯ ವಿಧಾನಮಂಡಲಗಳು — ಈ ಸ್ಥಳವನ್ನು ಮಹಾಲೇಖಪಾಲರ ಕಛೇರಿಯಲ್ಲಿ

ಬಿ. ರಾಜ್ಯ ವಿಧಾನಮಂಡಲ — ಭರ್ತಿ ಮಾಡಲು ಮೀಸಲಿಡಲಾಗಿದೆ.

2. ವಿಧಾನ ಪರಿಷತ್ತು — ರೂ.ಗಳಿಗೆ ಒಪ್ಪಿಗೆ ಕೊಡಲಾಗಿದೆ ––––––––––

ಎಷ್ಟು ಮೊಬಲಗನ್ನು ನಿಷೇಧಿಸಲಾಗಿದೆ –––––––

ಅದಕ್ಕೆ ಕಾರಣಗಳು ––––––––––––––––––

3. ಪ್ರಯಾಣ ವೆಚ್ಚಗಳು–ಪುರಸ್ಕೃತ — ಪಾವತಿಯಾದ ತಿಂಗಳು ––––––––––––––––

ಲೆಕ್ಕ ಶೀರ್ಷಿಕೆ ಕೋಡ್: 2011–02–101–0–05

ಕ್ರಮ ಸಂಖ್ಯೆ/ ಬಿಲ್ಲು ತಯಾರಿಸಿದ ದಿನಾಂಕ	ಪ್ರಯಾಣದ ವಿವರಗಳು ಹೊರಡುವುದು		ತಲುಪುವುದು		ಪ್ರಯಾಣ ಕೈಗೊಂಡ ಮಾಡಲಾಯಿತು	ರೋಡ್ ಮೀಟರೇಜ್ (ರಸ್ತೆಯ ಮೂಲಕವಾದ ಅಂತರ)		ದಿನಗಳ ಸಂಖ್ಯೆ	ಅಂಗೀಕಾರ ಮಾಡಬಹುದಾದ ದಿನಭತ್ಯೆ				ಷರಾ
	ತಾರೀಖು	ನಿಲ್ದಾಣ	ತಾರೀಖು	ನಿಲ್ದಾಣ		ರಸ್ತೆಯ ಮುಲಕ ಇಷ್ಟು ಕಿಲೋ ಮೀಟರುಗಳ ದೂರ ಪ್ರಯಾಣ ಮಾಡಲಾಯಿತು	ಪ್ರತಿ ಕಿ.ಮೀ.ಗೆ ರೂ.ದರ		ದಿನ ಒಂದರ ಭತ್ಯೆ		ದಿನ ಭತ್ಯೆ		
1	2	3	4	5	6	7	8		9	10		11		12
							ರೂ	ಪೈ.		ರೂ.	ಪೈ.	ರೂ.	ಪೈ.	

ದೃಢೀಕರಣಗಳು

(1) ನಾನು ಯಾವ ಪ್ರಯಾಣದ ಸಂಬಂಧದಲ್ಲಿ ಪ್ರಯಾಣಭತ್ಯೆಯನ್ನು ಕೇಳಿರುತ್ತೇನೆಯೋ ಆ ಪ್ರಯಾಣವನ್ನು ವಾಸ್ತವವಾಗಿ ನೆರವೇರಿಸಿರುತ್ತೇನೆಂದೂ ಮತ್ತು ಸದರಿ ಪ್ರಯಾಣದ ಸಂಬಂಧದಲ್ಲಿ ಮತ್ಯಾವ ರೀತಿಯಲ್ಲೂ ಪ್ರಯಾಣಭತ್ಯೆಯನ್ನು ನಾನು ಕೇಳಿಲ್ಲವೆಂದು ದೃಢೀಕರಿಸುತ್ತೇನೆ.

(2) ಯಾವ ದಿನಗಳಿಗೆ ದಿನಭತ್ಯೆಯನ್ನು ಕೇಳಲಾಗಿದೆಯೋ ಆ ಎಲ್ಲಾ ದಿನಗಳಲ್ಲಿಯೂ ಉಪವೇಶನವು (ಮೀಟಿಂಗ್) ನಡೆದ ಸ್ಥಳದಲ್ಲಿ ಹಾಜರಿದ್ದೇನೆಂದು ದೃಢೀಕರಿಸುತ್ತೇನೆ.

(3) ಸದರಿ ದಿನಗಳಿಗೆ ಇತರ ಯಾವ ರೀತಿಯಲ್ಲಾಗಲಿ ದಿನಭತ್ಯೆಯನ್ನು ಪಡೆದಿಲ್ಲವೆಂದು ನಾನು ದೃಢೀಕರಿಸುತ್ತೇನೆ.

ವಿಧಾನ ಪರಿಷತ್ತಿನ ಸದಸ್ಯರ ರುಜು

ಕಿಲೋ ಮೀಟರಿಗೆ ಆಗುವ ವೆಚ್ಚ (8ನೆಯ ಕಲಮು)... ಖಜಾನೆಯಲ್ಲಿ ಭರ್ತಿಯಾಗಬೇಕಾದುದು

ದಿನಭತ್ಯೆ (11ನೆಯ ಕಲಮು)

(ಅಧ್ಯಯನ ಪ್ರವಾಸದ ಸಂದರ್ಭದಲ್ಲಿ) ಓಚರಿನ ಸಂಖ್ಯೆ ------ ರೂ.ಗಳು ----------
ವಿಮಾನಯಾನದ ದರ/ವೆಚ್ಚ ...

ರೈಲು ಪ್ರಯಾಣದ ದರ/ವೆಚ್ಚ ... ತಾರೀಖು ----------

ಪ್ರಾಸಂಗಿಕ ವೆಚ್ಚ ...

ಒಟ್ಟು ಮೊಬಲಗು...

ವಜಾ ಮಾಡುವುದೇನಾದರೂ ಇದ್ದಲ್ಲಿ, ವಜಾ ಮಾಡುವ ಮೊಬಲಗಿನ ವಿವರಗಳು

(1) ಶಾಸಕರ ಕಾರುಗಳ ಬಾಡಿಗೆ ಹಣ ... ...
(2) ಶಾಸಕರ ಗೃಹದ ವಸತಿ ವೆಚ್ಚದ ಹಣ ... ...
(3) ಶಾಸಕರ ಗೃಹದ ದೂರವಾಣಿ ಪ್ರಧಾನ ಮಾರ್ಗದ ಕರೆಯ ಹಣ ... ರೂಪಾಯಿಗಳಿಗೆ ಅಂಗೀಕರಿಸಿ ಅನುಮೋದಿಸಲಾಗಿದೆ
(4) ಅಧ್ಯಯನ ಪ್ರವಾಸ ಮುಂಗಡ ...

ವಜಾ ಮಾಡುವ ಮೊಬಲಗು ...

ನಿವ್ವಳ ಮೊಬಲಗು ... ಅಕೌಂಟೆಂಟ್

---------- ರೂ.ಗಳನ್ನು ಪಡೆದುಕೊಂಡಿದ್ದೇನೆ.

ಸ್ಟಾಂಪು

ವಿಧಾನ ಪರಿಷತ್ತಿನ ಸದಸ್ಯರ ರುಜು

1. ಎದುರು ರುಜು ಮಾಡಿದ ರೂ.ಗಳು
(ಅಕ್ಷರದಲ್ಲಿ) ರೂಪಾಯಿಗಳು

2. ಸದಸ್ಯರು ---------- ನೆಯ ತಾರೀಖಿನಿಂದ ಬೆಂಗಳೂರಿನಲ್ಲಿ ನಡೆದ ಅಧಿವೇಶನದ/ಸಮಿತಿಯ ಸಭೆಗಳಲ್ಲಿ ಭಾಗವಹಿಸಿದ್ದರೆಂದು ದೃಢೀಕರಿಸಲಾಗಿದೆ.

3. ಮುನ್ನಡೆ ಪ್ರಯಾಣಕ್ಕೆ ಸಂಬಂಧಿಸಿದ ಪ್ರಯಾಣಭತ್ಯೆಯನ್ನು ಇದಕ್ಕೆ ಮೊದಲು ಪಾವತಿ ಮಾಡಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಬೆಂಗಳೂರು

ದಿನಾಂಕ: ----

ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

FORM - B
ನಮೂನೆ–ಆ

KARNATAKA LEGISLATURE SECRETARIAT
ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ

(See Rule 15 of the Karnataka, Legislature
(Member's Travelling Allowance) Rules, 1957)
(ಕರ್ನಾಟಕ ವಿಧಾನಮಂಡಲದ (ಸದಸ್ಯರ ಪ್ರಯಾಣ ಭತ್ಯಕ್ಕೆ ಸಂಬಂಧಿಸಿದ) ನಿಯಮಾವಳಿ, 1957 ಇದರ 15ನೇ ನಿಯಮವನ್ನು ನೋಡಿ)

I hereby furnish the following particulars in respect of my forward journey for purposes of preparation of my T.A. Bill and declare that the particulars furnished are correct.

ನಾನು ಕೈಗೊಂಡಿರುವ ಪ್ರಯಾಣದ ಸಂಬಂಧವಾಗಿ ಪ್ರಯಾಣಭತ್ಯೆ ಪತ್ರವನ್ನು ಸಿದ್ಧಗೊಳಿಸುವುದಕ್ಕಾಗಿ ಈ ಮೂಲಕ ಈ ಕೆಳಗೆ ಸೂಚಿಸಿರುವ ವಿವರಗಳನ್ನು ಒದಗಿಸಿದ್ದೇನೆ ಮತ್ತು ಇಲ್ಲಿ ಒದಗಿಸಿರುವ ವಿವರಗಳು ಸರಿಯಾಗಿವೆ ಎಂದು ತಿಳಿಸಿರುತ್ತೇನೆ.

1. Name of the Member in Block Letters
   ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ)
2. Place of permanent residence
   ಖಾಯಂ ವಾಸಸ್ಥಳ
3. Date of arrival at place of Meeting
   ಸಭೆ ನಡೆಯುವ ಸ್ಥಳಕ್ಕೆ ಬಂದ ದಿನಾಂಕ
4. Particulars of journey performed by Rail/Road
   ಕೈಗೊಂಡ ಪ್ರಯಾಣದ ವಿವರಗಳು ರೈಲು ಮೂಲಕವೆ? ರಸ್ತೆ ಮೂಲಕವೆ?
5. Addresses at place of meeting.
   ಸಭೆ ನಡೆಯುವ ಸ್ಥಳದಲ್ಲಿನ ವಿಳಾಸ

To:

The Secretary

Karnataka Legislature

Bangalore

Member
Karnataka L.A/ L.C

ಕರ್ನಾಟಕ ವಿಧಾನಸಭೆಯ ಸದಸ್ಯ/
ವಿಧಾನ ಪರಿಷತ್ತಿನ ಸದಸ್ಯ

FORM C
ನಮೂನೆ ಇ

KARNATAKA LEGISLATURE SECRETARIAT
ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ

(See rule 15 of the Karnataka, Legislature
(Member's Travelling Allowance) Rules, 1957)
(ಕರ್ನಾಟಕ ವಿಧಾನಮಂಡಲದ (ಸದಸ್ಯರ ಪ್ರಯಾಣಭತ್ಯಕ್ಕೆ ಸಂಬಂಧಿಸಿದ) ನಿಯಮಾವಳಿ, 1957 ಇದರ 15ನೇ ನಿಯಮವನ್ನು ನೋಡಿ)

I hereby furnish the following particulars relating to my journey and stay at the place of the meeting for preparation of my T.A. Bill and declare that the particulars furnished are correct.

ನನ್ನ ಪ್ರಯಾಣಭತ್ಯ ಪತ್ರವನ್ನು ಸಿದ್ಧಗೊಳಿಸುವುದಕ್ಕಾಗಿ ನನ್ನ ಪ್ರಯಾಣಕ್ಕೂ ಸಭೆ ನಡೆಯುವ ಸ್ಥಳದಲ್ಲಿ ತಂಗಿರುವ ವಿಷಯಕ್ಕೂ ಸಂಬಂಧಿಸಿದ ಈ ಕೆಳಗಿನ ವಿವರಗಳನ್ನು ಒದಗಿಸಿದ್ದೇನೆ ಮತ್ತು ಆ ವಿವರಗಳು ಸರಿಯಾಗಿವೆ ಎಂದು ತಿಳಿಸಿರುತ್ತೇನೆ.

A. Journey Particulars
ಅ. ಪ್ರಯಾಣ ವಿವರಗಳು

1. Name of the Member
   ಸದಸ್ಯರ ಹೆಸರು
2. Place of permanent residence
   ಖಾಯಂ ವಾಸಸ್ಥಳ
3. Date of arrival at place of Meeting
   ಸಭೆ ನಡೆಯುವ ಸ್ಥಳಕ್ಕೆ ಬಂದ ದಿನಾಂಕ
4. Particulars of journey performed either /or by Rail/Road
   ಕೈಗೊಂಡ ಪ್ರಯಾಣದ ವಿವರಗಳು
   ರೈಲು ಮೂಲಕವೆ? ರಸ್ತೆ ಮೂಲಕವೆ?
5. Proposed date of departure from the place of meeting.
   ಸಭೆ ನಡೆಯುವ ಸ್ಥಳದಿಂದ ಹೊರಡಬೇಕೆಂದಿರುವ ದಿನಾಂಕ

B. CLAIM OF D.A.

ಆ. ದಿನಭತ್ಯೆಯ ಕೇಳಿಕೆ

6. The number of days the Member has attended the Session/ Committee Meeting

   ಸದಸ್ಯರು ಅಧಿವೇಶನದಲ್ಲಾಗಲಿ/ ಸಮಿತಿಯ ಸಭೆಯಲ್ಲಾಗಲಿ ಹಾಜರಿದ್ದ ಒಟ್ಟು ದಿನಗಳ ಸಂಖ್ಯೆ

7. Date and name of the other committees, if any attended during the period of the Session/Committee and if D.A. has been claimed for the same.

   ಅಧಿವೇಶನ/ಸಮಿತಿ ನಡೆಯುವ ಕಾಲದಲ್ಲಿ ಮತ್ತೊಂದು ಸಮಿತಿ (ಯಾವುದಾದರೂ ಇದ್ದರೆ)ಯಲ್ಲಿ ಹಾಜರಿದ್ದು ಅದಕ್ಕಾಗಿ ದಿನಭತ್ಯೆಯನ್ನು ಕೇಳಿರುವುದಾದರೆ, ಆ ಸಮಿತಿಯ ಹೆಸರು ಮತ್ತು ಆ ಸಮಿತಿಯಲ್ಲಿ ಹಾಜರಿದ್ದ ದಿನಾಂಕ

8. Whether the Member had gone to his place of residence during days of adjournment intervals or holidays or stayed at the place of meeting

   ಸಭೆ ಮುಂದುವರಿದ ದಿನಗಳಲ್ಲಾಗಲಿ, ವಿರಾಮ ಅಥವಾ ರಜೆಯ ದಿನಗಳಲ್ಲಾಗಲಿ ಸದಸ್ಯರು ತಮ್ಮ ವಾಸಸ್ಥಳಕ್ಕೆ ಹೋಗಿದ್ದರೆ? ಅಥವಾ ಸಭೆ ನಡೆಯುವ ಸ್ಥಳದಲ್ಲಿಯೇ ತಂಗಿದ್ದರೇ?

9. Other particulars, if any

   ಇತರ ವಿವರಗಳು (ಯಾವುದಾದರೂ ಇದ್ದರೆ)

Place……
ಸ್ಥಳ

Date……...
ದಿನಾಂಕ:

Member, Legislative Council
ವಿಧಾನ ಪರಿಷತ್ತಿನ ಸದಸ್ಯರ ಸಹಿ

To
The Secretary
Karnataka Legislative Council
Bangalore

ಕರ್ನಾಟಕ ವಿಧಾನಮಂಡಲದ (ಸದಸ್ಯರ ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1968

(1ನೇ ಸೆಪ್ಟೆಂಬರ್ 1997ರವರೆಗೆ ತಿದ್ದುಪಡಿಯಾದಂತೆ)

ಕರ್ನಾಟಕ ವಿಧಾನಮಂಡಲದ ಸಂಬಳಗಳ ಅಧಿನಿಯಮ, 1956 (1957ರ ಮೈಸೂರು ಅಧಿನಿಯಮ ಸಂಖ್ಯೆ 2)ರ 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:–

1. ಶೀರ್ಷಿಕೆ ಮತ್ತು ಆರಂಭ:– (1) ಈ ನಿಯಮಗಳನ್ನು ಕರ್ನಾಟಕ ವಿಧಾನಮಂಡಲದ (ಸದಸ್ಯರುಗಳ ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1968 ಎಂದು ಕರೆಯತಕ್ಕದ್ದು.

(2) ಅವು 1967ರ ಆಗಸ್ಟ್ ಹತ್ತನೇ ದಿನಾಂಕದಿಂದ ಜಾರಿಗೆ ಬಂದಿವೆ ಎಂದು ಭಾವಿಸತಕ್ಕದ್ದು.

2. ಪರಿಭಾಷೆಗಳು:– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) **"ಅಧಿಕೃತ ವೈದ್ಯಕೀಯ ಚಿಕಿತ್ಸಕ" ಎಂದರೆ,–**

(i) ಸರ್ಕಾರಿ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳು ಇರುವ ಸ್ಥಳಗಳಲ್ಲಿ ಸದಸ್ಯರು ವಾಸ ಮಾಡುತ್ತಿದ್ದರೆ ಅಂತಹ ಆಸ್ಪತ್ರೆಗಳು, ಈ ಚಿಕಿತ್ಸಾಲಯಗಳು ಪ್ರಭಾರದಲ್ಲಿರುವ ಗೆಝೆಟೆಡ್ ಇಲ್ಲವೆ ಗೆಝೆಟೆಡ್ ಅಲ್ಲದ ವೈದ್ಯಾಧಿಕಾರಿಗಳು;

(ii) ಸರ್ಕಾರಿ ಆಸ್ಪತ್ರೆಗಳು ಅಥವಾ ಚಿಕಿತ್ಸಾಲಯಗಳು ಇಲ್ಲದಿರುವ ಸ್ಥಳಗಳಲ್ಲಿ ಸದಸ್ಯರು ವಾಸ ಮಾಡುತ್ತಿದ್ದರೆ ಅಂತಹ ಸ್ಥಳಗಳಲ್ಲಿನ ಸ್ಥಳೀಯ ನಿಧಿ ಚಿಕಿತ್ಸಾಲಯ, ಪ್ರಾಥಮಿಕ ಆರೋಗ್ಯ ಘಟಕಗಳು ಅಥವಾ ಆರೋಗ್ಯ ಕೇಂದ್ರಗಳ ಪ್ರಭಾರದಲ್ಲಿರುವ ಗೆಜೆಟೆಡ್ ಅಥವಾ ಗೆಜೆಟೆಡ್ ಅಲ್ಲದ ವೈದ್ಯಾಧಿಕಾರಿಗಳು;

(iii) ಕ್ಷಯ ರೋಗದಿಂದ ನರಳುತ್ತಿರುವ ಮತ್ತು ಕರ್ನಾಟಕ ಆರೋಗ್ಯ ಸಂಸ್ಥೆ, ಘಟಪ್ರಭಾದಲ್ಲಿ ಸದಸ್ಯರು ಚಿಕಿತ್ಸೆ ಪಡೆಯುತ್ತಿದ್ದರೆ, ಆ ಸಂಸ್ಥೆಯ ಮುಖ್ಯ ವೈದ್ಯಾಧಿಕಾರಿ;

ಪರಂತು, ಗೌರವ ವಿಶೇಷ ತಜ್ಞರು, ಗೌರವ ವೈದ್ಯಾಧಿಕಾರಿಗಳು, ಅರೆಕಾಲಿಕ ವಿಶೇಷ ತಜ್ಞರು ಮತ್ತು ಅರೆಕಾಲಿಕ ವೈದ್ಯಾಧಿಕಾರಿಗಳನ್ನು ಅಧಿಕೃತ ವೈದ್ಯಕೀಯ ಚಿಕಿತ್ಸಕ ಎಂದು ಭಾವಿಸತಕ್ಕದ್ದಲ್ಲ.

(ಬಿ) ವೈದ್ಯಕೀಯ ಚಿಕಿತ್ಸೆಯ ಸಂಬಂಧದಲ್ಲಿ ಆದ ವೆಚ್ಚವನ್ನು ತುಂಬಿಕೊಡುವುದಕ್ಕೆ ಸಂಬಂಧಪಟ್ಟ ಕ್ಲೇಮುಗಳ ಉದ್ದೇಶಕ್ಕಾಗಿ **"ನಿಯಂತ್ರಣ ಅಧಿಕಾರಿ"** ಎಂದರೆ, ಕರ್ನಾಟಕ ವಿಧಾನಮಂಡಲದ ಕಾರ್ಯದರ್ಶಿ;

(ಸಿ) "ನಮೂನೆ" ಎಂದರೆ, ಈ ನಿಯಮಗಳಿಗೆ ಅನುಬಂಧಿಸಿರುವ ನಮೂನೆ;

(ಡಿ) "ವೈದ್ಯಕೀಯ ಚಿಕಿತ್ಸೆ" ಎಂದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿರುವ ಮತ್ತು ಅಧಿಕೃತ ವೈದ್ಯಕೀಯ ಚಿಕಿತ್ಸಕನು ಅವಶ್ಯವೆಂದು ಪರಿಗಣಿಸಿದಂತಹ ಶಾರೀರಕ (ಪ್ಯಾಥಲಾಜಿಕಲ್), ಏಕಾಣು (ಬ್ಯಾಕ್ಟೀರಿಯಾಲಜಿಕಲ್), ಕ್ಷ–ಕಿರಣ (ರೇಡಿಯೋಲಾಜಿಕಲ್) ಅಥವಾ ರೋಗವನ್ನು ಪತ್ತೆ ಹಚ್ಚುವ ಉದ್ದೇಶಕ್ಕಾಗಿ ಮಾಡುವ ಇತರ ರೀತಿಯ ತಪಾಸಣೆಗಳೂ ಸೇರಿದಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ ಚಿಕಿತ್ಸಾಲಯದಲ್ಲಿ ನೀಡುವ ಚಿಕಿತ್ಸೆ ಮತ್ತು ಅಧಿಕೃತ ವೈದ್ಯಕೀಯ ಚಿಕಿತ್ಸಕನು ಅವಶ್ಯವೆಂದು ಪ್ರಮಾಣೀಕರಿಸಿದ ಮಟ್ಟಿಗೆ ಮತ್ತು ತಜ್ಞ ಅಥವಾ ವೈದ್ಯಾಧಿಕಾರಿ ಅಧಿಕೃತ ವೈದ್ಯಕೀಯ ಚಿಕಿತ್ಸಕನೊಂದಿಗೆ ಸಮಾಲೋಚಿಸಿ ನಿರ್ಧರಿಸಿದಂತಹ ರೀತಿಯಲ್ಲಿ ರಾಜ್ಯದೊಳಗೆ ಸರ್ಕಾರಿ ಹುದ್ದೆಯಲ್ಲಿರುವ ತಜ್ಞರೊಂದಿಗೆ ಅಥವಾ ರಾಜ್ಯದೊಳಗೆ ಸರ್ಕಾರಿ ಹುದ್ದೆಯಲ್ಲಿರುವ ಅದೇ ರೀತಿಯ ವೈದ್ಯಾಧಿಕಾರಿಯೊಂದಿಗೆ ನಡೆಸಿದ ಸಮಾಲೋಚನೆ;

(ಇ) "ಸದಸ್ಯ" ಎಂದರೆ, ವಿಧಾನಸಭೆಯ ಉಪ–ಸಭಾಧ್ಯಕ್ಷರನ್ನು ಮತ್ತು ವಿಧಾನ ಪರಿಷತ್ತಿನ ಉಪ–ಸಭಾಪತಿಯವರನ್ನು ಒಳಗೊಂಡಂತೆ ಕರ್ನಾಟಕ ವಿಧಾನಸಭೆ ಅಥವಾ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯ;

(ಎಫ್) "ರೋಗಿ" ಎಂದರೆ, ಈ ನಿಯಮಗಳು ಯಾರಿಗೆ ಅನ್ವಯವಾಗುವುವೋ ಮತ್ತು ಯಾರು ರೋಗಗ್ರಸ್ಥರಾಗಿದ್ದಾರೋ ಆ ಸದಸ್ಯ;

(ಜಿ) "ಕಾರ್ಯದರ್ಶಿ" ಎಂದರೆ, ರಾಜ್ಯ ವಿಧಾನಮಂಡಲದ ಕಾರ್ಯದರ್ಶಿ ಮತ್ತು ರಾಜ್ಯ ವಿಧಾನಮಂಡಲದ ಉಪ–ಕಾರ್ಯದರ್ಶಿ ಮತ್ತು ರಾಜ್ಯ ವಿಧಾನಮಂಡಲದ ಯಾರೇ ಅಧೀನ ಕಾರ್ಯದರ್ಶಿಯೂ ಒಳಗೊಳ್ಳುತ್ತಾರೆ;

(ಎಚ್) "ಚಿಕಿತ್ಸೆ" ಎಂದರೆ, ಸದಸ್ಯರು ಚಿಕಿತ್ಸೆ ಪಡೆಯುತ್ತಿರುವ ಸರ್ಕಾರಿ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಲಭ್ಯವಿರುವ ಎಲ್ಲಾ ವೈದ್ಯಕೀಯ, ಎಕ್ಸರೇ (ಕ್ಷ–ಕಿರಣ) ಮತ್ತು ಶಸ್ತ್ರ ಚಿಕಿತ್ಸಾ ಸೌಲಭ್ಯಗಳು ಮತ್ತು

(i) ಅಧಿಕೃತ ವೈದ್ಯಕೀಯ ಚಿಕಿತ್ಸಕನು ಅವಶ್ಯವೆಂದು ಪರಿಗಣಿಸಲಾದ ಪ್ಯಾಥಲಾಜಿಕಲ್ (ಶಾರೀರಿಕ ಏಕಾಣುಜೀವಿ), ಬ್ಯಾಕ್ಟೀರಿಯಾಲಾಜಿಕಲ್, ರೇಡಿಯೋಲಾಜಿಕಲ್ (ಕ್ಷ–ಕಿರಣ)ದಂತಹ ಅಥವಾ ಇತರೆ ವಿಧಾನಗಳ ಚಿಕಿತ್ಸೆ;

(ii) ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಸಾಮಾನ್ಯವಾಗಿ ಲಭ್ಯವಿರುವಂತಹ ಔಷಧಿಗಳು, ಲಸಿಕೆಗಳು, ಸರಾ ಅಥವಾ ಇತರೆ ಗುಣಪಡಿಸುವ ಔಷಧಿಗಳ ಸರಬರಾಜು;

(iii) ಸದಸ್ಯರ ಆರೋಗ್ಯ ಸುಧಾರಣೆಗೆ ಅಥವಾ ಸದಸ್ಯರ ದೈಹಿಕ ಕ್ಷೀಣತೆಯನ್ನು ತಡೆಗಟ್ಟಲು ಅಗತ್ಯವೆಂದು ಅಧಿಕೃತ ವೈದ್ಯಕೀಯ ಚಿಕಿತ್ಸಕನು ಬರವಣಿಗೆಯಲ್ಲಿ

ಪ್ರಮಾಣೀಕರಿಸಬಹುದಾದ ಮತ್ತು ಅಧಿಕೃತ ವೈದ್ಯಕೀಯ ಚಿಕಿತ್ಸಕನಲ್ಲಿ ಸಾಮಾನ್ಯವಾಗಿ ಲಭ್ಯವಿರದ ಔಷಧಗಳು, ಲಸಿಕೆಗಳು, ಸರಾ ಅಥವಾ ಇತರ ಗುಣಪಡಿಸುವ ವಸ್ತುಗಳು;

(iv) ಸದಸ್ಯರ ಹೆರಿಗೆ ಸಂಬಂಧದ ಚಿಕಿತ್ಸೆ;

(v) ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಒದಗಿಸುವಂತಹ ಸ್ಥಳಾವಕಾಶವನ್ನು ಮತ್ತು ರೋಗಿಯು ಆಸ್ಪತ್ರೆಗೆ ಸೇರುವ ಸಮಯದಲ್ಲಿ ಲಭ್ಯವಿರುವಂತಹ ಉನ್ನತ ದರ್ಜೆಯ ವಾರ್ಡ್ ಸೌಕರ್ಯ;

(vi) ಸದಸ್ಯನು ಆಸ್ಪತ್ರೆಯಲ್ಲಿ ಒಳರೋಗಿಯಾಗಿರುವ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಒದಗಿಸುವಂತಹ ಶುಶ್ರೂಷೆ ಮತ್ತು ಆಹಾರ ಇವು ಒಳಗೊಳ್ಳುತ್ತವೆ.

ವಿವರಣೆ: (iii)ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ, ಆಸ್ಪತ್ರೆ ಅಥವಾ ಚಿಕಿತ್ಸಾಲಯದಲ್ಲಿ ಗುಣಪಡಿಸುವ ಸಮಾನ ಗುಣವುಳ್ಳ ಔಷಧಿಗಳು ಲಭ್ಯವಿರುವಾಗ ಸದಸ್ಯರ ಉಪಯೋಗಕ್ಕೆ ದುಬಾರಿ ಔಷಧಿಗಳು, ಟಾನಿಕ್‌ಗಳು, ವಿರೇಚಕಗಳು ಅಥವಾ ಇತರೇ ಅತ್ಯುತ್ತಮ ಮತ್ತು ಸ್ವಂತ ಮಾರಾಟದ ಪ್ರಸಾಧನಗಳು, ನೈರ್ಮಲ್ಯಕಾರಕಗಳು ಮುಂತಾದ ಔಷಧಗಳ ಸೂಚಿಪಟ್ಟಿಯನ್ನು ನಿಷೇಧಿಸಲಾಗಿದೆ.

3. ವೈದ್ಯಕೀಯ ಚಿಕಿತ್ಸೆಯ ವೆಚ್ಚಗಳು:– (1) ಸದಸ್ಯರು ಅಧಿಕೃತ ವೈದ್ಯಕೀಯ ಚಿಕಿತ್ಸಕನ ಮೂಲಕ ಉಚಿತವಾಗಿ ವೈದ್ಯಕೀಯ ಚಿಕಿತ್ಸೆ ಮತ್ತು ಉಪಚಾರ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ಆ ಸದಸ್ಯರಿಗೆ ಅಧಿಕೃತ ವೈದ್ಯಕೀಯ ಚಿಕಿತ್ಸಕರಾಗಿರುವ ವೈದ್ಯಾಧಿಕಾರಿಗಳು ಸದಸ್ಯರಿಂದ ಚಿಕಿತ್ಸಾ ಶುಲ್ಕವನ್ನು ವಸೂಲಿ ಮಾಡತಕ್ಕದ್ದಲ್ಲ ಮತ್ತು ವಿಧಿಸತಕ್ಕದ್ದಲ್ಲ.

(2) ವೈದ್ಯಕೀಯ ಅಗತ್ಯವಿರುವ ಕಣ್ಣು ರೋಗಿಗಳಿಗೆ ಮತ್ತು ಕನ್ನಡಕಕ್ಕಾಗಿ ಮತ್ತು ಹಲ್ಲನ್ನು ಕೀಳಿಸುವುದಕ್ಕೆ ಸಂಬಂಧಿಸಿದಂತೆ ವೈದ್ಯ ನೀಡುವ ಚೀಟಿ ಇವುಗಳ ಹೊರತು ದಂತ ವೈದ್ಯರು ಅಥವಾ ನೇತ್ರತಜ್ಞರಿಂದ ಯಾವುದೇ ರೀತಿಯ ಉಚಿತ ಸೇವೆಯನ್ನು ಪಡೆಯಲು ಯಾವುದೇ ಸದಸ್ಯನು ಹಕ್ಕುಳ್ಳನಾಗಿರತಕ್ಕದ್ದಲ್ಲ. ಕನ್ನಡಕದ ದರವನ್ನು ಸರ್ಕಾರದಿಂದ ನೀಡತಕ್ಕದ್ದಲ್ಲ;

(3) ಗುಹ್ಯರೋಗಗಳು ಅಥವಾ ತನ್ನ ಅತಿ ಕುಡಿತದಿಂದ ಉಂಟಾದ ರೋಗಗಳಿಗಾಗಿ ಯಾವುದೇ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯಲು ಯಾವುದೇ ಶಾಸಕರು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(4) ಸದಸ್ಯರಿಗೆ ಶಸ್ತ್ರಚಿಕಿತ್ಸೆಗಳನ್ನು ನಡೆಸಿದ ಸಂಬಂಧದಲ್ಲಿ ಉಪಯೋಗಿಸಲಾದ ಉಪಕರಣಗಳ ಶುದ್ಧೀಕರಣಕ್ಕಾಗಿ ಯಾವುದೇ ಶುಲ್ಕಗಳನ್ನು ವಿಧಿಸತಕ್ಕದ್ದಲ್ಲ.

4. ಕೆಲವು ಸಂದರ್ಭಗಳಲ್ಲಿ ವಿಶೇಷ ಉಪಚಾರ:– ರೋಗಿಯ ಖಾಯಿಲೆ ತೀವ್ರ ಸ್ವರೂಪದ್ದಾಗಿದೆ ಅಥವಾ ತನ್ನಲ್ಲಾದ ಇತರ ವ್ಯಕ್ತಿಗಳ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುವಂತಹ ವಿಶೇಷ ಸ್ವರೂಪದ್ದಾಗಿದೆ ಎಂದು ಅಥವಾ ರೋಗಿಗೆ ಹುಚ್ಚುನಾಯಿ ಕಡಿತ ನಿರೋಧಕ (ಆಂಟಿರ್ಯಾಬಿಕ್) ಚಿಕಿತ್ಸೆಯ ಅಗತ್ಯವಿದೆಯೆಂದು ಅಧಿಕೃತ ವೈದ್ಯಕೀಯ

ಚಿಕಿತ್ಸಕನು ಅಭಿಪ್ರಾಯಪಟ್ಟರೆ, ಅವನು ಆರೋಗ್ಯ ಸೇವೆಗಳ ನಿರ್ದೇಶಕರ ಅನುಮೋದನೆ ಪಡೆದು ಅದನ್ನು ಮೊದಲೇ ಪಡೆಯತಕ್ಕದ್ದು (ವಿಳಂಬ ಮಾಡುವುದರಿಂದ ರೋಗಿಯ ಆರೋಗ್ಯಕ್ಕೆ ಅಪಾಯವುಂಟಾಗಬಹುದು). ರೋಗಿಯನ್ನು ಹತ್ತಿರದ ವಿಶೇಷ ತಜ್ಞನ ಬಳಿಗೆ ಅಥವಾ ರೋಗಿಗೆ ಯಾರ ವೈದ್ಯಕೀಯ ಚಿಕಿತ್ಸೆ ಅಗತ್ಯವಿದೆಯೆಂದು ಅವನು ಅಭಿಪ್ರಾಯಪಡುತ್ತಾನೋ ಅಂತಹ ಸರ್ಕಾರಿ ವೃತ್ತಿಯಲ್ಲಿರುವ ವೈದ್ಯಾಧಿಕಾರಿಯ ಬಳಿಗೆ ಅಥವಾ ಅದು ಹುಚ್ಚುನಾಯಿ ಕಡಿತ ನಿರೋಧಕ ಚಿಕಿತ್ಸೆಯಾಗಿದ್ದಲ್ಲಿ, ಆ ಚಿಕಿತ್ಸೆ ಲಭ್ಯವಿರುವ ಹತ್ತಿರದ ಸ್ಥಳಕ್ಕೆ ಕಳುಹಿಸಬಹುದು ಅಥವಾ ಒಂದು ವೇಳೆ ರೋಗಿಯು ಪ್ರಯಾಣ ಮಾಡಲಾಗದಷ್ಟು ತೀವ್ರವಾದ ಖಾಯಿಲೆಯಿಂದ ನರಳುತ್ತಿರುವುದಾದರೆ ಆ ರೋಗಿಗೆ ಚಿಕಿತ್ಸೆ ನೀಡುವುದಕ್ಕಾಗಿ ತಜ್ಞರು ಅಥವಾ ಇತರ ವೈದ್ಯಾಧಿಕಾರಿಗಳನ್ನು ಅಲ್ಲಿಗೆ ಕರೆಸಬಹುದು.

5. ವೈದ್ಯಕೀಯ ವೆಚ್ಚಗಳ ಮರುಪಾವತಿ:–

1. ಔಷಧವಲ್ಲದ ಮೂಲತಃ ಆಹಾರಗಳು, ಶಕ್ತಿ ವರ್ಧಕಗಳು (ಟಾನಿಕ್ಕುಗಳು), ಶೌಚಾಲಯ ನೈರ್ಮಲ್ಯಕಾರಕಗಳು ಅಥವಾ ಸೋಂಕು ನಿವಾರಕಗಳ ವೆಚ್ಚವನ್ನು ಈ ನಿಯಮಗಳ ಮೇರೆಗೆ ಮರುಪಾವತಿ ಮಾಡಲಾಗುವುದಿಲ್ಲ. ಈ ನಿಯಮಗಳ ಮೇರೆಗೆ ಮರುಪಾವತಿಗೆ ಒಳಪಡದ ಬಾಬುಗಳ ಪಟ್ಟಿಯನ್ನು ಕಾಲಕಾಲಕ್ಕೆ ಆರೋಗ್ಯ ಸೇವೆಗಳ ನಿರ್ದೇಶಕರು ಹೊರಡಿಸುವರು.

   ಆದರೆ, ಆ ಮರುಪಾವತಿಗೆ ಒಳಪಡದ ಪಟ್ಟಿಯಲ್ಲಿರುವ ಔಷಧಿಗಳನ್ನು ಅವು ರೋಗಿಯ ಆರೋಗ್ಯ ಸುಧಾರಣೆಗೆ ಅತ್ಯಾವಶ್ಯಕವೆಂದು ಅಧಿಕೃತ ವೈದ್ಯಕೀಯ ಚಿಕಿತ್ಸಕನು ತಿಳಿಸಿರುವಲ್ಲಿ ಹಾಗೂ ಆರೋಗ್ಯ ಸೇವಾ ಇಲಾಖೆಯ ನಿರ್ದೇಶಕರೊಂದಿಗೆ ಸಮಾಲೋಚಿಸಿದ ನಂತರ, ಅಂಥ ಔಷಧಿಗಳು ರೋಗಿಯ ಆರೋಗ್ಯ ಸುಧಾರಣೆಗೆ ಅತ್ಯಾವಶ್ಯಕವೆಂದು ಸರ್ಕಾರಕ್ಕೆ ಮನವರಿಕೆಯಾದರೆ, ಆ ಔಷಧಿಗಳ ಬೆಲೆಯನ್ನು ತುಂಬಿಕೊಡುವ ಬಗ್ಗೆ ಆದೇಶಗಳನ್ನು ಹೊರಡಿಸತಕ್ಕದ್ದು.

2. ಮಾರುಕಟ್ಟೆಯಿಂದ ವಿಶೇಷ ಔಷಧಿಗಳನ್ನು ಖರೀದಿಸುವಾಗ ಸದಸ್ಯರು ಸಂದಾಯ ಮಾಡಿದ ಮಾರಾಟ ತೆರಿಗೆಯನ್ನು ಅವರಿಗೆ ಮರುಪಾವತಿಸಲಾಗುವುದು. ಬೇರೆ ಸ್ಥಳಗಳಿಂದ ಖರೀದಿ ಮಾಡುವ ವಿಶೇಷ ಔಷಧಿಗಳ ರವಾನೆಗೆ ಸದಸ್ಯರು ಸಂದಾಯ ಮಾಡಿದ ಪ್ಯಾಕಿಂಗ್ ಮತ್ತು ಅಂಚೆ ವೆಚ್ಚಗಳನ್ನು ಮರುಪಾವತಿ ಮಾಡಲಾಗುವುದಿಲ್ಲ.

3. ರೋಗಿಯನ್ನು ಚಿಕಿತ್ಸಾ ಸ್ಥಳಕ್ಕೆ ಸಾಗಿಸಲು ಅಥವಾ ವೈದ್ಯಕೀಯ ತಪಾಸಣೆಯ ಉದ್ದೇಶಗಳಿಗಾಗಿ ರೋಗಿಯನ್ನು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಸಾಗಿಸಲು ಆ್ಯಂಬುಲೆನ್ಸ್ ಉಪಯೋಗಿಸಿದ್ದು ಅದಕ್ಕೆ ಸಂಬಂಧಿಸಿದ ವೆಚ್ಚವನ್ನು ಸದಸ್ಯರು ನೀಡಿದ್ದರೆ ಅವುಗಳನ್ನು ಮರುಪಾವತಿ ಮಾಡಲಾಗುವುದು.

4. ಆರ್ಯುವೇದ ಮತ್ತು ಯುನಾನಿ ಪದಾರ್ಥಗಳ ವೆಚ್ಚವನ್ನು (ಆರೋಗ್ಯ ಸೇವೆಗಳ ನಿರ್ದೇಶಕರು, ಕಾಲಕಾಲಕ್ಕೆ ಗೊತ್ತುಪಡಿಸಿದ ತಯಾರಿಕಾ ಪದಾರ್ಥಗಳ ಹೊರತು ಇತರ ಪದಾರ್ಥಗಳು ಅಂಗೀಕಾರಾರ್ಹವಲ್ಲ) ಸದಸ್ಯರುಗಳಿಗೆ ಮರುಪಾವತಿ ಮಾಡಲಾಗುವುದು.

5. ಅಧಿಕೃತ ವೈದ್ಯಕೀಯ ಚಿಕಿತ್ಸಕನು ನೀಡಿದ ಪ್ರಮಾಣಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು ಕೃತಕ ದಂತ ಜೋಡಣೆಗೆ ಸಂಬಂಧಿಸಿದಂತೆ ಅವಶ್ಯವಾದಲ್ಲಿ ಪ್ರತಿಯೊಂದು ಸಂದರ್ಭದಲ್ಲಿ ಗರಿಷ್ಠ ಐವತ್ತು ರೂಪಾಯಿಗಳವರೆಗೆ ಮರುಪಾವತಿಗೆ ಅವಕಾಶ ನೀಡಲಾಗುವುದು. ವಿಶೇಷ ವಸ್ತುಗಳಾದ ಚಿನ್ನ ಅಥವಾ ಬೆಳ್ಳಿಯಿಂದ ಮಾಡಿದ ಕೃತಕ ಹಲ್ಲುಗಳಾಗಿದ್ದರೆ ಅವುಗಳ ವೆಚ್ಚವನ್ನು ಸರ್ಕಾರವು ಭರಿಸುವುದಿಲ್ಲ.

(5ಎ) **ಕ್ಷಯಕ್ಕಾಗಿ ಚಿಕಿತ್ಸೆ:**– ಕರ್ನಾಟಕ ಆರೋಗ್ಯ ಸಂಸ್ಥೆ ಘಟಪ್ರಭ– ಇಲ್ಲಿ ಕ್ಷಯರೋಗದಿಂದ ನರಳುತ್ತಿರುವ ಸದಸ್ಯರ ವೈದ್ಯೋಪಚಾರವನ್ನು, ಸರ್ಕಾರಿ ವೈದ್ಯಕೀಯ ಆಸ್ಪತ್ರೆಯಲ್ಲಿನ ಚಿಕಿತ್ಸೆ ಎಂದು ಭಾವಿಸತಕ್ಕದ್ದು ಮತ್ತು ಅಂತಹ ಸಂದರ್ಭದಲ್ಲಿ ಈ ನಿಯಮಗಳ ಮೇರೆಗೆ ಅಂಗೀಕಾರಾರ್ಹವಾದ ವಾರ್ಡ್ ವೆಚ್ಚಗಳನ್ನು ಮತ್ತು ವೈದ್ಯಕೀಯ ವೆಚ್ಚಗಳನ್ನು ಮರುಪಾವತಿ ಮೂಲಕ ಪಡೆಯಲು ಸದಸ್ಯರು ಹಕ್ಕುಳ್ಳವರಾಗಿರತಕ್ಕದ್ದು.

5ಎ. ಸರ್ಕಾರಿ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಬಿಟ್ಟು ಬೇರೆ ಸ್ಥಳದಲ್ಲಿ ವಹಿಸಲಾದ ವೆಚ್ಚಗಳನ್ನು ತುಂಬಿಕೊಡುವುದು:– ರಾಜ್ಯ ಸರ್ಕಾರವು ನಡೆಸುತ್ತಿರುವ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಸದಸ್ಯರು ಪಡೆದ ವೈದ್ಯಕೀಯ ಚಿಕಿತ್ಸೆ ಮತ್ತು ಶುಶ್ರೂಷೆಗಾಗಿ ಅವರು ವಹಿಸಿದ ವೆಚ್ಚಕ್ಕೆ ಸಂಬಂಧಿಸಿದಂತೆ, ಈ ನಿಯಮಗಳ ಮೇರೆಗೆ ಅವರು ಅಂಥ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಪಡೆಯಬಹುದಾದ ವೈದ್ಯಕೀಯ ಚಿಕಿತ್ಸೆ ಮತ್ತು ಶುಶ್ರೂಷೆಯ ವೆಚ್ಚದಷ್ಟನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು. ವೆಚ್ಚಗಳು ಅಂಥ ಚಿಕಿತ್ಸೆಯನ್ನು ತೆಗೆದುಕೊಂಡ ಸ್ಥಳದಲ್ಲಿನ ವಸತಿ ಸೌಕರ್ಯದ ವೆಚ್ಚಗಳನ್ನು ಒಳಗೊಳ್ಳತಕ್ಕದ್ದು.

5ಎ(i) ಸರ್ಕಾರಿ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಬಿಟ್ಟು ಬೇರೆ ಸ್ಥಳದಲ್ಲಿ ಮತ್ತು ಕರ್ನಾಟಕ ವಿಧಾನಮಂಡಲವು ಅಧಿಸೂಚಿಸಿದ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳನ್ನು ಬಿಟ್ಟು ಬೇರೆ ಸ್ಥಳದಲ್ಲಿ ವಹಿಸಲಾದ ವೈದ್ಯಕೀಯ ವೆಚ್ಚಗಳನ್ನು ತುಂಬಿಕೊಡುವುದು:– ಸದಸ್ಯನು ಭರಿಸಿದ ವೆಚ್ಚಕ್ಕೆ ಸಂಬಂಧಿಸಿದಂತೆ ಮತ್ತು ರಾಜ್ಯ ಸರ್ಕಾರದಿಂದ ನಿರ್ವಹಿಸಲ್ಪಡುವ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಹೊರತುಪಡಿಸಿದ ಬೇರೆ ಯಾವುದೇ ಸ್ಥಳದಲ್ಲಿ ಆತನು ಪಡೆದ ಚಿಕಿತ್ಸೆಗಾಗಿ ಮತ್ತು ರಾಜ್ಯ ವಿಧಾನಮಂಡಲದಿಂದ ಅಧಿಸೂಚಿಸಿದ ಆಸ್ಪತ್ರೆ ಅಥವಾ ಚಿಕಿತ್ಸಾಲಯವನ್ನು ಹೊರತುಪಡಿಸಿ ಇಂತಹ ಆಸ್ಪತ್ರೆ ಅಥವಾ ಚಿಕಿತ್ಸಾಲಯಗಳಲ್ಲಿ ಪಡೆದ ಚಿಕಿತ್ಸೆಗಾಗಿ ಮತ್ತು ವೈದ್ಯಕೀಯ ಚಿಕಿತ್ಸಕನಿಗಾಗಿ ಆತನು ಭರಿಸಿದ ವೆಚ್ಚಗಳ ಮರುಪಾವತಿಗಾಗಿ ಈ ನಿಯಮಗಳ ಅಡಿಯಲ್ಲಿ ಆತನು ಹಕ್ಕುಳ್ಳವನಾದಂತೆ ಈ ರೀತಿಯಲ್ಲಿ ಭರಿಸಿದ ವೆಚ್ಚಗಳ ಮರುಪಾವತಿಗಾಗಿ ಆತನು ಹಕ್ಕುಳ್ಳವನಾಗಿರತಕ್ಕದ್ದು. ವೆಚ್ಚಗಳು ಅಂಥ ಚಿಕಿತ್ಸೆಯನ್ನು ತೆಗೆದುಕೊಂಡ ಸ್ಥಳದಲ್ಲಿನ ವಸತಿ ಸೌಕರ್ಯದ ವೆಚ್ಚಗಳನ್ನು ಒಳಗೊಳ್ಳತಕ್ಕದ್ದು.

ವಿವರಣೆ: ಈ ಉದ್ದೇಶಕ್ಕಾಗಿ, ಈ ನಿಯಮಗಳ **"ಕುಟುಂಬದ ಸದಸ್ಯ"** ಎಂದರೆ, ಗಂಡ, ಹೆಂಡತಿ, ಮಗ, ಅವಿವಾಹಿತ ಮಗಳು, ತಂದೆ ಮತ್ತು ತಾಯಿ ಮತ್ತು ವಿಧಾನಮಂಡಲದ ಮಹಿಳಾ ಸದಸ್ಯರ ಪ್ರಕರಣದಲ್ಲಿ "ಅತ್ತೆ/ಮಾವ".

3. ವಿಧಿಮಾನ್ಯತೆ:– ಈ ನಿಯಮಗಳಲ್ಲಿ ತಿದ್ದುಪಡಿಯಾದಂತೆ, ಕರ್ನಾಟಕ ವಿಧಾನಮಂಡಲದ (ಸದಸ್ಯರುಗಳ ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1968ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯರಿಗೆ ವೈದ್ಯಕೀಯ ಮರುಪಾವತಿಯ ವೆಚ್ಚವನ್ನು ತುಂಬಿಕೊಡುವುದರ ಬಗ್ಗೆ ಈ ನಿಯಮಗಳು ಜಾರಿಗೆ ಬರುವ ಮುಂಚೆ ಸರ್ಕಾರ ಮಾಡಿದ ಮಂಜೂರಾತಿಯನ್ನು ಕಾನೂನು ಸಮ್ಮತವಾದ ಮಂಜೂರಾತಿ ಎಂದು ಭಾವಿಸತಕ್ಕದ್ದು.

6. ವೈದ್ಯಕೀಯ ವೆಚ್ಚಗಳನ್ನು ತುಂಬಿಕೊಡುವ ಬಗೆಗಿನ ಕ್ಲೇಮುಗಳು:–

(1) ವಿಶೇಷ ಔಷಧಿಗಳ ಖರೀದಿಗಾಗಿ ವಹಿಸಲಾದ ವೆಚ್ಚಗಳ ಮರು ಸಂದಾಯದ ಬಗೆಗಿನ ಎಲ್ಲಾ ಕ್ಲೇಮುಗಳು ಅಧಿಕೃತ ವೈದ್ಯಕೀಯ ಚಿಕಿತ್ಸಕನು 'ಎ' ನಮೂನೆಯಲ್ಲಿ ನೀಡಿದ **"ಅತ್ಯಾವಶ್ಯಕ ಪ್ರಮಾಣ ಪತ್ರ"**ದಿಂದ ಕೂಡಿರತಕ್ಕದ್ದು ಮತ್ತು ಆ ಪ್ರಮಾಣಪತ್ರಕ್ಕೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಅಥವಾ ಬಳ್ಳಾರಿಯಲ್ಲಿನ ಸರ್ಕಾರಿ ಆಸ್ಪತ್ರೆಯ ಪ್ರಭಾರದಲ್ಲಿರುವ ಡೀನ್ ಅಥವಾ ವೈಸ್ ಡೀನ್ ಅವರು, ಇತರ ಸ್ಥಳಗಳಲ್ಲಾದರೆ ಜಿಲ್ಲಾ ಸರ್ಜನ್ ಅಥವಾ ಆರೋಗ್ಯ ಸೇವೆಗಳ ನಿರ್ದೇಶಕರಿಂದ ಅಧಿಕೃತನಾದ ಯಾವನೇ ಇತರ ವೈದ್ಯಕೀಯ ಅಧಿಕಾರಿ ಮೇಲು ರುಜು ಹಾಕಿರತಕ್ಕದ್ದು. ಮೇಲು ರುಜು ಮಾಡುವ ಅಧಿಕಾರಿಯು, ಅಧಿಕೃತ ವೈದ್ಯಕೀಯ ಚಿಕಿತ್ಸಕನು ಈ ನಿಯಮಗಳನ್ನು ಪಾಲಿಸಿರುವನೆಂಬ ಬಗ್ಗೆ ಕಾಲಕಾಲಕ್ಕೆ ಆರೋಗ್ಯ ಸೇವೆಗಳ ನಿರ್ದೇಶಕರು ನಿರ್ದಿಷ್ಟಪಡಿಸಿದ ಮರುಪಾವತಿ ಮಾಡಲಾದ ಔಷಧಿಗಳ ಪಟ್ಟಿಗಳೊಡನೆ ಈ ಔಷಧಿಗಳನ್ನು ಪರಿಶೀಲಿಸಲಾಗಿದೆ ಎಂಬ ಬಗ್ಗೆ ಮನದಟ್ಟು ಮಾಡಿಕೊಳ್ಳತಕ್ಕದ್ದು.

(2) ವೈದ್ಯಕೀಯ ವೆಚ್ಚಗಳಿಗೆ ಸಂಬಂಧಿಸಿದಂತೆ ವಹಿಸಲಾದ ವೆಚ್ಚಗಳನ್ನು ತುಂಬಿಕೊಡುವುದಕ್ಕೆ ಸಂಬಂಧಿಸಿದ ಕ್ಲೇಮುಗಳನ್ನು 'ಬಿ' ನಮೂನೆಯಲ್ಲಿ ಒಪ್ಪಿಸತಕ್ಕದ್ದು ಮತ್ತು ಒಂದು ವರ್ಷದೊಳಗಾಗಿ ಕಾರ್ಯದರ್ಶಿಯವರಿಗೆ ಕಳುಹಿಸತಕ್ಕದ್ದು. ಸದರಿ ಒಂದು ವರ್ಷದ ಅವಧಿಯ ನಂತರ ಒಪ್ಪಿಸಲಾದ ಕ್ಲೇಮುಗಳು ಅಕೌಂಟೆಂಟ್ ಜನರಲ್‌ನ ಪೂರ್ವಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತವೆ. ವೈದ್ಯಕೀಯ ಚಾರ್ಜುಗಳಿಗೆ ಸಂಬಂಧಿಸಿದ ವೆಚ್ಚವನ್ನು **"18 ಸಂಸತ್ತು, ರಾಜ್ಯ /ಕೇಂದ್ರಾಡಳಿತ ಪ್ರದೇಶ ವಿಧಾನಮಂಡಲ–ಬಿ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ವಿಧಾನಮಂಡಲ"** ಈ ಶೀರ್ಷಿಕೆಯಡಿಯಲ್ಲಿ ರಾಜ್ಯ ವಿಧಾನಮಂಡಲದ ಹಂಚಿಕೆಗೆ ಖರ್ಚು ಹಾಕತಕ್ಕದ್ದು.

KARNATAKA LEGISLATIVE ASSEMBLY SECRETARIAT

N O T I F I C A T I O N

No.Acts-III/903/MRA/LA/2013, Bangalore, Dated 28-03- 2014

In exercise of the powers conferred by Clasue V of Rule (3) of the Karnataka Legislature (Pensioners Medical Attendance) Rules, 2007 the Special Board of the Karnataka Legistature hereby amends the Notification No.Acts-1/26/MRA/LA/2007-08, Bangalore, Dated 26th February 2008 with immediate effect, namely,

In the said Notification under the headings:-

ii) Private Hospitals in Bangalore, after Sl.No. 33 and entries relating thereto, the following shall be inserted namely:-

34. Karnataka Nephrology and Transplant Institute Lakside Medical Centere & Hospital 33/4, Meaneen Avenue, Bangalore-42.
35. Narayana Hrudayalaya No.258/A, Bommasandra Industrial Anekal Taluk, Bangalore-158
36. Sagar Hospitals Jayanagar, Bangalore
37. Shekar Netrayalaya, J.P.Nagar, 3rd phase, Bangalore.
38. Trinity Hospital & Heart Foundation, Basvanagudi, Bangalore.
39. Bhagwan Mahveer Jain Hospital, Millar Road, Bangalore
40. Hi-tech Kidney Stones Hospital, Bangalore.
41. Bangalore Children's Hospital, Bangalore
42. Rajashekar Hospital, J.P.Nagar, Bangalore.
43. K.R.Hospital, 979, 25th Main Road, BSK 1st Stage, 50ft. Road, Bangalore.
44. Vyddehi Hospital, 82, EPIP Area, Whitfield, Bangalore.
45. Bangalore Kidney Stone Hospital, Bangalore.
46. Shifa Hospital ,Queens Road, Bangalore.
47. Curie Centre of Oncology, Kormanagala, Bangalore.
48. Bangalore West Lions Hospital, J.C.Road, Bangalore.
49. Sri Krishna Sevashrama Hospital, Jayanagara, Bangalore
50. Bhagvan Jain Netrayala, Sheshadripuram, Bangalore.
51. Nu Trust BKF Chand Nefro Urology Centre, Padmanabhanagra Bangalore.
52. Devi Eye Hospital, Kormangala Bangalore.
53. D.G.Hospital, Padmanabhanagar, Bangalore
54. Gayathri Hospital, Vijayanagar, Bangalore.
55. Acura Speciality Hospital, Kormangala, Bangalore.
56. Vinayaka Hospital, Hanumanthanagar, Bangalore
57. Karthik Nethrayala, N.R.Colony, Ashoknagar, Bangalore.
58. North Side Hospital & Dignostic Centre Sahakaranagar, Bangalore
59. Punya Hospital Channapatnna Bangalore Rural Dist.
60. St.Theresas Hospital, Rajajinagar, Bangalore
61. Mediscope Hospital Pvt.Ltd., Pillanna Garden, Bangalore.
62. Pristine Hospital, No.877, Modi Hospoital Road, West of Chord Road, 2nd Stage, Bangalore.
63. Jayashree Nursing Home, No.4, 4th Cross, 4th Block Kumarapark West, Bangalore.
64. Curad My Centre for Diabetes, No.33, 11 Main Road, Near Vyalikaval Police Station Bangalore.

65. Dr.Ramesh Hospital , 4th Clock Rajajinagar, Bangalore.
66. Prabha Eye Clinic & Research Centre No.504, Jayanagar, Bangalore.
67. Vittalal International Institute of Opthalmology, Hoskerehalli, Bangalore.\
68. Retina Institute of Karnataka, 5th Main Road, Chamarajapet, Bangalore.
69. Sudarshan Netralaya Sampige Road, Malleswaram, BAngalore.
70. City Hospital Chord Road, Rajajinagar, Bangalore
71. Koshys Hospital, Raghavendra Nagar, Tambuchettypalya, Ramamurthy Nagar Bangalore.
72. Vishwabharathi Hospital Pvt. Ltd, 3rd Main, Hanumanthanagar, Bangalore.
73. Harsha Hospital Husur Road, Bommasandra, Bangalore
74. Suguna Hospital, Dr.Rajkumar Road, Rajajinagar, Bangalore
75. B.G.S.Globel Hospital , BGS health & Education City Uttrahalli Road, Kengeri Bangalore.
76. Mahveer Eye Hospital. Sirur Park, Sheshadripuram, Bangalore.
77. Dr.M.C.Modi Charitable Eye Hospital, M.C.Modi Road, Mahalakshmipuram Bangalore.
78. Sunayana Eye Hospital, Jayanagar, Opp. 4th T.Block, Bangalore.
79. Fortis Hospital Cunnigham Road, Bangalore.
80. Fortis Hospital Bannerghatta Road, Bangalore.
81. Jeevani health & Medicare Pvt.Ltd., Magadi MainRoad, Dasarahalli, Bangalore.
82. Shanakara Eye Hospital, HAL Airport Road, Kundanahalli gate, Bangalore.
83. Sagar Hospital, DSI, Shavige Malleswara Hills, Kumaraswamylayout, Bangalore.
84. Vikram Hospital, Millar Road, Bangalore.
85. Vikram Hopsital, Mysore.
86. Vasan Eye Care Hospital. 1st Block Rajajinagar, Bangalroe.
87. Vasan Eye care Hospital, Opp.Pizza Hut, Koramangala Bangalore.
88. Vagus Super Speciality Hospital 18th cross, Malleswaram Bangalore.
89. Panecia Hospital Pvt. Basweshwaranagar, Bangalore.
90. Dr.Agarwals Eye Hospital, N.S.Palya, Bannergtta Road, Bangalore.
91. Abhya Eye Hospital, BSK 3rd Stage, Bangalore.
92. Sapthagiri Hospital, No.15, Hessargtta Main Road, Bangalore.
93. Indus Estside Hospital, Jnanabharathi Layout, Bangalore.
94. Sahaya Holitic Intergtative Hospital Pvt. Ltd., T.Mariyappa Road, 1st Block Jayanagar Bangalore
95. Vijayanagar Globel Hospital, Near Main Bustand, MCRoad, Bangalore-40
96. Vijaya Nethralaya Super Speciality Eye Hospital, 5th Cros Malgala Nagarbhavi,Bangalore.
97. Sri Eye Care Laser & Surgical Centre, KHM Blcok, Ganganagar, Bangalore.
98. Anand Diagnostic Centre, Infantry Road, Bangalore.
99. Thatagath Hear Centre, bAngalore
100 Kanva Diagnostic Centre, Rajajinagar, Bangalore
101. Padmashree Medicare Pvt. Ltd., Vijayanagar. Bangalore.
102. V.Diagnostic Laboratory, Malleswaram Bangalore.
103. Santosh Diagnostic St.John Church Road, Bangalore.
104. Ragavas Diagnostic & Research Centre Sadguru comples jayanagar Bangalore.
105. Clumax Diagnostic & Research Centre Lakshmi Towers Jayanagar, Bangalore.
106. Chanre Diagnostice laboratory Malleswaram Bangalore.
107 .Isha Diagnostic centre Sampige Road, Malleswaram Bangalore.

108. colombia Asia hospital,yeshavanthpur,bengaluru.
109. colombia Asia hospital,Ballary Road,Banglore.
110. Apollo Hospital,Bannergatta Road,Banglore.
111. M.S.Ramaiah Memorial Hospital,Banglore.
112 Sparsha Hospital,Hosur Road,Banglore.
113. H.C.G.Institute of Oncology Bangalore.
114. Fortis Hospital Sheshadripuram And Cunningham Road ,Bannerghatta Road,Nagarbhavi,Banglore.
115. M.S. Ramaiah Teaching And Medical Hospital,Banglore.
116. Spandana Re-habiliation Center,Nandini Lay-out Banglore.
117. Gunasheela Hospital And Meternity Home, Basavanagudi ,Banglore.
118. Chord Road Hospital,Vijayanagara,Banglore.
119. Metropolis Lab Malleswaram,Banglore.
120. Apoorva Diognostic ,Banglore.
121. Sakra World Hospital, No.52/.2, 52/3, Devarabeesanahalli, Varthur Hobli, Bangalore-560103
122. KDC Hospital, Pvt. Ltd. R.R.Nagara, Bangalore.
123. Apollo Dental Hospital, New BEL Road, RMV 2nd Stage, Bangalore.

iii) Private Hospitals in Other Districts: after Sl.No.23 and enteries relating thereto,the following shall be inserted namely:-

24. R.L.Jalappa Hospital & Research Centre, Kolar
25. Rajiv Gandhi Super Speciality Hospital, Raichur
26. B.G.S.Appolo Hospital, Kuvempunagar, Mysore
27. J.SS Medical College Hospital Mysore
28. Siddhartha Medical College Hospital, Tumkur
29. PVS Medical Surgical & Cardic Hospital Chitradurga
30. Karudi Hospital & Research Centee Bagalkote
31. A.J Hospital & Research Centre , Mangalore
32. Omega Hospital Pvt. Ltd., Mangalore
33. City Hospital & Research & Dignositic Centre Kadri , Mangalroe
34. Gopalagowda Shanthaveri Memorial Hosptial Mysore.
35. Chethan Nursing Home, Malandur Road, Chikkamagalur
36. Poornima Hospital & Meternity Centre, Mulbagal, Kolar
37. R.K. Nursing Home Chintamanai, Kolar,
38. Mallikarjuna Nursing Home , Shimoga
39. Malanadu Hospital & Insititute of Oncologuy, Shimoga
40. Basveshwarwa Hospital Shimoga
41 Malage Hospital, Theerthalli, Shimoga
42 Manjunatha Health Care Hospital Kolar.
43. New Kolar Nursing Home, Kolar
44. New Kamadenu Nursimg Home Kolar,
45. Srinivasa Nursing Home, M.B. Rd. Kolar
46. Babu Nursing Home Pandavpura Mandya
47. New pragathi Nursing Home Mandya
48. Archana Nursing Home Mandya

49. Annapornna Nursing Home, Gangavathi Koppala
50. Patil Nursing Home., Koppala
51. Al-Ameen Medical College Hospital, Bijapur
52. BLED medical College, Bijapur
53.CSI Redfrene Hospital Hassan
54. Mangala Nursing Home Hassan
55. Bharthi Nursing Home Hassan
56. Keshva Nethralaya, Hassan
57. Kasturba Hospital, Tumkur
58. Devi Hospital, Tumkur
59. Adarsha Nursing Home, Tumkur
60. Ashraya Hospital, Chikkamagalur
61. Holy Cross Hospital, Chikkamagalur
62. Balaji Nursing Home, Kadur, Chikkamagalur
63. Padma Nayanalya M.M.Joshi Eye Clinic, Hubli
64. Shakuntala Memorial Hospital, Husur, Hubli
65. Bharath Institute of Oncology, Hebbal Mysore.
66. City Central Hospital, Davanagere
67. Ravi Nursing Home, Davanagere
68. Vijayshri Accident & Orthocare, Udupi
69. Hitech Medicare Hospital, Udupi
70. Vinay Hospital, Kundapura, Udupi
71. City Nursing Home,Karkala, Udupi
72. Janatha Hospital & Research Centre, Hassan
73. Nandini Nursing Home, K.R.Road Mandya
74. Latha Nursing Home, Davanagere
75. Kaveri Nursing Home, Mandya
76. S.S.M.Super speciality Hospital, Hassan
77. Gandhi Hospital, Udupi
78. Bidrai Ashwini Hospital, Bijapur
79. Bagalkot Medical College, Bagalkot
80. Kamashi Hospital, Mysore
81. CSI hold worth Memorial Hospital, Mysore
82. Jayashree Nursing Home, Hassan
83. Dr.N.R.Acharya memorial Hospital, Koteshwara, Udupi
84. Navarathna Surgical & Maternity Nursing Home, Kolar
85. Viajy Hospital Tumkur,
86. Sanjivini Sahakari Hospital, Hassan
87. B.Siddaramnna Hospital Tumkur
88. Athena Hospital,Mangalore
89. Aruna Hospital, Tumkur
90. Vinayaka Hospital, Tumkur
91. Bapuji Nursing Home, Tumkur
92. Kadli Ningamma Hospital, Davanagere

93. Manohar Saigowda Hospital, Mulbagal Kolar
94. Manasa Hospital, Guribidnaur, Kolar
95. Prashanth Medical Service, Nehru nagar, Mandya
96. Suraksha Nursing Home, mandya
97. Annaporna Hospital KMRoad, Chikkamagalur
98. Jayapriya Hospital, Hubli
99. Patil Nursing Home, Gulbarga
100. Hemavathi Hospital, Hassan
101. Chitra Hospital & Prasad Memorial Medical centre, Mysore
102. Daddannavar Hospital & Research centre, Bagalkot
103. Khaja Bandenawaz Teaching & General Hospital, Gulbarga
104. Sampige Nursing Home, Hassan
105. Laskshmi Nursing Home, Hassan
106. Suguna Nursing Home, Kolar
107. Bharthi Hospital, K.R.Extn. Tumkur
108. Chaitanya Hospital SSPuram Tumkur
109. Chinmay Hospital Kundapura Udupi
110. Malnadu Nursing Home, KRPuram Hassan
111. Ashwini Nursing Home PJExtn Davangere
112. Venkateshwara Nursing Home Srinivasapura
113. Ashraya Hospital Davanagere]
114. City medical Center Davanagere
115. Shilpashri Nursing Home, Mandya
116. Pragathi Hospital Tumkur
117. Smt.Savithramma 7 Sri Shanasappa Hospital, Arsikere Hassan
118. ETCM Hospital, Kolar
119. Rajiv Hospital Hassan
120. Chandrakala Hospital & Institute of Medical Research Jayalakshmipuram Mysore
121. Dr.N.K.Thimmaiah Hospital, Kuvempunagar, Tumkur
122. Akshya Nursing Home, Gowripet , Kolar
123. Doddamane Hospital Tumkur
124. Belgaum Cancer Hopsital, Belgaum
125. Benaka Health Centre, Dakshina Kannada
126. Dr.K.Narasimhaiah Hospital Gandhinagar, Tumkur
127. Pragathi Speciality Hospital Puttur D.K.
128. Mangala Nur5sing Home & Kidney foundation, Mangalore
129. Nalwada Multispeciality Hospital & Research Centre, Hosur, Hubli
130. Shushrusha Nursing Koppala
131. Dr.Lodaya Hospital Haveri
132. Sri Satya sai Hospital, Chikkamagalur
133. Adarsha Hospital Udupi
134. Venkateshwara Nursing Home, Hassan
135. B.J.Lingegowda Hospital, Channapattanna
136. Ravi poli clinic & maternity Shimoga
137. Nagesh Hospital, Channarayapattanna, Hassan
138. Krupa Nursing Home, Mandya
139. Vivakandanda & maternity Home, Shimoga

140. Shivakrupa Hospital Chikkodi, Belgaum
141. Chetan Hospital Puttru D.K.
142. Suneetha Nurshing Home Chitradurga
143. uday Nursing Home Chitradurga
144. Rajalakshmi Nursing Home Tumkur
145. Nandini Diagnostic Centre& Hospital Raichur
146. Yeneppoy Hospital, Mangalore
147. Pavan Nurwshing Home, Srinivapura Kolar
148. Manjunath Hospital, Chikkabalapur Kolar
149. Danush Hospital Chintamani, Kolar
150. Tejeswini Hospital Mangalore
151. S.D.M.College of medical Science & Hospital Dharwad
152. Deccan Hospital Chinthamani, Kolar
153. Dr.Nukapur Hospital, KSRTC Bustand Kolar
154. S.D.Jayaram Hopsital & Research Centre Mandya
155. Jayashri Nursing Home Tumkur
156. Shilpa Diagnostic Nurshing Home Davanagere
157. Mahalakshmi memorial Hosptial, Sirsi, U.K.
158. Patanjali Hospital Dharmashalaroad, Chitradurga
159. SS Institute of Medical Science & Research Centre, Davanagere
160. Adithya Orthopedic & Trauma Centre Tumkur
161. Akshya Hospital Tumkur
162. Patil medicare Multispeciality Hospital Bagalkot
163. Meena Nurshing Home Bhadravathi Shimoga
164. RSL Nursing Home Chintamani Kolar
165. Dandin Hospital, Bagalkot
166. Kelagar medical Centre, Rannibennur, Haveri
167. Sanjo Hospital Srinivasapura Mandya
168. City Hospital Shimoga
169. Dr.R.B.patil Hopsital Hubli
170. Basweshwara Medical College & Hospital Chitradurga
171. Usha Hospital Shimoga
172. Surabi Hospital & I.C.U Mandya
173. Hegde Health Complex, Shimoga
174. Ashraya Nurshing Home, Bijapur
175. Choudhri Hospital, Bijapur
176. Vivekananda Memorial Hospital H.D.Kote, Mysore
177. Hoysala Hospital, Hassan
178. Shantha clinic, Gokak, Belgaum
179. new citgy Multispeciality Hospital, Udupi
180. Subbaiah Hospital Shimoga
181. Mahesh Hospital, Bramavara, Udupi
182. Devi Nursing Home, Kundapura Udupi
183. Mathrushri Hospital Chintamani, Chikkabalapur
184. Nayana Hospital, Bhadravathi Shimoga
185. Pooja Hospital, Channapattanna Ramanagar
186. Danamma Super Speciality Hospital Bellary

187. Kaveri Hospital, Mysore
188. M.K.Bhandari Hopspital, Raichur
189. Manasa Hospital Chikkabalapur
190. Bijapur Kidney Foundation. Bijapur
191. Shushrutha Multispeciality Hospital Hubli
192. Bhavi Hospital Bagalkot
193. Girija Clinic , puttur D.K.
194. Vijaya Hospital, Belgaum
195. Sridevi Multispeciality Hosptal Honnavar, U.K.
196. Balanku Orthopedic Meternity Hospital, Raichur
197. Anuradha Nurshing Home Theerthalli Shimoga
198. Durga Hopsital Bhadravathi Shimoga
199. Shushroosha Dr.GVPandit Memorial Hopsital, Haveri
200. S.R.Nethralaya Eye Hopsital, Udupi
201. Danush Hopsital Bagalkot
202. Maruthi nethralaya Gadag
203. Yash Hospital, Belgaum
204. vivus Hospital, Medekeri, Kodagu
205. Vivekananda General Hospital Hubli
206. Mudnur hospital Bijapur
207. Bhargi Hospital, Bagalokot
208. Thirumala Hopsital chelkare Chitradurga
209. Coloumbia Asia Hospital Mysore
210. Nanjappa life care Shimoga
211. Nirmala hospital Shimoga
212. Lalthi Hospital Udupi
213. Mahaveer Medical Centre, Puttur D.K.
214. Dr. Handral Nurshing Home , Haveri
215. Mavintop Hospital Davanegere
216. Renuka Eye Hospital, Haveri
217. St.Joseph Hopsital Mysore
218. Vaatsyala Hospital Mandya
219. Suchethana Hospital Davanagere
220. Dr.R.G. Karudigmath memorial nursing home Badami Bagalkot
221. Drishti Eye clinic Davangere
222. Visvaseva samthi charitable hospital Sirsi U.K.
223. RNS Hospital mudeshwara North Canara
224. Lakshmi Hopsital Kadur, Chikmagalur
225. Basavraj Hospital Hiriyur Chitradurga
226. Shankar eye hospital Shimoga
227. Shrusutha eye clinic Davanegere
228. TSS Shripad hegde kadave I.M.S. Sirsi U.k.
229. Adarsha Hopsital Kundapur Udupi
230. Kshema Orthiopedic Hosital Hubli
231. Bhate Hospital Chikkodi Belgaum
232. Lakshmi srinivas Nursing Home chalkere Chitradurga
233. Charaka Hospital Tumkur

234. Maruthi Hospital kadur, Chikkamagalur
235. Shanthi Hopsital Bagalkot
236. Kiran Diagnostic Centre Chitradurga
237. srinivasa Diagnostic Centre Kolar
238. Mandya Diagnostic Centre Mandya
239. Guruja Diagnostic Centre Koppal
240. Ambli Diagnostic Centre Tumkur
241. Hubli Scan centre Hubli
242. baba House, Gulbarga
243. Das Diagnostic scanning Centre Hassan
244. Bhagwan Pathology Mysore
245. Dr.Karigowda laboratory Bijapur
246. N.M.R. Scan centre Hubli
247. Dr. jeevnnavar Laboratory blood bank Hubli
248. Karnataka Cardio Diagnostic Centre Mysore
249. Sukshema Hospital Davanagere
250. T.M.A.Pai Hospital,Manipal,Udupi.

Ayurvedic, Yoga & Naturopathy, Homeopathy, Unani

1. Sri Dharmasthala Manjunatheswara Hospital udupi
2. Sri Dharmasthala Manjunatheswara Hospital, Hassan
3. I-AIIM Health care Centre yelahanka Bangalore
4. Shanthigiri Ayurveda & Sidda Hospital, Adugudi Bangalore
5. Aitreya Ayurveda Medical college Doddabalapur Bangalore
6. Srikalabyrehwara ayurveda medical college vijayanagar, bangalore
7. Ayurveda hospital Domlur Bangalore
8. Sahaya holisitc integertive hospital, Bangalore
9. Jayanagar Nature cure hospital, Bangalore
10. Jindal Nature Cure hopsital, bangalore
11. SDM Nature cure Hopsital Ujeri Dharmasthala
12. Soukya sahaya Homeopathi hospital
13. Dr. Baksons homeiopathy medical centre
14. Institute of Unani Medicine
15. Calcuit Unani research Hospital

By Order and in the name of the Special Board.

P. OMPRAKASHA

Secretary,

Karnataka Legislative Assembly.

ನಮೂನೆ – ಎ

(ನಿಯಮ 6(1)ರ ಅನ್ವಯ)

ಅತ್ಯಾವಶ್ಯಕ ಪ್ರಮಾಣ ಪತ್ರ

ಕರ್ನಾಟಕ ವಿಧಾನಸಭೆ/ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ/ಶ್ರೀಮತಿ –––––––– ಅವರು ದಿನಾಂಕ –––––––– ದಿಂದ –––––––––––– ವರೆಗೆ ––––––––––––––– ಕಾಯಿಲೆಗಾಗಿ ––––– ಆಸ್ಪತ್ರೆ/ಡಿಸ್ಪೆನ್ಸರಿಯಲ್ಲಿ ನನ್ನ ಶುಶ್ರೂಷೆಯಲ್ಲಿದ್ದು, ಈ ರೋಗಿಯ ಚೇತರಿಕೆಗಾಗಿ/ ತೀವ್ರ ಕಾಯಿಲೆಯಿಂದ ಸುಧಾರಿಸಿಕೊಳ್ಳಲು ನಾನು ನಿಗದಿಪಡಿಸಿದ ಈ ಕೆಳಕಂಡ ಔಷಧಿಗಳು ಅತ್ಯಾವಶ್ಯಕವಾಗಿವೆ ಎಂದು ದೃಢೀಕರಿಸುತ್ತೇನೆ. ಈ ಔಷಧಿಗಳು –––––––––––– ಆಸ್ಪತ್ರೆ/ಡಿಸ್ಪೆನ್ಸರಿಯಲ್ಲಿ ಖಾಸಗಿ ರೋಗಿಗಳಿಗೆ ಸರಬರಾಜು ಮಾಡಲು ದಾಸ್ತಾನು ಇಲ್ಲವೆಂದು ಮತ್ತು ಸೋಂಕು ತಡೆ ವಸ್ತುಗಳಲ್ಲವೆಂದೂ ಹಾಗೂ ಅಗ್ಗದ ದರದ ಪರ್ಯಾಯ ಔಷಧಗಳು ಇಲ್ಲದ ನಿಗದಿತ ಕಂಪನಿಗಳ ತಯಾರಿಕೆಗಳು, ಪ್ರಾಥಮಿಕ ಆಹಾರ, ಶೌಚಾಲಯ ಅಥವಾ ಸೋಂಕು ನಿವಾರಕ ವಸ್ತುಗಳು ಈ ಔಷಧಿಗಳಲ್ಲಿ ಸೇರಿಲ್ಲವೆಂದೂ ದೃಢೀಕರಿಸುತ್ತೇನೆ.

ಕ್ರ. ಸಂ.	ಔಷಧಿಯ ಹೆಸರು	ಬೆಲೆ ರೂ. ಪೈ.

ಪ್ರಾಧಿಕೃತ ವೈದ್ಯ ಪರಿಚಾರಕನ
ಸಹಿ ಮತ್ತು ಪದನಾಮ

ದಿನಾಂಕ: ––––––––––

ವೈದ್ಯಾಧಿಕಾರಿಯ ಮೇಲುರುಜು

ಹೆರಿಗೆ ಪ್ರಕರಣದ ಸಂದರ್ಭದಲ್ಲಿ **"ಗರ್ಭಿಣಿಯಾದಾಗ"** ಅಥವಾ ಸಂದರ್ಭಾನುಸಾರ **"ಮಗುವಾದಾಗ"** ಎಂಬ ಶಬ್ದಗಳನ್ನು **"ರೋಗಿ"** ಎಂಬ ಪದಕ್ಕೆ ಬದಲಾಗಿ ಪ್ರತ್ಯಾಯೋಜಿಸಬಹುದು.

ಪ್ರಪತ್ರ – ಬಿ

(6(2)ರ ನಿಯಮ ನೋಡಿ)

ವೈದ್ಯಕೀಯ ವೆಚ್ಚಗಳ ಮರುಪಾವತಿ ಕ್ಲೇಮಿನ ಅರ್ಜಿ ನಮೂನೆ

1	ಸದಸ್ಯರ ಹೆಸರು (ದಪ್ಪ ಅಕ್ಷರಗಳಲ್ಲಿ)	:
2	ವಾಸಸ್ಥಳದ ಪೂರ್ಣ ವಿಳಾಸ	:
3	ರೋಗಿಯು ಖಾಯಿಲೆ ಬಿದ್ದ ಸ್ಥಳ	:
4	ಖಾಯಿಲೆಯ ಸ್ವರೂಪ ಮತ್ತು ಅದರ ಅವಧಿ	:
5	ಕ್ಲೇಮು ಮಾಡಿದ ಮೊಬಲಗಿನ ವಿವರಗಳು	:
6	ಕ್ಲೇಮು ಮಾಡಿದ ಒಟ್ಟು ಮೊಬಲಗು	:
7	ಲಗತ್ತಿಸಲಾದ ಅಡಕಗಳ ಪಟ್ಟಿ	:

ಘೋಷಣೆಗೆ ಸದಸ್ಯರು ಸಹಿ ಮಾಡತಕ್ಕದ್ದು

ಈ ಅರ್ಜಿಯಲ್ಲಿನ ವಿವರಗಳು ನನಗೆ ತಿಳಿದಷ್ಟುಮಟ್ಟಿಗೆ ಸತ್ಯವಾಗಿವೆ ಮತ್ತು ನಂಬಲರ್ಹವಾಗಿವೆ ಎಂದು ಈ ಮೂಲಕ ಘೋಷಿಸುತ್ತೇನೆ.

ಸದಸ್ಯರ ಸಹಿ/–

ದಿನಾಂಕ: ––––––––––––––––––

ಕರ್ನಾಟಕ ವಿಧಾನಮಂಡಲದ (ಅಧ್ಯಕ್ಷಾಧಿಕಾರಿಗಳ) ವೈದ್ಯೋಪಚಾರ ನಿಯಮಗಳು, 1959

(30ನೇ ನವೆಂಬರ್ 1982ರವರೆಗೆ ತಿದ್ದುಪಡಿಯಾದಂತೆ)

ಕರ್ನಾಟಕ ವಿಧಾನಮಂಡಲದ ಸಂಬಳಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 2) 15ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳನ್ನು ರಚಿಸುತ್ತದೆ ಎಂದರೆ:–

1. (1) ಈ ನಿಯಮಗಳನ್ನು ಕರ್ನಾಟಕ ವಿಧಾನಮಂಡಲದ (ಅಧ್ಯಕ್ಷಾಧಿಕಾರಿಗಳ) ವೈದ್ಯಕೀಯ ಚಿಕಿತ್ಸಾ ನಿಯಮಗಳು, 1959 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು 1956ರ ನವೆಂಬರ್ ಮೊದಲ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿರದ ಹೊರತು,–

(ಬಿ) **"ಅಧಿಕೃತ ವೈದ್ಯಕೀಯ ಪರಿಚಾರಕ (ಮೆಡಿಕಲ್ ಅಟೆಂಡೆಂಟ್)"** ಎಂದರೆ, ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾವುದೇ ಇತರ ವೈದ್ಯಕೀಯ ಅಧಿಕಾರಿಯನ್ನು ಅಧಿಕೃತ ವೈದ್ಯಕೀಯ ಪರಿಚಾರಕ ಎಂದು ನಿರ್ದಿಷ್ಟಪಡಿಸಿದ ಹೊರತು **"ಅಧೀಕ್ಷಕರು"**, ಬೌರಿಂಗ್ ಆಸ್ಪತ್ರೆ, ಬೆಂಗಳೂರು ಎಂದರ್ಥ;

(ಸಿ) **"ಸರ್ಕಾರ"** ಎಂದರೆ, ರಾಜ್ಯ ಸರ್ಕಾರ;

(ಡಿ) **"ವೈದ್ಯಕೀಯ ಉಪಚಾರ"** ಎಂದರೆ, ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯೋಪಚಾರ ಅಥವಾ ಸಭಾಧ್ಯಕ್ಷರು ಅಥವಾ ಸಭಾಪತಿಗಳ ನಿವಾಸದಲ್ಲಿ (ಉಪ–ಸಭಾಧ್ಯಕ್ಷರು, ಉಪ–ಸಭಾಪತಿ ಅಥವಾ ವಿರೊಧ ಪಕ್ಷದ ನಾಯಕರು ಅಥವಾ ಸರ್ಕಾರದ ಮುಖ್ಯ ಸಚೇತಕರು) ಅಥವಾ ಅಧಿಕೃತ ವೈದ್ಯಕೀಯ ಪರಿಚಾರಕನು ನಿರ್ವಹಿಸುವ ಸಮಾಲೋಚನಾ ಕೊಠಡಿಯಲ್ಲಿ ವೈದ್ಯೋಪಚಾರದ ವ್ಯವಸ್ಥೆ, ಇದರಲ್ಲಿ,–

(i) ಯಾವುದೇ ಸರ್ಕಾರದ ಅಥವಾ ರಾಜ್ಯದ ಪ್ರಯೋಗಶಾಲೆಯಲ್ಲಿ ದೊರಕುವ ಮತ್ತು ಅಧಿಕೃತ ವೈದ್ಯಕೀಯ ಪರಿಚಾರಕನು ಅಗತ್ಯವಾದುದೆಂದು ಪರಿಗಣಿಸುವ ರೋಗನಿಧಾನಕ್ಕಾಗಿ, ಪ್ಯಾಥಲಾಜಿಕಲ್, ಬ್ಯಾಕ್ಟಿರಿಯೋಲಾಜಿಕಲ್ (ಜೀವಾಣು ವಿಜ್ಞಾನ), ರೇಡಿಯೋಲಾಜಿಕಲ್ (ವಿಕಿರಣಶಾಸ್ತ್ರ)ದಂತಹ ಅಥವಾ ರೋಗವನ್ನು ಕಂಡುಹಿಡಿಯುವ ಉದ್ದೇಶಕ್ಕಾಗಿ ಪರೀಕ್ಷಿಸುವ ಇತರ ವಿಧಾನಗಳು ಒಳಗೊಳ್ಳುತ್ತವೆ;

(ii) ಅಧಿಕೃತ ವೈದ್ಯಕೀಯ ಪರಿಚಾರಕನು ಸರ್ಕಾರಿ ಸೇವೆಯಲ್ಲಿರುವ ಇತರ ಯಾರೇ ವೈದ್ಯಾಧಿಕಾರಿ ಅಥವಾ ತಜ್ಞರೊಂದಿಗೆ ಅಗತ್ಯವೆಂದು ಪ್ರಮಾಣೀಕರಿಸುವಷ್ಟು ಮಟ್ಟಿಗೆ ಮತ್ತು ಅಧಿಕೃತ ವೈದ್ಯಕೀಯ ಪರಿಚಾರಕನೊಂದಿಗೆ ಸಮಾಲೋಚಿಸಿ ವೈದ್ಯಾಧಿಕಾರಿ ಅಥವಾ ತಜ್ಞರು ನಿರ್ಧರಿಸಬಹುದಾದಂತಹ ವಿಧಾನವು ಒಳಗೊಳ್ಳುತ್ತದೆ;

(ಇ) **"ರಾಜ್ಯ"** ಎಂದರೆ, ಕರ್ನಾಟಕ ರಾಜ್ಯ.

(ಎಫ್) **"ದಾದಿ"** ಎಂದರೆ, ಪ್ರಮಾಣಪತ್ರವನ್ನು ಹೊಂದಿರುವ ಅಥವಾ ಕರ್ನಾಟಕದ ವೈದ್ಯಕೀಯ ಸೇವೆಗಳ ನಿರ್ದೇಶಕರಿಂದ ಮಾನ್ಯತೆ ಪಡೆದ ಡಿಪ್ಲೊಮೋ ಪಡೆದಿರುವ ವ್ಯಕ್ತಿ.

(ಜಿ) **"ರೋಗಿ"** ಎಂದರೆ, ವೈದ್ಯೋಪಚಾರ ಅಥವಾ ವೈದ್ಯಕೀಯ ಚಿಕಿತ್ಸೆಯ ಅವಶ್ಯಕತೆ ಇರುವ ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು, ಸರ್ಕಾರದ ಮುಖ್ಯ ಸಚೇತಕರು.

(ಎಚ್) **"ಚಿಕಿತ್ಸೆ"** ಎಂದರೆ, ರೋಗಿಯನ್ನು ಉಪಚರಿಸತಕ್ಕ ಸರ್ಕಾರಿ ಆಸ್ಪತ್ರೆಯಲ್ಲಿ ದೊರಕುವ ಎಲ್ಲಾ ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸೆಯ ಸೌಲಭ್ಯಗಳನ್ನು ಬಳಸಿಕೊಳ್ಳುವುದು ಮತ್ತು ಇದರಲ್ಲಿ,–

(i) ಅಧಿಕೃತ ವೈದ್ಯಕೀಯ ಪರಿಚಾರಕರು ಅಗತ್ಯವೆಂದು ಭಾವಿಸಬಹುದಾದಂತೆ, ಅಂತಹ ರೋಗನಿದಾನ (ಪ್ಯಾಥಲಾಜಿಕಲ್), ಏಕಾಣುಜೀವಿ ಪರೀಕ್ಷೆ (ಬ್ಯಾಕ್ಟೀರಿಯೋಲಾಜಿಕಲ್), ರೇಡಿಯೋಲಾಜಿಕಲ್ ಅಥವಾ ಅನುಸರಿಸಿದ ಇತರ ಯಾವುದೇ ವಿಧಾನಗಳ ಪ್ರಯೋಗ;

(ii) ರೋಗಲಕ್ಷಣ ನಿರೂಪಣೆಯಿಂದ ರೋಗಿಯು ಶಾರೀರಿಕವಾಗಿ ಅಥವಾ ಇತರೆ ದೌರ್ಬಲ್ಯದಿಂದ ನರಳುತ್ತಾನೆ ಎಂದು ತಿಳಿದು ಬಂದಾಗ ದವಡೆ ಮೂಳೆ ಕಾಯಿಲೆಯ ಚಿಕಿತ್ಸೆ ಅಥವಾ ಹಲ್ಲುಗಳನ್ನು ತೆಗೆದು ಹಾಕುವ ಚಿಕಿತ್ಸೆಯೇ ಮೊದಲಾದ ದಂತ ಚಿಕಿತ್ಸೆಯನ್ನು ಒಳಗೊಳ್ಳುತ್ತದೆ;

ವಿವರಣೆ:– ದಂತಮೂಹದ ಒಸಡನ್ನು ತೆರೆಯಲು (ಅಡೆನೊಟಮಸ್), ಜ್ಞಾನದಂತ ಒತ್ತುವುದನ್ನು ನಿವಾರಿಸಲು ಮಾಡಬೇಕಾದ ಶಸ್ತ್ರಚಿಕಿತ್ಸೆಗಳೂ ಸಹ ಪ್ರಮುಖವಾದ ವಿಧಾನಗಳಲ್ಲಿ ಸೇರುತ್ತದೆ. ಒಸಡು ಕುರುವಿಗೆ ಮಾಡುವ ಶಸ್ತ್ರಚಿಕಿತ್ಸೆಯು ಬಾಯಿಯ ಮೂಲಕದ ಶಸ್ತ್ರಚಿಕಿತ್ಸೆಯಾದುದರಿಂದ ಅದು ಈ ನಿಯಮದಲ್ಲಿ ಅಂಗೀಕಾರಾರ್ಹವಾಗಿದೆ. ಹಲ್ಲಿನ ಪಯೋರಿಯಸ್ (pyorrhos) ಮತ್ತು ಜಿಂಜಿವೈಟಿಸ್ (gingivitis) ಚಿಕಿತ್ಸೆಗಳು ಇದರಲ್ಲಿ ಒಳಗೊಳ್ಳುವುದಿಲ್ಲ.

(iii) ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಲಭ್ಯವಾಗುವ ಔಷಧ, ಲಸಿಕೆ, ಸೆರಾ ಅಥವಾ ಇತರ ಚಿಕಿತ್ಸಾ ಸಂಬಂಧವಾದ ವಸ್ತುಗಳ ಪೂರೈಕೆ;

(iv) ರೋಗಿಯು ಗುಣ ಹೊಂದಲು ಅಥವಾ ರೋಗಿಯ ಪರಿಸ್ಥಿತಿಯು ತೀವ್ರವಾಗಿ ಕ್ಷೀಣಿಸುತ್ತಿರುವುದನ್ನು ತಡೆಯಲು ಅಗತ್ಯವಾಗಿ ಬೇಕಾಗಿದೆಯೆಂದು ಲಿಖಿತದಲ್ಲಿ

ಪ್ರಮಾಣೀಕರಿಸಬಹುದಾದ, ಆದರೆ ಸಾಮಾನ್ಯವಾಗಿ ದೊರಕದೇ ಇರುವಂತಹ ಔಷಧಗಳು, ಲಸಿಕೆ, ಸಿರಾ ಅಥವಾ ಇತರೆ ಚಿಕಿತ್ಸಾ ಸಂಬಂಧವಾದ ವಸ್ತುಗಳ ಪೂರೈಕೆ;

(v) ರೋಗಿಯನ್ನು ಸೇರಿಸಿರುವ ಆಸ್ಪತ್ರೆಯ ವಾರ್ಡಿನಲ್ಲಿ ಒಂದು ಪ್ರತ್ಯೇಕವಾದ ಕೊಠಡಿಯನ್ನು ವ್ಯವಸ್ಥೆ ಮಾಡುವುದು ಮತ್ತು ಪ್ರತ್ಯೇಕವಾದ ಕೊಠಡಿಯ ವ್ಯವಸ್ಥೆ ಇಲ್ಲದಿರುವಲ್ಲಿ ಅಂಥ ಕಡೆ ದೊರಕಬಹುದಾದ ಸ್ಥಳಾವಕಾಶವನ್ನು ಆತನ ಸ್ಥಾನಮಾನಕ್ಕೆ ತಕ್ಕಂತೆ ಮಾಡುವ ವ್ಯವಸ್ಥೆ;

(vi) ರೋಗಿಯನ್ನು ಸೇರಿಸಿರುವ ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ನೇಮಕ ಮಾಡುವಂಥ ದಾದಿಯರ ಸೇವಾ ವ್ಯವಸ್ಥೆ;

(vii) ರೋಗದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು, ರೋಗಿಯ ಪರಿಸ್ಥಿತಿಯು ಸುಧಾರಿಸಲು ಅಥವಾ ತೀವ್ರವಾಗಿ ಕ್ಷೀಣಿಸುವುದನ್ನು ತಡೆಗಟ್ಟಲು ಅಗತ್ಯವೆಂದು ಅಧಿಕೃತ ವೈದ್ಯಕೀಯ ಪರಿಚಾರಕನು ಲಿಖಿತದಲ್ಲಿ ಪ್ರಮಾಣೀಕರಿಸಬಹುದಾದಂಥ ವಿಶೇಷ ಆರೈಕೆಯ ವ್ಯವಸ್ಥೆ ಹಾಗೂ

(viii) ಆಹಾರ ಅಥವಾ ರೋಗಿಯು ಕೋರಿದ ಸೌಲಭ್ಯ ಅಥವಾ ವೈದ್ಯೋಪಚಾರವು (v)ನೇ ಖಂಡದಲ್ಲಿ ವಿವರಿಸುವುದಕ್ಕಿಂತ ಉನ್ನತಮಟ್ಟದ ಸ್ಥಳಾವಕಾಶಗಳನ್ನು ಒಳಗೊಳ್ಳದೆ (ಡಿ) ಖಂಡದ (ii)ನೇ ಉಪ–ಖಂಡದಲ್ಲಿ ವಿವರಿಸುವ ವೈದ್ಯೋಪಚಾರ ಇವೆಲ್ಲವುಗಳನ್ನು ಒಳಗೊಳ್ಳುತ್ತದೆ.

ವಿವರಣೆ: ಶುಲ್ಕಸೂಚಿಯಲ್ಲಿ ಆಹಾರ ವೆಚ್ಚಗಳನ್ನು ಸೇರಿಸುವಂತಹ ಆಸ್ಪತ್ರೆಗಳ ಸಂದರ್ಭದಲ್ಲಿ ಅಂತಹ ಶುಲ್ಕದ ಶೇ. 20ರಷ್ಟನ್ನು ಆಹಾರದ ವೆಚ್ಚವೆಂಬಂತೆ ಪರಿಗಣಿಸತಕ್ಕದ್ದು.

3. (1) ಸಭಾಧ್ಯಕ್ಷರು, ಸಭಾಪತಿ (ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕ ಅಥವಾ ಸರ್ಕಾರಿ ಮುಖ್ಯ ಸಚೇತಕರು) ಅಧಿಕೃತ ವೈದ್ಯಕೀಯ ಪರಿಚಾರಕನ ಮೂಲಕ ವೈದ್ಯೋಪಚಾರವನ್ನು ಪಡೆಯಲು ಹಕ್ಕಿರತಕ್ಕದ್ದು.

(2) (1)ನೇ ಉಪ–ನಿಯಮದ ಮೇರೆಗೆ ಉಚಿತ ವೈದ್ಯೋಪಚಾರದ ಹಕ್ಕನ್ನು ಪಡೆದಿರುವ ಸಭಾಧ್ಯಕ್ಷರು, ಸಭಾಪತಿಗಳು (ಉಪ–ಸಭಾಪತಿಗಳು, ಉಪ–ಸಭಾಧ್ಯಕ್ಷರು, ವಿರೋದ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು) ಅಂಥ ವೈದ್ಯೋಪಚಾರಕ್ಕಾಗಿ ಯಾವುದೇ ಮೊಬಲಗನ್ನು ಸಂದಾಯ ಮಾಡಿರುವಲ್ಲಿ ಪರಿಶಿಷ್ಟದಲ್ಲಿರುವ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದಲ್ಲಿ ಮತ್ತು ಈ ಸಂಬಂಧದಲ್ಲಿ ಅಧಿಕೃತ ವೈದ್ಯಕೀಯ ಪರಿಚಾರಕನಿಂದ ಲಿಖಿತದಲ್ಲಿ ಪಡೆದ ಪ್ರಮಾಣಪತ್ರವನ್ನು ಒಪ್ಪಿಸುವುದರ ಮೂಲಕ ಸಭಾಧ್ಯಕ್ಷರು, ಸಭಾಪತಿಗಳು (ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು) ಸಂಬಂಧಪಟ್ಟ ವೆಚ್ಚವನ್ನು ಸರ್ಕಾರದಿಂದ ಭರ್ತಿಯಾಗಬೇಕಾದ ಮೊಬಲಗನ್ನು ಸಭಾಧ್ಯಕ್ಷರು, ಸಭಾಪತಿಗಳು (ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು) ತಾವು ವಹಿಸಿದ ವೆಚ್ಚದ ಪ್ರತಿಯೊಂದು ಬಾಬಿನ ಸಂಬಂಧದಲ್ಲೂ ಸಮರ್ಪಕವಾದ ರಸೀದಿಗಳು ಮತ್ತು

ವೋಚರುಗಳೂ ಸೇರಿದಂತೆ (ವಿಶೇಷ ಔಷಧಗಳ ಸಂಬಂಧದಲ್ಲಿ ಅಗತ್ಯತೆಯ ಪ್ರಮಾಣ ಪತ್ರಗಳನ್ನು ಒಳಗೊಂಡಂತೆ) ತಮ್ಮ ವೇತನದ ಬಿಲ್ಲಿನ ಮೂಲಕ ಹಣವನ್ನು ಪಡೆಯತಕ್ಕದ್ದು ಮತ್ತು ಈ ಲೆಕ್ಕದ ಸಂಬಂಧದಲ್ಲಿ ವೆಚ್ಚವನ್ನು ರಾಜ್ಯ ಆಯವ್ಯಯ–25 ಸಾಮಾನ್ಯ ಆಡಳಿತ ಲೆಕ್ಕ ಶೀರ್ಷಿಕೆಯಡಿ ಹಂಚಿಕೆಗೆ ಖರ್ಚು ಹಾಕತಕ್ಕದ್ದು.

4. (1) ವಿಶೇಷ ಔಷಧಿಗಳನ್ನು ಬರೆದುಕೊಟ್ಟ ಸಂದರ್ಭದಲ್ಲೆಲ್ಲಾ ಅತ್ಯಾವಶ್ಯಕ ಪ್ರಮಾಣಪತ್ರವನ್ನು ನಮೂನೆ 'ಎ'ಯಲ್ಲಿ (ಅಥವಾ ಸಂದರ್ಭಾನುಸಾರ ನಮೂನೆ 'ಬಿ'ಯಲ್ಲಿ) ಅಧಿಕೃತ ವೈದ್ಯಕೀಯ ಪರಿಚಾರಕನು ಕೊಡತಕ್ಕದ್ದು.

(2) ಯಾವುದೇ ದುಬಾರಿ ಬೆಲೆಯ ಔಷಧಗಳು, ವಿರೇಚಕಗಳು ಅಥವಾ ಯುಕ್ತ ತಯಾರಿಕೆಗಳ ಬದಲಾಗಿ ಗುಣಪಡಿಸುವ ಸಮಾನ ಗುಣದ ಅಗ್ಗದ ವಸ್ತುಗಳು ಲಭ್ಯವಿದ್ದರೆ ಅವುಗಳನ್ನು ಬರೆದುಕೊಡಬೇಕು.

(3) (11ನೇ ಪರಿಶಿಷ್ಟ) ಅನುಮತಿಸಿಲ್ಲದ ತಯಾರಿಕೆಗಳ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಲಾದ ಮೂಲತಃ ಆಹಾರ ಪದಾರ್ಥಗಳಾಗಿರುವ ಟಾನಿಕ್ಕುಗಳು, ಪ್ರಸಾಧನಗಳು, ಸೋಂಕು ನಿವಾರಕ ಔಷಧಗಳು, ಉಪಕರಣಗಳು, ಗಾಯಕಟ್ಟುವ ಗಾಯಪಟ್ಟಿ, ಔಷಧಗಳು ಸೇರಿದಂತೆ ಮುಂತಾದ ತಯಾರಿಕೆಗಳನ್ನು ಬರೆದುಕೊಡಬಾರದು.

5. (1) ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಕುಟುಂಬದ ಸದಸ್ಯರು ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರಿಗೆ ಈ ನಿಯಮಗಳ ಮೇರೆಗೆ ಶ್ರೇಣಿ ಮತ್ತು ಷರತ್ತುಗಳ ಆಧಾರದ ಮೇಲೆ ಅನುಮತಿಸಲಾಗುವ ಉಚಿತ ವೈದ್ಯಕೀಯ ನೆರವು ಮತ್ತು ಚಿಕಿತ್ಸೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ರಿಯಾಯಿತಿಯಲ್ಲಿ,–

(i) ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ

(ii) ಅಧಿಕೃತ ವೈದ್ಯಕೀಯ ಸಹಾಯಕರು ವ್ಯವಸ್ಥೆ ಮಾಡಿಕೊಂಡಿರುವ ಸಲಹಾ ಕೊಠಡಿ–ಇವುಗಳನ್ನು ಹೊರತು ಬೇರೆ ಕಡೆಯಲ್ಲಿ ಪಡೆದ ವೈದ್ಯಕೀಯ ನೆರವು ಒಳಗೊಳ್ಳುವುದಿಲ್ಲ. ಪರಂತು, ಕುಟುಂಬದ ಸದಸ್ಯನನ್ನು ಆಸ್ಪತ್ರೆಗೆ ಸಾಗಿಸುವುದು ಅವನ ಜೀವಕ್ಕೆ ಅಪಾಯಕರ ಅಥವಾ ಹಾನಿಕರವೆಂದು ಅಧಿಕೃತ ವೈದ್ಯಾಧಿಕಾರಿಯು ಭಾವಿಸುವಂಥ ಗಂಭೀರ ಸಂದರ್ಭಗಳಲ್ಲಿ ರೋಗಿಗೆ ಮನೆಯಲ್ಲಿಯೇ ವೈದ್ಯಕೀಯ ನೆರವು ಹಾಗೂ ಚಿಕಿತ್ಸೆಯನ್ನು ನೀಡಲು ಅನುಮತಿಸಬೇಕು.

(2) ಕುಟುಂಬದ ಸದಸ್ಯರು ಅಧಿಕೃತ ವೈದ್ಯಕೀಯ ಸಹಾಯಕರಿಂದ ಸಲಹೆ ಪಡೆಯಲು ಕೈಗೊಳ್ಳುವ ಪ್ರಯಾಣಕ್ಕಾಗಿ ಯಾವುದೇ ರೀತಿಯ ಪ್ರಯಾಣಭತ್ಯೆಯನ್ನು ನೀಡತಕ್ಕದ್ದಲ್ಲ.

(3) (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾಗಿರುವ ವೈದ್ಯೋಪಚಾರ ಮತ್ತು ಚಿಕಿತ್ಸೆಯಲ್ಲಿ ಸಭಾಧ್ಯಕ್ಷರು, ಸಭಾಪತಿಗಳು, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಪತ್ನಿಯರಿಗೆ ಹೆರಿಗೆಗೆ ಸಂಬಂಧಿಸಿದಂತೆ ಆಸ್ಪತ್ರೆಯಲ್ಲಿ ಜನನಪೂರ್ವದ ಮತ್ತು ಜನನ ತರುವಾಯದ ಚಿಕಿತ್ಸೆಯೂ ಸೇರತಕ್ಕದ್ದು

ವಿವರಣೆ:– ಯಾವನೇ ಒಬ್ಬ ವ್ಯಕ್ತಿಯು, ಸಭಾಧ್ಯಕ್ಷರು ಅಥವಾ ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕನ ಕುಟುಂಬದ ಒಬ್ಬ ಸದಸ್ಯನೆಂಬುದಕ್ಕೆ ಹಾಗೂ ಅವನು ಅವರೊಡನೆ ವಾಸಿಸುತ್ತಿದ್ದಾನೆಂದೂ ಮತ್ತು ಸಭಾಧ್ಯಕ್ಷರು, ಸಭಾಪತಿ, ಉಪ ಸಭಾಪತಿ, ಉಪ ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು, ಸರ್ಕಾರಿ ಮುಖ್ಯ ಸಚೇತಕರಿಂದ ಒಂದು ಪ್ರಮಾಣಪತ್ರವು ಈ ನಿಯಮಗಳ ಮೇರೆಗಿನ ಪ್ರಯೋಜನಗಳನ್ನು ಪಡೆಯಲು ಸಾಕಷ್ಟಾಗಿರುತ್ತದೆ.

6. (1) ಅಧಿಕೃತ ವೈದ್ಯಕೀಯ ಚಿಕಿತ್ಸಕನ ಕೇಂದ್ರ ಸ್ಥಳವಲ್ಲದ ಸ್ಥಳದಲ್ಲಿ ಸಭಾಧ್ಯಕ್ಷರು ಅಥವಾ ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರಿಗೆ ಅನಾರೋಗ್ಯ ಉಂಟಾದಲ್ಲಿ ಆ ಸ್ಥಳವು ಅಧಿಕೃತ ವೈದ್ಯಾಧಿಕಾರಿಯ ಕೇಂದ್ರ ಕಾರ್ಯಾಲಯವಾಗಿಲ್ಲದಿದ್ದರೆ,

(ಎ) ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಅಂಥ ಕೇಂದ್ರ ಕಾರ್ಯಾಲಯಕ್ಕೆ ಹೋಗಲು ಮತ್ತು ಅಲ್ಲಿಂದ ಬರಲು ಪ್ರಯಾಣಭತ್ಯೆಗೆ ಹಕ್ಕುಳ್ಳವರಾಗಿರತಕ್ಕದ್ದು.

(ಬಿ) ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರಿಗೆ ಪ್ರಯಾಣ ಅಸಾಧ್ಯವೆನಿಸುವಷ್ಟು ಅನಾರೋಗ್ಯವಾಗಿದ್ದರೆ ಅಧಿಕೃತ ಅಧಿಕಾರಿಯು ರೋಗಿಯಿರುವ ಸ್ಥಳಕ್ಕೆ ಹೋಗುವ ಮತ್ತು ಪುನಃ ಬರುವ ಪ್ರಯಾಣಕ್ಕಾಗಿ ಪ್ರಯಾಣಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರಬೇಕು;

ಪರಂತು, ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರಿಗೆ ದಂತ ವೈದ್ಯರಿಂದ ಅಥವಾ ನೇತ್ರ ತಜ್ಞರಿಂದ ವೈದ್ಯೋಪಚಾರ ಪಡಯುವುದಕ್ಕಾಗಿ ಪ್ರಯಾಣ ಮಾಡಲು ಪ್ರಯಾಣಭತ್ಯೆಯನ್ನು ಪಡೆಯುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(2) lನೇ ಉಪ–ನಿಯಮದ ಮೇರೆಗೆ, ಪ್ರಯಾಣಭತ್ಯೆಗಾಗಿ ಸಲ್ಲಿಸಲಾದ ಅರ್ಜಿಯೊಂದಿಗೆ, ವೈದ್ಯಕೀಯ ನೆರವು ಅಗತ್ಯವಿದ್ದ ಬಗ್ಗೆ ಲಿಖಿತದಲ್ಲಿ ಒಂದು ಪ್ರಮಾಣಪತ್ರವನ್ನು ಮತ್ತು ಉಪನಿಯಮದ 'ಬಿ' ಖಂಡದ ಮೇರೆಗೆ ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–

ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಪ್ರಯಾಣ ಮಾಡಲಾಗದಷ್ಟು ಅಸ್ವಸ್ಥರಾಗಿದ್ದ ಬಗ್ಗೆ ಅಧಿಕೃತ ವೈದ್ಯಾಧಿಕಾರಿ ನೀಡಿದ ಒಂದು ಪ್ರಮಾಣಪತ್ರವನ್ನು ಕಳುಹಿಸಬೇಕು.

7. (1) ಅಧಿಕೃತ ವೈದ್ಯಕೀಯ ವೈದ್ಯಾಧಿಕಾರಿಯು ಸಭಾಧ್ಯಕ್ಷರು, ಸಭಾಪತಿ, ಉಪ–ಸಭಾಪತಿ, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ರೋಗಿಯ ಆರೋಗ್ಯ ಸ್ಥಿತಿ ತುಂಬಾ ಚಿಂತಾಜನಕ ಅಥವಾ ವಿಶೇಷ ಸ್ವರೂಪದ್ದಾಗಿದ್ದು ತಾನಲ್ಲದೆ ಬೇರೊಬ್ಬ ವೈದ್ಯನಿಂದ ವೈದ್ಯೋಪಚಾರದ ಅಗತ್ಯವಿದೆ ಎಂದಾದಲ್ಲಿ, ವಿಳಂಬದಿಂದಾಗಿ ರೋಗಿಯ ಆರೋಗ್ಯಕ್ಕೆ ಅಪಾಯವುಂಟಾಗುವ ಹೊರತು ಕರ್ನಾಟಕ ವೈದ್ಯಕೀಯ ಸೇವೆಗಳ ನಿರ್ದೇಶಕರ ಅನುಮತಿಯನ್ನು ಪಡೆದು (ಅನುಮತಿ ಪತ್ರವನ್ನು ಪೂರ್ವಭಾವಿಯಾಗಿಯೇ ಪಡೆದಿರಬೇಕು),–

(ಎ) 2ನೇ ನಿಯಮದ (ಡಿ) ಖಂಡದಲ್ಲಿ ಉಪಬಂಧಿಸಲಾದಂತೆ ರಾಜ್ಯದಲ್ಲಿ ಅತ್ಯಂತ ಹತ್ತಿರದ ಸ್ಥಳದಲ್ಲಿರುವ ತಜ್ಞರ ಅಥವಾ ಇತರ ವೈದ್ಯಾಧಿಕಾರಿಯ ವೈದ್ಯೋಪಚಾರವು ರೋಗಿಗೆ ಅಗತ್ಯವೆಂದು ತಾನು ಅಭಿಪ್ರಾಯಪಟ್ಟಲ್ಲಿ ಅಂಥವರ ಬಳಿಗೆ ರೋಗಿಯನ್ನು ಕಳುಹಿಸಬೇಕು.

(ಬಿ) ರೋಗಿಯು ಪ್ರಯಾಣ ಮಾಡಲಾರದಷ್ಟು ಅಶಕ್ತನಾಗಿದ್ದಲ್ಲಿ, ರೋಗಿಯು ಶುಶ್ರೂಷೆಗಾಗಿ ವಿಶೇಷ ತಜ್ಞರನ್ನು ಅಥವಾ ಇತರ ವೈದ್ಯಾಧಿಕಾರಿಯನ್ನು ರೋಗಿಯಿರುವ ಸ್ಥಳಕ್ಕೆ ಕರೆಸಬೇಕು.

(2) ರೋಗಿಯನ್ನು ವಿಶೇಷ ತಜ್ಞರ ಅಥವಾ ಅಥವಾ ಇತರ ವೈದ್ಯಾಧಿಕಾರಿಯ ಬಳಿಗೆ ಕಳುಹಿಸಿದ ಸಂದರ್ಭದಲ್ಲಿ ವೈದ್ಯಕೀಯ ಸಹಾಯಕರು ಈ ಸಂಬಂಧದಲ್ಲಿ ಲಿಖಿತ ಪ್ರಮಾಣಪತ್ರವನ್ನು ಹಾಜರುಪಡಿಸಿದಲ್ಲಿ ತಜ್ಞರ ಅಥವಾ ವೈದ್ಯಾಧಿಕಾರಿಯ ಕೇಂದ್ರ ಕಾರ್ಯಾಲಯಕ್ಕೆ ಹೋಗುವ ಮತ್ತು ಅಲ್ಲಿಂದ ಪುನಃ ಬರುವ ಪ್ರಯಾಣಕ್ಕಾಗಿ, ಪ್ರಯಾಣಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ.

(3) (1)ನೇ ಉಪ–ನಿಯಮದ (ಬಿ) ಖಂಡದ ಮೇರೆಗೆ ಕಳುಹಿಸಿರುವ ತಜ್ಞ ಅಥವಾ ಇತರೆ ವೈದ್ಯಾಧಿಕಾರಿಯು ರೋಗಿಯನ್ನು ಶುಶ್ರೂಷೆಗಾಗಿ ವಿಶೇಷ ತಜ್ಞರನ್ನು ಅಥವಾ ವೈದ್ಯಾಧಿಕಾರಿಯನ್ನು ಕರೆಸಿದರೆ, ಅವರು ಆ ಬಗ್ಗೆ ಅಧಿಕೃತ ವೈದ್ಯಾಧಿಕಾರಿಯಿಂದ ಲಿಖಿತ ರೂಪದಲ್ಲಿ ಪಡೆದ ಪ್ರಮಾಣಪತ್ರವನ್ನು ಸಲ್ಲಿಸುವುದರ ಮೂಲಕ ಅವರು ರೋಗಿಯು ಇರುವ ಸ್ಥಳಕ್ಕೆ ಹೋಗಲು ಮತ್ತು ಅಲ್ಲಿಂದ ಹಿಂತಿರುಗಲು ಪ್ರಯಾಣಭತ್ಯೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

7. ಸರ್ಕಾರಿ ಆಸ್ಪತ್ರೆ ಅಥವಾ ಔಷಧಾಲಯದ ಹೊರತು ಬೇರೆ ಯಾವುದೇ ಸ್ಥಳದಲ್ಲಿ ಚಿಕಿತ್ಸೆಯ ಸಲುವಾಗಿ ವಹಿಸಿದ ವೆಚ್ಚವನ್ನು ಭರ್ತಿಮಾಡಿಕೊಡುವುದು.– ಸಭಾಧ್ಯಕ್ಷರು, ಉಪ–ಸಭಾಧ್ಯಕ್ಷರು, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಸರ್ಕಾರವು ನಿರ್ವಹಿಸುತ್ತಿರುವ ಆಸ್ಪತ್ರೆ ಅಥವಾ ಔಷಧಾಲಯದ ಹೊರತು ಅಥವಾ 8 ಅಥವಾ 8ಎ ನಿಯಮದ ಮೇರೆಗೆ ಬೇರೆ ಯಾವುದೇ ಸ್ಥಳದಲ್ಲಿ ವೈದ್ಯೋಪಚಾರ ಮತ್ತು ಚಿಕಿತ್ಸೆಯನ್ನು ಪಡೆದ ಸಂದರ್ಭದಲ್ಲಿ ವಹಿಸಿದ ವೆಚ್ಚಗಳಿಗೆ ಸಂಬಂಧಪಟ್ಟಂತೆ ಈ ನಿಯಮಗಳ ಮೇರೆಗೆ ಅಂತಹ ಆಸ್ಪತ್ರೆ ಅಥವಾ ಔಷಧಾಲಯದಲ್ಲಿ ಪಡೆದ ವೈದ್ಯೋಪಚಾರ ಮತ್ತು ಚಿಕಿತ್ಸೆಗಾಗಿ ಅವರು ವಹಿಸಿದ ವೆಚ್ಚಗಳನ್ನು ತುಂಬಿಕೊಡುವಂತೆ ಹಕ್ಕನ್ನು ಪಡೆದಿರುವವರ ಮಟ್ಟಿಗೆ ಅದೇ ರೀತಿಯಲ್ಲಿ ತಾನು ವಹಿಸಿದ ವೆಚ್ಚವನ್ನು ತುಂಬಿಕೊಳ್ಳುವ ಹಕ್ಕನ್ನು ಪಡೆದಿರತಕ್ಕದ್ದು. ಈ ವೆಚ್ಚದಲ್ಲಿ ಅಂತಹ ಚಿಕಿತ್ಸೆಯನ್ನು ನೀಡಿದ ಸ್ಥಳಾವಕಾಶದ ಸೌಕರ್ಯಕ್ಕಾಗಿ ವಹಿಸಿದ ವೆಚ್ಚವನ್ನು ಒಳಗೊಂಡಿರುತ್ತದೆ.

8. (1) ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ, ವಿರೋಧಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ತಮ್ಮ ಆಯ್ಕೆಯ ಮೇರೆಗೆ ತಮ್ಮ ಮನೆಯಲ್ಲಾಗಲೀ ಅಥವಾ ಸರ್ಕಾರದ ಆಸ್ಪತ್ರೆಯಲ್ಲಾಗಲೀ ಚಿಕಿತ್ಸೆ ಪಡೆಯಬಹುದು.

(2) (1)ನೇ ನಿಯಮದ ಮೇರೆಗೆ ತಮ್ಮ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿರುವ ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ತಮ್ಮ ಮನೆಯಲ್ಲಿ ಅಲ್ಲದೆ ಬೇರೆಡೆಯಲ್ಲಿ ಚಿಕಿತ್ಸೆ ಪಡೆದಿದ್ದರೆ, ಈ ನಿಯಮಗಳ ಮೇರೆಗೆ ಉಚಿತ ವೈದ್ಯೋಪಚಾರವನ್ನು ಪಡೆಯುತ್ತಿದ್ದರಾದ್ದರಿಂದ, ಅಂತಹ ಚಿಕಿತ್ಸೆಯ ವೆಚ್ಚಕ್ಕೆ ಸಮನಾದ ಮೊತ್ತವನ್ನು ಚಿಕಿತ್ಸೆಯ ಸಲುವಾಗಿ ತಾನು ವಹಿಸಿದ ವೆಚ್ಚವನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಾನೆ.

(3) ಉಪ–ನಿಯಮ (2)ರ ಮೇರೆಗೆ ಅನುಮತಿಸಲಾಗಿರುವ ಮೊಬಲಗಿನ ಬಗೆಗಿನ ಕೋರಿಕೆಯ ಪತ್ರದ ಜೊತೆಗೆ, ಅಧಿಕೃತ ವೈದ್ಯಾಧಿಕಾರಿಯು, ಉಪ–ನಿಯಮ (2)ರಲ್ಲಿ ಉಲ್ಲೇಖಿಸಲಾಗಿರುವ ಈ ಬಗೆಯ ಚಿಕಿತ್ಸೆಗೆ ತಗಲುವ ವೆಚ್ಚದ ಮೊಬಲಗನ್ನು ತಿಳಿಸಿ ಲಿಖಿತ ರೂಪದಲ್ಲಿ ನೀಡಿರುವ ಪ್ರಮಾಣಪತ್ರವನ್ನು ಲಗತ್ತಿಸಿರಬೇಕು.

8ಎ. (1) ಸಭಾಧ್ಯಕ್ಷ, ಸಭಾಪತಿ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ, ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಕಚೇರಿ ಕೆಲಸದ ನಿಮಿತ್ತ ಭಾರತದಲ್ಲಿಯೇ ರಾಜ್ಯದ ಹೊರಗಡೆ ತೆರಳಿದಾಗ ಅಸ್ವಸ್ಥತೆ ಉಂಟಾಗಿ ಅವರಿಗೆ ತ್ವರಿತವಾಗಿ ವೈದ್ಯಕೀಯ ನೆರವು ಪಡೆಯಬೇಕಾಗಿ ಬಂದರೆ ಆ ಚಿಕಿತ್ಸೆಗೆ ತಾವು ವೆಚ್ಚ ಮಾಡಿದ ಹಣದ ಬಗ್ಗೆ ಅನುಬಂಧ–I ರಲ್ಲಿ ತೋರಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸಿದರೆ, ಸರ್ಕಾರದಿಂದ ಆ ಹಣವನ್ನು ಹಿಂದಕ್ಕೆ ಪಡೆಯಬಹುದು ಅಥವಾ ತಾವು ಹಣ ಸಂದಾಯ ಮಾಡಿರದಿದ್ದರೆ ಅವರು ಬಯಸಿದ ಪಕ್ಷದಲ್ಲಿ, ಆ ಚಿಕಿತ್ಸೆಗೆ ತಗುಲಿದ ವೆಚ್ಚವನ್ನು ಸರ್ಕಾರವೇ ಸಂದಾಯ ಮಾಡುತ್ತದೆ. ಈ ರೀತಿಯ ಹಣ ವಾಪಸಾತಿ ಅಥವಾ ಹಣ ಸಂದಾಯ– ಇವು ಈ ನಿಯಮದ (2) ಮತ್ತು (3)ನೇ ಉಪ–ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟಿರುತ್ತವೆ. ಕೋರಿಕೆ ಪತ್ರದೊಂದಿಗೆ

ಸಭಾಪತಿಯವರು ಅಥವಾ ಸಭಾಧ್ಯಕ್ಷರು ಭರಿಸಿದ ವೆಚ್ಚದ ಪ್ರತಿಯೊಂದು ಬಾಬಿನ ರಸೀದಿಗಳನ್ನು ಮತ್ತು ವೋಚರುಗಳನ್ನು ಲಗತ್ತಿಸಿರಬೇಕು.

(2) ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಈ ನಿಯಮಗಳ ಮೇರೆಗೆ ಅಸ್ವಸ್ಥ ಕಾಲದಲ್ಲಿ ರಾಜ್ಯದಲ್ಲೇ ಇದ್ದಿದ್ದರೆ, ಪಡೆಯುತ್ತಿದ್ದ ವೈದ್ಯಕೀಯ ನೆರವು ಮತ್ತು ಉಪಚಾರದಷ್ಟೇ ಮತ್ತು ಅದೇ ಪ್ರಮಾಣದ ವೈದ್ಯಕೀಯ ನೆರವು ಮತ್ತು ಉಪಚಾರವನ್ನು ಪಡೆಯುತ್ತಾರೆ ಮತ್ತು ಸಭಾಧ್ಯಕ್ಷ, ಸಭಾಪತಿ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಮೂಲಕ ಆಯ್ಕೆಯಾದ ಯಾವನೇ ವೈದ್ಯಕೀಯ ಸಹಾಯಕನು ಅವರು ಅಸ್ವಸ್ಥರಾದಾಗ ಅವರನ್ನು ಉಪಚರಿಸುವ ಉದ್ದೇಶಕ್ಕಾಗಿ ಈ ನಿಯಮಗಳ ಮೇರೆಗೆ ಅಧಿಕೃತ ವೈದ್ಯಕೀಯ ಸಹಾಯಕನಂತೆ ಕಾರ್ಯಗಳನ್ನು ನಿರ್ವಹಿಸಬೇಕು.

(1) ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ, ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಕಾಯಿಲೆಯ ಸ್ವರೂಪದ ದೃಷ್ಟಿಯಿಂದ ಅವರ ಜೊತೆಗೆ ಒಬ್ಬ ವೈದ್ಯಾಧಿಕಾರಿಯು ಪ್ರಯಾಣ ಮಾಡಬೇಕಾದ ಅಗತ್ಯವಿದ್ದರೆ, ಅವರ ಪ್ರಯಾಣಭತ್ಯೆಯನ್ನು ಮತ್ತು ಪ್ರಾಸಂಗಿಕ ವೆಚ್ಚಗಳನ್ನು ಸರ್ಕಾರದವರು ಸಂದಾಯ ಮಾಡಬೇಕು.

(2) ಕೋರಿಕೆ ಪತ್ರದ ಜೊತೆಗೆ ಸರಿಯಾದ ರಸೀತಿಗಳು ಮತ್ತು ವೋಚರುಗಳು ಇದ್ದು, ರೋಗಿಯ ಸ್ಥಿತಿಗೆ ಸಂಬಂಧಪಟ್ಟಂತೆ ವೈದ್ಯಕೀಯ ಉಪಚಾರ ಅಗತ್ಯವಿದ್ದ ಬಗ್ಗೆ ಮತ್ತು ವೆಚ್ಚಗಳೂ ಯಥೋಚಿತವಾಗಿರುವ ಬಗ್ಗೆ ಕೋರಿಕೆ ಪತ್ರಕ್ಕೆ ಅಧಿಕೃತ ವೈದ್ಯಕೀಯ ಸಹಾಯಕರು ಮೇಲುರುಜು ಹಾಕಿರಬೇಕು.

(3) ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಸರ್ಕಾರಿ ಕೆಲಸದ ನಿಮಿತ್ತ ಭಾರತದ ಹೊರಗಡೆ ಹೋದಾಗ, ಕಾಯಿಲೆಯ ಕಾರಣಕ್ಕಾಗಿ ಅವರು ಭರಿಸುವ ವೆಚ್ಚವನ್ನು ಭರ್ತಿಮಾಡುವಲ್ಲಿ ಪ್ರವಾಸ ಕಾಲದಲ್ಲಿ ಅಸ್ವಸ್ಥರಾಗಿದ್ದುದ್ದಕ್ಕೆ ಸಂಬಂಧಿಸಿದಂತೆ ಮಾತ್ರ ಅಂತಹ ವೆಚ್ಚಗಳನ್ನು ಸಂದಾಯ ಮಾಡಬೇಕು. ಸಭಾಧ್ಯಕ್ಷ ಅಥವಾ ಸಭಾಪತಿ ಅಥವಾ ಉಪ–ಸಭಾಪತಿ, ಉಪ–ಸಭಾಧ್ಯಕ್ಷರು ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ರಾಜ್ಯದಲ್ಲಿದ್ದಾಗ ಕಾಯಿಲೆಯಾಗಿದ್ದರೆ ಹೇಗೆ ಅವರಿಗೆ ಉಚಿತ ವೈದ್ಯಕೀಯ ನೆರವು ದೊರಕುತ್ತಿತ್ತೋ ಅಷ್ಟರಮಟ್ಟಿಗೆ ಸಂದಾಯ ಮಾಡುವುದನ್ನು ಸರ್ಕಾರದ ವಿಶೇಷ ಆಜ್ಞೆಗಳ ಮೇರೆಗೆ ನಿರ್ಧರಿಸತಕ್ಕದ್ದು.

(4) ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರಿಗೆ ವಿದೇಶದಲ್ಲಿ ವೈದ್ಯಕೀಯ ಉಪಚಾರದ ಅಗತ್ಯವಿರುವ ಸ್ವರೂಪದ ಕಾಯಿಲೆ ಉಂಟಾಗಿದ್ದರೆ ಅಂಥ ಚಿಕಿತ್ಸೆ ನಮ್ಮ ದೇಶದಲ್ಲಿ ಅಲಭ್ಯವಿದ್ದರೆ, ಅಂಥ ಸಂದರ್ಭದಲ್ಲಿ ವಿದೇಶದಲ್ಲಿ ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–

ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ತಾವು ವಹಿಸಿದ ವೆಚ್ಚವನ್ನು ತುಂಬಿಕೊಡುವುದನ್ನು ಸರ್ಕಾರದ ವಿಶೇಷ ಆದೇಶಗಳಿಂದ ನಿರ್ಧರಿಸತಕ್ಕದ್ದು. ಭಾರತದಲ್ಲಿ ಈ ಚಿಕಿತ್ಸೆ ಎಲ್ಲಿಯೂ ಲಭ್ಯವಿಲ್ಲವೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರಿಂದ ಲಿಖಿತರೂಪದಲ್ಲಿ ಪ್ರಮಾಣಪತ್ರವನ್ನು ತಂದ ಹೊರತು ಹಣವನ್ನು ತುಂಬಿಕೊಡುವಂತಿಲ್ಲ.

ವಿವರಣೆ: ಈ ಖಂಡದ ಉದ್ದೇಶಕ್ಕಾಗಿ 'ವೈದ್ಯಕೀಯ ವೆಚ್ಚಗಳು' ಎಂಬ ಪದವು ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಪ್ರವಾಸದ ಮತ್ತು ಪ್ರಾಸಂಗಿಕ ವೆಚ್ಚಗಳನ್ನು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕರು ಕಾಯಿಲೆಯ ಸ್ವರೂಪದ ದೃಷ್ಟಿಯಿಂದ ರೋಗಿಯೊಂದಿಗೆ ಒಬ್ಬ ಸಹಾಯಕರ ಉಪಸ್ಥಿತಿ ಅಗತ್ಯವಿದೆ ಎಂದು ಪ್ರಮಾಣೀಕರಿಸಿದ್ದರೆ, ಆ ಸಹಾಯಕರ ಪ್ರವಾಸದ ಹಾಗೂ ಸಾಂದರ್ಭಿಕ ವೆಚ್ಚವನ್ನು ಒಳಗೊಂಡಿರುತ್ತದೆ.

9. ಈ ನಿಯಮಗಳ ಮೇರೆಗೆ ಉಚಿತ ವೈದ್ಯಕೀಯ ನೆರವು ಅಥವಾ ಉಪಚಾರವನ್ನು ಪಡೆಯುವ ರೋಗಿಗೆ, ವೈದ್ಯಕೀಯ ನೆರವು ಹಾಗೂ ಉಪಚಾರದ ಹೊರತಾದ ಸೇವೆಗಳನ್ನು ಸಲ್ಲಿಸಿದುದರ ವೆಚ್ಚವನ್ನು ಅಧಿಕೃತ ವೈದ್ಯಕೀಯ ಸಹಾಯಕರ ನಿರ್ಧಾರದ ಮೇರೆಗೆ ರೋಗಿಯು ಸಂದಾಯ ಮಾಡಬೇಕು.

10. **ಉಪಬಂಧಗಳ ರಿಯಾಯಿತಿ:**– ಈ ನಿಯಮಗಳ ಪೈಕಿ ಯಾವುದೇ ನಿಯಮವೊಂದರ ಅನುಸರಣೆಯು ಒಬ್ಬ ರೋಗಿಯ ವಿಷಯದಲ್ಲಿ ಅನಗತ್ಯವಾದ ಆತಂಕಗಳನ್ನುಂಟು ಮಾಡುತ್ತಿದೆ ಎಂದು ಸರ್ಕಾರಕ್ಕೆ ತೋರಿದರೆ, ಸರ್ಕಾರವು ಆದೇಶದ ಮೂಲಕ ಯಾವನೇ ರೋಗಿಯನ್ನು ಸೂಕ್ತ ಮತ್ತು ಸಮಯೋಚಿತ ರೀತಿಯಲ್ಲಿ ಪರೀಕ್ಷಿಸಲು ಅಗತ್ಯವಿರುವಮಟ್ಟಿಗೆ ಆ ನಿಯಮದ ಅಗತ್ಯತೆಗಳನ್ನು ತೆಗೆದುಹಾಕಬಹುದು ಅಥವಾ ಸಡಿಲಗೊಳಿಸಬಹುದು.

ಪರಿಶಿಷ್ಟ–I

ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರು ಮತ್ತು ಅವರ ಕುಟುಂಬಗಳು ಪಡೆದ ವೈದ್ಯೋಪಚಾರ ಅಥವಾ ಚಿಕಿತ್ಸೆಯ ಸಂಬಂಧದಲ್ಲಿ ತಗುಲಿದ ವೈದ್ಯಕೀಯ ವೆಚ್ಚವನ್ನು ಕ್ಲೇಮು ಮಾಡಲು ಸಲ್ಲಿಸುವ ಅರ್ಜಿ ನಮೂನೆ:–

ವಿ.ಸೂ:– ಪ್ರತಿಯೊಬ್ಬ ರೋಗಿಗೂ ಪ್ರತ್ಯೇಕವಾದ ಅರ್ಜಿ ನಮೂನೆಯನ್ನು ಉಪಯೋಗಿಸತಕ್ಕದ್ದು.

1. ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಹೆಸರು
2. ಈಗಿನ ವಿಳಾಸ
3. ರೋಗಿಯ ಹೆಸರು, ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ, ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರೊಂದಿಗೆ ಆತ/ಆಕೆ ಹೊಂದಿರುವ ಸಂಬಂಧ
   ವಿ.ಸೂ:– ಮಕ್ಕಳಾಗಿದ್ದರೆ, ಅವರ ವಯಸ್ಸನ್ನು ತಿಳಿಸಿ
4. ವ್ಯಕ್ತಿ ಕಾಯಿಲೆ ಬಿದ್ದ ಸ್ಥಳ
5. ಕ್ಲೇಮು ಮಾಡಲಾದ ಮೊಬಲಗಿನ ವಿವರಗಳು

I. ವೈದ್ಯೋಪಚಾರ

   (i) ಸಲಹಾ ಶುಲ್ಕ
      ಎ. ಸಲಹೆ ನೀಡಿದ ವೈದ್ಯಾಧಿಕಾರಿಯ ಹೆಸರು ಮತ್ತು ಹುದ್ದೆ, ಅವರು ಯಾವ ಆಸ್ಪತ್ರೆಗೆ ಅಥವಾ ಔಷಧಾಲಯಕ್ಕೆ ಸೇರಿರುವರೆಂಬುದರ ವಿವರ
      ಬಿ. ಸಲಹಾ ಭೇಟಿಗಳ ಸಂಖ್ಯೆ ಮತ್ತು ಪ್ರತಿಯೊಂದು ಸಲಹಾ ಭೇಟಿಗೆ ಸಂದಾಯ ಮಾಡಿದ ಶುಲ್ಕ
      ಸಿ. ಚುಚ್ಚುಮದ್ದುಗಳ ಸಂಖ್ಯೆ ಮತ್ತು ಚುಚ್ಚುಮದ್ದು ಹಾಕಿದ ದಿನಾಂಕ ಮತ್ತು ಪ್ರತಿಯೊಂದು ಚುಚ್ಚುಮದ್ದಿಗೆ ನೀಡಿದ ಶುಲ್ಕ
      ಡಿ. ಸಲಹಾ ಭೇಟಿಗಳ ಮತ್ತು /ಅಥವಾ ಚುಚ್ಚುಮದ್ದನ್ನು ಹಾಕಿಕೊಂಡಿರುವುದು ಆಸ್ಪತ್ರೆಯಲ್ಲಿನ ವೈದ್ಯಾಧಿಕಾರಿಯ ಸಲಹಾ ಕೋಣೆಯಲ್ಲಿಯೇ ಅಥವಾ ರೋಗಿಯ ಮನೆಯಲ್ಲಿಯೇ,

(ii) ರೋಗವನ್ನು ಗುರುತಿಸುವಾಗ ಕೈಗೊಂಡ ರೋಗಲಕ್ಷಣದ ಜೀವಾಣುಗಳ (ಪ್ಯಾಥಾಲಾಜಿಲ್) ರೋಗ ನಿವಾರಣೆ, ಏಕಾಣುಜೀವಿ (ಬ್ಯಾಕ್ಟಿರಿಯಾಜಿಕಲ್) ಮತ್ತು ಕ್ಷಕಿರಣದ (ಎಕ್ಸ್‌ರೇ) ಮತ್ತು ಅಂಥವೇ ಇನ್ನಿತರ ಪರೀಕ್ಷೆಗಳಿಗೆ ತಗುಲಿದ ವೆಚ್ಚಗಳನ್ನು ಕೆಳಗಿನವುಗಳ ಬಗ್ಗೆ ವಿವರಗಳನ್ನು ಸೂಚಿಸಿ ತಿಳಿಸಿ.

(ಎ) ಪರೀಕ್ಷೆಗಳನ್ನು ಕೈಗೊಳ್ಳಲಾದ ಆಸ್ಪತ್ರೆ ಅಥವಾ ಪ್ರಯೋಗಾಲಯದ ಹೆಸರು

(ಬಿ) ಅಧಿಕೃತ ವೈದ್ಯಕೀಯ ಸಹಾಯಕರ ಸಲಹೆಯ ಮೇರೆಗೆ ಪರೀಕ್ಷೆಗಳನ್ನು ಕೈಗೊಳ್ಳಲಾಯಿತೇ? ಹಾಗಿದ್ದ ಪಕ್ಷದಲ್ಲಿ, ಅದಕ್ಕೆ ಸಂಬಂಧಪಟ್ಟಂತೆ ಒಂದು ಪ್ರಮಾಣಪತ್ರವನ್ನು ಲಗತ್ತಿಸಬೇಕು

(iii) ಮಾರುಕಟ್ಟೆಯಿಂದ ಖರೀದಿಸಲಾದ ಔಷಧಿಗಳ ಬೆಲೆ, ಔಷಧಿಗಳ ಪಟ್ಟಿ, ನಗದು ರಸೀತಿಗಳು ಮತ್ತು ಅತ್ಯಾವಶ್ಯಕ ಪ್ರಮಾಣಪತ್ರ– ಇವುಗಳನ್ನು ಲಗತ್ತಿಸಬೇಕು.

II. ಆಸ್ಪತ್ರೆಯ ಚಿಕಿತ್ಸೆ

ಆಸ್ಪತ್ರೆಯ ಹೆಸರು:

ಸ್ಥಳಾವಕಾಶಕ್ಕೆ ತಗಲುವ ವೆಚ್ಚವನ್ನು ಪ್ರತ್ಯೇಕವಾಗಿ ಸೂಚಿಸುತ್ತಾ, ಆಸ್ಪತ್ರೆಯಲ್ಲಿ ತೆಗೆದುಕೊಳ್ಳುವ ಚಿಕಿತ್ಸೆಯ ವೆಚ್ಚವನ್ನು ಸೂಚಿಸಿ

(i) ಸ್ಥಳಾವಕಾಶ
ಆಸ್ಪತ್ರೆಯ ವಾರ್ಡಿನಲ್ಲಿ ಅದು ಒಂದು ಪ್ರತ್ಯೇಕ ಕೋಣೆಯೇ ಅಥವಾ ಆ ರೀತಿಯ ಪ್ರತ್ಯೇಕ ಕೋಣೆಯು ಲಭ್ಯವಾಗದ ಸ್ಥಳದಲ್ಲಿ ಸಭಾಧ್ಯಕ್ಷ ಅಥವಾ ಸಭಾಪತಿ, ಉಪ–ಸಭಾಧ್ಯಕ್ಷ ಅಥವಾ ಉಪ–ಸಭಾಪತಿ, ಅಥವಾ ವಿರೋಧ ಪಕ್ಷದ ನಾಯಕರು ಅಥವಾ ಸರ್ಕಾರಿ ಮುಖ್ಯ ಸಚೇತಕರ ಘನತೆಗೆ ಒಪ್ಪುವಂತಹ ಸ್ಥಳಾವಕಾಶವನ್ನು ಒದಗಿಸಲಾಗಿತ್ತೇ?

(ii) ಪಥ್ಯ ಆಹಾರ ಕ್ರಮ

(iii) ಶಸ್ತ್ರಚಿಕಿತ್ಸೆ ಅಥವಾ ವೈದ್ಯಕೀಯ ಉಪಚಾರ ಅಥವಾ ಪ್ರಸೂತಿ

(iv) ರೋಗನಿದಾನ (ಪ್ಯಾಥಲಾಜಿಕಲ್), ಏಕಾಣು ಜೀವಿ (ಬ್ಯಾಕ್ಟಿರಿಯಾಲಾಜಿಲ್) ಮತ್ತು ಕ್ಷ–ಕಿರಣದ (ಎಕ್ಸ್‌ರೇ) ಅಥವಾ ಇದೇ ರೀತಿಯ ಬೇರೆ ಪರೀಕ್ಷೆಗಳನ್ನು ನಡೆಸಿದ ಕೆಳಗಿನವುಗಳ ಬಗ್ಗೆ ವಿವರಗಳನ್ನು ಸೂಚಿಸಿ, ತಿಳಿಸಿ

ಎ. ಈ ಪರೀಕ್ಷೆಗಳನ್ನು ಕೈಗೊಳ್ಳಲಾದ ಆಸ್ಪತ್ರೆಯು ಅಥವಾ ಪ್ರಯೋಗಾಲಯದ ಹೆಸರು

ಬಿ. ಆಸ್ಪತ್ರೆಯಲ್ಲಿ ರೋಗಿಯ ಪರೀಕ್ಷೆಯ ಹೊಣೆವಹಿಸಿಕೊಂಡಿದ್ದ ವೈದ್ಯಾಧಿಕಾರಿಯ ಸಲಹೆಯ ಮೇರೆಗೆ ಪರೀಕ್ಷೆಯನ್ನು ಕೈಗೊಳ್ಳಲಾಯಿತೇ? ಹಾಗಿದ್ದ ಪಕ್ಷದಲ್ಲಿ, ಅದಕ್ಕೆ ಸಂಬಂಧಪಟ್ಟಂತೆ ಪ್ರಮಾಣಪತ್ರವನ್ನು ಲಗತ್ತಿಸಲಾಗಿದೆಯೇ ಎಂಬುದನ್ನು ತಿಳಿಸಿ

(v) ಔಷಧಿಗಳು

(vi) ವಿಶೇಷ ಔಷಧಗಳು
ಔಷಧಿಗಳ ಪಟ್ಟಿ, ನಗದು ರಸೀದಿ ಮತ್ತು ಅತ್ಯಾವಶ್ಯಕ ಪ್ರಮಾಣಪತ್ರ– ಇವುಗಳನ್ನು ಲಗತ್ತಿಸಬೇಕು.

(vii) ಸಾಮಾನ್ಯ ಶುಶ್ರೂಷೆ

(viii) ವಿಶೇಷ ಶುಶ್ರೂಷೆ ಅಂದರೆ, ರೋಗಿಗಳ ಸಲುವಾಗಿ, ವಿಶೇಷವಾಗಿ ನೇಮಕಗೊಂಡಿರುವ ದಾದಿಯರು, ಅವರು ಆಸ್ಪತ್ರೆಯಲ್ಲಿ ರೋಗಿಯ ಶುಶ್ರೂಷೆಯ ಹೊಣೆವಹಿಸಿಕೊಂಡಿದ್ದ ವೈದ್ಯಕೀಯ ಅಧಿಕಾರಿಯ ಸಲಹೆಯ ಮೇರೆಗೆ ನೇಮಕಗೊಂಡಿದ್ದರೇ ಅಥವಾ ಸಭಾಧ್ಯಕ್ಷ/ ಉಪ–ಸಭಾಧ್ಯಕ್ಷ/ ಉಪ–ಸಭಾಪತಿಯ/ ವಿರೋಧ ಪಕ್ಷದ ನಾಯಕರ /ಸರ್ಕಾರದ ಮುಖ್ಯ ಸಚೇತಕರ ಕೋರಿಕೆಯ ಸಲಹೆಯ ಮೇರೆಗೆ ನೇಮಕಗೊಂಡಿದ್ದರೆ ಎಂಬುದನ್ನು ತಿಳಿಸಿ.

ಮೊದಲನೇ ಸಂದರ್ಭ ಆಗಿದ್ದಲ್ಲಿ, ರೋಗಿಯ ಶುಶ್ರೂಷೆಯ ಹೊಣೆವಹಿಸಿಕೊಂಡಿದ್ದ ವೈದ್ಯಾಧಿಕಾರಿಯಿಂದ ಪ್ರಮಾಣಪತ್ರವನ್ನು ಪಡೆದು, ಅದಕ್ಕೆ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಂದ ಮೇಲು ರುಜು ಪಡೆದು ಅದನ್ನು ಲಗತ್ತಿಸಬೇಕು.

(ix) ಆಂಬುಲೆನ್ಸ್ ವೆಚ್ಚಗಳು
(ಎಲ್ಲಿಂದ ಎಲ್ಲಿಯವರೆಗೆ ಪ್ರಯಾಣವನ್ನು ಕೈಗೊಳ್ಳಲಾಯಿತೆಂಬುದನ್ನು ತಿಳಿಸಿ)

(x) ವಿದ್ಯುದ್ದೀಪ, ವಿದ್ಯುತ್ ಫ್ಯಾನ್, ಹೀಟರ್, ಹವಾನಿಯಂತ್ರಣ ವ್ಯವಸ್ಥೆ ಮೊದಲಾದ ಇನ್ನಿತರ ವೆಚ್ಚಗಳು ಸಾಮಾನ್ಯವಾಗಿ ಮೇಲೆ ತಿಳಿಸಿರುವ ಸೌಕರ್ಯಗಳ ಪೈಕಿ ಕೆಲವನ್ನು ಮಾತ್ರ ಎಲ್ಲಾ ರೋಗಿಗಳಿಗೆ ಒದಗಿಸಲಾಗಿತ್ತೇ? ಮತ್ತು ರೋಗಿಗೆ ಆಯ್ಕೆಗೆ ಅವಕಾಶವಿರಲಿಲ್ಲವೇ? ತಿಳಿಸಿ

III. **ವಿಶೇಷ ತಜ್ಞರೊಂದಿಗೆ ಸಲಹೆ**

ಅಧಿಕೃತ ವೈದ್ಯರಿಂದ ಹೊರತಾಗಿ ಬೇರೆ ಯಾರೇ ವಿಶೇಷ ತಜ್ಞರ ಅಥವಾ ವೈದ್ಯಾಧಿಕಾರಿಯ ಸಲಹೆ ಪಡೆದಿದ್ದರೆ, ಕೆಳಗೆ ಕಾಣಿಸಿರುವ ವಿವರಗಳೊಂದಿಗೆ ಅವರಿಗೆ ನೀಡಿದ ಶುಲ್ಕವನ್ನೂ, ಕೆಳಗಿನವುಗಳ ಬಗ್ಗೆ ವಿವರಗಳನ್ನು ಸೂಚಿಸಿ ತಿಳಿಸಿ.

(ಎ) ಸಲಹೆ ನೀಡಿದ ವಿಶೇಷ ತಜ್ಞರ ಅಥವಾ ವೈದ್ಯಾಧಿಕಾರಿಯ ಹೆಸರು ಮತ್ತು ಹುದ್ದೆ/ ಅವರು ಯಾವ ಆಸ್ಪತ್ರೆಗೆ ಸೇರಿದವರು

(ಬಿ) ಸಲಹಾ ಭೇಟಿಗಳ ಸಂಖ್ಯೆ ಮತ್ತು ದಿನಾಂಕಗಳು ಮತ್ತು ಪ್ರತಿಯೊಂದು ಸಲಹಾ ಭೇಟಿಗೆ ನೀಡಿದ ಶುಲ್ಕ

(ಸಿ) ಸಲಹಾ ಭೇಟಿ ನಡೆದದ್ದು ಆಸ್ಪತ್ರೆಯಲ್ಲಿಯೇ, ವಿಶೇಷ ತಜ್ಞರ ಅಥವಾ ವೈದ್ಯಾಧಿಕಾರಿಯ ಸಲಹಾ ಕೋಣೆಯಲ್ಲಿಯೇ ಅಥವಾ ರೋಗಿಯ ಮನೆಯಲ್ಲಿಯೇ

(ಡಿ) ಅಧಿಕೃತ ವೈದ್ಯಕೀಯ ಸಹಾಯಕರ ಸಲಹೆಯ ಮೇರೆಗೆ ವಿಶೇಷ ತಜ್ಞ ಅಥವಾ ವೈದ್ಯಾಧಿಕಾರಿಯವರ ಸಲಹೆ ಪಡೆಯಲಾಯಿತೇ? ಈ ಬಗ್ಗೆ ಕರ್ನಾಟಕ ವೈದ್ಯಕೀಯ ಸೇವೆಗಳ ನಿರ್ದೇಶಕರ ಪೂರ್ವಾನುಮತಿಯನ್ನು ಪಡೆಯಲಾಗಿತ್ತೇ? ಹಾಗಿದ್ದ ಪಕ್ಷದಲ್ಲಿ ಆ ಬಗ್ಗೆ ಒಂದು ಪ್ರಮಾಣಪತ್ರವನ್ನು ಲಗತ್ತಿಸಬೇಕು

6. ಕೋರಿರುವ ಒಟ್ಟು ಮೊಬಲಗು

7. ಅಡಕಗಳ ಪಟ್ಟಿ

ಸೂಚನೆ:–

(1) ಸಭಾಧ್ಯಕ್ಷ/ ಸಭಾಪತಿ/ ಉಪ–ಸಭಾಧ್ಯಕ್ಷ/ ಉಪ–ಸಭಾಪತಿ/ ವಿರೋಧ ಪಕ್ಷದ ನಾಯಕರು/ ಸರ್ಕಾರಿ ಮುಖ್ಯ ಸಚೇತಕರು– ಇವರಿಗೆ ಅವನ / ಅವಳ ಮನೆಯಲ್ಲಿಯೇ, ಚಿಕಿತ್ಸೆ ನೀಡಿದ್ದರೆ ಕರ್ನಾಟಕ ವಿಧಾನಮಂಡಲದ (ಪ್ರಿವೈಡಿಂಗ್ ಅಧಿಕಾರಿಗಳು) ವೈದ್ಯಕೀಯ ನೆರವು ನಿಯಮಗಳು, 1959ರ ನಿಯಮ 5(1) (ii)ರ ನಿಯಮದ ಪರಂತುಕದ ಮೇರೆಗೆ ಅಂದೇ ವೈದ್ಯಕೀಯ ಉಪಚಾರದ ವಿವರಗಳನ್ನು ನೀಡಿ, ಈ ನಿಯಮಗಳ ಅಗತ್ಯಪಡಿಸುವಂತೆ ಅಧಿಕೃತ ವೈದ್ಯಕೀಯ ಸಹಾಯಕರಿಂದ ಪಡೆದ ಪ್ರಮಾಣಪತ್ರವನ್ನು ಲಗತ್ತಿಸಬೇಕು.

(2) ಸರ್ಕಾರಿ ಆಸ್ಪತ್ರೆಯ ಹೊರತಾಗಿ ಬೇರೊಂದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದರೆ, ಆ ಬಗ್ಗೆ ಅಗತ್ಯವಾದ ವಿವರಗಳನ್ನು ಮತ್ತು ಯಾವುದೇ ಸಮೀಪದ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆಯು ಲಭ್ಯವಾಗಲಿಲ್ಲವೆಂಬುದರ ಬಗ್ಗೆ ಅಧಿಕೃತ ವೈದ್ಯಕೀಯ ಚಿಕಿತ್ಸಕನು ಪ್ರಮಾಣಪತ್ರವನ್ನು ನೀಡತಕ್ಕದ್ದು.

ಸಭಾಧ್ಯಕ್ಷ /ಸಭಾಪತಿ/ಉಪ–ಸಭಾಪತಿ/ಉಪ–ಸಭಾಧ್ಯಕ್ಷರು/ವಿರೋಧ ಪಕ್ಷದ ನಾಯಕರು/ಸರ್ಕಾರಿ ಮುಖ್ಯ ಸಚೇತಕರಿಂದ ಸಹಿ ಹಾಕಬೇಕಾದ ಘೋಷಣಾ ಪತ್ರ

ಈ ಅರ್ಜಿಯಲ್ಲಿ ನೀಡಿರುವ ವಿವರಣೆಗಳು ನಾನು ತಿಳಿದಿರುವಷ್ಟರ ಮಟ್ಟಿಗೆ ಮತ್ತು ನಂಬುವಷ್ಟರ ಮಟ್ಟಿಗೆ ಸತ್ಯವಾದುದೆಂದು ಹಾಗೂ ಯಾವ ವ್ಯಕ್ತಿಯ ಸಲುವಾಗಿ ವೈದ್ಯಕೀಯ ವೆಚ್ಚವನ್ನು ವಹಿಸಲಾಯಿತೋ ಆ ವ್ಯಕ್ತಿಯು ಸಂಪೂರ್ಣವಾಗಿ ನನ್ನ ಮೇಲೆಯೇ ಅವಲಂಬಿತನಾಗಿದ್ದಾನೆಂದೂ ಮತ್ತು ನನ್ನ ಜೊತೆಯಲ್ಲಿಯೇ ವಾಸಿಸುತ್ತಿರುವುದಾಗಿಯೂ ನಾನು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ: ––––––––

ಸಭಾಧ್ಯಕ್ಷರು/ ಸಭಾಪತಿ/ ಉಪ–ಸಭಾಧ್ಯಕ್ಷರು/ ಉಪ–ಸಭಾಪತಿ/ ವಿರೋಧ ಪಕ್ಷದ ನಾಯಕರು/ ಸರ್ಕಾರಿ ಮುಖ್ಯ ಸಚೇತಕರ ಸಹಿ

ನಮೂನೆ–ಎ

[ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗದ ರೋಗಿಯ ಸಂಬಂಧದಲ್ಲಿ ಭರ್ತಿ ಮಾಡಬೇಕಾದ ನಮೂನೆ]

ಶ್ರೀಮತಿ/ಶ್ರೀ/ಕುಮಾರಿ–––––––––– ಇವರ ಗಂಡ/ ಹೆಂಡತಿ/ ಮಗ/ ಮಗಳು/ ತಂದೆ/ ತಾಯಿ/ ಸೋದರ/ ಸೋದರಿಯಾದ ಶ್ರೀಮತಿ/ಶ್ರೀ––––––––– ಇವರಿಗೆ ನೀಡಿರುವ ಪ್ರಮಾಣಪತ್ರ.

I. ಡಾ॥ ––––––––––––– ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ:–

(ಎ) ನಾನು ––––––––––– ರೂಪಾಯಿಗಳ (ರೂ. ಅಕ್ಷರಗಳಲ್ಲಿ ––––––––––) ನನ್ನ ಸಲಹಾ ಕೋಣೆಯಲ್ಲಿ/ ರೋಗಿಯ ಮನೆಯಲ್ಲಿ ನೀಡಿದ ––––––––––– ನನ್ನ ಸಲಹಾ ಭೇಟಿಗಾಗಿ ವಿಧಿಸಿರುತ್ತೇನೆ.

(ಬಿ) ––––––– ದಿನಾಂಕದಂದು ನನ್ನ ಸಲಹಾ ಕೋಣೆಯಲ್ಲಿ/ ರೋಗಿಯ ಮನೆಯಲ್ಲಿ ರೋಗಿಗೆ ನಾನು ರಕ್ತನಾಳದೊಳಗೆ/ಸ್ನಾಯುವಿನ ಒಳಗೆ/ ಚರ್ಮದೊಳಗೆ ಚುಚ್ಚುಮದ್ದು ನೀಡಿದ ಪ್ರಯುಕ್ತ ––––––– ರೂಪಾಯಿ (ರೂ. ಅಕ್ಷರಗಳಲ್ಲಿ ––––––––––) ಶುಲ್ಕ ವಿಧಿಸಿದ್ದೇನೆ.

(ಸಿ) ಸೋಂಕುನಿವಾರಕ ಅಥವಾ ರೋಗನಿರೋಧಕ ಉದ್ದೇಶಕ್ಕಾಗಿ ಈ ಚುಚ್ಚುಮದ್ದುಗಳನ್ನು ನೀಡಲಾಗಿದೆ.

(ಡಿ) ––––––––ಆಸ್ಪತ್ರೆಯಲ್ಲಿ/ನನ್ನ ಸಲಹಾ ಕೋಣೆಯಲ್ಲಿ ರೋಗಿಯು ಶುಶ್ರೂಷೆ ಪಡೆದಿದ್ದು, ಈ ಸಂಬಂಧದಲ್ಲಿ ನಾನು ಸೂಚಿಸಿದ, ಈ ಕೆಳಗೆ ಕಾಣಿಸಿರುವ ಔಷಧಗಳು, ರೋಗಿಯು ಗುಣಮುಖನಾಗಲು/ ರೋಗಿಯ ಆರೋಗ್ಯದಲ್ಲಿ ರೋಗವು ತೀವ್ರವಾಗಿ ಉಲ್ಬಣಿಸುವುದನ್ನು ತಡೆಗಟ್ಟಲು ಅಗತ್ಯವಾಗಿದ್ದವು. ––––––– ಆಸ್ಪತ್ರೆಯಲ್ಲಿ ಖಾಸಗಿ ರೋಗಿಗಳಿಗಾಗಿ ಸರಬರಾಜು ಮಾಡಲು ಈ ಔಷಧಿಗಳನ್ನು ದಾಸ್ತಾನು ಮಾಡಿಲ್ಲ ಮತ್ತು ಮೂಲತಃ ಆಹಾರ ಸಾಮಗ್ರಿ, ಪ್ರಸಾಧನ, ಸೋಂಕು ನಿವಾರಕ ತಯಾರಿಕೆಗಳನ್ನು ಇದು ಒಳಗೊಂಡಿರುವುದಿಲ್ಲ.

ಔಷಧಗಳ ಹೆಸರು

ಕ್ರಮ ಸಂಖ್ಯೆ	ಔಷಧಿಯ ಹೆಸರು ಮತ್ತು ಪ್ರಮಾಣ	ಬೆಲೆ ರೂ. ಪೈ
1		
2		
3		
4		
5		
6		
7		
8		
9		
10		

(ಇ) ------- ದಿಂದ ಬಳಲುತ್ತಿರುವ/ ಬಳಲುತ್ತಿದ್ದ ರೋಗಿಯು ದಿನಾಂಕ ----- ದಿಂದ ------- ದವರೆಗೆ ನನ್ನಿಂದ ಶುಶ್ರೂಷೆ ಪಡೆಯುತ್ತಿದ್ದಾರೆಂದು,

(ಎಫ್) ರೋಗಿಯು,

(i) ಸೋಂಕುನಿವಾರಕ ಮತ್ತು ರೋಗನಿರೋಧಕ ಉದ್ದೇಶಗಳಿಗಾಗಿ

(ii) ಸಂತಾನಹರಣ ಚಿಕಿತ್ಸೆಗಾಗಿ

(iii) ಗುಹ್ಯರೋಗ ಮತ್ತು ಮತಿವಿಭ್ರಮೆಗಾಗಿ,– ಈ ಕಾರಣಗಳಿಗಾಗಿ ರೋಗಿಯು ಚಿಕಿತ್ಸೆ ಪಡೆಯುತ್ತಿರಲಿಲ್ಲವೆಂದು,

(ಜಿ) ಆ ರೋಗಿಯು,

(i) ಪ್ರಸೂತಿಪೂರ್ವದ ಅಥವಾ ಪ್ರಸೂತಿ ತರುವಾಯದ ವಾಡಿಕೆಯ ಪರೀಕ್ಷೆಗಾಗಿ ಬಂದವರಲ್ಲವೆಂದು,

(ii) ಕನ್ನಡಕವನ್ನು ಬಳಸುವುದಕ್ಕೆ ಕಣ್ಣಿನ ಪರೀಕ್ಷೆಗಾಗಿ ಬಂದವರಲ್ಲವೆಂದೂ

(ಹೆಚ್) ದಿನಾಂಕ ---------- ದಂದು ನನ್ನ ಸಲಹೆಯ ಮೇರೆಗೆ ಸರ್ಕಾರಿ ಆಸ್ಪತ್ರೆ/ ಪ್ರಯೋಗಾಲಯವಾದ ------- ದಲ್ಲಿ ಕೈಗೊಳ್ಳಲಾದ, ಅಗತ್ಯವಿರುವ ಕ್ಷ-ಕಿರಣ ಪರೀಕ್ಷೆ ಮತ್ತು ಪ್ರಯೋಗಾಲಯ ಪರೀಕ್ಷೆಗಳಿಗೆ -------- ರೂ. ವೆಚ್ಚ ಮಾಡುವುದು ಅಗತ್ಯವಾಯಿತೆಂದೂ,

(ಐ) ರೋಗಿಯನ್ನು ಆಸ್ಪತ್ರೆಗೆ ದಾಖಲು ಮಾಡುವ ಅಗತ್ಯವಿಲ್ಲ/ ಅಗತ್ಯವಿರಲಿಲ್ಲ/ ಅಗತ್ಯವಿತ್ತು ಎಂದೂ,

(ಜೆ) ನಾನು, ಎ.ಎಂ.ಎ. ದರ್ಜೆಗೆ ಸಮಾನ ದರ್ಜೆಯ/ ಎ.ಎಂ.ಎ. ದರ್ಜೆಗಿಂತ ಕಿರಿಯ ಶ್ರೇಣಿಯ ಹುದ್ದೆಯಲ್ಲಿದ್ದು ಅವರಂತೆಯೇ ------- ಆಸ್ಪತ್ರೆಗೆ ಸೇರಿದವನಾಗಿದ್ದೇನೆಂದು,

(ಕೆ) ಈ ಮುಂದಿನ ಪ್ರಮಾಣಪತ್ರ ಸಂಖ್ಯೆ (ಡಿ)ಯಲ್ಲಿ ------- ಸಂಖ್ಯೆಯ ಬಾಬಿನಲ್ಲಿ ನಮೂದಿಸಲಾಗಿರುವ -------- ಮುಲಾಮು/ ಮಿಶ್ರಣವು ಸರ್ಕಾರಿ ಆಸ್ಪತ್ರೆಯಲ್ಲಿ/ ಪ್ರಯೋಗಾಲಯದಲ್ಲಿ ಲಭ್ಯವಿಲ್ಲದೇ ಇದ್ದುದರಿಂದ, ಅದನ್ನು ಮಾರುಕಟ್ಟೆಯಲ್ಲಿ ಖರೀದಿಸಲು ರೋಗಿಗೆ ಸಲಹೆ ನೀಡಲಾಯಿತೆಂದು,

(ಎಲ್) ಸರಕಾರಿ/ ರಾಜ್ಯ ಸರ್ಕಾರದ ಅಂಗೀಕೃತ/ ಸ್ಥಳೀಯ ಪ್ರಾಧಿಕಾರಗಳು ನಡೆಸುವ/ ಖಾಸಗಿ ಆಸ್ಪತ್ರೆಯಾಗಿರುವ ---------- ಆಸ್ಪತ್ರೆಗೆ ರೋಗಿಯು ಕಾಯಿಲೆಗೊಂಡಿರುವ ಸ್ಥಳಕ್ಕೆ ಹತ್ತಿರದಲ್ಲಿದ್ದುದರಿಂದ ಮತ್ತು ಅಲ್ಲಿ ರೋಗಿಗೆ ಅಗತ್ಯದ ಹಾಗೂ ಸೂಕ್ತ ಚಿಕಿತ್ಸೆ ಸಿಗುವುದೆಂದು ನನ್ನ ಅಭಿಪ್ರಾಯವಾಗಿದ್ದು, ನಾನು ರೋಗಿಗೆ ಆ ಆಸ್ಪತ್ರೆಯನ್ನು ಸೂಚಿಸಿದೆನೆಂದು,

(ಎಂ) ನಾನು ರೋಗಿಯು ಸರ್ಕಾರಿ ಉದ್ಯೋಗದಲ್ಲಿರುವ -------- ದಲ್ಲಿ ವಿಶೇಷ ತಜ್ಞ ಎಂ.ಇ. ಆಗಿರುವ ಡಾ॥ ---------- ಅವರ ಬಳಿ ವಿಶೇಷ ಸಲಹಾ ಭೇಟಿಗಳಿಗಾಗಿ ಕಳುಹಿಸಿದೆನೆಂದು ಮತ್ತು ನಿಯಮಗಳ ಮೇರೆಗೆ ---------- ಅನುಮೋದನೆಗೆ ಅಗತ್ಯವಿದ್ದುದಕ್ಕಾಗಿ ಸಲಹೆ ಮಾಡಿದೆನೆಂದು ಮತ್ತು -------- ದಿನಾಂಕದ ----- ಸಂಖ್ಯೆಯ ಪತ್ರದ ಮೂಲಕ ಅವರ ಅನುಮೋದನೆ ಪಡೆದಿದ್ದೆನೆಂದು ಡಾ॥ -------- ಆದ ನಾನು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವೈದ್ಯಾಧಿಕಾರಿಯ ಸಹಿ ಮತ್ತು ಪದನಾಮ
ಯಾವ ಆಸ್ಪತ್ರೆಗೆ/ ಚಿಕಿತ್ಸಾಲಯಕ್ಕೆ ಸೇರಿದ್ದಾರೆಯೋ
ಅವರ ಹೆಸರು

ಸ್ಥಳ:

ದಿನಾಂಕ:

ನನ್ನಿಂದ ಆಸ್ಪತ್ರೆಯ ಹೆಸರನ್ನು ಕೊಡಲಾಗುವುದು

ವಿ.ಸೂ: ಪ್ರಮಾಣಪತ್ರದಲ್ಲಿ ಅನ್ವಯವಾಗದ್ದನ್ನು ಹೊಡೆದುಹಾಕತಕ್ಕದ್ದು. ಪ್ರಮಾಣಪತ್ರ (ಸಿ) ಯು ಕಡ್ಡಾಯವಾಗಿದೆ ಮತ್ತು ಎಲ್ಲಾ ಸಂದರ್ಭದಲ್ಲಿಯೂ ವೈದ್ಯಾಧಿಕಾರಿಯೇ ಇದನ್ನು ಭರ್ತಿ ಮಾಡತಕ್ಕದ್ದು.

ಈ ಪ್ರಮಾಣಪತ್ರವನ್ನು ಶ್ರೀಮತಿ/ಶ್ರೀ/ಕುಮಾರಿ –––––––– ಹೆಂಡತಿ/ಮಗ/ಮಗಳಾದ ಶ್ರೀ ––––––––– ಇವರಿಗೆ ––––––––ನೀಡಲಾಗಿದೆ.

(1) ಉಪ–ಸಭಾಪತಿ/ಉಪ–ಸಭಾಧ್ಯಕ್ಷರು/ವಿರೋಧ ಪಕ್ಷದ ನಾಯಕರು/ಸರ್ಕಾರಿ ಮುಖ್ಯ ಸಚೇತಕರು

(2) ಅಧಿಸೂಚನೆ ಸಂಖ್ಯೆ:ಎಲ್‌ಡಬ್ಲ್ಯೂ:63:ಎಲ್‌ಜಿಆರ್:79, ದಿನಾಂಕ: 11ನೇ ಜೂನ್ 1992ರ ಮೇರೆಗೆ ಪ್ರತ್ಯಾಯೋಜಿಸಲಾಗಿದೆ.

ನಮೂನೆ– ಬಿ

(ಶೂಶ್ರೂಷೆಗಾಗಿ ಆಸ್ಪತ್ರೆಗೆ ದಾಖಲಾಗಿರುವ ರೋಗಿಗಳ ಬಗ್ಗೆ ಭರ್ತಿ ಮಾಡಬೇಕಾದುದು)

––––––––––––––ಸಭಾಪತಿಯವರಾದ/ಸಭಾಧ್ಯಕ್ಷರಾದ ಶ್ರೀ/ಶ್ರೀಮತಿ –––––––––– ಅವರ ಪತಿ/ಹೆಂಡತಿ/ಮಗ/ಮಗಳು/ತಂದೆ/ತಾಯಿ/ಸೋದರ/ಸೋದರಿಯವರಾದ ಶ್ರೀಮತಿ/ಶ್ರೀ/ಕುಮಾರಿ–––––––––––– ಇವರಿಗೆ ನೀಡಲಾಗಿರುವ ಪ್ರಮಾಣಪತ್ರ.

(ಉಪ–ಸಭಾಪತಿ/ಉಪ–ಸಭಾಧ್ಯಕ್ಷರು/ವಿರೋಧ ಪಕ್ಷದ
ನಾಯಕರು/ಸರ್ಕಾರಿ ಮುಖ್ಯ ಸಚೇತಕರು)

ಭಾಗ–ಎ

(ಆಸ್ಪತ್ರೆಯಲ್ಲಿ ರೋಗಿಯ ಪ್ರಭಾರಿ ವೈದ್ಯಾಧಿಕಾರಿಯು ಸಹಿ ಹಾಕಿರಬೇಕು)

ಡಾ॥–––––––––––––––– ಆದ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ,

(ಎ) ––––––––––(ವೈದ್ಯಾಧಿಕಾರಿಯ ಹೆಸರು) ಎಂಬ ಹೆಸರಿನ ನನ್ನ ಸಲಹೆಯ ಮೇರೆಗೆ ರೋಗಿಯು ಆಸ್ಪತ್ರೆಗೆ ದಾಖಲಾಗಿದ್ದನು.

(ಬಿ) ಮತ್ತು ನಾನು ಸೂಚಿಸಿದ, ಈ ಕೆಳಗೆ ಕಾಣಿಸಿರುವ ಔಷಧಿಗಳು, ರೋಗಿಯು ಗುಣಮುಖನಾಗಲು/ ರೋಗಿಯ ಆರೋಗ್ಯ ಸ್ಥಿತಿ ಉಲ್ಬಣವಾಗದಂತೆ ತೀವ್ರ ಕ್ಷೀಣತೆಯನ್ನು ತಡೆಗಟ್ಟಲು ಅಗತ್ಯವಾಗಿದ್ದವು. –– ––––– ಆಸ್ಪತ್ರೆಯಲ್ಲಿ ಖಾಸಗಿ ರೋಗಿಗಳಿಗೆ ಸರಬರಾಜು ಮಾಡುವ ಔಷಧಿಗಳನ್ನು ದಾಸ್ತಾನು ಮಾಡಿಲ್ಲ ಮತ್ತು ಇವು ಸಮಾನ ಔಷಧಿಯ ಗುಣಗಳುಳ್ಳ ಅಗ್ಗದ ಸಾರವಿರುವ ತಯಾರಿಕೆಗಳನ್ನಾಗಲೀ ಪ್ರಮುಖ ಆಹಾರ, ಪ್ರಸಾಧನ, ಸೋಂಕುನಿವಾರಕ ತಯಾರಿಕೆಗಳನ್ನಾಗಲೀ ಒಳಗೊಂಡಿರುವುದಿಲ್ಲ.

ಕ್ರಮ ಸಂಖ್ಯೆ	**ಔಷಧಿಗಳ ಹೆಸರು**	**ಬೆಲೆ ರೂ. ಪೈ.**
1.		
2.		
3.		
4.		
5.		
6.		

(ಸಿ) ಕೊಟ್ಟಂತಹ ಚುಚ್ಚುಮದ್ದುಗಳು ಸೋಂಕುರಕ್ಷಕ ಅಥವಾ ರೋಗ ನಿರೋಧಕ ಯುರ್ಪೊಸಿಸ್ ಗಳಾಗಿದ್ದವು/ಗಳಾಗಿರಲಿಲ್ಲ.

(ಡಿ) ರೋಗಿಯು –––––––––– ನಿಂದ ನರಳುತ್ತಿದ್ದಾನೆ/ ನರಳುತ್ತಿದ್ದನು ಮತ್ತು ಅವನಿಗೆ–––––– ನಿಂದ ––– ರವರೆಗೆ, ನಾನು ಚಿಕಿತ್ಸೆ ನೀಡುತ್ತಿದ್ದೇನೆ/ ನೀಡುತ್ತಿದ್ದೆನು.

(ಇ) ನನ್ನ ಸಲಹೆಯ ಮೇರೆಗೆ ಕ್ಷಕಿರಣ, ಪ್ರಯೋಗಶಾಲೆ ಪರೀಕ್ಷೆ ಇತ್ಯಾದಿ ಪರೀಕ್ಷೆಗಳನ್ನು ––––– ನಲ್ಲಿ ನಡೆಸಿ (ಆಸ್ಪತ್ರೆ ಅಥವಾ ಪ್ರಯೋಗ ಶಾಲೆಯ ಹೆಸರು) ––––––– ರೂ.ಗಳನ್ನು ವೆಚ್ಚ ಮಾಡುವುದು ಅವಶ್ಯವಾದುದರಿಂದ ವೆಚ್ಚ ಮಾಡಲಾಯಿತು.

(ಎಫ್) ವಿಶೇಷ ತಜ್ಞರ ಸಲಹೆಗಾಗಿ ಡಾ –––––––––––– ಅವರನ್ನು ಕರೆಸಲಾಗಿದ್ದು ಈ ಬಗ್ಗೆ ನಿಯಮಗಳ ಮೇರೆಗೆ ಅಗತ್ಯಪಡಿಸಿರುವ ಕರ್ನಾಟಕದ ವೈದ್ಯಕೀಯ ಸೇವಾ ನಿರ್ದೇಶಕರ ಅನುಮೋದನೆಯನ್ನು ಪಡೆಯಲಾಯಿತು.

ಆಸ್ಪತ್ರೆಯ ಪ್ರಭಾರಿ ವೈದ್ಯಾಧಿಕಾರಿಯ ಸಹಿ ಮತ್ತು ಹುದ್ದೆ

ಭಾಗ–ಬಿ

ರೋಗಿಯು –––––––– ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಮತ್ತು ರೋಗಿಯ ಸ್ಥಿತಿಯು ಉಲ್ಬಣಾವಸ್ಥೆಯಲ್ಲಿದ್ದಾಗ, ಅದನ್ನು ಗುಣಪಡಿಸುವ/ ನಿವಾರಿಸುವ ಸಲುವಾಗಿ ವಿಶೇಷ ದಾದಿಗಳ ಸೇವೆಗಾಗಿ ––– ––– ರೂ.ಗಳನ್ನು ವೆಚ್ಚ ಮಾಡುವುದು ಅವಶ್ಯವಾಗಿದ್ದಿತು ಮತ್ತು ಆ ಬಗ್ಗೆ ಬಿಲ್ಲುಗಳು ಮತ್ತು ರಸೀತಿಗಳನ್ನು ಲಗತ್ತಿಸಿದ್ದೇನೆ ಎಂದು ನಾನು ಪ್ರಮಾಣೀಕರಿಸುತ್ತೇನೆ.

ಆಸ್ಪತ್ರೆಯ ಪ್ರಭಾರಿ ವೈದ್ಯಾಧಿಕಾರಿಯ ಸಹಿ ಮತ್ತು ಹುದ್ದೆ

ಮೇಲು ರುಜು ––––––––––––

ವೈದ್ಯಕೀಯ ಸೂಪರಿಂಟೆಂಡೆಂಟರು

––––––– ಆಸ್ಪತ್ರೆ

––––––––––– ಆಸ್ಪತ್ರೆಯಲ್ಲಿ ರೋಗಿಯು ಚಿಕಿತ್ಸೆ ಪಡೆಯುತ್ತಿದ್ದನು ಮತ್ತು ಒದಗಿಸಲಾದ ಸೌಕರ್ಯಗಳು ರೋಗಿಯ ಚಿಕಿತ್ಸೆಗೆ ಅವಶ್ಯಕವಾದವು ಹಾಗೂ ಕನಿಷ್ಠವಾದವು ಎಂದು ನಾನು ಪ್ರಮಾಣೀಕರಿಸುತ್ತೇನೆ.

ವೈದ್ಯಕೀಯ ಸೂಪರಿಂಟೆಂಡೆಂಟರು

––––––– ಆಸ್ಪತ್ರೆ

ಸ್ಥಳ

ದಿನಾಂಕ

ವಿ.ಸೂ:– ಅನ್ವಯವಾಗದ್ದನ್ನು ಹೊಡೆದು ಹಾಕಿ. (ಡಿ) ಪ್ರಮಾಣಪತ್ರವು ಕಡ್ಡಾಯವಾಗಿದ್ದು ಎಲ್ಲಾ ಸಂದರ್ಭಗಳಲ್ಲಿ ವೈದ್ಯಾಧಿಕಾರಿಯೇ ಇದನ್ನು ಭರ್ತಿ ಮಾಡಬೇಕು].

ಕರ್ನಾಟಕ ವಿಧಾನಮಂಡಲದ (ಸದಸ್ಯರ ದೂರವಾಣಿ) ನಿಯಮಗಳು, 1979

(ಅಧಿಸೂಚನೆ ಸಂ. ಎಲ್‌ಎಡಬ್ಲ್ಯೂ 44 ಎಲ್‌ಜಿಆರ್ 79, ದಿನಾಂಕ 28/31–3–79)

1. ಹೆಸರು ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ವಿಧಾನಮಂಡಲದ (ಸದಸ್ಯರ ದೂರವಾಣಿ) ನಿಯಮಗಳು, 1979 ಎಂದು ಕರೆಯತಕ್ಕದ್ದು.

(2) ಇವು 1978ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು.– ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(i) **'ಸದಸ್ಯ'** ಎಂದರೆ, ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಒಬ್ಬ ಸದಸ್ಯ ಮತ್ತು ಒಬ್ಬ ಸಚಿವ, ಒಬ್ಬ ರಾಜ್ಯ ಸಚಿವ, ಒಬ್ಬ ಉಪ–ಸಚಿವ, ಸಭಾಪತಿ, ಸಭಾಧ್ಯಕ್ಷ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ, ವಿರೋಧ ಪಕ್ಷದ ಒಬ್ಬ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕರನ್ನು ಒಳಗೊಳ್ಳುತ್ತದೆ.

(ii) **'ವಾಸಸ್ಥಾನ'** ಎಂದರೆ, ಸದಸ್ಯನು ಸಾಮಾನ್ಯವಾಗಿ ವಾಸಿಸುವ ಸ್ಥಳ ಮತ್ತು ವಿಧಾನಮಂಡಲದ ಸಭೆಗಳಿಗೆ ಅಥವಾ ಯಾವುದೇ ಸಮಿತಿಗೆ ಹಾಜರಾಗಲು, ಅವನು ಪ್ರಯಾಣಭತ್ಯೆಯನ್ನು ಯಾವ ಸ್ಥಳದಿಂದ ಕ್ಲೇಮು ಮಾಡುತ್ತಾನೋ ಆ ಸ್ಥಳ.

(iii) **'ಕಾರ್ಯದರ್ಶಿ'** ಎಂದರೆ, ರಾಜ್ಯ ವಿಧಾನಮಂಡಲದ ಕಾರ್ಯದರ್ಶಿ ಮತ್ತು ಸಭಾಧ್ಯಕ್ಷರಿಂದ ಮತ್ತು ಸಭಾಪತಿಯವರಿಂದ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂತಹ ವಿಧಾನಮಂಡಲದ ಸಚಿವಾಲಯದ ಅಂಥ ಇತರ ಅಧಿಕಾರಿ.

3. ಅನ್ವಯಿಸುವಿಕೆ.– ಸಚಿವರುಗಳು, ರಾಜ್ಯ ಸಚಿವರುಗಳು, ಉಪಸಚಿವರುಗಳು, ಸಭಾಧ್ಯಕ್ಷ, ಸಭಾಪತಿ, ಉಪ–ಸಭಾಧ್ಯಕ್ಷ, ಉಪ–ಸಭಾಪತಿ, ವಿರೋಧ ಪಕ್ಷದ ನಾಯಕ ಮತ್ತು ಸರ್ಕಾರಿ ಮುಖ್ಯ ಸಚೇತಕರನ್ನೊಳಗೊಂಡು ಎಲ್ಲ ಸದಸ್ಯರಿಗೂ ಈ ನಿಯಮಗಳು ಅನ್ವಯಿಸತಕ್ಕದ್ದು.

4. ದೂರವಾಣಿ ಅಳವಡಿಸುವ ವೆಚ್ಚಗಳು, ಇತ್ಯಾದಿ.– (1) ಅಧಿನಿಯಮದ 12ನೇ ಪ್ರಕರಣದ (ಜಿ) ಖಂಡದ ಮೇರೆಗೆ ಅಳವಡಿಸಿದ ದೂರವಾಣಿಯ ಪ್ರಾರಂಭಿಕ ಠೇವಣಿ, ಅಳವಡಿಸುವಿಕೆ ಮತ್ತು ಬಾಡಿಗೆ ದರಗಳ ವೆಚ್ಚವನ್ನು ಸರ್ಕಾರವೇ ಭರಿಸಿಕೊಳ್ಳತಕ್ಕದ್ದು.

(2) ಸ್ಥಳೀಯ ಕರೆಗಳು ಅಥವಾ ಟ್ರಂಕ್‌ಕಾಲ್‌ಗಳು ಅಥವಾ ಪುನರ್ ಜೋಡಣೆ ವೆಚ್ಚ, ಸ್ಥಳಾಂತರ ಅಥವಾ ಇತರ ಎಲ್ಲ ವೆಚ್ಚಗಳನ್ನು ಪ್ರತಿಯೊಬ್ಬ ಸದಸ್ಯನೂ ವಹಿಸಿಕೊಳ್ಳತಕ್ಕದ್ದು.

5. ವೆಚ್ಚ ತುಂಬಿಕೊಡುವುದು.– (1) 4ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಕಾರ್ಯದರ್ಶಿಯವರಿಗೆ ಸಲ್ಲಿಸಿದ ಒಂದು ಅರ್ಜಿಯ ಮೂಲಕ ದೂರವಾಣಿಯ ಪ್ರಾರಂಭಿಕ ಠೇವಣಿ ಮೊಬಲಗು ಮತ್ತು ದೂರವಾಣಿ ಅಳವಡಿಕೆ ಮತ್ತು ವೆಚ್ಚಭರ್ತಿಗೆ ದೂರವಣಿಯ ಬಾಡಿಗೆ ವೆಚ್ಚಗಳನ್ನು ಭರ್ತಿ ಮಾಡಲು ಪ್ರತಿಯೊಬ್ಬ ಸದಸ್ಯನೂ ಅರ್ಹನಾಗಿರತಕ್ಕದ್ದು. ಅಂಥ ಅರ್ಜಿಗೆ ದೂರವಾಣಿಯನ್ನು ಅಳವಡಿಸಿದುದಕ್ಕೆ ಅಥವಾ ಮೊಬಲಗನ್ನು ಸಂದಾಯ ಮಾಡಿದ ರಸೀತಿಯೊಂದಿಗೆ ತ್ರೈಮಾಸಿಕ ಬಾಡಿಗೆಯ ಟೋಕನ್‌ಗಳೊಂದಿಗೆ ಬೇಡಿಕೆ ಟಿಪ್ಪಣಿಯಾಗಲಿ ಅಥವಾ ಸಂದರ್ಭಾನುಸಾರ ಬಿಲ್ಲನ್ನಾಗಲೀ ಲಗತ್ತಿಸಿರತಕ್ಕದ್ದು. ವಿಧಾನಮಂಡಲದ ಸದಸ್ಯರ ದೂರವಾಣಿಯ ವೆಚ್ಚದ ಮೊತ್ತವನ್ನು ಕಾರ್ಯದರ್ಶಿಯವರ ಮೂಲಕ ಚೆಕ್ಕುಗಳ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

ಪರಂತು, ಅಂಥ ವೆಚ್ಚ ಭರ್ತಿಯನ್ನು,–

(ಎ) 1978ರ ಏಪ್ರಿಲ್ 1ರಂದು ಅಥವಾ ಆ ತರುವಾಯ ಅಳವಡಿಸಲಾದ ದೂರವಾಣಿಗಳಾಗಿದ್ದಲ್ಲಿ ದೂರವಾಣಿ ಅಳವಡಿಸಿದ ವೆಚ್ಚಗಳ ಬಗ್ಗೆ;

(ಬಿ) 1978ರ ಏಪ್ರಿಲ್ 1ಕ್ಕಿಂತ ಮೊದಲು ಅಥವಾ ಆ ತರುವಾಯ ಅಳವಡಿಸಲಾದ ದೂರವಾಣಿಗಳ ಬಗ್ಗೆ, ಆದರೆ ಸದರಿ ದಿನಾಂಕದಿಂದ ಮಾತ್ರ ಜಾರಿಗೆ ಬರುವಂಥ ಬಾಡಿಗೆಗಳ ಬಗ್ಗೆ ಅನುಮತಿಸತಕ್ಕದ್ದು.

(2) ಸದಸ್ಯನು ತನ್ನ ವಾಸಸ್ಥಳದಲ್ಲಿ ಅಳವಡಿಸಲಾಗುವ ದೂರವಾಣಿ ಕುರಿತಾದ ಮೊಬಲಗಿನ ವೆಚ್ಚ ಭರ್ತಿಯನ್ನು ವಿಧಾನಸಭಾ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಿ ಅವನ ಪದಾವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಅಥವಾ ಒಂದು ಕ್ರಮ ಪದಾವಧಿಗಿಂತ ಹೆಚ್ಚು ಬಾರಿಗೆ ಅನುಮತಿಸತಕ್ಕದ್ದಲ್ಲ.

KARNATAKA LEGISLATURE SECRETARIAT

Notification No. I/LA/LC Bangalore, dated 1st January 1986

1. Title and Commencement : (1) These rules may be called the Karnataka Legislature Salaries, Pensions and Allowances (Grant of Advance to the Members of Legislature for purchase of Motor Car or Motor Cycle Rules, 1985.

(2) They shall come into force from 1st January 1986.

2. Definition :- In these Rules, unless the context otherwise required.

(i) 'Act' means the Karnataka Legislature Salaries Pnsions and Allowances Act 1956 (Karnataka Act 2 of 1957);

(ii) "Sanctioning Authority" means the Board consisting of the Chairman Legislative Council and the Speaker, Legislative Assembly ;

(iii) "Audit Officer" means the Accountant General, Karnataka, Bangalore ;

(iv) Terms and expressions used in these rules but not defined shall have the same meanings respectively assigned in the Act.

3. Application for grant of Advance:- An application for grant of advance under these rules shall be made in Form-I to the sanctioning Authority.

4. The maximun amount of advance admissible to a Member .- The maximum amount of advance admissible to a member under section 13A shall be Rupees thirty five thousand for purchase of a motor car and rupees eight thousand for purchase of a motor cycle.

5. Repayment.- (1) The advance granted to a member under these rules together with interest thereon shall be repaid in such number of equal monthly instalments not exceeding sixty as the Sanctioning Authority, may be decide in each case. Recovery shall be made by deduction from the salary and other allowances admissible under the Act, to the member. The sanctioning Authority may, if a member desires, permit the recovery to be made in a lesser number of instalments. The recovery of deduction from the salary and other allowances shall commence from the month following that in which the advance is drawn.

(2) Simple interest at such rates as may be fixed by the Government from time to time for similar advances sanctioned to the Government servants shall be charged on advances granted under thse rules. Interest shall be calculated from the date of drawal of advance, on the balances outstanding. The rate fixed at the time of sanction of the advance shall hold good for the entire duration of advance.

(3) If a person ceases to be a member of the Legislature for any reason the amount due towards each monthly instalment and interest thereon may be deducted from the pension payable to him or such person may repay such amount by

remitting in cash in any Government Treasury, and shall produce Treasury challan every month for having so remitted the amount unless where he repaid the entire dues in a Lumpsum and produced receipt therefor.

(4) Every member shall, before selling the motor car or motor cycle purchased under these rules, obtain the prior permission of the Sanctioning Authority except when he upon ceasing to be a member has repaid the entire principal amount and the interest thereon due towards the advance.

(5) Where a moto car or motor cycle is sold before the advance is repaid, the sale proceeds must be applied, so far as may be necessary, towards the repayment of outstanting balance of the advance:

Provided that when the motor cycle is sold before the advance is repaid, the sale proceeds must be applied, so far as may be necessary, towards the repayment of outstanding balance of the advance:

Provided that when the motor car or motor cycle is sold in order to purchase another motor car or motor cycle the Sanctioning Authority may permit a member to apply the sale proceeds of old motor car or old motor cycle towards the purchase of a new motor car or a new motor cycle if,-

(i) the amount outstanding does not exceed the cost of the new car or new motor cycle ;

(ii) the amount outstanding and the interest thereon are being paid regularly at the rate and in such instalments as was fixed at the time of grant of advance; and

(iii) the new car or the new motor cycle so purchased is hypothicated to the Government and is also insured.

(6) A person who ceases to be member and makes default in payment of monthly instalment of the Principle or interest shall on his becoming an insolvent or contravening any f the terms and conditions of the loan, repay at once the whole of the principle amount and the interest there or the balance unpaid.

(7) In the event of death of a member before the recovery of entire dues towards the advances, the legal heirs of such member shall regularly repay the monthly instalments and interest thereon by remitting in cash in any Government Treasury, and shall produce treasury challan every month for having so remitted the amount unless where they repaid the entire due in a slumpsum and produced receipt therefor.

(8) The amount of advance to be recovered by monthly instalments shall be fixed in whole rupee except in the case of last instalment, when the remaining balance including any fraction of rupee shall be recovered.

6. Negotiation for purchase of motor cycle or motor car

(1) member to whom an advance in sanctioned for the purchase of a motor car or motor cycle shall complete his negotiations for the purchase and shall make

final payment for the motor car or motor cycle within one month from the date on which he draws the adances, and failing such completion and payment, the full amount of advance drawn with interest thereon for the month for completion or negotiation may, however, be extended by the Sanctioning Authority in any individual case on merits. An advance will not be admissible when a motor car or motor cycle has already been purchased and paid for in full. In acase in which payment has been made in part the amount of advance will be limited to the balance to be paid as certified by the member.

(2) At the time of drawing the advance the member shall execute an eagreement in Form II and on completing the purchase he shall further execute a mortgage bond in Form III hypothecating the motor car or motor cycle to the Government as security for the advance. The cost price of the motor car or motor cycle shall be entered in the schedule of "Specifications" attached to the mortgage bond.

(3) When an advance is drawn the Sanctioning Authority shall furnish to the Audit Officer, a certificate that the agreement in Form III has been signed by the member drawing the advance and that it has been found to be in order. The Sanctioning Authority shall see that the motor car or motor cycle is purchased within two months from the date on which the adance is drawn or withing such period as may have been specifically allowed in any individual case by the Sanctioning Authority for completion of the negotiation under su-rule (1) and shall submit every mortgage bond, promptly to the Audit Officer for examination before being finally kept for record.

(4) The mortgage bond shall be kept in the safe custody of the Sanctioning Authority. When the advance together with the interest thereon has been fully repaid the bond shall be returned to the member duly cancelled after obtaining a certificate from the Audit officer as to the complete repayment of the advance and the interest thereon.

(5) The motor car or motor cycle purchased with the advance shall be insured against full loss by fires, theft or accident with the General Insurance Corporation of India or any subsidiary company thereto. The insurance policy shall contain a clause by which the Corporation or the Subsidiary Company agrees to pay to the Government instead of the owner any sums payable. In respect of loss or damage to the motor car or motor cycle which is not made good by repaid, reinstatement or replcement. Such insurance should be effected within one month from the date of purchase.

By order and in the name of the Special Board,
G.G. NARAYANAPPA,
Under Secretary,
Karnataka Legislature

KARNATAKA LEGISLATIVE ASSEMBLEY SECRETARIAT

NOTIFICATION

NO.KLAS/Acts-1/35/MCA/2023, Bangalore, Dated: 30th August 2023

*****

In exercise of the powers conferred by sub-section(3) of section 15 read with section 13A of the Karnataka legislature Salaries, pensions and Allowances Act 1956 (Karnataka Act 2 of 1957) the Secretary, Karnataka Legislative Assembly Secretariat with the approval of the Special Board, hereby makes the following rules further to amend the Karnataka Legislature Salaries, Pensions and Allowances (Grant of Advance to the Members of Legislature for purchase of Motor Car or Motor Cycle) Rules, 1985 namely:

1. Short Title and Commencement:
   (1) These rules may be called the Karnataka Legislature Salaries, Pensions and Allowances (Grant of Advance to the Members of Legislature for purchase of Motor Car or Motor Car or Motor Cycle) (Amendment Rules, 2023.
   (2) These shall come into force with effect from the date of publication in the Official Gazette.

2. Amendment of rule 4 of the Karnataka Legislature Salaries, Pensions and Allowances (Grant of Advance to the Members of Legislature for Purchase of Motor Car or Motor Cycle) Rules, 1985

   For the words "Rupees Fifteen lakhs" the words "Rupees Thirty lakhs" shall be substituted:

3. Amendment of rule 5(2) of the Karnataka Legislature Salaries, Pensions and Allowances (Grant of Advance to the Members of legislature for purchase of Motor Car or Motor Cycle) Rules, 1985

   For the words "Simple Interest at such rates as may be fixed by the Government from time to time for similar advances sanctioned to the Government servants shall be charged on advances granted under these rules" shall be substituted by the following words:

   "Simple interest at 3% shall be charged on advances granted under these rules".

By order and in the name of the Special Board,
(M.K. VISHALAKSHI)
Secretary
Karnataka Legislative Assembly Secretariat.

ಕರ್ನಾಟಕ ವಿಧಾನಮಂಡಲ

ನಮೂನೆ –1

(3ನೇ ನಿಯಮ ನೋಡಿ)

ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತಿನ ಸದಸ್ಯರಿಗೆ ಮೋಟಾರು ಕಾರು/ ಮೋಟಾರು ಸೈಕಲ್/ ಸ್ಕೂಟರ್ ಖರೀದಿ ಮುಂಗಡಕ್ಕಾಗಿ ಅರ್ಜಿ ನಮೂನೆ

1. ಅರ್ಜಿದಾರನ ಹೆಸರು (ಸ್ಪಷ್ಟವಾಗಿ)
2. ಅರ್ಜಿದಾರನ ಹುದ್ದೆ
3. ಜಿಲ್ಲಾ ಕೇಂದ್ರ
4. (i) ವೇತನ

   (ii) ಇತರೆ ಭತ್ಯೆಗಳು
5. ಮೋಟಾರು ಕಾರು/ ಮೋಟಾರು ಸೈಕಲ್ಲಿನ ನಿರೀಕ್ಷಿತ ದರ
6. ಅಗತ್ಯವಿರುವ ಮುಂಗಡದ ಮೊತ್ತ
7. ಅವಧಿ ಮುಗಿಯುವ ದಿನಾಂಕ/ ತಿಂಗಳು
8. ಮರುಪಾವತಿಸಲು ಇಚ್ಛಿಸುವ ಮುಂಗಡದ ಕಂತುಗಳ ಸಂಖ್ಯೆ
9. (ಎ) ಹೊಸ ಅಥವಾ ಹಳೆಯ ಕಾರು/ ಮೋಟಾರು ಕಾರು

   (ಬಿ) ನಿಯತವಾದ ಅಥವಾ ಖ್ಯಾತ ಡೀಲರನ ಅಥವಾ ಏಜೆಂಟನನ್ನು ಹೊರತುಪಡಿಸಿ ಇತರ ವ್ಯಕ್ತಿಗಳ ಮೂಲಕ ಮೋಟಾರು ಕಾರು/ ಮೋಟಾರು ಸೈಕಲ್ಲನ್ನು ಖರೀದಿಸುವ ಇಚ್ಛೆ ಇದೆಯೇ?
10. ಯಾವುದಾದರೂ ಮಾತುಕತೆ ಅಥವಾ ಆರಂಭಿಕ ತನಿಖೆಯನ್ನು ನಡೆಸಿದ್ದರೆ, ಮುಂಗಡ ಪಾವತಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಮೋಟಾರು ಕಾರು/ ಮೋಟಾರು ಸೈಕಲ್ಲಿನ ಡೆಲಿವರಿಯನ್ನು ತೆಗೆದುಕೊಳ್ಳತಕ್ಕದ್ದು.
11. (ಎ) ಮೇಲೆ ತಿಳಿಸಿದ ಎಲ್ಲ ಮಾಹಿತಿಯು ಪೂರ್ಣವಾಗಿ ಸತ್ಯವಾದುದೆಂದು ಪ್ರಮಾಣೀಕರಿಸಲಾಗಿದೆ.

    (ಬಿ) ನಾನು ಯಾವ ಕಾರಣದಿಂದಾಗಿ ಮುಂಗಡಕ್ಕೆ ಅರ್ಜಿ ಸಲ್ಲಿಸಿದ್ದೇನೆಯೋ ಆ ಕಾರಣದಿಂದಾಗಿ ಮೋಟಾರು ಕಾರು/ಮೋಟಾರು ಸೈಕಲ್ಲನ್ನು ಖರೀದಿಸುವುದಿಲ್ಲವೆಂದು ಮತ್ತು ಅಂತಿಮವಾಗಿ ನಾನು ಕಾರಿನ ಖರೀದಿಗಾಗಿ ಮಾತುಕತೆಯನ್ನು ಪೂರ್ಣಗೊಳಿಸುತ್ತೇನೆಂದು ಮತ್ತು ಮುಂಗಡ ಹಣವನ್ನು ತೆಗೆದುಕೊಂಡ ದಿನದಿಂದ ಒಂದು ತಿಂಗಳ ಅವಧಿ ಮುಗಿಯುವ ಮೊದಲೆ ಮೋಟಾರು ಕಾರು/ಮೋಟಾರು ಸೈಕಲನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇನೆಂದು ಮತ್ತು ನಿಯಮಗಳಿಗನುಸಾರವಾಗಿ ಜನರಲ್ ಇನ್ಶುರೆನ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಅಥವಾ ಅದರ ಸಹಾಯಕ ಕಂಪನಿಯಲ್ಲಿ ಮೋಟಾರು ಕಾರು/ ಮೋಟಾರು ಸೈಕಲ್‌ಗಾಗಿ ವಿಮೆಯನ್ನು ಮಾಡಿಸುತ್ತೇನೆಂದು ಮತ್ತು ಈ ಮೋಟಾರು ಕಾರು/ಮೋಟಾರು ಸೈಕಲ್‌ನ ಖರೀದಿಗಾಗಿ ಕರ್ನಾಟಕ ವಿಧಾನಮಂಡಲದ ಸದಸ್ಯರಿಗೆ ಮುಂಗಡ ಹಣವನ್ನು ನೀಡುವುದಕ್ಕೆ ಸಂಬಂಧಿಸಿದ ನಿಯಮಗಳಿಗೆ ನಾನು ಬದ್ಧನಾಗಿರುತ್ತೇನೆಂದು ಪ್ರಮಾಣೀಕರಿಸುತ್ತೇನೆ.

ಅರ್ಜಿದಾರರ ಸಹಿ

ನಮೂನೆ–II

[ನಿಯಮ 6(2)ನ್ನು ನೋಡಿ]

ಮೋಟಾರು ವಾಹನ ಖರೀದಿಸುವುದಕ್ಕಾಗಿ ಮುಂಗಡ ಹಣ ಪಡೆಯುವುದಕ್ಕಿಂತ ಮೊದಲು ಬರೆದುಕೊಡಬೇಕಾದ ಒಪ್ಪಂದ ಪತ್ರದ ನಮೂನೆ

ಈ ಒಪ್ಪಂದ ಪತ್ರವನ್ನು ––––– ಇಸ್ವಿಯ––––––– ತಿಂಗಳ––––––– ದಿನದಂದು ಮೊದಲನೆಯ ಪಕ್ಷಕಾರರಾದ ––––––––––(ಇದರಲ್ಲಿ ಇನ್ನು ಮುಂದೆ ಸಾಲಗಾರರೆಂದು ಕರೆಯಲಾಗಿದ್ದು ಈ ಪದವು ಅವನ ವಾರಸುದಾರರು, ಆಡಳಿತಗಾರರು, ಕಾರ್ಯನಿರ್ವಾಹಕರು, ಕಾನೂನು ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ) ಮತ್ತು ಎರಡನೆಯ ಪಕ್ಷಕಾರರಾದ ಕರ್ನಾಟಕದ ರಾಜ್ಯಪಾಲರ (ಇದರಲ್ಲಿ ಇನ್ನು ಮುಂದೆ ಮಂಜೂರಾತಿ ಪ್ರಾಧಿಕಾರ ಎಂದು ಉಲ್ಲೇಖಿಸಲಾಗಿದ್ದ ಈ ಪದವು ಅವನ ಪದದಲ್ಲಿನ ಉತ್ತರಾಧಿಕಾರಿಯನ್ನೊಳಗೊಂಡಿರತಕ್ಕದ್ದು) ನಡುವೆ ಬರೆದುಕೊಡಲಾಗಿದೆ. ಆದಕಾರಣ, ಸಾಲಗಾರನು ಕರ್ನಾಟಕ ವಿಧಾನಮಂಡಲ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಮತ್ತು ಮೋಟಾರು ಸೈಕಲ್‌ನ್ನು ಖರೀದಿಸುವುದಕ್ಕಾಗಿ ವಿಧಾನಮಂಡಲದ ಸದಸ್ಯರುಗಳಿಗೆ ಮುಂಗಡ ನೀಡುವಿಕೆ) ನಿಯಮಗಳು, 1985ರ ಶಾಸಕರುಗಳ ಸ್ಕೂಟರ್ ನಿಯಮಗಳು, 1985ರ ಉಪಬಂಧಗಳ ಅಡಿಯಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದ್ದು, ಈ ಪದವು ತತ್ಕಾಲದಲ್ಲಿ ಜಾರಿಗೆ ಬಂದ ಯಾವುದೇ ತಿದ್ದುಪಡಿಗಳನ್ನು ಒಳಗೊಂಡಿರತಕ್ಕದ್ದು). ಮೋಟಾರು ವಾಹನದ ಖರೀದಿಗಾಗಿ––––––– ರೂ.ಗಳ ಸಾಲಕ್ಕಾಗಿ ಮಂಜೂರಾತಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರಿಂದ ಮತ್ತು ಮಂಜೂರಾತಿ ಪ್ರಾಧಿಕಾರವು, ಸಾಲಗಾರನಿಂದ ಸಂದಾಯ ಮಾಡಬೇಕಾದ ––––––––– ರೂ. ಮೊತ್ತವನ್ನು ಪರಿಗಣಿಸಿ, ಇದಕ್ಕೆ ಪಕ್ಷಕಾರರ ನಡುವೆ ಈ ಮೂಲಕ ಒಪ್ಪಿಕೊಳ್ಳಲಾಗಿದೆ ಎಂದು ಇದರಲ್ಲಿ ಇನ್ನು ಮುಂದೆ ಅಡಕವಾದ ಷರತ್ತುಗಳು ಮತ್ತು ನಿಬಂಧನೆಗಳ ಆಧಾರದ ಮೇಲೆ ಸಾಲಗಾರನಿಗೆ ಸದರಿ ಮೊತ್ತವನ್ನು ಸಾಲವಾಗಿ ನೀಡುವುದಕ್ಕೆ ಒಪ್ಪಿಕೊಂಡಿರುತ್ತದೆ. ಸಾಲಗಾರನು ಮಂಜೂರಾತಿ ಪ್ರಾಧಿಕಾರದೊಂದಿಗೆ ಈ ಮೂಲಕ ಒಪ್ಪಂದ ಮಾಡಿಕೊಂಡಿರುತ್ತಾನೆ.

1) ಸದರಿ ನಿಯಮಗಳಲ್ಲಿ ಉಪಬಂಧಿಸಲಾದಂತೆ ಅವರ ಸಂಬಳ, ನಿವೃತ್ತಿ ವೇತನ ಮತ್ತು ಭತ್ಯೆಗಳಿಂದ ಮಾಸಿಕ ಕಡಿತದ ಮೂಲಕ ಈ ನಿಯಮಗಳಿಗನುಗುಣವಾಗಿ ಲೆಕ್ಕಹಾಕಿ ವಿಧಿಸಬಹುದಾದ ಸದರಿ ಹಣದ ಬಡ್ಡಿ ಮತ್ತು ದಂಡ ರೂಪದ ಬಡ್ಡಿ ಯಾವುದೇ ಇದ್ದಲ್ಲಿ ಅದನ್ನು ಮಂಜೂರಾತಿ ಪ್ರಾಧಿಕಾರಕ್ಕೆ ಸಂದಾಯ ಮಾಡುವುದು ಮತ್ತು ಹಾಗೆ ಕಡಿತಗೊಳಿಸುವುದಕ್ಕೆ ಮಂಜೂರಾತಿ ಪ್ರಾಧಿಕಾರವನ್ನು ಈ ಮೂಲಕ ಅಧಿಕೃತಗೊಳಿಸುವುದು, ಮತ್ತು
2) ಮಂಜೂರಾತಿ ಪ್ರಾಧಿಕಾರವು, ಮೋಟಾರು ಕಾರು ಖರೀದಿಗಾಗಿ ಸದರಿ ಸಾಲದ ಸಂಪೂರ್ಣ ಹಣವನ್ನು ಖರ್ಚು ಮಾಡುವುದಕ್ಕೆ ಸದರಿ ಮೊತ್ತವನ್ನು ಸಂದಾಯ ಮಾಡುವ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ವ್ಯತ್ಯಾಸದ ಹಣವನ್ನು ಮರುಸಂದಾಯ ಮಾಡುವುದಕ್ಕೆ ಸಂದಾಯ ಮಾಡಿದ ವಾಸ್ತವಿಕ ದರವು ಸಾಲಕ್ಕಿಂತ ಕಡಿಮೆಯಿದ್ದರೆ, ಕೂಡಲೇ ಸಂದಾಯ ಮಾಡುವುದು ಮತ್ತು

3) ಈ ಹಿಂದೆ ಹೇಳಲಾದಂತೆ ಸಾಲಗಾರನಿಗೆ ನೀಡಿದ ಸಾಲದ ಹಣಕ್ಕೆ ಬಡ್ಡಿ ಮತ್ತು ದಂಡ ರೂಪದ ಬಡ್ಡಿ, ಯಾವುದೇ ಇದ್ದಲ್ಲಿ, ಈ ನಿಯಮಗಳಲ್ಲಿ ಉಪಬಂಧಿಸಲಾದ ರೀತಿಯಲ್ಲಿ ವಿಧಿಸಬಹುದಾದ ಯಾವುದಾದರೂ ಬಡ್ಡಿ ಅಥವಾ ದಂಡ ರೂಪದ ಬಡ್ಡಿ ಇದ್ದರೆ ಅದಕ್ಕೆ ಭದ್ರತೆಗಾಗಿ ಸದರಿ ಮೋಟಾರ್ ವಾಹನಗಳ ದಾಖಲೆಯನ್ನು ಮಂಜೂರಾತಿ ಪ್ರಾಧಿಕಾರಕ್ಕೆ ಅಡಮಾನವಾಗಿ ಬರೆದುಕೊಡುವುದು. ಕೊನೆಯದಾಗಿ, ಸದರಿ ಮೊತ್ತವನ್ನು ಸಂದಾಯ ಮಾಡಿದ ದಿನಾಂಕದಿಂದ ಒಂದು ತಿಂಗಳಿನೊಳಗೆ ಈ ಹಿಂದೆ ಹೇಳಲಾದಂತೆ ಮೋಟಾರ್ ವಾಹನವನ್ನು ಖರೀದಿಸಿ ಅಡಮಾನ ಇಡದಿದ್ದರೆ ಆಧಾರ ನೀಡತಕ್ಕದ್ದಲ್ಲ ಅಥವಾ ಸಾಲಗಾರನು ಆ ಅವಧಿಯೊಳಗೆ ದಿವಾಳಿಯಾದಲ್ಲಿ ಅಥವಾ ಸದಸ್ಯನಾಗಿರುವುದು ಮುಕ್ತಾಯವಾದಾಗ ಅಥವಾ ಮರಣ ಹೊಂದಿದ್ದಲ್ಲಿ, ಸಾಲ ಮತ್ತು ಬಡ್ಡಿ ಮತ್ತು ಅದರ ಮೇಲೆ ವಿಧಿಸಬಹುದಾದ ದಂಡರೂಪದ ಬಡ್ಡಿ ಯಾವುದಾದರೂ ಇದ್ದಲ್ಲಿ, ಅದು ಬಾಕಿ ಹಣವಾಗಿದ್ದು ಅದನ್ನು ಕೂಡಲೇ ಸಂಪೂರ್ಣ ಸಂದಾಯ ಮಾಡತಕ್ಕದ್ದೆಂದು ಈ ಮೂಲಕ ಒಪ್ಪಿಕೊಂಡು ಘೋಷಿಸುವುದು.

ಸಾಲಗಾರನ ಮತ್ತು ರಾಜ್ಯಪಾಲರಿಗಾಗಿ ಮತ್ತು ಅವರ ಪರವಾಗಿ ------ ರ ಸಾಕ್ಷ್ಯಿಯಾಗಿ ---- ದಿನ ಮತ್ತು ------ವರ್ಷದಂದು ಈ ದಸ್ತಾವೇಜಿಗೆ ಸಹಿ ಹಾಕಿರುತ್ತಾರೆ.

---------- ರ ಸಮ್ಮುಖದಲ್ಲಿ ಸದರಿಯವರು ಸಹಿ ಮಾಡಿರುತ್ತಾರೆ.

---------- ----------

---------- (ಸಾಕ್ಷಿದಾರನ ಸಹಿ) (ಸಾಲಗಾರನ ಸಹಿ ಮತ್ತು ಪದನಾಮ)

---------- ---------- ---------- ರ

ಸಮ್ಮುಖದಲ್ಲಿ ಕರ್ನಾಟಕ ರಾಜ್ಯಪಾಲರಿಗಾಗಿ

ಮತ್ತು ಅವರ ಪರವಾಗಿ ---------- ಸಹಿ ಮಾಡಿರುತ್ತಾರೆ (ಹೆಸರು ಮತ್ತು ಪದನಾಮ)

---------- (ಸಾಕ್ಷಿದಾರನ ಸಹಿ) (ಅಧಿಕಾರಿಯ ಸಹಿ ಮತ್ತು ಪದನಾಮ)

*ಸಾಲಗಾರನ ಹೆಸರು ಮತ್ತು ಪದನಾಮ

ನಮೂನೆ–III

[ನಿಯಮ 6(2)ನ್ನು ನೋಡಿ]

ಮೋಟಾರು ವಾಹನ ಮುಂಗಡಕ್ಕೆ (ಕಾರು ಅಥವಾ ಮೋಟಾರು ಸೈಕಲ್ಲು) ಸಂಬಂಧಿಸಿದ ಅಡಮಾನ ಬಾಂಡಿನ ನಮೂನೆ

ಈ ಕರಾರು ಪತ್ರವನ್ನು ------ ಇಸವಿಯ ------- ತಿಂಗಳ ------ ದಿನಾಂಕದಂದು ಮೊದಲನೆ ಪಕ್ಷಿಕಾರರಾದ ---------- (ಇದರಲ್ಲಿ ಇನ್ನು ಮುಂದೆ 'ಸಾಲಗಾರ' ಎಂದು ಕರೆಯಲಾಗಿದ್ದು, ಈ ಪದವು ವಾರಸುದಾರರು ಆಡಳಿತಾಧಿಕಾರಿಗಳು, ಕಾರ್ಯನಿರ್ವಾಹಕರು ಮತ್ತು ಕಾನೂನು ಪ್ರತಿನಿಧಿಗಳನ್ನು ಒಳಗೊಂಡಿರತಕ್ಕದ್ದು) ಮತ್ತು ಎರಡನೆಯ ಪಕ್ಷಿಕಾರರಾದ ಕರ್ನಾಟಕದ ರಾಜ್ಯಪಾಲರು (ಇದರಲ್ಲಿ ಇನ್ನು ಮುಂದೆ 'ಮಂಜೂರಾತಿ ಪ್ರಾಧಿಕಾರ' ಎಂದು ಕರೆಯಲಾಗಿದ್ದು, ಈ ಪದವು ಆತನ ಪದದಲ್ಲಿನ ಉತ್ತರಾಧಿಕಾರಿಯನ್ನು ಒಳಗೊಂಡಿರತಕ್ಕದ್ದು. ಇವರ ನಡುವೆ ಮಾಡಿಕೊಳ್ಳಲಾಗಿದೆ. ಆದಕಾರಣ, ಸಾಲಗಾರನು, ಮೋಟಾರು ಕಾರು/ ಮೋಟಾರು ಸೈಕಲ್ಲು/ ಸ್ಕೂಟರು ನಿಯಮ, 1985ರ ಮೇರೆಗಿನ ಮತ್ತು ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಮತ್ತು ಮೋಟಾರು ಸೈಕಲ್ಲಿನ ಖರೀದಿಗಾಗಿ ಸದಸ್ಯರಿಗೆ ಮುಂಗಡದ ನೀಡಿಕೆ) ನಿಯಮಗಳು, 1985 (ಇದರಲ್ಲಿ ಇನ್ನು ಮುಂದೆ 'ಸದರಿ ನಿಯಮಗಳೆಂದು' ಉಲ್ಲೇಖಿಸಲಾಗಿದ್ದು, ಈ ಪದವು ತತ್ಕಾಲದಲ್ಲಿ ಜಾರಿಗೆ ಬಂದ ಅದರ ಯಾವುದೇ ತಿದ್ದುಪಡಿಯನ್ನು ಅಥವಾ ಸೇರ್ಪಡೆಯನ್ನು ಒಳಗೊಂಡಿರತಕ್ಕದ್ದು) ನಿಬಂಧನೆಗಳ ಮೇರೆಗೆ ಮೋಟಾರು ಕಾರು/ ಮೋಟಾರು ಸೈಕಲ್ಲಿನ ಖರೀದಿಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಅವರಿಗೆ ರೂಪಾಯಿಗಳ ಮುಂಗಡ ಹಣವನ್ನು ಮಂಜೂರು ಮಾಡಲಾಗಿದೆ. ಮತ್ತು ಇದರಿಂದಾಗಿ, ಅವನು ಸಾಲವಾಗಿ ಪಡೆದ ಮೊತ್ತಕ್ಕೆ ಭದ್ರತೆಯಾಗಿ ಸರ್ಕಾರಕ್ಕೆ ಸದರಿ ಮೋಟಾರು ಕಾರು/ ಮೋಟಾರು ಸೈಕಲನ್ನು ಅಡಮಾನ ಇಡಬೇಕಾಗುತ್ತದೆ ಎಂಬ ಷರತ್ತಿನ ಮೇಲೆ ಮುಂಗಡ ನೀಡಲಾಗಿದೆ ಮತ್ತು ಈ ಹಿಂದೆ ಹೇಳಿದಂತೆ ಸಾಲಗಾರನು, ಹಾಗೆ ಮುಂಗಡವಾಗಿ ಪಡೆದ ಹಣದಿಂದ ಅಥವಾ ಭಾಗಶಃ ಮುಂಗಡವಾಗಿ ಪಡೆದ ಮೊತ್ತದಲ್ಲಿ ಮೋಟಾರು ಕಾರು/ ಮೋಟಾರು ಸೈಕಲನ್ನು ಖರೀದಿಸಿದ್ದು ಅದರ ವಿವರಗಳನ್ನು ಈ ಕೆಳಗೆ ಬರೆದ ಅನುಸೂಚಿಯಲ್ಲಿ ಪುನರ್ ನಿರೂಪಿಸಲಾಗಿದೆ.

ಈಗ, ಗಮನಿಸಲಾದ ಕರಾರು ಪತ್ರವು ಸದರಿ ಒಪ್ಪಂದಕ್ಕೆ ಅನುಸಾರವಾಗಿದೆ ಮತ್ತು ಈ ಹಿಂದೆ ಹೇಳಿದ ಪರ್ಯಾಲೋಚನೆಗಾಗಿ, ಸಾಲಗಾರನು ಈ ಹಿಂದೆ ಹೇಳಿದ --- ರೂ.ಗಳ ಮೊತ್ತವನ್ನು ಪ್ರತಿ ತಿಂಗಳ ಮೊದಲನೇ ದಿನದಂದು ------ ರೂಪಾಯಿಗಳ ಸಮಾನ ಕಂತುಗಳ ಮೂಲಕ ಮಂಜೂರಾತಿ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಮತ್ತು ಸದರಿ ನಿಯಮಗಳಿಗನುಸಾರವಾಗಿ ತತ್ಕಾಲದಲ್ಲಿ ಬಾಕಿ ಉಳಿದಿರುವ ಮತ್ತು ಲೆಕ್ಕ ಹಾಕಲಾದ ಸಂದಾಯ ಮಾಡಬೇಕಾಗಿರುವ ಮೊತ್ತದ ಮೇಲಿನ ಬಡ್ಡಿಯನ್ನು ಸಂದಾಯ ಮಾಡಲು ಒಪ್ಪಿರುತ್ತಾನೆ ಮತ್ತು ಸಾಲಗಾರನು ಸದರಿ ನಿಯಮಗಳ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ತನ್ನ ವೇತನ, ನಿವೃತ್ತಿ ವೇತನಗಳು ಮತ್ತು ಭತ್ಯೆಗಳಿಂದ ಮಾಸಿಕ ಕಡಿತಗಳ ಮೂಲಕ ಅಂಥ ಸಂದಾಯಗಳನ್ನು ಕಡಿತಗೊಳಿಸಬಹುದೆಂದು ಮತ್ತು ಸಾಲಗಾರನು ಮೋಟಾರು ಕಾರು/ ಮೋಟಾರು ಸೈಕಲ್ಲಿನ ದಾಖಲೆಗಳನ್ನು ಮಂಜೂರಾತಿ ಪ್ರಾಧಿಕಾರಕ್ಕೆ ನೀಡಲು ಮತ್ತು ವರ್ಗಾಯಿಸಲು ಒಪ್ಪಿರುತ್ತಾನೆ. ಅದರ ವಿವರಗಳನ್ನು ಸದರಿ

ನಿಯಮಗಳ ಮೂಲಕ ಅಗತ್ಯ ಪಡಿಸಲಾದಂತೆ ಸದರಿ ಮುಂಗಡಕ್ಕೆ ಮತ್ತು ಅದರ ಮೇಲಿನ ಬಡ್ಡಿಗೆ ಭದ್ರತೆಯ ರೂಪದಲ್ಲಿ ಇದರಲ್ಲಿ ಈ ಕೆಳಗೆ ಬರೆದುಕೊಡಲಾದ ಅನುಸೂಚಿಯಲ್ಲಿ ನಿರೂಪಿಸಲಾಗಿದೆ.

ಮತ್ತು ಸಾಲಗಾರನು, ಸದರಿ ಮೋಟಾರು ಕಾರು/ ಸೈಕಲ್ಲಿನ ಸಂಪೂರ್ಣ ಖರೀದಿ ಮೊತ್ತವನ್ನು ಪಾವತಿಸಿರುತ್ತಾನೆಂದು ಮತ್ತು ಇದು ಆತನ ನಿರೂಪಾದಿಕ ಸ್ವತ್ತಾಗಿರುತ್ತದೆಂದು ಮತ್ತು ಸದರಿ ಮುಂಗಡಕ್ಕೆ ಸಂಬಂಧಿಸಿದಂತೆ ಮಂಜೂರಾತಿ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಬಾಕಿ ಹಣವನ್ನು ಸಂದಾಯ ಮಾಡುವವರೆಗೆ ಅದನ್ನು ಮಾರಾಟ, ಅಡಮಾನ ಇಡುವುದಿಲ್ಲವೆಂದು ಈ ಮೂಲಕ ಒಪ್ಪಿರುತ್ತಾನೆ ಮತ್ತು ಘೋಷಿಸಿರುತ್ತಾನೆ ಮತ್ತು ಅಸಲು ಅಥವಾ ಬಡ್ಡಿಯ ಸದರಿ ಕಂತುಗಳೇನಾದರೂ ಅವು ಬಾಕಿ ಉಳಿದ ದಿನದಿಂದ 10 ದಿನಗಳೊಳಗೆ ಈ ಹಿಂದೆ ಹೇಳಲಾದ ರೀತಿಯಲ್ಲಿ ಸಂದಾಯ ಮಾಡದಿದ್ದಲ್ಲಿ ಅಥವಾ ವಸೂಲಿ ಮಾಡದಿದ್ದಲ್ಲಿ ಸಾಲಗಾರನು ಮರಣ ಹೊಂದಿದ್ದಲ್ಲಿ ಅಥವಾ ಯಾವುದೇ ಸಮಯದಲ್ಲಿ ವಿಧಾನಸಭೆ/ ವಿಧಾನ ಪರಿಷತ್ತಿನ ಸದಸ್ಯರಾಗುವುದು ಕೊನೆಗೊಂಡಲ್ಲಿ, ಸದರಿ ಮೋಟಾರು ಕಾರು/ ಮೋಟಾರು ಸೈಕಲ್ ಸ್ವಾಧೀನತೆಯಲ್ಲಿ ಮಾರಾಟ ಮಾಡತಕ್ಕದ್ದಲ್ಲ ಅಥವಾ ಅಡಮಾನ ಇಡತಕ್ಕದ್ದಲ್ಲ ಅಥವಾ ಆಸ್ತಿಯ ಭಾಗವಾಗಿರತಕ್ಕದ್ದಲ್ಲ ಅಥವಾ ದಿವಾಳಿಯಾದರೆ ಅಥವಾ ಆತನ ಸಾಲದಾತರೊಂದಿಗೆ ರಾಜಿ ಅಥವಾ ವ್ಯವಸ್ಥೆ ಮಾಡಿಕೊಂಡಿದ್ದರೆ ಅಥವಾ ಯಾವೊಬ್ಬ ವ್ಯಕ್ತಿಯು, ಸಾಲಗಾರನ ವಿರುದ್ಧ ಯಾವುದೇ ಡಿಕ್ರಿ ಅಥವಾ ತೀರ್ಪಿನ ಚಲಾವಣೆಯ ವ್ಯವಹರಣೆಗಳನ್ನು ತೆಗೆದುಕೊಂಡರೆ, ಈ ಹಿಂದೆ ಲೆಕ್ಕ ಮಾಡಲಾದಂತೆ ಆಗ ಬಾಕಿಯಿರುವ ಮತ್ತು ಸಂದಾಯ ಮಾಡದ ಹಣವನ್ನು ಅದರ ಮೇಲಿನ ಬಡ್ಡಿಯೊಂದಿಗೆ ಸಂಪೂರ್ಣ ಅಸಲು ಮೊತ್ತವನ್ನು ಕೂಡಲೇ ಸಂದಾಯ ಮಾಡತಕ್ಕದ್ದು ಮತ್ತು ಮಂಜೂರಾತಿ ಪ್ರಾಧಿಕಾರವು ಈ ಹಿಂದೆ ಹೇಳಲಾದ ಯಾವುವಾದರೂ ಘಟನೆಗಳು ಸಂಭವಿಸಿದರೆ, ಖಾಸಗಿ ಕರಾರಿನ ಮೇರೆಗೆ ಸಾರ್ವಜನಿಕ ಹರಾಜಿನ ಮೂಲಕ ಸದರಿ ಮೋಟಾರು ಕಾರು/ಮೋಟಾರು ಸೈಕಲನ್ನು ಜಪ್ತಿ ಮಾಡಿ ತನ್ನ ವಶಕ್ಕೆ ತೆಗೆದುಕೊಳ್ಳಬಹುದು ಮತ್ತು ಮಾರಾಟ ಮಾಡಿದ ಹಣದಲ್ಲಿ, ಸದರಿ ಮುಂಗಡ ಹಣವನ್ನು ಮತ್ತು ಸಂದಾಯ ಮಾಡದಿರುವ ಅಥವಾ ಈ ಹಿಂದೆ ಹೇಳಲಾದಂತೆ ಲೆಕ್ಕಹಾಕಲಾದ ಅದರ ಮೇಲಿನ ಬಾಕಿ ಬಡ್ಡಿ ಹಣವನ್ನು ಮತ್ತು ಮಂಜೂರಾತಿ ಪ್ರಾಧಿಕಾರವು ನಿರ್ವಹಣೆ, ರಕ್ಷಣೆಗಾಗಿ ಮತ್ತು ಇನ್ನಿತರ ಉದ್ದೇಶಗಳಿಗಾಗಿ ಭರಿಸಿದ ಅಥವಾ ಮಾಡಿದ ವೆಚ್ಚಗಳು, ಶುಲ್ಕಗಳು, ಖರ್ಚುಗಳು, ಸಂದಾಯಗಳನ್ನು ಇಟ್ಟುಕೊಂಡು, ಉಳಿದ ಹೆಚ್ಚುವರಿ ಮೊತ್ತ ಯಾವುದಾದರೂ ಇದ್ದರೆ ಅದನ್ನು ಸಾಲಗಾರನಿಗೆ, ಆತನ ಕಾರ್ಯನಿರ್ವಾಹಕರಿಗೆ, ಆಡಳಿತಗಾರರಿಗೆ ಅಥವಾ ವೈಯಕ್ತಿಕ ಪ್ರತಿನಿಧಿಗಳಿಗೆ ಸಂದಾಯ ಮಾಡತಕ್ಕದ್ದೆಂದು ಈ ಮೂಲಕ ಒಪ್ಪಿ ಘೋಷಿಸಲಾಗಿದೆ. ಪರಂತು, ಸದರಿ ಮೋಟಾರು ಕಾರು/ಮೋಟಾರು ಸೈಕಲನ್ನು ಮಾರಾಟ ಮಾಡಿದ ಮೇಲೆ ತನ್ನ ಸುಪರ್ದಿಗೆ ತೆಗೆದುಕೊಳ್ಳುವ ಈ ಹಿಂದೆ ಹೇಳಲಾದ ಅಧಿಕಾರವು ಬಾಕಿ ಉಳಿದಿರುವ ಅಸಲು ಹಣವನ್ನು ಮತ್ತು ಬಡ್ಡಿಯನ್ನು ಅಥವಾ ಮೋಟಾರು ಕಾರು/ಮೋಟಾರು ಸೈಕಲನ್ನು ಮಾರಾಟ ಮಾಡಿದ ಸಂದರ್ಭದಲ್ಲಿ, ಮಾರಾಟ ಮಾಡಿದ ಹಣವು ಬಾಕಿ ಉಳಿದ ಹಣಕ್ಕಿಂತ ಕೊರತೆಬಿದ್ದರೆ, ಸದರಿ ಹಣಕ್ಕೆ ಸಂಬಂಧಿಸಿದಂತೆ ಸಾಲಗಾರನನ್ನು ಅಥವಾ ಆತನ ವೈಯಕ್ತಿಕ ಪ್ರತಿನಿಧಿಗಳನ್ನು ಬಳಸಿಕೊಳ್ಳುವುದಕ್ಕೆ ಮಂಜೂರಾತಿ ಪ್ರಾಧಿಕಾರಿಯ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ ಮತ್ತು ಸಾಲಗಾರನು ಮಂಜೂರಾತಿ ಪ್ರಾಧಿಕಾರಕ್ಕೆ ಬಾಕಿ ಉಳಿಯುವವರೆಗೆ ಮತ್ತು ಹಣವನ್ನು ಸಂದಾಯ ಮಾಡುವವರೆಗೆ, ಸಾಲಗಾರನು ಸದರಿ ಮೋಟಾರು ಕಾರು/ಮೋಟಾರು ಸೈಕಲ್‌ಗೆ ಅಗ್ನಿ, ಕಳವು ಅಥವಾ ಅಪಘಾತಗಳಿಂದ ಆಗಬಹುದಾದ ನಷ್ಟ ಅಥವಾ ಹಾನಿಗಾಗಿ ಜನರಲ್ ಇನ್‌ಶೂರೆನ್ಸ್ ಆಫ್ ಕಾರ್ಪೋರೇಷನ್ ಅಥವಾ ಅದರ ಸಹಾಯಕ ಕಂಪನಿಯಲ್ಲಿ ವಿಮೆಯನ್ನು

ಮಾಡಿಸಿ ಅದನ್ನು ನಿರ್ವಹಿಸುತ್ತಾನೆಂದು ಮತ್ತು ಅದನ್ನು ಸದರಿ ಮೋಟಾರು ಕಾರು/ ಮೋಟಾರು ಸೈಕಲ್‌ನ ವಿಮೆಯನ್ನು ಯಾವ ಕಾರ್ಪೋರೇಷನ್ ಅಥವಾ ಕಂಪನಿಯಲ್ಲಿ ಮಾಡಿಸಲಾಗಿದೆಯೋ ಆ ಕಂಪನಿಯು ಮಂಜೂರಾತಿ ಪ್ರಾಧಿಕಾರ ಪಾಲಿಸಿಯ ಬಗ್ಗೆ ಆಸಕ್ತವಾಗಿದೆ ಎಂಬ ನೋಟೀಸನ್ನು, ಸ್ವೀಕರಿಸಿವೆಯೆಂದು ಲೆಕ್ಕಪರಿಶೋಧನಾಧಿಕಾರಿಯ ಮನವರಿಕೆಗಾಗಿ ಸಾಕ್ಷ್ಯವನ್ನು ಮಂಡಿಸುವನೆಂದು ಈ ಮೂಲಕ ಒಪ್ಪಿರುತ್ತಾನೆ ಮತ್ತು ಸಾಲಗಾರನು ಮಂಡಿಸುವನೆಂದು ಈ ಮೂಲಕ ಒಪ್ಪಿರುತ್ತಾನೆ ಮತ್ತು ಸಾಲಗಾರನು ಸದರಿ ಮೋಟಾರುಕಾರು/ಮೋಟಾರು ಸೈಕಲನ್ನು ಅದು ಸಕಾರಣವಾಗಿ ಆಗುವ ಹಾನಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಹಾಳಾಗುವುದಕ್ಕೆ, ಹಾನಿಯಾಗುವುದಕ್ಕೆ ಅಥವಾ ಶಿಥಿಲ ಮಾಡುವುದಕ್ಕೆ ಅವಕಾಶ ನೀಡುವುದಿಲ್ಲವೆಂದು ಮತ್ತು ಸದರಿ ಮೋಟಾರು ಕಾರು/ಮೋಟಾರು ಸೈಕಲ್‌ಗೆ ಯಾವುದೇ ಹಾನಿ ಅಥವಾ ಅಪಘಾತವಾಗಿ ಹಾಳಾದರೆ, ಸಾಲಗಾರನು ಅದನ್ನು ಕೂಡಲೇ ದುರಸ್ಥಿಗೊಳಿಸಿ ಸರಿಪಡಿಸುವನೆಂದು ಈ ಮೂಲಕ ಒಪ್ಪಿಕೊಂಡಿರುತ್ತಾನೆ.

ಅನುಸೂಚಿ

ಮೋಟಾರು ಕಾರು/ ಮೋಟಾರು ಸೈಕಲಿನ ವಿವರ

ತಯಾರು ಮಾಡಿದ ತಯಾರಕರ ಹೆಸರು

ವಿವರ

ಸಿಲಿಂಡರುಗಳ ಸಂಖ್ಯೆ

ಇಂಜಿನ್ನು ಸಂಖ್ಯೆ

ಚಾಸೀಸು ಸಂಖ್ಯೆ

ಅಸಲು ಬೆಲೆ

---------- (ಸಾಲಗಾರರ ಹೆಸರು) ಸದರಿಯವರ ಸಾಕ್ಷಿಯಲ್ಲಿ, ಅವರ ಕೈಯಲ್ಲಿ ವರ್ಷದ ಮೊದಲನೆ ದಿನದ ಮೇಲೆ ಬರೆಯಲಾದವುಗಳು.

ಇವರ ಸಮ್ಮುಖದಲ್ಲಿ ಸದರಿಯವರು ಸಹಿ ಮಾಡಿರುತ್ತಾರೆ.

(1) ---------- ----------

(2) ---------- ----------

ಸಾಕ್ಷಿಗಳ ಸಹಿ ಮತ್ತು ಸಾಲಗಾರರ ಸಹಿ ಮತ್ತು

ಅವರ ಪದನಾಮ ಪದನಾಮ

ಕರ್ನಾಟಕ ವಿಧಾನಮಂಡಲ

ಸಂ. ಕೆಎಲ್ಎಎಸ್/ಅಧಿನಿಯಮಗಳು–I/28/ಅಧಿನಿಯಮ/97–98 ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಅ.ಪೆ.ಸಂ–5074,
ಬೆಂಗಳೂರು–560001, ದಿ: 29–11–98.

ಅಧಿಸೂಚನೆ–2

ಕರ್ನಾಟಕ ವಿಧಾನಮಂಡಲದ ಸಂಬಳಗಳ ಅಧಿನಿಯಮ, 1956 (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 2)ರ 15ನೇ ಪ್ರಕರಣದ ಮೂಲಕ ಪ್ರದತ್ತವಾಗಿ ಅಧಿಕಾರಗಳನ್ನು ಚಲಾಯಿಸಿ, ಕಾರ್ಯದರ್ಶಿಗಳು, ಕರ್ನಾಟಕ ವಿಧಾನಸಭೆ ಇವರು ವಿಶೇಷ ಮಂಡಳಿಯ ಅನುಮೋದನೆಯೊಂದಿಗೆ, ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಅಥವಾ ಮೋಟಾರು ಸೈಕಲಿನ ಖರೀದಿಗಾಗಿ ವಿಧಾನಮಂಡಲದ ಸದಸ್ಯರಿಗೆ ಮುಂಗಡವನ್ನು ನೀಡುವುದು) (ತಿದ್ದುಪಡಿ) ನಿಯಮಗಳು, 1985ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ಈ ಮುಂದಿನ ನಿಯಮಗಳನ್ನು ಮಾಡುವರು, ಅವುಗಳೆಂದರೆ:–

(1) **ಚಿಕ್ಕ ಹೆಸರು ಮತ್ತು ಪ್ರಾರಂಭ:**– (i) ಈ ಅಧಿನಿಯಮವನ್ನು ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಅಥವಾ ಮೋಟಾರು ಸೈಕಲಿನ ಖರೀದಿಗಾಗಿ ವಿಧಾನಮಂಡಲದ ಸದಸ್ಯರಿಗೆ ಮುಂಗಡವನ್ನು ನೀಡುವುದು) ನಿಯಮಗಳು, 1985 ಎಂದು ಕರೆಯತಕ್ಕದ್ದು.

(ii) ಈ ತಕ್ಷಣದಿಂದಲೇ ಅದು ಜಾರಿಗೆ ಬರತಕ್ಕದ್ದು.

(2) **ನಿಯಮ 2ರ ತಿದ್ದುಪಡಿ:**– ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಅಥವಾ ಮೋಟಾರು ಸೈಕಲಿನ ಖರೀದಿಗಾಗಿ ವಿಧಾನಮಂಡಲದ ಸದಸ್ಯರಿಗೆ ಮುಂಗಡವನ್ನು ನೀಡುವುದು) ನಿಯಮ 1985ರ ನಿಯಮ 2ರ ಉಪ–ನಿಯಮ (2)ರಲ್ಲಿ, "ಮಂಜೂರಾತಿ ಪ್ರಾಧಿಕಾರ" ಎಂದರೆ, ಎಂಬ ಪದಗಳ ನಂತರ ಸಭಾಪತಿಗಳು, ವಿಧಾನ ಪರಿಷತ್ತು ಮತ್ತು ಸಭಾಧ್ಯಕ್ಷರು, ವಿಧಾನಸಭೆ ಇವರನ್ನೊಳಗೊಂಡ ಮಂಡಳಿ ಎಂಬ ಪದಗಳಿಗೆ ಬದಲಾಗಿ ಸಂದರ್ಭಾನುಸಾರವಾಗಿ ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

ವಿಶೇಷ ಮಂಡಳಿಯ ಆದೇಶಾನುಸಾರ,

ಯಾಕೂಬ್ ಷರೀಫ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ ಸಚಿವಾಲಯ.

ಕರ್ನಾಟಕ ವಿಧಾನಮಂಡಲ ಸಚಿವಾಲಯ

ವಿಷಯ: ವಿಧಾನಮಂಡಲದ ಸದಸ್ಯರು ಮರಣ ಹೊಂದಿದ ಸಂದರ್ಭದಲ್ಲಿ ಮೋಟಾರು ಕಾರು ಮುಂಗಡವು ಬಾಕಿ ಇದ್ದ ಪ್ರಕರಣದಲ್ಲಿ ಬಾಕಿಯನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ: (1) ಅನಧಿಕೃತ ಆದೇಶ ಟಿಪ್ಪಣಿ ಸಂ: ಅಧಿನಿಯಮಗಳು– I/ ಎಂಸಿಎ/ ಡಬ್ಲ್ಯೂಪಿಐ/ ಎಲ್ಎ–ಎಲ್ಸಿ/96–97, ದಿನಾಂಕ: 5ನೇ ಫೆಬ್ರವರಿ 1997.

(2) ಅನಧಿಕೃತ ಆದೇಶ ಟಿಪ್ಪಣಿ ಸಂ: ಅಧಿನಿಯಮಗಳು– I/ ಎಂಸಿಎ/ ಡಬ್ಲ್ಯೂಪಿಐ/ಎಲ್ಎ–ಎಲ್ಸಿ/96–97, ದಿನಾಂಕ: 2ನೇ ಆಗಸ್ಟ್ 1997.

(3) ಪತ್ರ ಸಂಖ್ಯೆ: ಎಫ್ಡಿ 469–ವೆಚ್ಚ 7–97, ದಿನಾಂಕ: 3ನೇ ಸೆಪ್ಟೆಂಬರ್ 1997

ಪ್ರಸ್ತಾವನೆಗಳು:

ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಮೋಟಾರು ಕಾರು ಮತ್ತು ಮೋಟಾರು ಸೈಕಲ್ಲಿನ ಖರೀದಿಗಾಗಿ ವಿಧಾನಮಂಡಲದ ಸದಸ್ಯರಿಗೆ ಮುಂಗಡ ನೀಡುವಿಕೆ) ನಿಯಮಗಳು, 1985ರ ಉಪಬಂಧಗಳ ಅಡಿಯಲ್ಲಿ, ಕರ್ನಾಟಕ ವಿಧಾನಮಂಡಲದ ಸದಸ್ಯರಿಗೆ ಮೋಟಾರು ಕಾರಿನ ಖರೀದಿಗಾಗಿ ಮೋಟಾರು ಕಾರು ಮುಂಗಡವನ್ನು ನೀಡಿದೆ ಮತ್ತು ಸದರಿ ನಿಯಮಗಳ ಉಪಬಂಧಗಳಿಗನುಸಾರವಾಗಿ ಸಂಬಂಧಪಟ್ಟ ಸದಸ್ಯರುಗಳ ಸಂಬಳದಿಂದ ಬಡ್ಡಿಯೊಂದಿಗೆ ಇದನ್ನು ಕಟಾವು ಮಾಡಿಕೊಳ್ಳಲಾಗುತ್ತಿದೆ.

ಕೆಲವೊಂದು ಪ್ರಕರಣಗಳಲ್ಲಿ, ಗೌರವಾನ್ವಿತ ಸದಸ್ಯರುಗಳ ಮರಣದ ಸಂದರ್ಭದಲ್ಲಿ, ಮೃತ ಸದಸ್ಯರ ಕಾನೂನು ಸಮ್ಮತ ವಾರಸುದಾರರು ಮೃತ ಸದಸ್ಯರುಗಳಿಂದ ತೆಗೆದುಕೊಂಡ ಮೋಟಾರು ಕಾರು ಮುಂಗಡಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಅಸಲು ಮತ್ತು ಅದರ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವಂತೆ ಮಾನ್ಯ ಮಂಡಲಿಯನ್ನು ಕೋರಿರುತ್ತಾರೆ.

ಇದಕ್ಕೆ ಸಂಬಂಧಪಟ್ಟಂತೆ ವಿವಿಧ ರಾಜ್ಯಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಪಂಜಾಬ್ ಮತ್ತು ಮಿಜೋರಾಂ ರಾಜ್ಯಗಳಲ್ಲಿ ಮೋಟಾರು ಕಾರು ಮುಂಗಡವನ್ನು ಪಡೆದ ಸದಸ್ಯರು ಮೃತಪಟ್ಟ ಸಂದರ್ಭದಲ್ಲಿ ಬರಬೇಕಾಗಿರುವ ಬಾಕಿಗಳನ್ನು ಮನ್ನಾ ಮಾಡುವ ಅವಕಾಶವಿದೆ. ಆದ್ದರಿಂದ, 1–2–1996 ರಿಂದ ಜಾರಿಗೆ ಬರುವಂತೆ, ವಿಧಾನಮಂಡಲದ ಸದನಗಳ ತಮ್ಮ ಸದಸ್ಯತ್ವದ ಅವಧಿಯೊಳಗೆ ಸದಸ್ಯರು ಮೃತ ಹೊಂದಿದ ಸಂದರ್ಭದಲ್ಲಿ, ಕರ್ನಾಟಕ ವಿಧಾನಮಂಡಲದ ಸದಸ್ಯರ ಹೆಸರಿನಲ್ಲಿ ಬರಬೇಕಾದ ಮೋಟಾರು ಕಾರು ಮುಂಗಡದ ಬಾಕಿಗಳನ್ನು **"ಮನ್ನಾ"** ಮಾಡುವ ಪ್ರಯೋಜನವನ್ನು ವಿಸ್ತರಿಸುವುದಕ್ಕೆ ಮಾನ್ಯ ಮಂಡಲಿಯು ನಿರ್ಣಯವನ್ನು ತೆಗೆದುಕೊಂಡಿರುತ್ತದೆ.

ಮೇಲ್ಕಂಡ ಪ್ರಸ್ತಾವಗಳಿಗೆ ತನ್ನ ಸಮ್ಮತಿಯನ್ನು ನೀಡುವಂತೆ ಸರ್ಕಾರವು ಆರ್ಥಿಕ ಇಲಾಖೆಯನ್ನು ಕೋರಿತ್ತು. ಆರ್ಥಿಕ ಇಲಾಖೆಯು ಮೇಲ್ಕಂಡ ಉಲ್ಲೇಖ (3)ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿರುತ್ತದೆ.

ಆದೇಶ ಸಂ: ಎಡಿಎಂ– I/99/ಎಸಿಸಿಟಿಎಸ್–I/ಎಂಸಿಎ/97
ಬೆಂಗಳೂರು, ದಿನಾಂಕ: 8ನೇ ಸೆಪ್ಟೆಂಬರ್, 1997

ಮಂಡಳಿಯು, ಈ ವಿಷಯವನ್ನು ದೀರ್ಘವಾಗಿ ಪರಿಶೀಲಿಸಿದ ನಂತರ, 1–2–1996 ರಿಂದ ಜಾರಿಗೆ ಬರುವಂತೆ ಕರ್ನಾಟಕ ವಿಧಾನಮಂಡಲದ ಮಾನ್ಯ ಸದಸ್ಯರು ತಮ್ಮ ಸದಸ್ಯತ್ವದ ಅವಧಿಯಲ್ಲಿ ಮರಣ ಹೊಂದಿದ ಸಂದರ್ಭದಲ್ಲಿ, ಅವರು ತೆಗೆದುಕೊಂಡ ಮೋಟಾರು ಕಾರು ಮುಂಗಡದ ಮೊತ್ತವನ್ನು ಮತ್ತು ಅದರ ಮೇಲಿನ ಬಡ್ಡಿಯನ್ನು ಸೇರಿಸಿ ಮನ್ನಾ ಮಾಡುವುದಕ್ಕೆ ತನ್ನ ಮಂಜೂರಾತಿಯನ್ನು ನೀಡಲು ಅಪೇಕ್ಷಿಸುತ್ತದೆ. ಮೇಲಿನ ಉಪಬಂಧಗಳನ್ನು ಸಂಬಂಧಪಟ್ಟ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಹೊರಡಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಮ್ಮತಿಯೊಂದಿಗೆ ಅದರ ಪತ್ರ ಸಂ:ಎಫ್‌ಡಿ–469/ವೆಚ್ಚ–7–97, ದಿನಾಂಕ 3ನೇ ಸೆಪ್ಟೆಂಬರ್ 1997ರ ಅನ್ವಯ ಹೊರಡಿಸಲಾಗಿದೆ.

ಮಂಡಳಿಯ ಆದೇಶಾನುಸಾರ ಮತ್ತು
ಅದರ ಹೆಸರಿನಲ್ಲಿ,

ಯಾಕೂಬ್ ಷರೀಫ್
ಕಾರ್ಯದರ್ಶಿ
ಕರ್ನಾಟಕ ವಿಧಾನಮಂಡಲ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ಆತಿಥ್ಯ ನೀಡುವ ಬಗ್ಗೆ ಮಾರ್ಗಸೂಚಿಗಳು
ಮತ್ತು
ಕರ್ನಾಟಕ ರಾಜ್ಯದ ಆದ್ಯತಾ ಸೂಚಿಪಟ್ಟಿ

*****

ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯವನ್ನು ನೀಡುವ ಮಾರ್ಗಸೂಚಿಗಳನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 554 ಹೆಚ್‌ಜಿಜಿ 2005, ದಿನಾಂಕ: 22.04.2006ರನ್ವಯ ಹಾಗೂ ಕಡತ ಸಂಖ್ಯೆ: ಸಿಆಸುಇ 38 ಹೆಚ್‌ಇಟಿ 2017, ದಿನಾಂಕ: 07.05.2018 ಮತ್ತು ಸಿಆಸುಇ 106 ಹೆಚ್‌ಜಿಜಿ 2019, ದಿನಾಂಕ: 10.12.2019ರ ಮೂಲಕ ಹೊರಡಿಸಿದೆ. ಕರ್ನಾಟಕ ರಾಜ್ಯದಲ್ಲಿನ ಆದ್ಯತಾಸೂಚಿಯನ್ನು ಆದೇಶ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 1991, ದಿನಾಂಕ: 20.09.1994ರ ಮೂಲಕ ಹೊರಡಿಸಲಾಗಿತ್ತು. ಮುಂದುವರೆದು ಸರ್ಕಾರವು ರಾಜ್ಯಕ್ಕೆ ಭೇಟಿ ನೀಡುವ ಗಣ್ಯರಿಗೆ ಆತಿಥ್ಯವನ್ನು ವಿಸ್ತರಿಸುವ ಸಂಬಂಧದಲ್ಲಿ ಸೇರ್ಪಡೆಗಳನ್ನು ಮಾಡಿದ್ದು, ಅವುಗಳನ್ನು ಸರ್ಕಾರವು ಸೂಚಿಪಟ್ಟಿಯಲ್ಲಿ ಸೇರಿಸಿದೆ. ಅಲ್ಲದೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಗೆ ಮತ್ತಷ್ಟು ಸೇರ್ಪಡೆಗಳನ್ನು ಸೂಕ್ತ ಸ್ಥಾನಗಳಲ್ಲಿ ಅಳವಡಿಸಲಾಗಿದೆ. ಹೀಗಾಗಿ ಕರ್ನಾಟಕದಲ್ಲಿ ರಾಜ್ಯ ಆತಿಥ್ಯವನ್ನು ನೀಡಬೇಕಾಗಿರುವ ಗಣ್ಯ ವ್ಯಕ್ತಿಗಳ ಕ್ರೋಢೀಕೃತ ಪಟ್ಟಿಯನ್ನು ಮತ್ತು ನವೀಕರಿಸಿರುವ ಆದ್ಯತಾ ಸೂಚಿ ಪಟ್ಟಿಯನ್ನು ಮಾಹಿತಿಗಾಗಿ ಪ್ರಕಟಿಸಲಾಗಿದೆ.

<u>ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯ ನೀಡುವ ಕುರಿತು ಮಾರ್ಗಸೂಚಿಗಳು</u>

(I) ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳನ್ನು ಮೂರು ಪ್ರವರ್ಗಗಳಾಗಿ ವರ್ಗೀಕರಿಸಲಾಗಿದೆ, ಎಂದರೆ:–

(A) ರಾಜ್ಯ ಅತಿಥಿಗಳು

(B) ಪಾವತಿ ರಹಿತ ಅತಿಥಿಗಳು ಮತ್ತು

(C) ಪಾವತಿ ಅತಿಥಿಗಳು

A.ರಾಜ್ಯ ಅತಿಥಿಗಳು

(a) ಈ ಮುಂದೆ ಹೇಳಿರುವ ಗಣ್ಯರು, ಅವರು ರಾಜ್ಯಕ್ಕೆ ನೀಡುವ ಭೇಟಿಗಳು ಅಧಿಕೃತವಾಗಿರಲಿ ಅಥವಾ ಅನಧಿಕೃತವಾಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಅವರು ರಾಜ್ಯಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರುಗಳನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು:–

1	ಭಾರತದ ರಾಷ್ಟ್ರಪತಿ
2	ಭಾರತದ ಉಪ ರಾಷ್ಟ್ರಪತಿ
3	ಭಾರತದ ಪ್ರಧಾನಮಂತ್ರಿ
4	ಭಾರತದ ಮುಖ್ಯ ನ್ಯಾಯಮೂರ್ತಿ
5	ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳೂ ಒಳಗೊಂಡಂತೆ ಇತರ ರಾಜ್ಯಗಳ ರಾಜ್ಯಪಾಲರುಗಳು
6	ಭಾರತದ ಮಾಜಿ ರಾಷ್ಟ್ರಪತಿಗಳು
7	ಭಾರತದ ಮಾಜಿ ಉಪ ರಾಷ್ಟ್ರಪತಿಗಳು
8	ಭಾರತದ ಮಾಜಿ ಪ್ರಧಾನಮಂತ್ರಿಗಳು
9	ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು
10	ಕರ್ನಾಟಕದ ಮಾಜಿ ರಾಜ್ಯಪಾಲರುಗಳು
11	ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರುಗಳು
12	ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳು
13	ಇತರ ರಾಜ್ಯಗಳ ಮುಖ್ಯಮಂತ್ರಿಗಳು
14	ಭಾರತ ರತ್ನ ಪ್ರಶಸ್ತಿ ಪುರಸ್ಕೃತರು

ಟಿಪ್ಪಣಿ: ಮೇಲೆ ಹೇಳಿರುವ ಗಣ್ಯ ವ್ಯಕ್ತಿಗಳ ಜೊತೆಯಲ್ಲಿ ಆಗಮಿಸುವ ಅವರ ಕುಟುಂಬದ ಸದಸ್ಯರುಗಳು, ಅವರ ಆಪ್ತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸಹ ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು.

(b) ಈ ಮುಂದೆ ಹೇಳಿರುವ ಗಣ್ಯರು ಅಧಿಕೃತ ಕರ್ತವ್ಯದ ಮೇಲೆ ರಾಜ್ಯಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು.

1	ಲೋಕಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರು
2	ಭಾರತ ಸರ್ಕಾರದ ಸಚಿವ ಸಂಪುಟದ ಸಚಿವರು, ರಾಜ್ಯ ಸಚಿವರು ಮತ್ತು ಉಪಸಚಿವರು
3	ಲೋಕಸಭೆಯ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು
4	ರಾಜ್ಯ ಸಭೆಯ ಉಪಸಭಾಪತಿ
5	ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಲೋಕಸಭೆ
6	ಅಧ್ಯಕ್ಷರು, ಅಂದಾಜುಗಳ ಸಮಿತಿ, ಲೋಕಸಭೆ
7	ಅಧ್ಯಕ್ಷರು, ಸಂಸದೀಯ ಸಮಿತಿ / ರಾಜ್ಯಸಭಾ ಮತ್ತು ಲೋಕಸಭಾ ಆಯ್ಕೆ ಸಮಿತಿ

8	ಇತರೆ ರಾಜ್ಯಗಳ ವಿಧಾನ ಪರಿಷತ್ತುಗಳ ಸಭಾಪತಿ ಮತ್ತು ಉಪ ಸಭಾಪತಿ
9	ಇತರೆ ರಾಜ್ಯಗಳ ವಿಧಾನ ಸಭಾಧ್ಯಕ್ಷರು ಮತ್ತು ಉಪ ಸಭಾಧ್ಯಕ್ಷರು
10	ಇತರೆ ರಾಜ್ಯಗಳ ಉಪ ಮುಖ್ಯಮಂತ್ರಿಗಳು
11	ಅಧ್ಯಕ್ಷರು, ಅಣುಶಕ್ತಿ ಆಯೋಗ
12	ಅಧ್ಯಕ್ಷರು ಮತ್ತು ಸದಸ್ಯರು (***), ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ
13	ಅಧ್ಯಕ್ಷರು, **ಉಪ–ಅಧ್ಯಕ್ಷರು ಮತ್ತು ಸದಸ್ಯರು (***)**, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ
14	ಅಧ್ಯಕ್ಷರು, ಉಪ–ಅಧ್ಯಕ್ಷರು ಮತ್ತು ಸದಸ್ಯರು (***), ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ
15	ಅಧ್ಯಕ್ಷರು ಮತ್ತು ಸದಸ್ಯರು (***), ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ
16	ಅಧ್ಯಕ್ಷರ ಮತ್ತು ಸದಸ್ಯರು / ಆಯುಕ್ತರು (***), ಕೇಂದ್ರ ಜಾಗೃತ ಆಯೋಗ
17	ಉಪಾಧ್ಯಕ್ಷರು ಮತ್ತು ಸದಸ್ಯರು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, NITI ಆಯೋಗ, ಭಾರತ ಸರ್ಕಾರ
18	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ
19	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ
20	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಮಹಿಳಾ ಆಯೋಗ
21	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ
22	ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಲೋಕ ಸೇವಾ ಆಯೋಗ
23	ಅಧ್ಯಕ್ಷರು ಮತ್ತು ಸದಸ್ಯರು, ಹಣಕಾಸು ಆಯೋಗ
24	ಅಧ್ಯಕ್ಷರು ಮತ್ತು ಸದಸ್ಯರು, ಕಾರ್ಮಿಕ ಆಯೋಗ
25	ಅಧ್ಯಕ್ಷರು, ಸ್ಪರ್ಧಾ ಅಪೀಲು ನ್ಯಾಯಮಂಡಳಿ, ನವದೆಹಲಿ
26	ಅಧ್ಯಕ್ಷರು, ಸಶಸ್ತ್ರ ಪಡೆಗಳ ನ್ಯಾಯಮಂಡಳಿ, ನವದೆಹಲಿ
27	ಅಧ್ಯಕ್ಷರು, ವಿದ್ಯುಚ್ಛಕ್ತಿ ಅಪೀಲು ನ್ಯಾಯಮಂಡಳಿ, ವಿದ್ಯುಚ್ಛಕ್ತಿ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ
28	ಅಧ್ಯಕ್ಷರು, ಕೃಷ್ಣ ಜಲವಿವಾದ ನ್ಯಾಯ ಮಂಡಳಿ
29	ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಅಪೀಲು ನ್ಯಾಯ ಮಂಡಳಿ
30	ಪೀಠಾಸೀನ ಅಧಿಕಾರಿ, ಸೈಬರ್ ವಿನಿಯಮ ಅಪೀಲು ನ್ಯಾಯ ಮಂಡಳಿ, ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯ
31	ಅಧ್ಯಕ್ಷರು, ಕೇಂದ್ರ ಸಮಾಜ ಕಲ್ಯಾಣ ಮಂಡಳಿ
32	ಅಧ್ಯಕ್ಷರು, ಕೇಂದ್ರ ವಿದ್ಯುತ್‌ಚ್ಛಕ್ತಿ ಪ್ರಾಧಿಕಾರ, ಭಾರತ ಸರ್ಕಾರ, ನವದೆಹಲಿ
33	ಅಧ್ಯಕ್ಷರು ಮತ್ತು **ಸದಸ್ಯರು (***)**, ಕೇಂದ್ರ ಅಧಿಕಾರಯುತ ಸಮಿತಿ
34	ಅಧ್ಯಕ್ಷರು, ಸಿಬ್ಬಂದಿ ಆಯ್ಕೆ ಸಮಿತಿ, ಭಾರತ ಸರ್ಕಾರ, ನವದೆಹಲಿ

35	ಅಧ್ಯಕ್ಷರು, ಅಡ್ವಾನ್ಸ್ ರೂಲೊಂಗ್ಸ್ ಪ್ರಾಧಿಕಾರ (ಆದಾಯ ತೆರಿಗೆ)
36	ಉಪಾಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ
37	ಕರ್ನಾಟಕದಲ್ಲಿ ಬರ ಮತ್ತು ಪ್ರವಾಹ ಪರಿಸ್ಥಿತಿಯ ಅಧ್ಯಯನಕ್ಕಾಗಿ ಭೇಟಿ ನೀಡುವ ಕೇಂದ್ರ ಅಧ್ಯಯನ ತಂಡ
38	ಅಧ್ಯಕ್ಷರು, ಭಾರತ ಪತ್ರಿಕಾ ಪರಿಷತ್ತು
39	ಮಹಾ ಲೆಕ್ಕ ಪರಿಶೋಧಕರು, ಭಾರತದ ಲೆಕ್ಕ ನಿಯಂತ್ರಕರು ಮತ್ತು **ಉಪ ನಿಯಂತ್ರಕರು,** ಭಾರತದ ಲೆಕ್ಕ ನಿಯಂತ್ರಕರು (***)
40	ಮುಖ್ಯ ಚುನಾವಣಾ ಆಯುಕ್ತರು, ಚುನಾವಣಾ ಆಯುಕ್ತರುಗಳು, ಹಿರಿಯ ಉಪ ಚುನಾವಣಾ ಆಯುಕ್ತರು ಮತ್ತು ಉಪ ಚುನಾವಣಾ ಆಯುಕ್ತರು (***) ಭಾರತ ಚುನಾವಣಾ ಆಯೋಗ
41	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪ್ರಧಾನ ಪೀಠ, ನವದೆಹಲಿ (***)
42	ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಜಲ ಆಯೋಗ, ಜಲಸಂಪನ್ಮೂಲ ಮಂತ್ರಾಲಯ, ಭಾರತ ಸರ್ಕಾರ (***)
43	ಅಧ್ಯಕ್ಷರು, ಡೈರೆಕ್ಟರ್ ಜನರಲ್ ಮತ್ತು ಮಿಷನ್ ಡೈರೆಕ್ಟರ್, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ, ನವದೆಹಲಿ (***)
44	ಅಧ್ಯಕ್ಷರು ಮತ್ತು ಸದಸ್ಯರು, ಲೋಕಪಾಲ್, ನವದೆಹಲಿ (***)
45	ಅಧ್ಯಕ್ಷರು ಮತ್ತು ಸದಸ್ಯರು, ಕೇಂದ್ರ ಆಡಳಿತ ನ್ಯಾಯಮಂಡಳಿ, ನವದೆಹಲಿ (***)
46	ಅಧ್ಯಕ್ಷರು ಮತ್ತು ಸದಸ್ಯರು, ರೈಲ್ವೆ ಮಂಡಳಿ ಮತ್ತು ಪದನಿಮಿತ್ತ ಕಾರ್ಯದರ್ಶಿ, ಭಾರತ ಸರ್ಕಾರ (***)
47	ಅಧ್ಯಕ್ಷರು, ಖಾದಿ ಮತ್ತು ಗ್ರಾಮೊದ್ಯೋಗ ಆಯೋಗ, ಎಂ.ಎಸ್.ಎಂ.ಇ ಮಂತ್ರಾಲಯ, ಭಾರತ ಸರ್ಕಾರ (***)
48	ಅಧ್ಯಕ್ಷರು, ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ, ಭಾರತ ಸರ್ಕಾರ (***)
49	ಅಧ್ಯಕ್ಷರು, ಭಾರತದ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರ (***)
50	ಅಧ್ಯಕ್ಷರು ಮತ್ತು ಉಪ ಅಧ್ಯಕ್ಷರು, ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ (***)
51	ಅಧ್ಯಕ್ಷರು ಮತ್ತು ಸದಸ್ಯರು, ರಾಷ್ಟ್ರೀಯ ಗ್ರಾಹಕರ ದೂರು ನಿರ್ವಹಣಾ ಆಯೋಗ, ನವದೆಹಲಿ (***)
52	ಅಧ್ಯಕ್ಷರು, ಕಸ್ಟಮ್, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ, ನವದೆಹಲಿ (***)
53	ಕೇಂದ್ರ ಮಾಹಿತಿ ಆಯುಕ್ತರು, ಭಾರತ ಸರ್ಕಾರ (***)
54	ಇತರ ರಾಜ್ಯದ ಮುಖ್ಯ ಮಾಹಿತಿ ಆಯುಕ್ತರು (***)
55	ನ್ಯಾಯಾಧೀಶರು, ಅಂತರ ರಾಷ್ಟ್ರೀಯ ನ್ಯಾಯಾಲಯ (***)
56	ಅಧ್ಯಕ್ಷರು, ಭಾರತದ ಕಾನೂನು ಆಯೋಗ (***)

57	ಕೇಂದ್ರ ಕ್ಯಾಬಿನೆಟ್ ಕಾರ್ಯದರ್ಶಿ ಅಥವಾ ಕೇಂದ್ರ ಕ್ಯಾಬಿನೆಟ್ ಮಂತ್ರಿಗಳ ದರ್ಜೆಗೆ ಸಮಾನ ದರ್ಜೆ ಹೊಂದಿರುವ ಸರ್ಕಾರೇತರರು
58	ಗವರ್ನರ್, ಭಾರತ ರಿಸರ್ವ್ ಬ್ಯಾಂಕ್
59	ಕಾರ್ಯದರ್ಶಿಗಳು, ವಿಶೇಷ ಕಾರ್ಯದರ್ಶಿಗಳು ಮತ್ತು ಹೆಚ್ಚುವರಿ ಕಾರ್ಯದರ್ಶಿಗಳು (***), ಭಾರತ ಸರ್ಕಾರ
60	ಆರ್ಥಿಕ ಆಯುಕ್ತರು, ಪದನಿಮಿತ್ತ ಕಾರ್ಯದರ್ಶಿ, ರೈಲ್ವೆ ಮಂತ್ರಾಲಯ, ಭಾರತ ಸರ್ಕಾರ (***)
61	ಮುಖ್ಯ ರಾಷ್ಟ್ರೀಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಭಾರತ ಸರ್ಕಾರ (***)
62	ನಿರ್ದೇಶಕರು, ರಾಷ್ಟ್ರೀಯ ನ್ಯಾಯಾಂಗ ಅಕಾಡೆಮಿ (***)
63	ನೋಬೆಲ್ ಪ್ರಶಸ್ತಿ ಪುರಸ್ಕೃತರು (***)
64	ಭಾರತದಲ್ಲಿನ ಇತರ ರಾಜ್ಯಗಳ ರಾಜ್ಯ ಚುನಾವಣಾ ಆಯುಕ್ತರುಗಳು
65	ಇತರ ರಾಜ್ಯಗಳ ಲೋಕಾಯುಕ್ತರು / ಉಪ ಲೋಕಾಯುಕ್ತರು
66	ಇತರ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು
67	ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷ ಆದೇಶದ ಮೇರೆಗೆ ಒಂದು ನಿರ್ದಿಷ್ಟ ಭೇಟಿಗಾಗಿ ಆಗಮಿಸುವ ಯಾವುದೇ ಗಣ್ಯ ವ್ಯಕ್ತಿಗಳು

ಟಿಪ್ಪಣಿ: ಕ್ರಮ ಸಂಖ್ಯೆ. 16 *** ಸೇರ್ಪಡೆ ಆದೇಶ ಸಂಖ್ಯೆ: ಸಿಆಸುಇ 112 ಹೆಚ್‌ಜಿಜಿ 2019, ದಿನಾಂಕ:.06.07.2019.
ಕ್ರಮ ಸಂಖ್ಯೆ. 44 *** ಸೇರ್ಪಡೆ ಆದೇಶ ಸಂಖ್ಯೆ: ಸಿಆಸುಇ 72 ಹೆಚ್‌ಜಿಜಿ 2019, ದಿನಾಂಕ:.29.04.2019.
ಕ್ರಮ ಸಂಖ್ಯೆ.12, 14, 15, 33, 39 ರಿಂದ 43, 45 ರಿಂದ 56 ಮತ್ತು 59 ರಿಂದ 63 *** ಸೇರ್ಪಡೆ ಆದೇಶ ಸಂಖ್ಯೆ: ಸಿಆಸುಇ 106 ಹೆಚ್‌ಜಿಜಿ 2019, ದಿನಾಂಕ:24.06.2019
ಕ್ರಮ ಸಂಖ್ಯೆ 13 *** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 68 ಹೆಚ್‌ಜಿಜಿ 2020, ದಿನಾಂಕ: 23.11.2020.

ಟಿಪ್ಪಣಿ (1): ರಾಜ್ಯ ಅತಿಥಿಗಳ ಜೊತೆಯಲ್ಲಿ ಆಗಮಿಸುವ ಅವರ ಕುಟುಂಬದ ಸದಸ್ಯರುಗಳನ್ನು ಸಹ ರಾಜ್ಯ ಅತಿಥಿಗಳೆಂದೇ ಪರಿಗಣಿಸಲಾಗುವುದು. ಕುಟುಂಬ ಎಂಬುದರಲ್ಲಿ ರಾಜ್ಯ ಅತಿಥಿಗಳ ಪತ್ನಿ / ಪತಿ ಮತ್ತು ರಾಜ್ಯ ಅತಿಥಿಗಳೊಂದಿಗೆ ವಾಸಿಸುತ್ತಿರುವ ಮತ್ತು ಅವರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಅವರ ಮಕ್ಕಳು ಹಾಗೂ ದತ್ತು ಮಗ ಮತ್ತು ಮಲ ಮಕ್ಕಳು ಒಳಗೊಳ್ಳುತ್ತಾರೆ.

ಟಿಪ್ಪಣಿ (2): ರಾಜ್ಯ ಅತಿಥಿಗಳು ಜೊತೆಯಲ್ಲಿ ಇಲ್ಲದೆ ರಾಜ್ಯಕ್ಕೆ ಭೇಟಿ ನೀಡುವ ಗಣ್ಯರ ಕುಟುಂಬದ ಸದಸ್ಯರುಗಳು ರಾಜ್ಯ ಆತಿಥ್ಯಕ್ಕೆ ಹಕ್ಕನ್ನು ಹೊಂದಿರುವುದಿಲ್ಲ. ಹಣ ಸಂದಾಯದ ಆಧಾರದ ಮೇಲೆ, ಲಭ್ಯತೆಗೆ ಹಾಗೂ ವಿವೇಚನಾಧಿಕಾರಕ್ಕೆ ಒಳಪಟ್ಟು, ಅವರಿಗೆ ಊಟ ಮತ್ತು ವಸತಿ ಒದಗಿಸಲಾಗುವುದು. ಇದನ್ನು ಹಕ್ಕೆಂದು ಕೋರುವಂತಿಲ್ಲ.

(c) ಈ ಮುಂದಿನ ಗಣ್ಯ ವ್ಯಕ್ತಿಗಳು ರಾಜ್ಯ ಸರಕಾರದ ಆಹ್ವಾನದ ಮೇಲೆ ಆಗಮಿಸಿದ್ದಾಗ ಮಾತ್ರ ಅವರಿಗೆ ರಾಜ್ಯ ಅತಿಥಿಗಳ ಸೌಲಭ್ಯಗಳನ್ನು ಒದಗಿಸಲಾಗುವುದು:

1 ಇತರ ರಾಜ್ಯಗಳ ಸಚಿವರುಗಳು, ರಾಜ್ಯ ಸಚಿವರುಗಳು ಮತ್ತು ಉಪ ಸಚಿವರುಗಳು
2 ಫುಲ್ ಜನರಲ್‌ನ ದರ್ಜೆಯ ಅಥವಾ ತತ್ಸಮಾನ ದರ್ಜೆ ಹೊಂದಿರುವ (ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆ) ಸಿಬ್ಬಂದಿ ಮುಖ್ಯಸ್ಥರು
3 ಕೇಂದ್ರ ಸರ್ಕಾರದ ಮತ್ತು ಇತರ ರಾಜ್ಯಗಳ ವಿಧಾನಸಭೆ / ವಿಧಾನ ಪರಿಷತ್ತುಗಳ ಸರ್ಕಾರಿ ಮುಖ್ಯ ಸಚೇತಕರು ಮತ್ತು ಕೇಂದ್ರದ ಉಪ ಮುಖ್ಯ ಸಚೇತಕರು
4 ಇತರ ರಾಜ್ಯಗಳ ವಿಧಾನಮಂಡಲದ ವಿರೋಧ ಪಕ್ಷಗಳ ನಾಯಕರುಗಳು
5 ಕೇಂದ್ರಾಡಳಿತ ಪ್ರದೇಶಗಳ ಸಚಿವರು ಮತ್ತು ಉಪ ಸಚಿವರು
6 ಇತರ ರಾಜ್ಯಗಳ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳು

ರಾಜ್ಯ ಅತಿಥಿಗಳಿಗೆ ಈ ಮುಂದಿನ ಸೌಲಭ್ಯಗಳನ್ನು ಒದಗಿಸಲಾಗುವುದು

(1) ವಾಸ್ತವ್ಯ

i ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟಿರುವ ಗಣ್ಯವ್ಯಕ್ತಿಗಳಿಗೆ ಸರ್ಕಾರದ ಅತಿಥಿ ಗೃಹಗಳಲ್ಲಿ ಊಟ–ವಸತಿಯ ಅವಕಾಶ ಕಲ್ಪಿಸಲಾಗುವುದು ಮತ್ತು ಸರ್ಕಾರಿ ಅತಿಥಿ ಗೃಹಗಳು ಇಲ್ಲದಿರುವ ಕಡೆಗಳಲ್ಲಿ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಇರುವ ಸರ್ಕ್ಯೂಟ್ ಹೌಸ್‌ಗಳು / ನಿರೀಕ್ಷಣಾ ಮಂದಿರಗಳಲ್ಲಿ (ಯಾವುದೇ ವಿಧದ ಮಾದಕ ಪಾನೀಯಗಳನ್ನು ಹೊರತುಪಡಿಸಿದ ಭೋಜನವನ್ನು) ಅಂಥ ಸೌಲಭ್ಯಗಳನ್ನು ಒದಗಿಸಲಾಗುವುದು.

ii ರಾಜ್ಯ ಅತಿಥಿಗಳಿಗೆ ಬೆಂಗಳೂರಿನಲ್ಲಿ ಕುಮಾರ ಕೃಪ ಅತಿಥಿ ಗೃಹದ ಪ್ರಧಾನ ಕಟ್ಟಡ ಮತ್ತು ಬಾಲಬ್ರೂಯಿ ಅತಿಥಿ ಗೃಹದಲ್ಲಿ ವಾಸ್ತವ್ಯವನ್ನು ಕಲ್ಪಿಸಲಾಗುವುದು.

iii ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ಗಣ್ಯರುಗಳಿಗೆ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿನ ಸರ್ಕಾರಿ ಅತಿಥಿ ಗೃಹಗಳಲ್ಲಿ ಮತ್ತು ಸರ್ಕ್ಯೂಟ್ ಹೌಸ್‌ಗಳಲ್ಲಿ / ನಿರೀಕ್ಷಣಾ ಮಂದಿರಗಳಲ್ಲಿ ಸ್ಥಳಾವಕಾಶವು ಲಭ್ಯವಿಲ್ಲದಿದ್ದರೆ, ಅವರಿಗೆ ಹೋಟೆಲುಗಳಲ್ಲಿ ವಾಸ್ತವ್ಯ ಕಲ್ಪಿಸಲಾಗುವುದು ಮತ್ತು ಊಟ, ವಸತಿ, ಮುಂತಾದ ಎಲ್ಲಾ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸುವುದು.

(2) ಸಾರಿಗೆ

i ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ವ್ಯಕ್ತಿಗಳು ತಮ್ಮ ಅಧಿಕೃತ ಕರ್ತವ್ಯದ ಮೇಲೆ ಭೇಟಿ ನೀಡಿದ ಸಂದರ್ಭದಲ್ಲಿ, ರಾಜ್ಯದಲ್ಲಿ ನಗರ / ಪಟ್ಟಣದ ನಗರ ಪಾಲಿಕೆಯ ವ್ಯಾಪ್ತಿಯೊಳಗೆ ಸ್ಥಳೀಯ ಬಳಕೆಗಾಗಿ ಅವರಿಗೆ ಉಚಿತವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ರಾಜ್ಯದೊಳಗಿನ ಸ್ಥಳಗಳಿಗೆ

ಪ್ರಯಾಣಿಸುವುದಕ್ಕಾಗಿ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಅಧಿಕೃತ ವ್ಯವಹಾರಗಳು ರಾಜ್ಯದ ಗಡಿಯಿಂದ 150 ಕಿ.ಮೀ.ಗಳೊಳಗೆ ಇರುವಂತ ರಾಜ್ಯದ ಹೊರಗಿನ ಇತರ ಸ್ಥಳಗಳಲ್ಲಿ ಇದ್ದರೆ ಅಲ್ಲಿಗೂ ಸಹ ಉಚಿತವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ಭಾರತದ ಮುಖ್ಯ ನ್ಯಾಯಮೂರ್ತಿಗಳು, ಕೇಂದ್ರ ಮಂತ್ರಿಗಳು, ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳ ಸಂದರ್ಭದಲ್ಲಿ, ಅವರ ಭೇಟಿಯು ಕಟ್ಟುನಿಟ್ಟಾಗಿ ಅಧಿಕೃತ ಭೇಟಿಯಾಗಿಲ್ಲದಿದ್ದರೂ ಸಹ ಅವರುಗಳಿಗೆ ರಾಜ್ಯದ ಒಳಗೆ ಮತ್ತು ರಾಜ್ಯದ ಹೊರಗಿರುವ ಸ್ಥಳಗಳಾದ ತಿರುಪತಿ, ಪುಟ್ಟರ್ತಿ ಮತ್ತು ಊಟಿ ಮುಂತಾದ ಸ್ಥಳಗಳಿಗೆ ಹೋಗಿಬರಲು ಉಚಿತವಾಗಿ ಕಾರುಗಳನ್ನು ಒದಗಿಸಲಾಗುವುದು.

ii ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ವ್ಯಕ್ತಿಗಳು ತಮ್ಮ ಖಾಸಗೀ ವ್ಯವಹಾರದ ಸಂಬಂಧದಲ್ಲಿ ರಾಜ್ಯದೊಳಗಿನ ವಿವಿಧ ಸ್ಥಳಗಳಿಗೆ ಮತ್ತು ಹೊರ ರಾಜ್ಯದಲ್ಲಿ ರಾಜ್ಯದ ಗಡಿಯಿಂದ 150 ಕಿ.ಮೀ.ಗಳೊಳಗಿನ ಸ್ಥಳಗಳಿಗೆ ಭೇಟಿ ನೀಡುವಂತಿದ್ದರೆ, ಅದಕ್ಕೆ ಅವರು, ಕಾಲಕಾಲಕ್ಕೆ ಗೊತ್ತುಪಡಿಸುವ ದರಗಳಲ್ಲಿ ವೆಚ್ಚಗಳನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಲಾಗಿದೆ. ರಾಜ್ಯ ಸರ್ಕಾರದ ವಾಹನಗಳು ಲಭ್ಯವಿಲ್ಲದಿದ್ದರೆ, ನೇರ ಸರ್ಕಾರದ ವಾಹನಗಳು ಲಭ್ಯವಿಲ್ಲದಿದ್ದರೆ, ನೇರ ಹಣ ಸಂದಾಯದ ಆಧಾರದ ಮೇಲೆ ಟ್ಯಾಕ್ಸಿಗಳನ್ನು ಒದಗಿಸಲಾಗುವುದು.

(3) ರಾಜ್ಯ ಅತಿಥಿಗಳಿಗೆ ಈ ಮುಂದಿನ ಸೌಲಭ್ಯಗಳನ್ನು ರಾಜ್ಯ ಸರ್ಕಾರವೇ ಉಚಿತವಾಗಿ ಒದಗಿಸುತ್ತದೆ:-

i ರಾಜ್ಯ ಅತಿಥಿಗಳ ಪತ್ರಿಕಾಗೋಷ್ಠಿ ಅಥವಾ ಸಂದರ್ಶನದ ಸಂದರ್ಭದಲ್ಲಿ ಆತಿಥ್ಯ

ii ದಿನ ಪತ್ರಿಕೆಗಳ ಸರಬರಾಜು

iii ಹೂವಿನ ಹಾರಗಳು ಮತ್ತು ಹೂಗುಚ್ಛಗಳು

iv ವೈದ್ಯಕೀಯ ಉಪಚಾರ

v ಲಗೇಜು, ಮುಂತಾದವುಗಳನ್ನು ವಾಹನಗಳಿಗೆ ತುಂಬುವುದಕ್ಕಾಗಿ ಮತ್ತು ಇಳಿಸುವುದಕ್ಕಾಗಿ ಕಾರ್ಮಿಕರ ವೆಚ್ಚಗಳು

vi ರಾಜ್ಯ ಅತಿಥಿಗಳಿಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವಿವಿಐಪಿ ಲಾಂಜ್‌ನಲ್ಲಿ ಉಪಹಾರ

vii ರಾಜ್ಯ ಅತಿಥಿಯು ಮಾಡುವಂತ ಸ್ಥಳೀಯ ದೂರವಾಣಿ ಕರೆಗಳು

(4) ಭದ್ರತಾ ವ್ಯವಸ್ಥೆ

ಪೊಲೀಸರು ಭದ್ರತೆಯನ್ನು ಒದಗಿಸುವರು (ಬೆದರಿಕೆ ಮಾಹಿತಿಯನ್ನು ಅವಲಂಬಿಸಿ ಪೊಲೀಸರು ನಿರ್ಧರಿಸುವರು)

B. ಪಾವತಿ ರಹಿತ ಅತಿಥಿಗಳು

1 ಸಾಂಸ್ಕೃತಿಕ ನಿಯೋಗದವರು, ಪತ್ರಿಕಾ ರಂಗದವರು, ಅಧಿಕೃತ ಅಧ್ಯಯನ ಅಥವಾ ಇತರ ತಂಡಗಳ ಗಣ್ಯ ವ್ಯಕ್ತಿಗಳು ಮತ್ತು ಸರ್ಕಾರದ ಯಾವುದೇ ನಿರ್ದಿಷ್ಟ ವ್ಯವಹಾರಕ್ಕಾಗಿ ವಿಶೇಷವಾಗಿ ಸರ್ಕಾರದಿಂದ ಆಹ್ವಾನಿತರಾದಂಥ ಇತರ ವ್ಯಕ್ತಿಗಳ ಭೇಟಿಯು ಸರ್ಕಾರದ ಒಂದು ನಿರ್ದಿಷ್ಟ ಇಲಾಖೆಗೆ ಅಥವಾ ಸಾಮಾನ್ಯವಾಗಿ ಸರ್ಕಾರಕ್ಕೆ ಪ್ರಯೋಜನಕಾರಿಯಾಗುವಂತಿದ್ದ ಸಂದರ್ಭದಲ್ಲಿ ಮಾತ್ರವೇ ಅವರನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು. ಅಂಥ ಪ್ರವರ್ಗದ ಸಂದರ್ಶಕರನ್ನು ಪಾವತಿ ರಹಿತ ಅತಿಥಿಗಳೆಂದು ಪರಿಗಣಿಸಲಾಗುವುದು. ಒಬ್ಬ ನಿರ್ದಿಷ್ಟ ಅತಿಥಿಯನ್ನು ರಾಜ್ಯ ಅತಿಥಿಯೆಂದು ಪರಿಗಣಿಸಬೇಕೇ ಅಥವಾ ಪಾವತಿ ರಹಿತ ಅತಿಥಿಯೆಂದು ಪರಿಗಣಿಸಬೇಕೇ ಎಂಬ ಪ್ರಶ್ನೆ ಬಂದಾಗ, ಅದನ್ನು ಪ್ರತಿಯೊಂದು ಪ್ರಕರಣಗಳಲ್ಲಿ ಸರ್ಕಾರದ ಸಂಬಂಧಪಟ್ಟ ಕಾರ್ಯದರ್ಶಿಯ ಶಿಫಾರಸ್ಸಿನ ಮೇಲೆ ಮುಖ್ಯ ಕಾರ್ಯದರ್ಶಿಯವರ ಅನುಮೋದನೆ ಪಡೆದು ಸರ್ಕಾರವು ನಿರ್ಣಯಿಸುತ್ತದೆ.

2 ಪಾವತಿ ರಹಿತ ಅತಿಥಿಗಳಿಗೆ ಭದ್ರತಾ ವ್ಯವಸ್ಥೆಯನ್ನು ಮಾಡಲಾಗುವುದಿಲ್ಲ.

3 ಪಾವತಿ ರಹಿತ ಅತಿಥಿಗಳೆಂದು ಪರಿಗಣಿಸಲಾಗಿರುವ ಗಣ್ಯ ವ್ಯಕ್ತಿಗಳಿಗೆ ಈ ಮುಂದಿನ ಸೌಲಭ್ಯಗಳನ್ನು ಒದಗಿಸಲಾಗುವುದು:-

(i) ಉಚಿತ ವಸತಿ ಮತ್ತು ಉಚಿತ ಊಟ (ಯಾವುದೇ ರೀತಿಯ ಮಾದಕ ಪಾನೀಯವನ್ನು ಹೊರತುಪಡಿಸಿ)

(ii) ರಾಜ್ಯ ಅತಿಥಿಗಳಿಗೆ ನೀಡುವ ರೀತಿಯಲ್ಲಿ ಸಂಬಂಧಿಸಿದ ಇಲಾಖೆಯು ಉಚಿತ ಸಾರಿಗೆ ಒದಗಿಸುವುದು

(iii) ವೃತ್ತ ಪತ್ರಿಕೆಗಳ ಸರಬರಾಜು

(iv) ಲಗೇಜು ಮುಂತಾದವುಗಳನ್ನು ವಾಹನಗಳಿಗೆ ತುಂಬುವುದಕ್ಕಾಗಿ ಮತ್ತು ಇಳಿಸುವುದಕ್ಕಾಗಿ ಕೆಲಸಗಾರರಿಗೆ ಕೂಲಿ ವೆಚ್ಚಗಳು

(v) ಪಾವತಿ ರಹಿತ ಅತಿಥಿಯು ಮಾಡುವಂತ ಸ್ಥಳೀಯ ದೂರವಾಣಿ ಕರೆಗಳಿಗೆ ಯಾವುದೇ ಶುಲ್ಕಗಳನ್ನು ಸಂದಾಯ ಮಾಡಬೇಕಾಗಿಲ್ಲ

(vi) ಸರ್ಕಾರದ ನಿರ್ದಿಷ್ಟ ಆದೇಶದ ಮೇರೆಗೆ ಯಾವುದೇ ಇತರ ಸೌಲಭ್ಯಗಳು

C. ಪಾವತಿ ಅತಿಥಿಗಳು

ರಾಜ್ಯ ಅತಿಥಿಗಳು ಮತ್ತು ಪಾವತಿ ರಹಿತ ಅತಿಥಿಗಳು ಮತ್ತು ಪ್ರಸಿದ್ಧ ವ್ಯಕ್ತಿಗಳ ಪ್ರವರ್ಗದ ಅಡಿಯಲ್ಲಿ ಬಾರದ ಸಂದರ್ಶಕರನ್ನು ಪಾವತಿ ಅತಿಥಿಗಳೆಂದು ಪರಿಗಣಿಸಲಾಗುವುದು. ಅಂತಹ ಅತಿಥಿಗಳಿಗೆ ಲಭ್ಯತೆಗೆ ಒಳಪಟ್ಟು, ಗೊತ್ತುಪಡಿಸಿರುವ ದರಗಳ ಸಂದಾಯದ ಮೇಲೆ ವಸತಿ ಮತ್ತು ಊಟದ ಸೌಲಭ್ಯಗಳನ್ನು ಒದಗಿಸಲಾಗುವುದು.

ಈ ಪ್ರವರ್ಗದಡಿಯಲ್ಲಿ ಬರುವಂತಹ ಸಂದರ್ಶಕರು ಮುಂಗಡ ಹಣ ಪಾವತಿಸಬೇಕು ಹಾಗೂ ನಿರ್ಗಮಿಸುವುದಕ್ಕೆ ಮುಂಚೆ ಎಲ್ಲಾ ಬಿಲ್ಲುಗಳನ್ನು ಸಂದಾಯ ಮಾಡಬೇಕು.

ಪಾವತಿ ಸಹಿತ ಅತಿಥಿಗಳ ಸಂದರ್ಭದಲ್ಲಿ, ದೂರವಾಣಿ ಕರೆಗಳ ಶುಲ್ಕಗಳನ್ನು ಅವರಿಂದ ಮುಂಗಡವಾಗಿಯೇ ವಸೂಲು ಮಾಡಿಕೊಳ್ಳಬೇಕು.

(II) ರಾಜ್ಯ ಅತಿಥಿಗಳನ್ನು ಸರ್ಕಾರಿ ವೆಚ್ಚದಲ್ಲಿ ಸತ್ಕರಿಸುವ ಅವಧಿಯು ಸಾಮಾನ್ಯವಾಗಿ ಐದು ದಿನಗಳನ್ನು ಮೀರತಕ್ಕದ್ದಲ್ಲ.

(III) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಸೂಕ್ತ ಮತ್ತು ಸಮರ್ಪಕ ಕಾರಣಗಳಿಗಾಗಿ ಈ ಯಾವುದೇ ನಿಯಮಗಳನ್ನು ವಿನಾಯಿತಿಗೊಳಿಸಬಹುದು.

(ವೀರಭದ್ರ ಹಂಚಿನಾಳ)

ಸರ್ಕಾರದ ಅಪರ ಕಾರ್ಯದರ್ಶಿ,

ಸಿಆಸುಇ (ರಾಜ್ಯ ಶಿಷ್ಟಾಚಾರ)

ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸೂಚಿ

1	ರಾಷ್ಟ್ರಪತಿ
2	ಉಪ ರಾಷ್ಟ್ರಪತಿ
3	ಪ್ರಧಾನಮಂತ್ರಿ
4	ಕರ್ನಾಟಕ ರಾಜ್ಯಪಾಲರು
5	ಮಾಜಿ ರಾಷ್ಟ್ರಪತಿಗಳು
	ಉಪ ಪ್ರಧಾನಮಂತ್ರಿ
6	ಭಾರತದ ಮುಖ್ಯ ನ್ಯಾಯಮೂರ್ತಿ
	ಲೋಕಸಭಾಧ್ಯಕ್ಷರು
7	ಭಾರತರತ್ನ ಪ್ರಶಸ್ತಿ ಪುರಸ್ಕೃತರು
	ಕೇಂದ್ರ ಕ್ಯಾಬಿನೆಟ್ ದರ್ಜೆಯ ಸಚಿವರು
	ಕರ್ನಾಟಕ ಮುಖ್ಯ ಮಂತ್ರಿಗಳು
	NITI ಆಯೋಗದ ಉಪಾಧ್ಯಕ್ಷರು
	ಮಾಜಿ ಪ್ರಧಾನ ಮಂತ್ರಿಗಳು
	ರಾಜ್ಯಸಭೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರು
8	ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಸಂಪೂರ್ಣ ಅಧಿಕಾರವುಳ್ಳ ರಾಯಭಾರಿ ಹಾಗೂ ಹೈಕಮಿಷನರುಗಳು
	ಇತರ ರಾಜ್ಯಗಳ ಮುಖ್ಯ ಮಂತ್ರಿಗಳು
	ಕರ್ನಾಟಕದ ಮಾಜಿ ರಾಜ್ಯಪಾಲರುಗಳು
	ಇತರ ರಾಜ್ಯಗಳ ರಾಜ್ಯಪಾಲರುಗಳು
9	ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು
10	ರಾಜ್ಯಸಭೆಯ ಉಪ ಸಭಾಪತಿ
	ಕರ್ನಾಟಕ ರಾಜ್ಯದ ಉಪ ಮುಖ್ಯ ಮಂತ್ರಿಗಳು
	ಉಪ ಸಭಾಧ್ಯಕ್ಷರು, ಲೋಕಸಭೆ
	NITI ಆಯೋಗದ ಸದಸ್ಯರು
	ಕೇಂದ್ರ ಸರ್ಕಾರದ ರಾಜ್ಯ ಸಚಿವರು
11	ಭಾರತದ ಅಟಾರ್ನಿ ಜನರಲ್
	ಸಚಿವ ಸಂಪುಟ ಕಾರ್ಯದರ್ಶಿ
	ಮುಖ್ಯ ಚುನಾವಣಾ ಆಯುಕ್ತರು
	ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು
12	ಫುಲ್ ಜನರಲ್‌ರ ದರ್ಜೆಯ ಅಥವಾ ತತ್ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿ ಮುಖ್ಯಸ್ಥರುಗಳು
13	ಭಾರತಕ್ಕೆ ಕಳುಹಿಸಲ್ಪಟ್ಟಿರುವ ವಿಶೇಷ ರಾಯಭಾರಿಗಳು ಮತ್ತು ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿ

14	ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು
	ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು
	ಕರ್ನಾಟಕ ಲೋಕಾಯುಕ್ತ
	ಕರ್ನಾಟಕ ವಿಧಾನ ಸಭಾಧ್ಯಕ್ಷರು
14 (ಎ)	**ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (***)**
15	ಕರ್ನಾಟಕದ ಕ್ಯಾಬಿನೆಟ್ ದರ್ಜೆ ಸಚಿವರು
	ಕೇಂದ್ರ ಸರ್ಕಾರದ ಉಪ ಸಚಿವರುಗಳು
	ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳು
	ಕರ್ನಾಟಕದ ಉಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು
	ಕರ್ನಾಟಕ ವಿಧಾನಮಂಡಲದ ವಿರೋಧಪಕ್ಷದ ನಾಯಕರು
	ಬೆಂಗಳೂರಿನ ಮೇಯರ್
16	ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿಯ ಸ್ಥಾನಪನ್ನ ಮುಖ್ಯಸ್ಥರುಗಳು
17	ಅಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ
	ಅಧ್ಯಕ್ಷರು, ಕರ್ನಾಟಕ ಆಡಳಿತ ನ್ಯಾಯಮಂಡಳಿ
	ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ
	ಅಧ್ಯಕ್ಷರು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳ ಆಯೋಗ
	ಅಧ್ಯಕ್ಷರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗ (*)
	ಅಧ್ಯಕ್ಷರು, ಕೇಂದ್ರ ಲೋಕಸೇವಾ ಆಯೋಗ
	ಇತರ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳು
	ಕರ್ನಾಟಕ ಸಹಕಾರ ಚುನಾವಣಾ ಆಯುಕ್ತರು
	ಕರ್ನಾಟಕ ಉಚ್ಚ ನ್ಯಾಯಾಲಯದ ಕಿರಿಯ ನ್ಯಾಯಾಧೀಶರು
	ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (**)
	ಅಧ್ಯಕ್ಷರು, ಕರ್ನಾಟಕ ಲೋಕ ಸೇವಾ ಆಯೋಗ (*)
	ರಾಜ್ಯ ಚುನಾವಣಾ ಆಯುಕ್ತರು
	ಉಪ ಲೋಕಾಯುಕ್ತ, ಕರ್ನಾಟಕ ರಾಜ್ಯ
18	ಇತರ ರಾಜ್ಯಗಳ ಕ್ಯಾಬಿನೆಟ್ ದರ್ಜೆ ಸಚಿವರುಗಳು
	ಅಧ್ಯಕ್ಷರು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ
	ಇತರ ರಾಜ್ಯ ವಿಧಾನ ಮಂಡಲಗಳ ಸಭಾಪತಿಗಳು ಮತ್ತು ಸಭಾಧ್ಯಕ್ಷರು
	ಕರ್ನಾಟಕ ರಾಜ್ಯ ವಿಧಾನ ಮಂಡಲದ ಉಪಸಭಾಪತಿ ಮತ್ತು ಉಪಸಭಾಧ್ಯಕ್ಷರು
	ಕರ್ನಾಟಕದ ಸರ್ಕಾರಿ ಮುಖ್ಯ ಸಚೇತಕರು
	ಕರ್ನಾಟಕ ರಾಜ್ಯ ಸಚಿವರುಗಳು
	ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ರಾಜ್ಯ
	ಕ್ಯಾಬಿನೆಟ್ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವಂತಹ (ಶಾಸಕರು ಅಥವಾ ಶಾಸಕರೇತರರು) ವ್ಯಕ್ತಿಗಳು (***)
19	**ಕರ್ನಾಟಕ ರಾಜ್ಯದ ಉಪಸಚಿವರುಗಳು**

20	ಇತರೆ ರಾಜ್ಯಗಳ ವಿಧಾನ ಮಂಡಲಗಳ ಉಪ ಸಭಾಪತಿಗಳು ಮತ್ತು ಉಪ ಸಭಾಧ್ಯಕ್ಷರುಗಳು
	ಕರ್ನಾಟಕ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರುಗಳು
	ಇತರೆ ರಾಜ್ಯಗಳ ರಾಜ್ಯ ಸಚಿವರುಗಳು
	ಇತರೆ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಕಿರಿಯ ನ್ಯಾಯಾಧೀಶರುಗಳು
21	ಸಂಸತ್ ಸದಸ್ಯರುಗಳು
21 (ಅ)	**ಅಧ್ಯಕ್ಷರು, ಜಿಲ್ಲಾಪಂಚಾಯತ್‌ಗಳು (***)**
	ರಾಜ್ಯ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವಂತಹ (ಶಾಸಕರು ಅಥವಾ ಶಾಸಕರೇತರರು) ವ್ಯಕ್ತಿಗಳು (***)
21 (ಬ)	**ಕರ್ನಾಟಕ ವಿಧಾನಸಭಾ ಸದಸ್ಯರುಗಳು (****)**
	ಕರ್ನಾಟಕ ವಿಧಾನ ಪರಿಷತ್ ಸದಸ್ಯರುಗಳು (****)
22	ಇತರೆ ರಾಜ್ಯಗಳ ಉಪ ಸಚಿವರುಗಳು
23	ಸೇನಾ ಕಮ್ಯಾಂಡರ್‌ಗಳು / ಸೇನಾ ಸಿಬ್ಬಂದಿಯ ಅಥವಾ ಇತರ ಸೇವೆಗಳಲ್ಲಿನ ತತ್ಸಮಾನ ದರ್ಜೆಯ ಉಪ ಮುಖ್ಯಸ್ಥರುಗಳು
	ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ / ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದದ ಅಧಿಕಾರಿಗಳು
	ಭಾಷಾ ಅಲ್ಪಸಂಖ್ಯಾತರ ಆಯುಕ್ತರು, ಭಾರತ ಸರ್ಕಾರ
	ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರು, ಭಾರತ ಸರ್ಕಾರ
	ಸದಸ್ಯರುಗಳು, ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ
	ಸದಸ್ಯರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ
	ಫುಲ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು
	ಮಹಾ ಕಾರ್ಯದರ್ಶಿ / ಕಾರ್ಯದರ್ಶಿ, ರಾಜ್ಯಸಭೆ / ಲೋಕಸಭೆ
	ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿ, ಭಾರತ ಸರ್ಕಾರ
	ರಾಷ್ಟ್ರಪತಿಗಳ ಕಾರ್ಯದರ್ಶಿ
	ಪ್ರಧಾನ ಮಂತ್ರಿಗಳ ಕಾರ್ಯದರ್ಶಿ
	ಕಾರ್ಯದರ್ಶಿ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ
	ಭಾರತ ಸರ್ಕಾರದ ಕಾರ್ಯದರ್ಶಿಗಳು ಮತ್ತು ವಿಶೇಷ ಕಾರ್ಯದರ್ಶಿಗಳು (ಪದನಿಮಿತ್ತ ಹುದ್ದೆ ಹೊಂದಿರುವ ಅಧಿಕಾರಿಗಳನ್ನೂ ಒಳಗೊಂಡಂತೆ)
	ಸಾಲಿಸಿಟರ್ ಜನರಲ್
	ಉಪಾಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ / ಕರ್ನಾಟಕ ಆಡಳಿತ ನ್ಯಾಯಮಂಡಳಿ
24	ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ
	ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು
	ಅರಣ್ಯಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ದಳದ ಮುಖ್ಯಸ್ಥರು

25	ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ಕರ್ನಾಟಕದ ತತ್ಸಮಾನ ದರ್ಜೆಯ ಅಧಿಕಾರಿಗಳು
	ಹೆಚ್ಚುವರಿ ಸಾಲಿಸಿಟರ್ ಜನರಲ್
	ಕರ್ನಾಟಕದ ಅಡ್ವೊಕೇಟ್ ಜನರಲ್
	ಅಧ್ಯಕ್ಷರು, ಆಮದು–ರಫ್ತು ಸುಂಕ ಆಯೋಗ
	ಉಪ ರಾಯಭಾರಿ ಮತ್ತು ಕಾರ್ಯಾರ್ಥ / ಹೈಕಮೀಷನರ್ ಎ–ಪೈಡ್ ಅಂಡ್ ಆಡ್–ಇಂಟೆರಿಮ್
	ಉಪ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು
	ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಉಪ ಸಭಾಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರು, ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)
	ಅಭಿವೃದ್ಧಿ ಆಯುಕ್ತರು, ಕರ್ನಾಟಕ
	ನಿರ್ದೇಶಕರು, ಕೇಂದ್ರ ತನಿಖಾ ದಳ
	ಮಹಾ ನಿರ್ದೇಶಕರು, ಗಡಿ ಭದ್ರತಾ ಪಡೆ
	ಮಹಾ ನಿರ್ದೇಶಕರು, ಕೇಂದ್ರ ಮಿಸಲು ಪೊಲೀಸ್
	ನಿರ್ದೇಶಕರು, ಗುಪ್ತವಾರ್ತಾ ಸಂಸ್ಥೆ
	ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗೌವರ್ನರ್‌ಗಳು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)
	ಸದಸ್ಯರುಗಳು, ಕೇಂದ್ರ ಆಡಳಿತ ನ್ಯಾಯಮಂಡಳಿ / ಕರ್ನಾಟಕ ಆಡಳಿತ ನ್ಯಾಯಮಂಡಳಿ
	ಸದಸ್ಯರುಗಳು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ
	ಸದಸ್ಯರುಗಳು, ಕೇಂದ್ರ ಲೋಕಸೇವಾ ಆಯೋಗ
	ಕೇಂದ್ರಾಡಳಿತ ಪ್ರದೇಶಗಳ ಸಚಿವರುಗಳು ಮತ್ತು ಕಾರ್ಯನಿರ್ವಾಹಕ ಕೌನ್ಸಿಲರ್, ದೆಹಲಿ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)
	ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
	ಮೇಜರ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಸಶಸ್ತ್ರ ದಳಗಳ ಪ್ರಧಾನ ಸಿಬ್ಬಂದಿ ಅಧಿಕಾರಿಗಳು
	ರಾಜ್ಯ ಮಾಹಿತಿ ಆಯುಕ್ತರು
	ಸದಸ್ಯರುಗಳು, ಕರ್ನಾಟಕ ಲೋಕ ಸೇವಾ ಆಯೋಗ (**)
	ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರುಗಳು ಮತ್ತು ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)
26	ಪೊಲೀಸ್ ಕಮಿಷನರ್, ಬೆಂಗಳೂರು ಸೇರಿದಂತೆ ಹೆಚ್ಚುವರಿ ಡಿ.ಜಿ.ಪಿ ಗಳು ಮತ್ತು ಪೊಲೀಸ್ ಮಹಾನಿರೀಕ್ಷಕರು
	ಅರಣ್ಯ ಇಲಾಖೆಯ ಹೆಚ್ಚುವರಿ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿ
	ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು

	ಹಿಂದುಳಿದ ವರ್ಗಗಳ ಆಯೋಗದ ಸದಸ್ಯರುಗಳು (*)
	ಮೇಜರ್–ಜನರಲ್ ದರ್ಜೆಯ ಅಧಿಕಾರಿಗಳು
	ಕರ್ನಾಟಕದಲ್ಲಿನ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳು
	ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳು
	ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು
27	ಮಹಾಲೇಖಾಪಾಲರು, ಕರ್ನಾಟಕ
	ಹೆಚ್ಚುವರಿ ಪೋಲೀಸ್ ಕಮಿಷನರ್‌ಗಳು
	ಕರ್ನಾಟಕ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು
	ಬ್ರಿಗೇಡಿಯರ್, ಕೇಂದ್ರ ಕಾರ್ಯಸ್ಥಾನ, ಕರ್ನಾಟಕ ಮತ್ತು ಗೋವಾ ಉಪ–ಪ್ರದೇಶ
	ಕೇಂದ್ರ ಅಬಕಾರಿ ಕಲೆಕ್ಟರ್, ಕರ್ನಾಟಕ
	ಆದಾಯ ತೆರಿಗೆ ಆಯುಕ್ತರು, ಕರ್ನಾಟಕ
	ಪೋಲೀಸ್ ಉಪ ಮಹಾನಿರೀಕ್ಷಕರು, ಅರಣ್ಯ ಸಂರಕ್ಷಣಾಧಿಕಾರಿ
	ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
	ಪ್ರಧಾನ ವ್ಯವಸ್ಥಾಪಕರು, ದೂರ ಸಂಪರ್ಕ
	ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ
	ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ / ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು
	ಕರ್ನಾಟಕದಲ್ಲಿನ ವಿಶ್ವವಿದ್ಯಾನಿಲಯಗಳ ಕುಲಪತಿಗಳು
28	ಐಎಎಫ್‌ನಲ್ಲಿ ಹಾಗೂ ಭಾರತೀಯ ನೌಕಾಪಡೆಯಲ್ಲಿ ಬ್ರಿಗೇಡಿಯರ್ ಮತ್ತು ತತ್ಸಮಾನ ದರ್ಜೆ ಹೊಂದಿರುವ ಅಧಿಕಾರಿಗಳು
	ಜಿಲ್ಲೆಯ ಜಿಲ್ಲಾಧಿಕಾರಿಗಳು (ಅವರಿಗೆ ಸಂಬಂಧಪಟ್ಟ ಜಿಲ್ಲೆಗಳಲ್ಲಿ)
	ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದ
	ಸದಸ್ಯರುಗಳು, ರಾಜ್ಯ ಯೋಜನಾ ಮಂಡಳಿ
	ಇತರ ಪ್ರಮುಖ ಇಲಾಖಾ ಮುಖ್ಯಸ್ಥರುಗಳು
29	ರಕ್ಷಣಾಪಡೆಗಳಲ್ಲಿನ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು
	ಕರ್ನಾಟಕ ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದಗಳು
	ಅರಣ್ಯ ಉಪ ಸಂರಕ್ಷಣಾಧಿಕಾರಿ (ಐಎಫ್‌ಎಸ್ ಮಾತ್ರ)
	ರಕ್ಷಣಾ ಪಡೆಗಳಲ್ಲಿನ ಲೆಫ್ಟಿನೆಂಟ್ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು
	ಇಲಾಖೆಗಳ ಇತರ ಉಪ, ಜಂಟಿ ಮತ್ತು ಹೆಚ್ಚುವರಿ ಮುಖ್ಯಸ್ಥರುಗಳು
	ವಿಶೇಷ ಡೆಪ್ಯುಟಿ ಕಮೀಷನರುಗಳು ಮತ್ತು ಇತರ ತತ್ಸಮಾನ ವೃಂದಗಳು
	ಜಿಲ್ಲೆಗಳ ಪೋಲೀಸ್ ಅಧೀಕ್ಷಕರುಗಳು
30	ಉಪ–ವಿಭಾಗಗಳ ಉಪ ವಿಭಾಗಾಧಿಕಾರಿಗಳು ಮತ್ತು ತತ್ಸಮಾನ ವೃಂದಗಳು
	ಉಪ ನಿರ್ದೇಶಕರುಗಳು (ಹಿರಿಯ ಶ್ರೇಣಿ) ಮತ್ತು ತತ್ಸಮಾನ ವೃಂದಗಳು
	ಕಿರಿಯ ಶ್ರೇಣಿಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು
	ಐಎಫ್‌ಎಸ್ ಕಿರಿಯ ಶ್ರೇಣಿಯ ಅಧಿಕಾರಿಗಳು;

ಟಿಪ್ಪಣಿ: ಕ್ರಮ ಸಂಖ್ಯೆ. 17 * ಹಾಗೂ 25 ** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಹೆಚ್‌ಡಬ್ಲ್ಯೂಪಿ 2020, ದಿನಾಂಕ::23.11.2020.

ಕ್ರಮ ಸಂಖ್ಯೆ. 21 (ಅ) * ಹಾಗೂ 21 (ಬ) **** ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಹೆಚ್‌ಡಬ್ಲ್ಯೂಪಿ 2020, ದಿನಾಂಕ:22.03.2021.**

ಕ್ರಮ ಸಂಖ್ಯೆ 14 (ಎ) * ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ:ಸಿಆಸುಇ 07 ಹೆಚ್‌ಜಿಜಿ 2020, ದಿನಾಂಕ:21.03.2022.**

ಟಿಪ್ಪಣಿಗಳು

ಟಿಪ್ಪಣಿ:1 ಈ ಆದ್ಯತಾ ಸೂಚಿಪಟ್ಟಿಯಲ್ಲಿನ ಕ್ರಮವನ್ನು ರಾಜ್ಯ ಮತ್ತು ಸಮಾರಂಭದ ಸಂದರ್ಭಗಳಿಗಾಗಿ ಯೋಜಿಸಲಾಗಿದೆ, ಆದರೆ ಅದು ಸರ್ಕಾರದ ದೈನಂದಿನ ವ್ಯವಹಾರಕ್ಕೆ ಅನ್ವಯವಾಗುವುದಿಲ್ಲ.

ಟಿಪ್ಪಣಿ:2 ಆದ್ಯತಾ ಸೂಚಿಪಟ್ಟಿಯಲ್ಲಿನ ವ್ಯಕ್ತಿಗಳು, ಅನುಚ್ಛೇದಗಳ ಸಂಖ್ಯೆಯ ಕ್ರಮದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಈ ಅನುಚ್ಛೇದಗಳಲ್ಲಿನ ನಮೂದುಗಳನ್ನು ಆಂಗ್ಲಭಾಷೆಯ ವರ್ಣಮಾಲೆಯ ಕ್ರಮವಾಗಿ ಅಳವಡಿಸಲಾಗಿದೆ. ಒಂದೇ ಅನುಚ್ಛೇದದಲ್ಲಿ ಸೇರ್ಪಡೆಗೊಂಡಿರುವಂಥವರು ಆ ಅನುಚ್ಛೇದಗಳಲ್ಲಿ ಸೇರ್ಪಡೆಗೊಂಡ ದಿನಾಂಕದ ಅನುಸಾರ ಪರಸ್ಪರ ಆದ್ಯತೆಯನ್ನು ಪಡೆಯುತ್ತಾರೆ. ಆದರೂ, ಒಂದೇ ಅನುಚ್ಛೇದದಲ್ಲಿ ಒಳಗೊಂಡಿರುವಂಥ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗಣ್ಯವ್ಯಕ್ತಿಗಳು, ಅವರ ರಾಜ್ಯಗಳ ಅಥವಾ ಕೇಂದ್ರಾಡಳಿತ ಪ್ರದೇಶಗಳ ಹೊರಗೆ ಸಮಾರಂಭಕ್ಕೆ ಹಾಜರಾಗಿರುವಲ್ಲಿ ಮತ್ತು ಅವರ ನಮೂದಿನ ದಿನಾಂಕಗಳನ್ನು ಖಚಿತಪಡಿಸುವುದು ಕಷ್ಟವಾದರೆ, ಅವರು ಆ ಅನುಚ್ಛೇದದಲ್ಲಿ ಪ್ರವೇಶ ಪಡೆದ ದಿನಾಂಕದ ಅನುಸಾರವಾಗಿ ಯಾರ ಆದ್ಯತೆಯನ್ನು ನಿರ್ಧರಿಸಲಾಗಿದೆಯೋ ಅಂಥವರ ನಂತರ ಸಂಬಂಧಪಟ್ಟ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹೆಸರುಗಳ ಅಕಾರಾದಿ ಕ್ರಮದಲ್ಲಿ ಅವರ ನಡುವೆ ಪರಸ್ಪರ ಆದ್ಯತೆಯನ್ನು ಗೊತ್ತುಪಡಿಸಬಹುದು.

ಟಿಪ್ಪಣಿ:2 (ಎ) ಆದ್ಯತಾ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವವರುಗಳ ನಡುವೆ ಆದ್ಯತೆ ನಿಡುವಾಗ ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯ ಪತ್ರ ಸಂಖ್ಯೆ12/07/2016 ಪಬ್ಲಿಕ್, ದಿನಾಂಕ: 02.01.2017ರಲ್ಲಿ ಅಭಿಪ್ರಾಯಿಸಿದಂತೆ "ಯಾವ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು"

ಟಿಪ್ಪಣಿ:3 ಅನುಚ್ಛೇದ 7ರಲ್ಲಿ, ಮಾಜಿ ಪ್ರಧಾನ ಮಂತ್ರಿಗಳು ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರ ಮತ್ತು ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿನ ವಿರೋಧಪಕ್ಷದ

ನಾಯಕರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ. ರಾಜ್ಯಗಳ ಮುಖ್ಯ ಮಂತ್ರಿಗಳು, ಅವರವರ ರಾಜ್ಯಗಳೊಳಗೆ, ಅವರವರ ರಾಜ್ಯಗಳಲ್ಲಿ ನಡೆಯುವ ಸರ್ಕಾರಿ ಸಮಾರಂಭಗಳಲ್ಲಿ ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ.

ಟಿಪ್ಪಣಿ:4 ಅನುಚ್ಛೇದ 8ರಲ್ಲಿ –

(ಎ) ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಪೂರ್ಣಾಧಿಕಾರವುಳ್ಳ ರಾಯಭಾರಿ ಹಾಗೂ ಹೈ ಕಮಿಷನರುಗಳು, ಸಂಬಂಧಪಟ್ಟ ರಾಜ್ಯಗಳ ಹೊರಗಿನ ರಾಜ್ಯದ ರಾಜ್ಯಪಾಲರುಗಳ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ.

(ಬಿ) ರಾಜ್ಯಗಳ ರಾಜ್ಯಪಾಲರುಗಳು ತಮ್ಮ ತಮ್ಮ ರಾಜ್ಯಗಳ ಹೊರಗೆ, ತಮ್ಮ ರಾಜ್ಯಗಳ ಹೊರಗಿನ ರಾಜ್ಯಗಳ ಮುಖ್ಯ ಮಂತ್ರಿಗಳಿಗಿಂತ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ.

ಟಿಪ್ಪಣಿ:5 ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು, ವಿದೇಶಿ ಗಣ್ಯರಿಗೆ ಮತ್ತು ಭಾರತೀಯ ರಾಯಭಾರಿಗಳಿಗೆ, ಹೈ ಕಮಿಷನರುಗಳಿಗೆ ಹಾಗೂ ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿಗಳಿಗೆ, ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸೂಕ್ತ ಸ್ಥಾನಗಳನ್ನು ನೀಡಬಹುದು.

ಟಿಪ್ಪಣಿ:6 ಟಿಪ್ಪಣಿ 2ರಲ್ಲಿ ವಿಧಿಸಲಾದ ಕಾರ್ಯವಿಧಾನದಲ್ಲಿ ಏನೇ ಇದ್ದರೂ, ಅನುಚ್ಛೇದ 10ರಲ್ಲಿ ವ್ಯಕ್ತಿಗಳಲ್ಲಿ ಪರಸ್ಪರ ಸ್ಥಾನ ಮತ್ತು ಆದ್ಯತೆಯನ್ನು ಈ ಮುಂದಿನ ಕ್ರಮದಲ್ಲಿ ನೀಡತಕ್ಕದ್ದು:

(i) ಉಪ ಸಭಾಪತಿ, ರಾಜ್ಯಸಭೆ
(ii) ಉಪ ಸಭಾಧ್ಯಕ್ಷರು, ಲೋಕಸಭೆ
(iii) ಕೇಂದ್ರದ ರಾಜ್ಯ ಸಚಿವರುಗಳು ಮತ್ತು ರಕ್ಷಣಾ ವಿಷಯಗಳಿಗೆ ಸಂಬಂಧಿಸಿದ ರಕ್ಷಣಾ ಮಂತ್ರಾಲಯದಲ್ಲಿನ ಯಾರೇ ಇತರ ಸಚಿವರು
(iv) ರಾಜ್ಯಗಳ ಉಪ ಮುಖ್ಯ ಮಂತ್ರಿಗಳು
(v) ಯೋಜನಾ ಆಯೋಗದ ಸದಸ್ಯರುಗಳು

ಆದರೂ, ರಾಜ್ಯಗಳ ಉಪ ಮುಖ್ಯ ಮಂತ್ರಿಗಳು, ತಮ್ಮ ತಮ್ಮ ರಾಜ್ಯಗಳ ಹೊರಗೆ, ಈ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲಾ ಇತರ ಗಣ್ಯರಿಗಿಂತ ಯಾವಾಗಲೂ ಕೆಳಗಿನ ಸ್ಥಾನದಲ್ಲಿರುತ್ತಾರೆ.

ಟಿಪ್ಪಣಿ:6 ಆದ್ಯತಾ ಸೂಚಿಯ ಟಿಪ್ಪಣಿ–2ರಲ್ಲಿ ವಿಧಿಸಲಾದ ಕಾರ್ಯ ವಿಧಾನವೇನೇ ಇದ್ದರೂ

(ಎ) ಸಹ ವಿಧಾನಸಭೆಯನ್ನು ಪ್ರತಿನಿಧಿಸುವ ಸ್ಥಳೀಯ ವಿಧಾನಸಭೆ ಶಾಸಕರ ಅಧ್ಯಕ್ಷತೆಯಲ್ಲಿಯೇ ಸರ್ಕಾರದ ಕಾರ್ಯಕ್ರಮಗಳು ನಡೆಸತಕ್ಕದ್ದು.

ಟಿಪ್ಪಣಿ:7 ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಯವರು, ವಿಧಾನ ಸಭಾಧ್ಯಕ್ಷರು ಒಂದೇ ದಿನ ಚುನಾಯಿತರಾಗಿದ್ದ ಸಂದರ್ಭದಲ್ಲಿ, ವಿಧಾನ ಪರಿಷತ್ತಿನ ಸಭಾಪತಿಯವರು ವಿಧಾನ ಸಭಾಧ್ಯಕ್ಷರಿಗಿಂತ ಮೇಲಿನ ಸ್ಥಾನವನ್ನು ಪಡೆಯುತ್ತಾರೆ.

ಟಿಪ್ಪಣಿ:8 ರಾಜ್ಯದ ಪ್ರಮುಖ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು ಒಟ್ಟಿಗೆ ಆಹ್ವಾನಿಸಿದಾಗ, ಅವರಿಗೆ ಮೀಸಲಾದ ಸ್ಥಾನಗಳು ಮುಖ್ಯ ನ್ಯಾಯಮೂರ್ತಿ, ಲೋಕಸಭಾ ಸ್ಪೀಕರ್, ರಾಯಭಾರಿಗಳು ಮುಂತಾದವರ ನಂತರ ಇರತಕ್ಕದ್ದು.

ಟಿಪ್ಪಣಿ:9 ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು, ಒಂದೇ ಅನುಚ್ಛೇದದಲ್ಲಿ ಸೇರ್ಪಡೆ ಮಾಡಲಾದ ಮಂತ್ರಿಗಳಿಗಿಂತ ಹಾಗೂ ಕಾರ್ಯನಿರ್ವಾಹಕ ಕೌನ್ಸಿಲರುಗಳಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ.

ಟಿಪ್ಪಣಿ:10 ಅನುಚ್ಛೇದ 23ರಲ್ಲಿ -

(ಎ) ವಿದೇಶಾಂಗ ಕಾರ್ಯದರ್ಶಿಯನ್ನು ಹೊರತುಪಡಿಸಿ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಕಾರ್ಯದರ್ಶಿಗಳು, ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಮಗ ಸೇವೆಗಳ ಗ್ರೇಡ್–1ರಲ್ಲಿ ತಮ್ಮ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ ಮತ್ತು ಅವರಿಬ್ಬರೂ ವಿದೇಶಾಂಗ ಕಾರ್ಯದರ್ಶಿಯ ನಂತರ ಆದ್ಯತೆ ಪಡೆಯುತ್ತಾರೆ.

(ಬಿ) ಅಲ್ಪಸಂಖ್ಯಾತರ ಆಯೋಗದ ಸದಸ್ಯರುಗಳು ಮತ್ತು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಆಯೋಗದ ಸದಸ್ಯರುಗಳು, ಯಾವಾಗಲೂ ಈ ಆಯೋಗಗಳ ಕಾರ್ಯದರ್ಶಿಗಳಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ;

(ಸಿ) ದೆಹಲಿ / ನವದೆಹಲಿಯಲ್ಲಿ ನಡೆಸಲಾಗುವ ಸರ್ಕಾರಿ ಸಮಾರಂಭಗಳಲ್ಲಿ, ಸೇನಾ ಕಮ್ಯಾಂಡರ್‌ಗಳು / ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರು ಅಥವಾ ಇತರ ಸೇವೆಗಳಲ್ಲಿನ ತತ್ಸಮಾನರಾದವರು ಭಾರತ ಸರ್ಕಾರದ ಕಾರ್ಯದರ್ಶಿಗಳ ನಂತರ ಸ್ಥಾನ ಪಡೆಯುತ್ತಾರೆ.

ಟಿಪ್ಪಣಿ:11 ಅನುಚ್ಛೇದ 25ರಲ್ಲಿ -

(ಎ) ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಹೆಚ್ಚುವರಿ ಕಾರ್ಯದರ್ಶಿಗಳು ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಂಗ ಸೇವೆಗಳ ಗ್ರೇಡ್ IIರಲ್ಲಿ ಅವರ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ.

(ಬಿ) ಹೆಚ್ಚುವರಿ ಸಾಲಿಸಿಟರ್ ಜನರಲ್‌ರವರು ರಾಜ್ಯಗಳ ಅಡ್ವೋಕೇಟ್ ಜನರಲ್‌ರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ.

(ಸಿ) ಲೆಫ್ಟಿನೆಂಟ್ ಗವರ್ನರ್‌ಗಳು ಮುಖ್ಯ ಮಂತ್ರಿಗಳಿಗಿಂತ ಮತ್ತು ದೆಹಲಿಯ ಮುಖ್ಯ ಕಾರ್ಯನಿರ್ವಾಹಕ ಕೌನ್ಸಿಲರ್‌ಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ, ಹಾಗೂ ಮೇಲೆ ತಿಳಿಸಿರುವವರಲ್ಲಿ ಎರಡನೆಯವರು ವಿಧಾನ ಸಭಾಧ್ಯಕ್ಷರು ಮತ್ತು ಅಧ್ಯಕ್ಷರು, ಮೆಟ್ರೋಪಾಲಿಟನ್ ಕೌನ್ಸಿಲ್, ದೆಹಲಿ – ಇವರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ.

(ಡಿ) ಕೇಂದ್ರಾಡಳಿತ ಪ್ರದೇಶಗಳ ವಿಧಾನ ಸಭೆಗಳ ಉಪಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋಪಾಲಿಟನ್ ಕೌನ್ಸಿಲಿನ ಉಪ ಸಭಾಪತಿಯವರು ಕೇಂದ್ರಾಡಳಿತ ಪ್ರದೇಶಗಳ ಮಂತ್ರಿಗಳು ಹಾಗು ದೆಹಲಿಯ ಕಾರ್ಯನಿರ್ವಾಹಕ ಕೌನ್ಸಿಲರುಗಳ ನಂತರ ಆದ್ಯತೆ ಪಡೆಯುತ್ತಾರೆ.

ಟಿಪ್ಪಣಿ:12 26ನೇ ಅನುಚ್ಛೇದದ ಉದ್ದೇಶಕ್ಕಾಗಿ, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಹುದ್ದೆಗಳಿಗೆ ಸಮಾನವಾದ ಹುದ್ದೆಗಳನ್ನು ಗೃಹ ವ್ಯವಹಾರಗಳ ಮಂತ್ರಾಲಯವು ನಿರ್ಧರಿಸುತ್ತದೆ.

ಟಿಪ್ಪಣಿ:13 ಅನುಚ್ಛೇದ 23 ರಿಂದ 28ರಲ್ಲಿ -

ರಕ್ಷಣಾ ಸೇವೆಯ ಅತ್ಯಂತ ಹಿರಿಯ ಪ್ರತಿನಿಧಿಗಳನ್ನು ಮತ್ತು ಪೋಲೀಸ್ ಮಹಾ ನಿರ್ದೇಶಕರನ್ನು ಸೇವಾ ಜ್ಯೇಷ್ಠತೆಯ ಕ್ರಮದಲ್ಲಿ ಮತ್ತು ಅವರು ಪ್ರತಿನಿಧಿಸುವ ಸೇನಾಪಡೆಯನ್ನು ಅಂದರೆ, ಭೂ ಸೇನೆ, ನೌಕಾಪಡೆ, ವಾಯುಪಡೆ ಮತ್ತು ಪೋಲೀಸ್ ಪಡೆಯ ಕ್ರಮದಲ್ಲಿ ಪರಿಚಯಿಸುವ ಆದರೆ, ಆದ್ಯತಾಸೂಚಿ ಪಟ್ಟಿಯಲ್ಲಿ ಆಯಾ ಅಧಿಕಾರಿಗಳ ಹುದ್ದೆಯ ಕ್ರಮವನ್ನು ಅನುಸರಿಸದೆ ಪರಿಚಯಿಸುವ ಈಗಿನ ಪದ್ಧತಿಯು ಗಣರಾಜ್ಯೋತ್ಸವ ದಿನಾಚರಣೆ ಮತ್ತು ಸ್ವಾತಂತ್ರ್ಯ ದಿನಾಚರಣೆಗಳಂದು ಆಂತರಿಕ ಸೇವೆಗಳ ಪೆರೇಡುಗಳ ಸಂದರ್ಭದಲ್ಲಿ ಮುಂದುವರೆಯತಕ್ಕದ್ದು.

ಇತರ ಎಲ್ಲಾ ಸಂದರ್ಭಗಳಲ್ಲಿ, ರಕ್ಷಣಾ ಸೇವೆಗಳ ಪ್ರತಿನಿಧಿಯನ್ನು ಮತ್ತು ಪೋಲೀಸ್ ಮಹಾ ನಿರ್ದೇಶಕರು / ಮಹಾ ನಿರೀಕ್ಷಕರನ್ನು ಆದ್ಯತಾ ಸೂಚಿಪಟ್ಟಿಯಲ್ಲಿ ಆಯಾ ಅಧಿಕಾರಿಯ ಹುದ್ದೆಯ ಕ್ರಮದಲ್ಲಿ ಪರಿಚಯಿಸಬಹುದೇ ಹೊರತು ಒಂದು ಸಮೂಹವಾಗಿ ಅಲ್ಲ.

(ವೀರಭದ್ರ ಹಂಚಿನಾಳ)

ಸರ್ಕಾರದ ಅಪರ ಕಾರ್ಯದರ್ಶಿ,

ಸಿಆಸುಇ (ರಾಜ್ಯ ಶಿಷ್ಟಾಚಾರ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 39 ಹೆಚ್‌ಪಿಎ 2025 **ಕರ್ನಾಟಕ ಸರ್ಕಾರದ ಸಚಿವಾಲಯ**
ವಿಧಾನ ಸೌಧ,
ಡಾ. ಬಿ. ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:06.02.2026

ಪರಿಷ್ಕೃತ ಅಧಿಸೂಚನೆ

ಸರ್ಕಾರದ ಸಭೆ ಮತ್ತು ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರವಾದ ಸೂಚನೆಗಳನ್ನು ಈಗಾಗಲೇ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್ ಪಿಎ 2018, ದಿನಾಂಕ:16.04.2019ರಲ್ಲಿ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಸಾರ್ವಜನಿಕ ಸರ್ಕಾರಿ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹಾಜರಾಗುವಿಕೆಯನ್ನು ಖಚಿತಪಡಿಸಿಕೊಳ್ಳದೇ ಮುದ್ರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಆಹ್ವಾನಿತರ ಸಂಖ್ಯೆಯು ಹೆಚ್ಚಾಗುತ್ತಿದ್ದು ಶಿಷ್ಟಾಚಾರದನ್ವಯ ಆಸನ ವ್ಯವಸ್ಥೆಯನ್ನು ಏರ್ಪಡಿಸುವಲ್ಲಿ ಗೊಂದಲವಾಗುತ್ತಿರುವುದರಿಂದ ಸರ್ಕಾರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಹಾಗೂ ಸರ್ಕಾರಿ ಸರ್ವಾಜನಿಕ ಕಾರ್ಯಕ್ರಮಗಳನ್ನು ಸುಗಮವಾಗಿ ಮತ್ತು ಘನತೆಯಿಂದ ನಡೆಸಲು ಅನುವಾಗುವಂತೆ ದಿನಾಂಕ ದಿನಾಂಕ:16.04.2019ರ ಸುತ್ತೋಲೆಯನ್ನು ಸಮಗ್ರವಾಗಿ ಮಾರ್ಪಡಿಸಿ ದಿನಾಂಕ:15.10.2025 ರಂದು ಸುತ್ತೋಲೆ ಸಂಖ್ಯೆ:ಸಿಆಸುಇ 39 ಹೆಚ್‌ಪಿಎ 2025 ಅನ್ನು ಹೊರಡಿಸಲಾಗಿದ್ದು ಸದರಿ ಮಾಗಸೂಚಿಗಳನ್ನು ಭಾಗಶಃ ಮಾರ್ಪಡಿಸಿ ಈ ಕೆಳಕಂಡಂತೆ ಅಧಿಸೂಚಿಸಲಾಗಿದೆ.

1. ಸರ್ಕಾರಿ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿದೆ:-

(a) ರಾಜ್ಯ ಮಟ್ಟದ ಕಾರ್ಯಕ್ರಮಗಳು,- ಈ ಕಾರ್ಯಕ್ರಮಗಳು ರಾಜ್ಯ ಸರ್ಕಾರದ ಒಂದು ಇಲಾಖೆಯು ಪ್ರತ್ಯೇಕವಾಗಿ ಅಥವಾ ಇನ್ನೊಂದು ಇಲಾಖೆಯ ಅಂಗಸಂಸ್ಥೆಗಳು / ಸ್ವಯಂ ಸೇವಾ ಹಾಗೂ ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಒಂದು ಜಿಲ್ಲೆಗಿಂತ ಹೆಚ್ಚಿನ ಜಿಲ್ಲೆಗಳಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ಆಯೋಜಿಸಲಾಗುತ್ತದೆ.

(b) ಇಲಾಖೆಗಳು ಆಯೋಜಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಗಳು:- ಈ ಕಾರ್ಯಕ್ರಮಗಳು ರಾಜ್ಯ ಸರ್ಕಾರದ ಒಂದು ಇಲಾಖೆಯು ಪ್ರತ್ಯೇಕವಾಗಿ ಅಥವಾ ಇನ್ನೊಂದು ಇಲಾಖೆ/ ಅಂಗಸಂಸ್ಥೆಗಳು / ಸ್ವಯಂ ಸೇವಾ / ಇತರೆ ಸಂಸ್ಥೆಗಳ ಸಹಯೋಗದೊಂದಿಗೆ ಒಂದು ಜಿಲ್ಲೆಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಅಥವಾ ಜಿಲ್ಲೆಯ ಇತರ ಭಾಗದಲ್ಲಿ ಆಯೋಜಿಸಲಾಗುತ್ತದೆ.

(c) ಜಿಲ್ಲಾಡಳಿತವು ಆಯೋಜಿಸುವ ಜಿಲ್ಲಾ ಮಟ್ಟದ ಕಾರ್ಯಕ್ರಮಗಳು:- ಈ ಕಾರ್ಯಕ್ರಮಗಳು ಜಿಲ್ಲಾಡಳಿತವು ಆಯಾ ಜಿಲ್ಲೆಗಳ ಯೋಜನೆಗಳಿಗೆ/ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಅಥವಾ ಜಿಲ್ಲೆಯ ಇತರೆ ಭಾಗದಲ್ಲಿ ಆಯೋಜಿಸಲಾಗುತ್ತದೆ.

(d) ತಾಲ್ಲೂಕು ಮಟ್ಟದ ಕಾರ್ಯಕ್ರಮಗಳು:- ಈ ಕಾರ್ಯಕ್ರಮಗಳು ಜಿಲ್ಲಾಡಳಿತ ಅಥವಾ ತಾಲ್ಲೂಕು ಆಡಳಿತವು ಒಂದು ತಾಲ್ಲೂಕಿಗೆ ಸಂಬಂಧಿಸಿದ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಅಥವಾ ತಾಲ್ಲೂಕಿನ ಇತರೆ ಭಾಗದಲ್ಲಿ ಆಯೋಜಿಸಲಾಗುತ್ತದೆ.

(e) ರಾಜ್ಯದಲ್ಲಿ ಆಯೋಜಿಸುವ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ ಬೆಂಬಲಿತ ಕಾರ್ಯಕ್ರಮಗಳು,- ಈ ಕಾರ್ಯಕ್ರಮಗಳು ರಾಜ್ಯಕ್ಕೆ ಸಂಬಂಧಿಸಿದ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ ಬೆಂಬಲಿತ ಯೋಜನೆಗಳು ಅಥವಾ ಕಾರ್ಯಕ್ರಮಗಳ ಕುರಿತು ರಾಜ್ಯದ ಸಹಯೋಗದೊಂದಿಗೆ ರಾಜ್ಯದ ಕೇಂದ್ರ ಸ್ಥಾನ ಅಥವಾ ಇತರೆ ಭಾಗದಲ್ಲಿ ಆಯೋಜಿಸಲಾಗುತ್ತದೆ.

2. ರಾಜ್ಯ ಮಟ್ಟದಲ್ಲಿ ಆಯೋಜಿಸುವ ಕಾರ್ಯಕ್ರಮಗಳ ಮಾರ್ಗಸೂಚಿಗಳು:-

(a) ಉದ್ಘಾಟನೆ,- ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ:-

ಮಾನ್ಯ ಮುಖ್ಯ ಮಂತ್ರಿಗಳು / ಮಾನ್ಯ ಉಪ ಮುಖ್ಯ ಮಂತ್ರಿಗಳು / ಸಂಬಂಧಪಟ್ಟ ಇಲಾಖಾ ಸಚಿವರು /ಇಲಾಖಾ ಸಚಿವರು ಸೂಚಿಸುವ ಯಾವುದೇ ಗಣ್ಯರು.

(b) ಅಧ್ಯಕ್ಷತೆ:-

ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು:-

(i) ಇಲಾಖಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು.

(ii) ಸರ್ಕಾರಿ ಕಾರ್ಯಕ್ರಮವನ್ನು ವಿಧಾನ ಸೌಧ, ವಿಕಾಸ ಸೌಧದ ಆವರಣದಲ್ಲಿ ಆಯೋಜಿಸಿದಾಗ ಸಂಬಂಧಿತ ಇಲಾಖೆ ಸಚಿವರು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರ ಸಹಮತಿಯನ್ನು ಪಡೆದು ಅವರುಗಳನ್ನು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳನ್ನಾಗಿ ಆಹ್ವಾನಿಸತಕ್ಕದ್ದು.

(d) ಆಯೋಜನೆ:-

(i) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii) ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ.

3. ಇಲಾಖೆಗಳು ಆಯೋಜಿಸುವ ಜಿಲ್ಲಾಮಟ್ಟದ ಕಾರ್ಯಕ್ರಮಗಳ ಮಾರ್ಗಸೂಚಿಗಳು.-

(a)ಉದ್ಘಾಟನೆ: ಜಿಲ್ಲಾ ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ,-

ಮಾನ್ಯ ಮುಖ್ಯ ಮಂತ್ರಿಗಳು / ಉಪ ಮುಖ್ಯ ಮಂತ್ರಿಗಳು / ಇಲಾಖಾ ಸಚಿವರು / ಜಿಲ್ಲಾ ಉಸ್ತುವಾರಿ ಸಚಿವರು / ಇಲಾಖಾ ಸಚಿವರು ಅನುಮೋದಿಸಿರುವ ಇತರೇ ಗಣ್ಯರು.

(b) ಅಧ್ಯಕ್ಷತೆ:-

ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು:-

ಇಲಾಖಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು.

(d) ಕಾರ್ಯಕ್ರಮದ ಆಯೋಜನೆ:-

(i) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii)ಸಂಬಂಧಪಟ್ಟ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸೂಕ್ತವಾಗಿ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ.

4. ಜಿಲ್ಲಾಡಳಿತವು ಆಯೋಜಿಸುವ ಜಿಲ್ಲಾಮಟ್ಟದ ಕಾರ್ಯಕ್ರಮಗಳ ಆಯೋಜಿಸುವ ಮಾರ್ಗಸೂಚಿಗಳು:-

(a) ಉದ್ಘಾಟನೆ:- ಜಿಲ್ಲಾ ಮಟ್ಟದ ಕಾರ್ಯಕ್ರಮಗಳು ಈ ಕೆಳಕಂಡ ಗಣ್ಯರುಗಳಿಂದ ಉದ್ಘಾಟಿಸುತ್ತಾರೆ.

ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು / ಜಿಲ್ಲೆಯ ಇತರೆ ಸಚಿವರು / ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಿರುವ ಇತರೆ ಗಣ್ಯರು.

(b) ಅಧ್ಯಕ್ಷತೆ:-

ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(c) ಮುಖ್ಯ ಅತಿಥಿಗಳು / ಗೌರವಾನ್ವಿತ ಅತಿಥಿಗಳು:-

ಜಿಲ್ಲಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು.

(d) ಕಾರ್ಯಕ್ರಮದ ಆಯೋಜನೆ:-

(i) ಜಿಲ್ಲಾಡಳಿತ ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಿಕೊಳ್ಳುವುದು.

(ii)ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿಗಳು ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ.

5. ತಾಲ್ಲೂಕು ಮಟ್ಟದ ಕಾರ್ಯಕ್ರಮಗಳಿಗೆ ಮಾರ್ಗಸೂಚಿಗಳು.-

(a) ಉದ್ಘಾಟನೆ,- ತಾಲ್ಲೂಕು ಮಟ್ಟದ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ.

ಜಿಲ್ಲಾ ಉಸ್ತುವಾರಿ ಸಚಿವರು / ಸ್ಥಳೀಯ ಶಾಸಕರು / ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಲ್ಪಟ್ಟ ಇತರೇ ಗಣ್ಯರು.

(b) ಅಧ್ಯಕ್ಷತೆ,-

(i) ಜಿಲ್ಲಾ ಉಸ್ತುವಾರಿ ಸಚಿವರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಗೊಳಪಡುವ ಸ್ಥಳೀಯ ಶಾಸಕರು ಅಧ್ಯಕ್ಷತೆಯನ್ನು ವಹಿಸುವುದು.

(ii) ಸ್ಥಳೀಯ ಶಾಸಕರು ಕಾರ್ಯಕ್ರಮವನ್ನು ಉದ್ಘಾಟಿಸಿದಾಗ, ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಯಾರು ವಹಿಸಬೇಕೆಂಬುದನ್ನು ಜಿಲ್ಲಾ ಉಸ್ತುವಾರಿ ಸಚಿವರ ಸಹಮತಿ ಮೇರೆಗೆ ಆಯ್ಕೆಯಾಗುವ ಗಣ್ಯರು ಅಧ್ಯಕ್ಷತೆಯನ್ನು ವಹಿಸುವುದು.

(c) ಮುಖ್ಯ ಅತಿಥಿಗಳು /ಗೌರವಾನ್ವಿತ ಅತಿಥಿಗಳು,- ಜಿಲ್ಲಾ ಉಸ್ತುವಾರಿ ಸಚಿವರ ಸಹಮತಿ ಮೇರೆಗೆ ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಯವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ತಾಲ್ಲೂಕಿನ ಎಲ್ಲಾ ಶಾಸಕರನ್ನು ಹಾಗೂ ಸಂಸದರುಗಳನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(d) ಕಾರ್ಯಕ್ರಮದ ಆಯೋಜನೆ,-

(i) ತಾಲ್ಲೂಕು ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ಪತ್ರಿಕೆ ಮತ್ತು ವೇದಿಕೆ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ ವೇದಿಕೆ ಯೋಜನೆಗಳನ್ನು ತಯಾರಿಸಿ ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದಿಸಕೊಳ್ಳುವುದು.

(ii) ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಸಚಿವರ ಅನುಮೋದನೆಯೊಂದಿಗೆ ಕಾರ್ಯಕ್ರಮದ/ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಿಸುವುದು. ಇದರಲ್ಲಿ ಹಾಜರಾತಿಯನ್ನು ದೃಢೀಕರಿಸುವುದು, ಸಮಾರಂಭದ ಹಿನ್ನೆಲೆ ಟಿಪ್ಪಣಿಯನ್ನು ಕಳುಹಿಸುವುದು, ಮುಖ್ಯ ಅತಿಥಿಗಳು ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ.

6. ರಾಜ್ಯದಲ್ಲಿ ಆಯೋಜಿಸುವ ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ ಬೆಂಬಲಿತ ಕಾರ್ಯಕ್ರಮಗಳು.-

(a)ಉದ್ಘಾಟನೆ,- ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ ಬೆಂಬಲಿತ ಕಾರ್ಯಕ್ರಮಗಳನ್ನು ಈ ಕೆಳಕಂಡ ಗಣ್ಯರು ಉದ್ಘಾಟಿಸುತ್ತಾರೆ,-

ಗೌರವಾನ್ವಿತ ರಾಜ್ಯಪಾಲರು / ಮಾನ್ಯ ಮುಖ್ಯ ಮಂತ್ರಿಗಳು / ಕೇಂದ್ರ ಸಚಿವ ಸಂಪುಟ ದರ್ಜೆಯ ಸಚಿವರು / ಮಾನ್ಯ ಉಪ ಮುಖ್ಯ ಮಂತ್ರಿಗಳು / ಸಂಬಂಧಪಟ್ಟ ಇಲಾಖಾ ಸಚಿವರು / ಮಾನ್ಯ ಮುಖ್ಯ ಮಂತ್ರಿಗಳು ಸೂಚಿಸುವ ಯಾವುದೇ ಗಣ್ಯರು.

(b) ಅಧ್ಯಕ್ಷತೆ,-

ಕಾರ್ಯಕ್ರಮ ನಡೆಯುವ ಸ್ಥಳದ ಸ್ಥಳೀಯ ಶಾಸಕರು ಅಧ್ಯಕ್ಷತೆ ವಹಿಸುತ್ತಾರೆ.

(c) ಮುಖ್ಯ ಅತಿಥಿಗಳು/ಗೌರವಾನ್ವಿತ ಅತಿಥಿಗಳು,-

(i) ಇಲಾಖಾ ಸಚಿವರು ಆಹ್ವಾನ ಪತ್ರಿಕೆ ಹಾಗೂ ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳನ್ನು ಅನುಬಂಧದಲ್ಲಿರುವ ಪಟ್ಟಿಯಿಂದ ಒಂಬತ್ತು ಸಂಖ್ಯೆಗಳಿಗೆ ಮೀರದಂತೆ ಹಾಗೂ ಅನಿವಾರ್ಯ ಸಂದರ್ಭದಲ್ಲಿ ಗಣ್ಯರ ಸಂಖ್ಯೆಯನ್ನು 13 ಕ್ಕೆ ಮೀರದಂತೆ ಆಯ್ಕೆ ಮಾಡುವುದು. ವೇದಿಕೆಯ ಮೇಲೆ ಆಸೀನರಾಗುವ ಗಣ್ಯರ ಹೆಸರುಗಳಲ್ಲಿ ಸ್ಥಳೀಯ ಶಾಸಕರನ್ನು ಮತ್ತು ಸ್ಥಳೀಯ ಸಂಸದರನ್ನು ಕಡ್ಡಾಯವಾಗಿ ಸೇರಿಸತಕ್ಕದ್ದು.

(ii) ಸರ್ಕಾರಿ ಕಾರ್ಯಕ್ರಮವನ್ನು ವಿಧಾನ ಸೌಧ, ವಿಕಾಸ ಸೌಧದ ಆವರಣದಲ್ಲಿ ಆಯೋಜಿಸಿದಾಗ ಸಂಬಂಧಿತ ಇಲಾಖೆ ಸಚಿವರು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿ ಹಾಗೂ ವಿಧಾನ ಸಭೆಯ ಸಭಾಧ್ಯಕ್ಷರ ಸಹಮತಿಯನ್ನು ಪಡೆದು ಅವರುಗಳನ್ನು ವೇದಿಕೆಯ ಮೇಲೆ ಆಸಿನರಾಗುವ ಗೌರವಾನ್ವಿತ ಅತಿಥಿಗಳನ್ನಾಗಿ ಆಹ್ವಾನಿಸತಕ್ಕದ್ದು.

(d) ಆಯೋಜನೆ,-

(i) ರಾಜ್ಯದ ಪಾಲು ಇರುವಂತಹ ಯಾವುದೇ ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ಉದ್ಘಾಟನೆ / ಶಂಕುಸ್ಥಾಪನೆ / ಸೌಲಭ್ಯ ವಿತ್ತರಣೆ ಕಾರ್ಯಕ್ರಮಗಳಿಗೆ ಆಯಾಯ ಇಲಾಖೆಗಳು ಮುಂಚಿತವಾಗಿ ಮಾನ್ಯ ಮುಖ್ಯಮಂತ್ರಿಗಳ ಅನುಮತಿಯನ್ನು ಪಡೆದು, ಅವರು ಸೂಚಿಸಿದ ದಿನಾಂಕ ಮತ್ತು ಸ್ಥಳದಲ್ಲಿ ಕಾರ್ಯಕ್ರಮವನ್ನು ಆಯೋಜಿಸಬೇಕು ಹಾಗೂ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಮತ್ತು ಅದರ 'ಬ್ಲೂ ಬುಕ್' ಅನ್ನು ಅನುಸರಿಸಬೇಕು.

(ii) ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಕಾರ್ಯಕ್ರಮಗಳನ್ನು ರಾಜ್ಯದ ಗ್ರಾಮ ಪಂಚಾಯಿತಿ / ತಾಲೂಕು / ಜಿಲ್ಲೆ / ರಾಜ್ಯಧಾನಿ ಮಟ್ಟದಲ್ಲಿ ಆಚರಿಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಥವಾ ಜಿಲ್ಲಾಡಳಿತದ ಪೂರ್ವಾನುಮತಿ ಕಡ್ಡಾಯವಾಗಿ ಪಡೆಯಬೇಕು.

(iii) ಕೇಂದ್ರ ಪುರಸ್ಕೃತ/ ಪ್ರಾಯೋಜಿತ/ಬೆಂಬಲಿತ ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭದಲ್ಲಿ, ಕೇಂದ್ರ ಮತ್ತು ರಾಜ್ಯದ ಗಣ್ಯರ ಭಾಗವಹಿಸುವಿಕೆ ಖಚಿತಪಡಿಸಲು, ದಿನಾಂಕ, ಸಮಯ ಮತ್ತು ಸ್ಥಳವನ್ನು ಸಂಬಂಧಪಟ್ಟ ಇಲಾಖೆಯ ಮಾನ್ಯ ಸಚಿವರು ಅಥವಾ ಮುಖ್ಯ ಕಾರ್ಯದರ್ಶಿಗಳು ಅಥವಾ ಜಿಲ್ಲಾಧಿಕಾರಿಗಳು ಪೂರ್ವಾನುಮತಿಯಿಂದ ನಿಗದಿ ಮಾಡಬೇಕು.

(iv) ಇಲಾಖೆಯು ಆಯೋಜಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನ ವತ್ರಿಕೆ ಮತ್ತು ವೇದಿಕೆಯ ಮೇಲೆ ಆಸೀನರಾಗುವ ಗೌರವಾನ್ವಿತ ಅತಿಥಿಗಳ ವಿವರಗಳನ್ನು ಮತ್ತು ಅವರಿಗೆ ಕಾಯ್ದಿರಿಸುವ ಆಸನದ ವಿವರಗಳನ್ನುಳ್ಳ ವೇದಿಕೆ ಯೋಜನೆಯನ್ನು ತಯಾರಿಸಿ ಇಲಾಖಾ ಸಚಿವರಿಂದ ಅನುಮೋದಿಸಿಕೊಳ್ಳುವುದು.

(v) ಸಂಬಂಧಪಟ್ಟ ಇಲಾಖಾ ಸಚಿವರು ಕಾರ್ಯಕ್ರಮದ / ಸಮಾರಂಭದ ಶಿಷ್ಟಾಚಾರದ ಮೇಲ್ವಿಚಾರಣೆಯ ಒಟ್ಟಾರೆ ಉಸ್ತುವಾರಿಗಾಗಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು

ನೇಮಿಸುವುದು. ಇದರಲ್ಲಿ ಹಾಜರಾತಿ ದೃಢೀಕರಣ, ಸಮಾರಂಭದ ಹಿನ್ನೆಲೆ ಟಿಪ್ಪಣಿ ಸಿದ್ಧಪಡಿಸಿ ಕಳುಹಿಸುವುದು, ಮುಖ್ಯ ಅತಿಥಿ ಮತ್ತು ಗೌರವಾನ್ವಿತ ಅತಿಥಿಗಳ ಸ್ವಾಗತ ಮತ್ತು ಬೀಳ್ಕೊಡುವುದು ಸೇರಿರುತ್ತವೆ.

7. ಸಾಮಾನ್ಯ ಮಾರ್ಗಸೂಚಿಗಳು.-

(a) ರಾಜಭವನದಲ್ಲಿ ಆಯೋಜಿಸುವ ಸರ್ಕಾರದ ಎಲ್ಲಾ ಸಮಾರಂಭಗಳು / ಕಾರ್ಯಕ್ರಮಗಳು ಮಾನ್ಯ ರಾಜ್ಯಪಾಲರ ನಿರ್ದೇಶನ ಹಾಗೂ ಅವರ ಅನುಮೋದನೆಯಂತೆ ನಡೆಯುತ್ತವೆ.

(b) ಕಾರ್ಯಕ್ರಮ/ ಸಮಾರಂಭದ ಅತಿಥಿಗಳಿಗೆ ಯಾವುದೇ ಹಾರಗಳು/ ಹೂ ಗುಚ್ಛಗಳನ್ನು ಅಥವಾ ಸ್ಮರಣಿಕೆಗಳನ್ನು ನೀಡಬಾರದು. ಕಾರ್ಯಕ್ರಮ/ ಸಮಾರಂಭಕ್ಕೆ ಆಹ್ವಾನಿಸಲಾದ ಅತಿಥಿಗಳಿಗೆ ಸ್ವಾಗತದ ಸಂಕೇತವಾಗಿ ಸಂಘಟಕರು ಸ್ಥಳೀಯ ವಿಶ್ವವಿದ್ಯಾಲಯಗಳ ಪ್ರಕಟಣೆ ಅಥವಾ ಸ್ಥಳೀಯ ಸ್ವಸಹಾಯ ಗುಂಪುಗಳು ತಯಾರಿಸಿರುವ ಉತ್ಪನ್ನಗಳನ್ನು ನೀಡಬಹುದು.

(c) ಒಂದಕ್ಕಿಂತ ಹೆಚ್ಚು ಇಲಾಖೆಗಳ ಸಮ್ಮಿಶ್ರ ಇಲಾಖೆಗಳ ಕಾರ್ಯಕ್ರಮ ಇರುವಾಗ ಹೆಚ್ಚಿನ ಪಾಲು ಇರುವ ಇಲಾಖೆಯ ಸಚಿವರು ಕಾರ್ಯಕ್ರಮದ ಆಯೋಜನೆ, ನಿರ್ವಹಣೆ ಹಾಗೂ ಶಿಷ್ಟಾಚಾರದ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(d) ವೇದಿಕೆಯ ಮೇಲೆ ಆಸೀನರಾಗುವ ಅತಿಥಿ ಗಣ್ಯರ ಆಸನಗಳ ಮೇಲೆ ಜೇಷ್ಠತೆಯನುಸಾರ ಅವರ ಹೆಸರುಗಳನ್ನು ಅಂಟಿಸುವುದು.

10	8	6	4	2	ಉ	1	3	5	7	9	11

(e) ವೇದಿಕೆಯಲ್ಲಿ ಆಸೀನರಾದ ಗೌರವಾನ್ವಿತ ಅತಿಥಿಗಳನ್ನು ಹೊರತುಪಡಿಸಿ. ಆಹ್ವಾನ ಪತ್ರಿಕೆಯಲ್ಲಿರದ ಇತರೇ ಗಣ್ಯರಿಗೆ ವೇದಿಕೆಯ ಮುಂಭಾಗದ ಮೊದಲನೆಯ ಸಾಲಿನಲ್ಲಿ ಆಸನಗಳನ್ನು ಕಾಯ್ದಿರಿಸುವುದು.

(f) ಮಂಡಳಿಗಳು / ನಿಗಮಗಳು /ಆಯೋಗಗಳು/ ನಗರ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳು/ ಪ್ರಾಧೀಕಾರಗಳು/ ಅಕಾಡೆಮಿಗಳು ಮತ್ತು ಸರ್ಕಾರದ ಯಾವುದೇ ಇನ್ನಿತರೇ ಅಂಗ ಸಂಸ್ಥೆಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಆಯೋಜಿಸುವ ಕಾರ್ಯಕ್ರಮ / ಸಮಾರಂಭಗಳಿಗೆ ಗರಿಷ್ಠ ಒಂಬತ್ತು ಅತಿಥಿಗಳನ್ನು ಅನುಬಂಧದಲ್ಲಿ ಸೂಚಿಸಿರುವ ಗಣ್ಯರ ಪಟ್ಟಿಯಿಂದ ಆಯ್ಕೆಮಾಡುವುದು ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯ ಶಿಷ್ಟಾಚಾರ ಕುರಿತು ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ರಾಜ್ಯ ಶಿಷ್ಟಾಚಾರ) ಇವರ ಅನುಮೋದನೆಯನ್ನು ಪಡೆದು ಸಂಸ್ಥೆಯ ಮುಖ್ಯಸ್ಥರು ನಿರ್ಧರಿಸತಕ್ಕದ್ದು. ರಾಜ್ಯದ ಇತರೆ ಭಾಗದಲ್ಲಿ ನಡೆಯುವ ಕಾರ್ಯಕ್ರಮ/ ಸಮಾರಂಭಗಳ ಅತಿಥಿಗಳ ಪಟ್ಟಿ (ಒಂಬತ್ತಕ್ಕೆ ಮೀರದಂತೆ) ಹಾಗೂ ಶಿಷ್ಟಾಚಾರ ಕುರಿತು ಕಾರ್ಯಕ್ರಮ ನಡೆಯುವ ಸ್ಥಳದ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಅನುಮೋದನೆಯನ್ನು ಪಡೆಯುವುದು.

(g) ಈ ಮಾರ್ಗಸೂಚಿಗಳು ಶಾಸನಗಳಲ್ಲಿ ನಿಯಮಗಳಲ್ಲಿ ಇಂತಹವರೆ ಸಭೆಗಳಿಗೆ ಅಧ್ಯಕ್ಷರಾಗಬೇಕೆಂದು ನಿರ್ದಿಷ್ಟವಾಗಿ ಸೂಚಿಸಿದ್ದರೆ/ ವಿಶ್ವವಿದ್ಯಾಲಯಗಳು ಆಯೋಜಿಸುವ ಕಾರ್ಯಕ್ರಮಗಳಿಗೆ / ಸಮಾರಂಭಗಳಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ ವಿಶ್ವವಿದ್ಯಾಲಯಗಳು ಇಚ್ಛಿಸಿದ್ದಲ್ಲಿ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಬಹುದಾಗಿರುತ್ತದೆ.

(h) ಈ ಮಾರ್ಗಸೂಚಿಗಳು ಸಾರ್ವಜನಿಕರು ಭಾಗವಹಿಸುವ ಸಭೆ ಸಮಾರಂಭಗಳಿಗೆ ಅನ್ವಯಿಸುತ್ತದೆ. ಆದರೆ, ಸಾರ್ವಜನಿಕರನ್ನು ಆಹ್ವಾನಿಸದೇ ನಿರ್ದಿಷ್ಟ ಗುಂಪಿನ ಸದಸ್ಯರನ್ನು ಆಹ್ವಾನಿಸಿ ಆಯೋಜಿಸುವ ಕಾರ್ಯಕ್ರಮಗಳಿಗೆ ಅನ್ವಯಿಸುವುದಿಲ್ಲ. ಉದಾಹರಣೆ: ಜಿಲ್ಲಾ ಪಂಚಾಯತಿ ಸದಸ್ಯರು, ಯೋಜನಾ ಫಲಾನುಭವಿಗಳು, ತಂತ್ರಜ್ಞರು, ಬುದ್ಧಿ ಜೀವಿಗಳು ಇತ್ಯಾದಿ ಇಂತಹ ಕಾರ್ಯಕ್ರಮಗಳನ್ನು ಸಂಬಂಧಪಟ್ಟ ಇಲಾಖೆ / ಸಂಸ್ಥೆಗಳು ತಮ್ಮ ಹಂತದಲ್ಲಿಯೇ ಆಯೋಜಿಸಲು ಕ್ರಮವಹಿಸುವುದು.

(i) ಆಯೋಜಕರು, ಕಾರ್ಯಕ್ರಮ ನಡೆಯುವ ಜಿಲ್ಲೆಯ ಎಲ್ಲಾ ಶಾಸಕರು, ಸಂಸದರು ಹಾಗೂ ಪಟ್ಟಿಯಲ್ಲಿ ವಿವರಿಸಿದ ಗಣ್ಯರನ್ನು ಮುಂಚಿತವಾಗಿ ಆಹ್ವಾನ ಪತ್ರಿಕೆ ತಲುಪಿರುವ ಬಗ್ಗೆ, ಖಾತರಿಪಡಿಸತಕ್ಕದ್ದು.

(j) ಸರ್ಕಾರಿ ಆದೇಶಗಳಲ್ಲಿ ಮಾನ್ಯ ಸಂಸದರು, ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು.

ಇದನ್ನು ಹೊರತುಪಡಿಸಿ ಸಂಸದರಾಗಲಿ, ಶಾಸಕರೇ ಆಗಲಿ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ಅಥವಾ ಸರ್ಕಾರದ ಸಮಾರಂಭಗಳನ್ನು ನಡೆಸುವಂತಿಲ್ಲ.

ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅಥವಾ ಸರ್ಕಾರದ ಸಮಾರಂಭಗಳನ್ನು ನಡೆಸಲು ಅವಕಾಶವಿರುವುದಿಲ್ಲ. ಆದರೆ ಅಗತ್ಯ ಮಾಹಿತಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

(k) ಗೌರವಾನ್ವಿತ ರಾಷ್ಟ್ರಪತಿಗಳು, ಮಾನ್ಯ ಪ್ರಧಾನ ಮಂತ್ರಿಗಳು, ಗೌರವಾನ್ವಿತ ರಾಜ್ಯ ಪಾಲರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇನ್ನಿತರ ಅತೀ ಮುಖ್ಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿರುವ ಸರ್ಕಾರಿ ಕಾರ್ಯಕ್ರಮಗಳ ಪಾಸ್‌ಗಳನ್ನು ವಿತರಿಸುವ ಸಂಬಂಧ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

i) ಪ್ರತಿ ಪಾಸ್ ನ ಕೆಳಬಾಗದಲ್ಲಿ ಸದರಿ ಪಾಸ್‌ನ್ನು ಪಡೆದವರು ಕಾರ್ಯಕ್ರಮದ ಸ್ಥಳದ ಯಾವ ಭಾಗದಲ್ಲಿ ಆಸೀನರಾಗಬಹುದೆಂದು ಸ್ಪಷ್ಟವಾಗಿ ನಮೂದಿಸುವುದು."

ii) ಪಾಸ್‌ಗಳು ಅಥವಾ ಆಹ್ವಾನ ಪತ್ರಿಕೆಗಳ ಮೇಲೆ ಸರಣಿ ಸಂಖ್ಯೆಗಳು / ವಿಶಿಷ್ಟ ಸರಣಿ ಸಂಖ್ಯೆಯನ್ನು ಮುದ್ರಿಸುವುದು/ನಮೂದಿಸಿ ಪಾಸ್‌ಗಳನ್ನು ವಿತರಿಸಬೇಕು.

iii) ಪಾಸ್‌ಗಳನ್ನು ನೀಡುವುದರಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಯಾರಿಗೆ / ಯಾವ ಕಚೇರಿಗೆ ಎಷ್ಟು ಪಾಸ್‌ಗಳನ್ನು (ಪ್ರತಿ ಪಾಸ್‌ಗೆ ವಿಶಿಷ್ಟ ಸರಣಿ ಸಂಖ್ಯೆಯೊಂದಿಗೆ) ಮತ್ತು ಯಾವ ಸರಣಿ ಸಂಖ್ಯೆಯ ಪಾಸ್‌ಗಳನ್ನು/ಆಹ್ವಾನ ಪತ್ರಿಕೆಗಳನ್ನು ಯಾರಿಗೆ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಈ ಬಗ್ಗೆ ಅಗತ್ಯ ದಾಖಲೆಗಳನ್ನು ನಿರ್ವಹಿಸುವುದು.

iv) ಪಾಸ್‌ಗಳನ್ನು/ಆಹ್ವಾನ ಪತ್ರಿಕೆಗಳನ್ನು ನೀಡಲಾದ ವ್ಯಕ್ತಿಗಳ/ಕಚೇರಿಗಳ ಪಟ್ಟಿಯನ್ನು ತೋರಿಸುವ ದಾಖಲೆಯನ್ನು ನಿರ್ವಹಿಸುವುದು.

v) ಕೇಂದ್ರ ಸರ್ಕಾರ/ರಾಜ್ಯ ಸರ್ಕಾರದ ಮಾರ್ಗಸೂಚಿಗಳಂತೆಯೇ- ಕಾರ್ಯಕ್ರಮದ ಡಯಾಸ್‌ನಲ್ಲಿ/ವೇದಿಕೆಯ ಮೇಲೆ ಕುಳಿತುಕೊಳ್ಳಲು ಅರ್ಹರಾಗಿರುವ ಗಣ್ಯರ ವಿಷಯದಲ್ಲಿ ಕಟ್ಟುನಿಟ್ಟಾದ ಪ್ರೋಟೋಕಾಲ್‌ನ್ನು ನಿರ್ವಹಿಸುವುದು ಮತ್ತು ಅನಧಿಕೃತ ವ್ಯಕ್ತಿ/ವ್ಯಕ್ತಿಗಳು ಡಯಾಸ್‌ಗೆ ಪ್ರವೇಶ ಪಡೆಯುವುದನ್ನು ತಪ್ಪಿಸಲು ಪೊಲೀಸ್ ಇಲಾಖೆಯು ಕ್ರಮಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ. ಕೆ. ಜಿ. ಜಗದೀಶ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಕಡತ ಸಂಖ್ಯೆ:ಸಿಆಸುಇ 39 ಹೆಚ್‌ಪಿಎ 2025

ಅನುಬಂಧ

ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಕಾರ್ಯಕ್ರಮಗಳಲ್ಲಿ ಅನುಸರಿಸಬೇಕಾದ ಗಣ್ಯರ ಜೇಷ್ಠತಾ ಪಟ್ಟಿ

01	ರಾಜ್ಯಪಾಲರು
02	ಮುಖ್ಯಮಂತ್ರಿಗಳು
03	ಕೇಂದ್ರ ಸಚಿವ ಸಂಪುಟ ದರ್ಜೆಯ ಸಚಿವರು
04	ಉಪ ಮುಖ್ಯಮಂತ್ರಿಗಳು
05	ಕೇಂದ್ರ ರಾಜ್ಯ ಸಚಿವರು
06	ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
07	ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು
08	ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
09	ರಾಜ್ಯ ಸಚಿವ ಸಂಪುಟ ದರ್ಜೆಯ ಸಚಿವರುಗಳು
10	ವಿರೋಧ ಪಕ್ಷದ ನಾಯಕರುಗಳು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು
11	ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು
12	ಅಡ್ವೋಕೇಟ್ ಜನರಲ್
13	ಉಪ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ತು
14	ಉಪ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ
15	ಸರ್ಕಾರಿ ಮುಖ್ಯ ಸಚೇತಕರು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು
16	ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಗಣ್ಯರು
17	ಸಂಸದರು, ಲೋಕಸಭೆ
18	ಸಂಸದರು, ರಾಜ್ಯಸಭೆ
19	ರಾಜ್ಯ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಹೊಂದಿರುವ ಗಣ್ಯರು
20	ವಿಧಾನ ಸಭೆಯ ಶಾಸಕರುಗಳು
21	ವಿಧಾನ ಪರಿಷತ್ತಿನ ಶಾಸಕರುಗಳು
22	ಮಂಡಳಿಗಳು, ನಿಗಮಗಳು, ಆಯೋಗಗಳು, ನಗರ ಸ್ಥಳೀಯ ಸಂಸ್ಥೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಪ್ರಾಧಿಕಾರಗಳ ಅಕಾಡೆಮಿಗಳು ಮತ್ತು ಇನ್ನಿತರೇ ಸರ್ಕಾರಿ ಅಂಗ ಸಂಸ್ಥೆ ಅಧ್ಯಕ್ಷರುಗಳು, ಸದಸ್ಯರು
23	(i) ರಾಜ್ಯ ಮಟ್ಟದ ಕಾರ್ಯಕ್ರಮಗಳಾಗಿದ್ದಲ್ಲಿ ಮುಖ್ಯ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು, ವುಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು. (ii) ಜಿಲ್ಲಾ ಮಟ್ಟದ ಕಾರ್ಯಕ್ರಮಗಳಾಗಿದ್ದಲ್ಲಿ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಪಂಚಾಯತ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರು.
24	ಸ್ವಾತಂತ್ರ್ಯ ಹೋರಾಟಗಾರರು/ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು/ಇನ್ನಿತರೇ ಪ್ರಶಸ್ತಿ ಪುರಸ್ಕೃತರು/ಕಲಾವಿದರು/ ಪರಿಣಿತರು/ ಶಿಕ್ಷಣ ತಜ್ಞರು/ ಬುದ್ಧಿ ಜೀವಿಗಳು/ ಲೇಖಕರು/ ವಿಜ್ಞಾನಿಗಳು/ ಕ್ರೀಡಾಪಟುಗಳು / ರೈತ ಪ್ರತಿನಿಧಿಗಳು/ ಸಮಾಜ ಸೇವಕರು/ ಹಿರಿಯ ನ್ಯಾಯವಾದಿಗಳು.

(ಡಾ. ಕೆ. ಜಿ. ಜಗದೀಶ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಪ್ರತಿಗಳು:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಸಚಿವಾಲು.
7. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ/ಹೆಚ್ಚುವರಿ ಪ್ರತಿಗಳು.

ಮಾಹಿತಿಗಾಗಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಗಳು.
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ:ಸಿ.695/2025)
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಸಿಆಸು ಇಲಾಖೆ
5. ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಆಸುಇ (ರಾಜ್ಯ ಶಿಷ್ಟಾಚಾರ)
6. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಆಸುಇ(ರಾಜಕೀಯ)

ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಶಾಸಕರ ಭವನದ ವಾಹನಗಳ ನಿರೀಕ್ಷಣಾ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

******

ಓದಲಾಗಿದೆ:

01. ಈ ಸಚಿವಾಲಯದ ಆದೇಶ ಸಂ:ಕವಿಪ:ಆ–1:52:ವಾಬಾವಿನಾಯಕ:2017, ದಿ:05.09.2017.

02. ವಿಧಾನಸಭೆ ಸಚಿವಾಲಯದ ಆದೇಶ ಸಂ:ಕವಿಸಸ:ಶಾಭ:306:ಬಾದ/2020, ದಿ:15.09.2020.

03. ಕಡತ ಸಂ:ಕವಿಪ:ಶಾಭ:10:ವಾಬಾನಿಶು:2026, ಕಂಡಿಕೆ ಸಂ:01 ರಿಂದ 04 ರವರೆಗೆ.

ಪ್ರಸ್ತಾವನೆ:

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ವಾಹನಗಳ ನಿರೀಕ್ಷಣಾ ಶುಲ್ಕವನ್ನು ನಿಗದಿಪಡಿಸಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ(2)ರಲ್ಲಿ ಕರ್ನಾಟಕ ವಿಧಾನ ಸಭೆಯ ಸಚಿವಾಲಯವು ರಾತ್ರಿ ಪಾಳಿಯಲ್ಲಿ ನಿಗದಿಪಡಿಸಿರುವ ವಾಹನಗಳ ನಿರೀಕ್ಷಣಾ ಶುಲ್ಕದ ರೀತ್ಯಾ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ವಾಹನಗಳಿಗೆ ರಾತ್ರಿ ಪಾಳಿಯಲ್ಲಿ ನಿರೀಕ್ಷಣಾ ಶುಲ್ಕವನ್ನು ಈ ಕೆಳಕಂಡಂತೆ ನಿಗದಿಪಡಿಸಲು ಸಲ್ಲಿಸಲಾದ ಪ್ರಸ್ತಾವನೆಯನ್ನು ಓದಲಾಗಿರುವ ಕ್ರಮ ಸಂಖ್ಯೆ(3)ರ ಕಡತದಲ್ಲಿ ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

ವಾಹನಗಳ ನಿರೀಕ್ಷಣಾ ಶುಲ್ಕ
ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಗೆ

ಕ್ರ.ಸಂ.	ಸಮಯ(ಗಂಟೆಗಳ ಅವಧಿಗೆ)	ವಾಹನಗಳ ನಿರೀಕ್ಷಣಾ ಶುಲ್ಕ	ರಾತ್ರಿ ಪಾಳಿ ರಾತ್ರಿ 8 ಗಂಟೆಯಿಂದ ಬೆಳ್ಳಿಗೆ 8 ಗಂಟೆಯವರಗೆ
01.	1ನೇ ಗಂಟೆಗೆ	0.00	0.00
02.	2ನೇ ಗಂಟೆಗೆ	10.00.	100.00.
03.	3ನೇ ಗಂಟೆಗೆ	30.00	200.00
04.	4ನೇ ಗಂಟೆಗೆ	150.00	300.00
05.	5ನೇ ಗಂಟೆಗೆ	175.00	400.00
06.	6ನೇ ಗಂಟೆಗೆ	200.00	500.00
07.	7ನೇ ಗಂಟೆಗೆ	275.00	600.00
08.	8ನೇ ಗಂಟೆಗೆ	325.00	700.00
09.	9ನೇ ಗಂಟೆಗೆ	400.00	800.00
10.	10ನೇ ಗಂಟೆಗೆ	475.00	900.00
11.	11ನೇ ಗಂಟೆಗೆ	525.00	1000.00
12.	12ನೇ ಗಂಟೆಗೆ	600.00	1200.00

ಆದೇಶ ಸಂಖ್ಯೆ: ಕವಿಪ:ಆ–1:03:ವಾಬಾನಿಶು:2026
ಬೆಂಗಳೂರು, ದಿನಾಂಕ:06.04.2026

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶಾಸಕರ ಭವನದ ವಾಹನಗಳಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಚರಿಸಲು ರಾತ್ರಿ ಪಾಳಿಯಲ್ಲಿ ನಿಗದಿಪಡಿಸಿರುವ ನಿರೀಕ್ಷಣಾ ಶುಲ್ಕಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ನಿಗದಿಪಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ವಾಹನಗಳ ನಿರೀಕ್ಷಣಾ ಶುಲ್ಕ
ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಗೆ

ಕ್ರ.ಸಂ.	ಸಮಯ(ಗಂಟೆಗಳ ಅವಧಿಗೆ)	ವಾಹನಗಳ ನಿರೀಕ್ಷಣಾ ಶುಲ್ಕ	ರಾತ್ರಿ ಪಾಳಿ ರಾತ್ರಿ 8 ಗಂಟೆಯಿಂದ ಬೆಳ್ಳಿಗೆ 8 ಗಂಟೆಯವರಗೆ
01.	1ನೇ ಗಂಟೆಗೆ	0.00	0.00
02.	2ನೇ ಗಂಟೆಗೆ	10.00.	100.00.
03.	3ನೇ ಗಂಟೆಗೆ	30.00	200.00
04.	4ನೇ ಗಂಟೆಗೆ	150.00	300.00
05.	5ನೇ ಗಂಟೆಗೆ	175.00	400.00
06.	6ನೇ ಗಂಟೆಗೆ	200.00	500.00
07.	7ನೇ ಗಂಟೆಗೆ	275.00	600.00
08.	8ನೇ ಗಂಟೆಗೆ	325.00	700.00
09.	9ನೇ ಗಂಟೆಗೆ	400.00	800.00
10.	10ನೇ ಗಂಟೆಗೆ	475.00	900.00
11.	11ನೇ ಗಂಟೆಗೆ	525.00	1000.00
12.	12ನೇ ಗಂಟೆಗೆ	600.00	1200.00

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಜ್ಯೋತಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಪ್ರತಿಗಳು:–

01. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
02. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
03. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
04. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ,
ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ–2/ಕಾರ್ಯಕಾರಿ ಶಾಖೆ, ಕವಿಪ.
05. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾ.ಭ. ಕವಿಪ
06. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
07. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
08. ಸೀನಿಯರ್ ಪ್ರೋಗ್ರಾಮರ್, ಗಣಕ ಶಾಖೆ, ಕವಿಪ
09. ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರಿಗೆ, ಶಾಸಕರ ಭವನ, ಕವಿಪ.
10. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.

ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಶಾಸಕರ ಭವನದ ಅತಿಥಿ ಕೊಠಡಿಗಳ ಬಾಡಿಗೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

******

ಓದಲಾಗಿದೆ:

01. ಈ ಸಚಿವಾಲಯದ ಆದೇಶ ಸಂ:ಕವಿಪಸ:ಆ–1:66:ಶಾಭ:ಕೊಬಾಪ:2019, ದಿ:11.12.2019.
02. ದಿ:08.05.2026ರಂದು ನಡೆದ ಸಭೆಯ ನಡವಳಿ.
03. ಕಡತ ಸಂ:ಕವಿಪ:ಶಾಭ:683:ವಾಬಾದನಿ:2019, (ಭಾಗ–2) ಕಂಡಿಕೆ ಸಂ:14 ರಿಂದ 18 ರವರೆಗೆ.

ಪ್ರಸ್ತಾವನೆ:

ಓದಲಾಗಿರುವ ಕ್ರಮ ಸಂಖ್ಯೆ:1ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದ ಅತಿಥಿ ಕೊಠಡಿಗಳ ಬಾಡಿಗೆ ದರಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

ಕ್ರ. ಸಂ	ವಾಸ್ತವ್ಯದ ವಿವರಗಳು	ಕೊಠಡಿಗಳ ವಿವರ	ಪರಿಷ್ಕೃತ ಬಾಕಿ ದರ ರೂ.ಗಳಲ್ಲಿ
01	ಮಾಜಿ ಸದಸ್ಯರುಗಳು ಹಾಗೂ ಮಾಜಿ ಸಂಸತ್ ಸದಸ್ಯರುಗಳು ಮಾತ್ರ	**ಸಿಂಗಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ, (ಮೂರು ದಿನಗಳವರೆಗೆ ಮಾತ್ರ) ಮೂರು ದಿನಗಳ ನಂತರ–ದಿನವೊಂದಕ್ಕೆ ಏಳು ದಿನಗಳವರೆಗೆ, ಏಳು ದಿನಗಳ ನಂತರ ದಿನವೊಂದಕ್ಕೆ **ಡಬಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ (ಮೂರು ದಿನಗಳವರೆಗೆ ಮಾತ್ರ) ಮೂರು ದಿನಗಳ ನಂತರ ದಿನವೊಂದಕ್ಕೆ ಏಳು ದಿನಗಳವರೆಗೆ. ಏಳು ದಿನಗಳ ನಂತರ ದಿನವೊಂದಕ್ಕೆ (15 ದಿನಗಳ ನಂತರ ಕಡ್ಡಾಯವಾಗಿ ಕಾರ್ಯದರ್ಶಿಯವರ ಅನುಮೋದನೆ ಪಡೆಯತಕ್ಕದ್ದು)	100/– 200/– 400/– 200/– 400/– 800/–
02	ಅತಿಥಿಗಳು ಮಾನ್ಯ ಸದಸ್ಯರುಗಳು /ಹಾಲಿ ಸಂಸತ್ ಸದಸ್ಯರು/ಮಾಜಿ ಸದಸ್ಯರುಗಳು/ಮಾಜಿ ಸಂಸತ್ ಸದಸ್ಯರುಗಳ ಅತಿಥಿಗಳು (ಸಂಬಂಧಪಟ್ಟವರ ಶಿಫಾರಸ್ಸು ಪತ್ರದ ಮೇರೆಗೆ)	**ಸಿಂಗಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ, (ಮೂರು ದಿನಗಳವರೆಗೆ ಮಾತ್ರ) ಮೂರು ದಿನಗಳ ನಂತರ–ದಿನವೊಂದಕ್ಕೆ **ಡಬಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ (ಮೂರು ದಿನಗಳವರೆಗೆ ಮಾತ್ರ) ಮೂರು ದಿನಗಳ ನಂತರ ದಿನವೊಂದಕ್ಕೆ,	400/– 800/– 800/– 1600/–
03	ಕರ್ತವ್ಯದ ಮೇಲೆ ಬರುವ ರಾಜ್ಯ ಸರ್ಕಾರದ ಅಧಿಕಾರಿಗಳು, ಕೇಂದ್ರ ಸರ್ಕಾರದ ಅಧಿಕಾರಿಗಳು ಮತ್ತು ಇತರೆ ರಾಜ್ಯ ಸರ್ಕಾರಿ	**ಸಿಂಗಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ (ಮೂರು ದಿನಗಳವರೆಗೆ ಮಾತ್ರ)	200/–

	ಅಧಿಕಾರಿಗಳು/ಸಿಬ್ಬಂದಿಗಳು (ಸರ್ಕಾರಿ ಸ್ವಾಮ್ಯ ಸಂಸ್ಥೆಗಳು ಒಳಗೊಂಡಂತೆ)	**ಡಬಲ್ ಬೆಡ್‌ನ ಕೊಠಡಿಗೆ** ದಿನವೊಂದಕ್ಕೆ (ಮೂರು ದಿನಗಳವರೆಗೆ ಮಾತ್ರ)	400/-
04	ಸಮ್ಮೇಳನ ಸಭಾಂಗಣ	ಮಾನ್ಯ ಸದಸ್ಯರುಗಳೇ ಕರೆಯುವ ಅಧಿಕೃತ ಸಭೆಗಳಿಗೆ ದಿನವೊಂದಕ್ಕೆ ಇತರೆ ಸಭೆ ಸಮಾರಂಭಗಳಿಗೆ ಮಾನ್ಯ ಸದಸ್ಯರುಗಳು ಶಿಫಾರಸ್ಸು, ಪತ್ರ ನೀಡಿದಲ್ಲಿ ದಿನವೊಂದಕ್ಕೆ	1000/- 5000/-

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ದಿನಾಂಕ:08.05.2026ರಂದು ನಡೆದ ವಸತಿ ಸಮಿತಿ ಸಭೆಯಲ್ಲಿ ವಿಧಾನ ಪರಿಷತ್ತಿನ ಶಾಸಕರ ಭವನದ ಅತಿಥಿ ಕೊಠಡಿಗಳ ಬಾಡಿಗೆ ದರವನ್ನು ಹೆಚ್ಚಿಸಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ (3)ರಲ್ಲಿ ಮಾನ್ಯ ಶಾಸಕರು/ಸಂಸದರು/ಮಾಜಿ ಶಾಸಕರು ಹಾಗೂ ಮಾಜಿ ಸಂಸದರುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅತಿಥಿಗಳ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆದು ನಿರ್ವಹಿಸುವಂತೆ ಮತ್ತು ಮಾಜಿ ಶಾಸಕರುಗಳು, ಮಾಜಿ ಸಂಸತ್ ಸದಸ್ಯರುಗಳಿಗೆ ಕೊಠಡಿ ನೀಡಿದಾಗ ಕಡ್ಡಾಯವಾಗಿ ಮಾನ್ಯರ ಸಹಿಯನ್ನು ಪಡೆಯುವಂತೆ ಸ್ವಾಗತಕಾರರಿಗೆ ನಿರ್ದೇಶನ ನೀಡುವ ಷರತ್ತಿಗೊಳಪಟ್ಟು ಓದಲಾಗಿರುವ ಕ್ರಮ ಸಂಖ್ಯೆ (1)ರ ಆದೇಶವನ್ನು ಭಾಗಶಃ ಮಾರ್ಪಡಿಸುತ್ತಾ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದಲ್ಲಿನ ಅತಿಥಿ ಕೊಠಡಿಗಳ ಬಾಡಿಗೆ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡತೆ ಪರಿಷ್ಕರಿಸಲು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

ಕ್ರ.ಸಂ	ವಿವರ	ಪ್ರಸ್ತುತ ವಿಧಿಸಿರುವ ಬಾಡಿಗೆ ದರಗಳಲ್ಲಿ	ನಿಗದಿಪಡಿಸಿರುವ ಪರಿಷ್ಕೃತ ದರ (ಜಿಎಸ್‌ಟಿ ಒಳಗೊಂಡಂತೆ)
ಸಿಂಗಲ್ ರೂಮ್ ಗಳಿಗೆ			
01	ಮಾಜಿ ಶಾಸಕರು ಹಾಗೂ ಮಾಜಿ ಸಂಸತ್ ಸದಸ್ಯರುಗಳು	100 ದಿನವೊಂದಕ್ಕೆ (1-3 ದಿನಗಳು)	250
		200 ದಿನವೊಂದಕ್ಕೆ (3-7 ದಿನಗಳು)	400
		400 ದಿನವೊಂದಕ್ಕೆ (7 ದಿನಗಳ ನಂತರ)	600
ಡಬಲ್ ರೂಮ್ ಗಳಿಗೆ			
02	ಮಾಜಿ ಶಾಸಕರು ಮತ್ತು ಮಾಜಿ ಸಂಸತ್ ಸದಸ್ಯರುಗಳು	200 ದಿನವೊಂದಕ್ಕೆ (1-3 ದಿನಗಳು)	500
		400 ದಿನವೊಂದಕ್ಕೆ (3-7ದಿನಗಳು)	800
		800 ದಿನವೊಂದಕ್ಕೆ (7 ದಿನಗಳ ನಂತರ)	1000
ಸಿಂಗಲ್ ರೂಮ್ ಗಳಿಗೆ			
03	ಮಾನ್ಯ ಶಾಸಕರ ಅತಿಥಿಗಳು/ ಹಾಲಿ ಮತ್ತು ಮಾಜಿ ಸಂಸತ್	400 ದಿನವೊಂದಕ್ಕೆ (1-3 ದಿನಗಳು)	800

	ಸದಸ್ಯರು/ಮಾಜಿ ಸಂಸತ್ ಸದಸ್ಯರುಗಳ ಅತಿಥಿಗಳು	800 ದಿನವೊಂದಕ್ಕೆ (3–7ದಿನಗಳು)	1200
ಡಬಲ್ ರೂಮ್ ಗಳಿಗೆ			
04	ಮಾನ್ಯ ಶಾಸಕರ ಅತಿಥಿಗಳು/ ಹಾಲಿ ಮತ್ತು ಮಾಜಿ ಸಂಸತ್ ಸದಸ್ಯರು/ಮಾಜಿ ಸಂಸತ್ ಸದಸ್ಯರುಗಳ ಅತಿಥಿಗಳು	800 ದಿನವೊಂದಕ್ಕೆ (1–3 ದಿನಗಳು)	1200
		1600 ದಿನವೊಂದಕ್ಕೆ (3–7 ದಿನಗಳು)	2000
05	ಕರ್ತವ್ಯದ ಮೇಲೆ ಬರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು/ಇತರೆ ರಾಜ್ಯದ ಅಧಿಕಾರಿಗಳು/ಸಿಬ್ಬಂದಿಗಳು	200.00 ದಿನವೊಂದಕ್ಕೆ (1–3 ದಿನಗಳು) **(ಸಿಂಗಲ್ ರೂಮ್‌ಗೆ)**	1200
		400.00 ದಿನವೊಂದಕ್ಕೆ (1–3 ದಿನಗಳು) **(ಡಬಲ್ ರೂಮ್‌ಗೆ)**	2000

ಆದೇಶ ಸಂಖ್ಯೆ: ಕವಿಪ:ಆ–1:26:ಶಾಭಕೊಬಾ:2026

ಬೆಂಗಳೂರು, ದಿನಾಂಕ:25.06.2026.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮಾನ್ಯ ಶಾಸಕರು/ಸಂಸದರು/ಮಾಜಿ ಶಾಸಕರು ಹಾಗೂ ಮಾಜಿ ಸಂಸದರುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅತಿಥಿಗಳ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆದು ನಿರ್ವಹಿಸುವಂತೆ ಮತ್ತು ಮಾಜಿ ಶಾಸಕರುಗಳು, ಮಾಜಿ ಸಂಸತ್ ಸದಸ್ಯರುಗಳಿಗೆ ಕೊಠಡಿ ನೀಡಿದಾಗ ಕಡ್ಡಾಯವಾಗಿ ಮಾನ್ಯರ ಸಹಿಯನ್ನು ಪಡೆಯುವಂತೆ ಸ್ವಾಗತಕಾರರಿಗೆ ನಿರ್ದೇಶನ ನೀಡುವ ಷರತ್ತಿಗೊಳಪಟ್ಟು ಓದಲಾಗಿರುವ ಕ್ರಮ ಸಂಖ್ಯೆ (1)ರ ಆದೇಶವನ್ನು ಭಾಗಶಃ ಮಾರ್ಪಡಿಸುತ್ತಾ ವಿಧಾನ ಪರಿಷತ್ತಿನ ಸಚಿವಾಲಯದ ಶಾಸಕರ ಭವನದಲ್ಲಿನ ಅತಿಥಿ ಕೊಠಡಿಗಳು ಬಾಡಿಗೆ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ	**ವಿವರ**	**ಪ್ರಸ್ತುತ ವಿಧಿಸಿರುವ ಬಾಡಿಗೆ ದರಗಳಲ್ಲಿ**	**ನಿಗದಿಪಡಿಸಿರುವ ಪರಿಷ್ಕೃತ ದರ(ಜಿಎಸ್‌ಟಿ ಒಳಗೊಂಡಂತೆ)**
	ಸಿಂಗಲ್ ರೂಮ್ ಗಳಿಗೆ		
01	ಮಾಜಿ ಶಾಸಕರು ಹಾಗೂ ಮಾಜಿ ಸಂಸತ್ ಸದಸ್ಯರುಗಳು	100 ದಿನವೊಂದಕ್ಕೆ (1–3 ದಿನಗಳು)	250
		200 ದಿನವೊಂದಕ್ಕೆ (3–7 ದಿನಗಳು)	400
		400 ದಿನವೊಂದಕ್ಕೆ (7 ದಿನಗಳ ನಂತರ)	600
	ಡಬಲ್ ರೂಮ್ ಗಳಿಗೆ		
02	ಮಾಜಿ ಶಾಸಕರು ಮತ್ತು ಮಾಜಿ ಸಂಸತ್ ಸದಸ್ಯರುಗಳು	200 ದಿನವೊಂದಕ್ಕೆ (1–3 ದಿನಗಳು)	500
		400 ದಿನವೊಂದಕ್ಕೆ (3–7ದಿನಗಳು)	800

		800 ದಿನವೊಂದಕ್ಕೆ (7 ದಿನಗಳ ನಂತರ)	1000
	ಸಿಂಗಲ್ ರೂಮ್ ಗಳಿಗೆ		
03	ಮಾನ್ಯ ಶಾಸಕರ ಅತಿಥಿಗಳು/ಹಾಲಿ ಮತ್ತು ಮಾಜಿ ಸಂಸತ್ ಸದಸ್ಯರು / ಮಾಜಿ ಸಂಸತ್ ಸದಸ್ಯರುಗಳ ಅತಿಥಿಗಳು	400 ದಿನವೊಂದಕ್ಕೆ (1–3 ದಿನಗಳು)	800
		800 ದಿನವೊಂದಕ್ಕೆ (3–7ದಿನಗಳು)	1200
	ಡಬಲ್ ರೂಮ್ ಗಳಿಗೆ		
04	ಮಾನ್ಯ ಶಾಸಕರ ಅತಿಥಿಗಳು/ಹಾಲಿ ಮತ್ತು ಮಾಜಿ ಸಂಸತ್ ಸದಸ್ಯರು /ಮಾಜಿ ಸಂಸತ್ ಸದಸ್ಯರುಗಳ ಅತಿಥಿಗಳು	800 ದಿನವೊಂದಕ್ಕೆ (1–3 ದಿನಗಳು)	1200
		1600 ದಿನವೊಂದಕ್ಕೆ (3–7 ದಿನಗಳು)	2000
05	ಕರ್ತವ್ಯದಮೇಲೆ ಬರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು /ಇತರೆ ರಾಜ್ಯದ ಅಧಿಕಾರಿಗಳು/ಸಿಬ್ಬಂದಿಗಳು	200.00 ದಿನವೊಂದಕ್ಕೆ (1–3 ದಿನಗಳು) **(ಸಿಂಗಲ್ ರೂಮ್‌ಗೆ)**	1200
		400.00 ದಿನವೊಂದಕ್ಕೆ (1–3 ದಿನಗಳು) **(ಡಬಲ್ ರೂಮ್‌ಗೆ)**	2000

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಮೀನಾನಾಯಕ್)
ಉಪ ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು.

ಪ್ರತಿಗಳು:–

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಕಾರ್ಯದರ್ಶಿ(ಪ್ರ) ರವರ ಆಪ್ತ ಸಹಾಯಕರಿಗೆ, ಕವಿಪ.
4. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ, ಕವಿಪ.
5. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.
6. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮ.
8. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿ.

ಕರ್ನಾಟಕ ವಿಧಾನ ಪರಿಷತ್ತು

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಪೀಠಾಸೀನಾಧಿಕಾರಿಗಳಿಗೆ ಶಾಸಕರ ಭವನದಲ್ಲಿ ಒದಗಿಸಿರುವ ಕೊಠಡಿಗಳನ್ನು ಅಧಿಕೃತ ಕಚೇರಿಯನ್ನಾಗಿ ಬಳಸಲು ಅನುಮತಿ ಹಾಗೂ ಕೊಠಡಿಯ ಬಾಡಿಗೆ ದರವನ್ನು ನಿಗದಿಪಡಿಸುವ ಬಗ್ಗೆ.

******

ಓದಲಾಗಿದೆ:

01. ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತಾತ್ಮಕ ಆದೇಶ ಸಂಖ್ಯೆ: ಕವಿಪ:ಆ–1:53:ಕೊಬಾದರ.ಪ.:2017, ದಿ:05.09.2017.
02. ಶ್ರೀ ಎಂ.ಕೆ.ಪ್ರಾಣೇಶ್, ಮಾನ್ಯ ಉಪ ಸಭಾಪತಿಯವರ ಪತ್ರ ಸಂಖ್ಯೆ:ಕವಿಪ/ಉಸಕಾ/63/2025, ದಿನಾಂಕ:27.05.2025.
03. ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರ ಪತ್ರ ಸಂಖ್ಯೆ:ಕವಿಪ/ವಿಪನಾ/737/2025, ದಿ:16.06.2025.
04. ಶ್ರೀ ಸಲೀಂ ಅಹ್ಮದ್, ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಪತ್ರ ಸಂಖ್ಯೆ:ಕವಿಪ/ಸಮುಸ/591/2025, ದಿನಾಂಕ:02.06.2025.
05. ಶ್ರೀ ರವಿಕುಮಾರ್ ಎನ್, ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಪತ್ರ ಸಂಖ್ಯೆ:ಕವಿಪ/ವಿಪಮುಸ/30/2025, ದಿನಾಂಕ:30.05.2025
06.ಕಡತ ಸಂ:ಕವಿಪ:ಶಾಭ:925:ಪೀಕೊಬಾ:2023 , ಕಂಡಿಕೆ ಸಂ:13 ರಿಂದ 20ರವರೆಗೆ.

ಪ್ರಸ್ತಾವನೆ:

ಓದಲಾಗಿರುವ ಕ್ರಮ ಸಂಖ್ಯೆ(1)ರಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು ಪೀಠಾಸೀನಾಧಿಕಾರಿಗಳಾಗಿ/ಸಚಿವರುಗಳಾಗಿ/ಸಂಸದೀಯ ಪದಾಧಿಕಾರಿಗಳಾಗಿ/ ಸಂಸದೀಯ ಕಾರ್ಯದರ್ಶಿಗಳಾಗಿ/ ಸರ್ಕಾರದ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಸರ್ಕಾರದಿಂದ ಮನೆಬಾಡಿಗೆ ಭತ್ಯೆ ಹಾಗೂ ವಸತಿ ನಿರ್ವಹಣಾ ಭತ್ಯೆಗಳನ್ನು ಪಡೆದು ಶಾಸಕರ ಭವನದ ಕೊಠಡಿಗಳಲ್ಲಿ ತಮ್ಮ ವಾಸ್ತವ್ಯವನ್ನು ಮುಂದುವರೆಸಿದಲ್ಲಿ ಅಂತಹ ಕೊಠಡಿಗಳಿಗೆ ದಿ:01.10.2016 ರಿಂದ ಜಾರಿಗೆ ಬರುವಂತೆ ಮಾಸಿಕ ಬಾಡಿಗೆಯನ್ನು ರೂ.10,000/–(ಹತ್ತು ಸಾವಿರ ರೂಪಾಯಿ ಮಾತ್ರ)ಗಳಿಗೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

ಓದಲಾಗಿರುವ ಕ್ರಮ ಸಂಖ್ಯೆ(2) ರಿಂದ (5)ರವರೆಗೆ ಮಾನ್ಯ ಉಪ ಸಭಾಪತಿಯವರು/ ಮಾನ್ಯ ವಿರೋಧ ಪಕ್ಷದ ನಾಯಕರು/ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು/ ವಿರೋಧ ಪಕ್ಷದ ಮಾನ್ಯ ಮುಖ್ಯ ಸಚೇತಕರು ತಮಗೆ ಶಾಸಕರ ಭವನದಲ್ಲಿ ನೀಡಲಾಗಿರುವ ಕೊಠಡಿಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಅಧಿಕೃತ ಕಛೇರಿಯಾಗಿ ಬಳಸಿಕೊಳ್ಳಲು ಅನುಮತಿಸುವಂತೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಕೊಠಡಿಯನ್ನು ಬಳಕೆ ಮಾಡುತ್ತಿರುವುದರಿಂದ ಸದರಿ ಕೊಠಡಿಗಳ ಮಾಸಿಕ ಬಾಡಿಗೆ ರೂ.10,000/–ಗಳ ಪಾವತಿಯಿಂದ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:(6)ರಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಪೀಠಾಸೀನಾಧಿಕಾರಿಗಳ ಕೋರಿಕೆಯಂತೆ ಶಾಸಕರ ಭವನದ ಕೊಠಡಿ ಬಾಡಿಗೆಯನ್ನು ಸಂಪೂರ್ಣ ವಿನಾಯಿತಿ ನೀಡುವುದು ಸೂಕ್ತವಲ್ಲವಾದ್ದರಿಂದ ಕೊಠಡಿಯ ಮಾಸಿಕ ಬಾಡಿಗೆಯನ್ನು ರೂ.1,000/-(ಒಂದು ಸಾವಿರ ರೂಪಾಯಿ ಮಾತ್ರ)ಗಳಿಗೆ ನಿಗದಿಗೊಳಿಸಲು ಮಾನ್ಯ ಸಭಾಪತಿಯವರು ಅನುಮೋದನೆ ನೀಡಿರುತ್ತಾರೆ.

ಆದೇಶ ಸಂಖ್ಯೆ: ಕವಿಪ/ಶಾಭ/28/ಪೀಕೊಬಾ/2025-26.
ಬೆಂಗಳೂರು, ದಿನಾಂಕ: 18.07.2025.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಉಪ ಸಭಾಪತಿಯವರು/ ಮಾನ್ಯ ವಿರೋಧ ಪಕ್ಷದ ನಾಯಕರು/ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು/ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು ಇವರುಗಳು ಶಾಸಕರ ಭವನದಲ್ಲಿ ನೀಡಲಾಗಿರುವ ಕೊಠಡಿಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಅಧಿಕೃತ ಕಛೇರಿಯಾಗಿ ಬಳಸಿಕೊಳ್ಳಲು ಅನುಮತಿಯನ್ನು ಹಾಗೂ ಸಾರ್ವಜನಿಕ ಅನುಕೂಲಕ್ಕಾಗಿ ಕೊಠಡಿಯನ್ನು ಬಳಕೆ ಮಾಡುತ್ತಿರುವುದರಿಂದ ಸದರಿ ಕೊಠಡಿಗಳಿಗೆ ಮಾಸಿಕ ಬಾಡಿಗೆಯನ್ನು ರೂ. 1,000/-(ಒಂದು ಸಾವಿರ ರೂಪಾಯಿ ಮಾತ್ರ)ಗಳಿಗೆ ನಿಗದಿಪಡಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಜ್ಯೋತಿ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಪ್ರತಿಗಳು:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಮಾನ್ಯ ಉಪ ಸಭಾಪತಿಯವರು/ ಮಾನ್ಯ ವಿರೋಧ ಪಕ್ಷದ ನಾಯಕರು/ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು/ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
4. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
5. ಕಾರ್ಯದರ್ಶಿ-2ರವರ ಆಪ್ತ ಸಹಾಯಕರಿಗೆ, ಕವಿಪ.
6. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ/ಗಣಕ ಕೇಂದ್ರ, ಕವಿಪ
7. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ.

****

ಕರ್ನಾಟಕ ವಿಧಾನ ಪರಿಷತ್ತು

ಪರಿಷ್ಕೃತ ಆದೇಶ

ಆದೇಶ ಸಂಖ್ಯೆ:ಕವಿಪ/ಶಾಭ/47/ಪೀಕೊಬಾ/2025–26.
ಬೆಂಗಳೂರು, ದಿನಾಂಕ: 06.08.2025.

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತಾತ್ಮಕ ಆದೇಶ ಸಂಖ್ಯೆ: ಕವಿಪ/ಶಾಭ/28/ಪೀಕೊಬಾ/2025–26. ಬೆಂಗಳೂರು, ದಿನಾಂಕ: 18.07.2025ನ್ನು ಭಾಗಶ: ಮಾರ್ಪಡಿಸುತ್ತಾ, ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಎಂಬ ಪದಗಳ ನಂತರ **"ಮಾನ್ಯ ಸಭಾಪತಿಯವರು"** ಸೇರಿದಂತೆ ಎಂಬ ಪದವನ್ನು ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕಾರ್ಯದರ್ಶಿಯವರ ಆದೇಶಾನುಸಾರ,

(ಕೆ.ಜೆ.ಜಲಜಾಕ್ಷಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಪ್ರತಿಗಳು:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಸಭಾಪತಿಯವರ ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
3. ಮಾನ್ಯ ಉಪ ಸಭಾಪತಿಯವರ/ ಮಾನ್ಯ ವಿರೋಧ ಪಕ್ಷದ ನಾಯಕರ/ ಮಾನ್ಯ ಸರ್ಕಾರಿ ಮುಖ್ಯ ಸಚೇತಕರ/ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
4. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
5. ಕಾರ್ಯದರ್ಶಿ–2ರವರ ಆಪ್ತ ಸಹಾಯಕರಿಗೆ, ಕವಿಪ.
6. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ಲೆಕ್ಕಪತ್ರಗಳ ಶಾಖೆ/ಗಣಕ ಕೇಂದ್ರ, ಕವಿಪ
7. ಉಪ ಕಾರ್ಯದರ್ಶಿ/ಕ್ಷೇತ್ರಾಧಿಕಾರಿ, ಶಾಸಕರ ಭವನ, ಕವಿಪ.
8. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ.

****

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 48 ಶಿಸನೇ 98

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ: 2ನೇ ನವೆಂಬರ್ 1998

ಅಧಿಕೃತ ಜ್ಞಾಪನ

ವಿಷಯ : ವಿಧಾನ ಪರಿಷತ್ತಿಗೆ ಸದಸ್ಯರುಗಳಿಗೆ ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಕಛೇರಿ ವ್ಯವಸ್ಥೆಯನ್ನು ಒದಗಿಸುವ ಬಗ್ಗೆ.
ಉಲ್ಲೇಖ : 1) ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 90 ಶಿಸನೇ 96, ದಿನಾಂಕ 16–12–96.
2) ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 90 ಶಿಸನೇ 96, ದಿನಾಂಕ 26–02–1997

ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಆಪ್ತ ಸಹಾಯಕರನ್ನು ನೇಮಿಸುವ ವಿಷಯದಲ್ಲಿ ಉಲ್ಲೇಖಿತ ಅಧಿಕೃತ ಜ್ಞಾಪನ (1)ರಲ್ಲಿ ಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ ವಿಧಾನ ಪರಿಷತ್ತಿನ ಸದಸ್ಯರುಗಳ ಮತಕ್ಷೇತ್ರದ ಒಂದು ತಾಲ್ಲೂಕಿಗೆ ಸೀಮಿತವಾಗಿರದೆ 2–3 ಜಿಲ್ಲೆಗಳು ಒಳಗೊಂಡಿರುವುದರಿಂದ, ಅವರುಗಳಿಗೆ ಕೊಠಡಿಯನ್ನು ಕೊಡುವ ಅವಶ್ಯಕತೆಯಿಲ್ಲವೆಂದು ಸರ್ಕಾರ ತೀರ್ಮಾನಿಸಿ, ಉಲ್ಲೇಖ (2)ರಲ್ಲಿನ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಈ ವಿಷಯವನ್ನು ಸರ್ಕಾರ ಪುನರ್ ಪರಿಶೀಲಿಸಿ, ದಿನಾಂಕ: 26–02–1997ರ ಸರ್ಕಾರಿ ಸುತ್ತೋಲೆ ಸಂಖ್ಯೆ ಸಿಆಸುಇ 90 ಶಿಸನೇ 96ರಲ್ಲಿನ ಸೂಚನೆಗಳನ್ನು ರದ್ದುಪಡಿಸುತ್ತಾ ದಿನಾಂಕ 28–11–1996ರ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 90 ಶಿಸನೇ 91ರಲ್ಲಿನ ಕಂಡಿಕೆ 4 ರಲ್ಲಿನ ಸೂಚನೆಯನ್ನು ಗಮನದಲ್ಲಿಟ್ಟು ಕೊಂಡು ವಿಧಾನಸಭಾ ಸದಸ್ಯರುಗಳಿಗೆ ನೀಡುತ್ತಿರುವ ರೀತಿಯಲ್ಲೇ ವಿಧಾನ ಪರಿಷತ್ತಿನ ಸದಸ್ಯರಿಗೂ ಸಹ ತಾಲ್ಲೂಕು ಕಛೇರಿಯನ್ನು ಹೊರತು ಪಡಿಸಿ, ಅವರ ಕ್ಷೇತ್ರ ವ್ಯಾಪ್ತಿಯಲ್ಲಿನ ಯಾವುದಾದರೂ ಸರ್ಕಾರಿ ಕಛೇರಿ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಒದಗಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಎಂ.ಎಸ್. ಗಣಪತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಶಿಷ್ಟಾಚಾರ).

ಇವರಿಗೆ
1. ರಾಜ್ಯದ ಎಲ್ಲಾ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ (ಮುಖಪತ್ರದದ ಮೂಲಕ)
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ, ಬೆಂಗಳೂರು (ಮುಖಪತ್ರದ ಮೂಲಕ)
4. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಎಲ್ಲಾ ವಿಭಾಗಾಧಿಕಾರಿಗಳು
6. ಎಲ್ಲಾ ಜಿಲ್ಲಾಧಿಕಾರಿಗಳು
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
8. ಎಲ್ಲಾ ಉಪ ವಿಭಾಗಾಧಿಕಾರಿಗಳು : ತಹಶೀಲ್ದಾರರುಗಳಿಗೆ
9. ಕಡತ : ಬಿಡಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 90 ಶಿಸನೇ 96

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 28–11–96

ಅಧಿಕೃತ ಜ್ಞಾಪನ

ವಿಷಯ : ವಿಧಾನಸಭಾ ಸದಸ್ಯರುಗಳ ಉಪಯೋಗಕ್ಕಾಗಿ ಕಚೇರಿ ಹಾಗೂ ಆಪ್ತ ಸಹಾಯಕರನ್ನು ಒದಗಿಸುವ ಬಗ್ಗೆ.

ವಿಧಾನಸಭಾ ಸದಸ್ಯರುಗಳು ಅವರ ಕ್ಷೇತ್ರಕ್ಕೆ ಭೇಟಿ ನೀಡಿದಾಗ ದಕ್ಷತೆಯಿಂದ ಕಾರ್ಯ ನಿರ್ವಹಿಸುವ ಸಲುವಾಗಿ ಅವರಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುವುದು ಅವಶ್ಯಕವೆಂದು ಕಂಡು ಬಂದಿರುತ್ತದೆ :

(1) ವಿಧಾನಸಭಾ ಸದಸ್ಯರು ಅವರ ಕ್ಷೇತ್ರ ಮಟ್ಟದಲ್ಲಿ ಕೆಲಸ ಮಾಡುವಾಗ ಅವರಿಗೆ ಆಪ್ತ ಸಕಾಯಕರ ಅವಶ್ಯಕತೆ ಇರುವುದರಿಂದ ಜಿಲ್ಲಾಧಿಕಾರಿಗಳು ಒಬ್ಬ ಆಪ್ತ ಸಹಾಯಕರನ್ನು ಈ ಕೆಲಸಕ್ಕೆ ನೇಮಿಸುವುದು ;

(2) ವಿಧಾನಸಭಾ ಸದಸ್ಯರು ಅವರ ಕ್ಷೇತ್ರಗಳಿಗೆ ಭೇಟಿ ನೀಡಿದಾಗ ಸಂದರ್ಶನ ಮತ್ತು ಕಾರ್ಯಕಲಾಪಗಳನ್ನು ನಿರ್ವಹಿಸಲು ಪ್ರತ್ಯೇಕ ಕೊಠಡಿಯನ್ನು ಒದಗಿಸುವುದು.

ಸರ್ಕಾರವು ಈ ವಿಷಯಂಯಂವನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ :–

(1) ವಿಧಾನಸಭಾ ಸದಸ್ಯರ ಕ್ಷೇತ್ರದಲ್ಲಿರುವ ಯಾವುದೇ ಸರ್ಕಾರಿ ಇಲಾಖೆಗಳು : ಸ್ಥಳೀಯ ಸಂಸ್ಥೆಗಳು : ಶಾಸನಬದ್ಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕ ಅಥವಾ ಶೀಘ್ರಲಿಪಿಗಾರರು ಅಥವಾ ದ್ವಿತೀಯ ದರ್ಜೆ ಸಹಾಯಕರುಗಳಲ್ಲಿ ವಿಧಾನಸಭಾ ಸದಸ್ಯರು ಇಚ್ಛಿಸುವವರನ್ನು ಆಪ್ತ ಸಹಾಯಕರನ್ನಾಗಿ ಜಿಲ್ಲಾಧಿಕಾರಿಗಳು ನೇಮಿಸತಕ್ಕದ್ದು.

(2) ಈ ರೀತಿ ನೇಮಿಸಲ್ಪಟ್ಟ ನೌಕರರು ತಮ್ಮ ವೇತನ ಮತ್ತು ಭತ್ಯೆಗಳನ್ನು ಅವರು ನೇಮಕಾತಿಯಾದ ಸಮಯದಲ್ಲಿ ಯಾವ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರೋ ಅಲ್ಲಿಯೇ ಪಡೆಯುವರು ಹಾಗೂ ಆ ಕಛೇರಿಯ ಸಿಬ್ಬಂದಿ ವರ್ಗದಲ್ಲಿಯೇ ಮುಂದುವರೆಯುವರು.

(3) ಈ ನೌಕರರು ವಿಧಾನಸಭಾ ಸದಸ್ಯರಿಗೆ ಅವರ ಕ್ಷೇತ್ರದಲ್ಲಿ ನೆರವು ನೀಡುವರು ಹಾಗೂ ಇವರುಗಳು ಯಾವುದೇ ಪ್ರವಾಸ ಭತ್ಯೆಗಳಿಗೆ ಅರ್ಹರಿರುವುದಿಲ್ಲ.

(4) ವಿಧಾನಸಭಾ ಸದಸ್ಯರುಗಳಿಗೆ ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಒಂದು ಕೊಠಡಿಯನ್ನು ನೀಡತಕ್ಕದ್ದು. ತಾಲ್ಲೂಕು ಪಂಚಾಯತ್ ಕಛೇರಿಯಲ್ಲಿ ಸೂಕ್ತ ಸ್ಥಳಾವಕಾಶವಿಲ್ಲದಿದ್ದಲ್ಲಿ, ತಾಲ್ಲೂಕು ಮುಖ್ಯ ಸ್ಥಳದಲ್ಲಿರುವ ಜಿಲ್ಲಾಧಿಕಾರಿಗಳಿಂದ ಗುರುತಿಸಲ್ಪಡುವ ಯಾವುದಾದರೂ ಸರ್ಕಾರಿ ಕಟ್ಟಡಗಳಲ್ಲಿ ಸ್ಥಳಾವಕಾಶವನ್ನು ನೀಡತಕ್ಕದ್ದು. ಈ ಸ್ಥಳಾವಕಾಶವನ್ನು ತಾಲ್ಲೂಕು ಕಚೇರಿಯಲ್ಲಿ ನೀಡತಕ್ಕದ್ದಲ್ಲ.

ಮೇಲ್ಕಂಡ ಸೂಚನೆಗಳ ಅನುಪಾಲನೆಗೆ ಒಳಪಟ್ಟು, ಯಾವುದೇ ಲೋಪಕ್ಕೆ ಅವಕಾಶ ನೀಡದಂತೆ ವಿಧಾನಸಭಾ ಸದಸ್ಯರುಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಎಲ್ಲಾ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

ಎನ್. ರಾಮಕೃಷ್ಣ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜ್ಯ ಶಿಷ್ಟಾಚಾರ)

ಇವರಿಗೆ

1. ರಾಜ್ಯದ ಎಲ್ಲಾ ವಿಧಾನಸಭಾ ಸದಸ್ಯರುಗಳಿಗೆ (ಮುಖಪತ್ರದ ಮೂಲಕ)
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ
3. ಎಲ್ಲಾ ವಿಭಾಗಾಧಿಕಾರಿಗಳು,
4. ಎಲ್ಲಾ ಜಿಲ್ಲಾಧಿಕಾರಿಗಳು,
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಕ ಅಧಿಕಾರಿಗಳು,
6. ಎಲ್ಲಾ ಉಪ ವಿಭಾಗಾಧಿಕಾರಿಗಳು
7. ಎಲ್ಲಾ ತಹಶೀಲ್ದಾರರುಗಳು
8. ಸಚಿವ ಸಂಪುಟ ಶಾಖೆ (ವಿಷಯ ಸಂಖ್ಯೆ: ಸಿ 661:96)
9. ಕಡತ : ಹೆಚ್ಚುವರಿ ಪ್ರತಿಗಳು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಹೆಚ್ಚುವರಿಯಾಗಿ ಇನ್ನೊಬ್ಬ ಆಪ್ತ ಸಹಾಯಕರ ಸೇವೆಯನ್ನು ಒದಗಿಸುವ ಬಗ್ಗೆ.

ಓದಲಾಗಿದೆ : ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ವಿಸಸ/ಕಾ/ಶಾರಶಾ/918/ಶಾಆಸನೀ/2013, ದಿನಾಂಕ: 24–07–2013.

ಪ್ರಸ್ತಾವನೆ

ಮೇಲೆ ಓದಲಾಗಿರುವ ಪತ್ರದಲ್ಲಿ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರು ವಿಧಾನ ಸಭಾ ಸದಸ್ಯರಾದ ಶ್ರೀ ಬಸವರಾಜ ರಾಯರೆಡ್ಡಿ ಇವರು ದಿ: 31–05–2013 ರಂದು ಸನ್ಮಾನ್ಯ ಸಭಾಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ವಿಧಾನ ಸಭಾ ಸದಸ್ಯರ ಸಹಾಯಕ್ಕಾಗಿ ಈಗಾಗಲೇ ನೀಡಲಾಗಿರುವ ಒಬ್ಬ ಆಪ್ತ ಸಹಾಯಕರಿಂದ ಕ್ಷೇತ್ರದ ಕೆಲಸಗಳು ಹಾಗೂ ಬೆಂಗಳೂರಿನ ವಿವಿಧ ಇಲಾಖೆಗಳಿಂದ ಮಾಹಿತಿ ಸಂಗ್ರಹಿಸುವುದು ಕ್ಷೇತ್ರ ಕೆಲಸಕಾರ್ಯಗಳಿಗಾಗಿ ನೀಡಿರುವ ಪತ್ರಗಳ ಬಗ್ಗೆ ವಿಚಾರಣೆ ಮಾಡುವುದು ಕಷ್ಟಕರವಾಗಿರುವುದರಿಂದ, ಈಗಾಗಲೇ ಒದಗಿಸಲಾದ ಸೌಲಭ್ಯದ ಜೊತೆಗೆ ಇನ್ನೂ ಒಬ್ಬ ಆಪ್ತ ಸಹಾಯಕರನ್ನು ಹಾಗೂ ಒಬ್ಬ ಗ್ರೂಪ್–ಡಿ ದರ್ಜೆ ನೌಕರರನ್ನು ಒದಗಿಸಲು ಅನುಮತಿ ನೀಡಬೇಕೆಂದು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡಿಕೊಂಡಿರುವುದಾಗಿ ತಿಳಿಸುತ್ತಾ ದಿನಾಂಕ 15–07–2013 ರಂದು ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. ಸಮಿತಿಯು ಮಾನ್ಯ ಸದಸ್ಯರ ಕೋರಿಕೆಯನ್ನು ಪರಾಮರ್ಶಿಸಿ, ವಿಧಾನ ಸಭಾ ಸದಸ್ಯರುಗಳು ಹೆಚ್ಚುವರಿಯಾಗಿ ನಿಯೋಜನೆ ಮೇರೆಗೆ ಒಬ್ಬ ಆಪ್ತ ಸಹಾಯಕರ ಸೇವೆಯನ್ನು ಪಡೆಯಬಹುದೆಂದು ಒಪ್ಪಿಗೆಯನ್ನು ನೀಡಿರುತ್ತದೆ. ಸದರಿ ಒಪ್ಪಿಗೆಯನ್ವಯ, ಈ ವಿಷಯವನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ಕಾರ್ಯಕಲಾಪಗಳ ಸಲಹಾ ಸಮಿತಿಯು ಅನುಮೋದಿಸಿದಂತೆ, ತುರ್ತು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 180 ಶಿಸನೇ 2013, ಬೆಂಗಳೂರು, ದಿನಾಂಕ: 24–09–2013

ಮೇಲಿನ ಪ್ರಸ್ತಾವನೆಯನ್ನು ಕೂಲಕಂಕಷವಾಗಿ ಪರಿಶೀಲಿಸಿ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಈಗಾಗಲೇ ಶಾಸಕರಿಗೆ ಒಬ್ಬ ಸಹಾಯಕರನ್ನು ನೀಡಿದಂತೆ, ಸರ್ಕಾರಿ ಇಲಾಖೆ / ಸ್ಥಳೀಯ ಸಂಸ್ಥೆ ಅಥವಾ ಶಾಸನಬದ್ಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕ ಅಥವಾ ಶೀಘ್ರಲಿಪಿ ಅಥವಾ ದ್ವಿತೀಯ ದರ್ಜೆ ಸಹಾಯಕರನ್ನು ಹೆಚ್ಚುವರಿಯಾಗಿ ವಿಧಾನ ಸಭೆ / ವಿಧಾನ ಪರಿಷತ್ ಸದಸ್ಯರು ಇಚ್ಛಿಸುವವರನ್ನು ನಿಯೋಜನೆ ಮೇರೆಗೆ ಆಪ್ತ ಸಹಾಯಕರಾಗಿ ನೇಮಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರುಗಳಿಗೆ ಹೆಚ್ಚುವರಿಯಾಗಿ ನಿಯೋಜಿಸುವ ಆಪ್ತ ಸಹಾಯಕರು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುವುದರಿಂದ, ಅವರ ವೇತನವನ್ನು ಸರ್ಕಾರದ ಸಚಿವಾಲಯಕ್ಕೆ ನಿಗಧಿಪಡಿಸಿರುವ ಆಯವ್ಯಯದಿಂದಲೇ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 732 ವೆಚ್ಚ–12 / 2013 ದಿ: 16–09–2013 ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ನಾಗರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜ್ಯ ಶಿಷ್ಟಾಚಾರ)

ಇವರಿಗೆ:

1. ಮಹಾಲೇಖಪಾಲಕರು (ಎ & ಇ) / (ಆಡಿಟ್–1) (ಆಡಿಟ್–2), ಕರ್ನಾಟಕ, ಬೆಂಗಳೂರು–01
2. ಕಾರ್ಯದರ್ಶಿಗಳು, ಕರ್ನಾಟಕ ವಿಧಾನಸಭೆ
3. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್
4. ಎಲ್ಲಾ ಜಿಲ್ಲಾಧಿಕಾರಿಗಳು
5. ಪ್ರಾದೇಶಿಕ ಆಯುಕ್ತರು
6. ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
7. ಎಲ್ಲಾ ವಿಧಾನ ಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು
8. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು–1,2, ವಿಧಾನ ಸೌಧ, ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಪ್ತ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ
10. ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ಕಾಗದ ಕಾರ್ಖಾನೆ, ನಂ. 16/4, ಅಲಿ ಆಸ್ಕರ್ ರಸ್ತೆ, ಬೆಂಗಳೂರು – 560052
11. ಪ್ರಧಾನ ವ್ಯವಸ್ಥಾಪಕರು, ಮೈಸೂರು ಕಾಗದ ಕಾರ್ಖಾನೆ, ಭದ್ರಾವತಿ, ಶಿವಮೊಗ್ಗ
12. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಲೆಕ್ಕಪತ್ರ 2)/ ಆರ್ಥಿಕ ಇಲಾಖೆ (ಸೇವೆಗಳು–1)
13. ಶ್ರೀ ಜಗನ್ನಾಥ ಬಂಗೇರ, ಮಾನ್ಯ ಮಾಜಿ ಮುಖ್ಯಮಂತ್ರಿಯವರ ವಿಶೇಷಾಧಿಕಾರಿ C/o ಮಾನ್ಯ ಶ್ರೀ ಜಗದೀಶ್ ಶೆಟ್ಟರ, ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿಗಳು, ನಂ.31, ಮಧುರಾ ಎಸ್ಟೇಟ್, ನಾಗಶೆಟ್ಟಿಕೊಪ್ಪ, ಹುಬ್ಬಳ್ಳಿ–580020
14. ಶಾಖಾ ರಕ್ಷ ಕಡತ / ಹೆಚ್ಚಿನ ಪ್ರತಿಗಳು

ಕರ್ನಾಟಕ ವಿಧಾನ ಪರಿಷತ್ತು

ವಿಷಯ: 2021–22ನೇ ಸಾಲಿನಿಂದ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಆಪ್ತ ಸಹಾಯಕರುಗಳ ನೇಮಕಾತಿ/ಸೇವಾ ವಿಷಯ/ವೇತನ/ಮತ್ತಿತರ ಭತ್ಯೆಗಳನ್ನು ಸಚಿವಾಲಯದ ವತಿಯಿಂದ ನಿರ್ವಹಿಸುವ ಕುರಿತು.

*****

ಓದಲಾಗಿದೆ:

01. ಸರ್ಕಾರದ ಆದೇಶ ಸಂಖ್ಯೆ:ಆಇ/418/ವೆಚ್ಚ–7/2020, ಬೆಂಗಳೂರು ದಿನಾಂಕ:06.03.2021
02. ಕಡತದ ಸಂಖ್ಯೆ: ಕವಿಪ/ಲೆಪಶಾ–1/236/ಶಾಖೆಗಳ ಸೃಜನೆ/2020, ಕಂಡಿಕೆ ಸಂಖ್ಯೆ: 64 ರಿಂದ 75 ರವರೆಗೆ

ಪ್ರಸ್ತಾವನೆ:

ಓದಲಾಗಿರುವ ಕ್ರಮ ಸಂಖ್ಯೆ:01ರಲ್ಲಿ ಪ್ರಧಾನ ಲೆಕ್ಕಶೀರ್ಷಿಕೆ 2011 ಸಂಸತ್/ ರಾಜ್ಯ/ಕೇಂದ್ರಾಡಳಿತ ಸ್ವದೇಶಗಳ ವಿಧಾನ ಮಂಡಲದ ನೇರ ಆಡಳಿತಕ್ಕೆ ಒಳಪಡುವುದರಿಂದ ಹಾಗೂ ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರು ವಿಧಾನ ಮಂಡಲದ ನೇರ ಆಡಳಿತಕ್ಕೆ ಒಳಪಡುವುದರಿಂದ ಮಾನ್ಯ ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರುಗಳ ಆಪ್ತ ಸಹಾಯಕರುಗಳ ವೇತನ/ಮತ್ತಿತರ ಭತ್ಯೆಗಳ ಪಾವತಿ ಮಾಡುವ ಅಧಿಕಾರವನ್ನು 2021–22ನೇ ಆರ್ಥಿಕ ವರ್ಷದಿಂದ ಅಂದರೆ ಏಪ್ರಿಲ್–2021ರಿಂದ ಜಾರಿಗೆ ಬರುವಂತೆ, ವಿಧಾನ ಸಭಾ/ವಿಧಾನ ಪರಿಷತ್ ಸಚಿವಾಲಯಕ್ಕೆ ವರ್ಗಾಯಿಸಿ ಆದೇಶಿಸಿದೆ ಮತ್ತು ವಿಧಾನ ಸಭಾ/ವಿಧಾನ ಪರಿಷತ್ ಸದಸ್ಯರುಗಳ ಆಪ್ತ ಸಹಾಯಕರುಗಳ ವೇತನವನ್ನು ಆಯಾಯ ಕಾರ್ಯಾಲಯದ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು ಕ್ರಮವಾಗಿ ಲೆಕ್ಕಶೀರ್ಷಿಕೆ 2011–02–101–0–09 ರಡಿ ವಿಧಾನ ಸಭೆ ಸದಸ್ಯರುಗಳ ಆಪ್ತ ಸಹಾಯಕರು ಹಾಗೂ ಲೆಕ್ಕಶೀರ್ಷಿಕೆ 2011–02–102–0–09 ರಡಿ ವಿಧಾನ ಪರಿಷತ್ತಿನ ಸದಸ್ಯರುಗಳ ಆಪ್ತ ಸಹಾಯಕರು ಇದರಡಿಯಲ್ಲಿ ಸೆಳೆದು ಪಾವತಿಸತಕ್ಕದ್ದು ಹಾಗೂ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಕಾರ್ಯದರ್ಶಿಗಳು ಆಯವ್ಯಯ ಹಂಚಿಕೆ ಹಾಗೂ ನಿಯಂತ್ರಣ ಪ್ರಾಧಿಕಾರಿಗಳಾಗಿರುತ್ತಾರೆ ಎಂದು ಆದೇಶಿಸಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:01ರ ಆರ್ಥಿಕ ಇಲಾಖೆಯ ಆದೇಶ ದಿನಾಂಕ:06.03.2021 ರನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಗಳು ಆಯವ್ಯಯ ಹಂಚಿಕೆ ಮತ್ತು ನಿಯಂತ್ರಣ ಪ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಆಪ್ತ ಸಹಾಯಕರುಗಳ ನೇಮಕಾತಿ/ಸೇವಾ ವಿಷಯ/ವೇತನ/ಮತ್ತಿತರ ಭತ್ಯೆಗಳ ಪಾವತಿಯನ್ನು 2021–22ನೇ ಸಾಲಿನಿಂದ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ನಿರ್ವಹಿಸುವ ಪ್ರಸ್ತಾವನೆಯನ್ನು ಮಾನ್ಯ ಸಭಾಪತಿಯವರು ಅನುಮೋದಿಸಿರುತ್ತಾರೆ.

ಆದೇಶ ಸಂಖ್ಯೆ:ಕವಿಪ:ಆ–1:10:ವಿಪಸಸ:2021
ಬೆಂಗಳೂರು, ದಿನಾಂಕ:20.04.2021.

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಆಪ್ತ ಸಹಾಯಕರುಗಳ ನೇಮಕಾತಿ/ಸೇವಾ ವಿಷಯ/ವೇತನ/ಮತ್ತಿತರ ಭತ್ಯೆಗಳ ಪಾವತಿಯನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ನಿರ್ವಹಿಸಲು ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಗಳು ಆಯವ್ಯಯ ಹಂಚಿಕೆ ಹಾಗೂ ನಿಯಂತ್ರಣ ಪ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಆಪ್ತ ಸಹಾಯಕರುಗಳ ವೇತನವನ್ನು ಲೆಕ್ಕಶೀರ್ಷಿಕೆ 2011–02–102–0–09 ರಡಿಯಲ್ಲಿ ಸೆಳೆದು ಪಾವತಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶದ ರೀತ್ಯಾ ಹೊರಡಿಸಲಾಗಿದೆ.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಎನ್. ಜಯಂತಿ)
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 20 ರಾರಾಆ 2012 (ಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು
ದಿನಾಂಕ:27.6.2012

ಸುತ್ತೋಲೆ

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ/ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ.

ಉಲ್ಲೇಖ: 1. ಸುತ್ತೋಲೆ ಸಂ.ಸಿಆಸುಇ 2 ರಾರಾಆ 2004, ದಿನಾಂಕ:11.2.2004
2. ಸುತ್ತೋಲೆ ಸಂ.ಸಿಆಸುಇ 58 ರಾರಾಆ 2008, ದಿನಾಂಕ:29.9.2009
3. ಸುತ್ತೋಲೆ ಸಂ.ಸಿಆಸುಇ 2 ಹೆಚ್‌ಡಬ್ಲ್ಯೂಪಿ 2010, ದಿನಾಂಕ:7.12.2010

ಸರ್ಕಾರಿ ಸಮಾರಂಭಗಳಲ್ಲಿ ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಯಾವ ರೀತಿ ಸ್ಥಾನಮಾನಗಳನ್ನು ಶಿಷ್ಟಾಚಾರದೊಂದಿಗೆ ನೀಡಬೇಕೆಂಬುದರ ಬಗ್ಗೆ ರಾಜ್ಯ ಸರ್ಕಾರವು ಈಗಾಗಲೇ ಹಲವಾರು ಬಾರಿ ನಿರ್ದೇಶನಗಳನ್ನು ನೀಡಿರುವುದಲ್ಲದೆ, ದಿನಾಂಕ:29.9.2009ರ ಸುತ್ತೋಲೆಯೊಂದಿಗೆ ಎಲ್ಲಾ ಸುತ್ತೋಲೆಗಳ ಸಂಗ್ರಹಗಳ ಪ್ರತಿಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ. ಈಗಾಗಲೇ ನೀಡಿರುವ ಸೂಚನೆಗಳ ಕೆಲವು ಅಂಶಗಳನ್ನು ಪರಿಷ್ಕರಿಸುವ ಕುರಿತು ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

1. ಚುನಾಯಿತ ಜನ ಪ್ರತಿನಿಧಿಗಳಲ್ಲದ ನಿಗಮ/ಮಂಡಳಿಗಳ ಅಧ್ಯಕ್ಷರುಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ಕಾರ್ಯಕ್ರಮಕ್ಕೆ ಆಹ್ವಾನಿಸತಕ್ಕದ್ದು;
2. ರಾಜ್ಯ ಸರ್ಕಾರದ ಕಾರ್ಯಕ್ರಮಗಳಿಗೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಆಹ್ವಾನಿಸತಕ್ಕದ್ದು;
3. ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ವಿಧಾನ ಪರಿಷತ್ತಿನ ಸದಸ್ಯರು ಸದರಿ ತಾಲ್ಲೂಕು ಸಮಿತಿಯ ಸಹ ಅಧ್ಯಕ್ಷರಾಗಿರತಕ್ಕದ್ದು;
4. ಜಿಲ್ಲಾ ಉಸ್ತುವಾರಿ ಸಚಿವರನ್ನು ಆಹ್ವಾನಿಸವುದನ್ನು ಒಳಗೊಂಡಂತೆ ಸರ್ಕಾರದ ಆ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಅನುಮೋದನೆಯೊಂದಿಗೆ, ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು;
5. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ, ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು)

ಮತ್ತು ಶಾಸಕರು (ವಿಧಾನ ಸಭೆ)" ಎಂದು ನಮೂದು ಮಾಡುವಂತೆ ಈಗಾಗಲೇ ಸೂಚಿಸಿರುವುದನ್ನು ಪುನರುಚ್ಚರಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಹೊರಡಿಸಿದ್ದಾಗ್ಯೂ ಶಿಷ್ಟಾಚಾರ ಉಲ್ಲಂಘನೆಯಾದಲ್ಲಿ, ಆಯಾ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಹಾಗೂ ಅವರ ಮೇಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಯಪಡಿಸಲಾಗಿದೆ.

ಎಸ್.ವಿ. ರಂಗನಾಥ್
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು
2. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ
3. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ
4. ಎಲ್ಲಾ ಪ್ರಾದೇಶಿಕ ಆಯುಕ್ತರು
5. ಎಲ್ಲಾ ಜಿಲ್ಲಾಧಿಕಾರಿಗಳು
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
9. ಎಲ್ಲಾ ಉಪ ವಿಭಾಗಾಧಿಕಾರಿಗಳು
10. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು
11. ಎಲ್ಲಾ ಪುರಸಭಾ ಆಯುಕ್ತರು
12. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು/ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಹಣಾಧಿಕಾರಿಗಳು
13. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು
14. ಹೆಚ್ಚುವರಿ ಪ್ರತಿಗಳು : ಶಾಖಾ ರಕ್ಷಾ ಕಡತ

ಮಾಹಿತಿಗಾಗಿ:

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನ ಸೌಧ
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ: 05ನೇ ಅಕ್ಟೋಬರ್, 2004

ಸಂಖ್ಯೆ: 859

ಮಾನ್ಯ ಸಭಾಪತಿಗಳು ಕರ್ನಾಟಕ ವಿಧಾನ ಪರಿಷತ್ತು ಹಾಗೂ ಮಾನ್ಯ ಸಭಾಧ್ಯಕ್ಷರು ಕರ್ನಾಟಕ ವಿಧಾನ ಸಭೆ ಅವರು ಇನ್ನು ಮುಂದೆ ಸಮಿತಿಗಳು ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ದಿನಾಂಕ: 04–10–2004 ರಂದು ನಡೆಸಿದ ಜಂಟಿ ಸಭೆಯಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸುವಂತೆ ನಿರ್ದೇಶಿಸಿರುತ್ತಾರೆ.

1. ಯಾವುದೇ ಒಂದು ಸಮಿತಿಯು, ಸಮಿತಿಯ ಒಂದು ವರ್ಷದ ಅವಧಿಯಲ್ಲಿ ಉತ್ತರ ಭಾರತ, ದಕ್ಷಿಣ ಭಾರತ ಅಥವಾ ಎರಡೂ ಸೇರಿ ಒಟ್ಟು 15 ದಿನಗಳಿಗಿಂತ ಹೆಚ್ಚು ಅವಧಿಯ ಅಧ್ಯಯನ ಪ್ರವಾಸ ಕೈಗೊಳ್ಳುವಂತಿಲ್ಲ.
2. ಪ್ರವಾಸ ಕೈಗೊಳ್ಳುವ ಸಮಿತಿಯ ಸದಸ್ಯರ ಸಂಖ್ಯೆಯು ಕನಿಷ್ಠ 1/3ಕ್ಕಿಂತ ಕಡಿಮೆ ಇರಬಾರದು.
3. ಸಮಿತಿಗಳು ಇತರ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿರುವ ಸಹ ಸಮಿತಿಗಳು (Sister Committee) ಇರುವ ಸ್ಥಳಗಳಿಗೆ ಅಥವಾ ಇತರೆ ರಾಜ್ಯಗಳ ರಾಜಧಾನಿಯಲ್ಲಿರುವ ವಿಧಾನ ಮಂಡಲ ಕಾರ್ಯಾಲಯಗಳಿಗೆ ಅಧಿಕೃತ ಭೇಟಿ ಕೊಟ್ಟು ಪೀಠಾಸೀನಾಧಿಕಾರಿಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರೊಂದಿಗೆ ಕಡ್ಡಾಯವಾಗಿ ಸಭೆಗಳನ್ನು ನಡೆಸತಕ್ಕದ್ದು.
4. ರಸ್ತೆ ಹಾಗೂ ರೈಲು ಪ್ರಯಾಣ ಹೊರತು ಪಡಿಸಿ ಸಮಿತಿಯ ಪ್ರವಾಸದೊಂದಿಗೆ ಸದಸ್ಯರ ಸಂಖ್ಯೆ ಒಟ್ಟು 20ಕ್ಕೆ ಮೀರಿದಿದ್ದಲ್ಲಿ ಓರ್ವ ಅಧಿಕಾರಿ ಮತ್ತು ಓರ್ವ ವರದಿಗಾರರು ಮಾತ್ರ ಪ್ರವಾಸ ಮಾಡಬಹುದಾಗಿದ್ದು ಯಾವುದೇ ಕಾರಣಕ್ಕೂ ಅಧಿಕಾರಿ/ನೌಕರರ ಸಂಖ್ಯೆ ಹೆಚ್ಚಾಗದಂತೆ ನಿರ್ಬಂಧಿಸಲಾಗಿದೆ. ಒಂದು ವೇಳೆ ಸದಸ್ಯರ ಸಂಖ್ಯೆ 20ಕ್ಕೆ ಮೀರಿದ್ದಲ್ಲಿ ಮತ್ತೊಬ್ಬ ಅಧಿಕಾರಿ ಸಭಾಧ್ಯಕ್ಷರ ವಿಶೇಷ ಅನುಮತಿ ಪಡೆದು ಸಮಿತಿಯ ಸಂಗಡ ಪ್ರವಾಸ ಕೈಗೊಳ್ಳಬಹುದಾಗಿರುತ್ತದೆ.

5. ಸದಸ್ಯರುಗಳು ಸಮಿತಿಯ ಅಧ್ಯಯನ ಪ್ರವಾಸದ ಮೊದಲು ಅಥವಾ ಅಂತ್ಯದಲ್ಲಿ ಅಥವಾ ಮಧ್ಯದಲ್ಲಿ ಯಾವುದೇ ಅಧಿಕೃತ ಕಾರ್ಯಕ್ರಮಗಳಿಲ್ಲದೆ ಬೆಂಗಳೂರಿಗೆ ಅಥವಾ ಅವರ ಕ್ಷೇತ್ರಕ್ಕೆ ಅಥವಾ ಇನ್ನೂ ಯಾವುದೇ ಸ್ಥಳಗಳಿಗೆ ಅಂಗೀಕೃತ ಪ್ರವಾಸವನ್ನು ಹೊರತುಪಡಿಸಿ ಪ್ರವಾಸ ಮಾಡಿದ್ದಲ್ಲಿ, ಅಂತಹ ಪ್ರವಾಸಕ್ಕೆ ಯಾವುದೇ ರೀತಿಯ ಪ್ರಯಾಣಭತ್ಯೆ/ದಿನ ಭತ್ಯೆ ಪಾವತಿ ಮಾಡಲಾಗುವುದಿಲ್ಲ.
6. ಪ್ರವಾಸಕ್ಕೆ ಮೊದಲು ಅಥವಾ ಪ್ರವಾಸದ ನಂತರ ಹೊರ ರಾಜ್ಯದ ಸಭೆ ನಡೆಯುವ/ನಡೆದಂತಹ ಸ್ಥಳಗಳಿಂದ ವಿಮಾನ ಪ್ರಯಾಣ ಮಾಡಿದ್ದಲ್ಲಿ ಆ ಪ್ರಯಾಣಕ್ಕೆ ವಿಮಾನ ಪ್ರಯಾಣದ ಮೂಲ ಟಿಕೇಟ್‌ಗಳನ್ನು ಹಾಜರುಪಡಿಸಿ ವಿಮಾನ ಪ್ರಯಾಣ ದರವನ್ನು ಅಥವಾ ಮೊದಲ ದರ್ಜೆ ರೈಲು ಪ್ರಯಾಣ ದರವನ್ನು ಮಾತ್ರ ಪಡೆಯಲು ಸದಸ್ಯರು ಅರ್ಹರಾಗಿರುತ್ತಾರೆ. ಒಂದು ವೇಳೆ ಪ್ರಯಾಣಿಸಬೇಕಾದ ಸ್ಥಳಗಳಲ್ಲಿ ರೈಲು/ವಿಮಾನ ಸಂಪರ್ಕ ಹೊಂದಿರದಿದ್ದಲ್ಲಿ, ಸಮೀಪದ ರೈಲು/ವಿಮಾನ ನಿಲ್ದಾಣದವರೆಗೆ ಕಿ.ಮಿ. ಆಧಾರದ ಮೇಲೆ ಪ್ರಯಾಣ ಭತ್ಯೆ ಪಾವತಿ ಮಾಡಲಾಗುವುದು.
7. ಸಮಿತಿಯ ಸದಸ್ಯರು/ಅಧಿಕಾರಿಗಳು ಅಧ್ಯಯನ ಪ್ರವಾಸದ ಅವಧಿಯಲ್ಲಿ ಸ್ಥಳೀಯ ಪ್ರಯಾಣಕ್ಕಾಗಿ (local journey) ಆಯಾ ರಾಜ್ಯದವರು ಸರ್ಕಾರಿ ವಾಹನ ಒದಗಿಸದಿದ್ದಲ್ಲಿ ಮಾತ್ರ ಸಂಬಂಧಪಟ್ಟ ರಾಜ್ಯ ಪ್ರವಾಸೋದ್ಯಮ ನಿಗಮದ ವಾಹನವನ್ನು ಒದಗಿಸಲು ಏರ್ಪಾಟು ಮಾಡುವುದು. ಸದರಿ ಹಣಕ್ಕೆ ಸಮಿತಿಯ ಅಧಿಕಾರಿಗಳು ಪ್ರವಾಸದ ನಂತರ ಲೆಕ್ಕಪತ್ರ ಶಾಖೆಗೆ ವಿವರವಾದ ಲೆಕ್ಕವನ್ನು ಒಪ್ಪಿಸತಕ್ಕದ್ದು.
8. ಸಮಿತಿಗಳು ಪ್ರವಾಸ ಪೂರೈಸಿ ಹಿಂತಿರುಗಿದ ಒಂದು ತಿಂಗಳೊಳಗೆ ಸಮಿತಿಯ ಅಧಿಕಾರಿಗಳು ತಮ್ಮ ಪ್ರವಾಸ ಹಾಗೂ ಸಮಿತಿಯ ಅಧಿಕೃತ ಕಾರ್ಯಕಲಾಪಗಳ ವಿವರವಾದ ವರದಿಯನ್ನು ಕಡ್ಡಾಯವಾಗಿ ಕಾರ್ಯದರ್ಶಿಗಳ ಮೂಲಕ ಮಾನ್ಯ ಸಭಾಧ್ಯಕ್ಷರ/ಮಾನ್ಯ ಸಭಾಪತಿಗಳಿಗೆ ಸಲ್ಲಿಸತಕ್ಕದ್ದು.
9. ಸದಸ್ಯರ ಕುಟುಂಬದ ಖರ್ಚುವೆಚ್ಚಗಳನ್ನು ಸಮಿತಿಯು ಭರಿಸತಕ್ಕದ್ದಲ್ಲ.

ಮೇಲಿನ ಮಾರ್ಗಸೂಚಿಗಳನ್ನು ಎಲ್ಲಾ ಸಮಿತಿಗಳು ಹಾಗೂ ಅಧಿಕಾರಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು.

ವಿ.ಆರ್. ಸುದರ್ಶನ್
ಮಾನ್ಯ ಸಭಾಪತಿಗಳು

ಕೃಷ್ಣ
ಮಾನ್ಯ ಸಭಾಧ್ಯಕ್ಷರು

1. ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ
2. ವಿಧಾನ ಪರಿಷತ್ತಿನ ಎಲ್ಲಾ ಸಮಿತಿಯ ಅಧಿಕಾರಿಗಳಿಗೆ

ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಷಯ: ವಿಧಾನ ಮಂಡಲದ ಸಮಿತಿಗಳು ವಿದೇಶ ಮತ್ತು ಸ್ವದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ

ಓದಲಾಗಿದೆ:

ಕಡತದ ಸಂಖ್ಯೆ: ಕವಿಸಸ/ಪ.ಜಾ/ಪ.ಪ./42/ಆ.ಪ್ರ/2008-09

ಪ್ರಸ್ತಾವನೆ:

12ನೇ ವಿಧಾನ ಸಭೆಯ ಅವಧಿಯಲ್ಲಿ 05 ವರ್ಷದ ಅವಧಿಯಲ್ಲಿ ಸಮಿತಿಗಳು ಎರಡು ಬಾರಿ ಸ್ವದೇಶಿ ಅಧ್ಯಯನ ಪ್ರವಾಸ ಹಾಗೂ ಒಮ್ಮೆ ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳಲು ಅಂದಿನ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಅನುಮತಿ ನೀಡಿದ್ದರು. ವಿಧಾನ ಮಂಡಲದ ಸಮಿತಿಗಳು ಒಂದು ಬಾರಿ ವಿದೇಶ ಅಧ್ಯಯನ ಪ್ರವಾಸ ಹಾಗೂ ಮೂರು ಬಾರಿ ಸ್ವದೇಶಿ ಅಧ್ಯಯನ ಪ್ರವಾಸ ಕೈಗೊಳ್ಳಲು ಅನುವು ಮಾಡಿಕೊಡಲು ಮಾನ್ಯ ಸಭಾಧ್ಯಕ್ಷರ ಸೂಚನೆಯಂತೆ ವಿಶೇಷ ಮಂಡಳಿಯ ಮುಂದೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಈ ಸಂಬಂಧ ಕೆಲವು ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಿ, ಸದರಿ ಪ್ರಸ್ತಾವನೆಗೆ ಮಾನ್ಯ ವಿಶೇಷ ಮಂಡಳಿಯು ಅನುಮೋದನೆ ನೀಡಿರುತ್ತದೆ. ಇದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಕವಿಸಸ/ಆ-1/103/ಅ.ಪ್ರ.ಮಾ./2009,
ಬೆಂಗಳೂರು, ದಿನಾಂಕ:06ನೇ ಜೂನ್, 2009.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಧಾನ ಮಂಡಲದ ವಿವಿಧ ಸಮಿತಿಗಳು ವಿದೇಶಿ ಪ್ರವಾಸ ಕೈಗೊಳ್ಳುವ ಸಂಬಂಧ ಈ ಕೆಳಕಂಡ ನಿಯಮಗಳನ್ನು ವಿಧಿಸಲಾಗಿದೆ.

1) ಒಬ್ಬ ಸದಸ್ಯರು ಅವರ ಸದಸ್ಯತ್ವದ ಅವಧಿಯಲ್ಲಿ ಯಾವುದಾದರೂ ಒಂದು ಸಮಿತಿಯೊಂದಿಗೆ ಒಂದು ಬಾರಿ ಮಾತ್ರ ವಿದೇಶಿ ಪ್ರವಾಸ ಕೈಗೊಳ್ಳತಕ್ಕದ್ದು;

2) ಒಬ್ಬ ಸದಸ್ಯರು ಒಂದು ಸಮಿತಿಯೊಂದಿಗೆ ವಿದೇಶಿ ಪ್ರವಾಸ ಕೈಗೊಂಡ ಪಕ್ಷದಲ್ಲಿ ಅವರು ಮುಂದಿನ ವರ್ಷಗಳಲ್ಲಿ ಬೇರೆ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವಾದ ಆ ಸಮಿತಿಯು ವಿದೇಶಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಮತ್ತೊಮ್ಮೆ ಯಾವುದೇ ಸಮಿತಿಯೊಂದಿಗೆ ಎರಡನೇ ಬಾರಿ ವಿದೇಶಿ ಪ್ರವಾಸ ಕೈಗೊಳ್ಳಲು ಅವಕಾಶ ನೀಡುವಂತಿಲ್ಲ;

3) ಸಮಿತಿಯು ದೂರದ ದೇಶಕ್ಕೆ ವಿದೇಶಿ ಪ್ರವಾಸ ನಿಗದಿಗೊಳಿಸಿದ ಸಂದರ್ಭದಲ್ಲಿ ಮಾರ್ಗದ ಮಧ್ಯೆ(enroute) ಇರುವ ದೇಶಗಳಿಗೆ ಮಾತ್ರ ಭೇಟಿ ನೀಡತಕ್ಕದ್ದು;

4) ಸಮಿತಿಯು ಅಧ್ಯಯನ ಪ್ರವಾಸವನ್ನು ಪ್ರಯಾಣ ದಿನಗಳನ್ನು ಹೊರತುಪಡಿಸಿ ಒಟ್ಟು 15 ದಿನಗಳು ಮೀರದಂತೆ ಕೈಗೊಳ್ಳತಕ್ಕದ್ದು;

5) ಸಮಿತಿಯೊಂದಿಗೆ ವಿದೇಶಿ ಅಧ್ಯಯನ ಕೈಗೊಳ್ಳುವ ಸದಸ್ಯರು ಹಾಗೂ ಅಧಿಕಾರಿಗಳ ಖರ್ಚು–ವೆಚ್ಚವನ್ನು (ಪ್ರಯಾಣ ಭತ್ಯೆ/ದಿನ ಭತ್ಯೆ ಸೇರಿದಂತೆ) ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 9 ಎಸ್‌ಆರ್‌ಎ 2000, ದಿನಾಂಕ:20.11.2003ರನ್ವಯ ನಿಯಂತ್ರಣಗೊಳಿಸತಕ್ಕದ್ದು;

6) ಅಧ್ಯಯನ ಪ್ರವಾಸ ಕೈಗೊಳ್ಳುವ ಸದಸ್ಯರು/ಅಧಿಕಾರಿಗಳು ಎಕಾನಮಿ ದರ್ಜೆಯಲ್ಲಿ (economy class) ಮಾತ್ರ ಪ್ರಯಾಣ ಕೈಗೊಳ್ಳತಕ್ಕದ್ದು;

7) ಅಂತಿಮ ಪ್ರಯಾಣ ಬಿಲ್ಲನ್ನು ಸಲ್ಲಿಸುವಾಗ ಅಗತ್ಯ ದಾಖಲೆಗಳನ್ನು ಅಂದರೆ ವಿಮಾನಯಾನಕ್ಕೆ ಸಂಬಂಧಪಟ್ಟ ಬಿಲ್ಲುಗಳು, ಬೋರ್ಡಿಂಗ್ ಪಾಸ್ ಹೋಗುವ ಹೋಟೆಲ್ ರೆಂಟಲ್ ರಸೀದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಹಾಗೂ ಮೇಲೆ ತಿಳಿಸಿದ ಆದೇಶದನ್ವಯ ಅವರ ಪ್ರಯಾಣ ಭತ್ಯೆಯನ್ನು ಪಡೆಯತಕ್ಕದ್ದು;

8) ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಮಿತಿಯೊಂದಿಗೆ ಪ್ರಯಾಣ ಮಾಡುವ ಅಧಿಕಾರಿ/ನೌಕರರ (ವರದಿಗಾರರು ಸೇರಿದಂತೆ) ಸಂಖ್ಯೆಯನ್ನು ಮೂರಕ್ಕೆ ಮಿತಿಗೊಳಿಸತಕ್ಕದ್ದು;

9) ಸಚಿವಾಲಯದ–ಅಧಿಕಾರಿಗಳು ಯಾವುದೇ ಒಂದಕ್ಕಿಂತ ಹೆಚ್ಚಿನ ಸಮಿತಿಗಳಲ್ಲಿ ಇದ್ದ ಪಕ್ಷದಲ್ಲಿ ವಿಧಾನ ಸಭೆಯ ಒಂದು ಅವಧಿಯಲ್ಲಿ ಯಾವುದಾರೂ ಒಂದು ಸಮಿತಿಯೊಂದಿಗೆ ಒಮ್ಮೆ ಮಾತ್ರ ಪ್ರವಾಸ ಕೈಗೊಳ್ಳತಕ್ಕದ್ದು;

10) ವಿದೇಶಿ ಅಧ್ಯಯನ ಪ್ರವಾಸ ಕೈಗೊಂಡ ಸಮಿತಿಗೆ ಪ್ರವಾಸದ ನಂತರ ಪ್ರವಾಸಕ್ಕೆ ಸಂಬಂಧಪಟ್ಟ ಸಂಕ್ಷಿಪ್ತ ವರದಿಯನ್ನು ಪೀಠಾಸೀನಾಧಿಕಾರಿಗಳಿಗೆ (ಮಾನ್ಯ ಸಭಾಪತಿಯವರು/ಮಾನ್ಯ ಸಭಾಧ್ಯಕ್ಷರು) ಸಲ್ಲಿಸತಕ್ಕದ್ದು;

11) ವಿದೇಶಿ ಅಧ್ಯಯನ ಪ್ರವಾಸಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಪಟ್ಟಿಗೆ ಸನ್ಮಾನ್ಯ ಸಭಾಪತಿಯವರ/ಸನ್ಮಾನ್ಯ ಸಭಾಧ್ಯಕ್ಷರ ಅನುಮೋದನೆ ಪಡೆಯತಕ್ಕದ್ದು.

ವಿಶೇಷ ಮಂಡಳಿಯ ಆದೇಶಾನುಸಾರ,

(ಎಸ್.ಜಿ. ಪಾಟೀಲ್)
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಪ್ರತಿಗಳು:

1. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ಸಚಿವಾಲಯ.
2. ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ 1 ಮತ್ತು 2, ಕವಿಸಸ.
3. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
4. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕವಿಸ.
5. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕವಿಪ.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಸಮಿತಿ ಶಾಖೆಗಳ ಸಂಬಂಧಪಟ್ಟ ಅಧಿಕಾರಿಗಳಿಗೆ, ಕವಿಸಸ.
8. ಕ್ಷೇತ್ರಾಧಿಕಾರಿ/ಸಹಾಯಕ ಕ್ಷೇತ್ರಾಧಿಕಾರಿಗಳು, ಶಾಸಕರ ಭವನ, ಕವಿಸಸ.
9. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
10. ಅಧೀನ ಕಾರ್ಯದರ್ಶಿ, ಲೆಕ್ಕಪತ್ರ ಶಾಖೆ, ಕವಿಸಸ.
11. ಸಮಿತಿ ಶಾಖೆಗಳ ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಕವಿಸಸ.
12. ಶಾಖಾಧಿಕಾರಿ, ಆಡಳಿತ ಶಾಖೆ–II/ಲೆಕ್ಕಪತ್ರ–II, ಕವಿಸಸ.
13. ಆರ್ಥಿಕ ಅಧಿಕಾರಿ, ಕವಿಸಸ.
14. ಸಂಬಂಧಪಟ್ಟ ಕಡತಕ್ಕೆ/ರಕ್ಷ ಕಡತಕ್ಕೆ/ಬಿಡಿ ಪ್ರತಿಗಳು.

ಕರ್ನಾಟಕ ವಿಧಾನ ಸಭೆ ಸಚಿವಾಲಯ

ಸಂಖ್ಯೆ:ಕವಿಸಸ.ಸ.ಪ್ರ.ಸಿ.ನಿ.ಬ./2010

ವಿಧಾನ ಸಭೆ ಸಚಿವಾಲಯ,
ವಿಧಾನಸೌಧ, ಅಂಚೆ ಪೆಟ್ಟಿಗೆ ಸಂಖ್ಯೆ:5074
ಬೆಂಗಳೂರು-560 233, ದಿನಾಂಕ:10-06-2010

ಸುತ್ತೋಲೆ

ವಿಷಯ: ಕರ್ನಾಟಕ ವಿಧಾನ ಮಂಡಲದ ಸಮಿತಿಗಳ ಜೊತೆ ಹೊರ ರಾಜ್ಯಗಳಲ್ಲಿ/ರಾಜ್ಯದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳಲು ಅಧಿಕಾರಿ/ನೌಕರರನ್ನು ನಿಯೋಜಿಸುವ ಸಂಬಂಧ ಅನುಸರಿಸಬೇಕಾದ ಮಾರ್ಗಸೂಚಿಗಳು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ವಿಸಸ/ಆ-1/292/ಅಪ್ರ/06-07, ದಿನಾಂಕ:02.05.2007.

*****

ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳು ಅಧ್ಯಯನ ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ಸಮಿತಿಯೊಂದಿಗೆ ಸಹಕರಿಸಲು ಪ್ರವಾಸದಲ್ಲಿ ಪಾಲ್ಗೊಳ್ಳಲು ನಿಯೋಜಿಸಲಾಗುವ ಅಧಿಕಾರಿ/ನೌಕರರುಗಳಿಗೆ ಸಂಬಂಧಿಸಿದಂತೆ ಕೆಲವೊಂದು ನಿಬಂಧನೆ ಹಾಗೂ ಮಾರ್ಗಸೂಚಿಗಳನ್ನು ದಿನಾಂಕ:08-09-2005, 02-05-2007ರ ಸುತ್ತೋಲೆಯಲ್ಲಿ ಹೊರಡಿಸಲಾಗಿರುತ್ತದೆ.

ಪ್ರಸ್ತುತ ಸಮಿತಿಯ ಪ್ರವಾಸ ಸಂದರ್ಭಗಳಲ್ಲಿ ಸಮಿತಿಯೊಂದಿಗೆ ಪ್ರಯಾಣಿಸಲು ಅಧಿಕಾರಿಗಳು/ಸಿಬ್ಬಂದಿಗೆ ಅನುಮತಿ ನೀಡಿದ್ದರೂ ಗ್ರೂಪ್ 'ಸಿ' ಸಿಬ್ಬಂದಿಯನ್ನು ಕರೆದೊಯ್ಯಲು ಉಲ್ಲೇಖಿತ ಸುತ್ತೋಲೆಯಲ್ಲಿ ಹೊರಡಿಸಲಾಗಿರುವ ನಿಬಂಧನೆಗಳನ್ನು/ಮಾರ್ಗಸೂಚಿಗಳನ್ನು ಸಡಿಲಗೊಳಿಸಿ ಅನುಮತಿ ನೀಡಲು ಪ್ರಸ್ತಾವನೆಗಳನ್ನು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸುತ್ತಿರುವುದು ಗಮನಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖಿತ ಸುತ್ತೋಲೆಯನ್ನು ಭಾಗಶ: ಮಾರ್ಪಡಿಸಿದಂತೆ, ಸಮಿತಿಗಳು ಹೊರ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಂದರ್ಭಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಸೂಚಿಸಲಾಗಿದೆ.

1. ಸಮಿತಿಯು ಹೊರ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ ಸಮಿತಿಯೊಂದಿಗೆ ಒಟ್ಟು ಅಧಿಕಾರಿ ಒಬ್ಬ ವರದಿಗಾರರು ಹಾಗೂ ಒಬ್ಬ ಗ್ರೂಪ್ 'ಸಿ' ಸಿಬ್ಬಂದಿ ಸಮಿತಿಗೆ ನೆರವಾಗಲು ಪ್ರಯಾಣಿಸಬಹುದಾಗಿದೆ. ವರದಿಗಾರರು ಲಭ್ಯವಿಲ್ಲದಿದ್ದಲ್ಲಿ ಶೀಘ್ರಲಿಪಿಗಾರರು ಸಮಿತಿಯೊಂದಿಗೆ ಪ್ರಯಾಣಿಸಬಹುದು. ಗ್ರೂಪ್ 'ಸಿ' ನೌಕರರನ್ನು ಸಂಬಂಧಪಟ್ಟ ಶಾಖೆಯಿಂದಲೇ ಅಥವಾ ಸಮಿತಿಗೆ ಸಂಬಂಧಪಟ್ಟ ಅಧಿಕಾರಿಗಳ ಆಪ್ತ ಶಾಖೆಯಿಂದಲೇ ಕರೆದುಕೊಂಡು ಹೋಗಬೇಕು ಹಾಗೂ ಎಲ್ಲಾ ಗ್ರೂಪ್ 'ಸಿ' ಸಿಬ್ಬಂದಿಗೆ ಅವಕಾಶ ಕಲ್ಪಿಸುವಲ್ಲಿ ಮೇಲಾಧಿಕಾರಿಗಳು ನಿಗಾವಹಿಸುವುದು ಹಾಗೂ ಈ ದೆಸೆಯಲ್ಲಿ ಅವರುಗಳೇ ಜವಾಬ್ದಾರರಾಗಿರುತ್ತಾರೆ.

2. ಸಮಿತಿಯೊಂದಿಗೆ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಅಧಿಕಾರಿಯು ಹೊರ ರಾಜ್ಯಗಳಲ್ಲಿ ನಡೆಯುವ ಸಭೆಗಳ ಸಾರಾಂಶವನ್ನು ದಾಖಲಿಸಿಕೊಳ್ಳಬೇಕು ಹಾಗೂ ಇತರೆ ಮಾಹಿತಿಗಳೊಂದಿಗೆ ಅಧ್ಯಯನ ಪ್ರವಾಸದ ವರದಿಯನ್ನು ಸಲ್ಲಿಸಬೇಕು.

3. ಅಧ್ಯಯನ ಪ್ರವಾಸವು ಕಡ್ಡಾಯವಾಗಿ ಮಾನ್ಯ ಸಭಾಧ್ಯಕ್ಷರಿಂದ ಅನುಮೋದಿಸಲ್ಪಟ್ಟ ಕಾರ್ಯಸೂಚಿಯಂತೆಯೇ ಇರತಕ್ಕದ್ದು. ಸಮಿತಿಯ ಸಭೆ ನಡೆಸದ/ಹೊರ ರಾಜ್ಯದ ಸಮಿತಿ ಅಥವಾ ಇತರ ಸುಸಂಗತರ ಜೊತೆ ಚರ್ಚೆ ನಡೆಯದೇ ಬರೀ ಪ್ರೇಕ್ಷಣೀಯ/ಧಾರ್ಮಿಕ/ಯಾತ್ರಾ ಸ್ಥಳಗಳಿಗೆ ಸಮಿತಿಗಳು ಭೇಟಿ ನೀಡಿದರೆ ಅವುಗಳಿಗೆ ಸಂಬಂಧಿಸಿದ ವೆಚ್ಚಗಳನ್ನು ಸಮಿತಿಯ ಸದಸ್ಯರುಗಳೇ ಭರಿಸತಕ್ಕದ್ದು.

4. ಹೊರ ರಾಜ್ಯದಲ್ಲಿ ಪ್ರವಾಸ ಕಾಲದಲ್ಲಿ ಸಮಿತಿಯ ಸದಸ್ಯರು ಹೆಲಿಕಾಪ್ಟರ್‌ಗಳನ್ನು ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದರೆ, ಅಧ್ಯಯನ ಪ್ರವಾಸಕ್ಕಾಗಿ ಭೇಟಿ ನೀಡಬೇಕಾದ ಸ್ಥಳಕ್ಕೆ ಬೇರೆ ಯಾವ ರೀತಿಯ ಸಾರಿಗೆ ವ್ಯವಸ್ಥೆಯು ಇಲ್ಲದಿದ್ದು, ಹೆಲಿಕಾಪ್ಟರ್ ಪ್ರಯಾಣ ಅನಿವಾರ್ಯವಾಗಿದ್ದಲ್ಲಿ ಮಾತ್ರ ಈ ಸಂಬಂಧ ಸೂಕ್ತ ದೃಢೀಕರಣವನ್ನು ನೀಡಿದಲ್ಲಿ ಅಂತಹ ವೆಚ್ಚನವನ್ನು ಮಾನ್ಯ ಸಭಾಧ್ಯಕ್ಷರು ಅನುಮತಿಸಿದಲ್ಲಿ ಮಾತ್ರ ಮರುಪಾವತಿ ಮಾಡಲಾಗುವುದು.

5. ಒಟ್ಟು 15 ಜನ ಸದಸ್ಯರು ಅಧಿಕಾರಿ ನೌಕರರು ಜೊತೆಯಲ್ಲಿ ಪ್ರವಾಸ ಮಾಡಬೇಕಾದ ಸಂದರ್ಭದಲ್ಲಿ ಸಂಬಂಧಿತ ರಾಜ್ಯ ಸರ್ಕಾರದ ವಾಹನಗಳು ಲಭ್ಯವಿಲ್ಲದೇ ಮಿನಿ ಬಸ್ಸನ್ನು ಅನಿವಾರ್ಯವಾಗಿ ಬಳಸಿಕೊಳ್ಳಬೇಕಾಗಿದ್ದಲ್ಲಿ ಮಾತ್ರ ಸಮಿತಿಗಳು ಆಯಾ ರಾಜ್ಯಗಳಲ್ಲಿ ಮಿನಿಬಸ್ಸನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ ಪ್ರತಿಯೊಬ್ಬ ಸದಸ್ಯರು/ಅಧಿಕಾರಿಯವರು ಪ್ರತ್ಯೇಕವಾಗಿ ಒಂದೊಂದು ಕಾರುಗಳನ್ನು ಬಳಸದೇ 4-5 ಜನ ಸದಸ್ಯರು, ಅಧಿಕಾರಿಯವರು ಒಟ್ಟಿಗೆ ಒಂದು ಕಾರಿನಂತೆ, ಮಾತ್ರ ಬಳಸಿಕೊಳ್ಳಬಹುದಾಗಿದೆ.

6. ಸಮಿತಿಯ ಅಧ್ಯಯನ ಪ್ರವಾಸದ ಸಮಯದಲ್ಲಿ ವೋಲ್ವೋ ಬಸ್ಸನ್ನು ಬಳಸಲು ಸಮರ್ಥನೀಯ ಕಾರಣಗಳಿದ್ದರೆ ಮಾನ್ಯ ಸಭಾಧ್ಯಕ್ಷರ ಪೂರ್ವಾನುಮತಿಯಿಂದ ಮಾತ್ರ ಉಪಯೋಗಿಸಬಹುದಾಗಿದೆ.

7. ಮಾನ್ಯ ಸದಸ್ಯರ ಮತ್ತು ಅಧಿಕಾರಿ ಮತ್ತು ನೌಕರರ ಪ್ರವಾಸ ಭತ್ಯೆಯನ್ನು ಅಧ್ಯಯನ ಪ್ರವಾಸದ ಕಾರ್ಯಕ್ರಮದ ವಿವರಗಳನ್ನು ನೀಡಿದರೆ ಮಾತ್ರ ಪಾವತಿಸಲಾಗುವುದು. ಅಧ್ಯಯನ ಪ್ರವಾಸದ ವರದಿ ನೀಡದ ಸಮಿತಿಗಳ ಪ್ರವಾಸ ಭತ್ಯೆಯ ಪಾವತಿಯನ್ನು ಕಡ್ಡಾಯವಾಗಿ ತಡೆಹಿಡಿಯಲಾಗುವುದು.

8. ಸಮಿತಿಗಳು ಬೆಂಗಳೂರು ನಗರದಲ್ಲಿ/ರಾಜ್ಯದಲ್ಲಿ ಸ್ಥಳ ಪರಿವೀಕ್ಷಣೆಗೆ ಅಥವಾ ಅಧ್ಯಯನ ಪ್ರವಾಸ ಕೈಗೊಂಡಾಗ ಯಾವ ಅಧಿಕಾರಿ ಹಾಗೂ ಸಿಬ್ಬಂದಿಗಳು ಸಮಿತಿಯೊಂದಿಗೆ ಪ್ರಯಾಣಿಸಲು ಅಗತ್ಯವಿದೆಯೆಂಬ ಬಗ್ಗೆ ಸಂಬಂಧಪಟ್ಟ ಉಪ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ/ಅಪರ ಕಾರ್ಯದರ್ಶಿಯವರುಗಳೇ ನಿರ್ಧರಿಸುವುದು. ಅನುಮತಿ ಪಡೆಯದೇ ಸಮಿತಿಯೊಂದಿಗೆ ಪ್ರಯಾಣಿಸಿದ್ದಲ್ಲಿ ಅಶಿಸ್ತು ಎಂದು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.

ಸಭಾಧ್ಯಕ್ಷರ ಆದೇಶಾನುಸಾರ,

(ಎಸ್.ಜಿ. ಪಾಟೀಲ್)
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಗೆ,

ವಿಧಾನಸಭೆ ಸಚಿವಾಲಯದ ಎಲ್ಲಾ ಅಧಿಕಾರಿ/ನೌಕರರುಗಳಿಗೆ (ಶಾಸಕರ ಭವನವೂ ಸೇರಿದಂತೆ)

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿ, ಕವಿಮಂ.
2. ಕಾರ್ಯದರ್ಶಿ, ಕವಿಸಸ.
3.. ಅಪರ ಕಾರ್ಯದರ್ಶಿ, ಕವಿಸಸ.
4. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯವರಿಗೆ, ಕವಿಸ.
5. ಎಲ್ಲಾ ಸಮಿತಿ ಶಾಖೆಗಳಿಗೆ, ಕವಿಸಸ.
6. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.

ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಷಯ: ವಿಧಾನ ಮಂಡಲದ ಸಮಿತಿಗಳು ವಿದೇಶ ಮತ್ತು ಸ್ವದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ

*****

ಓದಲಾಗಿದೆ:

1. ಈ ಸಚಿವಾಲಯದ ಆದೇಶ ಸಂಖ್ಯೆ:ಕವಿಸಸ/ಆ–1/103/ಅ.ಪ್ರ.ಮಾ./2009, ದಿನಾಂಕ:06.06.2009.
2. ಕಡತ ಸಂಖ್ಯೆ:ವಿಸಸ/ಶಾರಶಾ/540/ವಿಮಸ್ವ/2012.

ಪ್ರಸ್ತಾವನೆ:

12ನೇ ವಿಧಾನಸಭೆಯ 5 ವರ್ಷಗಳ ಅವಧಿಯಲ್ಲಿ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ಸದಸ್ಯರುಗಳು ಮೂರು ಬಾರಿ ಸ್ವದೇಶಿ ಅಧ್ಯಯನ ಪ್ರವಾಸವನ್ನು ಹಾಗೂ ಒಂದು ಬಾರಿ ವಿದೇಶಿ ಅಧ್ಯಯನ ಪ್ರವಾಸವನ್ನು ಕೈಗೊಳ್ಳಲು ಅವಕಾಶ ಕಲ್ಪಿಸಿ, ಅನುಸರಿಸಬೇಕಾದ ಕೆಲವು ಮಾರ್ಗಸೂಚಿಗಳನ್ನು ಸೂಚಿಸಿ ಕ್ರ.ಸಂ.(1)ರಲ್ಲಿ ಓದಲಾಗಿರುವ ಆದೇಶವನ್ನು ಹೊರಡಿಸಲಾಗಿರುತ್ತದೆ.

ಪ್ರಸ್ತುತ ಮಾನ್ಯ ಸದಸ್ಯರುಗಳು ಈಗಾಗಲೇ ಮೂರು ಸ್ವದೇಶಿ ಅಧ್ಯಯನ ಪ್ರವಾಸ ಹಾಗೂ ಒಂದು ವಿದೇಶಿ ಅಧ್ಯಯನ ಪ್ರವಾಸವನ್ನು ಕೈಗೊಂಡಿರುತ್ತಾರೆ. ಹೊರದೇಶಗಳಲ್ಲಿನ ನಗರಾಭಿವೃದ್ಧಿ, ಕೃಷಿ, ಸಾರಿಗೆ, ಮೂಲಭೂತ ಸೌಕರ್ಯ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿ ಮತ್ತು ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಮಾನ್ಯ ಸದಸ್ಯರು ಮತ್ತೊಂದು ಬಾರಿ ವಿದೇಶ ಪ್ರವಾಸ ಕೈಗೊಳ್ಳಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದು ಹಾಗೂ ದಿನಾಂಕ:19.01.2012ರಂದು ನಡೆದ ವಿವಿಧ ಸಮಿತಿಗಳ ಅಧ್ಯಕ್ಷರುಗಳ ಸಭೆಯಲ್ಲಿ ಸಮಿತಿಗಳ ಅಧ್ಯಕ್ಷರುಗಳು ಒಮ್ಮತದಿಂದ ಇನ್ನೊಂದು ವಿದೇಶಿ ಪ್ರವಾಸದ ಅವಕಾಶವನ್ನು ಮಾನ್ಯ ಸದಸ್ಯರುಗಳಿಗೆ ಒದಗಿಸುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ ಅನುಮತಿಯನ್ನು ನೀಡಲು ಹಾಗೂ ಮಾರ್ಗಸೂಚಿಗಳನ್ನು ಅನುಸರಿಸಲು ಸಲ್ಲಿಸಲಾದ ಪ್ರಸ್ತಾವನೆಯನ್ನು ಮಾನ್ಯ ವಿಶೇಷ ಮಂಡಳಿಯ ಕ್ರ.ಸಂ.(2)ರಲ್ಲಿ ಓದಲಾಗಿರುವ ಕಡತದಲ್ಲಿ ಅನುಮೋದಿಸಿರುತ್ತದೆ. ಅದಕ್ಕಾಗಿ ಈ ಆದೇಶ.

ಆದೇಶ ಸಂಖ್ಯೆ: ಕವಿಸಸ/ಆ–1/113/ಶಾರಶಾ/ಸವಿಅಪ್ರ.ಮಾ./2012
ಬೆಂಗಳೂರು, ದಿನಾಂಕ:18ನೇ ಮೇ, 2012

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ಕ್ರ.ಸಂ.(1)ರಲ್ಲಿ ಓದಲಾಗಿರುವ ಆದೇಶವನ್ನು ಭಾಗಶ: ಮಾರ್ಪಡಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ವಿಧಾನ ಮಂಡಲದ ಮಾನ್ಯ ಸದಸ್ಯರು 5 ವರ್ಷಗಳ ಅವಧಿಯಲ್ಲಿ ವಿಧಾನ ಮಂಡಲದ ಸಮಿತಿಗಳೊಂದಿಗೆ ಎರಡು ಬಾರಿ ಸ್ವದೇಶಿ ಅಧ್ಯಯನ ಪ್ರವಾಸ ಹಾಗೂ ಎರಡು ಬಾರಿ ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳಲು ಅನುಮತಿ ನೀಡಲಾಗಿದೆ. ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳು ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಂದರ್ಭಗಳಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

1. ಒಬ್ಬ ಸದಸ್ಯರು ಅವರ ಸದಸ್ಯತ್ವದ ಅವಧಿಯಲ್ಲಿ ಯಾವುದಾದರೂ ಸಮಿತಿಯೊಂದಿಗೆ ಎರಡು ಬಾರಿ ಮಾತ್ರ ವಿದೇಶಿ ಪ್ರವಾಸ ಕೈಗೊಳ್ಳತಕ್ಕದ್ದು.

2. ವಿವಿಧ ಸಮಿತಿಗಳು ವಿಧಾನ ಸಭೆಯ ಅವಧಿಯಲ್ಲಿ/ವಿಧಾನ ಪರಿಷತ್ತಿನ ಸದಸ್ಯರ ಸದಸ್ಯತ್ವದ ಅವಧಿಯಲ್ಲಿ ಎರಡು ಬಾರಿ ಮಾತ್ರ ಸ್ವದೇಶಿ ಪ್ರವಾಸವನ್ನು ಕೈಗೊಳ್ಳತಕ್ಕದ್ದು. ಈ ಸಂದರ್ಭದಲ್ಲಿ ಖಾಸಗಿ ವಿದೇಶ ಪ್ರವಾಸವನ್ನು ಕೈಗೊಳ್ಳತಕ್ಕದ್ದಲ್ಲ.

3. ಸಮಿತಿಯು ದೂರದ ದೇಶಕ್ಕೆ ವಿದೇಶಿ ಪ್ರವಾಸ ನಿಗದಿಗೊಳಿಸಿದ ಸಂದರ್ಭದಲ್ಲಿ ಮಾರ್ಗದ ಮಧ್ಯೆ(enroute) ಇರುವ ದೇಶಗಳಿಗೆ ಮಾತ್ರ ಭೇಟಿ ನೀಡತಕ್ಕದ್ದು.

4. ವಿದೇಶಿ ಅಧ್ಯಯನ ಪ್ರವಾಸವನ್ನು, ಪ್ರಯಾಣ ದಿನಗಳನ್ನು ಹೊರತುಪಡಿಸಿ ಒಟ್ಟು 15 ದಿನಗಳು ಮೀರದಂತೆ ಕೈಗೊಳ್ಳತಕ್ಕದ್ದು;

5. ಸಮಿತಿಯೊಂದಿಗೆ ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸದಸ್ಯರು ಹಾಗೂ ಅಧಿಕಾರಿಗಳ ಖರ್ಚು–ವೆಚ್ಚವನ್ನು (ಪ್ರಯಾಣ ಭತ್ಯೆ/ದಿನ ಭತ್ಯೆ ಸೇರಿದಂತೆ) ಸರ್ಕಾರಿ ಆದೇಶ ಸಂಖ್ಯೆ:ಆಇ/9/ಎಸ್.ಆರ್.ಎ./2000, ದಿನಾಂಕ:20.11.2003 ರನ್ವಯ ನಿಯಂತ್ರಿಸತಕ್ಕದ್ದು;

6. ಅಧ್ಯಯನ ಪ್ರವಾಸ ಕೈಗೊಳ್ಳುವ ಸದಸ್ಯರು/ಅಧಿಕಾರಿಗಳು ಎಕಾನಮಿ ದರ್ಜೆಯಲ್ಲಿ (economy class) ಮಾತ್ರ ಪ್ರಯಾಣ ಕೈಗೊಳ್ಳತಕ್ಕದ್ದು;

7. ಅಂತಿಮ ಪ್ರಯಾಣ ಬಿಲ್ಲನ್ನು ಸಲ್ಲಿಸುವಾದ ಅಗತ್ಯ ದಾಖಲೆಗಳನ್ನು ಅಂದರೆ ವಿಮಾನಯಾನಕ್ಕೆ ಸಂಬಂಧಪಟ್ಟ ಬಿಲ್ಲುಗಳು, ಬೋರ್ಡಿಂಗ್ ಪಾಸ್, ವಾಸ್ತವ್ಯಕ್ಕೆ ಸಂಬಂಧಿಸಿದಂತೆ ಹೋಟೆಲ್ ಬಾಡಿಗೆ ರಸೀದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಹಾಗೂ ಮೇಲೆ ತಿಳಿಸಿದ ಆದೇಶದನ್ವಯ ಅವರ ಪ್ರಯಾಣ/ದಿನ ಭತ್ಯೆಯನ್ನು ಪಡೆಯತಕ್ಕದ್ದು.

8. ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳುವ ಸಮಿತಿಯೊಂದಿಗೆ ಪ್ರಯಾಣ ಮಾಡುವ ಅಧಿಕಾರಿ/ನೌಕರರ (ವರದಿಗಾರರು ಸೇರಿದಂತೆ) ಸಂಖ್ಯೆಯನ್ನು ಮೂರಕ್ಕೆ ಮಿತಗೊಳಿಸತಕ್ಕದ್ದು.

9. ಸಚಿವಾಲಯದ ಅಧಿಕಾರಿಗಳು ಯಾವುದೇ ಒಂದಕ್ಕಿಂತ ಹೆಚ್ಚಿನ ಸಮಿತಿಗಳಲ್ಲಿ ಇದ್ದ ಪಕ್ಷದಲ್ಲಿ ವಿಧಾನ ಸಭೆಯ ಒಂದು ಅವಧಿಯಲ್ಲಿ ಸಮಿತಿಗಳೊಂದಿಗೆ ಎರಡು ಬಾರಿ ಮಾತ್ರ ವಿದೇಶ ಪ್ರವಾಸ ಕೈಗೊಳ್ಳತಕ್ಕದ್ದು.

10.ವಿದೇಶಿ ಅಧ್ಯಯನ ಪ್ರವಾಸ ಕೈಗೊಂಡ ಸಮಿತಿಗೆ ಪ್ರವಾಸದ ನಂತರ ಪ್ರವಾಸಕ್ಕೆ ಸಂಬಂಧಪಟ್ಟ ಸಂಕ್ಷಿಪ್ತ ವರದಿಯನ್ನು ಪೀಠಾಸೀನಾಧಿಕಾರಿಗಳಿಗೆ (ಮಾನ್ಯ ಸಭಾಪತಿಯವರು/ಮಾನ್ಯ ಸಭಾಧ್ಯಕ್ಷರು) ಸಲ್ಲಿಸತಕ್ಕದ್ದು;

11.ವಿದೇಶಿ ಅಧ್ಯಯನ ಪ್ರವಾಸಕ್ಕೆ ಸಂಬಂಧಪಟ್ಟ ಕಾರ್ಯಕ್ರಮ ಪಟ್ಟಿಗೆ ಮಾನ್ಯ ಸಭಾಪತಿಯವರು/ಮಾನ್ಯ ಸಭಾಧ್ಯಕ್ಷರ ಅನುಮೋದನೆ ಪಡೆಯತಕ್ಕದ್ದು.

12. ವಿದೇಶಿ ಅಧ್ಯಯನ ಪ್ರವಾಸಕ್ಕೆ ತಗಲುವ ಖರ್ಚಿನ ಒಟ್ಟು ಶೇಕಡ ೨೦ರಷ್ಟನ್ನು ಮುಂಗಡವಾಗಿ ಪಾವತಿಸಲಾಗುವುದು.

ವಿಶೇಷ ಮಂಡಳಿಯ ಆದೇಶಾನುಸಾರ,

(ಪಿ. ಓಂಪ್ರಕಾಶ)
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಪ್ರತಿಗಳು:

1. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ.
2. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ.
3. ಅಪರ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ.
4. ಮಹಾಲೇಖಪಾಲರು(A&E), ಕರ್ನಾಟಕ, ಬೆಂಗಳೂರು.
5. ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ,
6. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಮಾನ್ಯ ವಿಧಾನ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ.
8. ಕರ್ನಾಟಕ ವಿಧಾನಸಭೆಯ ಸಮಿತಿ ಶಾಖೆಗಳ ಎಲ್ಲಾ ಅಧಿಕಾರಿಗಳು.
9. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಕವಿಸಸ.
11. ಅಧೀನ ಕಾರ್ಯದರ್ಶಿ(ಲೆಕ್ಕಪತ್ರಗಳು), ಕವಿಸಸ.
12. ಶಾಖಾಧಿಕಾರಿ, ಲೆಕ್ಕಪತ್ರ ಶಾಖೆ–1 ಹಾಗೂ 2, ಕವಿಸಸ.
13. ಆರ್ಥಿಕ ಅಧಿಕಾರಿ, ಕವಿಸಸ.
14. ಸಂಬಂಧಪಟ್ಟ ಕಡತಕ್ಕೆ/ರಕ್ಷ ಕಡತಕ್ಕೆ/ಬಿಡಿ ಪ್ರತಿಗಳು.

ಕರ್ನಾಟಕ ವಿಧಾನಸಭೆ

ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಅಂಚೆ ಪೆಟ್ಟಿಗೆ ಸಂಖ್ಯೆ:5074
ಬೆಂಗಳೂರು-560 233.

ಸಂಖ್ಯೆ:ಕವಿಸಸ/ಶಾರಶಾ/86/ಸಅಪ್ರಬ/2014 ದಿನಾಂಕ:03.05.2014

ಸುತ್ತೋಲೆ

ವಿಷಯ: ವಿಧಾನ ಮಂಡಲದ ಸಮಿತಿಗಳು ವಿದೇಶ ಮತ್ತು ಸ್ವದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ.

*****

ಕರ್ನಾಟಕ ವಿಧಾನಮಂಡಲದ ಸಮಿತಿಗಳು ಸ್ವದೇಶ ಮತ್ತು ವಿದೇಶಗಳಲ್ಲಿ ಅಧ್ಯಯನ ಪ್ರವಾಸವನ್ನು ಕೈಗೊಳ್ಳುವ ಬಗ್ಗೆ ಈಗಾಗಲೇ ಆದೇಶ/ಸುತ್ತೋಲೆಗಳನ್ನು ಹೊರಡಿಸಿ ಕೆಲವು ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿತ್ತು. ಆದರೆ, ಸನ್ಮಾನ್ಯ ಸಭಾಧ್ಯಕ್ಷರು ಹಾಗೂ ಸನ್ಮಾನ್ಯ ಸಭಾಪತಿಯವರು ಪ್ರಸ್ತುತ ಮಾರ್ಗಸೂಚಿಯನ್ನು ಪರಿಶೀಲಿಸಿ, ಪರಿಷ್ಕೃತ ಮಾರ್ಗಸೂಚಿಯನ್ನು ರೂಪಿಸುವುದಕ್ಕಾಗಿ ವರದಿ ನೀಡಲು ವಿಧಾನಸಭೆ/ವಿಧಾನ ಪರಿಷತ್ತು ಸಚಿವಾಲಯದ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದು, ಅದು ಸದ್ಯದಲ್ಲಿಯೇ ತನ್ನ ವರದಿಯನ್ನು ಸಲ್ಲಿಸಲಿದೆ. ಸದರಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿ, ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವವರೆವಿಗೂ ವಿಧಾನಸಭೆ ಮತ್ತು ವಿಧಾನಮಂಡಲದ ಸಮಿತಿಗಳು ಯಾವುದೇ ಸ್ವದೇಶಿ/ವಿದೇಶ ಪ್ರವಾಸಗಳನ್ನು ಕೈಗೊಳ್ಳಬಾರದೆಂದು ಸನ್ಮಾನ್ಯ ಸಭಾಧ್ಯಕ್ಷರು ಆದೇಶಿಸಿರುತ್ತಾರೆ.

ಆದುದರಿಂದ, ಮುಂದಿನ ಆದೇಶ ಹೊರಡಿಸುವವರೆವಿಗೂ ವಿಧಾನಸಭೆ ಮತ್ತು ವಿಧಾನಮಂಡಲದ ಸಮಿತಿಗಳು ಯಾವುದೇ ಸ್ವದೇಶಿ/ವಿದೇಶಿ ಅಧ್ಯಯನ ಪ್ರವಾಸವನ್ನು ಕೈಗೊಳ್ಳುವ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸಮಿತಿಯ ಅಧಿಕಾರಿಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

(ಪಿ. ಓಂಪ್ರಕಾಶ)
ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ಕರ್ನಾಟಕ ವಿಧಾನಸಭೆ

ಸಂಖ್ಯೆ:ಕವಿಸಸ/ಶಾರಶಾ/724/ಮನವಿ/2016

ಕರ್ನಾಟಕ ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಅಂಚೆ ಪೆಟ್ಟಿಗೆ ಸಂಖ್ಯೆ:5074
ಬೆಂಗಳೂರು-560 233. ದಿನಾಂಕ:16.11.2016

ಅಧಿಕೃತ ಜ್ಞಾಪನ

ಕರ್ನಾಟಕ ವಿಧಾನಮಂಡಲದ ಸಮಿತಿಗಳು ವಿದೇಶ ಮತ್ತು ಸ್ವದೇಶಗಳಲ್ಲಿ ಅಧ್ಯಯನ ಪ್ರವಾಸ ಕೈಗೊಳ್ಳುವ ಬಗ್ಗೆ ಹೊರಡಿಸಲಾಗಿರುವ ಈ ಕೆಳಕಂಡ ಸುತ್ತೋಲೆ, ಆದೇಶ ಹಾಗೂ ಮಾರ್ಗಸೂಚಿಗಳನ್ನು ಮುಂದಿನ ಆದೇಶದವರೆಗೆ ಹಿಂಪಡೆಯಲಾಗಿದೆ.

(1) ಆದೇಶ ಸಂಖ್ಯೆ:ಕವಿಸಸ/ಆ-1/103/ಅ.ಪ್ರ.ಮಾ/2009, ದಿನಾಂಕ:06ನೇ ಜೂನ್, 2009. ಮೂರು ಬಾರಿ ಸ್ವದೇಶಿ ಹಾಗೂ ಒಂದು ಬಾರಿ ವಿದೇಶಿ ಅಧ್ಯಯನ ಪ್ರವಾಸ ಕೈಗೊಳ್ಳಲು ನೀಡಿರುವ ಆದೇಶ.
(2) ಸುತ್ತೋಲೆ ಸಂಖ್ಯೆ:ಕವಿಸಸ/ಲೆ.ಪ.ಶಾ-/ಪ್ರವಾಸ/451/2009, ದಿನಾಂಕ:22ನೇ ಅಕ್ಟೋಬರ್, 2009. ಅಧ್ಯಯನ ಪ್ರವಾಸದ ವಿವರ ಹಾಗೂ ಪೂರಕ ದಾಖಲೆಗಳನ್ನು ಲೆಕ್ಕಪತ್ರ ಶಾಖೆ-1ಕ್ಕೆ ಸಲ್ಲಿಸುವಂತೆ ಹೊರಡಿಸಿರುವ ಸುತ್ತೋಲೆ.
(3) ಸುತ್ತೋಲೆ ಸಂಖ್ಯೆ: ವಿಸಸ/ಆ-1/ಸ.ಸ.ಪ್ರ.ಸಿ.ನಿ.ಬ/2010, ದಿನಾಂಕ:10ನೇ ಜೂನ್ 2010. ಹೊರ ರಾಜ್ಯಗಳಲ್ಲಿ ಪ್ರವಾಸ ಕೈಗೊಳ್ಳುವಾಗ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ.
(4) ಆದೇಶ ಸಂಖ್ಯೆ: ಕವಿಸಸ/ಆ-1/113/ಸವಿಅ.ಪ್ರ.ಮಾ/2012, ದಿನಾಂಕ:18ನೇ ಮೇ, 2012. ಮಾನ್ಯ ಸದಸ್ಯರುಗಳು 5 ವರ್ಷದ ಅವಧಿಯಲ್ಲಿ 2 ಬಾರಿ ಸ್ವದೇಶಿ/ 2 ಬಾರಿ ವಿದೇಶಿ ಪ್ರವಾಸ ಕೈಗೊಳ್ಳಲು ಅನುಮತಿ ನೀಡಿರುವ ಆದೇಶ.
(5) ಸುತ್ತೋಲೆ ಸಂಖ್ಯೆ: ವಿಸಸ/ಶಾರಶಾ/86/ಸಅಪ್ರಬ/2014, ದಿನಾಂಕ:03ನೇ ಮೇ, 2014. ಕರ್ನಾಟಕ ವಿಧಾನಮಂಡಲ ಮತ್ತು ವಿಧಾನಸಭೆಯ ಸಮಿತಿಗಳು ಸ್ವದೇಶಿ/ವಿದೇಶಿ ಪ್ರವಾಸವನ್ನು ಕೈಗೊಳ್ಳಬಾರದೆಂದು ಸನ್ಮಾನ್ಯ ಸಭಾಧ್ಯಕ್ಷರು ನೀಡಿರುವ ಆದೇಶ.

ಸಭಾಧ್ಯಕ್ಷರ ಆದೇಶಾನುಸಾರ

(ಎಂ.ಎಸ್. ಕುಮಾರಸ್ವಾಮಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ ಸಚಿವಾಲಯ.

ಪ್ರತಿಗಳು:

(1) ವಿಧಾನಸಭೆ ಮತ್ತು ವಿಧಾನಮಂಡಲದ ಸಮಿತಿಗಳ ಎಲ್ಲಾ ಅಧಿಕಾರಿಗಳ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
(2) ಕ್ಷೇತ್ರಾಧಿಕಾರಿ, ಶಾಸಕರ ಭವನ.
(3) ಸನ್ಮಾನ್ಯ ಸಭಾಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿಯವರ ಆಪ್ತ ಕಾರ್ಯದರ್ಶಿ, ಕ.ವಿ.ಸ.,
(4) ಸಂಬಂಧಪಟ್ಟ ಕಡತ/ಬಿಡಿ ಪ್ರತಿ.

****

ಕರ್ನಾಟಕ ವಿಧಾನ ಸಭೆ

ಸಂಖ್ಯೆ:ಕವಿಸಸ/ಲೆಪಶಾ–1/ಪ್ರವಾಸ/451/2009

ವಿಧಾನಸಭೆ ಸಚಿವಾಲಯ,
ವಿಧಾನಸೌಧ, ಅಂಚೆ ಪೆಟ್ಟಿಗೆ ಸಂಖ್ಯೆ:5074
ಬೆಂಗಳೂರು–560 233, ದಿನಾಂಕ:22/10/2009

ಸುತ್ತೋಲೆ

ಕರ್ನಾಟಕ ವಿಧಾನ ಮಂಡಲದ/ವಿಧಾನ ಸಭೆಯ ವಿವಿಧ ಸಮಿತಿಗಳು ವಿದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಂಡು ಹಿಂದಿರುಗಿದ ನಂತರ ಪ್ರವಾಸದ ಅಂತಿಮ ಲೆಕ್ಕಚಾರ ಮಾಡುವ ಸಂಬಂಧದಲ್ಲಿ, ಸಮಿತಿಯ ಅಧ್ಯಯನ ಪ್ರವಾಸದಲ್ಲಿ ಪಾಲ್ಗೊಂಡ ಸದಸ್ಯರುಗಳ ವಿವರ ಹಾಗೂ ಪೂರಕ ದಾಖಲೆ/ವಿವರಗಳನ್ನು ಲೆಕ್ಕಪತ್ರ ಶಾಖೆ–1ಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ.

ಇತ್ತೀಚೆಗೆ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳು ವಿದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಂಡು, ಹಿಂದಿರುಗಿ ಹಲವಾರು ದಿನಗಳು ಕಳೆದರು ಸಹ ಪ್ರವಾಸದ ಅಂತಿಮ ಬಿಲ್ಲುಗಳನ್ನು ಪೂರಕ ದಾಖಲೆಗಳೊಂದಿಗೆ ಲೆಕ್ಕಪತ್ರ ಶಾಖೆ–1ಕ್ಕೆ ಸಲ್ಲಿಸದಿರುವುದು ಗಮನಿಸಲಾಗಿರುತ್ತದೆ.

ಆದುದರಿಂದ, ವಿದೇಶದಲ್ಲಿ ಅಧ್ಯಯನ ಪ್ರವಾಸ ಕೈಗೊಂಡ ಸಮಿತಿಗಳು ಸಂಬಂಧಿಸಿದ ಕೆಳಕಂಡ ದಾಖಲಾತಿ/ಮಾಹಿತಿಗಳನ್ನು ಅತ್ಯವಶ್ಯಕವಾಗಿ ಲೆಕ್ಕಪತ್ರ ಶಾಖೆ–1ಕ್ಕೆ ಸಲ್ಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

1. ಸಮಿತಿಯ ಅಧ್ಯಕ್ಷರು ಸಹಿ ಮಾಡಿ ಅನುಮೋದಿಸಿರುವ ವಿದೇಶ ಅಧ್ಯಯನ ಪ್ರವಾಸದ ಅಂತಿಮ ಕಾರ್ಯಕ್ರಮ ವಿವರಗಳ ಪಟ್ಟಿ
2. ಪ್ರವಾಸದ ಪೂರ್ವದಲ್ಲಿನ ಅನುಮೋದಿತ ಕಾರ್ಯಕ್ರಮಕ್ಕೂ ಮತ್ತು ಪ್ರವಾಸದ ಅಂತಿಮ ಕಾರ್ಯಕ್ರಮಕ್ಕೂ ವ್ಯತ್ಯಾಸಗಳಿದ್ದಲ್ಲಿ ಅಂತಹ ಕಾರ್ಯಕ್ರಮಕ್ಕೆ ಸನ್ಮಾನ್ಯ ಸಭಾಧ್ಯಕ್ಷರ ಅನುಮೋದನೆ ಪಡೆದು ಸಲ್ಲಿಸುವುದು.
3. ಪ್ರವಾಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸದಸ್ಯರ ವಿಮಾನಯಾನದ/ಪ್ರಯಾಣದ ಎಲ್ಲಾ ಟಿಕೇಟುಗಳು, ಬೋರ್ಡಿಂಗ್ ಪಾಸುಗಳು ಆಯಾ ದೇಶಗಳಲ್ಲಿ ವಾಸ್ತವ್ಯಕ್ಕೆ ಸಂಬಂಧಿತ ಹೋಟೆಲ್‌ಗಳ ಬಿಲ್/ರಶೀದಿಗಳು ಸಲ್ಲಿಸುವಾಗ ಇವೆಲ್ಲವುಗಳ ಮೂಲ ಪ್ರತಿಗಳನ್ನು ಸಲ್ಲಿಸುವುದು. ಯಾವುದಾದರೊಂದು ಬೋರ್ಡಿಂಗ್ ಪಾಸ್/ಟಿಕೇಟು ಅನಿವಾರ್ಯವಾಗಿ ಲಭ್ಯವಿಲ್ಲದ ಪಕ್ಷದಲ್ಲಿ ಅಂತವುಗಳನ್ನು ಸಮಿತಿಯ ಅಧಿಕಾರಿಯವರು ದೃಢೀಕೃತ ಪ್ರತಿ ಒದಗಿಸುವುದು.
4. ಪ್ರವಾಸದಲ್ಲಿನ ಸಭೆಗಳ ಹಾಜರಾತಿ ಪಟ್ಟಿಗಳು ಮತ್ತು ಸದಸ್ಯರು ಸಹಿ ಮಾಡಿರುವ ಪ್ರಯಾಣ ಭತ್ಯೆ/ದಿನ ಭತ್ಯೆ ಕೋರಿಕೆ ಫಾರಂಗಳು.
5. ಪ್ರವಾಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಸದಸ್ಯರ ಪ್ರವಾಸದ ಸಂಬಂಧದಲ್ಲಿನ ಸಂಪೂರ್ಣ ವಿವರಗಳು.
6. ಪ್ರವಾಸದಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ತಗಲಿದ ಪ್ರಯಾಣದ ಮತ್ತು ವಾಸ್ತವ್ಯದ ವೆಚ್ಚಗಳ ವಿವರದ ಪಟ್ಟಿ.
7. ಪ್ರವಾಸ ಮುಂಗಡ ಪಡೆದು, ಪ್ರವಾಸದಲ್ಲಿ ಭಾಗವಹಿಸದೇ ಇರುವ ಸದಸ್ಯರ ವಿವರ ಹಾಗೂ ಈ ಸಂಬಂಧ ಮಾನ್ಯ ಸಭಾಧ್ಯಕ್ಷರಿಂದ ಪಡೆದಿರುವ ಅನುಮೋದನೆ ಮತ್ತು ಅಂತಹ ಸದಸ್ಯರು ಮುಂಗಡವನ್ನು ಹಿಂತಿರುಗಿಸುವ ಸಂಬಂಧದಲ್ಲಿ ಸಮಿತಿಯ ವತಿಯಿಂದ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ.

(ಹೆಚ್.ಎಂ. ಭಾರತೇಶ್)
ಪ್ರಧಾನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಮಂಡಲ.

ಕರ್ನಾಟಕ ವಿಧಾನ ಪರಿಷತ್ತು

ವಿಷಯ: ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐಪ್ಯಾಡ್ ಖರೀದಿಸಲು ನೀಡಲಾಗಿರುತ್ತಿರುವ ಮುಂಗಡ ಹಣವನ್ನು ಹೆಚ್ಚಿಸುವ ಬಗ್ಗೆ.

******

ಓದಲಾಗಿದೆ:–

1. ಶ್ರೀ ರಮೇಶ್ ಬಾಬು, ಮಾನ್ಯ ಶಾಸಕರು, ಕರ್ನಾಟಕ ವಿಧಾನ ಪರಿಷತ್ತು, ಇವರ ಪತ್ರ ದಿ:11.11.2025.
2. ಆದೇಶ ಸಂಖ್ಯೆ:ಕವಿಪ:ಆ–1:25:ಐ–ಪ್ಯಾಡ್:2014 ದಿ:13.08.2014.
3. ಕಡತದ ಸಂಖ್ಯೆ:ಕವಿಪ:ಲೆಪಶಾ–1:ಇತರೆ:578:2025. ಕಂಡಿಕೆ ಸಂಖ್ಯೆ: 01 ರಿಂದ 20ರವರೆಗೆ.

ಪ್ರಸ್ತಾವನೆ:–

ಓದಲಾಗಿರುವ ಕ್ರಮ ಸಂಖ್ಯೆ:(1)ರಲ್ಲಿ ಕರ್ನಾಟಕ ವಿಧಾನ ಮಂಡಲದ ಶಾಸಕರುಗಳಿಗೆ ಕಾರು ಖರೀದಿ, ಮೋಟಾರು ಸೈಕಲ್ ಖರೀದಿಸಲು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಮತ್ತು ಸ್ವಂತ ಉಪಯೋಗಕ್ಕೆ ಗಣಕಯಂತ್ರ ಖರೀದಿಸಲು ರೂ.60,000/–ಗಳ ಅನುದಾನದ ಸೌಲಭ್ಯವಿರುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಮಧ್ಯಮ ವರ್ಗಗಳ ಕಾರುಗಳ ದರ ರೂ.1.00 ಕೋಟಿಯವರೆಗೂ ಹೆಚ್ಚುವರಿ ಆಗಿರುವುದರಿಂದ, ಜೀವನಶೈಲಿಗೆ ಅನುಸಾರವಾಗಿ ಶಾಸಕರಿಗೆ ಕಾರು ಖರೀದಿಯ ಗರಿಷ್ಠಮಿತಿಯ ಸೌಲಭ್ಯವನ್ನು ರೂ.30.00ಲಕ್ಷಗಳಿಂದ ರೂ.50.00 ಲಕ್ಷಗಳಿಗೆ, ಮೋಟಾರು ವಾಹನ ಖರೀದಿಯ ಸೌಲಭ್ಯವನ್ನು ರೂ.8,000/–ಗಳಿಂದ ರೂ.5.00 ಲಕ್ಷಗಳವರೆಗೆ ಹಾಗೂ ಗಣಕಯಂತ್ರದ ಅನುದಾನದ ಮೊತ್ತ ರೂ.60,000/–ಗಳಿಂದ ರೂ.1.00 ಲಕ್ಷಗಳಿಗೆ ಹೆಚ್ಚಿಸುವುದು ಅವಶ್ಯಕವಾಗಿದ್ದು, ತಮ್ಮ ಮನವಿಯನ್ನು ಪರಿಗಣಿಸಿ ಕರ್ನಾಟಕ ವಿಧಾನ ಮಂಡಲದ ಶಾಸಕರಿಗೆ ನೀಡುತ್ತಿರುವ ಸಾಲ ಸೌಲಭ್ಯದ ಮಿತಿಯನ್ನು ಹೆಚ್ಚಿಸುವಂತೆ ಮಾನ್ಯ ಸಭಾಪತಿಯವರಿಗೆ ಕೋರಿರುತ್ತಾರೆ.

ಓದಲಾಗಿರುವ ಕ್ರಮ ಸಂಖ್ಯೆ:(2)ರಲ್ಲಿ ಸರ್ಕಾರದ ಮಾನ್ಯ ಸಚಿವರುಗಳು, ವಿಧಾನ ಪರಿಷತ್ತಿನ ಮಾನ್ಯ ಪೀಠಾಸೀನಾಧಿಕಾರಿಗಳು ಮತ್ತು ಸಂಸದೀಯ ಪದಾಧಿಕಾರಿಗಳು ಹಾಗೂ ಮಾನ್ಯ ಸದಸ್ಯರುಗಳಿಗೆ ಗಣಕಯಂತ್ರ/ಐ–ಪ್ಯಾಡ್/ಟ್ಯಾಬ್ಲೆಟ್ ಖರೀದಿಸಲು ರೂ.60,000/–ಗಳನ್ನು ಮಂಜೂರು ಮಾಡಲಾಗಿರುತ್ತದೆ.

ಓದಲಾಗಿರುವ ಕ್ರಮ ಸಂಖ್ಯೆ:(3)ರಲ್ಲಿ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐ–ಪ್ಯಾಡ್/ಟ್ಯಾಬ್ಲೆಟ್ ಖರೀದಿಸುವ ಸಲುವಾಗಿ ಪ್ರಸ್ತುತ ನೀಡಲಾಗುತ್ತಿರುವ ಗಣಕಯಂತ್ರ ಮುಂಗಡ ಹಣವನ್ನು ರೂ.60,000/–(ಅರವತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಂದ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸುವ ಪ್ರಸ್ತಾವನೆಗೆ ಮಾನ್ಯ ವಿಶೇಷ ಮಂಡಳಿಯು ಅನುಮೋದನೆ ನೀಡಿರುತ್ತದೆ.

..2.

ಆದೇಶ ಸಂಖ್ಯೆ:ಕವಿಪ:ಆ–1:15:ಗಣಕಯಂತ್ರ:2026

ಬೆಂಗಳೂರು, ದಿನಾಂಕ:22.05.2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ ಗಣಕಯಂತ್ರ/ಐ–ಪ್ಯಾಡ್/ಟ್ಯಾಬ್ಲೆಟ್ ಖರೀದಿಸುವ ಸಲುವಾಗಿ ಪ್ರಸ್ತುತ ನೀಡಲಾಗುತ್ತಿರುವ ಗಣಕಯಂತ್ರ ಮುಂಗಡ ಹಣವನ್ನು ರೂ.60,000/–(ಅರವತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಂದ ರೂ.1.00 ಲಕ್ಷ (ಒಂದು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಮೇಲೆ ತಿಳಿಸಿರುವ ಸೌಲಭ್ಯವನ್ನು ಪಡೆಯುವ ಮಾನ್ಯ ಶಾಸಕರುಗಳು ಧನಾದೇಶ ಪಡೆದು ಒಂದು ತಿಂಗಳೊಳಗಾಗಿ ಖರೀದಿಗೆ ಸಂಬಂಧಪಟ್ಟ ರಸೀದಿಯನ್ನು ಈ ಸಚಿವಾಲಯಕ್ಕೆ ನೀಡತಕ್ಕದ್ದು.

ಈ ಬಗ್ಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ **"2011–02–102–0–08–051"** ರ ಅಡಿಯಲ್ಲಿ ಭರಿಸತಕ್ಕದ್ದು.

ಮಾನ್ಯ ಸಭಾಪತಿಯವರ ಆದೇಶಾನುಸಾರ,

(ಜ್ಯೋತಿ)
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ಪ್ರತಿಗಳು:–

01. ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
02. ಮಾನ್ಯ ಸಭಾಪತಿಯವರ, ಕಾರ್ಯದರ್ಶಿ/ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
03. ಮಾನ್ಯ ಉಪ ಸಭಾಪತಿಯವರ/ಸಂಸದೀಯ ಪದಾಧಿಕಾರಿಗಳ ಆಪ್ತ ಕಾರ್ಯದರ್ಶಿಯವರಿಗೆ, ಕವಿಪ.
04. ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರಿಗೆ, ಕವಿಪ.
05. ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ/ಶಾಖಾಧಿಕಾರಿ, ಆಡಳಿತ ಶಾಖೆ/ ಲೆಕ್ಕಪತ್ರ ಶಾಖೆ–2/ಕಾರ್ಯಕಾರಿ ಶಾಖೆ, ಕವಿಪ.
06. ಖಜಾನಾಧಿಕಾರಿ, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
07. ಆಂತರಿಕ ಆರ್ಥಿಕ ಸಲಹೆಗಾರರು, ಕವಿಮಂ.
08. ಸೀನಿಯರ್ ಪ್ರೋಗ್ರಾಮರ್ ಗಣಕ ಕೇಂದ್ರ, ಕವಿಪ.
09. ಸಂಬಂಧಪಟ್ಟ ಕಡತಕ್ಕೆ/ರಕ್ಷಾ ಕಡತಕ್ಕೆ/ಬಿಡಿ ಪ್ರತಿಗಳು.

S.K. VENKAYA REDDY
Secretary to Government
Department

TELEPHONE: No. 2200 204
Vidhana Soudha, Bangalore – 1
Dated : 3rd February 1997.

D.O.No.LAW/LS(R)320/97

Dear Sir Sabhahit,

Sub : Execution of Warrants of Arrest against the members of the Legislature.

Recently, the Additional Munisff and JMFC, Kundapur, Dakshina Kannada sent warrants of arrest against two members of the Karnataka Legislature to the office of the Hon'ble Speaker for execution. The Secretary, Karnataka Legislature has addressed a letter to the Law Department requesting to apprise the position of execution of summons and warrants on Members of Legislature, to the Judicial Officers of State/District Judiciary (Either to subordinate Judiciary).

I am herewith enclosing a copy of a circular issued by the Government of India, Minister of Home Affairs indicating the procedure regarding service of warrants or summons. The Government of India in para 3 of its communication has requested to follow the same procedure in respect of the members of the State Legislature. It is kindly requested, to consider, circulating the said letter amongst the members of the District Judiciary.

With kind regards,

Yours sincerely,

Sri V.G. Sabhahit,
Registrar General,
High Court of Karnataka
Bangalore.

No.I/16012/25/95-IS(D.III)

GOVERNMENT OF INDIA

MINISTRY OF HOME AFFAIRS

New Delhi- 110 001.

Dated, the 19th June, 1996

To

Chief Secretaries,

ALL State Governments/UTs.

Subject : Procedure regarding service of warrants/summons and other Legal processes on Members of Parliament.

I am directed to say that instances have been brought to the notice of this Ministry where copies of the summons issued by Magistrates requiring the attendence of the Members of Parliament in Courts in certain cases, have been forwarded to the Speaker of Lok Sabha or the Chairman of the Rajya Sabha Secretariat or to the Lok Sabha/Rajya Sabha Secretariat for effecting service on the Members Concerned. In this regard., attention is invited to article 105(3) of the Constitution of India which provides that in respect of matters other than those covered by clause 2 of article 105, the powers, privileges and immunities of each House of Parliament, and the members and Committees of each House, shall be such as may from time to time be defined by Parliament by law, and until so defined shall be those of that House and of its members and Committees immediately before the coming into force of section 15 of the Constitution (Fortyfourth Amendment) Act, 1978. One of the privileges is that no service of summons can be effected upon the Members when they are within the precincts of the Parliament. If necessary, the permission of Speaker Lok Sabha is required to be obtained for the services of a summon or a legal process within the precincts of the House on any person whether a Member of Lok Sabha or a stranger vide Rule 233 of Rules for Procedure & Conduct Business in Lok Sabha-Seventh Edition, 1989 (hereinafter briefly referred to as ALSR) Similarly, in the case of a Member of the Rajya Sabha, permission of the Chairman of the Rajya Sabha will have to be obtained with simultaneous intimation to the speaker, Lok Sabha.

2. In view of the above position the appropriate procedure would before the warrants/summons/legal process to be served direct on the Members concerned outside the precinets of the Parliament i.e. at their residence or at some other place presents of the House means and includes the Chamber, the Lobbies, the Galleries and such other

places as the Speaker may from time to time specify vide the definition in LSR. In an exceptional case, if at all it becomes necessary to seek the Speaker/Chairman permission to serve warrants/summons and other legal proceses Civil or Criminal, within the precints of the House, the Speaker/ Chairman should be addressed through the Ministry of Home Affairs and the authority issuing the legal process should send along with it a brief statement containing a word reasoned request setting out the ground why it has become necessary in serve the process within the precincts of the House.

3. It may be pointed out that the same procedure should be followed for effecting services of summon upon Member of the State Legislature who enjoy the same privileges under article 194(3) of the Constitution of India.

4. It is requested that the above procedure may be brought to the notice of all Courts, Civil and Criminal in the State in order to ensure that service of Warrants/ summons/legal processes of Members on Parliament/Members of State legislature is effected in accordance with the above procedure.

A.K. PAITANDY
Deputy Secretary to the Govt. of India

No.I/16012/25/95-Is(D.III)Dated, the 19th June 1996.

Copy for information to:-

1. Lok Sabha Secretariat, New Delhi w.r.t. their O.M. No. 16/76/95-LBI/ Priv. dated the 8th December, 1995.
2. Rajya Sabha Secretariat, New Delhi.
3. Ministry of Parliamentary Affairs New Delhi.
4. MInistry of Law, Justice & Company Affairs Department of legal Affairs.
5. Ministry of Home Affairs, Department of Justice.

A.K. PAITANDY
Deputy Secretary to the Govt. of India

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾಸೂ. 521, ಪ್ರತಿಗಳು :